

ಸರ್ವಮೂಲಸೌರಭ



ಸಂಪಾದನೆ :

ಡಾ. ವ್ಯಾಸನಕೆರೆ ಪ್ರಭಂಜನಾಚಾರ್ಯ

ಶ್ರೀವ್ಯಾಸಮಧ್ವಸಂಶೋಧನ ಪ್ರತಿಷ್ಠಾನ

ಸರ್ವಮೂಲ ಸೌರಭ

(ಜಗದ್ಗುರು ಶ್ರೀಮನ್ಮಧ್ವಾಚಾರ್ಯರ ಕೃತಿಗಳ ಸಂಕ್ಷಿಪ್ತ ಪರಿಚಯ)

ಲೇಖಕರು:

ಡಾ॥ ವ್ಯಾಸನಕೆರೆ ಪ್ರಭಂಜನಾಚಾರ್ಯ

ಪ್ರಕಾಶನ :

ಐತರೇಯ ಪ್ರಕಾಶನ ವ್ಯಾಸನಕೆರೆ

ಶ್ರೀವ್ಯಾಸಮಧ್ವಸಂಶೋಧನ ಪ್ರತಿಷ್ಠಾನದ ಪ್ರಕಾಶನ ವಿಭಾಗ

'ಪಾಜಕ', ೮೯/೨೪, ೩ನೇ ಮುಖ್ಯರಸ್ತೆ, ೧ನೇ ಅಡ್ಡರಸ್ತೆ,

ಮೌಂಟ್‌ಜಾಯ್ ಎಕ್ಸ್‌ಟೆನ್ಷನ್, ಹನುಮಂತನಗರ,

ಬೆಂಗಳೂರು - ೫೬೦ ೦೧೯.

Sarvamoola Saurabha - written by Vidyāvāchaspati; Darśanaratnam, Sacchāstravicakṣaṇaratnam, Śāstrapravacanakesari, Pravacanācārya, Madhvamatavardhana, Vidvaccūḍāmaṇi, Vedavidyā-vicakṣaṇa, Paṇḍitaratnam, Vidyāvāridhi, Sacchāstrapravacanapravīṇa, Gītāratnākara, Tattvavācaspati, Jnānaratnākara (and Recipient of **Karnataka State Sanskrit Award-1999 & Karnataka Rajyotsava Award-2002, Śrī Vidyāmānya Mahāpraśasti** of Śrī Pejavar Mutt, Udupi and **Rashtrapathi Award - 2005)** Dr.Vyasanakere Prabhanjanacharya, M.A., Ph.D., D.Litt., F.I.B.R., F.U.W.A., Principal (Rtd.), Govt. First Grade College, K.R.Puram, Bangalore and Published by Aitareya Prakāśana Vyasanakere, publication wing of Śrī VyāsaMadhva Samśodhana Pratiṣṭhāna, 'Pajaka', No.89/24, Third Cross, Mount Joy Extension, Hanumanthanagar, Bangalore- 560019. Pages:37

Phone : 26602802; 26611011.

Internet : www.vyasamadhwa.org

E-mail : info@vyasamadhwa.org

First Edition : 2010

Price : **Rs. 125/-**

Typeset by :

Śrī Vyāsa Madhva Samśodhana Pratiṣṭhāna(Regd),

Printed at :

Vāgartha, N.R. Colony, Bangalore, Ph: 22427677

ವಿಷಯಾನುಕ್ರಮಣಿಕೆ

★★★★★

ಮುನ್ನುಡಿ

ಶ್ರೀ ಮಧ್ವಾಚಾರ್ಯರು ಜಗತ್ತು ಕಂಡ ಅಪ್ರತಿಮ ದಾರ್ಶನಿಕರು, ಭಗವಂತನ ಪಾರಮ್ಯ, ವಿಶ್ವಸತ್ಯತ್ವಗಳನ್ನು ಸಾರಿದ ವಿಶ್ವಗುರುಗಳು. ವಾಯುದೇವರ ತೃತೀಯಾವತಾರವಾದ ಅವರು ಜನತ್ತಿನ ಉಸಿರಾದರೆ, ಅವರ ಕೃತಿಗಳು ಆಧ್ಯಾತ್ಮದ ಉಸಿರು. ಅವರ ಆಕೃತಿಯಂತೆ ಕೃತಿಗಳೂ ಅಪೂರ್ವ, ಅನನ್ಯ. ಸಮಗ್ರತೆ, ಪೂರ್ಣತೆ ವಿಷಯವೈಪುಲ್ಯಗಳಲ್ಲಿ ಶ್ರೀವೇದವ್ಯಾಸರ ಅನಂತರದ ಸ್ಥಾನ ಅವರದ್ದೇ. ಅವರು ನಿಜವಾದ ಅರ್ಥದಲ್ಲಿ ''ಅಭಿನವ ವೇದವ್ಯಾಸರು''.

''ಸರ್ವಮೂಲ'' ಎಂಬುದಾಗಿ ಪ್ರಸಿದ್ಧವಾದ ಅವರ ಕೃತಿಗಳು ವೇದ, ಉಪನಿಷತ್ತು, ಗೀತೆ, ಬ್ರಹ್ಮಸೂತ್ರ, ಮಹಾಭಾರತ, ರಾಮಾಯಾಣ, ಭಾಗವತ, ಪಂಚರಾತ್ರ, ಬ್ರಹ್ಮತರ್ಕ, ತಂತ್ರಸಾರ ಮೊದಲಾದ ಸಕಲಮೂಲಗ್ರಂಥಗಳ ''ಭಾವದೀಪಗಳು''. ಶ್ರೀಮದಾಚಾರ್ಯರ ಪ್ರತಿಯೊಂದು ಕೃತಿಯೂ ಅವರ ಪ್ರತಿಬಿಂಬ. ನಿಜವಾದ ಅರ್ಥದಲ್ಲಿ ಅವರ ''ಸುವರ್ಣಪ್ರತೀಕ'' ಸಾಲಿಗ್ರಮ, ತುಳಸಿಗಳಂತೆ ಜಿಜ್ಞಾಸುಗಳ ಮನೆ ಮನೆಗಳಲ್ಲಿ ಇರಲೇಬೇಕಾದ ಅಮೂಲ್ಯ ನಿಧಿ. ಅವುಗಳ ಅಧ್ಯಯನದಂತೆ ಅವುಗಳನ್ನು ಓದಿದವರು ಪೂಜಿಸುತ್ತಾರೆ, ಪೂಜಿಸುವವರು ಓದುವಂತಾಗುತ್ತಾರೆ. ಸರಳತೆ, ನಿಖರತೆ, ಸಂಕ್ಷಿಪ್ತತೆ, ಸ್ಪಷ್ಟತೆ, ಗಾಂಭೀರ್ಯ ಮೊದಲಾದ ಸಕಲ ಸಲ್ಲಕ್ಷಣಭರಿತವಾದ ಆರ್ಶಶೈಲಿಯ ಕೃತಿಗಳು ಎಂಬುದು ಇವುಗಳ ಅಪೂರ್ವ ವೈಶಿಷ್ಟ್ಯ. ಶ್ರೀಮಧ್ವರಂತೆ ಅವರ ಕೃತಿಗಳೂ ಪರಿಪೂರ್ಣತೆಯ ಸಂಕೇತ.

?

ಸರ್ವಮೂಲ ಸೌರಭ (ಆಚಾರ್ಯ ಶ್ರೀಮಧ್ವರ) ಸರ್ವಮೂಲಗ್ರಂಥಗಳನ್ನು ಸಂಕ್ಷೇಪವಾಗಿ ಪರಿಚಯಿಸುವ ಕೃತಿ. ಶ್ರೀಮದಾಚಾರ್ಯರು ತತ್ತ್ವಜ್ಞಾನ ಪ್ರಪಂಚಕ್ಕೆ ಹೇಗೋ ಹಾಗೆಯೇ ಸಾರಸ್ವತ ಹಾಗೂ ಸಂಶೋಧನಾ ಪ್ರಪಂಚಕ್ಕೆ ನೀಡಿರುವ ಕೊಡುಗೆಯು ಅಪೂರ್ವ. ಏಕಾಂಗಿಯಾಗಿ ಸನಾತನಪರಂಪರೆಯನ್ನು ಪುನರುಜ್ಜೀವನಗೊಳಿಸಿದ ಅಪ್ರತಿಮ ವ್ಯಕ್ತಿತ್ವ ಅವರದ್ದು. ಅವರ ಸಿದ್ಧಾಂತ ಹಾಗೂ ಕೃತಿಗಳನ್ನು ಆಧುನಿಕ ಪ್ರಪಂಚ ಅಷ್ಟಾಗಿ ಗಮನಿಸದೇ ಹೋಗಿರುವುದು ನಿಜಕ್ಕೂ ಜ್ಞಾನಪ್ರಪಂಚಕ್ಕೆ ಆಗಿರುವ ದೊಡ್ಡ ಅಪಚಾರ. ಅವರ ಕೃತಿಗಳ ಅಧ್ಯಯನವನ್ನು ಮಾಡದ ಹೊರತು ವೈದಿಕ ತತ್ತ್ವಗಳ ಆಂತರ್ಯ ಎಂದೂ ತೆರೆದುಕೊಳ್ಳಲಾರದು. ಅದಕ್ಕೆಂದು ಅವರ ಕೃತಿಗಳ ಸಿದ್ಧಾಂತದ ಪ್ರಸಾರಕಾರ್ಯವು ವ್ಯಾಪಕವಾಗಿ ಆಂದೋಲನರೂಪದಲ್ಲಿ ಇಂದು ನಡೆಯಬೇಕಾಗಿದೆ. ಸಂಸ್ಕೃತ, ಕನ್ನಡ ಹಾಗೂ ತೆಲುಗು ಲಿಪಿಗಳಲ್ಲಿ ಸಮಗ್ರ ಸರ್ವಮೂಲಗ್ರಂಥಗಳನ್ನು ಪ್ರಕಾಶನಗೊಸಿರುವ ನಮ್ಮ ಪ್ರತಿಷ್ಠಾನವು ಈ ಸರ್ವಮೂಲಸೌರಭ ಕೃತಿಯ ಪ್ರಕಾಶನವನ್ನು ಹಮ್ಮಿಕೊಂಡಿದೆ.

ಡಾ॥ ಎಸ್.ಎನ್.ದಾಸಗುಪ್ತ ಅವರು ಮಧ್ವದರ್ಶನದ ಹಿರಿಮೆಯ ಬಗ್ಗೆ ತೆಗೆದಿರುವ ಉದ್ಗಾರ[೧]ದಿಂದಾದರೂ ಚಿಂತಕರು ಎಚ್ಚರಗೊಳ್ಳಬೇಕಾದ ಅವಶ್ಯಕತೆಯಿದೆ:

೧. History of Indian Philosophy by Dr.S.N. Dasgupta, Professor of Sanskrit Oxford University (Preface IV-Vol.)

.....In my opinion Jayatirtha and Vyasatirtha present the highest dialectical skill in Indian thought. There is a general belief amongst many that monism of Sankara presents the final phase of Indian thought. The realistic and dualistic thought of the Samkhya and the yoga had undergone a compromise with monism both in the Puranas and in the hands of the later writers. But the readers of the present volume who will be introduced to the philosophy of Jayatirtha and particularly of Vyasatirtha will realize the strength and uncompromising impressiveness of the dualistic position. The logical skill and depth of acute dialectical thinking shown by Vyasatirtha stands almost unrivalled in the whole field of Indian thought. .... It is hoped that the treatment of the philosophy of Madhwa and his followers undertaken in the present volume will give new light to students of Indian thought and will present many new aspects of dialectical logic hitherto undiscovered in Indian or European thought.

ಸಕಲದರ್ಶನಗಳ ಬಗ್ಗೆ ಆಳವಾಗಿ ವಿಮರ್ಶೆ ಮಾಡಿದ ಡಾ॥ದಾಸ್‌ಗುಪ್ತಾರವರು ಮಧ್ವದರ್ಶನದ ಬಗ್ಗೆ ಮಾತ್ರವೇ ಈ ಬಗೆಯ ಉದ್ಗಾರ ತೆಗೆದಿರುವುದು ಸಾಮಾನ್ಯ ಸಂಗತಿಯೇನಲ್ಲ. ಈ ದಿಸೆಯಲ್ಲಿ ಒಂದು ಚಿಕ್ಕ ಪ್ರಯತ್ನವಾಗಿ ಈ ಸರ್ವಮೂಲ ಸೌರಭ ಕೃತಿಯು ಸಿದ್ಧವಾಗಿದೆ. ೧೯೯೮ರಲ್ಲಿ ನಡೆದ ಸರ್ವಮೂಲ ಹಾಗೂ ನ್ಯಾಯಸುಧಾ ಮಂಗಳಕಾರ್ಯಕ್ರಮದ ಅಂಗವಾಗಿ ೧೯೯೯ ರಲ್ಲಿ ಸರ್ವಮೂಲ-ಸುಧಾ ಎಂಬ ಕೃತಿಯನ್ನು ನಮ್ಮ ಪ್ರಕಾಶನ ಹೊರತಂದಿತ್ತು. ಪ್ರಸ್ತುತ ಕೃತಿ ಒಂದು ರೀತಿಯಲ್ಲಿ ಆದರ ವಿಸ್ತೃತರೂಪ ಎನ್ನಬಹುದು. ಸರ್ವಮೂಲ ಅಭ್ಯಾಸಿಗಳಿಗೆ ಹಾಗೂ ಆಸಕ್ತರಿಗೆ ಇದು ಒಂದು ಕೈಪಿಡಿಯಾಗಿ ಉಪಯುಕ್ತವಾಗಬಲ್ಲ ಗ್ರಂಥ.

ಆಸ್ತಿಕರೂ, ಅಧ್ಯಯನಶೀಲರೂ ಆಗಿದ್ದ ದಿ. ಎಂ.ಬಿ. ರಾಮರಾವ್ ಮತ್ತು ದಿ.ಎಂ.ಆರ್. ತಾರಾಬಾಯಿ ಅವರ ಸ್ಮರಣೆಗಾಗಿ ಈ ಕೃತಿಯ ಪ್ರಕಾಶನ ಕಾರ್ಯವನ್ನು ಪ್ರಾಯೋಜಿಸಿದ ಅವರ ಪುತ್ರಿ ಶ್ರೀಮತಿ ಸುಧಾ ಹಾಗೂ ಅಳಿಯ ಶ್ರೀ ಎಂ.ಪ್ರಹ್ಲಾದರಾವ್ ಅವರಿಗೆ ನಮ್ಮ ಪ್ರತಿಷ್ಠಾನ ಋಣಿ. ಡಿ.ಟಿ.ಪಿ. ಕಾರ್ಯ ಶ್ರೀ ಹರೀಶ್, ಕುಮಾರಿ ಕೆ. ಆಶಾ ಹಾಗೂ ಶ್ರೀಮತಿ ಬಿ.ಎನ್.ಶಶಿಕಲಾ, ಸಹಕಾರ ಶ್ರೀ ಸುದರ್ಶನ (ಆನಂದ ಪದ್ಮನಾಭ) ಅವರದು. ಮುದ್ರಣ ಬೆಂಗಳೂರಿನ ವಾಗರ್ಥ ಅವರದು. ಎಲ್ಲರಿಗೂ ನಮ್ಮ ಪ್ರತಿಷ್ಠಾನ ಋಣಿ.

ಬೆಂಗಳೂರು
೩೧.೦೭.೨೦೧೦ ವ್ಯಾಸನಕೆರೆ ಪ್ರಭಂಜನಾಚಾರ್ಯ
ಶ್ರೀಜಯತೀರ್ಥರ ಆರಾಧನಾ

೧. ಶ್ರೀ ಗ್ರಂಥಮಾಲಿಕಾಸ್ತೋತ್ರಮ್

ಕೃಷ್ಣಂ ವಿದ್ಯಾಪತಿಂ ನತ್ವಾ ಪೂರ್ಣಬೋಧಾದಿಸದ್ಗುರೂನ್ ।
ಜಯತೀರ್ಥಮುನೀನ್ ನತ್ವಾ ವಕ್ಷ್ಯೇಽಹಂ ಗ್ರಂಥಮಾಲಿಕಾಮ್ ॥೧॥

ನಾರಾಯಣೇನ ವ್ಯಾಸೇನ ಪ್ರೇರಿತಸ್ತತ್ತ್ವಸಂವಿದೇ ।
ಗ್ರಂಥಾನ್ ಮಧ್ವಶ್ಚಕಾರಾಸೌ ಸಪ್ತತ್ರಿಂಶದಮಂದಧೀಃ ॥೨॥

ಗೀತಾಭಾಷ್ಯಂ ವಿಧಾಯಾದೌ ಪ್ರಥಮಂ ತುಷ್ಟಿದಂ ಹರೇಃ ।
ಭಾಷ್ಯಾಣುಭಾಷ್ಯೇ ಚಕ್ರೇಽಥ ಹ್ಯನುವ್ಯಾಖ್ಯಾನಮುತ್ತಮಮ್ ॥೩॥

ಪ್ರಮಾಣಲಕ್ಷಣಂ ನಾಮ ಕಥಾಲಕ್ಷಣಸಂಜ್ಞಿಕಮ್ ।
ಉಪಾಧಿಖಂಡನಂ ಚಕ್ರೇ ಮಾಯಾವಾದಸ್ಯ ಖಂಡನಮ್ ॥೪॥

ಚಕ್ರೇ ಪ್ರಪಂಚಮಿಥ್ಯಾತ್ವಮಾನಖಂಡನಮುಚ್ಚಧೀಃ ।
ಚಕಾರ ತತ್ತ್ವಸಂಖ್ಯಾನಂ ಸಾಧನಂ ವಿಷ್ಣುದರ್ಶನೇ ॥೫॥

ಗ್ರಂಥಂ ತತ್ತ್ವವಿವೇಕಾಖ್ಯಂ ತತ್ತ್ವೋದ್ಯೋತಂ ಹರೇಃ ಪ್ರಿಯಮ್ ।
ಕರ್ಮನಿರ್ಣಯನಾಮಾನಂ ಗ್ರಂಥಂ ನ್ಯಾಯಾರ್ಥಬೃಂಹಿತಮ್ ॥೬॥

ಸುಖತೀರ್ಥಯತಿಶ್ಚಕ್ರೇ ವಿಷ್ಣುತತ್ತ್ವವಿನಿರ್ಣಯಮ್ ।
ಋಗ್ಭಾಷ್ಯಂ ಚ ಚಕಾರಾಸೌ ಸರ್ವವೇದಾರ್ಥನಿರ್ಣಯಮ್ ॥೭॥

ಐತರೇಯಂ ತೈತ್ತಿರೀಯಂ ಬೃಹದಾರಣ್ಯಮೇವ ಚ ।
ಈಶಾವಾಸ್ಯಂ ಕಾಠಕಂ ಚ ಛಾಂದೋಗ್ಯಾಥರ್ವಣೇ ತಥಾ ॥೮॥

ಮಾಂಡೂಕ್ಯಂ ನಾಮ ಷಟ್ಪ್ರಶ್ನಂ ತಥಾ ತಲವಕಾರಕಮ್ ।
ಚಕ್ರೇ ಭಾಷ್ಯಾಣಿ ದಿವ್ಯಾನಿ ದಶೋಪನಿಷದಾಂ ಗುರುಃ ॥೯॥

ನಿರ್ಣಯಂ ಸರ್ವಶಾಸ್ತ್ರಾಣಾಂ ಗೀತಾತಾತ್ಪರ್ಯಸಂಜ್ಞಕಮ್ ।
ಸಂನ್ಯಾಯವಿವೃತಿಂ ನಾಮ ನ್ಯಾಯಶಾಸ್ತ್ರನಿಕೃಂತನಮ್ ॥೧೦॥

ನರಸಿಂಹನಖಸ್ತೋತ್ರಂ ಚಕ್ರೇ ಯಮಕಭಾರತಮ್ ।
ದ್ವಾದಶಸ್ತೋತ್ರಮಕರೋತ್ ಕೃಷ್ಣಾಮೃತಮಹಾರ್ಣವಮ್ ॥೧೧॥

ತಂತ್ರಸಾರಂ ಚಕಾರಾಸೌ ಸದಾಚಾರಸ್ಮೃತಿಂ ಸುಧೀಃ ।
ಶ್ರೀಮದ್ಭಾಗವತಸ್ಯಾಪಿತಾತ್ಪರ್ಯಂ ಜ್ಞಾನಸಾಧನಮ್ ॥೧೨॥

ಮಹಾಭಾರತತಾತ್ಪರ್ಯನಿರ್ಣಯಂ ಸಂಶಯಚ್ಛಿದಮ್ ।
ಯತಿಪ್ರಣವಕಲ್ಪಂ ಚ ಪ್ರಣವಾರ್ಥಪ್ರಕಾಶಕಮ್ ॥೧೩॥

ಜಯಂತೀನಿರ್ಣಯಂ ಚಕ್ರೇ ದೇವಕೀಗರ್ಭಜನ್ಮನಃ ।
ಕೃಷ್ಣಸ್ಯ ಕೃಷ್ಣಭಕ್ತೋಽಯಂ ದ್ವೈಪಾಯನಕರಾಬ್ಜಭೂಃ ॥೧೪॥

ತ್ರಿಂಶತ್ಸಹಸ್ರಸಂಖ್ಯಾಕಂ ದ್ವ್ಯಧಿಕಂ ತುಷ್ಟಿದಂ ಹರೇಃ ।
ಏತೇಷಾಂ ಪಾಠಮಾತ್ರೇಣ ಮಧ್ವೇಶಃ ಪ್ರೀಯತೇ ಹರಿಃ ॥೧೫॥

ವ್ಯಾಸತೀರ್ಥಯತಿರ್ನಾಮ ಮಧ್ವಗ್ರಂಥಾನುಕೀರ್ತನಮ್ ।
ಕೃತವಾನ್ ಜ್ಞಾನಮಾತ್ರೇಣ ಪ್ರೀಯತೇ ಕಮಲಾಪತಿಃ ॥೧೬॥

॥ ಇತಿ ಶ್ರೀವ್ಯಾಸರಾಜತೀರ್ಥಕೃತಂ ಶ್ರೀಗ್ರಂಥಮಾಲಿಕಾಸ್ತೋತ್ರಮ್ ॥

೨. ಶ್ರೀಪೂರ್ಣಪ್ರಜ್ಞಗ್ರಂಥಮಾಲಿಕಾ ಸ್ತುತಿಃ (೧)

ದಶ ಪಂಚ ಚ ಭಾಷ್ಯಾಣಿ ದಶಪ್ರಕರಣಾನಿ ಚ ।
ತಾತ್ಪರ್ಯಾಣಿ ಸ್ತುತೀ ಕಲ್ಪೌ ಸ್ಮೃತಿರ್ಯಮಕಮರ್ಣವಃ ॥
ತಂತ್ರಸಾರೋ ವಿವರಣಂ ಗ್ರಂಥಾ ಮಧ್ವಮುಖೋದ್ಗತಾಃ ।
ಏತೇಷಾಂ ಪಾಠಮಾತ್ರೇಣ ಪ್ರೀಯತಾಂ ಮೇ ಹಯಾನನಃ ॥

- ಶ್ರೀವಾದಿರಾಜಸ್ವಾಮಿಗಳು

೩. ಶ್ರೀಪೂರ್ಣಪ್ರಜ್ಞಗ್ರಂಥಮಾಲಿಕಾ ಸ್ತುತಿಃ (೨)

ಭಾಷ್ಯಾಣಾಂ ದಶಕಂ ಚ ಪಂಚಕಯುತಂ ತಿಸ್ರಶ್ಚ ನಿರ್ಣೀತಯೋ
ವಿಷ್ಣೋಃ ಸ್ತೋತ್ರಯುಗಂ ದಶಪ್ರಕರಣಂ ಕಲ್ಪದ್ವಯಂ ಚ ಸ್ಮೃತಿಃ ।
ಶ್ರೀಕೃಷ್ಣಾಮೃತತಂತ್ರಸಾರಯಮಕನ್ಯಾಯಾವಲೀದೀಪನಂ
ಯೇನಾಕಾರಿ ಸದೈವ ಮಧ್ವಮುನಿರಾಡ್ದದ್ಯಾತ್ ಸುವಿದ್ಯಾಂ ಮಮ ॥

- ಶ್ರೀಯದುಪತ್ಯಾಚಾರ್ಯರು

೪. ಶ್ರೀಪೂರ್ಣಪ್ರಜ್ಞಗ್ರಂಥಮಾಲಿಕಾ ಸ್ತುತಿಃ (೩)

ಯೇನಾಕಾರಿ ಸುಲಕ್ಷಣದ್ವಯಮಥೋ ತತ್ತ್ವತ್ರಿಕಂ ಖಂಡನ-
ತ್ರಿಕಂ ನಿರ್ಣಯಸತ್ತ್ರಿಕಂ ಸುಗಹನಂ ಭಾಷ್ಯಾಖ್ಯಸಪ್ತದ್ವಯಮ್ ।
ಸತ್ತಾತ್ಪರ್ಯಯುಗಂ ಸ್ತುತಿತ್ರಿಕಮನುವ್ಯಾಖ್ಯಾನಸಾರೌ ಸ್ಮೃತಿಃ
ಕಲ್ಪಾರ್ಣವಭಾರತೇ ವಿವರಣಂ ಪಾಯಾತ್ ಸ ಮಾಂ ಶಂಮುನಿಃ ॥

- ಶ್ರೀಬಿದರಹಳ್ಳಿ ಶ್ರೀನಿವಾಸತೀರ್ಥರು

★★★★★

॥ ಶ್ರೀಃ॥

ಸರ್ವಮೂಲ ಸೌರಭ

ಶ್ರೀಮನ್ಮಧ್ವಾಚಾರ್ಯರು ವಿಶ್ವದ ಮಹಾಗುರುಗಳು. ವಾಯುದೇವರ ತೃತೀಯಾವತಾರರಾದ ಅವರು ಜಗತ್ತಿನ ಉಸಿರಾದರೆ, ಅವರ ಕೃತಿಗಳು ಆಧ್ಯಾತ್ಮದ ಉಸಿರು. ಅವರ ಆಕೃತಿಯಂತೆ ಕೃತಿಗಳೂ ಅಪೂರ್ವ, ಅನನ್ಯ. ಸಮಗ್ರತೆ, ಪೂರ್ಣತೆ, ವಿಷಯವೈಪುಲ್ಯಗಳಲ್ಲಿ ಶ್ರೀವೇದವ್ಯಾಸರ ಅನಂತರದ ಸ್ಥಾನ ಅವರದ್ದೇ. ಅವರು ನಿಜವಾದ ಅರ್ಥದಲ್ಲಿ ''ಅಭಿನವ ವೇದವ್ಯಾಸರು''.

''ಸರ್ವಮೂಲ'' ಎಂಬುದಾಗಿ ಪ್ರಸಿದ್ಧವಾದ ಅವರ ಕೃತಿಗಳು ವೇದ, ಉಪನಿಷತ್ತು, ಗೀತೆ, ಬ್ರಹ್ಮಸೂತ್ರ, ಮಹಾಭಾರತ, ರಾಮಾಯಣ, ಭಾಗವತ, ಪಂಚರಾತ್ರ, ಬ್ರಹ್ಮತರ್ಕ, ತಂತ್ರಸಾರ ಮೊದಲಾದ ಸಕಲಮೂಲಗ್ರಂಥಗಳ 'ಭಾವದೀಪಗಳು'. ಶ್ರೀಮದಾಚಾರ್ಯರ ಪ್ರತಿಯೊಂದು ಕೃತಿಯೂ ಅವರ ಪ್ರತಿಬಿಂಬ. ನಿಜವಾದ ಅರ್ಥದಲ್ಲಿಅವರ 'ಸುವರ್ಣಪ್ರತೀಕ'. ಸಾಲಿಗ್ರಾಮ, ತುಳಸಿಗಳಂತೆ ಜಿಜ್ಞಾಸುಗಳ ಮನೆ ಮನೆಗಳಲ್ಲಿ ಇರಲೇಬೇಕಾದ ಅಮೂಲ್ಯನಿಧಿ. ಅವುಗಳ ಅಧ್ಯಯನದಂತೆ ಅವುಗಳ ನಿತ್ಯಪೂಜೆಯೂ ಸರ್ವಮಂಗಲಕಾರಕ. ಸರ್ವಾನಿಷ್ಟನಿವಾರಕ. ಅವುಗಳನ್ನು ಓದಿದವರು ಪೂಜಿಸುತ್ತಾರೆ, ಪೂಜಿಸುವವರು ಓದುವಂತಾಗುತ್ತಾರೆ.

ಶ್ರೀಮಧ್ವಾಚಾರ್ಯರು ಮತ್ತು ಅವರ ಕೃತಿಗಳು

ಸಕಲಮಾಧ್ವಮಠಗಳ ಮೂಲಪುರುಷರಾದ ಶ್ರೀಮಧ್ವಾಚಾರ್ಯರು (ಕ್ರಿ.ಶ. ೧೨೦೦-೧೨೮೦) ಜಗತ್ತು ಕಂಡ ಅಪ್ರತಿಮ ತತ್ತ್ವಜ್ಞಾನಿಗಳು; ಅಪಾರಪ್ರತಿಭೆ, ಅನುಪಮಪಾಂಡಿತ್ಯ, ಸಲ್ಲಕ್ಷಣಭರಿತದೇಹ, ಅಪಾರಭಗವದ್ಭಕ್ತಿ ಮತ್ತು ಅರ್ಹಜನರ ಸಂಕಷ್ಟವನ್ನು ಪರಿಹರಿಸಿ ಸಂತುಷ್ಟರನ್ನಾಗಿಸುವ ಕಾರುಣ್ಯ ಮೊದಲಾದ ಸದ್ಗುಣಗಳಿಂದಾಗಿ ಅವರು ವಿಶ್ವದ ಅದ್ವಿತೀಯತತ್ತ್ವಪ್ರಸಾರಕಗುರುಗಳಾಗಿ ಮಾನ್ಯರಾಗಿದ್ದಾರೆ. ಅವತರಿಸಿದ್ದು ಉಡುಪಿಯ ಬಳಿಯ ಚಿಕ್ಕಹಳ್ಳಿ ಪಾಜಕದಲ್ಲಿ; ಸ್ವೀಕರಿಸಿದ್ದು ಸರ್ವೋನ್ನತವಾದ ಪರಮಹಂಸಾಶ್ರಮವನ್ನು; ಪಾಲಿಸಿದ್ದು ಹಂಸನಾಮಕ ಪರಮಾತ್ಮನ ಪರಂಪರೆಯ ವೇದಾಂತಪೀಠವನ್ನು; ಸಂಚರಿಸಿದ್ದು ಆಸೇತುಹಿಮಾಚಲಪರ್ಯಂತ (ಮತ್ತು ಅದಕ್ಕೂ ಆಚೆಯ ಉತ್ತರಬದರಿಯವರೆಗೆ), ಬರೆದದ್ದು ಸಕಲಶಾಸ್ತ್ರಗಳ ಸಾರರೂಪವಾದ ಸರ್ವಮೂಲಗ್ರಂಥಗಳನ್ನು, ಉಪದೇಶಿಸಿದ್ದು ಸಕಲ ಶಾಸ್ತ್ರಗಳ ಮರ್ಮವನ್ನು; ತೋರಿಸಿದ್ದು ಪರಗತಿಯ ರಾಜಮಾರ್ಗವನ್ನು; ನೆಲೆಸಿದ್ದು ಸಕಲ

ಜಿಜ್ಞಾಸುಗಳ ಮನೋಮಂದಿರದಲ್ಲಿ ಪ್ರವರ್ತಿಸಿದ್ದು ಅನಾದಿವೈಷ್ಣವವೇದಾಂತವಾದ ತತ್ತ್ವವಾದವನ್ನು; ಬೆಳೆಸಿದ್ದು ಅಂತಹ ಸತ್ಪರಂಪರೆಯನ್ನು, ತತ್ತ್ವಪ್ರಸಾರಕ್ಕಾಗಿ ಸ್ಥಾಪಿಸಿದ್ದು ಒಂಭತ್ತು ಪೀಠಗಳನ್ನು, ಸಂಪಾದಿಸಿದ್ದು ಪದ್ಮನಾಭತೀರ್ಥರು, ನರಹರಿತೀರ್ಥರು, ಹೃಷೀಕೇಶತೀರ್ಥರು, ಸತ್ಯತೀರ್ಥರು, ತ್ರಿವಿಕ್ರಮಪಂಡಿತಾಚಾರ್ಯರು ಮೊದಲಾದ ಶ್ರೇಷ್ಠಶಿಷ್ಯವರ್ಗವನ್ನು, ಉಡುಪಿಯಲ್ಲಿ ಪ್ರತಿಷ್ಠಾಪಿಸಿದ್ದು ದ್ವಾರಕೆಯಿಂದ ತಮಗಾಗಿ ಒಲಿದುಬಂದ ಶ್ರೀರುಕ್ಮಿಣೀಕರಾರ್ಚಿತ ಶ್ರೀಕೃಷ್ಣಪ್ರತಿಮೆಯನ್ನು, ಇಂದೂ ನೆಲೆಸಿರುವುದು ಉತ್ತರಬದರಿಯ ಶ್ರೀವೇದವ್ಯಾಸದೇವರ ಸನ್ನಿಧಾನದಲ್ಲಿ – ಇದಿಷ್ಟು ಸಂಕ್ಷಿಪ್ತವಾಗಿ ಅವರ ಜೀವನಗಾಥೆ.

ಶ್ರೀಪದ್ಮನಾಭತೀರ್ಥರಂತಹ ಪರಮಹಂಸರು, ತ್ರಿವಿಕ್ರಮಪಂಡಿತಾಚಾರ್ಯ-ರಂತಹ ಗೃಹಸ್ಥಶೇಖರರು, ಜಯಸಿಂಹರಾಜನಂತಹ ಅರಸ, ಕಲ್ಯಾಣೀದೇವಿಯಂತಹ ಮಹಿಳಾಮಣಿಗಳು ಮೊದಲಾದ ಅಸಂಖ್ಯಶಿಷ್ಯವರ್ಗ ಅವರ ಉಪದೇಶಧಾರೆಯಲ್ಲಿ ಮಿಂದು ಪುನೀತವಾಯಿತು. ಜಿಜ್ಞಾಸುಗಳಾಗಿ, ಆರ್ತರಾಗಿ ಬಂದ ಯಾರನ್ನೂ ದೂರಮಾಡದೆ ಕರುಣೆಯಿಂದ ಕರೆದು ಉದ್ಧಾರದ ಹಾದಿತೋರಿದ ವಿಶ್ವಗುರು ಅವರು. ವೇದವೇದಾಂತಗಳಿರಲಿ, ಶಿಕ್ಷಾವ್ಯಾಕರಣಾದಿವೇದಾಂಗಗಳಿರಲಿ, ತರ್ಕಮೀಮಾಂಸೆ-ಗಳಿರಲಿ, ಸಂಗೀತಶಾಸ್ತ್ರವಿರಲಿ, ವಿವಿಧಭಾಷಾಪ್ರಪಂಚವಿರಲಿ, ಕವಿತಾಪ್ರತಿಭೆಯಿರಲಿ ಎಲ್ಲದರಲ್ಲೂ ಅವರು ಪರಿಪೂರ್ಣಪ್ರಮತಿ. ಗಂಗಾನದಿಯ ಮೇಲೆ ನಡೆಯಬಲ್ಲ, ಹಿಮಾಲಯ ಪರ್ವತಶ್ರೇಣಿಯಲ್ಲಿ ಹಾರುತ್ತಾ ಸಾಗಬಲ್ಲ, ಭಾರದ ಬಂಡೆಗಳನ್ನು ಒಂದೇ ಕೈಯಲ್ಲಿ ಎತ್ತಿ ಬೇಕಾದ ಸ್ಥಳದಲ್ಲಿ ಇರಿಸಬಲ್ಲ, ಎಂತಹ ಜಟ್ಟಿಗಳನ್ನು ಸುಮ್ಮನೆ ಕುಳಿತಿದ್ದೇ ಪರಾಭವಗೊಳಿಸಬಲ್ಲ, ವಿಧರ್ಮೀಯರನ್ನೂ ತತ್ತ್ವಾರ್ಥ ಗರ್ಭಿತ ಅಪೂರ್ವ ಮಾತುಗಾರಿಕೆಯಿಂದ ಕ್ಷಣಕಾಲದಲ್ಲೇ ಪ್ರಭಾವಿತರನ್ನಾಗಿಸಬಲ್ಲ, ಅನ್ಯಾದೃಶಯೋಗಶಕ್ತಿ ಅವರದ್ದು. ಶ್ರೀರಾಘವೇಂದ್ರ ಸ್ವಾಮಿಗಳು ತಮ್ಮ ಪ್ರಾತಃಸಂಕಲ್ಪಗದ್ಯದಲ್ಲಿ ವರ್ಣಿಸಿರುವಂತೆ ಶ್ರೀಮಧ್ವಾಚಾರ್ಯರು [೧]ಸಂಸಿದ್ಧಸಪ್ತಕೋಟಿಮಹಾಮಂತ್ರರಾದ ಯೋಗಿರಾಜರು.

ಅವರ ಕೃತಿಗಳು ಹಾಗೂ ಅವರ ಮೇಲೆ ರಚಿತವಾಗಿರುವ ಕೃತಿಗಳಿಂದ ತಿಳಿದುಬರುವಂತೆ ಅವರು ಅನುಪಮವಿದ್ವಾಂಸರು, ಬ್ರಹ್ಮಸಾಕ್ಷಾತ್ಕಾರ ಮಾಡಿಕೊಂಡ ದಾರ್ಶನಿಕರು, ಸರಸಕವಿಗಳು, ವೇದದ್ರಷ್ಟಾರಋಷಿಗಳು, ತತ್ತ್ವೋಪದೇಶಕ ಗುರುಗಳು, ಅದ್ವಿತೀಯವಾಗ್ಮಿಗಳು, ವೈವಿಧ್ಯಮಯಗ್ರಂಥಕಾರರು, ಅಪೂರ್ವಸಂಶೋಧಕರು, ಅಪ್ರತಿಮ ವಾದಕೋವಿದರು, ಅಪೂರ್ವ ಅನುಭಾವಿಗಳು, ತತ್ತ್ವಜ್ಞಾನದ ರಸಋಷಿಗಳು, ಸಕಲಭಾಷಾಕೋವಿದರಾದ ಭಾಷಿಗರು, ಅಪೂರ್ವಭಾಷಾಶಾಸ್ತ್ರಜ್ಞರು, ಮಹಾತಪಸ್ವಿಗಳು, ಅನುಪಮಗಾನಕೋವಿದರು, ಪುರಾತತ್ತ್ವಶಾಸ್ತ್ರಜ್ಞರು, ಮೀಮಾಂಸಾದಿಸಕಲ-ಶಾಸ್ತ್ರವಿಶಾರದರು, ಸಮರ್ಥ ಆಡಳಿತಗಾರರು, ಅಸಾಮಾನ್ಯ ಸಂಘಟನಕಾರರು ಮತ್ತು

---

೧. ಸಂಸಿದ್ಧಸಪ್ತಕೋಟಿಮಹಾಮಂತ್ರಾಣಾಮ್ – ಪ್ರಾತಃಸಂಕಲ್ಪಗದ್ಯ

ವಿಶಾಲಹೃದಯದ ಸಮಾಜಸುಧಾರಕರು. ಅವರು ನಿಜವಾದ ಅರ್ಥದಲ್ಲಿ ಸರ್ವಜ್ಞರೂ, ಸಕಲಕಲಾಕೋವಿದರೂ ಆಗಿದ್ದ ಮಹಾನುಭಾವರು. ದ್ವಾತ್ರಿಂಶಲ್ಲಕ್ಷಣಭರಿತವಾದ ಅವರ ಆಕೃತಿ ಕಲಿಯುಗದ ಏಕೈಕ ದಾಖಲೆ. ಐವತ್ತು ಟನ್ನುಗಳಷ್ಟು ಭಾರದ ಬೃಹತ್ತಾದ ಶಿಲೆಯನ್ನು ಒಂದೇ ಕೈಯಿಂದ ಭದ್ರಾನದಿಯ ಪ್ರವಾಹಮಧ್ಯದಲ್ಲಿ ಇರಿಸಿದ ಅವರ ದೈಹಿಕಸಾಮರ್ಥ್ಯ ಊಹಾತೀತವಾದದ್ದು.

ಅವರ ಗ್ರಂಥರಾಶಿಯೂ ವೈವಿಧ್ಯಮಯವಾದದ್ದು. ಆರಂಭದ ತತ್ತ್ವಜಿಜ್ಞಾಸುಗಳನ್ನು ಆಳವಾದ ಚಿಂತನೆಗೆ ಅಣಿಗೊಳಿಸಲು ಪ್ರಮಾಣಲಕ್ಷಣ, ಕಥಾಲಕ್ಷಣ, ತತ್ತ್ವಸಂಖ್ಯಾನ, ತತ್ತ್ವವಿವೇಕ, ಉಪಾಧಿಖಂಡನ, ಮಾಯಾವಾದಖಂಡನ, ಪ್ರಪಂಚಮಿಥ್ಯಾತ್ವಾನುಮಾನಖಂಡನ, ತತ್ತ್ವೋದ್ಯೋತ, ವಿಷ್ಣುತತ್ತ್ವವಿನಿರ್ಣಯ ಮತ್ತು ಕರ್ಮನಿರ್ಣಯ ಎಂಬ ದಶಪ್ರಕರಣಗಳು, ವೇದರಹಸ್ಯವೆಂದು ಮಾನ್ಯವಾದ ಉಪನಿಷತ್ತುಗಳ ರಹಸ್ಯವನ್ನು ಅನಾವರಣಗೊಳಿಸುವ ಈಶ, ಕೇನ, ಕಠ, ಷಟ್ಪ್ರಶ್ನ, ಆಥರ್ವಣ (ಮುಂಡಕ), ತೈತ್ತಿರೀಯ, ಐತರೇಯ, ಛಾಂದೋಗ್ಯ ಮತ್ತು ಬೃಹದಾರಣ್ಯಕ ಎಂಬ ದಶೋಪನಿಷತ್ತುಗಳ ಭಾಷ್ಯಗಳು, ಅತ್ಯುನ್ನತಶಾಸ್ತ್ರಕೃತಿಯಾದ ಬ್ರಹ್ಮಸೂತ್ರಗಳ ಮೇಲೆ ಬ್ರಹ್ಮಸೂತ್ರಭಾಷ್ಯ, ಅನುವ್ಯಾಖ್ಯಾನ, ಅಣುಭಾಷ್ಯ ಮತ್ತು ನ್ಯಾಯವಿವರಣ ಎಂಬ ನಾಲ್ಕು ಕೃತಿಗಳು, ಪುರಾಣಪ್ರಸ್ಥಾನದ ಮೇಲಿನ ಭಾಷ್ಯರೂಪವಾಗಿ ಶ್ರೀಮದ್ಭಾಗವತ ಮಹಾಪುರಾಣದ ಮೇಲೆ ರಚಿತವಾಗಿರುವ ಭಾಗವತತಾತ್ಪರ್ಯನಿರ್ಣಯ, ವೇದಗಳಿಗಿಂತ ಮಿಗಿಲೆನ್ನಿಸಿದ ಮಹಾಭಾರತದ ಮೇಲೆ ಮಹಾಭಾರತತಾತ್ಪರ್ಯನಿರ್ಣಯವೆಂಬ ಅನುಪಮ ಸಂಶೋಧನ-ವಿಮರ್ಶನ ಕೃತಿ ಹಾಗೂ ಅದರ ಸಾರಸಂಗ್ರಹರೂಪವಾದ ಚಿತ್ರಕಾವ್ಯ ಯಮಕಭಾರತ, ಮಹಾಭಾರತಪಾರಿಜಾತದ ಸಕಲತತ್ತ್ವಗಳ ಮಧುವಾದ ಭಗವದ್ಗೀತೆಯ ಮೇಲೆ ಗೀತಾಭಾಷ್ಯ ಮತ್ತು ಗೀತಾತಾತ್ಪರ್ಯನಿರ್ಣಯ ಎಂಬ ಎರಡು ಕೃತಿಗಳು, ಅಪೌರುಷೇಯ ವೇದಗಳಲ್ಲಿ ಪ್ರಥಮಗಣ್ಯವಾದ ಋಗ್ವೇದದ ಮೇಲೆ ಅಧ್ಯಾತ್ಮಾದಿ ಅರ್ಥತ್ರಯಗಳನ್ನು ವಿವೇಚಿಸುವ ಋಗ್ಭಾಷ್ಯ, ತತ್ತ್ವಜ್ಞಾನದ ಸಾಧನೆ ಮತ್ತು ಅನುಷ್ಠಾನಕ್ಕೆ ನೆರವಾಗುವ ತತ್ತ್ವಗಳನ್ನು ನಿರೂಪಿಸುವ ಸದಾಚಾರಸ್ಮೃತಿ, ಕೃಷ್ಣಾಮೃತಮಹಾರ್ಣವ, ಜಯಂತೀನಿರ್ಣಯ, ಪ್ರಣವಕಲ್ಪ, ತಂತ್ರಸಾರಸಂಗ್ರಹ ಎಂಬ ಆಚಾರಗ್ರಂಥಗಳು ಮತ್ತು ಕೊನೆಯದಾಗಿ ತಾವು ಪ್ರತಿಪಾದಿಸಿದ ಸಕಲತತ್ತ್ವಗಳನ್ನು ಅನುಸಂಧಾನಕ್ಕೆ ತಂದುಕೊಂಡು ಪರತತ್ತ್ವವಾದ ಭಗವಂತನನ್ನು ಪರಿಪರಿಯಾಗಿ ಸ್ತುತಿಸಲು ಅನುವು ಮಾಡಿಕೊಡುವ ದ್ವಾದಶಸ್ತೋತ್ರ ಮತ್ತು ನಖಸ್ತುತಿ (ಮತ್ತು ಕಂದುಕಸ್ತುತಿ) ಎಂಬ ಸ್ತೋತ್ರರತ್ನಗಳು – ಇವಿಷ್ಟು ''ಸರ್ವಮೂಲ''ವೆಂದು ಪರಂಪರೆ ಕಾಪಾಡಿಕೊಂಡು ಬಂದಿರುವ ಅವರ ಅಮೂಲ್ಯಕೃತಿಗಳು.

ಸರಳತೆ, ಸ್ಪಷ್ಟತೆ, ಗಾಂಭೀರ್ಯ, ಅಡಕವಾದ ನಿರೂಪಣೆ, ಪ್ರಮಾಣೋ-ದಾಹರಣ ಹಾಗೂ ಯುಕ್ತಿವೈಭವಗಳು ಅವರ ಕೃತಿಗಳ ವಿಶಿಷ್ಟಲಕ್ಷಣಗಳು. ಜಗತ್ತಿನ

ಬೇರಾವ ಗ್ರಂಥಕಾರರ ಕೃತಿಗಳಲ್ಲೂ ಕಾಣಸಿಗದ ನಿರಂತರ ಪ್ರಮಾಣೋದಾಹರಣೆ ಅವರ ಗ್ರಂಥಗಳ ಅಸಾಮಾನ್ಯ ಹಿರಿಮೆ. ಶಬ್ದವಿನ್ಯಾಸದಲ್ಲಿ ವಾಮನನಾಗಿದ್ದು, ಅರ್ಥವೈಭವದಲ್ಲಿ ತ್ರಿವಿಕ್ರಮನಾಗಿರುವುದು ಅವರ ಎಲ್ಲ ಬರವಣಿಗೆಯ ಅಸಾಧಾರಣಲಕ್ಷಣ.

'ಕರ್ನಾಟಕಪೂರ್ವಸಜ್ಜನಗುರು' ಎಂಬ ಖ್ಯಾತಿಯ ಶ್ರೀಪದ್ಮನಾಭತೀರ್ಥರು, ಕಳಿಂಗದೇಶವನ್ನು ಹನ್ನೆರಡು ವರ್ಷಗಳ ಕಾಲ ಪಾಲಿಸಿದ ಶ್ರೀನರಹರಿತೀರ್ಥರು, ವಾಯುಸ್ತುತಿ-ತತ್ತ್ವಪ್ರದೀಪಗಳ ಶ್ರೀತ್ರಿವಿಕ್ರಮಪಂಡಿತಾಚಾರ್ಯರು, ಅನುವ್ಯಾಖ್ಯಾನ ಸಂಬಂಧದೀಪಿಕೆಯ ಶ್ರೀಶಂಕರಪಂಡಿತಾಚಾರ್ಯರು, ಸುಮಧ್ವವಿಜಯದ ಶ್ರೀ-ನಾರಾಯಣಪಂಡಿತಾಚಾರ್ಯರು, ಆನಂದಮಾಲೆಯ ಶ್ರೀವಾಮನಪಂಡಿತಾಚಾರ್ಯರು, ಮೊದಲಾದ ಮಹಾನುಭಾವರು ಶ್ರೀಮದಾಚಾರ್ಯರ ಗ್ರಂಥಗಳ ಪ್ರಾಚೀನ ಟೀಕಾಕಾರರಾಗಿದ್ದರೆ, ನ್ಯಾಯಸುಧೆಯಂತಹ ಮೇರುಕೃತಿಯನ್ನಿತ್ತ ಸರ್ವಜ್ಞಕಲ್ಪ ಶ್ರೀಜಯ-ತೀರ್ಥರು ಅವರ ಗ್ರಂಥಗಳ ಸರ್ವಮಾನ್ಯಟೀಕಾಕಾರರಾಗಿರುವರು. ವ್ಯಾಸತ್ರಯದ ಶ್ರೀವ್ಯಾಸರಾಜರು, ಅಭಿನವಾನಂದತೀರ್ಥರೆನ್ನಿಸಿದ ಶ್ರೀವಾದಿರಾಜರು, ಶ್ರೀಮದಾ-ಚಾರ್ಯರ ಪರಂಪರೆಯಲ್ಲಿ ಬಂದ 'ವಾದಗ್ರಂಥ'ಕಾರರಾಗಿರುವರು. ಭಾವಬೋಧಗಳ ಶ್ರೀರಘೂತ್ತಮತೀರ್ಥರು, ಚತುರಧಿಕಶತಗ್ರಂಥರತ್ನಪ್ರಣೇತೃಗಳಾದ ಶ್ರೀವಿಜಯೀಂದ್ರ ತೀರ್ಥರು, ಕಲ್ಪವೃಕ್ಷಕಾಮಧೇನುವೆನ್ನಿಸಿದ ಅರ್ಥಿಗಳ ಪಾಲಿನ ಶ್ರೀರಾಘವೇಂದ್ರತೀರ್ಥರು, ಸುಧಾಭಾಗವತ ಟಿಪ್ಪಣಿಗಳ ಶ್ರೀಯದುಪತ್ಯಾಚಾರ್ಯರು, 'ತೀರ್ಥ'ಪ್ರಶಸ್ತಿಯ ಶ್ರೀಬಿದರಹಳ್ಳಿ ಶ್ರೀನಿವಾಸತೀರ್ಥರು, ಮೊದಲಾದ ವಿದ್ವದ್ವಿಭೂತಿಗಳು ಇವರ ಗ್ರಂಥಗಳ ಪ್ರಮುಖ ಟಿಪ್ಪಣೀಕಾರರೆನ್ನಿಸಿರುವರು.

ಶ್ರೀಮಧ್ವಾಚಾರ್ಯರ ಕೃತಿಗಳು (ಸರ್ವಮೂಲಗ್ರಂಥಗಳು)

ಗೀತಾಪ್ರಸ್ಥಾನಗ್ರಂಥಗಳು :

ಶ್ರೀಮದ್ಭಗವದ್ಗೀತಾಭಾಷ್ಯ
ಶ್ರೀಮದ್ಭಗವದ್ಗೀತಾತಾತ್ಪರ್ಯನಿರ್ಣಯ

ಸೂತ್ರಪ್ರಸ್ಥಾನಗ್ರಂಥಗಳು :

ಶ್ರೀಮದ್ಬ್ರಹ್ಮಸೂತ್ರಭಾಷ್ಯ
ಶ್ರೀಮದ್ಬ್ರಹ್ಮಸೂತ್ರಾನುವ್ಯಾಖ್ಯಾನ
ಶ್ರೀಮದ್ಬ್ರಹ್ಮಸೂತ್ರಾಣುಭಾಷ್ಯ
ಶ್ರೀಮದನುವ್ಯಾಖ್ಯಾನ್ಯಾಯವಿವರಣ

ಉಪನಿಷತ್ಪ್ರಸ್ಥಾನಗ್ರಂಥಗಳು :

ಐತರೇಯೋಪನಿಷದ್ಭಾಷ್ಯ
ಛಾಂದೋಗ್ಯೋಪನಿಷದ್ಭಾಷ್ಯ
ಬೃಹದಾರಣ್ಯಕೋಪನಿಷದ್ಭಾಷ್ಯ
ಈಶಾವಾಸ್ಯೋಪನಿಷದ್ಭಾಷ್ಯ

ತಲವಕಾರೋಪನಿಷದ್ಭಾಷ್ಯ
ಷಟ್ಪ್ರಶ್ನೋಪನಿಷದ್ಭಾಷ್ಯ
ಕಾಠಕೋಪನಿಷದ್ಭಾಷ್ಯ
ಆಥರ್ವಣೋಪನಿಷದ್ಭಾಷ್ಯ
ಮಾಂಡೂಕೋಪನಿಷದ್ಭಾಷ್ಯ
ತೈತ್ತಿರೀಯೋಪನಿಷದ್ಭಾಷ್ಯ

ಶ್ರುತಿಪ್ರಸ್ಥಾನಗ್ರಂಥ :

ಋಗ್ಭಾಷ್ಯ

ಇತಿಹಾಸಪ್ರಸ್ಥಾನಗ್ರಂಥಗಳು :

ಮಹಾಭಾರತತಾತ್ಪರ್ಯನಿರ್ಣಯ
ಯಮಕಭಾರತ

ಪುರಾಣಪ್ರಸ್ಥಾನಗ್ರಂಥ :

ಭಾಗವತತಾತ್ಪರ್ಯನಿರ್ಣಯ

ಪ್ರಕರಣಗ್ರಂಥಗಳು :

ತತ್ತ್ವಸಂಖ್ಯಾನ
ತತ್ತ್ವವಿವೇಕ
ತತ್ತ್ವೋದ್ಯೋತ
ವಿಷ್ಣುತತ್ತ್ವವಿನಿರ್ಣಯ
ಪ್ರಮಾಣಲಕ್ಷಣ
ಕಥಾಲಕ್ಷಣ
ಉಪಾಧಿಖಂಡನ
ಮಾಯಾವಾದಖಂಡನ
ಪ್ರಪಂಚಮಿಥ್ಯಾತ್ವಾನುಮಾನಖಂಡನ
ಕರ್ಮನಿರ್ಣಯ

ಆಚಾರಗ್ರಂಥಗಳು :

ತಂತ್ರಸಾರಸಂಗ್ರಹ
ಸದಾಚಾರಸ್ಮೃತಿ
ಜಯಂತೀನಿರ್ಣಯ
ಕೃಷ್ಣಾಮೃತಮಹಾರ್ಣವ
ಪ್ರಣವಕಲ್ಪ

ಸ್ತೋತ್ರಕೃತಿಗಳು :

ನಖಸ್ತುತಿ
ದ್ವಾದಶಸ್ತೋತ್ರ
ಕಂದುಕಸ್ತುತಿ

★ ★ ★ ★

ಸಂನ್ಯಾಸಪದ್ಧತಿಃ, ತಿಥಿನಿರ್ಣಯಃ, ಸೂರ್ಯಸಿದ್ಧಾಂತವಚನಮ್ ಹಾಗೂ ಧಾಥಾತು-ವ್ಯಾಖ್ಯಾನಮ್ ಎಂಬ ಮತ್ತೆ ಕೆಲವು ಗ್ರಂಥಗಳು ಸಹ ಶ್ರೀಮಧ್ವಾಚಾರ್ಯಪ್ರಣೀತವೆಂಬುದಾಗಿ ತಿಳಿದುಬರುವುದು; ಇವುಗಳಲ್ಲದೆ ಅವರ ರಚನೆ ಎನ್ನಲಾಗಿರುವ ಕೆಲವು ಬಿಡಿಶ್ಲೋಕಗಳು ಸಹ ಪ್ರಸಿದ್ಧವಾಗಿವೆ.(ವಿವರಗಳನ್ನು ಪರಿಶಿಷ್ಟದಲ್ಲಿ ಕೊಡಲಾಗಿದೆ)

ಶ್ರೀಮಧ್ವಾಚಾರ್ಯರ ಕಾಲನಿರ್ಣಯ[1]

ಶ್ರೀಮಧ್ವಾಚಾರ್ಯರ ಕಾಲನಿರ್ಣಯದ ಬಗ್ಗೆ ಅನೇಕ ಸಂಶೋಧಕರು ತಮ್ಮ ತಮ್ಮ ನಿಲುವುಗಳನ್ನು ಮುಂದಿರಿಸಿದ್ದು, ಸಾಮಾನ್ಯವಾಗಿ ಕ್ರಿ.ಶ.೧೨೩೮ರಿಂದ ೧೩೧೭ ಅವರ ಕಾಲ ಎಂದು ವ್ಯವಹರಿಸುವುದುಂಟು.

ಆದರೆ, ಮಹಾಭಾರತತಾತ್ಪರ್ಯನಿರ್ಣಯದಲ್ಲಿ ಸ್ವತಃ ಶ್ರೀಮದಾಚಾರ್ಯರೇ ತಿಳಿಸಿರುವಂತೆ[2], ಅವರ ಅವತಾರಕಾಲವನ್ನು ಕ್ರಿ.ಶ.೧೨೦೦ (ಶಾ.ಶ.೧೧೨೨, ಕಾಳ-ಯುಕ್ತಿ ಸಂವತ್ಸರ) ಎಂದು ಭಾವಿಸಬೇಕಾಗುತ್ತದೆ. ಕ್ರಿ.ಶ.೧೮೦೬ರಲ್ಲಿ ಉಡುಪಿಯ ಅಷ್ಟಮಠಗಳು ಆಗಿನ ಸರ್ಕಾರಕ್ಕೆ ಸಲ್ಲಿಸಿರುವ ಕೈಫಿಯತ್ತುಗಳು ಸಹ ಇದೇ ಕಾಲವನ್ನು ಅಂಗೀಕರಿಸಿವೆ. ಇದು ಶ್ರೀಪದ್ಮನಾಭತೀರ್ಥರ ಬೇಲೂರು ಶಿಲಾಶಾಸನ, ಶ್ರೀನರಹರಿ-ತೀರ್ಥರ ಶ್ರೀಕೂರ್ಮಂಶಿಲಾಶಾಸನ, ಸುಬ್ರಹ್ಮಣ್ಯಮಠದಲ್ಲಿರುವ ತಾಮ್ರಶಾಸನ, ಕೈಫಿಯತ್ತುಗಳಲ್ಲಿ ಕಂಡುಬರುವ ಅಷ್ಟಮಠಗಳ ಪ್ರಥಮಪೀಠಾಧೀಶರುಗಳ ನಿರ್ಯಾಣ ಸಂವತ್ಸರಗಳು, ಉಡುಪಿಯಲ್ಲಿ ದೊರೆಯುವ ಶ್ರೀವಿದ್ಯಾಮೂರ್ತಿತೀರ್ಥರು ಮೊದಲಾದವರ ಬಗ್ಗೆ ದೊರೆಯುವ ಶಿಲಾಶಾಸನಗಳು ಮೊದಲಾಗಿ ಎಲ್ಲ ದಾಖಲೆಗಳಿಗೂ ಅನುಗುಣವಾಗಿದೆ.

ಕೈಫಿಯತ್ತುಗಳಲ್ಲಿ ದಾಖಲಾಗಿರುವಂತೆ ಶ್ರೀಮದಾಚಾರ್ಯರ ಅವತಾರಕಾಲ ಇತ್ಯಾದಿಗಳ ಬಗ್ಗೆ ವಿವರಗಳನ್ನು ಹೀಗೆ ಸಂಗ್ರಹಿಸಬಹುದು :

೧) ಅವತಾರ : ಶಾ.ಶ. ೧೧೨೧ (ಕ್ರಿ.ಶ. ೧೧೯೯) ಕಾಳಯುಕ್ತಿ ಸಂವತ್ಸರ, ಮಾಘ ಶು. ಸಪ್ತಮೀ

೨) ಉಪನಯನ : ಶಾ.ಶ. ೧೧೨೮ (ಕ್ರಿ.ಶ. ೧೨೦೬) ಕ್ರೋಧನ ಸಂವತ್ಸರ ಪುಷ್ಯ ಶು. ಪಂಚಮೀ

೩) ಸಂನ್ಯಾಸ : ಶಾ.ಶ. ೧೧೩೦ (ಕ್ರಿ.ಶ. ೧೨೦೮) ಪ್ರಭವ ಸಂವತ್ಸರ ವೈಶಾಖ ಶು. ತೃತೀಯಾ

---

೧. ಶ್ರೀಮಧ್ವಾಚಾರ್ಯರ ಕಾಲನಿರ್ಣಯವನ್ನು ಕುರಿತು ಪ್ರತ್ಯೇಕ ಹೊತ್ತಿಗೆಯನ್ನು ನಮ್ಮ ಪ್ರತಿಷ್ಠಾನ ಪ್ರಕಾಶನ ಪಡಿಸಿದೆ. ಅದರ ದ್ವಿತೀಯಾವೃತ್ತಿಗೆ ಪರಮಪೂಜ್ಯ ಶ್ರೀಪೇಜಾವರಶ್ರೀಪಾದರು ಅನುಗ್ರಹವಚನ ನೀಡಿದ್ದು, ಅದರಲ್ಲಿ ಕ್ರಿ.ಶ. ೧೨೦೦-೧೨೮೦ ಎಂಬ ಕಾಲ ಅವರಿಗೂ ಸಮ್ಮತ ಎಂದು ತಿಳಿಸಿರುವರು.

೨. ಚತುಃಸಹಸ್ರೇ ತ್ರಿಶತೋತ್ತರೇ ಗತೇ ಸಂವತ್ಸರಾಣಾಂ ತು ಕಲೌ ಪೃಥಿವ್ಯಾಮ್ ।
ಜಾತಃ ಪುನರ್ವಿಪ್ರತನುಃ ಸ ಭೀಮೋ ದೈತ್ಯೈರ್ನಿಗೂಢಂ ಹರಿತತ್ತ್ವಮಾಹ ॥
– ಮಹಾಭಾರತತಾತ್ಪರ್ಯನಿರ್ಣಯ ೩೨/೧೨೮

೪) ಶ್ರೀಕೃಷ್ಣಪ್ರತಿಷ್ಠೆ : ಶಾ.ಶ. ೧೧೬೦ (ಕ್ರಿ.ಶ. ೧೨೩೮) ಹೇವಿಳಂಬಿ ಸಂವತ್ಸರ
ಮಾಘ ಶು. ತೃತೀಯಾ

೫) ಬದರಿಕಾಶ್ರಮ ಗಮನ : ಶಾ.ಶ. ೧೨೦೦ (ಕ್ರಿ.ಶ. ೧೨೭೮) ಈಶ್ವರ ಸಂವತ್ಸರ
ಮಾಘ ಶು. ನವಮೀ

(ಈ ಬಗ್ಗೆ ಅಷ್ಟಮಠಗಳ ಕೈಫಿಯತ್ತುಗಳಲ್ಲೂ ಏಕವಾಕ್ಯತೆ ಇದೆ ಎಂಬುದು ವಿಶೇಷ)

ಶ್ರೀಮಧ್ವಾಚಾರ್ಯರ ಸಾಕ್ಷಾತ್ ಶಿಷ್ಯರ ನಿರ್ಯಾಣ ಸ್ಥಳ, ತಿಥಿ, ಸಂವತ್ಸರಗಳ ಬಗ್ಗೆಯೂ ಈ ಕೈಫಿಯತ್ತುಗಳಲ್ಲಿ ಸ್ಪಷ್ಟ ಉಲ್ಲೇಖವಿದ್ದು, ಅವನ್ನು ಹೀಗೆ ಸಂಗ್ರಹಿಸಬಹುದು.

ಪೀಠಾಧೀಶರು	ಸ್ಥಳ	ತಿಥಿ	ಸಂವತ್ಸರ
೧) ಶ್ರೀಹೃಷೀಕೇಶತೀರ್ಥರು (ಫಲಿಮಾರುಮಠ)	ಕಾಶಿ	ಮಾಘ ಶು.ಸಪ್ತಮೀ	ಶಾ.ಶ.೧೨೧೨,ವಿರೋಧಿ (ಕ್ರಿ.ಶ. ೧೨೯೦)
೨) ಶ್ರೀನರಸಿಂಹತೀರ್ಥರು (ಅದಮಾರುಮಠ)	ಭಾಗೀರಥೀ	ಚೈತ್ರ ಶು. ಪಂಚಮೀ	ಶಾ.ಶ.೧೨೩೨,ಸೌಮ್ಯ (ಕ್ರಿ.ಶ. ೧೩೧೦)
೩) ಶ್ರೀಜನಾರ್ದನತೀರ್ಥರು (ಕೃಷ್ಣಾಪುರಮಠ)	ಪ್ರಯಾಗ	ವೈಶಾಖ ಶು.ದ್ವಾದಶೀ	ಶಾ.ಶ.೧೨೧೩,ವಿಕೃತಿ (ಕ್ರಿ.ಶ.೧೨೯೧)
೪) ಶ್ರೀಉಪೇಂದ್ರತೀರ್ಥರು (ಪುತ್ತಿಗೆಮಠ)	ಕೃಷ್ಣಾತೀರ	ಮಾಘ ಶು.ದ್ವಾದಶೀ	ಶಾ.ಶ.೧೨೧೧, ಸರ್ವಧಾರಿ (ಕ್ರಿ.ಶ. ೧೨೮೯)
೫) ಶ್ರೀವಾಮನತೀರ್ಥರು ಪರಾಭವ (ಶಿರೂರುಮಠ)	ಪ್ರಯಾಗ	ವೈಶಾಖ ಶು. ದಶಮೀ	ಶಾ.ಶ.೧೨೨೯, (ಕ್ರಿ.ಶ. ೧೩೦೭)
೬) ಶ್ರೀವಿಷ್ಣುತೀರ್ಥರು ಪರಿಧಾವಿ (ಸೋದೆಮಠ)	ಕುಮಾರಪರ್ವತ ಗಮನ	ಮಾಘ ಕೃ. ತ್ರಯೋದಶೀ	ಶಾ.ಶ.೧೨೩೫, (ಕ್ರಿ.ಶ. ೧೩೧೩)
೭) ಶ್ರೀರಾಮತೀರ್ಥರು (ಕಾಣಿಯೂರುಮಠ)	ಹಿಮತ್ಕೀತಾರ	ಮಾಘ ಕೃ. ಪಂಚಮೀ	ಶಾ.ಶ.೧೨೩೮, ನಳ (ಕ್ರಿ.ಶ. ೧೩೧೬)
೮) ಶ್ರೀಅಧೋಕ್ಷಜತೀರ್ಥರು (ಪೇಜಾವರಮಠ)	ಧನುಷ್ಕೋಟಿ	ಮಾಘ ಶು. ಸಪ್ತಮೀ	ಶಾ.ಶ.೧೨೩೫, ಪರಿಧಾವಿ (ಕ್ರಿ.ಶ. ೧೩೧೩)

-ನಮ್ಮ ಪ್ರಕಾಶನದ 'ಶ್ರೀಮಧ್ವಾಚಾರ್ಯರ ಕಾಲನಿರ್ಣಯ' ಕೃತಿಯಲ್ಲಿ ಅತ್ಯಂತವಿವರವಾಗಿ ಶ್ರೀಮದಾಚಾರ್ಯರ ಕಾಲದ ವಿಚಾರವನ್ನು ಚರ್ಚಿಸಿದ್ದು ಒಟ್ಟಾಗಿ ೧೨೦೦-೧೨೮೦ ಎಂಬ ನಿರ್ಣಯವೇ ಅತ್ಯಂತ ಸಮುಚಿತ ಎಂಬುದಾಗಿ ಸಮರ್ಥಿಸಲಾಗಿದೆ.

ಮಧ್ವಸಿದ್ಧಾಂತದ ವೈಶಿಷ್ಟ್ಯ

ವಿಜ್ಞಾನ-ತತ್ತ್ವಜ್ಞಾನ

ತತ್ತ್ವಜ್ಞಾನವು ಭಗವಂತನು ಗೀತೆಯಲ್ಲಿ ಉಪದೇಶಿಸಿರುವಂತೆ ''ಆಧ್ಯಾತ್ಮವಿದ್ಯಾ ವಿದ್ಯಾನಾಂ''; ವಿದ್ಯೆಗಳ ರಾಜ; ಇತರ ವಿದ್ಯೆಗಳು ಅಂಗಗಳಾದರೆ, ಇದು ಅಂಗಿ; ಅವು ಮಣಿಗಳಾದರೆ ಇದು ಅವುಗಳನ್ನೆಲ್ಲಾ ಪೋಣಿಸಿ ಆಧಾರವಾಗಿರುವ ಸೂತ್ರ; ಇತರ ವಿದ್ಯೆಗಳು ದೇಹವಾದರೆ ಇದು ಅವುಗಳೊಳಗಿನ ಆತ್ಮ; ಎಂದರೆ ಆತ್ಮವಿದ್ಯೆ; ಇತರ ವಿದ್ಯೆಗಳ ಫಲ ಸಾಂತವಾದರೆ ಇದರ ಫಲ ಅನಂತ; ಇತರ ವಿದ್ಯೆಗಳು ಅಂತ್ಯಕಾಲ ಸಮೀಪಿಸುತ್ತ ಬಂದಂತೆ ದೂರವಾಗುತ್ತ ಹೋದರೆ, ಇದು ಹತ್ತಿರವಾಗುತ್ತ ಬರುತ್ತದೆ. ಇತರ ವಿದ್ಯೆಗಳು ಶಾಖೆಗಳಾದರೆ ಇದು ಎಲ್ಲ ವಿದ್ಯೆಗಳ ತಾಯಿಬೇರಾಗಿದೆ; ಅವೆಲ್ಲ ಇದರ ಇಂದ್ರಿಯಗಳಾದರೆ ಇದು ಅವೆಲ್ಲವುಗಳ ಉಸಿರೇ ಆಗಿದೆ.

ತತ್ತ್ವಜ್ಞಾನವು ಇಂದಿಗೆ ಅಪ್ರಸುತ್ತವೇ? ಇದು ವೈಜ್ಞಾನಿಕಯುಗ, ಯಂತ್ರ-ತಂತ್ರಗಳ ಯುಗ, ಎಂದ ಮೇಲೆ ಇಂದು ಇದು ಏತಕ್ಕೆ ಅವಶ್ಯಕವೆಂಬ ಜಿಜ್ಞಾಸೆ ಅನೇಕರದು; ಮತ್ತೆ ಕೆಲವರದು ಅನ್ನ ಬಟ್ಟೆಗಳಿಗಾಗದೆ ಬೌದ್ಧಿಕ ಕಸರತ್ತಾಗಿ ಮಾತ್ರ ಉಳಿಯುವ ಇದರಿಂದ ನಿತ್ಯಜೀವನಕ್ಕೆ ಏನು ಪ್ರಯೋಜನ? ಎಂಬ ವಿಚಾರ; ಸಶರೀರನಾಗಿ ಬೇರೆ ಗ್ರಹಗಳಿಗೆ ತಲುಪಬಲ್ಲ ಹಂತದಲ್ಲಿ ಮಾನವನಿರುವಾಗ ದೇವರು ಧರ್ಮ ಮೊದಲಾದವುಗಳು ಇಂದು ಅಪ್ರಸುತ್ತ ಎಂಬುದು ಮತ್ತೆ ಕೆಲವರ ತೀರ್ಮಾನ.

ಇಂತಹ ಪ್ರಶ್ನೆಗಳ ಆಘಾತಕ್ಕೆ ಸಿಕ್ಕು ಹೆಚ್ಚು ಜನರು, ಅದರಲ್ಲೂ ಯುವವರ್ಗದವರು ಇದೆಲ್ಲಾ ಉದ್ಯೋಗವಿಲ್ಲದ ಕಾಲವ್ಯಯದ ಮಾರ್ಗ; ಜೀವನದಲ್ಲಿ ವೈಫಲ್ಯಕಂಡ ಜನಗಳ ಪಲಾಯನವಾದ; ದೇಶದ ಪ್ರಗತಿಗೆ ಮಾರಕ; ಇದೆಲ್ಲ ಸಮಾಜದ ಉನ್ನತಿಗೆ ಪ್ರತಿಬಂಧಕ ಎಂದು ಭಾವಿಸುವ ಅಪಾಯವುಂಟು. ಇಂತಹ ಧಾರ್ಮಿಕ ಆಚಾರ - ವಿಚಾರಗಳ ಬಗ್ಗೆ ವ್ರತ - ಉಪವಾಸಗಳ ಬಗ್ಗೆ ಅನಾದಾರ, ಅಪಹಾಸ್ಯಭಾವ ಮೂಡಿಸಿಕೊಳ್ಳುವರು; ಪ್ರತಿಭಟಿಸಲೂ ತೊಡಗುವುರು; ಇಂತಹವರ ಮೂದಲಿಕೆಗೆ ಗುರಿಯಾಗಿ ಅನುಷ್ಠಾನ ಇರಿಸಿಕೊಂಡಿರುವರೂ ಸಹ ಅವನ್ನೆಲ್ಲ ತೊರೆಯುವ ಅಪಾಯವೂ ಉಂಟು.

ಇಂತಹ ಪ್ರಶ್ನೆಗಳಲ್ಲೆಲ್ಲ ಎದ್ದು ಕಾಣುವ ಮೂಲಭೂತವಾದ ತಪ್ಪು ತಿಳುವಳಿಕೆ 'ವಿಜ್ಞಾನ ಒಂದು ಪರಿಪೂರ್ಣವಾದ ಶಾಸ್ತ್ರ ; ಅದು ವಿಶ್ವದ ರಹಸ್ಯಗಳನ್ನೆಲ್ಲ ಬಯಲು ಮಾಡಿ, ದೇವರು ಧರ್ಮ ಮೊದಲಾದ ನಂಬಿಕೆಗಳನ್ನೆಲ್ಲ ಪೊಳ್ಳು ಎಂದು ಸಾರಿದೆ' ಎಂಬುದು; ಇದು ಅವರಿಗೆಲ್ಲ ಬರಲು ಮುಖ್ಯ ಕಾರಣ ಅವರೆಲ್ಲ ಸ್ವತಃ ವಿಜ್ಞಾನವನ್ನು ತಿಳಿಯದಿರುವುದು; ಈ ಬಗ್ಗೆ ಪ್ರಸಿದ್ಧ ವಿಜ್ಞಾನಿಗಳ ಅಭಿಪ್ರಾಯವನ್ನು ಗಮನಿಸದೆ ಇರುವುದು.

ವಿಜ್ಞಾನದ ಇತಿಮಿತಿಗಳನ್ನು ವಿಜ್ಞಾನಿಗಳೇ ಸ್ಪಷ್ಟವಾಗಿ ಒಪ್ಪಿರುವರು; ಒಬ್ಬ ವಿಜ್ಞಾನಿಯ ಮಾತು ಹೀಗಿದೆ ''ವಿಜ್ಞಾನವು ಎಲ್ಲವನ್ನೂ ವಿವರಿಸಿದೆ ಎಂಬುದು ತಪ್ಪು ತಿಳುವಳಿಕೆ; ನಿಜವಾಗಿ ಹೇಳಬೇಕೆಂದರೆ ವಿಜ್ಞಾನವು ಏನನ್ನೂ ವಿವರಿಸಿಯೇ ಇಲ್ಲ''. ವಿಜ್ಞಾನಿಗಳ ಗುರಿ ನಿಜಕ್ಕೂ ಎಲ್ಲವನ್ನೂ ಏಕೆ? ಎಂದು ವಿವರಿಸುವುದು ಆಗಿಯೇ ಇಲ್ಲ, 'ಅದು ಹೇಗೆ'? ಎಂಬ ಪ್ರಶ್ನೆಗಷ್ಟೆ ವಿಜ್ಞಾನದ ಉತ್ತರ ಎಂಬುದು ಸಹ ಅದೇ ವಿಜ್ಞಾನದ ಮಾತಾಗಿದೆ. ಜಗತ್ತಿನ ವಿಜ್ಞಾನಿಗಳಲ್ಲಿ ಬಹುಪಾಲು ಜನ ಮೂಲತಃ ದಾರ್ಶನಿಕರು ಎಂಬುದನ್ನು ಸಹ ಇಲ್ಲಿ ಒತ್ತಿ ಹೇಳಬೇಕಾಗಿದೆ. Theory of relativityಯಂತಹ ಮಹತ್ತ್ವದ ಕೊಡುಗೆ ನೀಡಿದ Einstein ಎಂದೂ ನಾಸ್ತಿಕನಾಗಿರಲಿಲ್ಲ. ಮತ್ತೊಬ್ಬ ಪ್ರಸಿದ್ಧ ದಾರ್ಶನಿಕ ಡೇಕಾರ್ಟ Co-ordinate Geometry ಯನ್ನು ರೂಪಿಸಿದ ಗಣಿತಶಾಸ್ತ್ರಜ್ಞ; Pythogorus, Aristotle ಮೊದಲಾದವರು ಸಹ ಮೂಲತಃ ದಾರ್ಶನಿಕರೇ ಆಗಿದ್ದ ವಿಜ್ಞಾನಿಗಳು. ಇವೆಲ್ಲ ಒಂದೆರಡು ಉದಾಹರಣೆಗಳು ಮಾತ್ರ.

ವಿಜ್ಞಾನದ ಕಾರ್ಯಕ್ಷೇತ್ರ ಮತ್ತು ತತ್ತ್ವಜ್ಞಾನದ ಕಾರ್ಯಕ್ಷೇತ್ರ ಎರಡೂ ಸಂಪೂರ್ಣ ಬೇರೆ ಬೇರೆ ಎಂಬ ಮೂಲಭೂತ ವಿಚಾರವನ್ನು ಅರಿತರೆ ಇಂತಹ ಗೊಂದಲಕ್ಕೆ ಅವಕಾಶವೇ ಇರುವುದಿಲ್ಲ. ವಿಜ್ಞಾನದ ಪರಿಧಿ ಐಂದ್ರಿಯಕ ಪ್ರಪಂಚವಾದರೆ, ತತ್ತ್ವಜ್ಞಾನದ್ದು ಅತೀಂದ್ರಿಯಪ್ರಪಂಚ. ವಿಜ್ಞಾನ ಕೈಚೆಲ್ಲಿ ಕುಳಿತಲ್ಲಿ ತತ್ತ್ವಜ್ಞಾನ ಉದಯಿಸುತ್ತದೆ. 'Philosophy starts where Science ends' ಎಂಬ ಮಾತನ್ನು ಇಲ್ಲಿ ಗಮನಿಸಬೇಕು. ಪಾಶ್ಚಾತ್ತ್ಯರು ತತ್ತ್ವಜ್ಞಾನವನ್ನು Metaphysics ಎಂದು ಕರೆದಿರುವುದು ಸಹ ಇದಕ್ಕೆ ಪೋಷಕವಾಗಿದೆ. ನೆಲದ ಮೇಲೆ ಚಲಿಸುವ ಬಸ್ಸು ರೈಲುಗಳು ಗಗನದಲ್ಲಿ ಹಾರುವ ವಿಮಾನಕ್ಕೆ ಎಂತು ತಾನೆ ಅಡ್ಡಿಯಾಗಲು ಸಾಧ್ಯ?

ತಾತ್ಪರ್ಯವಿಷ್ಟು – ವಿಜ್ಞಾನವೆಂದೂ ಧರ್ಮ, ದೇವರು ಮೊದಲಾದ ತಾತ್ತ್ವಿಕ ವಿಚಾರಗಳನ್ನು ಅಪ್ರಾಮಾಣಿಕ ಎಂದಾಗಲೀ, ಅರ್ಥಹೀನ ಎಂದಾಗಲೀ ನಿರ್ಣಯಿಸಿಲ್ಲ. ಹಾಗೆ ತಿಳಿದ ಜನರು ಬೇಕಾದರೆ ಅವನ್ನು ಬಿಡಲಿ, ಆದರೆ ವಿಜ್ಞಾನ ಹೀಗೆ ಹೇಳಿದೆ ಎಂಬ ಭ್ರಮೆಯನ್ನು ಮಾತ್ರ ಎಂದೂ ಹೊಂದಬೇಕಿಲ್ಲ. ಇಂದಿನ ಅನೇಕರಲ್ಲಿಯೂ ತತ್ತ್ವಜ್ಞಾನವನ್ನು ನಿಂದಿಸುವುದೇ ವೈಜ್ಞಾನಿಕದೃಷ್ಟಿ ಎಂಬ ಗಾಢ ತಪ್ಪುಕಲ್ಪನೆಯೇ ತುಂಬಿದೆ. ವಿಜ್ಞಾನದ ತಳ ಬುಡವನ್ನೂ ತಿಳಿಯದ ಇಂತಹ ಜನರ ಆಕ್ಷೇಪ ಎಷ್ಟೇ ಇದ್ದರೂ ಅದರಿಂದ ತತ್ತ್ವಜ್ಞಾನದ ಘನತೆಗೆ ಇನಿತೂ ಕುಂದಿಲ್ಲ.

ಮತ್ತೊಂದು ರೀತಿಯಲ್ಲಿ ವಿಚಾರ ಮಾಡಿದರೆ ವಿಜ್ಞಾನ ನಿಜಕ್ಕೂ ತತ್ತ್ವಜ್ಞಾನಕ್ಕೆ ಪೋಷಕವಾಗಿದೆ, ಪೂರಕವಾಗಿದೆ ಎಂದೂ ವಿರುದ್ಧವಾಗಿಲ್ಲ ಎಂಬ ಸತ್ಯ ಗೋಚರಿಸುತ್ತದೆ. ವಿಜ್ಞಾನವನ್ನು ಸರಿಯಾಗಿ ತಿಳಿದು ಶಾಸ್ತ್ರವನ್ನು ಅಧ್ಯಯನ ಮಾಡಿದವರಿಗೆ, ವಿಜ್ಞಾನ

ತಿಳಿಯದ ಶಾಸ್ತ್ರಜ್ಞರಿಗಿಂತ ಹೆಚ್ಚು ಶ್ರದ್ಧೆ - ವಿಶ್ವಾಸಗಳು ಶಾಸ್ತ್ರದಲ್ಲಿ ಮೂಡುತ್ತವೆ. ತತ್ತ್ವಜ್ಞಾನವು ವಿಧಿಸುವ ಸ್ವಚ್ಛತೆ, ದೇಹಶುದ್ಧಿ, ಆಹಾರ ನಿಯಮ ಮೊದಲಾದವುಗಳು ಮೇಲ್ನೋಟಕ್ಕೆ ಆಭಾಸವಾಗಿ ಕಂಡರೆ, ವೈಜ್ಞಾನಿಕದೃಷ್ಟಿಯಲ್ಲಿ ನೋಡಿದವರಿಗೆ ಅದರ ಹಿಂದಿನ ಆರೋಗ್ಯಕರ ಜೀವನದ ಪರಿಕಲ್ಪನೆ ಗಾಢವಾಗಿ ತಟ್ಟುತ್ತದೆ. ಮನೆಯಲ್ಲಿರಲಿ, ರಸ್ತೆಯಲ್ಲೂ ಸ್ವಚ್ಛತೆಯನ್ನು ಪಾಲಿಸಬಯಸುವ ಪಾಶ್ಚಾತ್ಯದೇಶಗಳು ಇದಕ್ಕೆ ಉತ್ತಮ ದೃಷ್ಟಾಂತ.

ರಾಮಾಯಣದಲ್ಲಿ ಬರುವ ನೆರಳು ಹಿಡಿದು ಗಗನದ ಪ್ರಾಣಿಗಳನ್ನು ಕೆಳಕ್ಕೆ ಎಳೆದು ನಾಶಪಡಿಸುವ ಸಿಂಹಿಕೆಯ ಪ್ರಸಂಗದಲ್ಲಿ ಇಂದಿನ Radarನ ಪರಿಕಲ್ಪನೆಯನ್ನೂ, ರಾವಣನ ಅಸಂಖ್ಯವಾದ ಮೂಲಬಲ ಲಂಕೆಯಲ್ಲಿ ಸೀಮಿತ ಪ್ರದೇಶದಲ್ಲಿ ನೆಲೆಸಲು ಸಾಧ್ಯವಾದ್ದರಲ್ಲಿ ಇಂದಿನ Virus ಪರಿಕಲ್ಪನೆಯನ್ನೂ, ಭಾಗವತ ಸಪ್ತಮಸ್ಕಂಧದಲ್ಲಿ ಬರುವ ಋಷಭನಾಮಕ ಶ್ರೀಹರಿಯು ಭೂಮಿಯಲ್ಲಿಯೇ ಇದ್ದು ಮಳೆತರಿಸಿದ್ದರಲ್ಲಿ ಇಂದಿನ ಕೃತಕಮಳೆಯ ಪರಿಕಲ್ಪನೆಯನ್ನೂ, ಪ್ರಿಯವ್ರತರಾಜನು ಜ್ಯೋತಿರ್ಮಯವಾದ ರಥದ ನೆರವಿನಿಂದ ರಾತ್ರಿಯಲ್ಲೂ ಹಗಲಾಗಿಸಿದ ಪ್ರಸಂಗದ ಇಂದಿನ Solar miror ಪರಿಕಲ್ಪನೆಯನ್ನೂ, ಶ್ರೀಕೃಷ್ಣನು ತನ್ನ ಚಕ್ರದಿಂದ ಜೀರ್ಣಶರೀರವನ್ನು ಕತ್ತರಿಸಿ ಜಾಂಬವಂತನಿಗೆ ತಾರುಣ್ಯ ನೀಡಿದ ಪ್ರಸಂಗದಲ್ಲಿ ಇಂದಿನ Plastic surgery ಪರಿಕಲ್ಪನೆಯನ್ನೂ, ದ್ರೋಣರು ದೊನ್ನೆಯಲ್ಲಿ, ದುರ್ಯೋಧನ ಮೊದಲಾದವರು ಘಟಗಳಲ್ಲಿ ಜನಿಸಿದ್ದರಲ್ಲಿ Test tube baby ಪರಿಕಲ್ಪನೆಯನ್ನೂ, ಕುರುಪಾಂಡವರು ಯುದ್ಧದ ಅಸ್ತ್ರಗಳಲ್ಲಿ ಆಧುನಿಕ ಯುಗದ ಅಣ್ವಸ್ತ್ರ Nuclear Weapons ಗಳ ಪರಿಕಲ್ಪನೆಯನ್ನೂ, ಅರ್ಜುನನ ಬಾಣದಿಂದ ಜಲಧಾರೆ ಉದ್ಭವಿಸಿದ್ದರಲ್ಲಿ Borewell ಪರಿಕಲ್ಪನೆಯನ್ನೂ, ಅರ್ಜುನ ಸಂಪಾದಿಸಿದ ಪಾಶುಪತಾಸ್ತ್ರಗಳ ಪ್ರಯೋಗವನ್ನು ಧರ್ಮರಾಜನ ಅಪೇಕ್ಷೆಯಂತೆ ತೋರಿಸಲು ಮುಂದಾದಾಗ ನಾರದರು ಆಗಮಿಸಿ ಅದರ ದುಷ್ಪರಿಣಾಮಗಳನ್ನು ವಿವರಿಸಿ ತಡೆದು ನಿಲ್ಲಿಸಿದ ಪ್ರಸಂಗವು ಇಂದಿನ ಅಣ್ವಸ್ತ್ರಗಳ ಪರೀಕ್ಷೆಯ ಅಪಾಯದ ಪರಿಕಲ್ಪನೆಯನ್ನೂ, ಮಾಂಧಾತರಾಜನು ತಂದೆಯ ಹೊಟ್ಟೆ ಒಡೆದು ಜನಿಸಿ ಬಂದ ಕಥೆಯಲ್ಲಿ ಆಧುನಿಕ caesarian ಪರಿಕಲ್ಪನೆಯನ್ನೂ, ಬಾಣಾಸುರನ ಪ್ರಸಂಗದಲ್ಲಿನ ಶೈವಜ್ವರ-ವೈಷ್ಣವಜ್ವರಗಳ ಯುದ್ಧಪ್ರಸಂಗದಲ್ಲಿ ರೋಗಾಣುಗಳನ್ನು ಔಷಧಿಯಿಂದ ಕೊಲ್ಲುವ ಪರಿಕಲ್ಪನೆಯನ್ನೂ, ಅಶ್ವಿನೀದೇವತೆಗಳು ದಧೀಚಿಮುನಿಗಳಿಗೆ ಅಶ್ವಶಿರವನ್ನು ಜೋಡಿಸಿದ್ದರಲ್ಲಿ, ಇಂದಿನ ಬದಲಿ ಹೃದಯಶಸ್ತ್ರಚಿಕಿತ್ಸೆಯ ಪರಿಕಲ್ಪನೆಯನ್ನೂ, ಶ್ರೀರಾಮನ ಪುಷ್ಪಕವಿಮಾನ ಸಾಲ್ವನ ಸೌಭವಿಮಾನಗಳಲ್ಲಿ ಇಂದಿನ ವಿಮಾನಗಳ ಪರಿಕಲ್ಪನೆಯನ್ನೂ, ಪುಷ್ಪಕವಿಮಾನವು 'ನಾತ್ಯುಷ್ಣಂ ನಾತಿಶೀತಂ' ಎಂಬಲ್ಲಿ ಇಂದಿನ Airconditioned ವ್ಯವಸ್ಥೆಯ

ಪರಿಕಲ್ಪನೆಯನ್ನೂ, ಇಂದಿನ Telephoneಗಳಲ್ಲಿ ದೂರಶ್ರವಣದ ಪರಿಕಲ್ಪನೆಯನ್ನೂ, ಇಂದಿನ ದೂರದರ್ಶನದಲ್ಲಿ ಪುರಾಣಕಾಲದ ದೂರದರ್ಶನಸಿದ್ಧಿಯ ಪರಿಕಲ್ಪನೆಯನ್ನೂ ಕಾಣದಿರಲು ಚಿಕಿತ್ಸಕಚೇತನಕ್ಕೆ ಸಾಧ್ಯವೇ ಇಲ್ಲ; ಎಂದರೆ ಇವೆಲ್ಲವುಗಳ ಹಿನ್ನೆಲೆಯಲ್ಲಿ ಇಂದಿನ ತಂತ್ರಜ್ಞಾನವೇ ಅಂದೂ ಇತ್ತು ಎಂದು ಸಾಧಿಸಬೇಕಿಲ್ಲ; ಆದರೆ ಇದಕ್ಕೆ ಸಮಾನವಾದ ಅಥವಾ ಮಿಗಿಲಾದ ತಂತ್ರಜ್ಞಾನವೊಂದರ ಅಸ್ತಿತ್ವವನ್ನು ಅಂದಿನ ಜನ ಹೊಂದಿದ್ದರು ಎಂಬುದಾಗಿ ಊಹಿಸದಿರಲು ಮಾತ್ರ ಅಶಕ್ಯ ಎಂಬುದು ಖಚಿತ.

ನೂರಾರು ವರ್ಷಗಳ ಹಿಂದೆ ಮೇಲಿನ ಪುರಾಣಭಾಗಗಳನ್ನು ಹೇಳುವಾಗ ಎದುರಿಸಲಾಗದಿದ್ದ ಸಮಸ್ಯೆಯನ್ನು ಇಂದು ಎದುರಿಸಲು ವಿಜ್ಞಾನದ ಪ್ರಗತಿಯಿಂದ ಸಾಧ್ಯವಾಗಿದೆ; ಬದಲಾಗಿ ಅವುಗಳ ಬಗ್ಗೆ ಇರುವ ಶ್ರದ್ಧೆಯು ಹೆಚ್ಚುವುದು. ಇವೆಲ್ಲ ಇಪ್ಪತ್ತನೆ ಶತಮಾನದ ಜನರಿಂದ ಪ್ರಕ್ಷಿಪ್ತವಾದ ಭಾಗಗಳು ಎಂದು ಅನಂತರದ ಜನ ಊಹಿಸುವಷ್ಟು ಅಪೂರ್ವವಾದ ವೈಜ್ಞಾನಿಕಸತ್ಯವಾಗಿವೆ. ಇಂತಹ ಪ್ರಸಂಗಗಳು ರಾಮಾಯಣ ಮಹಾಭಾರತಗಳಲ್ಲಿ ಸಾಕಷ್ಟು ಸಿಕ್ಕುತ್ತವೆ. ಈ ಹಿನ್ನೆಲೆಯಲ್ಲಿ ವಿಚಾರವಾದಿಗಳೆಂಬ ಮತ್ತೊಂದು ವರ್ಗದ ಜನರು ಎತ್ತುವ ಆಕ್ಷೇಪಗಳೂ ಅಷ್ಟೇ ಪೊಳ್ಳು ಎಂದು ತಿಳಿದರೆ ಸಾಕು.

ತತ್ತ್ವಜ್ಞಾನವೆಲ್ಲ ವಿಜ್ಞಾನ ಎಂದು ವಾದಿಸುವ ಅತಿರೇಕ ಮತ್ತೆ ಕೆಲವರದು; ಆದರೆ ವಿಜ್ಞಾನಗಳ ಮತ್ತು ತತ್ತ್ವಜ್ಞಾನಗಳ ಗುರಿಗಳೇ ಬೇರೆ ಬೇರೆ, ಅವುಗಳ ಮಂಡನ ಪದ್ಧತಿಗಳೇ ಬೇರೆ ಬೇರೆ ಎಂದು ಗಮನಿಸಿದವರಿಗೆ ಅದು ತಪ್ಪು ದಾರಿ ಎಂದು ತಿಳಿದು ಮನವರಿಕೆಯಾಗುತ್ತದೆ. ತತ್ತ್ವಜ್ಞಾನದ ವ್ಯಾಪ್ತಿಯಲ್ಲಿ ಪ್ರಾಧಾನ್ಯ ಅತೀಂದ್ರಿಯ ವಿಷಯಗಳದ್ದಾದರೆ ವಿಜ್ಞಾನದಲ್ಲಿ ಐಂದ್ರಿಕವಾದ ಭೌತಿಕವಸ್ತುಗಳದ್ದೇ ಪ್ರಾಧಾನ್ಯ. ವಿಜ್ಞಾನವನ್ನು ವಿಜ್ಞಾನವನ್ನಾಗಿ ನೋಡುವಂತೆ, ತತ್ತ್ವಜ್ಞಾನವನ್ನು ತತ್ತ್ವಜ್ಞಾನವನ್ನಾಗಿ ಕಾಣುವುದರಲ್ಲಿ ನಿಜವಾದ ವಿವೇಕವಿದೆ. ವಿಜ್ಞಾನದ್ದು ವ್ಯಷ್ಟಿದೃಷ್ಟಿಯಾದರೆ, ತತ್ತ್ವಜ್ಞಾನದ್ದು ಸಮಷ್ಟಿದೃಷ್ಟಿಯಾಗಿದೆ ಎಂಬ ಮತ್ತೊಂದು ಪ್ರಮುಖಅಂಶ.

ಮಧ್ವಸಿದ್ಧಾಂತ

ಶ್ರೀಮದಾಚಾರ್ಯರು ಬೋಧಿಸಿದ ತತ್ತ್ವಜ್ಞಾನವು 'ತತ್ತ್ವವಾದ', 'ವೈಷ್ಣವಸಿದ್ಧಾಂತ', 'ದ್ವೈತದರ್ಶನ' ಮೊದಲಾದ ಹೆಸರುಗಳಿಂದ ಪ್ರಸಿದ್ಧವಾಗಿದೆ.

ಇದು ಕಾಲಕ್ರಮದಲ್ಲಿ, ಮುಖ್ಯವಾಗಿ ಚಿಂತನಕ್ರಮದಲ್ಲಿ ಇತರ ಎಲ್ಲಾ ದರ್ಶನಗಳಿಗಿಂತ ಕೊನೆಯಲ್ಲಿ ಬಂದ ದರ್ಶನ; ಪರಿಪೂರ್ಣವಾದ ದರ್ಶನ; ಶ್ರೀವಾದಿರಾಜಸ್ವಾಮಿಗಳು ತಿಳಿಸಿರುವಂತೆ ನಿಜಅರ್ಥದಲ್ಲಿ ಸಿದ್ದಾಂತ ಎನ್ನಿಸಿದೆ.:

ಪೂರ್ವಃ ಪೂರ್ವಃ ಪೂರ್ವಪಕ್ಷಃ ಯಾವನ್ಮಧ್ವಮತೋದಯಃ ।
ಅಂತೇ ಸಿದ್ಧಸ್ತು ಸಿದ್ಧಾಂತೋ ಮಧ್ವಸ್ಯಾಗಮ ಏವ ಹಿ ॥

ಶ್ರೀಮದಾಚಾರ್ಯರದು ಜಗತ್ತಿನ ಮತಾಚಾರ್ಯರುಗಳಲ್ಲೆಲ್ಲ ಎದ್ದು ಕಾಣುವ ವ್ಯಕ್ತಿತ್ವ, ದ್ವಾತ್ರಿಂಶಲ್ಲಕ್ಷಣೋಪೇತವಾದ ಪ್ರಮಾಣಬದ್ಧವಾದ ಶರೀರದವರೆಂಬ ಅಸಾಧಾರಣ ಹಿರಿಮೆ ಅವರದು; ಅವರು ಪ್ರತಿಪಾದಿಸಿದ ಸಿದ್ಧಾಂತವೂ ಸಹ ಸಿದ್ಧಾಂತಕ್ಕೆ ಇರಲೇಬೇಕಾದ ಸಕಲಸಲ್ಲಕ್ಷಣಗಳಿಂದ ಭರಿತವಾದ ಪರಿಪೂರ್ಣ ಸಿದ್ಧಾಂತ.

ಶ್ರೀಮನ್ಮಧ್ವಮತೇ ಹರಿಃ ಪರತರಃ ಸತ್ಯಂ ಜಗತ್ ತತ್ತ್ವತೋ
ಭಿನ್ನಾ ಜೀವಗಣಾ ಹರೇರನುಚರಾ ನೀಚೋಚ್ಚಭಾವಂಗತಾಃ ।
ಮುಕ್ತಿರ್ನೈಜಸುಖಾನುಭೂತಿರಮಲಾ ಭಕ್ತಿಶ್ಚ ತತ್ಸಾಧನಂ
ಹ್ಯಕ್ಷಾದಿತ್ರಿತಯಂ ಪ್ರಮಾಣಮಖಿಲಾಮ್ನಾಯೈಕವೇದ್ಯೋ ಹರಿಃ ॥

- ಎಂಬುದು ಅವರು ಪ್ರತಿಪಾದಿಸಿದ ಸಿದ್ಧಾಂತದ ಸಾರ.

ಚಾರ್ವಾಕರು ಪ್ರತ್ಯಕ್ಷವನ್ನು ಒಪ್ಪಿದರೂ ಅನುಮಾನ ಆಗಮಗಳನ್ನು ಒಪ್ಪಲಿಲ್ಲ; ಬೌದ್ಧಜೈನರು ವೇದಗಳನ್ನು ಒಪ್ಪಲಿಲ್ಲ; ಸಾಂಖ್ಯ-ಪಾತಂಜಲರು ವೇದಗಳನ್ನು ಒಪ್ಪಿದರೂ ಅವುಗಳಿಗೆ ಪಾರಮ್ಯವನ್ನು ಒಪ್ಪಲಿಲ್ಲ; ನ್ಯಾಯವೈಶೇಷಿಕರು ಯುಕ್ತಿಗೆ ಪ್ರಾಬಲ್ಯ ಒಪ್ಪಿದರು; ಪೂರ್ವಮೀಮಾಂಸಕರು ವೇದಗಳಿಗೆ ಪಾರಮ್ಯ ಒಪ್ಪಿದರೂ ಅವುಗಳನ್ನು ಕರ್ಮಕಾಂಡ ಮತ್ತು ಜ್ಞಾನಕಾಂಡಗಳೆಂದು ಪ್ರತ್ಯೇಕಿಸಿ ಕರ್ಮಕಾಂಡಕ್ಕೆ ಮಾತ್ರ ಪ್ರಾಧಾನ್ಯವಿತ್ತರು; ಅದ್ವೈತಿಗಳು ಜ್ಞಾನಕಾಂಡಕ್ಕೆ ಪ್ರಾಧಾನ್ಯವಿತ್ತು ಕರ್ಮಕಾಂಡವನ್ನು ಗೌಣವಾಗಿಸಿದರು; ಅಲ್ಲದೆ ಅದರಲ್ಲೂ ವೇದಗಳನ್ನು ತತ್ತ್ವಾವೇದಕ, ಅತತ್ತ್ವಾವೇದಕವೆಂದು ವಿಭಾಗಮಾಡಿ ನಾಲ್ಕಾರು ವಾಕ್ಯಗಳ ಹೊರತು ಉಳಿದುದ್ದನ್ನೆಲ್ಲಾ ಅತತ್ತ್ವಾವೇದಕವೆಂದರು; ವಿಶಿಷ್ಟಾದ್ವೈತಿಗಳು ಸಹ ಕರ್ಮಕಾಂಡವನ್ನು ಗೌಣವಾಗಿಸಿದ್ದಲ್ಲದೇ, ದ್ರಾವಿಡವೇದವೆಂದು ಪ್ರಸಿದ್ಧವಾದ ಆಳ್ವಾರುಗಳ ಪ್ರಬಂಧಗಳನ್ನು ವೇದಗಳಿಗೆ ಸಮನಾಗಿ ಪರಿಗಣಿಸಿದರು.

ಆದರೆ ಇಂತಹ ಯಾವ ವಿಭಾಗವನ್ನು ಮಾಡದೆ ಸಕಲವೇದಗಳೂ ಒಂದೇ ರೀತಿಯಲ್ಲಿ ಪ್ರಮಾಣವಾಗಿದೆ ಎಂದು ಮೊಟ್ಟಮೊದಲಬಾರಿಗೆ ಸಾಧಿಸಿ ತೋರಿಸಿದ ಶ್ರೇಯಸ್ಸು ಶ್ರೀಮಧ್ವಾಚಾರ್ಯರದು; ಜೊತೆಗೆ ಇವರಾರೂ ಗುರುತಿಸದಿದ್ದ ಬ್ರಹ್ಮಸೂತ್ರಗಳ ಪಾರಮ್ಯವನ್ನು ಪ್ರತಿಪಾದಿಸಿದವರು ಸಹ ಇವರೇ;

''ಅತೋ ನೈತಾದೃಶಂ ಕಿಂಚಿತ್ ಪ್ರಮಾಣತಮಮಿಷ್ಯತೇ'' – ಅನುವ್ಯಾಖ್ಯಾನ

ವೇದಗಳಂತೆ ವೇದಾಂಗಗಳು, ಭಾಗವತಾದಿ ಪುರಾಣಗಳು, ಮನುಸ್ಮೃತಿ ಮೊದಲಾದ ಸ್ಮೃತಿಗಳು ಶಾಸ್ತ್ರವೇ ಆಗಿದೆ. ವೇದಗಳೊಂದಿಗೆ ಮಹಾಭಾರತ, ರಾಮಾಯಣ ಮತ್ತು ಪಂಚರಾತ್ರಗಳೆಂಬ ಇತಿಹಾಸಗಳು ಸಹ ಮುಖ್ಯಶಾಸ್ತ್ರವೇ ಆಗಿವೆ. ಅವುಗಳಲ್ಲಿ ಎಂದೂ ಅರ್ಥಭೇದವಿಲ್ಲವೆಂದು ಪ್ರತಿಪಾದಿಸಿದವರು :

ಅರ್ಥೋಽಯಮೇವ ನಿಖಿಲೈರಪಿ ವೇದವಾಕ್ಯೈ
ರಾಮಾಯಣೈಃ ಸಹಿತಭಾರತಪಂಚರಾತ್ರೈಃ ।

ಅನ್ಯೈಶ್ಚ ಶಾಸ್ತ್ರವಚನೈಃ ಸಹತತ್ತ್ವಸೂತ್ರೈ-
ರ್ನಿರ್ಣೀಯತೇ ಸಹೃದಯಂ ಹರಿಣಾ ಸದೈವ ॥

ಮಹಾಭಾರತಾದಿಗಳೆಲ್ಲ ಕೇವಲ ಇತಿಹಾಸವಾಗಿರದೆ ಮೂಲತಃ ಅಧ್ಯಾತ್ಮಶಾಸ್ತ್ರವಾಗಿವೆ. ವೇದಾದಿ ಸಕಲಶಾಸ್ತ್ರಗಳ ಸಾರವಾಗಿ ಮಹಾಭಾರತ ಅವಕ್ಕಿಂತ ಮಿಗಿಲಾದರೆ, ಭಗವದ್ಗೀತೆ ವಿಷ್ಣುಸಹಸ್ರನಾಮಗಳು ಅದರ ಸಾರವಾಗಿವೆ; ವೇದಗಳಿಗೆಲ್ಲ ಅತಿಕಡಿಮೆ ಎಂದರೆ ಮೂರರ್ಥಗಳು; ಮಹಾಭಾರತಕ್ಕೆ ಹತ್ತು ಅರ್ಥಗಳು, ವಿಷ್ಣುಸಹಸ್ರನಾಮಗಳಿಗೆ ನೂರು ಅರ್ಥಗಳು ಮೊದಲಾದ ಅಪೂರ್ವವಿಷಯಗಳನ್ನು ಸೋದಾಹರಣವಾಗಿ ತಿಳಿಸಿದವರೂ ಅವರೇ. ಮಹಾಭಾರತದ ಹಿರಿಮೆಯನ್ನೂ, ಅದರ ಸಾರವನ್ನೂ, ಆಧ್ಯಾತ್ಮಿಕಮಹತ್ತ್ವವನ್ನೂ ಜಟಿಲಪ್ರಸಂಗಗಳಿಗೆಲ್ಲ ನಿರ್ಣಯವನ್ನೂ ಒದಗಿಸಿದ ಅವರ ಮಹಾಭಾರತತಾತ್ಪರ್ಯ- ನಿರ್ಣಯವು ಮಹಾಭಾರತದ ನಂತರ ಬಂದ ಏಕಮಾತ್ರ ಗ್ರಂಥ.

ಚಾರ್ವಾಕರು ದೇಹದಿಂದ ಬೇರೆಯಾದ ಆತ್ಮನನ್ನು ಒಪ್ಪಲಿಲ್ಲ; ಬೌದ್ಧರು ನೈರಾತ್ಮ್ಯವಾದಿಗಳು; ಜೈನರು ಮತ್ತು ಸಾಂಖ್ಯರು ಜೀವಾತ್ಮನನ್ನು ಒಪ್ಪಿದರೂ ಪರಮಾತ್ಮನನ್ನು ಒಪ್ಪಲಿಲ್ಲ; ನ್ಯಾಯವೈಶೇಷಿಕರು ಪರಮಾತ್ಮನನ್ನು ಒಪ್ಪಿದರೂ ಅವನಿಗೆ ಪಾರಮ್ಯ ಒಪ್ಪಲಿಲ್ಲ; ಪೂರ್ವಮೀಮಾಂಸಕರು ಈಶ್ವರನನ್ನೇ ಒಪ್ಪದ ನಿರೀಶ್ವರವಾದಿಗಳು. ಅದ್ವೈತಿಗಳು ಆತ್ಮವು ಒಂದೇ ಎಂದರು; ವಿಶಿಷ್ಟಾದ್ವೈತಿಗಳು ಪರಮಾತ್ಮನನ್ನು ಒಪ್ಪಿದರೂ ಅವನಿಗೆ ಉಪಾದಾನಕಾರಣತ್ವವನ್ನು ಹೇಳುವ ಮೂಲಕ ವಿಕಾರಿತ್ವವನ್ನೇ ಹೇಳಿದಂತಾಯಿತು; ಆದರೆ ಪರಮಾತ್ಮನನ್ನು ನಿಜವಾದ ಅರ್ಥದಲ್ಲಿ ಒಪ್ಪಿದ್ದು ದ್ವೈತದರ್ಶನದ ಹಿರಿಮೆಯಾಯಿತು. ಈ ಅರ್ಥದಲ್ಲಿ ದ್ವೈತಮತವು ನೂರಕ್ಕೆ ನೂರರಷ್ಟು ಆಸ್ತಿಕವೆನಿಸಿದ ಏಕಮಾತ್ರ ದರ್ಶನವಾಗುತ್ತದೆ.

ಈಶ್ವರನನ್ನು ಒಪ್ಪಿದ ನೈಯಾಯಿಕರು ಈಶ್ವರನಿಗೆ ಎಂಟು ಗುಣವೆಂದರೆ ಅದ್ವೈತಿಗಳು ಬ್ರಹ್ಮನನ್ನು ನಿರ್ಗುಣ ಎಂದರು, ವಿಶಿಷ್ಟಾದ್ವೈತಿಗಳು ಅನಂತಗುಣ ಎಂದು ಒಪ್ಪಿದರೂ ಆನಂದಸಾಮ್ಯವನ್ನು ಹೇಳುವ ಮೂಲಕ ಅವನ ಹಿರಿಮೆಗೆ ಚ್ಯುತಿಯೊಡ್ಡಿದರು. ಭಗವಂತನನ್ನು ಅನಂತಕಲ್ಯಾಣಗುಣಪರಿಪೂರ್ಣ, ಸಕಲದೋಷದೂರ, ಸರ್ವತಂತ್ರ-ಸ್ವತಂತ್ರ ಎಂದು ಸಾರಿದ್ದು ಪುನಃ ಶ್ರೀಮನ್ಮಧ್ವಾಚಾರ್ಯರೇ!

ಒಬ್ಬಾಚಾರಿಯನು ದೈವವೇ ಇಲ್ಲವೆಂದ
ಒಬ್ಬಾಚಾರಿಯನು ದೈವಕೆಂಟೇ ಗುಣವೆಂದ
ಒಬ್ಬಾಚಾರಿಯನು ನಿರ್ಗುಣ ನಿರಾಕಾರ
ನಿರವಯವನೆಂದ – ಕಡೆಯಲಿ ತಾನೆ ದೈವವೆಂದ
ಒಬ್ಬರು ವೇದಾರ್ಥವರಿತೂ ಅರಿಯರು

ಒಬ್ಬ ಮಧ್ವಾಚಾರ್ಯರೇ ಪುರಂದರವಿಠಲ-
ನೊಬ್ಬನೇ ದೈವವೆಂದು ತೋರಿಸಿಕೊಟ್ಟರಾಗಿ

- ಎಂಬ ಶ್ರೀಪುರಂದರದಾಸರ ಮಾತನ್ನು ಇಲ್ಲಿ ಸ್ಮರಿಸಿಕೊಳ್ಳಬಹುದು.

ವೈದಿಕಮತದಲ್ಲಿ ನಡೆದೇವೆಂದು ತಾವು
ವೈಷ್ಣವವಂ ಬಿಟ್ಟುಕೊಟ್ಟರು ಕೆಲವರು
ವೈಷ್ಣವಮತದಲ್ಲಿ ನಡೆದೇವೆಂದು
ವೈದಿಕವಂ ಬಿಟ್ಟುಕೊಟ್ಟರು ಕೆಲವರು
ವೈದಿಕ ವೈಷ್ಣವ ಒಂದೆಂದು ಮಧ್ವಮುನಿ
ಪ್ರತಿಪಾದಿಸಿದ ಪುರಂದರವಿಠಲ ಮೆಚ್ಚಿ

- ಎಂಬ ಅವರ ಮತ್ತೊಂದು ಮಾತು ಸಹ ಇಲ್ಲಿ ಉಲ್ಲೇಖಾರ್ಹವಾಗಿದೆ.

ಚಾರ್ವಾಕರ ಜಗತ್ತು ಇಹದ ಮಟ್ಟಿಗೆ ಸೀಮಿತವಾದರೆ, ಬೌದ್ಧರದು ಶೂನ್ಯವಾದ, ಕ್ಷಣಿಕವಾದ; ಜೈನರದು ಸ್ಯಾದ್ವಾದ; ಸಾಂಖ್ಯಯೋಗರಿಗೆ ಜಗತ್ತೇ ಪ್ರಧಾನ; ಅದ್ವೈತವಾದದಲ್ಲಿ ಜಗತ್ತು ಮಿಥ್ಯೆ; ವಿಶಿಷ್ಟಾದ್ವೈತಮತದಲ್ಲಿ ಅದು ಭಗವಂತನ ಶರೀರ; ಆದರೆ ಜಗತ್ತನ್ನು ಭಗವಂತನಿಗೆ ಭಿನ್ನವಾದ ಅವನಷ್ಟೇ ಸತ್ಯವಾದ ಆದರೆ ಅವನಿಗೆ ಸಂಪೂರ್ಣವಾಗಿ ಅಧೀನವಾದ ಪದಾರ್ಥವೆಂದು ತೋರಿಸಿಕೊಟ್ಟವರು ಶ್ರೀಮದಾಚಾರ್ಯರು.

ಕರ್ಮಾಚರಣೆಯ ಬಗ್ಗೆಯೂ ಇಂತಹುದೇ ವಿಚಿತ್ರವಾದಗಳಿದ್ದವು. ಚಾರ್ವಾಕರಿಗೆ ಬದುಕಲು ಮಾಡುವುದೆಲ್ಲ ಕರ್ಮ; ಬೌದ್ಧಜೈನರಿಗೆ ವೇದವಿಹಿತವಲ್ಲದ್ದು ಕರ್ಮ; ಸಾಂಖ್ಯ, ಯೋಗ ಹಾಗು ವೈಶೇಷಿಕರಿಗೆ ವೇದವಿಹಿತವಾದದ್ದೂ ಕರ್ಮ; ಪೂರ್ವಮೀಮಾಂಸಕರಿಗೆ ವೇದದಲ್ಲಿ ಹೇಳಿದ ಯಜ್ಞ, ಯಾಗಾದಿಗಳು ಮಾತ್ರ ಕರ್ಮ; ಅದ್ವೈತಿಗಳದಂತು 'ಕರ್ಮತ್ಯಾಗವಾದ' (ಮುಮುಕ್ಷೋಃ ಕರ್ಮಸನ್ಯಾಸವಿಧಾನಾತ್ - ಶಂಕರಾಚಾರ್ಯರ ಗೀತಾಭಾಷ್ಯ), ವಿಶಿಷ್ಟಾದ್ವೈತಿಗಳದು ಕರ್ಮತ್ಯಾಗವಲ್ಲವಾದರೂ ಎಲ್ಲರಿಗೂ ಒಂದೇ ಫಲ ಕೊಡುವ ವಸ್ತು ಕರ್ಮ. ಜ್ಞಾನ ಬಂದ ಅನಂತರದ ಕರ್ಮಾಚರಣೆಯ ಸ್ವರೂಪದ ಬಗ್ಗೆಯಂತೂ ತ್ಯಾಗವೇ ಇವರೆಲ್ಲರ ಒಟ್ಟು ಮತ. ಆದರೆ ವೇದವಿಹಿತವಾದದ್ದು ಮಾತ್ರವೇ ಕರ್ಮ, ಕಾಮ್ಯಫಲವನ್ನು ತೊರೆದು ಶ್ರೀಕೃಷ್ಣಾರ್ಪಣಬುದ್ಧಿಯಿಂದ ಮಾಡಲ್ಪಟ್ಟಾಗ ಅದು ಅಪರೋಕ್ಷಜ್ಞಾನಕ್ಕೆ ಸಾಧನ, ಜ್ಞಾನಿಗಳಿಗೂ ಕರ್ಮವು ವಿಹಿತ, ಜ್ಞಾನಪೂರ್ವದ ಕರ್ಮಯೋಗವು ಪರೋಕ್ಷಜ್ಞಾನಕ್ಕೆ ಸಾಧನವಾದರೆ, ಜ್ಞಾನೋತ್ತರಕರ್ಮವು ಮೋಕ್ಷದಲ್ಲಿ ಆನಂದಾತಿಶಯಕ್ಕೆ ಸಾಧಕ ಎಂದು ನಿರೂಪಿಸಿದ್ದು ಶ್ರೀಮಧ್ವಾಚಾರ್ಯರ ಹಿರಿಮೆ. ಅಸಂಪ್ರಜ್ಞಾತ ಸಮಾಧಿಯಲ್ಲಿದ್ದಾಗ ಹೊರತು ಜ್ಞಾನಿಗೂ ಕರ್ಮ ಕಡ್ಡಾಯವೆಂದು ಅವರು ಪ್ರತಿಪಾದಿಸಿದರು.

ಚಾರ್ವಾಕರಿಗೆ ಪ್ರತ್ಯೇಕ ಮೋಕ್ಷವೇ ಇಲ್ಲ, ದೇಹನಾಶವೇ ಮೋಕ್ಷ; ಬೌದ್ಧರಿಗೆ 'ಶೂನ್ಯಭಾವ' ಮೋಕ್ಷವಾದರೆ; ಜೈನರಿಗೆ 'ಸತತೋರ್ಧ್ವಗಮನ'ವೇ ಮೋಕ್ಷ; ಸಾಂಖ್ಯರಿಗೆ ಪ್ರಕೃತಿಬಂಧದಿಂದ ವಿಮೋಚನೆ ಮೋಕ್ಷವಾದರೆ; ನೈಯಾಯಿಕ-ವೈಶೇಷಿಕರಿಗೆ ಸುಖದುಃಖಗಳ ನಿವೃತ್ತಿಯೇ ಮೋಕ್ಷ, ಪ್ರಪಂಚ ಸಂಬಂಧದ ವಿಲಯ ಮೀಮಾಂಸಕರ ಮೋಕ್ಷದ ಪರಿಕಲ್ಪನೆ; ಆತ್ಮೈಕ್ಯ ಅದ್ವೈತದ ಮೋಕ್ಷ; ಆನಂದಸಾಮ್ಯ ವಿಶಿಷ್ಟಾದ್ವೈತದ ಮೋಕ್ಷ. ಆದರೆ ಪ್ರತಿಯೊಬ್ಬ ಸಾತ್ವಿಕಚೇತನನೂ ಸ್ವರೂಪತಃ ಆನಂದಸ್ವರೂಪನಾಗಿದ್ದು ಅಂತಹ ಸಹಜ ಆನಂದದ ಪೂರ್ಣ ಅಭಿವ್ಯಕ್ತಿಯೇ ಮೋಕ್ಷವೆಂದು ಮೋಕ್ಷದಲ್ಲಿ ಯಥೋಚಿತವಾದ ಆನಂದದ ಪರಿಕಲ್ಪನೆಯನ್ನು ಪ್ರಪ್ರಥಮವಾಗಿ ಸಾರಿದ್ದು ದ್ವೈತದರ್ಶನದ ವೈಶಿಷ್ಟ್ಯ. ಆನಂದಾನುಭವಕ್ಕೆ ಅವಕಾಶವೀಯದ ಮೋಕ್ಷ ಎಷ್ಟೇ ಹಿರಿಮೆಯನ್ನು ಹೊಂದಿದ್ದರೂ ಆದರಣೀಯವಾಗಲಾರದು. ಮುಕ್ತಿಯಲ್ಲೂ ಆನಂದತಾರತಮ್ಯವುಂಟು ಎಂಬ ಅಂಶವನ್ನು ಪ್ರತಿಪಾದಿಸಿದ ಏಕಮಾತ್ರ ಆಚಾರ್ಯರೂ ಅವರೇ.

ವೇದಗಳಲ್ಲಿ ಬರುವ 'ಭೇದ' ವಾಕ್ಯ 'ಅಭೇದ' ವಾಕ್ಯಗಳಿಗೂ, 'ಸಗುಣ ನಿರ್ಗುಣ' ವಾಕ್ಯಗಳಿಗೂ, 'ಸಾಕಾರ-ನಿರಾಕಾರ' ವಾಕ್ಯಗಳಿಗೂ ಸಮನ್ವಯವನ್ನು ತೋರಿಸಿದವರು ಸಹ ಶ್ರೀಮಧ್ವಾಚಾರ್ಯರೇ! ಪ್ರತ್ಯಕ್ಷಯೋಗ್ಯವಿಷಯಗಳಲ್ಲಿ ಪ್ರತ್ಯಕ್ಷಕ್ಕೇ ಪ್ರಾಧಾನ್ಯವಾದರೆ, ಅತೀಂದ್ರಿಯವಿಷಯಗಳಲ್ಲಿ ಆಗಮದ್ದೇ ಪ್ರಾಬಲ್ಯ, ಸಾವಕಾಶ ನಿರವಕಾಶತ್ವಗಳನ್ನು ವಿವೇಚಿಸಿ ಪ್ರತ್ಯಕ್ಷದಲ್ಲಿನ ವಿರೋಧವನ್ನೂ ಪರಿಹರಿಸುವ ಕ್ರಮವನ್ನು ನಿರೂಪಿಸಿದವರೂ ಅವರೇ! ವಸ್ತುವಿಗೂ ಅದರ ನಿತ್ಯಧರ್ಮಗಳಿಗೂ ಸವಿಶೇಷಾಭೇದ, ವಸ್ತುವಿಗೂ ಅದರ ಅನಿತ್ಯಧರ್ಮಗಳಿಗೂ ಭೇದಾಭೇದ, ಎರಡು ವಸ್ತುಗಳ ಮಧ್ಯೆ ಭೇದಸಂಬಂಧ ಎಂಬ ವಿವೇಚನೆ, ಉಪಕ್ರಮಾದಿಗಳಲ್ಲಿ ಉತ್ತರೋತ್ತರಪ್ರಾಬಲ್ಯ, ಶ್ರುತಿಲಿಂಗಾದಿಗಳಲ್ಲಿ ಪೂರ್ವಪೂರ್ವಪ್ರಾಬಲ್ಯ ಮೊದಲಾಗಿ ತಾತ್ತ್ವಿಕವಿವೇಚನೆಗೆ ಅವರು ನೀಡಿರುವ ಕೊಡುಗೆ ಅಪಾರ ಮತ್ತು ಅಪೂರ್ವ. ವಿಷ್ಣುಸರ್ವೋತ್ತಮತ್ವದೊಂದಿಗೆ, ವಾಯುಜೀವೋತ್ತಮತ್ವ, ದೇವತಾ ತಾರತಮ್ಯಾದಿಗಳ ಪ್ರತಿಪಾದನೆ, ಭಕ್ತಿಯೇ ಸರ್ವೋಚ್ಚ ಭಗವದನುಗ್ರಹದ ಸಾಧನ, ಸಕಲಶಾಸ್ತ್ರಗಳ ಗುರಿಯೂ ಇಂತಹ ವಿಷ್ಣುಭಕ್ತಿಯ ಪ್ರತಿಪಾದನೆ ಆಗಿದೆ ಎಂಬ ವಿವೇಚನೆಗಳೂ ಅವರ ಕೊಡುಗೆಯಾಗಿವೆ:

ವಿಷ್ಣುಭಕ್ತಿವಿಧಾನಾರ್ಥಂ ಸರ್ವಂ ಶಾಸ್ತ್ರಂ ಪ್ರವರ್ತತೇ ॥

ಅಂತೂ ಶ್ರೀವೇದವ್ಯಾಸರಿಂದ ಆವಿಷ್ಕೃತವಾದ ತತ್ತ್ವಜ್ಞಾನವು ಸಂಪೂರ್ಣ ಖಿಲವಾಗಿದ್ದಾಗ ಅದನ್ನು ಅವರ ಅಭಿಪ್ರಾಯಕ್ಕನುಗುಣವಾಗಿ ಪುನಃ ಪ್ರಕಟಿಸಿದ ಹಿರಿಮೆ ಶ್ರೀಮಧ್ವಾಚಾರ್ಯರದು; ಎಂದರೆ ಅವರು ನಿಜವಾದ ಅರ್ಥದಲ್ಲಿ 'ಅಭಿನವ ವೇದವ್ಯಾಸರು'. "ಶ್ರೀವೇದವ್ಯಾಸರು ಸರ್ವೋತ್ತಮರಾದ ಶ್ರೀಹರಿಯಾದರೆ, ಇವರು ಜೀವೋತ್ತಮರಾದ ಶ್ರೀವಾಯುದೇವರು".

ಗ್ರಂಥವೈಭವ

ಶ್ರೀಮದಾಚಾರ್ಯರ ಗ್ರಂಥವೈಭವವೂ ಸಹ ಅನ್ಯಾದೃಶವಾದುದು. ಅತಿ ಹೆಚ್ಚಿನ ಸಂಖ್ಯೆಯ ಗ್ರಂಥಗಳನ್ನು ಬರೆದ ಮತಾಚಾರ್ಯರು ಎಂಬುದು ಇವರ ಹಿರಿಮೆಯಾಗಿದೆ. ವಿಷಯವೈವಿಧ್ಯ ಅವುಗಳ ಮತ್ತೊಂದು ಹಿರಿಮೆ.

ಸರ್ವಮೂಲವೆಂಬುದಾಗಿ ಪ್ರಸಿದ್ಧವಾಗಿರುವ ಅವರ ಮೂವತ್ತೇಳು ಗ್ರಂಥಗಳಲ್ಲಿ ಬ್ರಹ್ಮಸೂತ್ರದ ಮೇಲೆ ನಾಲ್ಕು, ಗೀತೆಯ ಮೇಲೆ ಎರಡು, ದಶೋಪನಿಷತ್ತುಗಳ ಮೇಲೆ ಒಂದೊಂದು, ಋಗ್ವೇದದ ಮೇಲೆ ಒಂದು, ಮಹಾಭಾರತದ ಮೇಲೆ ಎರಡು, ಭಾಗವತದ ಮೇಲೆ ಒಂದು ರಚಿತವಾಗಿವೆ.

ಶಂಕರಾಚಾರ್ಯರು ಪ್ರಸ್ಥಾನತ್ರಯಕ್ಕೆ ಭಾಷ್ಯ ಬರೆದಿದ್ದರೂ ವೇದಗಳ ಮೇಲೆ ಭಾಷ್ಯ ಬರೆದಿಲ್ಲ. ರಾಮಾನುಜಾಚಾರ್ಯರು ಗೀತೆ ಮತ್ತು ಬ್ರಹ್ಮಸೂತ್ರಗಳ ಮೇಲೆ ಭಾಷ್ಯ ಬರೆದಿದ್ದರೂ, ಉಪನಿಷತ್ತು ಮತ್ತು ವೇದಗಳ ಮೇಲೆ ಭಾಷ್ಯ ರಚಿಸಿಲ್ಲ. ಅವರ ವೇದಾರ್ಥಸಂಗ್ರಹದಲ್ಲಿ ಉಪನಿಷದ್ವಾಕ್ಯಗಳ ಚರ್ಚೆ ಇದ್ದರೂ ಅದು ಅವುಗಳ ಭಾಷ್ಯವಲ್ಲ. ಆದರೆ ಶ್ರೀಮದಾಚಾರ್ಯರು ಪ್ರಸ್ಥಾನತ್ರಯಗಳೊಂದಿಗೆ ಋಗ್ವೇದಕ್ಕೂ ಭಾಷ್ಯ ರಚಿಸಿರುವರು. ಮಹಾಭಾರತಕ್ಕೆ ತಾತ್ಪರ್ಯನಿರ್ಣಯ, ಭಾಗವತಕ್ಕೆ ತಾತ್ಪರ್ಯನಿರ್ಣಯಗಳನ್ನೂ ಬರೆದಿರುವರು; ಹೀಗೆ ಅತ್ಯಂತ ವ್ಯಾಪಕವಾಗಿ ಗ್ರಂಥಗಳನ್ನು ರಚಿಸಿದ ಏಕಮಾತ್ರ ಮತಾಚಾರ್ಯರೂ ಇವರೇ.

ಸದಾಚಾರಸ್ಮೃತಿ, ಕೃಷ್ಣಾಮೃತಮಹಾರ್ಣವ ಮತ್ತು ಜಯಂತೀನಿರ್ಣಯ ಆಚಾರಗ್ರಂಥಗಳಾಗಿದ್ದರೆ, ಯತಿಪ್ರಣವಕಲ್ಪವು ಸಂನ್ಯಾಸದೀಕ್ಷೆಯ ವಿಧಿವಿಧಾನಗಳನ್ನು ನಿರೂಪಿಸುವ ಕೃತಿ. ತಂತ್ರಸಾರಸಂಗ್ರಹದಲ್ಲಿ ಮಂತ್ರ, ಪೂಜೆ, ಪ್ರತಿಷ್ಠೆ ದೇಗುಲನಿರ್ಮಾಣ, ಯಂತ್ರ ಮೊದಲಾಗಿ ಸಕಲ ಉಪಾಸನೆಯ ರಹಸ್ಯಗಳು ತುಂಬಿವೆ. ದ್ವಾದಶಸ್ತೋತ್ರ, ನಖಸ್ತುತಿ ಮತ್ತು ಕಂದುಕಸ್ತುತಿಗಳು ಅಪೂರ್ವಸ್ತೋತ್ರಗಳಾಗಿ ದಾಖಲೆಯಾಗಿವೆ. ಆಧ್ಯಾತ್ಮದ ಸೀಮಾಪುರುಷರೊಬ್ಬರಿಂದ ರಚಿತವಾಗಿರುವ ಅಪೂರ್ವಚಿತ್ರಕಾವ್ಯವೆಂಬುದು ಅವರ ಯಮಕಭಾರತದ ವೈಶಿಷ್ಟ್ಯ. ಅವರ ಅನುವ್ಯಾಖ್ಯಾನ ಇಡೀ ಸೂತ್ರಸಾಹಿತ್ಯದ ಮೇಲೆ ಇರುವ ಏಕಮಾತ್ರ ಶ್ಲೋಕರೂಪ ಭಾಷ್ಯ(ಕುಮಾರಿಲ ಭಟ್ಟರ ಶ್ಲೋಕವಾರ್ತಿಕವು ಶ್ಲೋಕರೂಪದ ಕೃತಿಯಾದರೂ ಅದು ಭಾಷ್ಯವಾಗಿರದೆ ಶಾಬರಭಾಷ್ಯಕ್ಕೆ ಬರೆಯಲ್ಪಟ್ಟ ಟೀಕೆಯಾಗಿದೆ). (ಗಾನಶಾಸ್ತ್ರವನ್ನು ಕುರಿತು ಸಹ ಅವರು ಗ್ರಂಥವೊಂದನ್ನು ರಚಿಸಿದ ವಿವರ ಸುಮಧ್ವವಿಜಯಭಾವಪ್ರಕಾಶಿಕೆಯಲ್ಲಿದೆ.)

ಅಪೂರ್ವವಾದ ಗ್ರಂಥಭಂಡಾರವನ್ನು ಹೊಂದಿದ್ದ ಮತ್ತೊಂದು ದಾಖಲೆಯೂ ಶ್ರೀಮಧ್ವಾಚಾರ್ಯರದೇ ಆಗಿದೆ. ಅದು ಪ್ರತಿವಾದಿಗಳೆಲ್ಲರ ಹೃದಯದಲ್ಲಿ ಅಪಾರಭೀತಿ ಹುಟ್ಟಿಸುವಷ್ಟು ಸಮಗ್ರವಾಗಿತ್ತು. ಅದನ್ನು ಕುವಾದಿಗಳು ಕುತಂತ್ರದಿಂದ ಅಪಹರಿಸಿದಾಗ,

ಅದನ್ನು ಮರಳಿಪಡೆದ ರೀತಿಯಷ್ಟೇ ಅವರು ಆಗ ವರ್ತಿಸಿದ ಪ್ರಶಾಂತವಾದ ರೀತಿಯೂ ಆದರ್ಶಪ್ರಾಯವಾದುದು. [ಆ ಗ್ರಂಥಗಳನ್ನೆಲ್ಲ ತಾಮ್ರದ ತಗಡಿನಲ್ಲಿ ಬರೆಸಿ ಅದನ್ನು ಕಟ್ಟಿಲ ಎಂಬಲ್ಲಿ ಭೂಗತಮಾಡಿರುವ ಅವರ ಮತ್ತೊಂದು ಯೋಜನೆ ಇಂದೂ ಜಾಗತಿಕ ಮಟ್ಟದಲ್ಲೂ ಸಾಧ್ಯವಾಗದಿರುವ ಅಪೂರ್ವಯೋಜನೆ.] ಹೀಗೆ ವಿಶ್ವಾಶ್ಚರ್ಯಕರವಾದ ಶ್ರೀಮದಾಚಾರ್ಯರ ಗ್ರಂಥಗಳಲ್ಲದೆ ಶ್ರೀಜಯತೀರ್ಥರ ಟೀಕಾಪ್ರಪಂಚದ ಮೇರುಕೃತಿಯಾದ ನ್ಯಾಯಸುಧೆ, ಚಂದ್ರಿಕಾಚಾರ್ಯರ ವ್ಯಾಸತ್ರಯಗಳು, ಶ್ರೀವಾದಿರಾಜರ ಯುಕ್ತಿಮಲ್ಲಿಕೆ, ಶ್ರೀರಘೂತ್ತಮರ ಭಾವಬೋಧಗಳು, ಶ್ರೀರಾಘವೇಂದ್ರರ ಭಾಟ್ಟಸಂಗ್ರಹಗಳಂತಹ ಕೃತಿಗಳು ಮೊದಲಾದವು ಯಾವಕಾಲಕ್ಕೂ ಉಳಿಯಬಲ್ಲ ಮಹೋನ್ನತ ಕೃತಿಗಳಾಗಿವೆ.

ಹರಿದಾಸಸಾಹಿತ್ಯದಿಂದ ಕನ್ನಡ ಭಾಷೆಗೆ ಸಂದಿರುವ ಕಾಣಿಕೆ ಸಾಹಿತ್ಯದ ವ್ಯಾಪ್ತಿಯನ್ನೂ ಮೀರಿ, ಎಲ್ಲೇ ಇದ್ದರೂ ಕನ್ನಡ ತಮ್ಮ ಮಾತೃಭಾಷೆಯೆಂಬ ಬಾಂಧವ್ಯವನ್ನು ಮಾಧ್ವರಲ್ಲಿ ಬೆಳೆಸಿದೆ. ಈ ಮಟ್ಟಿಗೆ ಕನ್ನಡದ ಪೋಷಣೆಯಲ್ಲಿ ಮಾಧ್ವರ ಪಾತ್ರ ಎಂದೂ ಅನ್ಯಾದೃಶ. ಹೀಗೆ ದೇವಭಾಷೆಯಲ್ಲಿ ಮಾತ್ರವಲ್ಲದೆ ಮಾತೃಭಾಷೆಯಲ್ಲೂ ಆಧ್ಯಾತ್ಮಿಕಶಿಕ್ಷಣವನ್ನು ಒದಗಿಸಿದ ಏಕಮಾತ್ರ ವೈದಿಕಮತ ಎಂಬುದೂ ಇದರ ಮತ್ತೊಂದು ವೈಶಿಷ್ಟ್ಯ.

ವಿದ್ಯಾರಣ್ಯರಂತಹ ಅದ್ವೈತದ ಪ್ರಕಾಂಡಪಂಡಿತರನ್ನು ವಾದದಲ್ಲಿ ಸೋಲಿಸಿದ ಶ್ರೀಮದಾಚಾರ್ಯರ ಸಾಕ್ಷಾತ್ ಶಿಷ್ಯರಾದ ಅಕ್ಷೋಭ್ಯತೀರ್ಥರ ವಾದಕೌಶಲ ಮೂಲತಃ ಮಧ್ವಸಿದ್ಧಾಂತದ ಹಿರಿಮೆಗೆ ದ್ಯೋತಕವಾಗಿದೆ. ಆ ವಿಜಯದ ದ್ಯೋತಕವಾಗಿ ಸ್ಥಾಪಿತವಾದ ಜಯಸ್ತಂಭವು ಮುಳಬಾಗಿಲಿನಲ್ಲಿ ಇಂದೂ ಶೋಭಿಸುತ್ತಿದೆ.

ಗಯಾದಂತಹ ಲೋಕೋತ್ತರ ವೈಷ್ಣವಕ್ಷೇತ್ರವು ಇಂದು ಮಾಧ್ವರ ವ್ಯಾಪಕವಾದ ಪ್ರಭಾವಕ್ಕೆ ಸಾಕ್ಷಿ. ಅಲ್ಲಿನ ಗಯಾವಾಡರು ಉತ್ತರಾದಿಮಠದ ಶ್ರೀವಿದ್ಯಾಧೀಶರ ಕಾಲಕ್ಕೆ ಅವರ ಶಿಷ್ಯರಾಗಿದ್ದು ನಿಜವಾಗಿಯೂ ಅವರ ವೈಷ್ಣವಸಿದ್ಧಾಂತದ ವಿಜಯವೇ ಆಗಿದೆ. ಅದರಂತೆ ತಿರುಪತಿಯಲ್ಲಿ ಶ್ರೀನಿವಾಸನನ್ನು ಹನ್ನೆರಡುವರ್ಷಗಳ ಕಾಲ ಅವಿಚ್ಛಿನ್ನವಾಗಿ ಪೂಜಿಸಿದ ಹಿರಿಮೆ ಶ್ರೀವ್ಯಾಸರಾಜರದು. ಪಂಢರಪುರದ ಪಾಂಡುರಂಗ ಮಾಧ್ವಹರಿದಾಸರ ಆರಾಧ್ಯದೈವ. ಶ್ರೀಮುಷ್ಣದಲ್ಲಿ ಇಂದೂ ಉತ್ತರಾಧಿಮಠಕ್ಕೆ ವಿಶೇಷ ಮರ್ಯಾದೆ ಉಂಟು. ಧರ್ಮಸ್ಥಳದ ಮೇಲೆ ಶ್ರೀವಾದಿರಾಜರ ಪ್ರಭಾವ ಇಂತಹ ಮತ್ತೊಂದು ದೃಷ್ಟಾಂತ.

ಶ್ರೀನರಹರಿತೀರ್ಥರು, ಶ್ರೀಜಯತೀರ್ಥರು, ಶ್ರೀವ್ಯಾಸರಾಜರು, ಶ್ರೀವಿಜಯೀಂದ್ರರು, ಶ್ರೀರಾಘವೇಂದ್ರರು, ಶ್ರೀಸತ್ಯಬೋಧರು, ಶ್ರೀಸತ್ಯಸಂಧರು ಮೊದಲಾದವರು ಪ್ರತಿಷ್ಠಾಪಿಸಿರುವ ದೇವತಾಮೂರ್ತಿಗಳು ಈ ಪರಂಪರೆಯ ಸಂಪತ್ತು. ಶ್ರೀವಾದಿರಾಜರು, ಶ್ರೀರಘೂತ್ತಮರು, ಶ್ರೀರಾಘವೇಂದ್ರರಂತಹ ಮಹನೀಯರಿಂದ ಸೋದೆ, ತಿರುಕೊಯಿಲೂರು, ಮಂತ್ರಾಲಯಗಳು ಹೊಸ ಕ್ಷೇತ್ರಗಳಾಗಿ ರೂಪುಗೊಂಡವು.

ಪ್ರಮುಖ ಗ್ರಂಥಕಾರರು

ಶ್ರೀಮದಾಚಾರ್ಯರ ಪರಂಪರೆಯ ವಾಙ್ಮಯಸಂಪತ್ತು ಬೇರಾವ ದರ್ಶನಕ್ಕಿಂತಲೂ ಮಿಗಿಲಾದುದು. ಅನಂತರ ವಾಙ್ಮಯರಾಶಿಯ ಬಹುಭಾಗ ಮಧ್ವಾಚಾರ್ಯರ ಗ್ರಂಥಗಳ ಮೇಲೆ ಟೀಕೆ ಅಥವಾ ಟಿಪ್ಪಣಿಯಾಗಿದೆ ಎಂಬುದನ್ನು ಗಮನಿಸಿದರೆ ಪರಂಪರೆ ಇವರ ಗ್ರಂಥಗಳ ಮಹತ್ವವನ್ನು ಗುರುತಿಸಿದ ರೀತಿ ತಿಳಿಯುತ್ತದೆ.

ಶ್ರೀಮಧ್ವರ ಸಾಕ್ಷಾಚ್ಛಿಷ್ಯರಾದ ಶ್ರೀಪದ್ಮನಾಭತೀರ್ಥರು, ಶ್ರೀನರಹರಿತೀರ್ಥರು, ಶ್ರೀತ್ರಿವಿಕ್ರಮಪಂಡಿತಾಚಾರ್ಯರು, ಶ್ರೀಶಂಕರಪಂಡಿತಾಚಾರ್ಯರು, ಶ್ರೀನಾರಾಯಣ-ಪಂಡಿತಾಚಾರ್ಯರು ಪ್ರಾಚೀನಟೀಕಾಕಾರರೆಂದು ಮಾನ್ಯರಾಗಿರುವರು. ಅನಂತರದ ಶ್ರೀಜಯತೀರ್ಥರಂತೂ ದ್ವೈತದರ್ಶನದ ಸರ್ವಸಮ್ಮತ ಟೀಕಾಕೃತ್ಪಾದರಾಗಿರುವರು. ಬೇರಾವ ದರ್ಶನಪ್ರಪಂಚಕ್ಕೂ ಇಂತಹ ಸರ್ವಮಾನ್ಯ ಟೀಕಾಕಾರರು ದೊರೆಯುವುದಿಲ್ಲ. ಅನಂತರದ ಭಾಗವತಟಿಪ್ಪಣಿಕಾರರಾದ ಶ್ರೀವಿಜಯಧ್ವಜತೀರ್ಥರು, ಉಪನಿಷ-ದ್ಭಾಷ್ಯಟೀಕೆಗಳ ಶ್ರೀವ್ಯಾಸತೀರ್ಥರು, ವ್ಯಾಸತ್ರಯಗಳ ಶ್ರೀವ್ಯಾಸರಾಜರು, ಯುಕ್ತಿ-ಮಲ್ಲಿಕೆಯ ಶ್ರೀವಾದಿರಾಜರು, ೧೦೪ ಗ್ರಂಥರಚಿಸಿದ ಹಿರಿಮೆಯ ಶ್ರೀವಿಜಯೀಂದ್ರರು, ಭಾವಬೋಧಕಾರರಾದ ಶ್ರೀರಘೂತ್ತಮತೀರ್ಥರು, ಶ್ರೀವೇದೇಶತೀರ್ಥರು, ಟೀಕಾಚಾ-ರ್ಯರ ಸಮಗ್ರಗ್ರಂಥಗಳಿಗೆಲ್ಲ ಟಿಪ್ಪಣಿ ರಚಿಸುವ ವ್ರತದ ಶ್ರೀರಾಘವೇಂದ್ರತೀರ್ಥರು, ವಾಕ್ಯಾರ್ಥಚಂದ್ರಿಕೆಯ ಶ್ರೀವಿದ್ಯಾಧೀಶರು, ಪಂಚಾಭಿನವಕರ್ತೃಗಳಾದ ಶ್ರೀಸತ್ಯನಾಥರು, ಭಾವರತ್ನಕೋಶಗಳ ಶ್ರೀಸುಮತೀಂದ್ರರು, ಭಾಗವತಟಿಪ್ಪಣಿಗಳ ಶ್ರೀಸತ್ಯಧರ್ಮರು, ಶ್ರೀವ್ಯಾಸತತ್ತ್ವಜ್ಞರು, ಶ್ರೀವಿಷ್ಣುತೀರ್ಥರು ಈ ಪರಂಪರೆಯ ಪ್ರಮುಖ ಟಿಪ್ಪಣಿಕಾರರು.

ತತ್ತ್ವಪ್ರದೀಪಿಕೆಯ ತ್ರಿವಿಕ್ರಮಪಂಡಿತರು, ಮಧ್ವವಿಜಯದ ನಾರಾಯಣಪಂಡಿತರು, ವಾದರತ್ನಾವಲಿಯ ವಿಷ್ಣುದಾಸಾಚಾರ್ಯರು, ಸುಧಾಟಿಪ್ಪಣಿಯ ಯದುಪತ್ಯಾ-ಚಾರ್ಯರು, ತೀರ್ಥಪ್ರಶಸ್ತಿಗೆ ಪಾತ್ರರಾದ ಬಿದರಹಳ್ಳಿ ಶ್ರೀನಿವಾಸತೀರ್ಥರು, ರಾಘವೇಂದ್ರತೀರ್ಥರ ಪುತ್ರ ಲಕ್ಷ್ಮೀನಾರಾಯಣಾಚಾರ್ಯರು, ಋಗ್ಭಾಷ್ಯಟಿಪ್ಪಣಿಯ ಛಲಾರಿ ನರಸಿಂಹಾಚಾರ್ಯರು, ಸತ್ತತ್ತ್ವರತ್ನಮಾಲೆಯ ತಾಮ್ರಪರ್ಣೀ ಆನಂದ-ತೀರ್ಥಾಚಾರ್ಯರು, ಪದಾರ್ಥಸಂಗ್ರಹದ (ಮಧ್ವಸಿದ್ಧಾಂತಸಾರದ) ವೇದಗರ್ಭ= ಪದ್ಮನಾಭಾಚಾರ್ಯರು, ಸ್ಮೃತಿಮುಕ್ತಾವಲಿ ಕೃಷ್ಣಾಚಾರ್ಯರು ಹೀಗೆ ಅನೇಕರು ಗೃಹಸ್ಥಗ್ರಂಥಕಾರರಾಗಿ ಸುಪ್ರಸಿದ್ಧರು.

ದ್ವೈತವೇದಾಂತದಲ್ಲಿ ಟೀಕೆಗಳು, ಟಿಪ್ಪಣಿಗಳು, ವಾದಗ್ರಂಥಗಳು, ಪ್ರಮೇಯ-ಗ್ರಂಥಗಳು, ಕಾವ್ಯನಾಟಕಗಳು ಮತ್ತು ಸ್ತೋತ್ರಗಳು ಮೊದಲಾದ ಎಲ್ಲ ಬಗೆಯ ಕೃತಿಗಳೂ ದೊರೆಯುತ್ತವೆ. ಈ ಪರಂಪರೆಯಲ್ಲಿ ರಚಿತವಾಗಿರುವ ಸ್ತೋತ್ರಸಮೂಹವೇ ಒಂದು

ಸಾವಿರಪುಟದ ವ್ಯಾಪ್ತಿಯನ್ನು ಮೀರುವುದು. ಇವೆಲ್ಲ ಗ್ರಂಥಗಳು ಈ ಮತವು ಅದೆಷ್ಟು ಜೀವಂತ, ಇದರ ಅಧ್ಯಯನದ ಪರಂಪರೆ ಅದೆಷ್ಟು ವ್ಯಾಪಕ ಎನ್ನಲು ನಿದರ್ಶನವಾಗಿದೆ.

ಇಂತಹ ವಾಙ್ಮಯ ಕೇವಲ ಪುಸ್ತಕರೂಪದಲ್ಲಿ ಉಳಿಯದೆ ಪರಂಪರೆಯ ಪಠ್ಯಗ್ರಂಥಗಳಾಗಿ ಮಾನ್ಯವಾಗಿದ್ದವು ಎನ್ನಲು ಇಂದಿಗೂ ನಾಡಿನ ಮೂಲೆಮೂಲೆಯಲ್ಲಿ ದೊರೆಯುವ ಸಾವಿರಾರು ಹಸ್ತಪ್ರತಿಗಳು ಸಾಕ್ಷಿಯಾಗಿವೆ. ಇತರ ಯಾವ ಪರಂಪರೆಗಿಂತಲೂ ಇದು ಹೆಚ್ಚು ಜೀವಂತಪರಂಪರೆಯೆಂಬುದು ಇವರ ಅನುಯಾಯಿಗಳಲ್ಲಿ ಕಂಡುಬರುವ ಅಪಾರವಾದ ಸಾತ್ವಿಕದೀಕ್ಷೆ, ಕಾಲಕಾಲಕ್ಕೆ ನಡೆಯುವ ನ್ಯಾಯಸುಧಾದಿ ಗ್ರಂಥಗಳ ಮಂಗಳಕಾರ್ಯಗಳಿಂದ ವ್ಯಕ್ತವಾಗುತ್ತದೆ.

ನಿಷ್ಠಾವಂತಮಾಧ್ವರೆಲ್ಲ ಕಡ್ಡಾಯವಾಗಿ ಆಚರಿಸುವ ಏಕಾದಶೀ, ಕೃಷ್ಣಾಷ್ಟಮಿಗಳು ಆ ಮತದ ಜೀವಂತಿಕೆಗೆ ಉಜ್ವಲ ನಿದರ್ಶನ.

ಮಧ್ವಸಿದ್ಧಾಂತದ ಪೂರ್ವಾಪರ

ಅದ್ವೈತದರ್ಶನದ ಆಚಾರ್ಯರಾಗಿ ಶಂಕರಾಚಾರ್ಯರು ಪ್ರಸಿದ್ಧರಾಗಿದ್ದರೂ ಅವರ ಸಾಧನೆಗೆ ಪೂರ್ವರಂಗ ಅವರ ಗುರುಗಳಾದ ಗೌಡಪಾದರು ಮತ್ತು ಗೋವಿಂದಭಗವತ್ಪಾದ ಎಂಬವರಿಂದ ಸಿದ್ಧವಾಗಿತ್ತು. ಅದ್ವೈತದ ಆಕರಗ್ರಂಥ- ವಾಗಿರುವ ಗೌಡಪಾದಕಾರಿಕೆ ಇದಕ್ಕೆ ಉತ್ತಮಸಾಕ್ಷಿ. ಅದರಂತೆ ವಿಶಿಷ್ಟಾದ್ವೈತಮತದ ಆಚಾರ್ಯರಾದ ರಾಮಾನುಜಾಚಾರ್ಯರಿಗೆ ನಾಥಮುನಿ ಮತ್ತು ಯಾಮುನಾಚಾರ್ಯರಿಂದ ಪೂರ್ವರಂಗ ಪೂರ್ಣವಾಗಿ ಸಿದ್ಧವಾಗಿತ್ತು. ಈ ಅರ್ಥದಲ್ಲಿ ಶಂಕರಾಚಾರ್ಯ ಮತ್ತು ರಾಮಾನುಜಾಚಾರ್ಯರ ಸಾಧನೆಯಲ್ಲಿ ಅವರ ಹಿಂದಿನವರ ಕೊಡುಗೆ ಅಪಾರ; ಆದರೆ ಶ್ರೀಮದಾಚಾರ್ಯರಿಗೆ ಇಂತಹ ಯಾವ ಹಿನ್ನೆಲೆಯೂ ಇರಲಿಲ್ಲ ಎಂಬುದನ್ನು ಗಮನಿಸಬೇಕು. ಎಂದರೆ ದ್ವೈತದರ್ಶನದ ಪ್ರತಿಪಾದನೆಯನ್ನು ತಾತ್ವಿಕಹಂತದಿಂದ ಹಿಡಿದು ಆಚಾರಹಂತದವರೆಗೆ ಪ್ರತಿಹಂತದಲ್ಲೂ ನೇರವಾಗಿ ಮೂಲಗ್ರಂಥಗಳಿಂದ ರೂಪಿಸಿದ ಅಸಾಮಾನ್ಯ ಕಾರ್ಯ ಇವರದು. ಈ ದೃಷ್ಟಿಯಿಂದಲೂ ಇವರು 'ಪೂರ್ಣಪ್ರಜ್ಞರು' ಎಂಬುದು ಸಿದ್ಧವಾಗುತ್ತದೆ.

ಬೌದ್ಧಪರಂಪರೆ ಹೀನಾಯಾನ, ಮಹಾಯಾನ ಎಂಬುದಾಗಿ ಎರಡು; ಮಾಧ್ಯಮಿಕ, ಯೋಗಾಚಾರ, ಸೌತ್ರಾಂತ್ರಿಕ, ವೈಭಾಷಿಕ ಎಂಬುದಾಗಿ ನಾಲ್ಕು; ಜೈನಮತ ದಿಗಂಬರ, ಶ್ವೇತಾಂಬರ ಎಂಬುದಾಗಿ ಎರಡು; ಸಾಂಖ್ಯಮತ ಸೇಶ್ವರಸಾಂಖ್ಯ, ನಿರೀಶ್ವರಸಾಂಖ್ಯ ಎಂಬುದಾಗಿ ಎರಡು; ನ್ಯಾಯಮತ ನ್ಯಾಯ ಮತ್ತು ವೈಶೇಷಿಕ ಎಂಬುದಾಗಿ ಎರಡು; ಪೂರ್ವಮೀಮಾಂಸಾಮತ ಭಾಟ್ಟ, ಪ್ರಾಭಾಕರ ಮತ್ತು ಮುರಾರಿ ಎಂಬುದಾಗಿ ಮೂರು;

ಅದ್ವೈತಮತ ಭಾಮತೀಪ್ರಸ್ಥಾನ, ವಿವರಣಪ್ರಸ್ಥಾನ ಮೊದಲಾಗಿ ಅನೇಕ; ವಿಶಿಷ್ಟಾದ್ವೈತಮತ ತೆಂಗಲೈ, ವಡಗಲೈ ಎಂಬುದಾಗಿ ಎರಡು - ಹೀಗೆ ಕವಲುಗಳಾಗಿ ಒಡೆದು ಅವುಗಳ ಸೈದ್ಧಾಂತಿಕಪರಂಪರೆಯಲ್ಲಿ ಏಕತೆ ಅಖಂಡವಾಗಿ ಉಳಿದಿಲ್ಲ, ಅನಂತರದ ಆವರ ವ್ಯಾಖ್ಯಾತೃಗಳು ಮೂಲಕಾರರಿಗೆ ಸರ್ವವಿಧದ ನಿಷ್ಠೆಯನ್ನು ತೋರಿಲ್ಲ ಆದರೆ ದ್ವೈತದರ್ಶನದಲ್ಲಿ ಮಾತ್ರ ಭಾಷ್ಯ, ಟೀಕೆ, ಟಿಪ್ಪಣಿ ಮೊದಲಾದ ಸಕಲಹಂತದಲ್ಲೂ ಅಖಂಡವಾದ ಏಕತೆ ಉಳಿದು ಬಂದಿದೆ. ಇದು ಐತಿಹಾಸಿಕವಾಗಿ ಸಿದ್ಧವಾಗುವ ಅದರ ಅಬಾಧಿತಮಹತ್ವಕ್ಕೆ ದ್ಯೋತಕ. ಇಂದು ದ್ವೈತಿಗಳಲ್ಲಿ ಮಠಭೇದವಿದ್ದರೂ ಮತಭೇದವಿಲ್ಲವೆಂಬುದನ್ನು ಗಮನಿಸಬೇಕು.

ಹರಿದಾಸಸಾಹಿತ್ಯ

ಹರಿದಾಸಸಾಹಿತ್ಯವು ಮಧ್ವಮತಕ್ಕೆ ಪೂರ್ಣನಿಷ್ಠವಾಗಿರುವ ಸಾಹಿತ್ಯ; ಮತ್ತೊಂದು ಭಾಷೆಯ ಒಂದು ಪ್ರಭಾವಿ ಸಾಹಿತ್ಯ ಮೂಲಸಿದ್ಧಾಂತಕ್ಕೆ ಇಂತಹ ನಿಷ್ಠೆ ಉಳಿಸಿಕೊಂಡ ಮತ್ತೊಂದು ನಿದರ್ಶನ ದಾರ್ಶನಿಕಪ್ರಪಂಚದಲ್ಲೇ ಮತ್ತೊಂದಿಲ್ಲ. ಶ್ರೀವೈಷ್ಣವ-ಮತದಲ್ಲಿರುವ ದ್ರಾವಿಡಸಾಹಿತ್ಯ, ಆಳ್ವಾರುಗಳ ಸಾಹಿತ್ಯ, ವಿಶಿಷ್ಟಾದ್ವೈತಮತವನ್ನು ಆಧರಿಸಿದ ಸಾಹಿತ್ಯವಲ್ಲ; ಆದರೆ ಆ ಮತಕ್ಕೇ ಆಧಾರವೆನಿಸಿಕೊಂಡಿರುವ ಸಾಹಿತ್ಯ.

ಪೂರ್ಣಪ್ರಮಾಣದ ಭಕ್ತಿಸಾಹಿತ್ಯವೆಂಬುದು ಹರಿದಾಸಸಾಹಿತ್ಯದ ಮತ್ತೊಂದು ಹಿರಿಮೆ. ಅದು ಮಧ್ವಸಿದ್ಧಾಂತದ ಕನ್ನಡ ಪಡಿಯಚ್ಚು; ಎಂದರೆ ಮಧ್ವಸಿದ್ಧಾಂತವು ಭಕ್ತಿಮಾರ್ಗ ಎಂಬುದಕ್ಕೆ ನಿದರ್ಶನ; ಮರಾಠಿ, ಹಿಂದಿ ಮೊದಲಾದ ಭಾಷೆಗಳಲ್ಲಿ ಭಕ್ತಿಸಾಹಿತ್ಯವಿದ್ದರೂ ಬೇರೆ ಯಾವುದೇ ಒಂದು ಮತದ ಪಡಿಯಚ್ಚಾಗಿ ಅದು ಬೆಳೆದು ಬಂದದ್ದಲ್ಲ ಎಂಬುದನ್ನು ಗಮನಿಸಬೇಕು.

ಇಂದು ಮಾಧ್ವರು ಯಾವ ರಾಜ್ಯದಲ್ಲಿದ್ದರೂ ಸಾಮಾನ್ಯವಾಗಿ ಅವರಿಗೆ ಸ್ವಲ್ಪವಾದರೂ ಕನ್ನಡ ಬರುವುದನ್ನು ಕಾಣಬಹುದು; ಇದಕ್ಕೆ ಆ ಮತಸ್ಥಾಪಕರು ಕನ್ನಡದವರಾಗಿರುವುದು ಮುಖ್ಯಕಾರಣವಾಗಿರುವಂತೆ, ಅದರ ಮೇಲೆ ಕನ್ನಡದ ಹರಿದಾಸಸಾಹಿತ್ಯ ಮಾಡಿರುವ ಪ್ರಭಾವವು ಮತ್ತೊಂದು ಕಾರಣವಾಗಿರಬೇಕು ಎಂದು ಸುಲಭವಾಗಿ ಊಹಿಸಬಹುದು.

ಕೆಲವು ಅಪೂರ್ವಕೃತಿಗಳು

ಇಷ್ಟು ಶ್ರೀಮಂತವಾದ ದ್ವೈತದರ್ಶನದಿಂದ ಸಂಸ್ಕೃತದಲ್ಲಿ ನಡೆದಿರುವ ವಾಙ್ಮಯಸೇವೆ ಅಪಾರ. ಅಲಂಕಾರಶಾಸ್ತ್ರಕ್ಕೆ ಸುಧೀಂದ್ರತೀರ್ಥರ 'ಅಲಂಕಾರಮಂಜರೀ', 'ಸಾಹಿತ್ಯಸಾಮ್ರಾಜ್ಯ' ಕೃತಿಗಳು, ಅನಂತರದ ಶ್ರೀನಿವಾಸಾಚಾರ್ಯರ 'ಅಲಂಕಾರ-ಮುಕ್ತಾವಲೀ', ಕೃಷ್ಣಕವಿಯ 'ಮಂದಾರಮರಂದಚಂಪೂ', ಛಂದಶಾಸ್ತ್ರಕ್ಕೆ ಶ್ರೀರಘುವರ್ಯ-

ತೀರ್ಥರ 'ರಘುನಾಥವಿಜಯ' ಕಾವ್ಯಪ್ರಪಂಚಕ್ಕೆ ಶ್ರೀನಾರಾಯಣಪಂಡಿತಾಚಾರ್ಯರ 'ಸುಮಧ್ವವಿಜಯ', 'ಶುಭೋದಯ', 'ಮಣಿಮಂಜರಿ', 'ಸಂಗ್ರಹರಾಮಾಯಣ'ಗಳು, ಶ್ರೀರಾಜರಾಜೇಶ್ವರತೀರ್ಥರ 'ರಾಮಸಂದೇಶ', ಶ್ರೀವಾದಿರಾಜರ 'ರುಕ್ಮಿಣೀಶವಿಜಯ, ತೀರ್ಥಪ್ರಬಂಧ' ಮತ್ತು ಅನೇಕ ಅಪೂರ್ವಸ್ತೋತ್ರಗಳೂ, ಶ್ರೀವಿಜಯೀಂದ್ರರ 'ವ್ಯಾಸ-ರಾಜಾಭ್ಯುದಯ', ಶ್ರೀನಾರಾಯಣಾಚಾರ್ಯರ 'ರಾಘವೇಂದ್ರವಿಜಯ', ಶ್ರೀಸುಮ-ತೀಂದ್ರರ 'ರಾಮತಾರಾವಲೀ', 'ರಾಮದಂಡಕ'ಗಳು, ಶ್ರೀಸತ್ಯಧರ್ಮರ 'ಯದುವರ-ಚರಿತಾಮೃತಲಹರೀ', 'ಗಂಗಾಲಹರೀ', 'ವಿರಹಿಮೋದಸುಧಾ', ಶೃಂಗಾರಶ್ಲೋಕಗಳು ಮೊದಲಾದ ಅನೇಕ ಕೃತಿಗಳು; ನಾಟಕಪ್ರಕಾರಕ್ಕೆ ಶ್ರೀವಿಜಯೀಂದ್ರರ 'ಸುಭದ್ರಾಧನಂಜಯ'. ಶ್ರೀಸುಧೀಂದ್ರರ 'ಸುಭದ್ರಾಹರಣ', ಘನಶ್ಯಾಮಕವಿಯ 'ಪ್ರಚಂಡರಾಹೂದಯ'ಗಳು; ನ್ಯಾಯಮತಕ್ಕೆ ಶ್ರೀವಿಜಯೀಂದ್ರರ 'ನ್ಯಾಯಾಧ್ವದೀಪಿಕಾ', ಬಿದರಹಳ್ಳಿ ಶ್ರೀನಿವಾಸತೀರ್ಥರ 'ಪದಾರ್ಥದೀಪಿಕಾ'. ಉಮರ್ಜಿಪ್ರಹ್ಲಾದಕೃಷ್ಣಾಚಾರ್ಯರ 'ತರ್ಕದೀಪಾವಲಿ(ಮುಕ್ತಾವಲೀ ವ್ಯಾಖ್ಯಾನ); ವ್ಯಾಕರಣಶಾಸ್ತ್ರಕ್ಕೆ ಶ್ರೀಸತ್ಯಪ್ರಿಯತೀರ್ಥರ ಮಹಾಭಾಷ್ಯಟೀಕಾ, ಛಲಾರೀ ನರಸಿಂಹಾಚಾರ್ಯರ ಶಾಬ್ದಿಕಕಂಠಮಣಿ ಮತ್ತು ದೀಧಿತಿ, ಛಲಾರೀ ಶೇಷಾಚಾರ್ಯರ 'ಸುಶಬ್ದಪ್ರದೀಪ'; ಧರ್ಮಶಾಸ್ತ್ರಕ್ಕೆ ಛಲಾರೀನರಸಿಂಹಾಚಾರ್ಯರ 'ಸ್ಮೃತ್ಯರ್ಥಸಾಗರ' ಛಲಾರೀಶೇಷಾಚಾರ್ಯರ 'ನಿರ್ಣಯರತ್ನ', ಕೃಷ್ಣಾಚಾರ್ಯರ 'ಸ್ಮೃತಿಮುಕ್ತಾವಲೀ', ರಾಯಸಂ ವೆಂಕಟಾದ್ರಿಗಳ 'ಸ್ಮೃತಿರತ್ನಾಕರ', ತಿರುಮಲಾಚಾರ್ಯರ 'ನಿಬಂಧ-ಚೂಡಾಮಣಿ' ಮೊದಲಾದವುಗಳು, ಪೂರ್ವಮೀಮಾಂಸೆಗೆ ಶ್ರೀರಾಘವೇಂದ್ರರ 'ಭಾಟ್ಟಸಂಗ್ರಹ'ಗಳು ನಿದರ್ಶನ. ಶ್ರೀಪುರಂದರದಾಸರಂತೂ 'ಕರ್ನಾಟಕಸಂಗೀತ-ಪಿತಾಮಹ' ಎಂದೇ ಪ್ರಸಿದ್ಧರಾಗಿದ್ದಾರೆ.

ಕರ್ನಾಟಕಸಂಗೀತದ ಪಿತಾಮಹ ಎಂಬ ಅಸಾಧಾರಣ ಮಹತ್ವ ದ್ವೈತಿಗಳದು ಎಂಬುದು ಎಂತಹ ಅಭಿಮಾನದ ಸಂಗತಿ ! ಇದರಂತೆ ಶ್ರೀರಾಘವೇಂದ್ರಸ್ವಾಮಿಗಳು ಮತ್ತು ಪೂರ್ವಜರು ಖ್ಯಾತವೈಣಿಕರು; ಇದರ ಮೂಲಹಿರಿಮೆ ಎಲ್ಲ ಸರ್ವಮೂಲ-ಕಾರರಾದ ಶ್ರೀಮಧ್ವಾಚಾರ್ಯರದೇ ಆಗಿದೆ. ಕನ್ನಡಭಾಷೆಯ ಬೆಳವಣಿಗೆಗಂತೂ ದಾಸಸಾಹಿತ್ಯದ ಕೊಡುಗೆ ಅವಿಸ್ಮರಣೀಯ. ಕನ್ನಡಭಾಷೆಗೆ ಪ್ರಾಸಾದಿಕತೆ, ಗೇಯತೆ ಮೊದಲಾದವುಗಳನ್ನು ತಂದುಕೊಟ್ಟ ಶ್ರೇಯಸ್ಸು ಹರಿದಾಸಸಾಹಿತ್ಯದ್ದು ಎಂದರೆ ಮಧ್ವಸಿದ್ಧಾಂತದ್ದು.

ಯಕ್ಷಗಾನಕಲೆಗೂ ಶ್ರೀಮಧ್ವಮತದ್ದೇ ಪ್ರೇರಣೆ ಎನ್ನಲು ಅದು ದಕ್ಷಿಣಕನ್ನಡ ಕಲೆಯಾಗಿರುವುದು ಮತ್ತು ಅವುಗಳ ಪ್ರಧಾನಪಾತ್ರಗಳ ಹಣೆಯ ಮೇಲೆ ತಪ್ಪದೆ ಅಂಗಾರ-ಅಕ್ಷತೆಗಳು ಕಾಣುವುದು ಇದಕ್ಕೆ ಪ್ರತ್ಯಕ್ಷನಿದರ್ಶನ ಎಂದು ಸಂಶೋಧಕರು ಗುರುತಿಸಿದ್ದಾರೆ.

ರಾಜಮನ್ನಣೆ

ರಾಜಕೀಯವಲಯದಲ್ಲೂ ಮಾಧ್ವರ ಪಾತ್ರ ಗಣನೀಯವಾದುದು. ಕಾಸರಗೋಡಿನ ಸಿಂಹವೆಂದೇ ಖ್ಯಾತನಾಗಿದ್ದ ಜಯಸಿಂಹರಾಜ ಶ್ರೀಮಧ್ವಾಚಾರ್ಯರ ಸಾಕ್ಷಾಚ್ಛಿಷ್ಯ. ಮುಸಲ್ಮಾನ ದೊರೆಯೊಬ್ಬನ ಮೇಲೆ ಕೇವಲ ಒಂದೇ ಮಾತಿನ ಮೋಡಿಯಿಂದಲೇ ಅರ್ಧರಾಜ್ಯ ನೀಡುವಷ್ಟು ಪ್ರಭಾವ ಬೀರಿದ್ದು ಶ್ರೀಮದಾಚಾರ್ಯರ ಮತ್ತೊಂದು ಕೌಶಲ. ಅವನು ಹಾಗೆ ನೀಡಿದ ರಾಜ್ಯವನ್ನು ನಿರಾಕರಿಸಿದ್ದು ಆಚಾರ್ಯರ ಅಪಾರವಿರಕ್ತಿಗೆ ದ್ಯೋತಕ. ಅವರು ಈಶ್ವರದೇವ ಎಂಬ ರಾಜನನ್ನು ಬಗ್ಗು ಬಡಿದ ವಿಚಾರವು ಸುಮಧ್ವವಿಜಯದಲ್ಲಿದೆ. ಶ್ರೀಪದ್ಮನಾಭತೀರ್ಥರ ಪ್ರೇರಣೆ ವಿಜಯನಗರದ ಸ್ಥಾಪನೆಗೆ ಕಾರಣವಾಯಿತೆನ್ನಲು ಕೆಲವು ಪ್ರಾಚೀನ ದಾಖಲೆಗಳುಂಟು. ಅವರ ಮತ್ತು ಅವರ ಅನಂತರದ ಶ್ರೀನರಹರಿತೀರ್ಥರ ಮೂಲಬೃಂದಾವನಗಳು ವಿಜಯನಗರದಲ್ಲೇ ಇರುವುದು ಸಹ ಈ ವಾದಕ್ಕೆ ಪೋಷಕ. ಶ್ರೀನರಹರಿತೀರ್ಥರು ಶ್ರೀಮದಾಚಾರ್ಯರ ಆದೇಶದ ಮೇರೆಗೆ ಹನ್ನೆರಡುವರ್ಷಗಳ ಕಾಲ ಕಲಿಂಗದೇಶವನ್ನು ಪಾಲಿಸಿದವರು, ಆಗ ಒದಗಿದ್ದ ಯುದ್ಧವೊಂದರಲ್ಲಿ ಸ್ವತಃ ಕಾದು ಗೆದ್ದವರು, ಶ್ರೀಪಾದರಾಜರು ಚಂದ್ರಗಿರಿಯ ವೀರನರಸಿಂಹಭೂಪತಿಯಿಂದ ಆರಾಧಿತರು, ಶ್ರೀವ್ಯಾಸರಾಜರು ಚಕ್ರವರ್ತಿಯಾದ ಕೃಷ್ಣದೇವರಾಯನಿಂದ ತ್ರಿಕಾಲಗಳಲ್ಲೂ ಕುಲದೇವತೆಯಂತೆ ಆರಾಧಿತರಾಗಿದ್ದವರು, ಸೋದೆಯ ಅರಸಪ್ಪನಾಯಕನನ್ನು ಶಿಷ್ಯನನ್ನಾಗಿ ಮಾಡಿಕೊಂಡಿದ್ದ ಶ್ರೀವಾದಿರಾಜರು, ತಂಜಾವೂರಿನ ರಘುನಾಥನಾಯಕನಿಂದ ಪೂಜಿತರಾಗಿದ್ದ ಶ್ರೀಸುಧೀಂದ್ರರು ಮತ್ತು ಶ್ರೀರಾಘವೇಂದ್ರರು, ಸವಣೂರಿನ ನವಾಬ ಮೊದಲಾದ ರಾಜರನ್ನು ನಿಯಂತ್ರಿಸಿದ ಶ್ರೀಸತ್ಯಬೋಧರು, ಸ್ವತಃ ಪೂರ್ವಜೀವನಗಳಲ್ಲಿ ರಾಜ್ಯವಾಳಿದ್ದ ಕನಕದಾಸರು, ಆದವಾನಿಯ ನವಾಬನಿಗೆ ದಿವಾನರಾಗಿದ್ದ ವೆಂಕಣ್ಣ ಮತ್ತು ಪಂಗನಾಮದ ತಿಮ್ಮಣ್ಣಯ್ಯನವರು, ಹೈದರಾಲಿ, ಟೀಪುಸುಲ್ತಾನರಿಗೆ ದಿವಾನರಾಗಿದ್ದ ಪೂರ್ಣಯ್ಯನವರು ಇದಕ್ಕೆ ನಿದರ್ಶನರಾಗಿರುವರು. ಶ್ರೀವಿಜಯೀಂದ್ರರು ಮತ್ತು ಶ್ರೀರಾಘವೇಂದ್ರರು ಮೊದಲಾದವರು ಚತುಃಷಷ್ಟಿಕಲಾಕೋವಿದರೆಂದೇ ಪ್ರಸಿದ್ಧರಾಗಿದ್ದ ಮಹನೀಯರು.

ಮಹಾಮಹಿಮರು

ಮಧ್ವಮತದ ಶ್ರೀವಾದಿರಾಜರು, ಶ್ರೀರಘೂತ್ತಮರು ಮತ್ತು ಶ್ರೀರಾಘವೇಂದ್ರರು ಮೊದಲಾದ ಮಹಾನುಭಾವರಂತೂ ಕಲಿಯುಗದ ಕಲ್ಪವೃಕ್ಷ, ಕಾಮಧೇನುಗಳೆಂದೇ ಸುಪ್ರಸಿದ್ಧರಾಗಿರುವ ಮಹಿಮಾವಂತರು. ಅನೇಕ ಶತಕಗಳೇ ಉರುಳಿದರೂ ಅಚ್ಚಳಿಯದೇ ಸಾಗಿರುವ ಅವರ ಆಶ್ರಿತವಾತ್ಸಲ್ಯ, ಅದ್ಭುತ ಪವಾಡಗಳು ವೈಜ್ಞಾನಿಕಪ್ರಪಂಚಕ್ಕೆ ಬಿಡಿಸಲಾಗದ ಒಗಟು; ನಾಸ್ತಿಕರಿಗೆಲ್ಲ ಸಮಸ್ಯೆಯಾಗಿರುವ ರಹಸ್ಯ; ಧಾರ್ಮಿಕಶ್ರದ್ಧೆಯನ್ನು

ಸಹಸ್ರಾರು ಜನರಲ್ಲಿ ಇಂದೂ ರಕ್ಷಿಸಿರುವ ದಿವ್ಯಸಂಜೀವಿನಿ; ಇಂತಹವರು ಎಲ್ಲ ಮತಗಳಲ್ಲೂ ಸಿಕ್ಕುವುದಿಲ್ಲ ಎನ್ನಲು ಎಲ್ಲಾ ಮತದವರೂ ಇವರ ಒಲುಮೆಗೆ ಸಾಲುಗಟ್ಟಿ ನಿಂತಿರುವುದೇ ಸಾಕ್ಷಿ.

ಶ್ರೀಮದಾಚಾರ್ಯರಂತೂ ಸಕಲಸದ್ಗುಣಗಳ ಖಣಿ. ಸುದೃಢವಾದ ವಿಚಾರದೊಂದಿಗೆ ಸುದೃಢವಾದ ಶರೀರ ಅವರದು; ಒಂದೇ ಕೈಯಲ್ಲಿ ಎತ್ತಿ ಕಳಸದ ಬಳಿ ಭದ್ರಾನದಿಗೆ ದೊಡ್ಡ ಬಂಡೆಯೊಂದನ್ನು ಸೇತುವೆಯಂತೆ ಇರಿಸಿರುವ ಅವರ ಬಲ ಇಡೀ ಇತಿಹಾಸದಲ್ಲೇ ಅದ್ಭುತ ಜಾಗತಿಕದಾಖಲೆ. ಗರ್ಭವಾಸವಿಲ್ಲದ ಜನನ ಒಂದು ದಾಖಲೆಯಾದರೆ, ಶರೀರ ತ್ಯಾಗಮಾಡದೆ ಸಶರೀರರಾಗಿ ಅವರು ಇಂದೂ ಬದರಿಯಲ್ಲಿ ಶ್ರೀವ್ಯಾಸರ ಶಿಷ್ಯರಾಗಿ ನೆಲೆಸಿರುವುದು ಮತ್ತೊಂದು ದಾಖಲೆಯಾಗಿದೆ. ಚಿರಂಜೀವಿಯಾದ ಹನುಮಂತನ ಅವತಾರವೇ ಅವರು ಎಂಬುದು ಇದರಿಂದಲೂ ದೃಢಪಡುವುದು.

ಯಾವುದೋ ಒಂದು ಗುರಿಯ ಸಾಧನೆಗೆ ಅಪೇಕ್ಷೆಯೊಂದೇ ಸಾಲದು ಅರ್ಹತೆಯೂ ಇರಬೇಕು. ಅರ್ಹತೆಗೆ ತಕ್ಕ ಸಾಧನೆ, ಸಾದನೆಗೆ ತಕ್ಕ ಸಿದ್ಧಿ; ಪಾಪಗಳಿಗೆ ಎಂದೂ ಅವಕಾಶವಿಲ್ಲ, ಆದರೆ ಪಾಪಿಗಳಿಗೆ ಮಾತ್ರ ಅವರು ನಿಜಕ್ಕೂ ಪಶ್ಚಾತ್ತಾಪಪಟ್ಟು ಉದ್ಧಾರ ಬಯಸಿದರೆ ಅಂತಹವರಿಗೆಲ್ಲ ಉನ್ನತಿಗೆ ಖಚಿತ ಅವಕಾಶ. ವರ್ಣಾಶ್ರಮಗಳಿಗೆಲ್ಲ ಸ್ವಾಭಾವಿಕಗುಣನಿಮಿತ್ತವಾದ ಉಪಾಧಿನಿಮಿತ್ತವಾದ ಎಂಬ ಹೊಸ ಆವಿಷ್ಕಾರ Social justice, Political Justice ಮೊದಲಾದ ಎಲ್ಲ justiceಗಳಿಗಿಂತ Spiritual Justice ಪ್ರಧಾನ ಎಂಬ ತಾತ್ತ್ವಿಕನಿರೂಪಣೆ ಮೊದಲಾದ ಪ್ರತಿಯೊಂದು ಕಾರಣಕ್ಕಾಗಿಯೂ ಶ್ರೀಮಧ್ವಾಚಾರ್ಯರ ದರ್ಶನ ಸರ್ವಗ್ರಾಹ್ಯವಾಗಿದೆ.

ಭೇದ, ತಾರತಮ್ಯಗಳ ಆಂತರ್ಯ

(ಮಧ್ವಸಿದ್ಧಾಂತದಲ್ಲಿನ 'ಜೀವತ್ರೈವಿಧ್ಯ, ತಾರತಮ್ಯ, ನಿತ್ಯನರಕ, ಪಂಚಭೇದ' ಎಂಬ ನಾಲ್ಕು ವಿಷಯಗಳ ಬಗ್ಗೆ 'ಇದು ಸಂಕುಚಿತ ದೃಷ್ಟಿಯ ವಿವೇಚನೆ' ಎಂಬ ಆರೋಪವನ್ನು ಕೆಲವರು ಮಾಡುವುದುಂಟು. ಇದಕ್ಕೆಲ್ಲ ಅವುಗಳ ತಾತ್ತ್ವಿಕಮೂಲ ಮತ್ತು ಮಹತ್ತ್ವಗಳನ್ನು ಅರ್ಥಮಾಡಿಕೊಳ್ಳದಿರುವುದೇ ಮುಖ್ಯಕಾರಣ. ಜೀವತ್ರೈವಿಧ್ಯವನ್ನು ಸ್ವರೂಪಗತ ಎಂದು ಹೇಳಿದ್ದು ಯಾವ ಒಬ್ಬ ಆಸಕ್ತನನ್ನು ಅವಕಾಶವಂಚಿತನನ್ನಾಗಿ ಮಾಡಲೆಂದು ಅಲ್ಲ. ನಿಜಕ್ಕೂ ತಾನು ಉದ್ಧಾರವಾಗಬೇಕೆಂದು ಅಪೇಕ್ಷಿಸುವ ಜನರು ಎಂದೂ ಸ್ವರೂಪತಃ ಅಯೋಗ್ಯವಾಗಿರಲು ಸಾಧ್ಯವೇ ಇಲ್ಲ. ತಾರತಮ್ಯ ಮಾಡಲು ಶ್ರೀಮಧ್ವದರ್ಶನ ಹೇಳುವುದಿಲ್ಲ, ಆದರೆ ಇರುವ ತಾರತಮ್ಯವನ್ನು ಸರಿಯಾಗಿ ಅರಿತು ಅದರಂತೆ ನಡೆಯಬೇಕು ಎಂಬುದು ಅವರ ಅಭಿಪ್ರಾಯ. ಪಂಚಭೇದಗಳು ಸಹ ಹಿಂದೆ ಹೇಳಿರುವ ಐದುತೆರನಾದ ಭೇದಗಳು ಎಂದೇ ಹೊರತು ಭೇದಭಾವ ಪಕ್ಷಪಾತವಲ್ಲ. ಕಬ್ಬಿಣವನ್ನು

ಕಬ್ಬಿಣವೆಂದು, ಬಂಗಾರವನ್ನು ಬಂಗಾರವೆಂದು, ಅವೆರಡಕ್ಕೂ ಭೇದವೆಂದು ಕರೆದರೆ ಕೋಪತಾಪಗಳು ಏತಕ್ಕೆ? ನಿತ್ಯನರಕವೂ ಸಹ ಶಾಶ್ವತವಾದ ಭಗವದ್ದ್ವೇಷಿಗಳಿಗೆ ಸಿಕ್ಕುವ ದುರ್ಗತಿ. ಅದು ರಾಜದ್ರೋಹಕ್ಕೆ ಬರುವ ಶಿಕ್ಷೆಯಂತೆ ಮಾನ್ಯವೇ ಹೊರತು ನಿಂದ್ಯವಲ್ಲ. ಇವೆಲ್ಲ ಶ್ರುತಿಸ್ಮೃತಿಗಳಲ್ಲಿ ಹೇಳಿರುವ ಪ್ರಾಮಾಣಿಕವಿಚಾರಗಳೇ ಹೊರತು ಶ್ರೀಮದಾ-ಚಾರ್ಯರು ಕಲ್ಪಿಸಿ ಹೇಳಿದ ವಿಚಾರಗಳಲ್ಲ ಎಂಬುದನ್ನು ಗಮನಿಸಬೇಕು.

ಭಗವದ್ಗೀತೆ, ಬ್ರಹ್ಮಸೂತ್ರ ಮತ್ತು ಉಪನಿಷತ್ತುಗಳು ವೇದಾಂತದ ಮೂರು ಮಹತ್ತ್ವದ ಆಕರಗ್ರಂಥಗಳು. ಪ್ರಸ್ಥಾನತ್ರಯ ಎಂದೇ ಇವು ಪ್ರಸಿದ್ಧ. ಇವು ವೈದಿಕಸಿದ್ಧಾಂತನರಸಿಂಹನ ತ್ರಿನೇತ್ರಗಳು.

ಅಸುರರಿಗೊದಗುವ ದುರ್ಗತಿ

ಕ್ರೂರಿಗಳೂ, ಕೇಡಿಗರೂ, ಮನುಷ್ಯಾಧಮರೂ ಆದ ಆಸುರಸ್ವಭಾವದವರನ್ನು ಭಗವಂತನು ಆರಂಭದಲ್ಲಿ ಹೀನಯೋನಿಗಳಲ್ಲಿ ಹಾಕುವನು; ಕೊನೆಗೆ ಅಧೋಗತಿಗೆ ತಳ್ಳುವನು. ಇದು ವೈಯಕ್ತಿಕದ್ವೇಷದಿಂದಲ್ಲ; ಅವರ ಅಗಾಧದೋಷಗಳಿಗೆ ಶಿಕ್ಷೆಯಾಗಿ ಮಾತ್ರ.

ಇಲ್ಲಿ ಪ್ರಸ್ತಾಪಿತವಾಗಿರುವ ಅಧೋಗತಿ ಈಶಾವಾಸ್ಯಾದಿ ಉಪನಿಷತ್ತುಗಳಲ್ಲೂ ಭಾಗವತಾದಿಗಳಲ್ಲಿ ಉಲ್ಲೇಖಿಸಲ್ಪಟ್ಟಿರುವ ತಮಸ್ಸು, ಅಂಧಂತಮಸ್ಸುಗಳೇ ಆಗಿವೆ. ಅವು ನಿತ್ಯನರಕವೆಂಬುದು ಶಾಸ್ತ್ರಗಳ ಪ್ರತಿಪಾದನೆ.

ನಿತ್ಯನರಕದ ಪರಿಕಲ್ಪನೆ

ನಿತ್ಯನರಕದ ಪರಿಕಲ್ಪನೆ ಮೇಲ್ನೋಟಕ್ಕೆ ಒಂದು ವರ್ಗದ ಜನಕ್ಕೆ ಉದ್ಧಾರವನ್ನು ನಿರಾಕರಿಸುವ ಅಸಮಾನತೆಯಂತೆ ಕಾಣುತ್ತದೆ. ಆದರೆ ಅದು ಸರಿಯಲ್ಲ. ನಿತ್ಯನರಕವೆಂಬುದು ಸಾಮಾನ್ಯ ಅಪರಾಧ ಎಸಗುವ ಜೀವಿಗಳಿಗಾಗಲಿ, ಆಕಸ್ಮಿಕವಾಗಿ ಮಹಾಪರಾಧಕ್ಕೆ ಕೈಹಾಕುವ ಜನಕ್ಕಾಗಲಿ ವಿಧಿಸುವ ಶಿಕ್ಷೆಯಲ್ಲ. ಸದಾ ಕೇಡಿನಲ್ಲೇ ತಮ್ಮ ಸಮಸ್ತಜೀವನವನ್ನು ಕಳೆಯುವ ಮಹಾಪಾತಕಿಗಳಿಗೆ ಮಾತ್ರ ಮೀಸಲಾದ ವಿಶಿಷ್ಟಶಿಕ್ಷೆ. ಲೋಕದ ದೃಷ್ಟಿಯಲ್ಲೂ ಇದರಲ್ಲಿ ಅನ್ಯಾಯವೇನಿಲ್ಲ. ಮಹಾಪಾತಕಿಗೆ ಕಡಿಮೆ ಶಿಕ್ಷೆ ಕೊಟ್ಟಾಗ ಜನ ಪ್ರತಿಭಟಿಸುವರೇ ಹೊರತು, ಕಡಿಮೆ ಶಿಕ್ಷೆ ಕೊಟ್ಟಾಗ ಅಲ್ಲ. ಆಧುನಿಕನ್ಯಾಯಾಲಯಗಳು ವಿಧಿಸುವ ಮರಣದಂಡನೆ, ಜೀವಾವಧಿಶಿಕ್ಷೆಗಳು ಈ ನಿತ್ಯನರಕದ ಪರಿಕಲ್ಪನೆಗಿಂತ ಭಿನ್ನವೇನಲ್ಲ. ಪುನರ್ಜನ್ಮ ಮೊದಲಾದ ಪರಿಕಲ್ಪನೆಗಳನ್ನು ಹೊಂದಿರದ ಇವು ವಿಧಿಸುವ ಶಿಕ್ಷೆ ಆ ಜೀವಿಗೆ ಶಾಶ್ವತಶಿಕ್ಷೆಯೇ ಅಲ್ಲವೆ! ಜೀವಾವಧಿ ಶಿಕ್ಷೆಯಲ್ಲಿ ಒಂದೊಮ್ಮೆ ಕೈದಿ ಹೊರಬರುವ ಅವಕಾಶವಿದ್ದರೂ, ಮರಣದಂಡನೆಯಲ್ಲಿ

ಅದಕ್ಕೆ ಸರ್ವಥಾ ಅವಕಾಶವಿರದು. ಕಳೆದ ಜೀವವನ್ನು ಮರಳಿಕೊಡುವ ಶಕ್ತಿ ಈ ನ್ಯಾಯಾಲಯಕ್ಕೆ ಸರ್ವಥಾ ಇಲ್ಲವಷ್ಟೆ, ಅಂದ ಮೇಲೆ ಇವೂ ಆ ಜೀವಿಯ ಪಾಲಿಗೆ ಕೊಡುವ ಶಿಕ್ಷೆ ಶಾಶ್ವತಶಿಕ್ಷೆಯಲ್ಲದೆ ಮತ್ತೇನು?

ಇನ್ನು ಕೆಲವು ಪಾಪಗಳಿಗೆ ಇಂತಿಷ್ಟು ಶಿಕ್ಷೆ ಎಂದು ಲೆಕ್ಕ ಹಾಕುವ ನ್ಯಾಯಾಲಯ, ಒಬ್ಬ ಅಪರಾಧಿ ನೂರಾರು, ಸಾವಿರಾರು ಕೊಲೆಗಳನ್ನು, ದರೋಡೆಹಿಂಸೆಗಳನ್ನು ಮಾಡಿದಾಗ, ಅವನಿಗೆ ನೀಡಬೇಕಾದ ಶಿಕ್ಷೆಯ ಪ್ರಮಾಣವನ್ನು ಸಾವಿರಾರು ವರ್ಷಗಳ ವರೆಗೆ ವಿಸ್ತರಿಸುತ್ತದೆ. ಭಗವದ್ಗೀತೆಯ ವಿವರಣೆಯಂತೆ ಒಬ್ಬ ಜೀವಿಗೆ ಅನೇಕ ಪುನರ್ಜನ್ಮಗಳುಂಟು. ಒಬ್ಬ ಪರಮಪಾಪಿಯು ಅನಾದಿಕಾಲದಿಂದ ಪ್ರತಿಜನ್ಮದಲ್ಲೂ ಸಾವಿರಾರು ವರ್ಷಗಳ ಶಿಕ್ಷೆಗಾಗುವಷ್ಟು ಅಪರಾಧಗಳನ್ನೆಸಗಿದಾಗ, ಒಂದು ಕಾಲದಲ್ಲಿ ಅದು ನಿತ್ಯನರಕಶಿಕ್ಷೆಯಾಗದೆ ವಿಧಿಯೇ ಇಲ್ಲ. ವಾಲ್ಮೀಕಿರಾಮಾಯಣದಲ್ಲಿ ಕ್ರೌಂಚಮಿಥುನದಲ್ಲಿ ಗಂಡನ್ನು ಹೊಡೆದುರುಳಿಸಿದ ಕ್ರೂರವ್ಯಾಧನಿಗೆ ವಾಲ್ಮೀಕಿ ನೀಡಿದ ಶಾಪರೂಪದ ಶಿಕ್ಷೆಯೂ ಈ ಬಗೆಯದೇ ಅಲ್ಲವೆ! ಎಂದರೆ ನಿತ್ಯನರಕ ಪರಮಪಾಪಿಗಳಿಗೆ ವಿಹಿತವಾಗುವುದರಲ್ಲಿ ಅಪಚಾರವಾಗಲಿ, ಅನ್ಯಾಯವಾಗಲಿ, ಎಷ್ಟು ಮಾತ್ರಕ್ಕೂ ಇರದು.

ಇಲ್ಲಿ ಮತ್ತೊಂದು ಪ್ರಶ್ನೆ, ಪರಮಪಾಪಿಗೆ ಉದ್ಧಾರಕ್ಕೆ ಅವಕಾಶವೇ ಇಲ್ಲವೇ? ಈ ಪ್ರಶ್ನೆಗೆ ಹೀಗೆ ಸ್ಪಷ್ಟೀಕರಣ ಕೇಳಬೇಕಾಗುತ್ತದೆ : ಅಂತಹ ಪಾಪಿ ತನ್ನ ದುಷ್ಕೃತ್ಯಕ್ಕೆ ಪಶ್ಚಾತ್ತಾಪ ಪಟ್ಟು ಉದ್ಧಾರವಾಗಲು ಬಯಸುವನೊ? ಅಥವಾ ಇಲ್ಲವೋ? ಅವನು ಬಯಸುವನೆಂದಾದರೆ, ಅವನ ಉದ್ಧಾರಕ್ಕೆ ಖಂಡಿತ ಅವಕಾಶವಿದೆ. ಈ ಮಾತು ಗೀತೆಯಲ್ಲಿ ಈಗಾಗಲೇ ಬಂದಿದೆ ('ಅಪಿ ಚೇತ್ ಸುದುರಾಚಾರೋ......'). ಇನ್ನು ಪಶ್ಚಾತ್ತಾಪ ಪಡದೆ, ತನ್ನ ದುಷ್ಕೃತ್ಯಗಳನ್ನೇ ಸಮರ್ಥಿಸಿಕೊಳ್ಳುವ ಪರಮಪಾಪಿಗೆ ಮಾತ್ರ ಅವಕಾಶ ಸರ್ವಥಾ ಇಲ್ಲವೇ ಇಲ್ಲ ಎನ್ನುವುದೇ ಉತ್ತರ. ಇಲ್ಲಿ ಭಗವಂತ ಹೇಳುತ್ತಿರುವುದು ಅದನ್ನೇ. ಜನ್ಮಜನ್ಮಗಳಲ್ಲೂ ಕೇಡಿನ ಸ್ವಭಾವದ ಅವನಿಗೆ ಅಧೋಗತಿ ನಿಶ್ಚಿತ. ಸದ್ಗತಿ ಅವನಿಗೇ ಬೇಕಿಲ್ಲದಾಗ, ಅವನಿಗೆ ಅದನ್ನು ಕೊಡುವುದಾದರೂ ಏತಕ್ಕೆ?

ಇನ್ನು ಭಗವಂತ ಇಲ್ಲಿ ತಿಳಿಸುತ್ತಿರುವುದು ಜೀವಿಯ ಸಹಜಲಕ್ಷಣಗಳನ್ನು, ಎಂದರೆ ಎಂದೂ ಬದಲಾಗದ ಲಕ್ಷಣಗಳನ್ನು, ಅವನು ಬದಲಾದನೆಂಬ ಪ್ರಶ್ನೆಗೆ ಅವಕಾಶವೇ ಇರುವುದಿಲ್ಲ, ಸ್ವರೂಪ ಬದಲಾಗುವುದು ಎಂದರೆ ಅರ್ಥವೂ ಇಲ್ಲ, ಹಾಲು ಕಪ್ಪಾದರೆ, ಬೇವು ಸಿಹಿಯಾದರೆ ಎಂದು ಕೇಳುವಂತೆಯೇ ಇದು. ಸ್ವರೂಪದ ಪರಿಕಲ್ಪನೆಯ ಸ್ಪಷ್ಟ ಅರಿವು ಇದ್ದವರಿಗೆ ಈ ಬಗ್ಗೆ ಯಾವ ಗೊಂದಲವೂ ಇರದು.

ಇನ್ನು ಕೊನೆಯ ಪ್ರಶ್ನೆ, ಭಗವಂತನಿಗೆ ಅಂತಹ 'ಕೇಡಿಗನ ಸ್ವಭಾವವನ್ನು ಬದಲಿಸಲು ಸಾಧ್ಯವಿದೆಯೊ? ಇಲ್ಲವೊ?'; ಇದು ಭಗವಂತನ ಸಾಮರ್ಥ್ಯದ ಬಗೆಗಿನ ಪ್ರಶ್ನೆಯಾದರೆ,

'ಉಂಟು' ಎಂಬುದೇ ಖಚಿತ ಉತ್ತರ. ಆದರೆ ಅವನು ಹಾಗೆ ಮಾಡುವನೋ ಎಂದು ಕೇಳಿದರೆ, ಸ್ವರೂಪವನ್ನು ಸಂರಕ್ಷಿಸುವ ಸಂಕಲ್ಪದ ಅವನು ಹಾಗೆ ಮಾಡಲಾರ ಎಂಬುದೇ ಸಿದ್ಧಾಂತ. ಇಲ್ಲಿ ಶ್ರೀಕೃಷ್ಣ ಸ್ಪಷ್ಟಪಡಿಸಿರುವುದು ಅದನ್ನೇ.

ಸರ್ವಮೂಲಗ್ರಂಥಗಳು

ಶ್ರೀಮದಾನಂದತೀರ್ಥಭಗವತ್ಪಾದರ ಗ್ರಂಥಗಳಲ್ಲಿ ಸರ್ವಮೂಲ ಎಂದು ಪ್ರಸಿದ್ಧವಾಗಿರುವವು ಮೂವತ್ತೇಳು. (ಕಂದುಕಸ್ತುತಿ ಎಂಬ ಸ್ತೋತ್ರ, ಬಿಲ್ವಮಂಗಲಃ ಸಾಧುಃ ಎಂಬ ವಾಕ್ಯವನ್ನು ಸಹ ಇವುಗಳೊಂದಿಗೆ ಸೇರಿಸುವ ಸಂಪ್ರದಾಯ ಉಂಟು.)

ಇವುಗಳಲ್ಲಿ ಬ್ರಹ್ಮಸೂತ್ರ, ಅನುವ್ಯಾಖ್ಯಾನ, ಅಣುಭಾಷ್ಯ ಮತ್ತು ನ್ಯಾಯವಿವರಣ ಎಂಬ ನಾಲ್ಕು ಗ್ರಂಥಗಳು ಸೂತ್ರಪ್ರಸ್ಥಾನಕ್ಕೆ ಸಂಬಂಧಿಸಿವೆ. ಬ್ರಹ್ಮಸೂತ್ರಭಾಷ್ಯವು ಬ್ರಹ್ಮಮೀಮಾಂಸಾಶಾಸ್ತ್ರದ ಪ್ರತಿಯೊಂದು ಸೂತ್ರವನ್ನೂ ವಿವರಿಸುವ ಕೃತಿ, ಅನುವ್ಯಾಖ್ಯಾನವು ಸೂತ್ರಭಾಷ್ಯದ ವಿಸ್ತೃತರೂಪವಾದರೆ, ಅಣುಭಾಷ್ಯ ಅದರ ಸಂಗ್ರಹರೂಪವಾಗಿದೆ. ಅನುವ್ಯಾಖ್ಯಾನೋಕ್ತ ಪೂರ್ವಪಕ್ಷನ್ಯಾಯ ಹಾಗು ಸಿದ್ಧಾಂತನ್ಯಾಯಗಳ ವಿವರಣರೂಪವಾಗಿ ಬ್ರಹ್ಮಸೂತ್ರಗಳ ಅಧಿಕರಣಗಳ ಮೇಲೆ ಬೆಳಕು ಚೆಲ್ಲುವ ಕೃತಿ ನ್ಯಾಯವಿವರಣ. ಬ್ರಹ್ಮಸೂತ್ರಗಳ ಅಧ್ಯಯನಕ್ಕೆ ಬಹುವಿಧವಾಗಿ ನೆರವಾಗುವ ಇಂತಹ ನಾಲ್ಕು ಬಗೆಯ ಕೃತಿಗಳನ್ನು ಬೇರಾವ ಭಾಷ್ಯಕಾರರೂ ರಚಿಸಿಲ್ಲ ಎಂಬುದು ಗಮನಾರ್ಹ. ಈ ನಾಲ್ಕೂ ಒಂದರ್ಥದಲ್ಲಿ ಶ್ರೀಮದಾಚಾರ್ಯರ ಭಾವಿಚತುರ್ಮುಖತ್ವಕ್ಕೆ ಸೂಚಕವೂ ಆಗಿವೆ. ಇವುಗಳಲ್ಲಿ ಅನುವ್ಯಾಖ್ಯಾನ ಮತ್ತು ಅಣುಭಾಷ್ಯಗಳು ಶ್ಲೋಕರೂಪವಾಗಿದ್ದು ಸಮಗ್ರ ಬ್ರಹ್ಮಸೂತ್ರವ್ಯಾಖ್ಯಾನಗಳ ಇತಿಹಾಸದಲ್ಲೇ ಅದ್ವಿತೀಯವೆನ್ನಿಸಿವೆ. ಅನುವ್ಯಾಖ್ಯಾನಕ್ಕೆ ರಚಿತವಾಗಿರುವ ಶ್ರೀಜಯತೀರ್ಥರ ಟೀಕೆಯೇ 'ನ್ಯಾಯಸುಧಾ'.

ಗೀತಾಭಾಷ್ಯ ಮತ್ತು ಗೀತಾತಾತ್ಪರ್ಯನಿರ್ಣಯ ಈ ಎರಡೂ ಭಗವದ್ಗೀತೆಯ ಮೇಲೆ ರಚಿತವಾಗಿರುವ ಕೃತಿಗಳು. ಗೀತಾಭಾಷ್ಯ ಶ್ರೀಮದಾಚಾರ್ಯರು ಸನ್ಯಾಸಸ್ವೀಕಾರದ ಅನಂತರ ರಚಿಸಿದ ಪ್ರಪ್ರಥಮಕೃತಿ. ಈ ಅರ್ಥದಲ್ಲಿ ಅದರ ಅಧ್ಯಯನವು ಅವರ ಬ್ರಹ್ಮಸೂತ್ರಭಾಷ್ಯಾದಿ ಇತರಗ್ರಂಥಗಳ ಅಧ್ಯಯನಕ್ಕೆ ಅರ್ಹತೆ ತಂದುಕೊಡುತ್ತವೆ ಎಂಬುದನ್ನು ಗಮನಿಸಬೇಕು. ಗೀತಾತಾತ್ಪರ್ಯನಿರ್ಣಯವು ಗೀತಾಭಾಷ್ಯಕ್ಕೆ ಪೂರಕವಾಗಿರುವ ರಚನೆ.

ಮಹಾಭಾರತತಾತ್ಪರ್ಯನಿರ್ಣಯವು ಮುಖ್ಯವಾಗಿ ಮಹಾಭಾರತದ ಕಥೆ ಹಾಗೂ ಅರ್ಥಗಳನ್ನು ನಿರ್ಣಯಿಸುವ ವಿಶಿಷ್ಟಕೃತಿ. ಇದರಲ್ಲಿ ರಾಮಾಯಣ, ಹರಿವಂಶ, ಭಾಗವತಾದಿಗಳಲ್ಲಿ ಬರುವ ಭಗವದವತಾರದ ಕಥೆಗಳೂ ಸಹ ವ್ಯವಸ್ಥಿತವಾಗಿ ನಿರ್ಣಯಪೂರ್ವಕ ಸಂಗ್ರಹಿಸಲ್ಪಟ್ಟಿವೆ. ಒಂದರ್ಥದಲ್ಲಿ ಇದು ಸಮಗ್ರ ಶ್ರೀಮನ್ಮಹಾಭಾರತಕ್ಕೆ ಬರೆಯಲ್ಪಟ್ಟಿರುವ ಭಾಷ್ಯ; ಇನ್ನೊಂದರ್ಥದಲ್ಲಿ ಇತಿಹಾಸಪುರಾಣಪ್ರಸ್ಥಾನಕ್ಕೇ

ರಚಿತವಾಗಿರುವ ಭಾಷ್ಯ. ಉದ್ದೇಶ ಹಾಗೂ ಸಾಧನೆಗಳಲ್ಲಿ ಈ ಕೃತಿಗೆ ಸರಿಗಟ್ಟುವ ಮತ್ತೊಂದು ಕೃತಿಯೇ ಜಗತ್ತಿನಲ್ಲಿಲ್ಲ. ಒಟ್ಟು ಮೂವತ್ತೆರಡು ಅಧ್ಯಾಯಗಳಲ್ಲಿ ಐದುಸಾವಿರಕ್ಕಿಂತ ಹೆಚ್ಚು ಶ್ಲೋಕಗಳನ್ನು ಹೊಂದಿರುವ ಈ ಕೃತಿ ಸರ್ವಮೂಲಗಳಲ್ಲೆಲ್ಲಾ ಅತ್ಯಂತ ದೊಡ್ಡದು. ಪ್ರಧಾನವಾಗಿ ಯಮಕಾಲಂಕಾರಗರ್ಭಿತಶ್ಲೋಕಗಳಲ್ಲಿ ರಚಿತವಾಗಿರುವ 'ಯಮಕಭಾರತ' ಎಂಬ ಇವರ ಮತ್ತೊಂದು ಕೃತಿಯು ಒಂದರ್ಥದಲ್ಲಿ ಅಣುಮಹಾಭಾರತ-ತಾತ್ಪರ್ಯನಿರ್ಣಯವೇ ಆಗಿದೆ. ಹೀಗೆ ಒಂದು ಅಲಂಕಾರದ ಹೆಸರಿನಿಂದಲೇ ಒಂದು ಕೃತಿ ಪ್ರಸಿದ್ಧಿಗೆ ಬಂದಿರುವ ಮತ್ತೊಂದು ನಿದರ್ಶನ ಸಮಗ್ರಸಂಸ್ಕೃತಸಾಹಿತ್ಯದಲ್ಲೇ ಅಪೂರ್ವ.

ಶ್ರೀಮದ್ಭಾಗವತತಾತ್ಪರ್ಯನಿರ್ಣಯವು ಭಾಗವತ ಮಹಾಪುರಾಣಕ್ಕೆ ರಚಿತ-ವಾಗಿರುವ ವ್ಯಾಖ್ಯಾನ. ಪುರಾಣಗಳನ್ನು ಅರ್ಥಮಾಡಿಕೊಳ್ಳಬೇಕಾದ ಶಾಸ್ತ್ರೀಪದ್ಧತಿಗೆ ಈ ಕೃತಿ ಕೈಪಿಡಿಯಾಗಿದ್ದು ಸಮಗ್ರಪುರಾಣಪ್ರಸ್ಥಾನಕ್ಕೆ ಬರೆದ ಭಾಷ್ಯವಾಗಿದೆ. ಮತಾಚಾರ್ಯ-ರೊಬ್ಬರು ಶ್ರೀಮದ್ಭಾಗವತಕ್ಕೆ ಬರೆದ ಪ್ರಪ್ರಥಮ ಭಾಷ್ಯವೆಂಬುದು ಇದರ ಹಿರಿಮೆ. ಭಾಗವತಾದಿಪುರಾಣಗಳನ್ನು ಶಾಸ್ತ್ರಗಳೆಂದು ಏಕೆ ಕರೆದಿದ್ದಾರೆ, ಎಂಬುದು ಇದನ್ನು ಅಧ್ಯಯನ ಮಾಡುವವರೆಗೆ ಎಂದಿಗೂ ತಿಳಿಯಲಾರದು.

ಋಗ್ವೇದದ ಮೊದಲ ನಲ್ವತ್ತು ಸೂಕ್ತಗಳಿಗೆ ರಚಿತವಾಗಿರುವ ಭಾಷ್ಯವೇ ಋಗ್ಭಾಷ್ಯ. ತಮ್ಮನ್ನು ವೈದಿಕರೆಂದು ಕರೆದುಕೊಂಡ ಬೇರಾವ ಮತಾಚಾರ್ಯರೂ ಆ ಮುಂಚೆ ವೇದಗಳಿಗೆ ಭಾಷ್ಯ ಬರೆಯುವ ಗೋಜಿಗೇ ಹೋಗಿರಲಿಲ್ಲ ಎಂಬುದನ್ನು ಗಮನಿಸಿದಾಗ ಋಗ್ಭಾಷ್ಯ ಬರೆದಿರುವ ಶ್ರೀಮದಾಚಾರ್ಯರು, ಈ ಅರ್ಥದಲ್ಲೂ ಸಹ ನಿಜವಾದ ವೈದಿಕರು ಎಂಬುದು ಮನವರಿಕೆಯಾಗುತ್ತದೆ. ವೇದದ ಪ್ರತಿ ಅಕ್ಷರ ಪ್ರತಿ ಪದಗಳಿಗೂ ಕನಿಷ್ಠ ಮೂರು ಅರ್ಥ ಎಂದು ಶಾಸ್ತ್ರಾಧಾರಗಳಿಂದ ಸಮರ್ಥಿಸುವ ಶ್ರೀಮದಾಚಾರ್ಯರ ಪ್ರತಿಭೆ ಅಚ್ಚರಿ ಹುಟ್ಟಿಸುತ್ತದೆ. ಇಂದು ದೊರೆಯುವ ಋಗ್ವೇದದ ಭಾಷ್ಯಗಳಲ್ಲೆಲ್ಲಾ ಶ್ಲೋಕರೂಪವಾಗಿರುವ ವ್ಯಾಖ್ಯಾನ ಇದೊಂದೇ ಎಂಬುದು ಇದರ ಮತ್ತೊಂದು ವೈಶಿಷ್ಟ್ಯ.

ಈಶಾವಾಸ್ಯ, ಕೇನ, ಕಠ, ಷಟ್ಪ್ರಶ್ನ, ಮುಂಡಕ, ಮಾಂಡೂಕ, ತೈತ್ತಿರೀಯ, ಛಾಂದೋಗ್ಯ, ಬೃಹದಾರಣ್ಯಕ ಮತ್ತು ಐತರೇಯ ಎಂಬ ಪ್ರಸಿದ್ಧ ಹತ್ತು ಉಪನಿಷತ್ತುಗಳಿಗೂ ಶ್ರೀಮದಾಚಾರ್ಯರು ಭಾಷ್ಯ ಬರೆದಿದ್ದಾರೆ; ದಶಪ್ರಮತಿ ಎಂಬ ಹೆಸರಿನ ಶ್ರೀಮದಾಚಾರ್ಯರ ಈ ದಶೋಪನಿಷದ್ಭಾಷ್ಯಗಳು ಪ್ರತಿಹಂತದಲ್ಲೂ ಅದರ ದಶಪ್ರಮತಿತ್ವಕ್ಕೆ ನಿದರ್ಶನವಾಗಿವೆ.

ಇತಿಹಾಸಪುರಾಣಾಭ್ಯಾಂ ವೇದಂ ಸಮುಪಬೃಂಹಯೇತ್ ।
ಬಿಭೇತ್ಯಲ್ಪಶ್ರುತಾದ್ವೇದೋ ಮಾಮಯಂ ಪ್ರಚರಿಷ್ಯತಿ ॥

– ಎಂಬ ಶಾಸ್ತ್ರದ ಮಾತಿನಲ್ಲಿ ವೇದೋಪನಿಷತ್ತುಗಳಿಗೆ ಅರ್ಥ ತಿಳಿಯಲು ಇತಿಹಾಸ ಪುರಾಣಗಳ ಪರಿಜ್ಞಾನ ಅತ್ಯವಶ್ಯ ಎಂದು ನಿರೂಪಿತವಾಗಿದ್ದರೂ ಸ್ವಕಪೋಲಕಲ್ಪಿತ- ವಾಗಿಯೇ ಉಪನಿಷದರ್ಥಗಳನ್ನು ಬರೆದ ಭಾಷ್ಯಕಾರರೇ ಹೆಚ್ಚು. ಆದರೆ ಶ್ರೀಮಧ್ವರು ಪ್ರಥಮಬಾರಿಗೆ

ಇತಿಹಾಸ ಪುರಾಣಗಳ ಬೆಳಕಿನಲ್ಲೇ ಹೇಗೆ ವೇದೋಪ- ನಿಷತ್ತುಗಳ ಹೃದಯವನ್ನು ಅರಿಯಬೇಕು ಎಂಬುದನ್ನು ಸಾಧಾರಣವಾಗಿ ತಮ್ಮ ಭಾಷ್ಯಗಳಲ್ಲಿ ತೋರಿಸುತ್ತಾರೆ. ಜೀವಬ್ರಹ್ಮರಿಗೆ ಐಕ್ಯಪ್ರತಿಪಾದಕಗಳೆಂದು ಅನೇಕರು ಭ್ರಮಿಸಿದ್ದ ಅಹಂ ಬ್ರಹ್ಮಾಸ್ಮಿ (ಅ)ತತ್ವಮಸಿ ಮೊದಲಾದ ಶೃತಿವಾಕ್ಯಗಳು ಮೂಲತಃ ಹೇಗೆ ಜೀವಬ್ರಹ್ಮರಲ್ಲಿ ಭೇದವನ್ನೇ ಪ್ರತಿಪಾದಿಸಿವೆ ಎಂಬುದನ್ನು ಪ್ರಮಾಣವಚನಗಳಿಂದಲೇ ಸಾಧಿಸಿ ತೋರಿಸುವ ಈ ಭಾಷ್ಯಗಳು ನಿಜವಾದ ಅರ್ಥದಲ್ಲಿ ಉಪನಿಷತ್ತುಗಳ ಹೃದಯಕ್ಕೇ ಹಿಡಿದ ಕನ್ನಡಿಯಾಗಿವೆ.

ತತ್ತ್ವಸಂಖ್ಯಾನ, ತತ್ತ್ವವಿವೇಕ, ತತ್ತ್ವೋದ್ಯೋತ, ತತ್ತ್ವನಿರ್ಣಯ, ಮಾಯಾವಾದ ಖಂಡನ, ಉಪಾಧಿಖಂಡನ, ಪ್ರಪಂಚಮಿಥ್ಯಾತ್ವಾನುಮಾನಖಂಡನ, ಪ್ರಮಾಣಲಕ್ಷಣ ಮತ್ತು ಕರ್ಮನಿರ್ಣಯ ಇವು ದಶಪ್ರಕರಣವೆಂದು ಪ್ರಸಿದ್ಧವಾಗಿರುವ ಕೃತಿಗಳು. ಸ್ವತಂತ್ರ ಮತ್ತು ಅಸ್ವತಂತ್ರವೆಂದು ತತ್ತ್ವಗಳನ್ನು ವಿಂಗಡಿಸಿ ತತ್ತ್ವವಿಭಾಗದ ಪರಿಚಯವನ್ನು ತತ್ತ್ವಸಂಖ್ಯಾನವು ಮಾಡಿಕೊಡುತ್ತದೆ. ಈ ತತ್ತ್ವಸಂಖ್ಯಾನಕ್ಕೆ ಪ್ರಮಾಣವಾಗಿ ಶ್ರೀವಿಷ್ಣುಕೃತ ತತ್ತ್ವವಿವೇಕ ಎಂಬ ಗ್ರಂಥದಿಂದ ಸಂಗ್ರಹಿಸಿಕೊಟ್ಟಿರುವ ಶ್ಲೋಕಗಳೇ ತತ್ತ್ವವಿವೇಕ. ಪುಂಡರೀಕಪುರಿ ಇತ್ಯಾದಿ ಮಾಯಾವಾದಿಗಳನ್ನು ವಾದದಲ್ಲಿ ಸೋಲಿಸಿದ ಶ್ರೀಮದಾಚಾರ್ಯರ ಉಪನ್ಯಾಸವೊಂದರ ಲಿಖಿತರೂಪವೇ ತತ್ತ್ವೋದ್ಯೋತ. ಎಲ್ಲಾ ಮತಗಳನ್ನು ವಿಮರ್ಶಿಸಿ ಅವುಗಳಲ್ಲಿಯ ಲೋಪದೋಷಗಳನ್ನು ತೋರಿಸುತ್ತಾ ವೇದಾಪೌರುಷೇಯತ್ವ, ಹರಿಸರ್ವೋತ್ತಮತ್ವ, ಪಂಚಭೇದ ಮೊದಲಾದ ವೈದಿಕತತ್ತ್ವಗಳನ್ನು ಸಾಧಿಸಿ ತೋರಿಸುವ ಕೃತಿಯೇ ವಿಷ್ಣುತತ್ತ್ವವಿನಿರ್ಣಯ. ಒಂದರ್ಥದಲ್ಲಿ ಇದು ಗದ್ಯರೂಪದ ಅನುವ್ಯಾಖ್ಯಾನಸಂಗ್ರಹವೇ ಆಗಿದೆ. ಖಂಡನತ್ರಯಗಳು ಪ್ರಧಾನವಾಗಿ ಅದ್ವೈತಮತದ ಮುಖ್ಯತತ್ತ್ವಗಳನ್ನು ಖಂಡಿಸುವ ಕೃತಿಗಳು. ಈ ಖಂಡನತ್ರಯಗಳ ಅಧ್ಯಯನ ಖಂಡಿತವಾಗಿಯೂ ತಾಪತ್ರಯನಿವಾರಕ. ಪ್ರಮಾಣಗಳ ಲಕ್ಷಣ, ಅವುಗಳ ವಿಭಾಗ ಇತ್ಯಾದಿಗಳ ವಿವೇಚನೆಯು ಪ್ರಮಾಣಲಕ್ಷಣದಲ್ಲೂ, ತತ್ತ್ವಚರ್ಚೆಯ ವಿಧಿವಿಧಾನಗಳು ಮತ್ತು ವಿಭಾಗಗಳು ಕಥಾಲಕ್ಷಣದಲ್ಲೂ ಬಂದಿವೆ. ದ್ವಾತ್ರಿಂಶಲ್ಲಕ್ಷಣೋಪೇತರಾದ ಶ್ರೀಮದಾಚಾರ್ಯರ ಈ ಎರಡೂ ಗ್ರಂಥಗಳ ಅಧ್ಯಯನವಿಲ್ಲದ ಶಾಸ್ತ್ರಾಭ್ಯಾಸವು ಮನನ ಹಾಗೂ ಆರೋಗ್ಯಕರಚರ್ಚೆಯ ಹಂತವನ್ನು ಎಂದಿಗೂ ತಲುಪಲಾರದು.

ವಿಷ್ಣುಕೃತ ತಂತ್ರಸಾರವೆಂಬ ಬೃಹದ್ಗ್ರಂಥದ ಸಂಗ್ರಹರೂಪವೇ ತಂತ್ರಸಾರಸಂಗ್ರಹ. ನಾಲ್ಕು ಅಧ್ಯಾಯಗಳ ಈ ಕೃತಿಯಲ್ಲಿ ಪ್ರಣವಾದಿ ಮಂತ್ರಗಳ ಸ್ವರೂಪ, ದೇವಪೂಜಾಪದ್ಧತಿ, ದೇವಾಲಯನಿರ್ಮಾಣವಿಧಿ ದೇವತಾಪ್ರತಿಷ್ಠಾವಿಧಿ, ವಿವಿಧಮಂತ್ರಗಳ ವಿಧಿವಿಧಾನಗಳು, ಧ್ಯಾನಪದ್ಧತಿ ಮೊದಲಾದವುಗಳೆಲ್ಲ ಸಂಗ್ರಹಿಸಲ್ಪಟ್ಟಿವೆ. ತತ್ತ್ವಶಾಸ್ತ್ರದ ಪ್ರಾಯೋಗಿಕಭಾಗವಾದ ತಂತ್ರಶಾಸ್ತ್ರದ ಬಗ್ಗೆ ಇಷ್ಟೆಲ್ಲಾ ಮಾಹಿತಿಗಳನ್ನು ನಿಷ್ಕೃಷ್ಟವಾಗಿ ಕೊಡುವ ಮತ್ತೊಂದು ಗ್ರಂಥವೇ ಇಲ್ಲ.

ಪ್ರತಿನಿತ್ಯ ಆಚರಿಸಬೇಕಾದ ಸತ್ಕರ್ಮಗಳ ಬಗ್ಗೆ ಬೆಳಕು ಚೆಲ್ಲುವ ಕೃತಿ ಸದಾಚಾರ ಸ್ಮೃತಿ. ಸದ್ವಿಚಾರಕ್ಕೆ ಸಾಧಕವಾದ ಸದಾಚಾರದ ಸಮಗ್ರ ಪರಿಚಯ ಈ ಕೃತಿಯ ವೈಶಿಷ್ಟ್ಯ. ಯಾವುದೇ ಉಪಾಸನೆಗೂ ಹಿನ್ನೆಲೆಯಾದ ಉಪವಾಸ, ಪೂಜೆ ಇತ್ಯಾದಿಗಳ ಬಗ್ಗೆ ಪುರಾಣವಾಕ್ಯಗಳ ಸಂಗ್ರಹರೂಪವಾಗಿರುವ ಕೃತಿ ಕೃಷ್ಣಾಮೃತಮಹಾರ್ಣವ. ಇದರಲ್ಲಿ ಏಕಾದಶ್ಯುಪವಾಸದ ಬಗ್ಗೆ ಅಪೂರ್ವಮಾಹಿತಿಗಳ ಸಂಕಲನವೇ ಇದೆ. ಶ್ರೀಕೃಷ್ಣಜಯಂತಿಯ ಮಹತ್ತ್ವ, ಲಕ್ಷಣ ಮತ್ತು ವಿಧಿವಿಧಾನಗಳನ್ನೆಲ್ಲ ನಿರೂಪಿಸುವ ಕೃತಿ ಜಯಂತೀನಿರ್ಣಯ. ಸನ್ನ್ಯಾಸದೀಕ್ಷೆಯ ಕ್ರಮ ಮತ್ತು ಪರಮಹಂಸರ ಆಚಾರವಿಚಾರಗಳ ಸಂಗ್ರಹವು ಯತಿಪ್ರಣವಕಲ್ಪದಲ್ಲಿ ನಿರೂಪಿತವಾಗಿದೆ.

ನಖಸ್ತುತಿ ಮತ್ತು ದ್ವಾದಶಸ್ತೋತ್ರ ಇವೆರಡೂ ಭಗವಂತನನ್ನು ವಿವಿಧ ಬಗೆಯಲ್ಲಿ ಸ್ತುತಿಸುವ ಕೃತಿಗಳು. ಭಗವಂತನ ನೃಸಿಂಹರೂಪದ ನಖಗಳನ್ನು ಸ್ತುತಿಸುತ್ತಲೇ ಭಗವಂತನ ಅದ್ಭುತವ್ಯಕ್ತಿತ್ವವನ್ನು ತಿಳಿಸಿಕೊಡುವ ಕೃತಿ ಎರಡು ಶ್ಲೋಕಗಳ ನಖಸ್ತುತಿ. ವಾಯುಸ್ತುತಿಯ ಆದ್ಯಂತಗಳಲ್ಲಿ ಇದನ್ನು ತಪ್ಪದೇ ಪಠಿಸಬೇಕಾದ ವಿಧಿ ಉಂಟು.

ದ್ವಾದಶಸ್ತೋತ್ರವೆಂಬುದು ಹನ್ನೆರಡು ಸ್ತೋತ್ರಗಳ ಒಂದು ಗುಚ್ಛ. ಪ್ರತಿಯೊಂದು ಸ್ತೋತ್ರವನ್ನೂ ಒಂದೊಂದು ಅಧ್ಯಾಯವೆಂದು ಕರೆದು ಒಟ್ಟಾಗಿ ಒಂದೇ ಕೃತಿ ಎಂದು ಪರಿಗಣಿತವಾಗಿರುವ ಇಂತಹ ಕೃತಿ ಪಂಚರಾತ್ರಾಗಮದ ಜಿತಂತೇಸ್ತೋತ್ರವನ್ನು ಬಿಟ್ಟರೆ ಬೇರೊಂದು ದೊರೆಯುವುದೇ ಇಲ್ಲ. ತಿಳಿದ ಶಾಸ್ತ್ರತತ್ತ್ವಗಳನ್ನೆಲ್ಲ ಹೇಗೆ ಉಪಾಸನೆಗೆ ಅಳವಡಿಸಿಕೊಂಡು ಭಗವಂತನನ್ನು ಸ್ತುತಿಸಬೇಕು ಎಂಬುದನ್ನು ಈ ಸ್ತುತಿ ತಿಳಿಸಿಕೊಡುತ್ತದೆ. ದ್ವಾದಶಸ್ಕಂಧಾತ್ಮಕವಾದ ಶ್ರೀಮದ್ಭಾಗವತಕ್ಕೆ ತಾತ್ಪರ್ಯರೂಪವಾಗಿರುವುದು ಈ ಕೃತಿಯ ಮತ್ತೊಂದು ವೈಶಿಷ್ಟ್ಯ. ವಿವಿಧವೃತ್ತಗಳಲ್ಲಿ ಪ್ರೌಢಕಾವ್ಯವಾಗಿ ರಚಿಸಲ್ಪಟ್ಟಂತಹ ಹಾಡುಗಬ್ಬಗಳಲ್ಲೆಲ್ಲಾ ಇದಕ್ಕೆ ಅಗ್ರಸ್ಥಾನ.

ಒಟ್ಟಿನಲ್ಲಿ ಶ್ರೀಮದಾಚಾರ್ಯರ ಕೃತಿಗಳು ವೇದ, ಉಪನಿಷತ್ತು, ಸೂತ್ರ, ಇತಿಹಾಸ, ಪುರಾಣ, ತಂತ್ರ, ಪ್ರಕರಣ, ಆಚಾರ ಮೊದಲಾದ ಶಾಸ್ತ್ರದ ಸರ್ವವಿಭಾಗಗಳನ್ನೂ ಒಳಗೊಂಡಿದ್ದು ಸರ್ವಮೂಲವೆಂಬ ಹೆಸರು ಸಾರ್ಥಕವಾಗಿದೆ. ಶ್ರೀಮದಾಚಾರ್ಯರು ಸರ್ವಜ್ಞರು ಎಂಬುದಕ್ಕೂ ಇವು ಸ್ಪಷ್ಟ ನಿದರ್ಶನವಾಗಿವೆ. ಸರಳ ಶೈಲಿ, ಲಲಿತಪದಪಂಕ್ತಿ, ಸ್ಪಷ್ಟನಿರೂಪಣೆ, ಪ್ರಮಾಣವಚನಗಳ ಉದಾಹರಣೆ ಮೊದಲಾದ ಪ್ರಮುಖಲಕ್ಷಣಗಳು ಇವುಗಳಲ್ಲಿ ಓತಪ್ರೋತವಾಗಿ ಕಂಡುಬರುತ್ತವೆ. ಯಾವುದೇ ನಿರ್ಮಲವಿಚಾರಕ್ಕೂ ಈ ಸರ್ವಮೂಲಗಳು ಮೂಲಸಾಧನವಾಗಿವೆ. ವೇದಾದಿ ಸರ್ವಮೂಲಗ್ರಂಥಗಳನ್ನೂ ಇವುಗಳ ಸಹಾಯದಿಂದ ಅರಿಯಲು ಸಾಧ್ಯ. ಈ ಸರ್ವಮೂಲಗಳನ್ನು ಬಿಟ್ಟ ವಿಚಾರ ನಿರ್ಮೂಲ ಎನ್ನಿಸುವುದರಲ್ಲಿ ಆಶ್ಚರ್ಯವಿಲ್ಲ.

ಗೀತಾಪ್ರಸ್ಥಾನ ಗ್ರಂಥಗಳು

ಗೀತಾತಾತ್ಪರ್ಯಭಾಷ್ಯಾಭ್ಯಾಮಾಭ್ಯಾಂ ವಿಶ್ವಂ ಪ್ರಕಾಶ್ಯತೇ ।
ಗೋಗಣೈರಪ್ರತೀಕಾರ್ಯೈರರ್ಕೇಂದುಭ್ಯಾಮಿವಾಧಿಕಮ್ ॥

- ಸುಮಧ್ವವಿಜಯ (೧೫/೭೫)

ಭಗವದ್ಗೀತೆಯನ್ನು ಕುರಿತು ಶ್ರೀಮದಾಚಾರ್ಯರು ಗೀತಾಭಾಷ್ಯ ಮತ್ತು ಗೀತಾತಾತ್ಪರ್ಯಗಳೆಂಬ ಎರಡು ಕೃತಿಗಳನ್ನು ರಚಿಸಿರುವರು. ಅವುಗಳ ಪರಿಚಯಕ್ಕೆ ಮುನ್ನ ಭಗವದ್ಗೀತೆಯ ಪರಿಚಯವನ್ನು ಸಂಕ್ಷಿಪ್ತವಾಗಿ ಹೀಗೆ ಮಾಡಿಕೊಳ್ಳಬಹುದು.

ಭಗವದ್ಗೀತೆ

ಭಗವದ್ಗೀತೆಯು ಜಗನ್ಮಾನ್ಯವಾದ ಅಮರ ಕೃತಿ; ಭಗವಂತನನ್ನು ಒಪ್ಪುವ ಎಲ್ಲರಿಗೂ ಅತ್ಯಂತ ಪ್ರಿಯಗ್ರಂಥ; ಗಾತ್ರದಲ್ಲಿ ಅದರಂತಹ ಪುಟ್ಟ ತಾತ್ವಿಕ ಕೃತಿ ಜಗತ್ತಿನಲ್ಲೇ ಬೇರೊಂದಿಲ್ಲ; ಅದರಂತೆ ಹಿರಿಮೆಯಲ್ಲಿ ಅದನ್ನು ಮೀರುವ ಗ್ರಂಥ ಕೂಡ. ಅದನ್ನೊಳಗೊಂಡ ಮಹಾಭಾರತವೂ ಹಾಗೆಯೇ; ಅರ್ಥದಲ್ಲಿರಲಿ ಗಾತ್ರದಲ್ಲೂ ಇಂದೂ ಎಂದೂ ಅದೇ ವಿಶ್ವದ ಸಾರ್ವಭೌಮಗ್ರಂಥ; ಮಹಾಭಾರತವು ಮೂಲತಃ ಕೃಷ್ಣನ ಕಥೆಯಾದರೆ, ಗೀತೆ ಆ ಕೃಷ್ಣನ ಉಪದೇಶದ ಸಾರವಾಗಿದೆ; ಗೀತೆಯು ಮಹಾಭಾರತದ 'ದರ್ಶನ'ವಾದರೆ, ಮಹಾಭಾರತವು ಗೀತಾತತ್ತ್ವದ 'ನಿದರ್ಶನ'ವಾಗಿದೆ. ಗೀತೆಯು ವಾಮನನಾದರೆ ಮಹಾಭಾರತವು ಅದರ ತ್ರಿವಿಕ್ರಮರೂಪವಾಗಿದೆ; ವಾಮನ-ತ್ರಿವಿಕ್ರಮ ಎರಡೂ ಮಹಾವಿಷ್ಣುವಿನ ಎರಡು ರೂಪಗಳೇ ಆಗಿವೆ. ಅರ್ಜುನನ ತಿಳಿವಿಗಾಗಿ ಯಾದವಕೃಷ್ಣ ಗೀತೆಯನ್ನು ಉಪದೇಶಿಸಿದರೆ, ಜಗತ್ತಿನ ತಿಳಿವಿಗಾಗಿ ವಾಸಿಷ್ಠಕೃಷ್ಣ ವೇದವ್ಯಾಸರು ಅದನ್ನು ಗ್ರಂಥರೂಪದಲ್ಲಿ ಒದಗಿಸಿದ್ದಾರೆ. ಅವುಗಳಲ್ಲಿ ಯಾವ ಒಂದನ್ನು ತಿಳಿಯದಿದ್ದರೂ, ಉಳಿದ ಮತ್ತೊಂದು ತಿಳಿಯುವುದಿಲ್ಲ. ಪದ್ಮನಾಭನ ಮುಖಪದ್ಮದಿಂದ ಹೊರಹೊಮ್ಮಿದ ಗೀತೆ ವ್ಯಾಸರ ಮುಖಪದ್ಮದಿಂದ ಜಗತ್ತಿಗೆ ತಲುಪಿತು; ಅದರಲ್ಲಿ ತುಂಬಿರುವುದಂತು ಪ್ರಮೇಯಪದ್ಮಗಳೇ.

ಮಹಾಭಾರತವು ಎಲ್ಲ ಬಗೆಯಲ್ಲೂ ವಿಶಿಷ್ಟವಾದ ಕೃತಿ; ವಸ್ತುವಾಗಿ ಅದು ಇತಿಹಾಸ; ಕಾವ್ಯವಾಗಿ ಅದು ಕವಿಗಳ ಕಲ್ಪವೃಕ್ಷ; ತತ್ತ್ವದಿಂದಾಗಿ ವೇದೋತ್ತಮವಾದ ಮಹಾಶಾಸ್ತ್ರ; ಬರೆದ ವ್ಯಾಸರೂ ಅಷ್ಟೆ: ಅವರು ಬರೆಯದ್ದೇ ಇಲ್ಲ; ಅವರ ಕೃತಿಗಳಲ್ಲಿ ಭಗವಂತನ ವಿಷಯವಿದ್ದರೆ, ಅವರಂತೂ ಸ್ವತಃ ಭಗವಂತನೇ ಆಗಿರುವರು; ಮಹಾಭಾರತವನ್ನು ಮೀರಿಸುವ ಏಕಮಾತ್ರ ಕೃತಿ 'ಬ್ರಹ್ಮಸೂತ್ರ'ವೂ ಸಹ ಅವರ ರಚನೆಯೇ; ಹದಿನೆಂಟು ಪುರಾಣಗಳನ್ನು ಬರೆದವರೂ ಅವರೇ; ಜಗತ್ತಿಗೆ ಜ್ಞಾನಕೊಟ್ಟ ಮಹನೀಯರಲ್ಲಿ ಅವರದೇ ಅಗ್ರಸ್ಥಾನ.

ಮಹಾಭಾರತದವನ್ನು ಕೇಳದ ಜನರಿಲ್ಲ; ಅದನ್ನು ಪೂರ್ಣವಾಗಿ ತಿಳಿದ ಜನರೂ ಇಲ್ಲ; ಅದರಲ್ಲಿ ಬರುವ ಗೀತೆಯೂ ಹಾಗೆಯೇ; ಅವುಗಳನ್ನು ತಿಳಿದವರಿಗಿಂತ ಅವುಗಳ ಮೇಲೆ ಬರೆದವರೇ ಹೆಚ್ಚು.

ಮಹಾಭಾರತವು ಪಂಚಮ ವೇದ; ವ್ಯಾಸರು ಬರೆದದ್ದರಿಂದ 'ಕಾರ್ಷ್ಣವೇದ'; ಮಹತ್ತ್ವದಲ್ಲಿ ಇತರ ವೇದಗಳಿಗಿಂತ ಮಿಗಿಲಾದ ವೇದ; ಗೀತೆ ಅದರ ಉಪನಿಷತ್ತು; ಆದ್ದರಿಂದ ಅದು ಇತರ ಉಪನಿಷತ್ತುಗಳಿಗಿಂತ ಮಿಗಿಲಾದ ಉಪನಿಷತ್ತು.

ಮಹಾಭಾರತವು ಸಕಲ ಶಾಸ್ತ್ರಗಳ ಸಾರ; ಬಾಲಕೃಷ್ಣನ ಬಾಯಲ್ಲಿ ಯಶೋದೆಗೆ ಇಡೀ ಬ್ರಹ್ಮಾಂಡ ಕಂಡಿತು; ಪುಟ್ಟ ಗೀತೆಯ ಮಾತುಮಾತಿನಲ್ಲೂ ಆಸ್ತಿಕರಿಗೆ ಸಕಲ ಶಾಸ್ತ್ರಾರ್ಥ ಕಾಣುತ್ತದೆ.

ಅರ್ಥದ ದೃಷ್ಟಿಯಿಂದಲೂ ಮಹಾಭಾರತ ಜಗತ್ತಿನ ಅದ್ವಿತೀಯ ಗ್ರಂಥ; ಇದರ ಪ್ರತಿಶ್ಲೋಕಕ್ಕೂ, ಪ್ರತಿಪದಕ್ಕೂ ಅತಿ ಕಡಿಮೆ ಎಂದರೂ ಹತ್ತು ಅರ್ಥಗಳುಂಟು; ಅದರಲ್ಲಿ ಬರುವ ವಿಷ್ಣುಸಹಸ್ರನಾಮಕ್ಕಂತೂ ಅದರ ಪ್ರತಿನಾಮಕ್ಕೂ ಕನಿಷ್ಟ ನೂರು ಅರ್ಥಗಳು. ಗೀತೆಯ ಅರ್ಥಗಳು ಹತ್ತೂ ಹೌದು; ನೂರೂ ಹೌದು; ಅವೆಲ್ಲ ಅಪೂರ್ವವೂ ಹೌದು; ಮಹಾಭಾರತದಲ್ಲಿ ಧರ್ಮಾದಿ ಸಕಲ ಪುರುಷಾರ್ಥಗಳ ವಿಚಾರವೂ ಬಂದಿದೆ; ಅದಕ್ಕೆಂದೇ ಅದು 'ಪುರುಷಾರ್ಥಗಳ ವಿಶ್ವಕೋಶ'ವಾಗಿದೆ.

ಮಹಾಭಾರತವು ಹದಿನೆಂಟು 'ಪರ್ವ'ಗಳ 'ಪರ್ವತ'ವಾದರೆ ಗೀತೆಯು ಅದರ ಗೌರೀಶಂಕರ; ವಿಷ್ಣುಸಹಸ್ರನಾಮ ಅದರ ಅವಳಿ ಶಿಖರ; ಗೀತೆಯು ಯುದ್ಧಕ್ಕಿಂತ ಮುನ್ನ ಭೀಷ್ಮಪರ್ವದಲ್ಲಿ ಬಂದರೆ, ವಿಷ್ಣುಸಹಸ್ರನಾಮವು ಯುದ್ಧ ಮುಗಿದ ಮೇಲೆ ಭೀಷ್ಮರ ಬಾಯಿಂದ ಬಂದಿದೆ. ಅವುಗಳ ಅರಿವು ಎಂದರೆ ಅಜ್ಞಾನದ ಅಳಿವು; ಬಾಳಿನ ಉಳಿವು; ಶಾಸ್ತ್ರಗಳು ಸಾರಿವೆ - 'ವೇದ ಓದಬಲ್ಲವರಿಗೆ ಮಹಾಭಾರತ 'ವೇದಾರ್ಥ'ವಾದರೆ, ಹಾಗಲ್ಲದವರಿಗೆ ಅದೇ 'ವೇದ'; ಎಲ್ಲರಿಗೂ ಅದರಿಂದಲೇ ತತ್ತ್ವಜ್ಞಾನದ ಬೋಧ.

ಶ್ರೀಮನ್ಮಧ್ವಾಚಾರ್ಯರು ಎರಡಕ್ಕೂ ಅರ್ಥ ಬರೆದ ಮಹನೀಯರು; ಗೀತಾಭಾಷ್ಯ ಮತ್ತು ಗೀತಾತಾತ್ಪರ್ಯನಿರ್ಣಯಗಳು 'ಗೀತಾರ್ಥ'ಗಳಾದರೆ, ಮಹಾಭಾರತ-ತಾತ್ಪರ್ಯನಿರ್ಣಯವು 'ಭಾರತಾರ್ಥ'ವಾಗಿದೆ; ಗೀತೆಯ ಮೇಲೆ ಎರಡು ಕೃತಿಗಳನ್ನು ಕೊಟ್ಟ ಏಕ ಮಾತ್ರ ಆಚಾರ್ಯರು ಅವರು; ಅವರು ಹೇಳುತ್ತಾರೆ : ಮಹಾಭಾರತ ಪಾರಿಜಾತ; ಗೀತೆ ಅದರ ಮಧು.

ಮತ್ತೊಂದು ಮಾತೂ ಉಂಟು; ''ಸಕಲ ಉಪನಿಷತ್ತುಗಳು ಗೋವುಗಳು; ಶ್ರೀಕೃಷ್ಣನೇ ಗೋವಳಿಗ; ಅರ್ಜುನನೇ ಕರು; ಗೀತಾಮೃತವೇ ಅವನು ಕರೆದ ಹಾಲು; ಸಜ್ಜನರು ಅದನ್ನು ಉಣ್ಣುವವರು.'' ದೇಹದ ಪೋಷಣೆಗೆ ಅವಶ್ಯವಾದ ಸಕಲ ಅಂಶಗಳೂ

ಹಸುವಿನ ಹಾಲಿನಲ್ಲಿರುವಂತೆ, ಜೀವದ ಪೋಷಣೆಗೆ ಅವಶ್ಯವಾದ ಸಕಲ ವಿಚಾರಗಳೂ ಗೀತೆಯಲ್ಲಿ ಬಂದಿವೆ[೧] - ಎಂದು ಅದರ ಭಾವ.

ಗೀತೆಯನ್ನು ಕೇಳಿದವನು ನರ(ನರಾಂಶ ಅರ್ಜುನ), ಹೇಳಿದವನು ನಾರಾಯಣ(ಶ್ರೀಕೃಷ್ಣ); ಎಂದರೆ ಇದು ಸಕಲ ನರರಿಗೂ ಭಗವಂತನಾದ ನಾರಾಯಣನ ಜ್ಞಾನ ಸಂದೇಶ.

ಮಹಾಭಾರತದಲ್ಲಿ ಮತ್ತೊಂದು ಮಾತೂ ಇದೆ:

ಗೀತಾ, ಗಂಗಾ, ಗಾಯತ್ರೀ ಮತ್ತು ಗೋವಿಂದ ಎಂಬ ನಾಲ್ಕನ್ನು ಹೃದಯದಲ್ಲಿ ಹೊತ್ತವನಿಗೆ ಮತ್ತೆ ಹುಟ್ಟುವ ಭಯವಿಲ್ಲ.

ಭಗವದ್ಗೀತೆ ಒಟ್ಟು ಹದಿನೆಂಟು ಅಧ್ಯಾಯಗಳ ಪುಟ್ಟ ಗ್ರಂಥ; ಇದರಲ್ಲಿನ ಒಟ್ಟು ಶ್ಲೋಕಗಳ ಸಂಖ್ಯೆ ೭೦೧; ಪ್ರಚಲಿತವಿರುವಂತೆ ಇದರಲ್ಲಿನ ಒಟ್ಟು ೧೮ ಅಧ್ಯಾಯಗಳ [೨]ಹೆಸರುಗಳು ಕ್ರಮವಾಗಿ ಹೀಗಿವೆ:

೧. ಅರ್ಜುನವಿಷಾದಯೋಗ (೪೭)
೨. ಸಾಂಖ್ಯಯೋಗ(೭೨)
೩. ಕರ್ಮಯೋಗ(೪೩)
೪. ಜ್ಞಾನಯೋಗ (೪೨)
೫. ಸಂನ್ಯಾಸಯೋಗ (೨೯)
೬. ಆತ್ಮಸಂಯಮ (ಧ್ಯಾನ)ಯೋಗ(೪೭)
೭. ಜ್ಞಾನವಿಜ್ಞಾನಯೋಗ(೨೩)
೮. ಅಕ್ಷರಬ್ರಹ್ಮಯೋಗ(೨೮)
೯. ರಾಜವಿದ್ಯಾ-ರಾಜಗುಹ್ಯಯೋಗ(೩೪)
೧೦. ವಿಭೂತಿಯೋಗ (೪೨)
೧೧. ವಿಶ್ವರೂಪದರ್ಶನಯೋಗ(೫೫)
೧೨. ಭಕ್ತಿಯೋಗ(೨೦)
೧೩. ಕ್ಷೇತ್ರಕ್ಷೇತ್ರಜ್ಞಯೋಗ (೩೦)
೧೪. ಗುಣತ್ರಯವಿಭಾಗಯೋಗ(೨೭)
೧೫. ಪುರುಷೋತ್ತಮಯೋಗ(೨೦)
೧೬. ದೈವಾಸುರಸಂಪದ್ವಿಭಾಗಯೋಗ(೨೪)
೧೭. ಶ್ರದ್ಧಾತ್ರಯವಿಭಾಗಯೋಗ(೨೮)
೧೮. ಮೋಕ್ಷಸನ್ಯಾಸಯೋಗ(೭೮)

ಇವುಗಳನ್ನು ಆರಾರು ಅಧ್ಯಾಯಗಳ ಒಟ್ಟು ಮೂರು ಭಾಗಗಳನ್ನಾಗಿ ವಿಂಗಡಿಸಿರುವರು; ಪ್ರಥಮ ಷಟ್ಕ (ಶ್ಲೋ.೨೮೦)ದಲ್ಲಿ ತತ್ತ್ವಜ್ಞಾನದ ಉಪಾಯವಾದ ಕರ್ಮಯೋಗವೂ, ದ್ವಿತೀಯ(ಶ್ಲೋ.೨೦೯)ಷಟ್ಕದಲ್ಲಿ ಮೋಕ್ಷಕ್ಕೆ ಸಾಧನವಾದ ತತ್ತ್ವಜ್ಞಾನದ ಸ್ವರೂಪವೂ, ತೃತೀಯ(ಶ್ಲೋ.೨೧೨)ಷಟ್ಕದಲ್ಲಿ ಇವೆರಡರ ವಿವರಣೆಯೂ ಬಂದಿದೆ.

---

೧. ಸರ್ವೋಪನಿಷದೋ ಗಾವೋ ದೋಗ್ಧಾ ಗೋಪಾಲನಂದನಃ।
ಪಾರ್ಥೋ ವತ್ಸಃ ಸುಧೀರ್ಭೋಕ್ತಾ ದುಗ್ಧಂ ಗೀತಾಮೃತಂ ಮಹತ್ ॥

೨. ಅಧ್ಯಾಯಗಳ ಹೆಸರುಗಳು ಪ್ರಾಚೀನ ಪ್ರತಿಗಳಲ್ಲಿ ದೊರೆಯುವುದಿಲ್ಲ. ಪ್ರಾಯಃ ಇವು ಅರ್ವಾಚೀನರ ಪರಿಕಲ್ಪನೆ.

೧. ಗೀತಾಭಾಷ್ಯ

ಗೀತಾಭಾಷ್ಯ ಶ್ರೀಮದಾಚಾರ್ಯರಿಂದ ರಚಿತವಾದ ಸರ್ವಮೂಲಗ್ರಂಥಗಳಲ್ಲಿ ರಚನೆಯ ಕ್ರಮದಲ್ಲಿ ಮೊದಲನೆಯದು. ಈ ಮಾತು ಅಣುಮಧ್ವಚರಿತ ಹಾಗು ಗ್ರಂಥಮಾಲಿಕಾಸ್ತೋತ್ರಗಳಲ್ಲಿ ಸ್ಪಷ್ಟವಾಗಿ ಬಂದಿದೆ :

ಗೀತಾಭಾಷ್ಯಂ ವಿಧಾಯಾದೌ ದೃಷ್ಟ್ವಾ ಚ ಬದರೀತಟೇ ।
ವೇದವ್ಯಾಸಸ್ಯ ಚಾದೇಶಾತ್ ಸೂತ್ರಭಾಷ್ಯಮಥಾಕರೋತ್ ॥

– ಅಣುಮಧ್ವಚರಿತ (ಶ್ಲೋ.೭)

ಗೀತಾಭಾಷ್ಯಂ ವಿಧಾಯಾದೌ ಪ್ರಥಮಂ ತುಷ್ಟಿದಂ ಹರೇಃ ।

– ಗ್ರಂಥಮಾಲಿಕಾಸ್ತೋತ್ರಮ್ (ಶ್ಲೋ. ೩)

ಸುಮಧ್ವವಿಜಯದ ವಿವರಗಳೂ ಇದಕ್ಕೆ ಸಂವಾದಿಯಾಗಿವೆ. (ಇದು ದಕ್ಷಿಣ-ದಿಗ್ವಿಜಯವನ್ನು ಪೂರೈಸಿ ಉಡುಪಿಗೆ ಮರಳುತ್ತಲೇ ಅವರು ರಚಿಸಿದ ಕೃತಿ.) ಮನನ ಮಾಡಿದಷ್ಟೂ ಅಕ್ಷಯವೆನ್ನಿಸುವ ವಿಷಯಗಳಿಂದ ತುಂಬಿರುವ ಅಪೂರ್ವಕೃತಿ ಎಂಬ ಹಿರಿಮೆ ಇದರದ್ದು ಎಂಬ ಮಾತು ಸುಮಧ್ವವಿಜಯದಲ್ಲಿದೆ[೧]. ಇದು ಅವರ ಸಕಲಗ್ರಂಥಗಳಿಗೂ ಅಷ್ಟೇ ಸಮರ್ಪಕವಾಗಿ ಅನ್ವಯಿಸುವ ಹಿರಿಮೆ.

ಆಚಾರ್ಯರು ಇದರ ಹಿಂದೆ ಒಂದು ಪ್ರತಿಯನ್ನು ಅಚ್ಯುತಪ್ರೇಕ್ಷರು ಹಾಗು ಜ್ಯೇಷ್ಠಯತಿಗಳಿಗೆ ನೀಡಿ, ಮೂಲಪ್ರತಿಯನ್ನು ಬದರಿಯಲ್ಲಿ ಶ್ರೀನಾರಾಯಣದೇವರಿಗೆ ಸಮರ್ಪಿಸಿದರು. ಅದನ್ನು ಬಹುವಾಗಿ ಪ್ರಶಂಸಿದ ಶ್ರೀವೇದವ್ಯಾಸರು ಆರಂಭದಲ್ಲಿ ಒಂದು ತಿದ್ದುಪಡಿಯನ್ನು ಸೂಚಿಸಿದರಂತೆ:

ದೇವಂ ನಾರಾಯಣಂ ನತ್ವಾ ಸರ್ವದೋಷವಿವರ್ಜಿತಮ್ ।
ಪರಿಪೂರ್ಣಂ ಗುರೂಂಶ್ಚಾನ್ ಗೀತಾರ್ಥಂ[೨] ವಕ್ಷ್ಯಾಮಿ ಶಕ್ತಿತಃ ॥

ಎಂಬ ಮೊದಲ ಶ್ಲೋಕದಲ್ಲಿ 'ಶಕ್ತಿತಃ' ಎಂದಿರುವಿರಿ; ಇದರ ಬದಲು 'ಲೇಶತಃ' ಎಂಬ ಪದವನ್ನು ಹಾಕಿರಿ. ಪೂರ್ಣಪ್ರಮತಿಗಳಾದ ನಿಮ್ಮ ಶಕ್ತಿ ಇಷ್ಟುಮಾತ್ರ ಎಂಬ ತಪ್ಪು ತಿಳುವಳಿಕೆ ಓದುಗರಿಗೆ ಬರದಿರಲಿ. ಅದಕ್ಕಾಗಿಯೇ ಈ ತಿದ್ದುಪಡಿ. ಈ ಮಾತು ಮಹಾಭಾರತದಲ್ಲಿ ಭೀಮನನ್ನು ಪ್ರಶಂಸಿಸುತ್ತ ನುಡಿದ ಶ್ರೀಕೃಷ್ಣನ ಮಾತಿನಂತಿದೆ:

---

೧. ಅವ್ಯಯಂ ಸತತಮಪ್ಯುಪಭುಕ್ತ್ಯಾ ವಿತ್ತಮಗ್ರ್ಯಮಿವ ದೂರಯಿಯಾಸುಃ ।
ಜ್ಯಾಯಸೇ ಸಗುರವೇ ಹರಿಗೀತಾಭಾಷ್ಯಮೇಷ ವಿರಚಯ್ಯ ತದಾಽದಾತ್ ॥

-ಸುಮಧ್ವವಿಜಯ (೬/೩೨)

೨. ಅನ್ಯೈಃ ಸ್ವಪಕ್ಷನಿಕ್ಷಿಪ್ತದೃಷ್ಟಿಭಿಃ ಸ್ವಾಭಿಪ್ರಾಯೋ ಭಗವದ್ಗೀತಾರ್ಥತ್ವೇನಾರೋಪ್ಯೋಕ್ತಃ ।
ಅಹಂ ತು ಗೀತಾರ್ಥಮೇವ ವಕ್ಷ್ಯಾಮೀತಿ ಸೂಚನಾತ್ । - ಪ್ರಮೇಯದೀಪಿಕಾ

ಯತ್ಕಿಂಚಾತ್ಮನಿ ಕಲ್ಯಾಣಂ ಸಂಭಾವಯಸಿ ಪಾಂಡವ ।
ಸಹಸ್ರಗುಣಮಪ್ಯೇತತ್ ತ್ವಯಿ ಸಂಭಾವಯಾಮ್ಯಹಮ್ ॥

ಗೀತಾಭಾಷ್ಯವು ಸಮಗ್ರ ಗೀತೆಗೆ ರಚಿತವಾಗಿರುವ ಭಾಷ್ಯ. ಆರಂಭದಲ್ಲಿ ಗೀತೆ ಮತ್ತು ಅದನ್ನೊಳಗೊಂಡ ಮಹಾಭಾರತದ ಮಹತ್ತ್ವವನ್ನು ಅನೇಕ ಆಧಾರಗಳನ್ನಿತ್ತು ನಿರೂಪಿಸಿರುವರು. ವಿಷ್ಣುಸಹಸ್ರನಾಮವೂ ಗೀತೆಯಷ್ಟೇ ಹಿರಿದಾದ ಕೃತಿ ಎಂಬ ಅಂಶವನ್ನು ಸಾರಿರುವರು. 'ಮಹಾಭಾರತವು ಪಾರಿಜಾತವಾದರೆ, ಗೀತೆ ಅದರ ಮಧು' ಎಂಬುದಾಗಿ ಅವರು ಗೀತೆಯನ್ನು ವರ್ಣಿಸಿರುವ ಪರಿ ಅನನ್ಯವಾದುದು. ಗೀತೆಗೆ ಭಾಷ್ಯ ಬರೆದ ಬೇರಾರೂ ಅದರ ಮಹತ್ತ್ವವನ್ನು ಇಷ್ಟು ಸ್ಫುಟವಾಗಿ ನಿರೂಪಿಸಿಲ್ಲ ಎಂಬುದನ್ನು ಗಮನಿಸಬೇಕು. ಅವತಾರಿಕೆಯಲ್ಲಿ ವ್ಯಾಸಾವತಾರದ ಹಿನ್ನೆಲೆ, ವೇದ ಓದುವ ಅವಕಾಶವಿಲ್ಲದ ಸ್ತ್ರೀಶೂದ್ರಾದಿಗಳಿಗೂ ಲೋಕೋಪಯೋಗಿಯಾದ ತತ್ತ್ವಜ್ಞಾನ ಲಭಿಸಲೆಂದು ಮಹಾಭಾರತದ ರಚನೆ ಎಂಬ ಅಂಶ, ಮಹಾಭಾರತವು 'ಸರ್ವವೇದಾದ್ಯರ್ಥೋಪಬೃಂಹಿತ'ವೂ, 'ತದನುಕ್ತಕೇವಲೇಶ್ವರಜ್ಞಾನದೃಷ್ಟಾರ್ಥಯುಕ್ತ'ವೂ ಆದ ಮಹತ್ತರ ಕೃತಿ ಮೊದಲಾದ ವಿಷಯಗಳನ್ನು ತಿಳಿಸಿ, ಅನಂತರ ಅದರ ಸಮರ್ಥನೆಗೆಂದು ನಾರಾಯಣಾಷ್ಟಾಕ್ಷರಕಲ್ಪ, ಉಪನಾರದೀಯ, ನಾರದೀಯ, ಸ್ಕಾಂದ ಮೊದಲಾದ ಆಕರಗ್ರಂಥಗಳಿಂದ ಪ್ರಮಾಣವಚನಗಳನ್ನು ಉದಾಹರಿಸಿರುವರು.

ಅನಂತರ 'ಸರ್ವಭಾರತಾರ್ಥಸಂಗ್ರಹಾಂ ವಾಸುದೇವಾರ್ಜುನಸಂವಾದರೂಪಾಂ ಭಾರತಪಾರಿಜಾತಮಧುಭೂತಾಂ ಗೀತಾಮುಪನಿಬಂಧ', ಎಂದು ಗೀತೆಯ ಮಹತ್ತ್ವವನ್ನು ಸಾರಿ ಮುಂದೆ ಎರಡನೆಯ ಅಧ್ಯಾಯದ 'ಅಶೋಚ್ಯಾನನ್ವಶೋಚಸ್ತ್ವಂ' ಎಂಬ ಶ್ಲೋಕದಿಂದ ಭಾಷ್ಯವನ್ನು ಪ್ರಾರಂಭಿಸಿರುವರು. ಗೀತೆಯ ಪ್ರತಿಶ್ಲೋಕಕ್ಕೂ ಆಚಾರ್ಯರು ಭಾಷ್ಯ ರಚಿಸಿಲ್ಲ. ಆದರೆ ಪ್ರತಿಶ್ಲೋಕದ ಅರ್ಥವೂ ಬರುವಂತೆ ಭಾಷ್ಯ ರಚಿಸಿರುವರು. 'ಪ್ರಜ್ಞಾವಾದ', 'ವೇದವಾದ', 'ನಿರ್ವೇದ', 'ತ್ರೈಗುಣ್ಯವಿಷಯ' ಮೊದಲಾದ ಪದಗಳಿಗೂ, 'ಮಾ ಫಲೇಷು ಕದಾಚನ', 'ಸ್ಥಿತ್ವಾಸ್ಯಾಮಂತಕಾಲೇಽಪಿ', 'ತಸ್ಯ ಕಾರ್ಯಂ ನ ವಿದ್ಯತೇ', 'ಕರ್ಮಣೈವ ಹಿ ಸಂಸಿದ್ಧಿಮಾಸ್ಥಿತಾ ಜನಕಾದಯಃ', 'ವಾಸುದೇವಃ ಸರ್ವಂ', 'ಸರ್ವಧರ್ಮಾನ್ ಪರಿತ್ಯಜ್ಯ', 'ಪಂಡಿತಾಃ ಸಮದರ್ಶಿನಃ', 'ಸಮಬುದ್ಧಿರ್ವಿಶಿಷ್ಯತೇ', 'ಕ್ಷರಶ್ಚಾಕ್ಷರ ಏವ ಚ' ಮೊದಲಾದ ವಾಕ್ಯಗಳಿಗೆ ಅವರು ನೀಡಿರುವ ವಿವರಣೆ ಗೀತಾರ್ಥಚಿಂತನೆಗೆ ವಿನೂತನ ಆಯಾಮವನ್ನೇ ನೀಡಿದೆ. ಇವು ಮಾತ್ರವಲ್ಲದೆ ಪ್ರತಿಯೊಂದು ಪದ ವಾಕ್ಯಗಳಿಗೆ ಅವರು ನೀಡಿದ ವಿವರಣೆ ಗೀತಾರ್ಥಪ್ರಪಂಚಕ್ಕೆ ವಿನೂತನವಾದುದು. ಭಗವಂತನು ಸಾಕಾರನೇ ಹೊರತು ನಿರಾಕಾರನಲ್ಲ ಎಂಬುದಕ್ಕೆ ವಿಶ್ವರೂಪಾಧ್ಯಾಯಕ್ಕಿಂತಲೂ ಹೆಚ್ಚಿನ ಆಧಾರ ಬೇಕೆ? ಗೀತೆ ನಿಷೇಧಿಸಿರುವುದು ಅಮುಖ್ಯ ಫಲಗಳಾದ ಸ್ವರ್ಗಾದಿಗಳನ್ನೇ ಹೊರತು

ಮುಖ್ಯ ಫಲಗಳಾದ ಜ್ಞಾನ, ಭಕ್ತ್ಯಾದಿಗಳನ್ನಲ್ಲ; ಕರ್ಮಾಚರಣೆ ಅಜ್ಞಾನಿಗಳಿಗೆ ಹೇಗೋ ಜ್ಞಾನಿಗಳಿಗೂ ಹಾಗೆಯೇ ಅವಶ್ಯ ಕರ್ತವ್ಯ.] ಭಗವತ್ಪ್ರೀತಿಗೆಂದು ನಿಷ್ಕಾಮಕರ್ಮದ ಅನುಷ್ಠಾನ ಅಜ್ಞಾನಿಗಳಿಗೆ ಅಪರೋಕ್ಷಜ್ಞಾನಕ್ಕೂ ಜ್ಞಾನಿಗಳಿಗೆ ಮೋಕ್ಷದಲ್ಲಿ ಆನಂದಾತಿಶಯಕ್ಕೂ ಸಾಧನ. ದ್ವೇಷಾದಿಗಳಿಂದ ಮುಕ್ತಿಯಿಲ್ಲ; ಭಕ್ತಿಯೇ ಮುಕ್ತಿಗೆ ಸಾಧನ ಮೊದಲಾದ ವಿಚಾರಗಳನ್ನು ಸಾಧಾರವಾಗಿ ಪ್ರತಿಪಾದಿಸಿರುವರು.

ವಿಭೂತಿಯೋಗದಲ್ಲಿ ಬಂದಿರುವ ವಿಚಾರಗಳು ಮೇಲ್ನೋಟಕ್ಕೆ ಸರಳ; ಆದರೆ ವಿಚಾರ ಮಾಡಿದರೆ ಅಲ್ಲೂ ಸಾಕಷ್ಟು ಗೊಂದಲಕ್ಕೆ ಅವಕಾಶವಿದೆ. ಆಯುಧಗಳಲ್ಲಿ ಸುದರ್ಶನದ ಬದಲು ವಜ್ರ; ಪಾಂಡವರಲ್ಲಿ ಭೀಮಸೇನನ ಬದಲು ಅರ್ಜುನ; ಯಜ್ಞಗಳಲ್ಲಿ ಜ್ಞಾನಯಜ್ಞದ ಬದಲು ಜಪಯಜ್ಞ; ವೇದಗಳಲ್ಲಿ ಋಗ್ವೇದದ ಬದಲು ಸಾಮವೇದ ಇವೆಲ್ಲ ಹೇಗೆ? ನಕ್ಷತ್ರವೇ ಅಲ್ಲದ ಚಂದ್ರ ನಕ್ಷತ್ರಗಳಲ್ಲಿ ಶ್ರೇಷ್ಠ; ಜಲಚರವೇ ಅಲ್ಲದ ವರುಣ ಜಲಚರಗಳಲ್ಲಿ ಶ್ರೇಷ್ಠ ಹೇಗೆ? ಈ ಬಗ್ಗೆ ಇತರ ಯಾವ ಭಾಷ್ಯದಲ್ಲೂ ಉತ್ತರವಿಲ್ಲ; ಆದರೆ ಮಧ್ವಭಾಷ್ಯದಲ್ಲಿ ಚೆಲ್ಲುವ ಬೆಳಕು ಅತ್ಯಂತ ಅಪೂರ್ವ.

ಗೀತೆಯ ವಿಭೂತಿಯೋಗದಲ್ಲಿ ನಾಲ್ಕುತೆರನಾದ ವಿಭೂತಿ ನಿರೂಪಿತವಾಗಿವೆ. 'ಮುನೀನಾಮಪ್ಯಹಂ ವ್ಯಾಸಃ', 'ವೃಷ್ಣೀನಾಂ ವಾಸುದೇವೋಽಸ್ಮಿ'. 'ಸಿದ್ಧಾನಾಂ ಕಪಿಲೋ ಮುನಿಃ', 'ರಾಮಃ ಶಸ್ತ್ರಭೃತಾಮಹಂ' ಇವೆಲ್ಲ ಸಾಕ್ಷಾದ್ವಿಭೂತಿಗಳು; 'ಇಂದ್ರಿಯಗಳಲ್ಲಿ ಮನಸ್ಸು', 'ರುದ್ರರಲ್ಲಿ ಶಂಕರ', 'ಆನೆಗಳಲ್ಲಿ ಐರಾವತ', 'ಕುದುರೆಗಳಲ್ಲಿ ಉಚ್ಚೈಶ್ರವಸ್ಸು' ಮೊದಲಾದವುಗಳು ಸಜಾತೀಯಶ್ರೈಷ್ಠ್ಯಪ್ರದವಿಭೂತಿಗಳು; 'ಪಾಂಡವರಲ್ಲಿ ಅರ್ಜುನ ಭೀಮನ ಅನಂತರ'. 'ಆಯುಧಗಳಲ್ಲಿ ವಜ್ರಾಯುಧ ಸುದರ್ಶನದ ಅನಂತರ', 'ಯಜ್ಞಗಳಲ್ಲಿ ಜಪಯಜ್ಞ ಜ್ಞಾನಯಜ್ಞದ ಅನಂತರ' ಇವೆಲ್ಲ ಸಜಾತೀಯ - ಏಕದೇಶ ಶ್ರೈಷ್ಠ್ಯಪ್ರದವಿಭೂತಿಗಳು. 'ನಕ್ಷತ್ರಗಳಲ್ಲಿ ಚಂದ್ರ', 'ಜಲಚರಗಳಲ್ಲಿ ವರುಣ' ಎಂಬವು ವಿಜಾತೀಯಶ್ರೈಷ್ಠ್ಯಪ್ರದ ವಿಭೂತಿಗಳು. ಇದು ಅವರು ನೀಡಿರುವ ವಿವರಣೆ.

[ಹನ್ನೆರಡನೆಯ ಅಧ್ಯಾಯದಲ್ಲಿ; 'ನಿನ್ನ ಉಪಾಸನೆ ಶ್ರೇಷ್ಠವೋ' 'ಅವ್ಯಕ್ತೋಪಾಸನೆ ಶ್ರೇಷ್ಠವೋ' ಎಂಬ ಅರ್ಜುನನ ಪ್ರಶ್ನೆಗೆ 'ಸಗುಣೋಪಾಸನೆ ಶ್ರೇಷ್ಠವೋ? ನಿರ್ಗುಣೋಪಾಸನೆ ಶ್ರೇಷ್ಠವೋ?' ಎಂಬುದಾಗಿ ಅದ್ವೈತದ ಭಾಷ್ಯದ ವಿವರಣೆಯಾಗಿದೆ. ಆದರೆ ಶ್ರೀಮದಾಚಾರ್ಯರು 'ನಾರಾಯಣೋಪಾಸನೆ ಶ್ರೇಷ್ಠವೋ, ಮಹಾಲಕ್ಷ್ಮಿಯ ಉಪಾಸನೆ ಶ್ರೇಷ್ಠವೋ? ಇಬ್ಬರ ಉಪಾಸನೆಯಿಂದಲೂ ಮೋಕ್ಷ ದೊರೆಯುವುದಲ್ಲವೇ!' ಎಂಬುದು ಅರ್ಜುನನ ಆಶಯ ಎಂದು ಸಾಧಾರವಾಗಿ ವಿವೇಚಿಸಿ ನಾರಾಯಣನ ಉಪಾಸನೆಯೇ ಶ್ರೇಷ್ಠ ಎಂಬುದು ಶ್ರೀಕೃಷ್ಣನ ಸಂದೇಶ ಎಂದು ಸಾರಿರುವರು.]

'ಮಾತ್ರಸ್ಪರ್ಶಾಸ್ತು ಕೌಂತೇಯ ಶೀತೋಷ್ಣಸುಖದುಃಖದಾಃ' ಎಂಬುದನ್ನು ಕಾಕುಸ್ವರವಾಗಿ ಓದಿಕೊಳ್ಳಬೇಕು ಎಂಬ ಅಂಶ, ಅದರಲ್ಲಿನ 'ತು' ಎಂಬುದರ ಸ್ವಾರಸ್ಯ, 'ಗತಾಸೂನಗತಾಂಸೂಂಶ್ಚ' ಎಂಬಲ್ಲಿ 'ಚ' ಎಂಬುದನ್ನು 'ಇವ' ಎಂಬ ಅರ್ಥದಲ್ಲಿ ನೋಡಬೇಕು ಎಂಬ ವಿವರಣೆ ಹೀಗೆ ಇಲ್ಲಿಯ ಒಂದೊಂದೂ ಅಪೂರ್ವಾರ್ಥದ ಗಣಿಯೇ ಆಗಿದೆ.

೨. ಗೀತಾತಾತ್ಪರ್ಯನಿರ್ಣಯ

ಗೀತಾತಾತ್ಪರ್ಯ ಅಥವಾ ಗೀತಾತಾತ್ಪರ್ಯನಿರ್ಣಯ ಭಗವದ್ಗೀತೆಯ ಮೇಲೆ ಶ್ರೀಮದಾಚಾರ್ಯರು ರಚಿಸಿರುವ ಮತ್ತೊಂದು ಗ್ರಂಥ (ಗ್ರಂಥಸಂಖ್ಯೆ ೧೩೦೦) ಗೀತಾಭಾಷ್ಯ ರಚಿಸಿದಾಗ ಅವರ ವಯಸ್ಸು ಹದಿನಾರರ ಆಸುಪಾಸಿನದಷ್ಟೇ! ಗೀತಾ-ತಾತ್ಪರ್ಯನಿರ್ಣಯ ಪ್ರಾಯಃ ಬಹುಕಾಲದ ಅನಂತರದ ಕೃತಿ. ಎರಡರಲ್ಲೂ ಕಾಣುವ ಅವರ ಅತ್ಯಂತ ಖಚಿತವೂ, ಪೂರಕವೂ ಆದ ಪ್ರಾಮಾಣಿಕ ವಿಚಾರ ಸರಣಿ ಅವರ ಪೂರ್ಣಪ್ರಜ್ಞತ್ವಕ್ಕೆ ಮತ್ತೊಂದು ರೀತಿಯಲ್ಲಿ ದ್ಯೋತಕ.

ಶ್ರೀಜಯತೀರ್ಥರು ಇದರ ಬಗ್ಗೆ ಹೀಗೆ ನುಡಿದಿರುವರು :

> 'ವ್ಯಾಖ್ಯಾತತ್ವೇಽಪಿ ಗೀತಾಯಾಸ್ತದರ್ಥಸ್ಯ ಶಿಷ್ಯಾಣಾಂ ಬುದ್ಧ್ಯಾರೋಹಾರ್ಥಂ
> ಶಬ್ದಾನುಕರಣಾದ್ಯಂತರೇಣ ಪುನಃ ತಾತ್ಪರ್ಯಮೇವೋಚ್ಯತೇ' – ನ್ಯಾಯದೀಪಿಕಾ

ಬ್ರಹ್ಮಸೂತ್ರಭಾಷ್ಯ ರಚಿಸಿದ ಆಚಾರ್ಯರು ಅನುವ್ಯಾಖ್ಯಾನವನ್ನು ರಚಿಸುತ್ತ ಅದಕ್ಕೆ ಕೊಟ್ಟಿರುವ ಕಾರಣ ಇದರ ರಚನೆಗೂ ಅನ್ವಯಿಸುತ್ತದೆ. ಗೀತಾಭಾಷ್ಯದ ಅರ್ಥದ ಸ್ಪಷ್ಟೀಕರಣಕ್ಕೆ ಗೀತಾತಾತ್ಪರ್ಯ ರಚಿತವಾಗಿದೆ ಎಂದು ಭಾವಿಸಬಹುದು. ಅವರು ಇದರ ಆರಂಭದಲ್ಲಿ ಒಂದೇ ಮಾತಿನಲ್ಲಿ ಗೀತೆಯ ತಾತ್ಪರ್ಯವನ್ನು ಸಂಗ್ರಹಿಸಿರುವ ರೀತಿ ಅನ್ಯಾದೃಶವಾದುದು:

> "ಸ್ವವಿಹಿತವೃತ್ತ್ಯಾ ಭಕ್ತ್ಯಾ ಭಗವದಾರಾಧನಮೇವ ಪರಮೋ ಧರ್ಮಃ, ತದ್ವಿರುದ್ಧಃ ಸರ್ವೋಽಪ್ಯಧರ್ಮಃ, ಭಗವದಧೀನತ್ವಾತ್ ಸರ್ವಸ್ಯ" ಇತಿ ಬೋಧಯತಿ ಭಗವಾನ್ ನಾರಾಯಣಃ ।

'ತಮ್ಮ ಪಾಲಿಗೆ ವಿಹಿತವಾದ ಕರ್ತವ್ಯಕರ್ಮದಿಂದ ಭಕ್ತಿಯಿಂದ ಭಗವಂತನನ್ನು ಆರಾಧಿಸುವುದೇ ಸಕಲರ ಪರಮಧರ್ಮ. ಅದಕ್ಕೆ ವಿರುದ್ಧವಾದುದೆಲ್ಲವೂ ಅಧರ್ಮ. ಸರ್ವವೂ ಭಗವದಧೀನವಾದುದರಿಂದ – ಎಂಬುದಾಗಿ ಭಗವಂತನಾದ ನಾರಾಯಣನು ಬೋಧಿಸಿರುವನು.'

ಅನಂತರ ಕ್ಷತ್ರಿಯರಿಗೆ ಯುದ್ಧವು ಸ್ವಧರ್ಮ; ಸ್ವಧರ್ಮವನ್ನು ಆಚರಿಸುತ್ತಲೇ

ಭಗವಂತನನ್ನು ಆರಾಧಿಸುವುದು ಎಲ್ಲರ ಕರ್ತವ್ಯ; ಮಿಕ್ಕಿದ್ದು ತ್ಯಾಜ್ಯ. 'ವಿಷ್ಣುಭಕ್ತಿಯೇ ಸರ್ವಸಾಧನಗಳಲ್ಲೂ ಮಿಗಿಲು, ಪರೋಕ್ಷಜ್ಞಾನಿ ಅಪರೋಕ್ಷಜ್ಞಾನಿ ಎಂಬ ಇಬ್ಬರಿಗೂ ಸಹ ಕರ್ಮಯೋಗವು ಅತ್ಯಗತ್ಯ. ಮೋಕ್ಷವು ಭಗವದಧೀನ, ನಿಷಿದ್ಧಕರ್ಮವನ್ನು ತ್ಯಜಿಸಲೇಬೇಕು. ಸರ್ವರಿಗೂ ಭಗವದಾರಾಧನರೂಪ ಸ್ವಧರ್ಮವು ವಿಹಿತ, ನಿಷಿದ್ಧಕರ್ಮಗಳು ತ್ಯಾಜ್ಯ, ಬ್ರಹ್ಮಜ್ಞಾನಿಗೂ ಸ್ವಧರ್ಮವು ವಿಹಿತ, ಅರ್ಜುನ ಉತ್ತಮಾಧಿಕಾರಿ ಹಾಗೂ ಅಪರೋಕ್ಷಜ್ಞಾನಿ, ಭಗವಂತನು ಸರ್ವರಿಂದಲೂ ಭಿನ್ನ, ಸಕಲವೂ ಅವನ ಅಧೀನ, ಅವನು ಯಾರಿಗೂ ಅಧೀನನಲ್ಲ; ಅವನು ಸ್ವತಂತ್ರ, ಸರ್ವೋತ್ತಮ ಹಾಗೂ ಸರ್ವಗುಣಪೂರ್ಣ, ಸರ್ವಶಾಸ್ತ್ರಗಳೂ ಭಗವತ್ಪರ, ಬ್ರಹ್ಮಜ್ಞಾನದಿಂದಲೇ ಮೋಕ್ಷ ಇತ್ಯಾದಿ ಪ್ರಮೇಯಗಳು ಭಗವದ್ಗೀತೆಯ ವಚನಗಳಿಂದಲೇ ಸ್ಪಷ್ಟಪಡುತ್ತವೆ ಎಂಬುದಾಗಿ ತೋರಿಸಿರುವರು.

ಗೀತಾತಾತ್ಪರ್ಯದ ಮುಂದಿನ ಭಾಗದ ವಿಶೇಷಾಂಶಗಳನ್ನು ಹೀಗೆ ಸಂಗ್ರಹಿಸಬಹುದು:

೧) ಗೀತಾಭಾಷ್ಯದಲ್ಲಿನ ವಿವರಗಳನ್ನು ಪ್ರಮಾಣಾಂತರಗಳಿಂದ ಸ್ಥಿರಪಡಿಸುವುದು.

೨) ಅಲ್ಲಿ ಹೇಳದೆ ಇದ್ದ ಅರ್ಥವಿಶೇಷವನ್ನು ತೋರಿಸುವುದು ಹಾಗೂ ಆ ಮೂಲಕ ಮಹಾಭಾರತಕ್ಕೆ ಹತ್ತು ಅರ್ಥಗಳಾಗಿರುವುದರಿಂದ, ಅದರಲ್ಲಿರುವ ಗೀತೆಗೆ ಹತ್ತು ಅರ್ಥಗಳು ಎಂಬ ಮಾತನ್ನು ಈ ರೀತಿಯ ವಿಶೇಷಾರ್ಥಕಥನದಿಂದ ಸ್ಫುಟಪಡಿಸುವುದು. ಇದಕ್ಕೆ ನಿದರ್ಶನವಾಗಿ ೨/೧೧, ೨/೧೬, ೨/೪೭, ೩/೧೭, ೪/೧೩, ೪/೧೮, ೬/೩ ಇತ್ಯಾದಿ ಶ್ಲೋಕಗಳ ವಿವರಣೆಯನ್ನು ಗಮನಿಸಬಹುದು. 'ಮಾ ಫಲೇಷು ಕದಾಚನ' ಎಂಬುದಕ್ಕೆ 'ಸ್ವರ್ಗಾದಿ ಇತರ ಕಾಮನೆಗಳು ಬೇಡ' ಎಂದು ಗೀತಾಭಾಷ್ಯದಲ್ಲಿ ಅರ್ಥೈಸಿದ್ದರೆ, ಗೀತಾತಾತ್ಪರ್ಯದಲ್ಲಿ 'ಫಲವನ್ನು ಪಡೆಯುವುದು ನಿನ್ನ ವ್ಯಾಪ್ತಿಗೆ ಸೇರಿದ್ದಲ್ಲ ಅದನ್ನು ಭಗವಂತನೇ ನೀಡಬೇಕು' ಎಂಬುದಾಗಿ ವಿವರಿಸಿರುವರು.

೩) ಗೀತಾಭಾಷ್ಯದಲ್ಲಿ ವಿವರಣೆ ನೀಡದ ಅನೇಕ ಶ್ಲೋಕಗಳಿಗೆ ಇಲ್ಲಿ ವಿವರಣೆ ನೀಡಿರುವರು. ಉದಾಹರಣೆಗೆ ೨೦/೪೦, ೪/೧, ೪/೧೩ ಇತ್ಯಾದಿಗಳನ್ನು ಗಮನಿಸಬಹುದು.

೪) ಗೀತೆಯಲ್ಲಿನ ಅನೇಕ ಪದಗಳಿಗೆ ಅದರಲ್ಲೂ ವಿಶೇಷವಾಗಿ ವಿಭೂತಿ-ಯೋಗಪ್ರಸಂಗದಲ್ಲಿ ಬರುವ ಮರೀಚಿ, ಮನಃ ಮೊದಲಾದ ಪ್ರತಿಯೊಂದು ಪದಗಳಿಗೂ ಭಗವತ್ಪರವಾದ ನಿರ್ವಚನ ನೀಡಿರುವರು.

೫) ದೇವತಾತಾರತಮ್ಯ, ವಿಶೇಷ, ಅಭಿಮಾನಿದೇವತೆಗಳು ಮೊದಲಾದ ಅನೇಕ ವಿಷಯಗಳನ್ನು ವಿಶೇಷವಾಗಿ ನಿರೂಪಿಸಿರುವರು.

ಗೀತೆ ಉಪದೇಶಿಸಿದ ಯಾದವ ಕೃಷ್ಣನೇ ವಾಸಿಷ್ಠಕೃಷ್ಣರೂಪದಿಂದ ಅದನ್ನು ಜನತೆಗೆ ಪ್ರಚುರಪಡಿಸಿರುವನು ಎಂಬ ಮಾತನ್ನು ತಿಳಿಸಿರುವುದು ಇದರ ಮತ್ತೊಂದು ವಿಶೇಷ:

''ಏಕಾಂತೇ ಕಥಯನ್ನಪಿ ವ್ಯಾಸರೂಪೇಣ ತದೇವ ಲೋಕೇ ಪ್ರಕಾಶಯಿಷ್ಯತಿ ಹಿ''

– ಗೀತಾತಾತ್ಪರ್ಯ(೨/೧೨)

'ತಾವು ವಾಯುದೇವರ ಅವತಾರ' ಎಂಬುದನ್ನು ಗೀತಾಭಾಷ್ಯದ ಕೊನೆಯಲ್ಲಿ ತಿಳಿಸಿರುವಂತೆ ಇದರ ಕೊನೆಯಲ್ಲೂ 'ಯಸ್ಯ ತ್ರೀಣ್ಯುದಿತಾನಿ ವೇದವಚನೇ' ಎಂಬು-ದಾಗಿಯೇ ತಿಳಿಸಿರುವರು.

ಭಗವದ್ಗೀತೆಯ ಪ್ರತಿಯೊಂದು ಅಧ್ಯಾಯದ ಮಹತ್ತ್ವವನ್ನು ಸಹ ಅವರು ತಮ್ಮ ಗೀತಾಭಾಷ್ಯ ಹಾಗೂ ಗೀತಾತಾತ್ಪರ್ಯನಿರ್ಣಯಗಳಲ್ಲಿ ಅವತಾರಿಕಾರೂಪವಾಗಿ ನೀಡಿರುವರು :

೩. ಆತ್ಮಸ್ವರೂಪಂ ಜ್ಞಾನಸಾಧನಂ ಚೋಕ್ತಂ ಪೂರ್ವತ್ರ। ಜ್ಞಾನಸಾಧನತ್ವೇನಾಕರ್ಮ ಏನಿಂದ್ಯ ಕರ್ಮ ವಿಧೀಯತ ಉತ್ತರಾಧ್ಯಾಯೇ। – ಗೀ. ಭಾ.

ಜ್ಞಾನಂ ಯೋಗಶ್ಚೋಕ್ತೌ। ತತ್ರ ಕರ್ಮಯೋಗಂ ವಿಶೇಷತಃ ಪ್ರಪಂಚಯತ್ಯ-ನೇನಾಧ್ಯಾಯೇನ। –ಗೀ. ತಾ.

೪. ಬುದ್ಧೇಃ ಪರಸ್ಯ ಮಾಹಾತ್ಮ್ಯಂ ಕರ್ಮಭೇದೋ ಜ್ಞಾನಮಾಹಾತ್ಮ್ಯಂ ಚೋಚ್ಯತೇಽಸ್ಮಿ-ನ್ನಧ್ಯಾಯೇ। – ಗೀ. ಭಾ.

ಉಕ್ತಯೋರ್ಜ್ಞಾನಕರ್ಮಣೋರುಭಯೋರ್ವಿಶೇಷವಿಸ್ತರಾತ್ಮಕೋಽಯಮಧ್ಯಾಯಃ – ಗೀ. ತಾ.

೫. ತೃತೀಯಾಧ್ಯಾಯೋಕ್ತಮೇವ ಕರ್ಮಯೋಗಂ ಪ್ರಪಂಚಯತ್ಯನೇನಾಧ್ಯಾಯೇನ – 'ಯದೃಚ್ಛಾಲಾಭಸಂತುಷ್ಟಃ' ಇತ್ಯಾದಿ ಸಂನ್ಯಾಸಮ್, 'ಕುರು ಕರ್ಮೈವ' ಇತ್ಯಾದಿ ಕರ್ಮಯೋಗಂ ಚ। – ಗೀ. ಭಾ.

ಯೋಗಸಂನ್ಯಾಸಯೋರ್ಲಕ್ಷಣಂ ಸ್ಪಷ್ಟಯತ್ಯನೇನಾಧ್ಯಾಯೇನ। – ಗೀ. ತಾ.

೬. ಜ್ಞಾನಾಂತರಂಗಂ ಸಮಾಧಿಯೋಗಮಾಹಾನೇನಾಧ್ಯಾಯೇನ। – ಗೀ. ಭಾ.

ಧ್ಯಾನಮತ್ರೋಚ್ಯತೇ। – ಗೀ. ತಾ.

೭. ಸಾಧನಂ ಪ್ರಾಧಾನ್ಯೇನೋಕ್ತಮತೀತೈರಧ್ಯಾಯೈಃ। ಉತ್ತರೈಸ್ತು ಷಡ್ಭಿರ್ಭಗವನ್ಮಾಹಾತ್ಮ್ಯಂ ಪ್ರಾಧಾನ್ಯೇನಾಹ। – ಗೀ. ಭಾ.

ಭಗವನ್ಮಹಿಮಾ ವಿಶೇಷತ ಉಚ್ಯತೇ। – ಗೀ. ತಾ.

೮. ಮರಣಕಾಲಕರ್ತವ್ಯಗತ್ಯಾದ್ಯಸ್ಮಿನ್ನಧ್ಯಾಯ ಉಪದಿಶತಿ। – ಗೀ. ಭಾ.

ಉಕ್ತವ್ಯಾಖ್ಯಾನಪೂರ್ವಕಂ ಬ್ರಹ್ಮಪ್ರಾಪ್ತಿರುಚ್ಯತೇ। – ಗೀ. ತಾ.

೯. ಸಪ್ತಮಾಧ್ಯಾಯೋಕ್ತಂ ಸ್ಪಷ್ಟಯತ್ಯಸ್ಮಿನ್ನಧ್ಯಾಯೇ। – ಗೀ. ಭಾ.

ಸಪ್ತಮೋಕ್ತಂ ಪ್ರಪಂಚಯತಿ। - ಗೀ. ತಾ.

೧೦. ಉಪಾಸನಾರ್ಥಂ ವಿಭೂತೀರ್ವಿಶೇಷಕಾರಣತ್ವಂ ಚ ಕೇಷಾಂಚಿದನೇನ ಅಧ್ಯಾಯೇನಾಹ। -ಗೀ.ಭಾ.

೧೧. ಯಥಾ ಶ್ರುತೇ ಧ್ಯಾನಂ ಶಕ್ಯಂ ತಥಾ ಸ್ವರೂಪಸ್ಥಿತಿರನೇನಾಧ್ಯಾಯೇನೋಚ್ಯತೇ। - ಗೀ.ಭಾ.

೧೨. ಅವ್ಯಕ್ತೋಪಾಸನಾದ್ ಭಗವದುಪಾಸನಸ್ಯೋತ್ತಮತ್ವಂ ಪ್ರದರ್ಶ್ಯ ತದುಪಾಯಂ ಪ್ರದರ್ಶಯತ್ಯಸ್ಮಿನ್ನಧ್ಯಾಯೇ। - ಗೀ.ಭಾ.

ಸಾಧನನಿರ್ಣಯೋಽತ್ರ। - ಗೀ.ತಾ.

೧೩. ಪೂರ್ವೋಕ್ತಜ್ಞಾನಜ್ಞೇಯಕ್ಷೇತ್ರಪುರುಷಾನ್ ಪಿಂಡೀಕೃತ್ಯ ವಿವಿಚ್ಯ ದರ್ಶಯತ್ಯನೇನಾಧ್ಯಾಯೇನ। - ಗೀ. ಭಾ.

ಸರ್ವಾರ್ಥಸಂಕ್ಷೇಪೋಽಯಮ್। - ಗೀ. ತಾ.

೧೪. ಸಾಧನಂ ಪ್ರಾಧಾನ್ಯೇನೋತ್ತರೈರಧ್ಯಾಯೈರ್ವಕ್ತಿ। - ಗೀ. ಭಾ.

ಕ್ಷೇತ್ರಕ್ಷೇತ್ರಜ್ಞಸಂಯೋಗಸ್ಪಷ್ಟೀಕರಣಪೂರ್ವಕಂ ತ್ರೈಗುಣ್ಯಂ ವಿವಿಚ್ಯ ದರ್ಶಯತಿ। - ಗೀ. ತಾ.

೧೫. ಸಂಸಾರಸ್ವರೂಪತದತ್ಯಯೋಪಾಯವಿಜ್ಞಾನಾನ್ಯಸ್ಮಿನ್ನಧ್ಯಾಯೇ ದರ್ಶಯತಿ। -ಗೀ.ಭಾ.

ತ್ರಯೋದಶೋಕ್ತಂ ವಿವಿಚ್ಯ ದರ್ಶಯತಿ। - ಗೀ. ತಾ.

೧೬. ಪುಮರ್ಥಸಾಧನವಿರೋಧೀನ್ಯನೇನಾಧ್ಯಾಯೇನ ದರ್ಶಯತಿ। - ಗೀ. ಭಾ.

ದೇವಾಸುರಲಕ್ಷಣಮ್। - ಗೀ. ತಾ.

೧೭. ಗುಣಭೇದಾನ್ ಪ್ರಪಂಚಯತ್ಯನೇನಾಧ್ಯಾಯೇನ। - ಗೀ. ಭಾ.

ಸದಸತ್ಕರ್ಮವಿವೇಕಃ। - ಗೀ. ತಾ.

೧೮. ಪೂರ್ವೋಕ್ತಂ ಸಾಧನಂ ಸರ್ವಂ ಸಂಕ್ಷಿಪ್ಯೋಪಸಂಹರತ್ಯನೇನಾಧ್ಯಾಯೇನ। - ಗೀ.ಭಾ.

ಸರ್ವಾಧ್ಯಾಯೋಕ್ತಧರ್ಮಸ್ಯ ಸಮಾಸತೋ ನಿರ್ಣಯಾತ್ಮಕೋಽನುಕ್ತತ್ರೈಗುಣ್ಯಾದೀಚಾಯಮ್। - ಗೀ. ತಾ.

ಹೀಗೆ ಭಗವದ್ಗೀತೆಯ ಮೇಲೆ ಎರಡು ಕೃತಿಗಳನ್ನು ನೀಡಿದ ಶ್ರೀಮದಾಚಾರ್ಯರು, ತಮ್ಮ ಮಹಾಭಾರತತಾತ್ಪರ್ಯನಿರ್ಣಯದಲ್ಲಿ ಸಮಗ್ರ ಭಗವದ್ಗೀತೆಯ ಸಾರಾಂಶವನ್ನು ಕೇವಲ ೧೭ ಶ್ಲೋಕಗಳಲ್ಲಿ ತುಂಬಾ ಅಪೂರ್ವರೀತಿಯಲ್ಲಿ ಸಂಗ್ರಹಿಸಿರುವರು :

ತೇ ಸೇನೇ ಸಮರಾರಂಭೇ ಸಮೇತೇ ಸಾಗರೋಪಮೇ।
ಭೀಮಭೀಷ್ಮಮುಖೇ ವೀಕ್ಷ್ಯ ಪ್ರಾಹ ವಾಸವಿರಚ್ಯುತಮ್॥

ಸೇನಯೋರುಭಯೋರ್ಮಧ್ಯೇ ರಥಂ ಸ್ಥಾಪಯ ಮೇಽಚ್ಯುತ ।
ಇತ್ಯುಕ್ತಃ ಸ ತಥಾ ಚಕ್ರೇ ಪಾರ್ಥೋಽಪಶ್ಯಚ್ಚ ಬಾಂಧವಾನ್ ॥

ವಿಸಸರ್ಜ ಧನುಃ ಪಾಪಾಶಂಕೀ ತತ್ರಾಹ ಮಾಧವಃ ।
ಸ್ವಧರ್ಮೋ ದುಷ್ಟನಿಧನಂ ಧರ್ಮಜ್ಞಾನಾನುಪಾಲನಮ್ ॥

ಕ್ಷತ್ರಿಯಸ್ಯ ತಮುತ್ಸೃಜ್ಯ ನಿಂದಿತೋ ಯಾತ್ಯಧೋ ಧ್ರುವಮ್ ।
ಯತಃ ಪ್ರವೃತ್ತಿರ್ಭೂತಾನಾಂ ಯೇನ ಸರ್ವಮಿದಂ ತತಮ್ ॥

ಸ್ವಕರ್ಮಣಾ ತಮಭ್ಯರ್ಚ್ಯ ಸಿದ್ಧಿಂ ವಿಂದತಿ ಮಾನವಃ ।
ನ ಚ ಶೋಕಸ್ತ್ವಯಾ ಕಾರ್ಯೋ ಬಂಧೂನಾಂ ನಿಧನೇಕ್ಷಯಾ ॥

ದೇಹಸ್ಯ ಸರ್ವಥಾ ನಾಶಾದನಾಶಾಚ್ಚೇತನಸ್ಯ ಚ ।
ಸೃಷ್ಟಿಸ್ಥಿತ್ಯಪ್ಯಯಾಜ್ಞಾನಬಂಧಮೋಕ್ಷಪ್ರವೃತ್ತಯಃ ॥

ಪ್ರಕಾಶನಿಯಮೌ ಚೈವ ಬ್ರಹ್ಮೇಶಾದಿಕ್ಷರಸ್ಯ ಚ ।
ಅಕ್ಷರಪ್ರಕೃತೇಶ್ಚೈವ ಮತ್ತ ಏವ ನ ಚಾನ್ಯತಃ ॥

ನ ಮೇ ಕುತಶ್ಚಿತ್ ಸರ್ಗಾದ್ಯಾಃ ಸ್ವಾತಂತ್ರ್ಯಾದ್ಗುಣಪೂರ್ತಿತಃ ।
ಅತಃ ಸಮಾಧಿಕಾಭಾವಾನ್ಮಮ ಮದ್ವಶಮೇವ ಚ ॥

ಜ್ಞಾತ್ವೈಷಾಂ ನಿಧನಾದ್ಯಂ ಚ ಜೀವಾದೇರಸ್ವತಂತ್ರತಾಮ್ ।
ಅಸ್ವಾತಂತ್ರ್ಯಾನ್ನಿವೃತ್ತೌ ಚ ಮಾಮನುಸ್ಮರ ಯುಧ್ಯ ಚ ॥

ಯೇ ತು ಸರ್ವಾಣಿ ಕರ್ಮಾಣಿ ಮಯಿ ಸನ್ನ್ಯಸ್ಯ ಮತ್ಪರಾಃ ।
ಅನನ್ಯೇನೈವ ಯೋಗೇನ ಮಾಂ ಧ್ಯಾಯಂತ ಉಪಾಸತೇ ॥

ತೇಷಾಮಹಂ ಸಮುದ್ಧರ್ತಾ ಮೃತ್ಯುಸಂಸಾರಸಾಗರಾತ್ ।
ಭವಾಮಿ ನ ಚಿರಾತ್ ಪಾರ್ಥ ಮಯ್ಯಾವೇಶಿತಚೇತಸಾಮ್ ॥

ಮಯಾ ತತಮಿದಂ ಸರ್ವಂ ಜಗದವ್ಯಕ್ತಮೂರ್ತಿನಾ ।
ಮತ್ಸ್ಥಾನಿ ಸರ್ವಭೂತಾನಿ ನ ಚಾಹಂ ತೇಷ್ವವಸ್ಥಿತಃ ॥

ಸಂಪೂರ್ಣಸತ್ಸರ್ವಗುಣದೇಹೋಽಹಂ ಸರ್ವದಾ ಪ್ರಭುಃ ।
ಅಸ್ಪೃಷ್ಟಾಖಿಲದೋಷೈಕನಿತ್ಯಸತ್ತನುರವ್ಯಯಃ ॥

ಇತ್ಯುಕ್ತೋ ವಾಸವಿಃ ಪ್ರಾಹ ವ್ಯಾಪ್ತಿಂ ತೇ ದರ್ಶಯೇಶ ಮೇ ।
ಅಥ ದಿವ್ಯದೃಶಂ ತಸ್ಯ ದತ್ವಾ ವ್ಯಾಪ್ತಂ ನಿಜಂ ವಪುಃ ॥

ದೇಶತಃ ಕಾಲತಶ್ಚೈವ ಪೂರ್ಣಂ ಸರ್ವಗುಣೈಃ ಸದಾ ।
ದರ್ಶಯಾಮಾಸ ಭಗವಾನ್ ಯಾವತ್ಯರ್ಜುನಯೋಗ್ಯತಾ ॥

ತತ್ಪ್ರಾರ್ಥಿತಃ ಪುನಃ ಕೃಷ್ಣಸ್ತದ್ರೂಪಂ ಲೋಕಮಾನತಃ ।
ಪೂರ್ವವದ್ದರ್ಶಯಾಮಾಸ ಪುನಶ್ಚೈನಮಶಿಕ್ಷಯತ್ ॥

ಜ್ಞಾನಂ ಜ್ಞೇಯಂ ಪ್ರಕೃತ್ಯಾದಿ ಜ್ಞಾಪಯನ್ ಪುರುಷೋತ್ತಮಃ ।
ತೇನಾನುಶಿಷ್ಟಃ ಪಾರ್ಥಸ್ತು ಸಶರಂ ಧನುರಾದದೇ ॥

- ಮಹಾಭಾರತತಾತ್ಪರ್ಯನಿರ್ಣಯ (೨೫/೧-೧೭)

ಗೀತೆಯನ್ನೊಳಗೊಂಡ ಮಹಾಭಾರತಕ್ಕೆ ಮಹಾಭಾರತ ತಾತ್ಪರ್ಯನಿರ್ಣಯವನ್ನು ಮತ್ತು ಮಹಾಭಾರತದಲ್ಲಿನ ಗೀತೆಗೆ ಗೀತಾಭಾಷ್ಯ ಮತ್ತು ತಾತ್ಪರ್ಯಗಳನ್ನು ರಚಿಸಿದ ಏಕಮಾತ್ರ ಆಚಾರ್ಯರು ಶ್ರೀಮಧ್ವಾಚಾರ್ಯರು. ಗೀತೆಯನ್ನು ಉಪದೇಶಿಸಿದ್ದು ಭಗವಂತನು ಎಂಬ ವಿಷಯ ಎಲ್ಲರಿಗೂ ಗೊತ್ತಿತ್ತು. ಆದರೆ ಗೀತೆಯನ್ನು ಲಿಖಿತರೂಪದಲ್ಲಿ ಒದಗಿಸಿದ್ದು ವೇದವ್ಯಾಸರೂಪದಿಂದ ಭಗವಂತನೇ. ಎಂದರೆ ಈ ಅರ್ಥದಲ್ಲೂ ಅದು ಭಗವದ್ಗೀತೆಯೇ ಎಂದು ಪ್ರತಿಪಾದಿಸಿದ್ದು ಶ್ರೀಮದಾಚಾರ್ಯರ ಮತ್ತೊಂದು ವೈಶಿಷ್ಟ್ಯ.

ಗೀತಾಭಾಷ್ಯ ಹಾಗೂ ಗೀತಾತಾತ್ಪರ್ಯಗಳ ಟೀಕೆಗಳು

ಶ್ರೀಮದಾಚಾರ್ಯರ ಸಾಕ್ಷಾಚ್ಛಿಷ್ಯರಾದ ಶ್ರೀಪದ್ಮನಾಭತೀರ್ಥರು ಗೀತಾಭಾಷ್ಯಕ್ಕೆ 'ಭಾವಪ್ರದೀಪಿಕಾ' ಎಂಬ ವ್ಯಾಖ್ಯಾನವನ್ನೂ, ಗೀತಾತಾತ್ಪರ್ಯಕ್ಕೆ 'ಪ್ರಕಾಶಿಕಾ' ಎಂಬ ವ್ಯಾಖ್ಯಾನವನ್ನೂ ರಚಿಸಿರುವರು. ಮತ್ತೊಬ್ಬ ಸಾಕ್ಷಾಚ್ಛಿಷ್ಯರಾದ ಶ್ರೀನರಹರಿತೀರ್ಥರು ಗೀತಾಭಾಷ್ಯಕ್ಕೆ 'ಭಾವಪ್ರಕಾಶಿಕಾ' ಎಂಬ ವ್ಯಾಖ್ಯಾನ ಬರೆದಿರುವರು[೧]. ಗೀತಾಭಾಷ್ಯ ಮತ್ತು ಗೀತಾತಾತ್ಪರ್ಯಗಳಿಗೆ ಶ್ರೀಜಯತೀರ್ಥರು ಕ್ರಮವಾಗಿ 'ಪ್ರಮೇಯದೀಪಿಕಾ ಮತ್ತು ನ್ಯಾಯದೀಪಿಕಾ' ಎಂಬ ಟೀಕೆಗಳನ್ನು ರಚಿಸಿರುವರು. ಶ್ರೀಜಯತೀರ್ಥರ ಈ ಎರಡು ಕೃತಿಗಳ ಮೇಲೂ ಅನೇಕ ಟಿಪ್ಪಣಿಗಳು ರಚಿತವಾಗಿದ್ದು ಅವುಗಳಲ್ಲಿ ಶ್ರೀರಘೂತ್ತಮತೀರ್ಥರ ಪ್ರಮೇಯದೀಪಿಕಾಭಾವಬೋಧ, ಶ್ರೀರಾಘವೇಂದ್ರತೀರ್ಥರ ಪ್ರಮೇಯದೀಪಿಕಾ ಭಾವದೀಪ ಹಾಗೂ ನ್ಯಾಯದೀಪಿಕಾ ಭಾವದೀಪಗಳು ಬಿದರಹಳ್ಳಿ ಶ್ರೀನಿವಾಸ ತೀರ್ಥರ ಭಾವದೀಪಿಕಾ, ಉಮರ್ಜಿ ಪ್ರಹ್ಲಾದ ಕೃಷ್ಣಾಚಾರ್ಯರ ಪ್ರಮೇಯದೀಪಿಕಾ ಭಾವಪ್ರಕಾಶ, ಶ್ರೀಸುಮತೀಂದ್ರತೀರ್ಥರ ಗೀತಾಭಾಷ್ಯ ಪ್ರಮೇಯದೀಪಿಕಾ ಭಾವರತ್ನಕೋಶ, ಶ್ರೀತಾಮ್ರಪರ್ಣೀ ಶ್ರೀನಿವಾಸಾಚಾರ್ಯರ

---

೧. ಶ್ರೀ ಪದ್ಮನಾಭತೀರ್ಥರ ಗೀತಾಭಾಷ್ಯಭಾವಪ್ರದೀಪಿಕೆಯು ಪ್ರಪ್ರಥಮಬಾರಿಗೆ ನಮ್ಮ ಪ್ರತಿಷ್ಠಾನದಿಂದ ಪ್ರಕಾಶಿತವಾಗಿದೆ(೨೦೦೭). ಪ್ರಮೇಯದೀಪಿಕಾ ಹಾಗೂ ಶ್ರೀವಿದ್ಯಾಧಿರಾಜರ ಗೀತಾವಿವೃತಿ ಮೊದಲಾದ ಗ್ರಂಥಗಳಿಗೆ ಉಪಜೀವ್ಯವಾದ ಶ್ರೀನರಹರಿತೀರ್ಥರ ಗೀತಾಭಾಷ್ಯಭಾವಪ್ರಕಾಶಿಕೆಯು ಅಧ್ಯಾಯ ೮ ಶ್ಲೋಕ ೪ರ ವರೆಗೆ ಮಾತ್ರ ದೊರೆತಿದ್ದು ಅದೂ ಸಹ ನಮ್ಮ ಶ್ರೀವ್ಯಾಸಮಧ್ವಸಂಶೋಧನಾಪ್ರತಿಷ್ಠಾನದಿಂದ ವಿಸ್ತೃತವಾದ ಮುನ್ನುಡಿ, ಟಿಪ್ಪಣಿಗಳ ವಿಶೇಷಾಂಶಗಳೊಂದಿಗೆ ಪ್ರಕಟಿತವಾಗಿದೆ(೨೦೦೯).

ನ್ಯಾಯದೀಪಿಕಾ ಕಿರಣಾವಳಿ ಕೃತಿಗಳು ಹೆಚ್ಚು ಮುಖ್ಯವಾದವು. ಇತರ ಟಿಪ್ಪಣಿ ಗ್ರಂಥಗಳ ವಿವರಗಳನ್ನು ನಮ್ಮ ಪ್ರಕಾಶನದ ದ್ವೈತವೇದಾಂತಗ್ರಂಥಸೂಚಿಯಲ್ಲಿ ನೀಡಲಾಗಿದೆ.

ಭಗವದ್ಗೀತೆಯ ಮೂಲವನ್ನು ಗೀತಾಭಾಷ್ಯ, ಗೀತಾತಾತ್ಪರ್ಯ, ಪ್ರಮೇಯ ದೀಪಿಕಾ ಹಾಗೂ ನ್ಯಾಯದೀಪಿಕೆಗಳ ಹಿನ್ನೆಲೆಯಲ್ಲಿ ಸಮಗ್ರವಾಗಿ ವಿವೇಚಿಸುವ ವಿಶಿಷ್ಟಕೃತಿಗಳು ಎಂದರೆ, ಶ್ರೀವಿದ್ಯಾಧಿರಾಜತೀರ್ಥರ ಗೀತಾವಿವೃತಿ ಹಾಗು ಶ್ರೀರಾಘವೇಂದ್ರತೀರ್ಥರ ಗೀತಾರ್ಥಸಂಗ್ರಹ. ಈ ಕೃತಿಗಳ ಅಧ್ಯಯನ ಶ್ರೀಮದಾಚಾರ್ಯರ ಸಿದ್ಧಾಂತಕ್ಕನುಗುಣವಾಗಿ ಸಮಗ್ರ ಗೀತೆಯನ್ನು ಅರಿತುಕೊಳ್ಳಲು ನೀಡುವ ನೆರವು ಅಪಾರ.

ತಮ್ಮ ಇತರ ಗ್ರಂಥಗಳಲ್ಲಿ ಉದಾಹರಿಸಿದಂತೆ ಈ ಕೃತಿಗಳಲ್ಲೂ ಅನೇಕ ಆಕರ-ಗ್ರಂಥಗಳನ್ನು ಶ್ರೀಮದಾಚಾರ್ಯರು ಉದಾಹರಿಸಿರುವರು. ಅವುಗಳ ವಿವರ ಹೀಗಿದೆ :

ಭಗವದ್ಗೀತಾಭಾಷ್ಯದಲ್ಲಿ ಉದಾಹರಿಸಲ್ಪಟ್ಟಿರುವ ಪ್ರಮಾಣಗ್ರಂಥಗಳು

೧. ಅಭಿಧಾನ
೨. ಅಥರ್ವಣಶ್ರುತಿ
೩. ಅನಭಿಮ್ಲಾತಶ್ರುತಿ(ಸಾಮವೇದ)
೪. ಆಗ್ನಿವೇಶ್ಯಶಾಖಾ(ಸಾಮವೇದ)
೫. ಆಗ್ನಿವೇಶ್ಯಶ್ರುತಿ
೬. ಆದಿತ್ಯಪುರಾಣ
೭. ಆಯಾಸ್ಯಶಾಖಾ(ಸಾಮವೇದ)
೮. ಉಪಗೀತಾ
೯. ಉಪನಾರದೀಯ
೧೦. ಋಗ್ವೇದ
೧೧. ಋಗ್ವೇದಖಿಲ
೧೨. ಕಠಶ್ರುತಿ
೧೩. ಕಾಷಾಯಣಶಾಖಾ
೧೪. ಕಾಷಾಯಣಶ್ರುತಿ
೧೫. ಕೂರ್ಮಪುರಾಣ
೧೬. ಗಾರುಡ
೧೭. ಗೀತಾಕಲ್ಪ
೧೮. ಗೌತಮಖಿಲ
೧೯. ಗೌಪವನಶಾಖಾ(ಸಾಮವೇದ)
೨೦. ಜಾಬಾಲಖಿಲಶ್ರುತಿ
೨೧. ನಾರದೀಯ
೨೨. ನಾರಾಯಣಕಲ್ಪ
೨೩. ನಾರಾಯಣಗೋಪಾಲಕಲ್ಪ
೨೪. ನಾರಾಯಣರಾಮಕಲ್ಪ
೨೫. ನಾರಾಯಣಾಷ್ಟಾಕ್ಷರಕಲ್ಪ
೨೬. ಪಂಚರಾತ್ರ
೨೭. ಪದ್ಮಪುರಾಣ(ಪಾದ್ಮ)
೨೮. ಪಿಪ್ಪಲಾದಶಾಖಾ
೨೯. ಪ್ರಾಚೀನಶಾಲಶ್ರುತಿ
೩೦. ಪೈಂಗಿಖಿಲ
೩೧. ಬಾಭ್ರವ್ಯಶಾಖಾ(ಸಾಮವೇದ)
೩೨. ಬಾಷ್ಕಲಶಾಖಾ(ಸಾಮವೇದ)
೩೩. ಬ್ರಹ್ಮಪುರಾಣ
೩೪. ಬ್ರಹ್ಮವೈವರ್ತ
೩೫. ಬ್ರಹ್ಮಸೂತ್ರ
೩೬. ಬ್ರಹ್ಮಾಂಡಪುರಾಣ
೩೭. ಭಗವದ್ವಚನ
೩೮. ಭಾಗವತ
೩೯. ಭಾಲ್ಲವೇಯಶಾಖಾ
೪೦. ಮತ್ಸ್ಯಪುರಾಣ

೪೦. ಮಹಾಕೌರ್ಮ
೪೧. ಮಹಾಭಾರತ
೪೨. ಮಾನವ(ಮನುಸ್ಮೃತಿಃ)
೪೩. ಮಾಧುಚ್ಛಂದಸಶಾಖಾ(ಸಾಮವೇದ)
೪೪. ಮೋಕ್ಷಧರ್ಮ
೪೫. ಯಜುರ್ವೇದ
೪೬. ಯಾಸ್ಕಶ್ರುತಿ
೪೭. ವರಾಹಪುರಾಣ
೪೮. ವಾಮನಪುರಾಣ
೪೯. ವಾರುಣಶಾಖಾ
೫೦. ವಿಷ್ಣುಪುರಾಣ
೫೧. ವ್ಯಾಸಯೋಗ
೫೨. ವ್ಯಾಸಸ್ಮೃತಿ
೫೩. ಶಾರ್ಕರಾಕ್ಷಶ್ರುತಿ
೫೪. ಶಾಂಡಿಲ್ಯಶಾಖಾ(ಸಾಮವೇದ)
೫೫. ಶ್ರುತಿ
೫೬. ಶ್ವೇತಾಶ್ವತರೋಪನಿಷತ್
೫೭. ಸನತ್ಸುಜಾತೀಯ
೫೮. ಸೌಕರಾಯಣಶ್ರುತಿ
೫೯. ಸ್ಕಾಂದಪುರಾಣ
೬೦. ಹರಿವಂಶ
೬೧. ಅನಿರ್ದಿಷ್ಟಾಕಾರ

ಭಗವದ್ಗೀತಾತಾತ್ಪರ್ಯನಿರ್ಣಯದಲ್ಲಿ ಉದಾಹರಿಸಲ್ಪಟ್ಟಿರುವ ಪ್ರಮಾಣಗ್ರಂಥಗಳು

೧. ಆಗ್ನೇಯಪುರಾಣ
೨. ಅಥರ್ವಣಶ್ರುತಿ
೩. ಅಭಿಧಾನ
೪. ಋಗ್ವೇದ
೫. ಕೃಷ್ಣಸಂಹಿತಾ
೬. ತತ್ತ್ವವಿವೇಕ
೭. ದತ್ತಾತ್ರೇಯವಚನ
೮. ನಾರದೀಯ
೯. ನಾರಾಯಣಶ್ರುತಿ
೧೦. ಪಂಚರಾತ್ರ
೧೧. ಪರಮಯೋಗ
೧೨. ಪರಮಶ್ರುತಿ
೧೩. ಪದ್ಮಪುರಾಣ
೧೪. ಪೈಂಗಿಶ್ರುತಿ
೧೫. ಪ್ರಕಾಶಸಂಹಿತಾ
೧೬. ಪ್ರವೃತ್ತ
೧೭. ಬರ್ಕಶ್ರುತಿ
೧೮. ಬ್ರಹ್ಮತರ್ಕ
೧೯. ಬ್ರಹ್ಮಪುರಾಣ
೨೦. ಬ್ರಹ್ಮವೈವರ್ತಪುರಾಣ
೨೧. ಬ್ರಹ್ಮಸೂತ್ರಾಣಿ
೨೨. ಬ್ರಹ್ಮಾಂಡಪುರಾಣ
೨೩. ಭಗವದ್ವಚನ
೨೪. ಭವಿಷ್ಯತ್ಪರ್ವ
೨೫. ಭಾಗವತ
೨೬. ಮಹಾಭಾರತ
೨೭. ಮಹಾವರಾಹ
೨೮. ಮಹಾವಿಷ್ಣುಪುರಾಣ
೨೯. ವಿಭೂತಿತತ್ತ್ವ
೩೦. ವೈಹಾಯಸಸಂಹಿತಾ
೩೧. ವ್ಯಾಸಸ್ಮೃತಿ
೩೨. ಶಬ್ದತತ್ತ್ವ
೩೩. ಶಬ್ದನಿರ್ಣಯ
೩೪. ಶ್ರುತಿ
೩೫. ಸತ್ತತ್ತ್ವ
೩೬. ಸೂದಶಾಸ್ತ್ರ
೩೭. ಸೌಪರ್ಣಶಾಖಾ(ಋಗ್ವೇದ)
೩೮. ಸ್ಕಾಂದಪುರಾಣ

ಶ್ರೀಮದ್ಭಾಗವತದ ಹನ್ನೊಂದನೆಯ ಸ್ಕಂಧದಲ್ಲಿನ ಶ್ರೀಕೃಷ್ಣೋದ್ಧವಸಂವಾದವೂ ಸಹ ಮತ್ತೊಂದು ರೀತಿಯಲ್ಲಿ ಭಗವದ್ಗೀತೆಯೇ ಆಗಿದೆ. ಶ್ರೀಮದ್ಭಗವದ್ಗೀತೆ ಶ್ರೀಮನ್ಮಹಾಭಾರತದ ದರ್ಶನದ ಸಾರಸರ್ವಸ್ವವಾದರೆ ಏಕಾದಶಸ್ಕಂಧ ಶ್ರೀಮದ್ಭಾಗವತದ ಸಾರಸರ್ವಸ್ವ :

> ರತ್ನಾನಾಮಂಬುಧಿಃ ಪಾತ್ರಂ ತೇಜಸಾಮುಷ್ಣದೀಧಿತಿಃ ।
> ತಥೈವೈಕಾದಶಸ್ಕಂಧಃ ಸರ್ವಶಾಸ್ತ್ರಾರ್ಥಸನ್ನಿಧಿಃ ॥ –ಶ್ರೀವಿಜಯಧ್ವಜತೀರ್ಥರು

ಶ್ರೀಮದಾಚಾರ್ಯರ ಭಾಗವತತಾತ್ಪರ್ಯನಿರ್ಣಯದ ಈ ಭಾಗದ ವಿವರಣೆಯು ಅತ್ಯಂತ ವಿಸ್ತಾರವಾಗಿದ್ದು ಅನೇಕ ಅಪೂರ್ವಾರ್ಥಗಳ ಗಣಿ ಎನ್ನಿಸಿದೆ. ಅದು ಭಗವದ್ಗೀತೆಯ ಮೇಲಿನ ಮತ್ತೊಂದು ಭಾಷ್ಯದಂತಿದ್ದು, ಅದನ್ನು ಇವುಗಳೊಂದಿಗೆ ಸೇರಿಸಿಕೊಂಡು ಅಧ್ಯಯನ ಮಾಡಿದರೆ ಗೀತೆಯ ಅರ್ಥ ಇನ್ನೂ ಸ್ಫುಟವಾಗುವುದು.

★★★★★

ಸೂತ್ರಪ್ರಸ್ಥಾನಗ್ರಂಥಗಳು

ಬ್ರಹ್ಮಸೂತ್ರಗಳಿಗೆ ರಚಿತವಾಗಿರುವ ಶ್ರೀಮನ್ಮಧ್ವಾಚಾರ್ಯರ ಗ್ರಂಥಗಳ ಸಾರವನ್ನು ಅರಿಯುವ ಮುನ್ನ ಸ್ಥೂಲವಾಗಿ ಬ್ರಹ್ಮಸೂತ್ರಗಳ ಮಹತ್ತ್ವ, ಅವುಗಳ ರಚನೆಯ ಹಿನ್ನೆಲೆ, ತಾತ್ತ್ವಿಕಪ್ರಪಂಚದಲ್ಲಿ ಅದರ ವಿಶಿಷ್ಟವಾದ ಹಿರಿಮೆ ಮೊದಲಾದವುಗಳ ಬಗ್ಗೆ ಸ್ಥೂಲಪರಿಚಯವನ್ನು ಮಾಡಿಕೊಳ್ಳುವುದು ಅಗತ್ಯ.

ಬ್ರಹ್ಮಸೂತ್ರಗಳ ಮಹತ್ತ್ವ

ತತ್ತ್ವಜ್ಞಾನವೊಂದೇ ಮೋಕ್ಷಕ್ಕೆ ಸಾಧನ. ಅಂತಹ ತತ್ತ್ವಜ್ಞಾನದ ಪ್ರಮುಖ ಸಾಧನವನ್ನೇ 'ಶಾಸ್ತ್ರ' (ಆಗಮ) ಎನ್ನುವರು. ಅಂತಹ ಶಾಸ್ತ್ರವು ನಿರ್ಣೇಯ ಮತ್ತು ನಿರ್ಣಾಯಕ ('ನಿರ್ಣೀತ' ಎಂಬುದಾಗಿ ಮತ್ತೊಂದು ರೀತಿಯಲ್ಲಿ ಇದನ್ನು ವಿಭಾಗಿಸುವುದುಂಟು) ಎಂಬುದಾಗಿ ಎರಡು ವಿಧ[1]. ಋಗ್ವೇದ, ಯಜುರ್ವೇದ, ಸಾಮವೇದ, ಅಥರ್ವಣವೇದ, ಮಹಾಭಾರತ, ಪಂಚರಾತ್ರ ಮತ್ತು ಮೂಲರಾಮಾಯಣ ಎಂಬ [2]ಸಪ್ತಸದಾಗಮಗಳೂ ಮತ್ತು ಅವುಗಳಿಗೆ ಅನುಕೂಲವಾದ ಇತರ ಆಗಮಗಳೂ 'ನಿರ್ಣೇಯ'ಶಾಸ್ತ್ರವೆನ್ನಿಸುತ್ತವೆ. ನಿರ್ಣಾಯಕಶಾಸ್ತ್ರಕ್ಕೆ 'ಮೀಮಾಂಸಾ' ಎಂದೂ ಹೆಸರು; ಇಂತಹ ಮೀಮಾಂಸೆಯು ಬ್ರಹ್ಮಮೀಮಾಂಸೆ, ದೈವೀಮೀಮಾಂಸೆ ಮತ್ತು ಕರ್ಮಮೀಮಾಂಸೆ ಎಂಬುದಾಗಿ ಮೂರು[3] ವಿಧ. ಕರ್ಮಮೀಮಾಂಸೆಯು ಶ್ರೀವೇದವ್ಯಾಸರ ಶಿಷ್ಯರಲ್ಲೊಬ್ಬರಾದ ಜೈಮಿನಿಗಳಿಂದ[4] ಪ್ರಣೀತವಾಗಿದೆ. ದೈವೀ-

---

೧. ದ್ವಿವಿಧಂ ಹಿ ಶಾಸ್ತ್ರಂ ನಿರ್ಣೀತಂ ನಿರ್ಣೇತವ್ಯಂ ಚ ।
ತತ್ರ ಆದ್ಯಂ ಬ್ರಹ್ಮಸೂತ್ರಾದಿಕಂ ದ್ವಿತೀಯಂ ವೇದಾದಿಕಮ್ । - ನ್ಯಾಯಸುಧಾ

೨. ಋಗ್ಯಜುಃ ಸಾಮಾಥರ್ವಾ ಭಾರತಂ ಪಂಚರಾತ್ರಕಮ್ ।
ಮೂಲರಾಮಾಯಣಂ ಚೈವ ಶಾಸ್ತ್ರಮಿತ್ಯಭಿಧೀಯತೇ ॥
ಯಚ್ಚಾನುಕೂಲಮೇತಸ್ಯ ತಚ್ಚ ಶಾಸ್ತ್ರಂ ಪ್ರಕೀರ್ತಿತಮ್ ॥
- ಸ್ಕಂದಪುರಾಣಮ್ (ಬ್ರಹ್ಮಸೂತ್ರಭಾಷ್ಯೋದಾಹೃತಮ್ ೧/೧/೩)

ಋಗಾದಯಶ್ಚ ಚತ್ವಾರಃ ಪಂಚರಾತ್ರಂ ಚ ಭಾರತಮ್ ।
ಮೂಲರಾಮಾಯಣಂ ಬ್ರಹ್ಮಸೂತ್ರಂ ಮಾನಂ ಸ್ವತಃ ಸ್ಮೃತಮ್ ॥
- ಭವಿಷ್ಯತ್ಪರ್ವ (ಮ.ಭಾ.ತಾ.ನಿ. ೧/೨೫)

೩. ಮೀಮಾಂಸಾ ತ್ರಿವಿಧಾ ಪ್ರೋಕ್ತಾ ಬ್ರಾಹ್ಮೀ ದೈವೀ ಚ ಕಾರ್ಮಿಕೀ ॥
- ನಾರದಪುರಾಣವಚನಮ್ (ಗೀತಾತಾತ್ಪರ್ಯ ೨/೩೯)

೪. ಜೈಮಿನಿಂ ಕರ್ಮಮೀಮಾಂಸಾಕರ್ತಾರಮಕರೋತ್ಪ್ರಭುಃ ।
ದೇವಮೀಮಾಂಸಾಕಾದ್ಯಂತಂ ಕೃತ್ವಾ ಪೈಲಮಥಾದಿಶತ್ ॥
ಶೇಷಂ ಚ ಮಧ್ಯಕರಣೇ..... - ಮ.ಭಾ.ತಾ.ನಿ. (೧೦/೮೧, ೮೨)

ಮೀಮಾಂಸೆಯ ಆದ್ಯಂತವು ಸಹ ವೇದವ್ಯಾಸಪ್ರಣೀತವಾಗಿದ್ದು, ಅದರ ಉಳಿದ ಭಾಗ ಶ್ರೀವ್ಯಾಸಶಿಷ್ಯರಾದ ಶೇಷ ಮತ್ತು ಪೈಲರಿಂದ ರಚಿತವಾಗಿದೆ. ಬ್ರಹ್ಮಮೀಮಾಂಸೆಯು ಮಾತ್ರ ಸಂಪೂರ್ಣವಾಗಿ ಶ್ರೀವೇದವ್ಯಾಸರ ರಚನೆ. ಈ ದೃಷ್ಟಿಯಲ್ಲೂ ಸಮಗ್ರ ವ್ಯಾಸಕೃತವಾದ 'ಬ್ರಹ್ಮಮೀಮಾಂಸೆ'ಗೇ ಅಗ್ರಸ್ಥಾನ.

ನಿರ್ಣೇಯ ಮತ್ತು ನಿರ್ಣಾಯಕ ಶಾಸ್ತ್ರಗಳಲ್ಲಿ ನಿರ್ಣಾಯಕಶಾಸ್ತ್ರವೇ ಪ್ರಬಲವಾದುದು. ನಿರ್ಣೇಯಶಾಸ್ತ್ರಗಳಲ್ಲಿ ಮಹಾಭಾರತಕ್ಕೆ ಅಗ್ರಸ್ಥಾನ; ಅದರಲ್ಲೂ ಭಗವದ್ಗೀತೆ ಮತ್ತು ವಿಷ್ಣುಸಹಸ್ರನಾಮಗಳಿಗೆ ಪರಮೋಚ್ಚಸ್ಥಾನವಿದೆ. ವೇದಾದಿ ಇತರ ಸಕಲಶಾಸ್ತ್ರಗಳಿಗಿಂತಲೂ ಮಿಗಿಲು ಎಂಬುದು ಮಹಾಭಾರತದ ಪ್ರಶಸ್ತಿ. ನಿರ್ಣಾಯಕ-ಶಾಸ್ತ್ರಗಳಲ್ಲಿ ಬ್ರಹ್ಮಮೀಮಾಂಸೆಯೇ ಸರ್ವೋಚ್ಚ. ನಿರ್ಣಾಯಕಶಾಸ್ತ್ರವು ನಿರ್ಣೇಯಕ್ಕಿಂತ ಮಿಗಿಲು ಎಂದು ಸಾರಿರುವ ಶ್ರೀಮಧ್ವಾಚಾರ್ಯರು ಬ್ರಹ್ಮಮೀಮಾಂಸೆಯೇ ಸರ್ವೋತ್ತಮವಾದ ಶಾಸ್ತ್ರ ಎಂದು ಘೋಷಿಸಿರುವರು. ಈ ಹಿನ್ನೆಲೆಯಲ್ಲಿ 'ಪರವಿದ್ಯೆ' ಎಂಬ ಅಸಾಧಾರಣ ಪ್ರಶಸ್ತಿ ಇದಕ್ಕೆ ಉಂಟು. ನಿರ್ಣೇಯಗಳಲ್ಲಿ ಮಹಾಭಾರತವೂ, ನಿರ್ಣಾಯಕಗಳಲ್ಲಿ ಬ್ರಹ್ಮಮೀಮಾಂಸೆಯೂ ಶ್ರೇಷ್ಠವಾಗಿದ್ದು ಬ್ರಹ್ಮಮೀಮಾಂಸೆಯು 'ಪರವಿದ್ಯೆ' ಎಂದು ಮಾನ್ಯವಾಗಿದೆ ಎಂದು ಭಾವ. ಇದರಂತೆ ಬ್ರಹ್ಮಸೂತ್ರ ವಿಷ್ಣುಸಹಸ್ರನಾಮಕ್ಕಿಂತಲೂ ಶ್ರೇಷ್ಠ ಎಂಬುದು ಗಮನಾರ್ಹ.

ವೇದಾದಿಗಳಿಗಿಂತಲೂ ವೇದಪ್ರತಿಪಾದ್ಯರಾದ ಶ್ರೀವೇದವ್ಯಾಸರ ಕೃತಿ 'ಬ್ರಹ್ಮ-ಮೀಮಾಂಸಾ'ಶಾಸ್ತ್ರವು ಶ್ರೇಷ್ಠವೆಂಬುದು ಯುಕ್ತಿಸಂಮತವೂ ಆಗಿದೆ.

ಬ್ರಹ್ಮಸೂತ್ರಗಳ ರಚನೆಯ ಹಿನ್ನೆಲೆ

ಕೃತಯುಗದಲ್ಲಿ ಪೂರ್ಣಪ್ರಮಾಣದಲ್ಲಿ ಪ್ರಸಾರದಲ್ಲಿದ್ದ ತತ್ತ್ವಜ್ಞಾನವು, ತ್ರೇತಾಯುಗದಲ್ಲಿ ಸ್ವಲ್ಪ ಮರೆಯಾಯಿತು. ದ್ವಾಪರಾಂತ್ಯದ ವೇಳೆಗೆ ಗೌತಮರ ಶಾಪದ ನಿಮಿತ್ತವೂ ಸೇರಿ ಪೂರ್ಣವಾಗಿ ಮರೆಯಾಯಿತು. ಆಗ ಜಿಜ್ಞಾಸುಗಳಾದ ಸುಜೀವಿಗಳ ಉದ್ಧಾರಕ್ಕೆಂದು ಬ್ರಹ್ಮಾದಿದೇವತೆಗಳಿಂದ ಪ್ರಾರ್ಥಿತನಾಗಿ [೧]ಶ್ರೀನಾರಾಯಣನು

ಸ ವಿಷ್ಣುರಾಹ ಹೀತ್ಯಂತೇ ದೇವಶಾಸ್ತ್ರಸ್ಯ ತೇನ ಹಿ ।
ಆದ್ಯಂತಂ ದೇವಶಾಸ್ತ್ರಸ್ಯ ಸ್ವಯಂ ಭಗವತಾ ಕೃತಮ್ ।
ಮಧ್ಯಂ ತದಾಜ್ಞಯಾ ಶೇಷಪೈಲಾಭ್ಯಾಂ ಕೃತಮಂಜಸಾ ॥ - ಅನುವ್ಯಾಖ್ಯಾನ

ಬ್ರಹ್ಮತರ್ಕಂ ಚ ಮೀಮಾಂಸಾಂ ಸೇವೇತ ಜ್ಞಾನಸಿದ್ಧಯೇ । - ಅನುವ್ಯಾಖ್ಯಾನ

೧. ದ್ವಾಪರೇ ಸರ್ವತ್ರ ಜ್ಞಾನ ಆಕುಲೀಭೂತೇ ತನ್ನಿರ್ಣಯಾಯ ಬ್ರಹ್ಮರುದ್ರೇಂದ್ರಾದಿಭಿರರ್ಥಿತೋ ಭಗವಾನ್ನಾರಾಯಣೋ ವ್ಯಾಸತ್ವೇನಾವತತಾರ । ಅಥೇಷ್ಟಾನಿಷ್ಟಪ್ರಾಪ್ತಿಪರಿಹಾರೇಚ್ಛೂನಾಂ ತದ್ಯೋಗಮವಿ- ಜಾನತಾಂ ತಜ್ಜ್ಞಾಪನಾರ್ಥಂ ವೇದಮುತ್ಸನ್ನಂ ವ್ಯಂಜಯಂಶ್ಚತುರ್ಧಾ

ಶ್ರೀವೇದವ್ಯಾಸರೂಪದಿಂದ ಅವತರಿಸಿ, ವೇದವಿಭಾಗ, ಮಹಾಭಾರತ ರಚನೆ, ಪುರಾಣರಚನೆ ಮೊದಲಾದವುಗಳನ್ನು ಮಾಡಿ ಅವೆಲ್ಲವುಗಳ ಅರ್ಥನಿರ್ಣಯಕ್ಕಾಗಿ ರಚಿಸಿದ ಕೃತಿಯೇ 'ಬ್ರಹ್ಮಮೀಮಾಂಸಾಶಾಸ್ತ್ರ'. ಆದ್ದರಿಂದ ಯಾವ ಶಾಸ್ತ್ರದ ನಿರ್ಣಯಕ್ಕೂ ಬ್ರಹ್ಮಸೂತ್ರವೇ ಪ್ರಧಾನವಾದ ಆಕರ.

ಸೂತ್ರವೆಂದರೆ ಬ್ರಹ್ಮಸೂತ್ರ

'ವ್ಯಾಸ'ರೆಂದರೆ 'ವೇದವ್ಯಾಸರು', 'ಗೀತೆ'ಯೆಂದರೆ 'ಭಗವದ್ಗೀತೆ', ದೇವರೆಂದರೆ 'ನಾರಾಯಣ', ಆಚಾರ್ಯರೆಂದರೆ 'ಶ್ರೀಮಧ್ವಾಚಾರ್ಯರು', ವ್ರತವೆಂದರೆ 'ಏಕಾದಶೀ' ಎನ್ನುವಂತೆ 'ಸೂತ್ರ'ವೆಂದರೆ 'ಬ್ರಹ್ಮಸೂತ್ರ' ಎಂದೇ ಅರ್ಥ. ಕಡಿಮೆ ಅಕ್ಷರಗಳು, ಖಚಿತತೆ, ಸಾರವತ್ತ್ವ, ವಿಶ್ವತೋಮುಖತ್ವ, [1]ವ್ಯರ್ಥಾಕ್ಷರರಾಹಿತ್ಯ ಮತ್ತು

ವ್ಯಭಜತ್ । ಚತುರ್ವಿಂಶತಿಧ್ಯೈಕಶತಧಾ ಸಹಸ್ರಧಾ ದ್ವಾದಶಧಾ ಚ । ತದರ್ಥನಿರ್ಣಯಾಯ ಬ್ರಹ್ಮಸೂತ್ರಾಣಿ ಚಕಾರ । – ಬ್ರಹ್ಮಸೂತ್ರಭಾಷ್ಯ (೧/೧/೧)

ನಾರಾಯಣಾದ್ವಿನಿಷ್ಪನ್ನಂ ಜ್ಞಾನಂ ಕೃತಯುಗೇ ಸ್ಥಿತಮ್ ।
ಕಿಂಚಿತ್ತದನ್ಯಥಾ ಜಾತಂ ತ್ರೇತಾಯಾಂ ದ್ವಾಪರೇಽಖಿಲಮ್ ॥
ಗೌತಮಸ್ಯ ಋಷೇಃ ಶಾಪಾಜ್ಜ್ಞಾನೇ ತ್ವಜ್ಞಾನತಾಂ ಗತೇ ।
ಸಂಕೀರ್ಣಬುದ್ಧಯೋ ದೇವಾ ಬ್ರಹ್ಮರುದ್ರಪುರಸ್ಸರಾಃ ॥
ಶರಣ್ಯಂ ಶರಣಂ ಜಗ್ಮುರ್ನಾರಾಯಣಮನಾಮಯಮ್ ।
ತೈರ್ವಿಜ್ಞಾಪಿತಕಾರ್ಯಸ್ತು ಭಗವಾನ್ ಪುರುಷೋತ್ತಮಃ ॥
ಅವತೀರ್ಣೋ ಮಹಾಯೋಗೀ ಸತ್ಯವತ್ಯಾಂ ಪರಾಶರಾತ್ ।
ಚತುರ್ಧಾ ವ್ಯಭಜತ್ ತಾಂಶ್ಚ ಚತುರ್ವಿಂಶತಿಧಾ ಪುನಃ ।
ಶತಧಾ ಚೈಕಧಾ ಚೈವ ತಥೈವ ಚ ಸಹಸ್ರಧಾ ॥
ಕೃಷ್ಣೋ ದ್ವಾದಶಧಾ ಚೈವ ಪುನಸ್ತಸ್ಯಾರ್ಥವಿತ್ತಯೇ ।
ಚಕಾರ ಬ್ರಹ್ಮಸೂತ್ರಾಣಿ ಯೇಷಾಂ ಸೂತ್ರತ್ವಮಂಜಸಾ ॥
ಏವಂವಿಧಾನಿ ಸೂತ್ರಾಣಿ ಕೃತ್ವಾ ವ್ಯಾಸೋ ಮಹಾಯಶಾಃ ।
ಬ್ರಹ್ಮರುದ್ರಾದಿದೇವೇಷು ಮನುಷ್ಯಪಿತೃಪಕ್ಷಿಷು ।
ಜ್ಞಾನಂ ಸಂಸ್ಥಾಪ್ಯ ಭಗವಾನ್ ಕ್ರೀಡತೇ ಪರಮೇಶ್ವರಃ ॥

– ಸ್ಕಂದಪುರಾಣವಚನಮ್ (ಬ್ರಹ್ಮಸೂತ್ರಭಾಷ್ಯ ೧-೧-೧)

೧. ಅಲ್ಪಾಕ್ಷರಮಸಂದಿಗ್ಧಂ ಸಾರವದ್ವಿಶ್ವತೋ ಮುಖಮ್ ।
ಅಸ್ತೋಭಮನವದ್ಯಂ ಚ ಸೂತ್ರಂ ಸೂತ್ರವಿದೋ ವಿದುಃ ॥

– ಸ್ಕಾಂದಪುರಾಣ ಬ್ರಹ್ಮಸೂತ್ರಭಾಷ್ಯ (೧/೧/೧)

ಯಾವದ್ಭಿರಕ್ಷರೈರ್ವಿನಾ ವಿವಕ್ಷಿತಾರ್ಥಾಸಿದ್ಧಿಸ್ತಾವನ್ಮಾತ್ರಾಕ್ಷರಂ ಅಲ್ಪಾಕ್ಷರಮ್ । ತದ್ವಚನಂ ಭಾಷ್ಯವ್ಯಾವೃತ್ತ್ಯರ್ಥಮ್ । ವಿಶೇಷಣಾಂತರಾಣಾಂ ಭಾಷ್ಯೇಽಪ್ಯನುವರ್ತನೀಯತ್ವಾತ್ ।

ನಿರ್ದೋಷತ್ವಗಳು ಸೂತ್ರಗಳ ಮುಖ್ಯಲಕ್ಷಣ. ವೇದಾರ್ಥನಿರ್ಣಯಕ್ಕೆ ಇತಿಕರ್ತವ್ಯತಾರೂಪ (ಉಪಕರಣ) ಎನ್ನಿಸಿದ್ದರೂ, ಅದಕ್ಕಿಂತ ಮಿಗಿಲು ಎನ್ನಿಸಿರುವುದು ಬ್ರಹ್ಮಸೂತ್ರಗಳ ವೈಶಿಷ್ಟ್ಯ. 'ಲಿಂಗಭೂಯಸ್ತ್ವಾಧಿಕರಣ' ತತ್ತ್ವಪ್ರಕಾಶಿಕೆಯಲ್ಲಿ (೩/೩/೨೭) ಬಂದಿರುವ ಯುಕ್ತಿಯಂತೆ ಇದರಲ್ಲಿ ಯಾವ ಬಾಧಕವೂ ಇಲ್ಲ. (ನ ಚೇತಿಕರ್ತವ್ಯತ್ವೇನ ದೌರ್ಬಲ್ಯಂ ಯಾಗೀಯಹಿಂಸಾಯಾಮಿತಿ ಕರ್ತವ್ಯತಯಾ ಏವ ಪ್ರಾಬಲ್ಯದರ್ಶನಾತ್) 'ವೇದಾಂತ'(ಸೂತ್ರ)[1], 'ಶಾರೀರಕ'ಸೂತ್ರ, 'ಯುಕ್ತಿಸೂತ್ರ', [2]'ಸತ್ಯ ಮತ್ತು ವ್ಯಾಸಸೂತ್ರ' ಎಂಬ ನಾಮಾಂತರಗಳಿಂದಲೂ ಬ್ರಹ್ಮಸೂತ್ರವು ಪ್ರಸಿದ್ಧವಾಗಿದೆ. 'ಉತ್ತರಮೀಮಾಂಸೆ' ಎಂದರೂ ಇದೇ ಆಗಿದೆ. ಈ ರೀತಿಯಾದ ಬಗೆಬಗೆಯ ಹೆಸರುಗಳಲ್ಲೇ ಬ್ರಹ್ಮಸೂತ್ರದ ವಿಶೇಷತೆಯೂ ಸಹ ಅತ್ಯಂತ ಸ್ಫುಟವಾಗಿ ನಿರೂಪಿತವಾಗಿದೆ.

'ಅಸಂದಿಗ್ಧಮ್' ನಿರ್ಣೀತಾರ್ಥಮ್ । ನಿರ್ಣಯಹೇತುರಹಿತವಾಕ್ಯದ್ವಯವ್ಯಾವೃತ್ತ್ಯರ್ಥಮ್ । ಸಾರತ್ವಮ್ ಉತ್ತಮಾರ್ಥಂ ಕುಶಲಪುರುಷೋಕ್ತಲೋಕವಾರ್ತಾದಿವ್ಯಾವೃತ್ತ್ಯರ್ಥಮ್ । ವಿಶ್ವತೋಮುಖಮ್ ಏಕಪ್ರಯೋಜನಂ ಪ್ರತ್ಯಪೇಕ್ಷಿತಾರ್ಥಸ್ಯ ಕೃತ್ಸ್ನಸ್ಯ ಪ್ರತಿಪಾದಕಮ್ । ಏತದನುಕ್ತೌ ಭಗವನ್ನಾಮಮಂತ್ರಾದೇಃ ಸೂತ್ರತ್ವಂ ಸ್ಯಾತ್ । ಅರ್ಥವಿವಕ್ಷಯಾಽಲ್ಪಾಕ್ಷರತ್ವೇಽಪಿ ವೃಥಾ ಸ್ತೋಭಪದಂ ವಾ ಪಾದಪೂರಣಾರ್ಥಂ ವಾ ಮಾ ಭೂದಿತ್ಯಸ್ತೋಭಮ್ । ಅಪಶಬ್ದಾರ್ಥದೋಷವ್ಯಾವೃತ್ತ್ಯರ್ಥಮ್ 'ಅನವದ್ಯಮ್' ಇತಿ ॥ (ತತ್ತ್ವಪ್ರದೀಪ)

ಯಾವದಕ್ಷರತಾಂ ವಿನಾ ವಿವಕ್ಷಿತಾರ್ಥಾಸಿದ್ಧಿಸ್ತದಲ್ಪಾಕ್ಷರತ್ವಮ್ । ಏವಂ ಚ ಭವಿತುಮರ್ಹತೀತ್ಯವಚನಮಸಂದಿಗ್ಧತ್ವಮ್ । ವಿಸ್ಪಷ್ಟಾರ್ಥತಾ ಸಾರವತ್ತ್ವಮ್ । ಬಹುಶಾಖಾನಿರ್ಣಾಯಕತ್ವಂ ವಿಶ್ವತೋಮುಖತ್ವಮ್ । ವ್ಯರ್ಥಾಕ್ಷರಾದಿರಾಹಿತ್ಯಮಸ್ತೋಭಮ್ । ಅಪಶಬ್ದಾದಿವೈಧುರ್ಯಂ ಅನವದ್ಯತ್ವಮ್ ॥ – ತತ್ತ್ವಪ್ರಕಾಶಿಕಾ

೧. ಬ್ರಹ್ಮಸೂತ್ರಾಣಿ ಶಾರೀರಿಕಮ್ । ಗೀತಾಭಾಷ್ಯ (೧/೩೫)
ವೇದನಿರ್ಣಯಾತ್ಮಿಕಾ ಮೀಮಾಂಸಾ ವೇದಾಂತಃ । ಗೀತಾಭಾಷ್ಯ (೧೫/೧೫)
ಯುಕ್ತಿಸೂತ್ರಕೃತ್ । ಗೀತಾಭಾಷ್ಯ (೧೫/೧೫)
ಬ್ರಹ್ಮಣಃ ಸೂಚಕಾನಿ ವಾಕ್ಯಾನಿ ಬ್ರಹ್ಮಸೂತ್ರಾಣಿ । ಪ್ರಮೇಯದೀಪಿಕಾ

ಬ್ರಹ್ಮವೇದಃ ತದರ್ಥಃ ಪರಬ್ರಹ್ಮ ವಾ ತಸ್ಯ ಸೂತ್ರಾಣಿ, ಬ್ರಹ್ಮಸೂತ್ರಾಣಿ । ಸಕಲವೇದಾರ್ಥಭೂತಸ್ಯ ಪರಬ್ರಹ್ಮಣೋ ವಿಷ್ಣೋಃ ಸ್ವರೂಪನಿರ್ಣಯಾರ್ಥಾನಿ ಸೂತ್ರಾಣೀತಿ ಯಾವತ್ ॥

ಅತಃ ಶರೀರಃ ಪರಮಾತ್ಮೈವ । 'ಶಾರೀರೌ ತಾವುಭೌ ಜ್ಞೇಯೌ ಜೀವಶ್ಚೇಶ್ವರಸಂಜ್ಞಿತಃ' । ತಸ್ಯ ಸಕಲಗುಣಪೂರ್ಣತ್ವಾದಿವಿಷಯತ್ವೇನ ಶಾರೀರಕಮೀಮಾಂಸಾ ॥ – ನ್ಯಾಯಸುಧಾ (೧/೧/೧)

೨. ನಿರ್ಣೀಯತೇ ಯತಃ ಸಮ್ಯಗಿದಂ ಸತ್ಯಮಿತಿ ಸ್ಫುಟಮ್ ।
ಶ್ರುತಿಸ್ಮೃತ್ಯುದಿತಂ ಸರ್ವಂ ವ್ಯಕ್ತಂ ಮೀಮಾಂಸಯೈತಯಾ ॥
ಸತ್ಯಮಿತ್ಯುಚ್ಯತೇ ತಸ್ಮಾನ್ಮೀಮಾಂಸಾ ಬ್ರಹ್ಮನಿಶ್ಚಯಃ ॥ – ಶಬ್ದನಿರ್ಣಯ (ತಲವಕಾರಭಾಷ್ಯ)

ಬ್ರಹ್ಮಸೂತ್ರ ಎಂದರೇನು?

ಬ್ರಹ್ಮಶಬ್ದವಾಚ್ಯಗಳಾದ ವೇದಗಳ (ವೇದೋಪಲಕ್ಷಿತ ಸಕಲಶಾಸ್ತ್ರಗಳ) ನಿರ್ಣಯರೂಪವಾಗಿರುವುದರಿಂದಲೂ, ಪರಬ್ರಹ್ಮಸ್ವರೂಪ ನಿರ್ಣಾಯಕವಾಗಿರುವುದರಿಂದಲೂ 'ಬ್ರಹ್ಮಸೂತ್ರ' ಎಂದು ಇದಕ್ಕೆ ಹೆಸರು. ಸಕಲವೇದಾರ್ಥಭೂತನಾದ ಪರಬ್ರಹ್ಮ ಮಹಾವಿಷ್ಣುವಿನ ಸ್ವರೂಪನಿರ್ಣಯಕ್ಕೋಸ್ಕರ ಪ್ರವೃತ್ತವಾಗಿರುವುದರಿಂದ ಇವು 'ಬ್ರಹ್ಮಸೂತ್ರ' ಎಂದು ಭಾವ. ಶಾರೀರಕಸೂತ್ರವೆಂಬುದಕ್ಕೂ ಇದೇ ಅರ್ಥ. ಬ್ರಹ್ಮ ಎಂದರೆ ವಿಷ್ಣು ಎಂದರ್ಥ. ಆದ್ದರಿಂದ ಇವನ್ನು ವಿಷ್ಣುಸೂತ್ರಗಳು ಎಂದೂ ಕರೆಯಬಹುದು.

'ಬ್ರಹ್ಮ' ಎಂದರೆ 'ಜೀವರು', 'ಪರಬ್ರಹ್ಮ' ಎಂದರೆ 'ಮುಕ್ತಜೀವರು', 'ಪರಮಬ್ರಹ್ಮ' ಎಂದರೆ 'ಮಹಾಲಕ್ಷ್ಮಿ', 'ಪರಮಮಹದ್ಬ್ರಹ್ಮ' ಎಂದರೆ 'ನಾರಾಯಣ' ಎಂದೂ ಅರ್ಥವಾಗುತ್ತದೆ ಎಂಬುದಾಗಿ ಶ್ರೀಮದಾಚಾರ್ಯರು ವಿಷ್ಣುತತ್ತ್ವವಿನಿರ್ಣಯ ಗ್ರಂಥದಲ್ಲಿ 'ಪರಮಶ್ರುತಿ'ಯ ಆಧಾರವನ್ನು ನೀಡಿ ನಿರೂಪಿಸಿರುವರು[೧]. ಅದರ ಆಧಾರದಿಂದ ವಿಚಾರಮಾಡಿದರೆ 'ಬ್ರಹ್ಮಸೂತ್ರ'ವು 'ಬ್ರಹ್ಮಸೂತ್ರ', ಪರಬ್ರಹ್ಮಸೂತ್ರ', 'ಪರಮಬ್ರಹ್ಮಸೂತ್ರ', 'ಪರಮಮಹದ್ಬ್ರಹ್ಮಸೂತ್ರ'ವೂ ಆಗಿದೆ ಎನ್ನಬಹುದು. ಇದು ಜೀವರ ಅಣುತ್ವ, ಅಸ್ವಾತಂತ್ರ್ಯ, ತ್ರೈವಿಧ್ಯ ಮೊದಲಾದವುಗಳನ್ನು ನಿರೂಪಿಸುವುದರಿಂದ 'ಬ್ರಹ್ಮಸೂತ್ರ'; 'ಮುಕ್ತಜೀವ'ರ ವಿಷಯವನ್ನು ವಿಶೇಷವಾಗಿ ಫಲಾಧ್ಯಾಯದಲ್ಲಿ ನಿರೂಪಿಸುವುದರಿಂದ 'ಪರಬ್ರಹ್ಮಸೂತ್ರ'; ಮಹಾಲಕ್ಷ್ಮಿಯ ಅಕ್ಷರಪುರುಷತ್ವ, ಸಮನಾತ್ವಾದಿಗಳನ್ನು ನಿರೂಪಿಸುವುದರಿಂದ 'ಪರಮಬ್ರಹ್ಮಸೂತ್ರ', ನಾರಾಯಣನ ಅನಂತಗುಣಪೂರ್ಣತ್ವ, ಸಕಲದೋಷದೂರತ್ವ, ಸ್ವಾತಂತ್ರ್ಯಾದಿಗಳನ್ನು ಸರ್ವತ್ರ ನಿರೂಪಿಸುವುದರಿಂದ ಮುಖ್ಯವಾಗಿ 'ಪರಮಮಹದ್ಬ್ರಹ್ಮಸೂತ್ರ' – ಆಗಿದೆ ಎಂದೂ ಅರ್ಥ ಮಾಡಬಹುದು.

'ಬ್ರಹ್ಮ' ಎಂದರೆ [೨]ವಿಷ್ಣು 'ಸೂತ್ರ' ಎಂದರೆ [೩]ವಾಯು ಎಂದೂ ಅರ್ಥವಾಗುತ್ತದೆ. ಅದರಂತೆ ಶ್ರೀಹರಿವಾಯುಗಳ ಮಹಿಮೆ (ವಿಷ್ಣುಸರ್ವೋತ್ತಮತ್ತ್ವ ಮತ್ತು ವಾಯುಜೀವೋತ್ತಮತ್ತ್ವ)ವನ್ನು ಪ್ರಧಾನವಾಗಿ ನಿರೂಪಿಸುವುದರಿಂದಲೂ ಸಹ ಇದಕ್ಕೆ 'ಬ್ರಹ್ಮಸೂತ್ರ' ಎಂಬ ಹೆಸರು ಯುಕ್ತವಾಗುತ್ತದೆ ಎಂದು ಹೇಳಬಹುದು.

ಸೂತ್ರಸಾಹಿತ್ಯವು ಅನಂತರ ಕಾಲದಲ್ಲಿ 'ಕಲ್ಪಸೂತ್ರ' 'ಶುಲ್ಬಸೂತ್ರ', 'ಧರ್ಮಸೂತ್ರ', 'ವ್ಯಾಕರಣಸೂತ್ರ' ಮೊದಲಾಗಿ ಅನೇಕರೀತಿಯಾಗಿ ಹಬ್ಬಿದರೂ, ಅದರ 'ಉಗಮ' ಶ್ರೀವೇದವ್ಯಾಸರ 'ಬ್ರಹ್ಮಸೂತ್ರ'ಗಳಲ್ಲೇ ಇದೆ ಎಂಬುದು ಗಮನಾರ್ಹ.

---

೧. ಬ್ರಹ್ಮಾಣಿ ಜೀವಾಃ ಸರ್ವೇಽಪಿ ಪರಬ್ರಹ್ಮಾಣಿ ಮುಕ್ತಿಗಾಃ ।
ಪ್ರಕೃತಿಃ ಪರಮಂ ಬ್ರಹ್ಮ ಪರಮಂ ಮಹದಚ್ಯುತಃ ॥ – ತತ್ತ್ವನಿರ್ಣಯೋದಾಹೃತಪರಮಶ್ರುತಿವಚನ

೨. ಬ್ರಹ್ಮಶಬ್ದಶ್ಚ ವಿಷ್ಣಾವೇವ – ಬ್ರಹ್ಮಸೂತ್ರಭಾಷ್ಯ (೧/೧/೧)

೩. ಸೂತ್ರಂ ಸ ವಾಯುಃ ಬಲಸಂವಿದಾತ್ಮಾ – ಮ.ಭಾ.ತಾ.ನಿ. (೩/೪)

ಕರ್ಮಮೀಮಾಂಸಾಸೂತ್ರ, ದೈವೀಮೀಮಾಂಸಾಸೂತ್ರಗಳು ಸಹ ವೇದನಿರ್ಣಯಕ್ಕೆ ಹೊರಟ ಸೂತ್ರಗಳಾದರೂ, ಸಮಸ್ತವೇದಗಳ ಮಹಾತಾತ್ಪರ್ಯ ನಿರ್ಣಾಯಕ-ಸೂತ್ರಗಳು ಎಂಬ ದೃಷ್ಟಿಯಿಂದ 'ಬ್ರಹ್ಮಸೂತ್ರ'ಗಳಿಗೇ [1]ಅಗ್ರಸ್ಥಾನ. ವಕ್ತ್ರಾನುಕೂಲ್ಯ (ಸಾಕ್ಷಾತ್ ವೇದವ್ಯಾಸಕೃತ), ಶ್ರೋತ್ರಾನುಕೂಲ್ಯ (ಬ್ರಹ್ಮಾದಿಗಳ ಪ್ರಾರ್ಥನೆಯಿಂದ ರಚಿತ) ಮತ್ತು ಪ್ರಸಂಗಾನುಕೂಲ್ಯ (ಅತ್ಯಂತ ವಿಷಮ ಸನ್ನಿವೇಶದಲ್ಲಿ ರಚಿತ) ಎಂಬ ಮೂರು ಕಾರಣಗಳಿಂದ ಸಿದ್ಧವಾಗುವ [2]'ಆಪ್ತಿಮೂಲತ್ವ'ವೂ ಸಹ ಬ್ರಹ್ಮಸೂತ್ರಗಳಿಗೇ ಅತ್ಯಂತ ವಿಶೇಷವಾಗಿ ಉಂಟು ಎಂಬುದನ್ನು ಶ್ರೀಮದಾಚಾರ್ಯರು ಅನುವ್ಯಾಖ್ಯಾನದಲ್ಲಿ ಸಮರ್ಥಿಸಿರುವರು (೧/೫-೭). 'ಗತಿಸಾಮಾನ್ಯಾತ್' ಎಂಬ ಸೂತ್ರದಲ್ಲಿ ವೇದಗಳು, ಇತಿಹಾಸಪುರಾಣಗಳು ಮೊದಲಾಗಿ ಸಚ್ಛಾಸ್ತ್ರದ ಎಲ್ಲಾ ಪ್ರಕಾರಗಳೂ ಪರಸ್ಪರ ಅವಿರುದ್ಧವಾಗಿದ್ದು, ಅವೆಲ್ಲವುಗಳ ಮುಖ್ಯಗುರಿ ಮಹಾವಿಷ್ಣುವಿನ ಅನಂತಗುಣಪೂರ್ಣತ್ವ, ಸಕಲದೋಷದೂರತ್ವಗಳೇ ಆಗಿವೆ ಎಂಬುದಾಗಿ ಶ್ರೀವೇದವ್ಯಾಸರು ಸಮರ್ಥಿಸಿರುವರು. ಹೀಗೆ ಅಶೇಷ ಸಚ್ಛಾಸ್ತ್ರಗಳ ಮಹಾತಾತ್ಪರ್ಯ ನಿರ್ಣಾಯಕಗ್ರಂಥವಾಗಿ 'ಬ್ರಹ್ಮಸೂತ್ರ' ಸರ್ವೋತ್ತಮ ಶಾಸ್ತ್ರವೆಂದು ಮಾನ್ಯವಾಗಿದೆ. 'ವಿದ್ಯೈವ ತು ನಿರ್ಧಾರಣಾತ್' ಎಂಬ ಸೂತ್ರಕ್ಕೆ 'ಪರವಿದ್ಯೈವ ತು ನಿರ್ಧಾರಣಾತ್' ಎಂದೂ ಅರ್ಥವಾಗುವುದರ ಮೂಲಕ ಬ್ರಹ್ಮಸೂತ್ರಗಳಲ್ಲೇ ಅದರ ಪರವಿದ್ಯಾತ್ವ ಸ್ಥಾಪಿತವಾಗಿದೆ ಎನ್ನಬಹುದು.

ಬ್ರಹ್ಮಸೂತ್ರಗಳಲ್ಲಿ ಒಟ್ಟು ನಾಲ್ಕು ಅಧ್ಯಾಯಗಳಿದ್ದು, ಅವುಗಳಿಗೆ ಕ್ರಮವಾಗಿ ಸಮನ್ವಯಾಧ್ಯಾಯ, ಅವಿರೋಧಾಧ್ಯಾಯ, ಸಾಧನಾಧ್ಯಾಯ ಮತ್ತು ಫಲಾಧ್ಯಾಯ ಎಂದು ಹೆಸರು. ಪ್ರತಿಯೊಂದು ಅಧ್ಯಾಯದಲ್ಲೂ ನಾಲ್ಕು ಪಾದಗಳಿದ್ದು ಇದರಲ್ಲಿನ ಒಟ್ಟು ಪಾದಗಳ ಸಂಖ್ಯೆ ಹದಿನಾರು; ಒಟ್ಟು ಸೂತ್ರಗಳ ಸಂಖ್ಯೆ ೫೬೪; ಒಟ್ಟು ಅಧಿಕರಣಗಳ ಸಂಖ್ಯೆ ೨೨೨(೩).

---

೧. ನಿರ್ವಿಶೇಷಿತಸೂತ್ರತ್ವಂ ಬ್ರಹ್ಮಸೂತ್ರಸ್ಯ ಚಾಪ್ಯತಃ ।
ಯಥಾ ವ್ಯಾಸತ್ವಮೇಕಸ್ಯ ಕೃಷ್ಣಸ್ಯಾನ್ಯೇ ವಿಶೇಷಣಾತ್ ।
ಸವಿಶೇಷಣಸೂತ್ರಾಣಿ ಹ್ಯಪರಾಣಿ ವಿದೋ ವಿದುಃ ।
ಮುಖ್ಯಸ್ಯ ನಿರ್ವಿಶೇಷೇಣ ಶಬ್ದೋಽನ್ಯೇಷಾಂ ವಿಶೇಷತಃ ।
ಇತಿ ವೇದವಿದಃ ಪ್ರಾಹುಃ ಶಬ್ದತತ್ತ್ವಾರ್ಥವೇದಿನಃ ॥
– ಸ್ಕಂದಪುರಾಣೇ (ಬ್ರಹ್ಮಸೂತ್ರಭಾಷ್ಯ ೧-೧-೧)

೨. ಆಪ್ತವಾಕ್ಯತಯಾ ತೇನ ಶ್ರುತಿಮೂಲತಯಾ ತಥಾ ।
ಯುಕ್ತಿಮೂಲತಯಾ ಚೈವ ಪ್ರಾಮಾಣ್ಯಂ ತ್ರಿವಿಧಂ ಮಹತ್ ।
ದೃಶ್ಯತೇ ಬ್ರಹ್ಮಸೂತ್ರಾಣಾಮೇಕಧಾಽನ್ಯತ್ರ ಸರ್ವಶಃ ।
ಅತೋ ನೈತಾದೃಶಂ ಕಿಂಚಿತ್ ಪ್ರಮಾಣತಮಮಿಷ್ಯತೇ ॥ – ಅನುವ್ಯಾಖ್ಯಾನ (೧/೫-೭)

ಬ್ರಹ್ಮಸೂತ್ರಗಳ ಕರ್ತೃ - ಶ್ರೀವೇದವ್ಯಾಸರು

ಬ್ರಹ್ಮಸೂತ್ರಗಳನ್ನು ಬರೆದ ಶ್ರೀವೇದವ್ಯಾಸರು ನಾರಾಯಣನ ಸಾಕ್ಷಾದವತಾರರು. ಬ್ರಹ್ಮಾದಿದೇವತೆಗಳಿಂದ [೧]ಪ್ರಾರ್ಥಿತನಾಗಿ ಶ್ರೀನಾರಾಯಣನು ಶ್ರೀವೇದವ್ಯಾಸ-ರೂಪವನ್ನು ಪರಾಶರ-ಸತ್ಯವತಿಯರ ನಿಮಿತ್ತದಿಂದ ಪ್ರಕಟಿಸಿ, ತಾನೇ 'ಜ್ಞಾನಪ್ರದ' ಎಂಬುದನ್ನು ತೋರಿಸಿಕೊಟ್ಟಿರುವನು. ಇದು ಪರಮಾತ್ಮನ ಮತ್ಸ್ಯಾದಿ ಇತರ ಅವತಾರಗಳಂತೆ ಜ್ಞಾನಾನಂದಮಯವಾದ ಅಪ್ರಾಕೃತವೂ ಪೂರ್ಣವೂ ಆದ ರೂಪ. ಪರಾಶರ-ಸತ್ಯವತಿಯರ ನಿಮಿತ್ತವು ಎಂಬುದು ಅಸುರಮೋಹನಕ್ಕೆಂದು ಮಾತ್ರ. ಶ್ರೀವೇದವ್ಯಾಸಾವತಾರದ ಹಿನ್ನೆಲೆ, ಅವತಾರ ಪ್ರಸಂಗ, ಅವತಾರಕಾರ್ಯ, ವೇದವಿಭಾಗ, ಮಹಾಭಾರತ ಬ್ರಹ್ಮಸೂತ್ರ ಪುರಾಣಾದಿ ರಚನೆಯ ವೈಭವ, ಶಿಷ್ಯಸಂಪತ್ತಿ ಮತ್ತು ಸರ್ವೋತ್ತಮತ್ವಾದಿಗಳನ್ನು ಶ್ರೀಮದಾಚಾರ್ಯರು ಮಹಾಭಾರತತಾತ್ಪರ್ಯನಿರ್ಣಯದ ಹತ್ತನೆಯ ಅಧ್ಯಾಯದಲ್ಲಿ ಹೃದಯಂಗಮವಾಗಿ [೨]ತಿಳಿಸಿಕೊಟ್ಟಿರುವರು.

ಪಾರಾಶರ್ಯ, ದ್ವೈಪಾಯನ, ಕೃಷ್ಣದ್ವೈಪಾಯನ, ಬಾದರಾಯಣ ಇತ್ಯಾದಿ ನಾಮಾಂತರಗಳೂ ಶ್ರೀವೇದವ್ಯಾಸರಿಗೆ ಉಂಟು. ಮಹಾಭಾರತ ರಚನೆ, ಬ್ರಹ್ಮಸೂತ್ರ ರಚನೆ, ಪುರಾಣರಚನೆ, ಬ್ರಹ್ಮರುದ್ರಾದಿಗಳಂತಹ ಶಿಷ್ಯಸಂಪತ್ತಿ ಮೊದಲಾದ ಪ್ರತಿಯೊಂದು ಕಾರಣದಿಂದಲೂ ಇವರು ಸಾಕ್ಷಾತ್ ಭಗವದವತಾರರು[೩] ಎಂಬುದು ಸ್ಥಿರಪಡುತ್ತದೆ. ಆದ್ದರಿಂದ 'ವ್ಯಾಸಸ್ತು ಕಶ್ಚನ ಋಷಿಃ' ಎಂಬ ಕೆಲವರ ವಾದವು ಸಕಲಶಾಸ್ತ್ರಗಳಿಗೆ ವಿರುದ್ಧವಾದುದು.

ಮಹಾಭಾರತರಚನೆಯೊಂದಿಗೆ ಅದರಲ್ಲಿ ಬರುವ ಒಂದು ಅತ್ಯಂತ ಪ್ರಧಾನಪಾತ್ರವೂ ಆಗಿರುವುದು ಶ್ರೀವೇದವ್ಯಾಸರ ವೈಶಿಷ್ಟ್ಯ; ಧೃತರಾಷ್ಟ್ರ ಪಾಂಡು ವಿದುರರ ಜನಕರು, ವಿಷಮಸನ್ನಿವೇಶಗಳಲ್ಲಿ ತಕ್ಷಣ ಕಾಣಿಸಿಕೊಳ್ಳುವ ಅಪೂರ್ವ ವ್ಯಕ್ತಿತ್ವ ಅವರದು. ಸಂಜಯನಿಗೆ ದಿವ್ಯದೃಷ್ಟಿಯನ್ನಿತ್ತು ಕುರುಕ್ಷೇತ್ರಯುದ್ಧ ಮತ್ತು ವಿಶ್ವರೂಪಗಳ ದರ್ಶನ, ಗೀತಾಶ್ರವಣಾದಿಗಳ ಅವಕಾಶವನ್ನಿತ್ತವರೂ ಶ್ರೀವೇದವ್ಯಾಸರೇ. ದ್ರೌಪದ್ಯುತ್ಪತ್ತಿಯ

---

೧. ಪ್ರಾದುರ್ಭೂತೋ ಹರಿರ್ವ್ಯಾಸೋ ವಿರಿಂಚಭವಪೂರ್ವಕೈಃ ।
ಅರ್ಥಿತಃ ಪರವಿದ್ಯಾಖ್ಯಂ ಚಕ್ರೇ ಶಾಸ್ತ್ರಮನುತ್ತಮಮ್ ॥ - ಅನುವ್ಯಾಖ್ಯಾನ (೧-೩)

೨. ಸರ್ವಾಣಿ ಶಾಸ್ತ್ರಾಣಿ ತಥೈವ ಕೃತ್ವಾ ವಿನಿರ್ಣಯಂ ಬ್ರಹ್ಮಸೂತ್ರಂ ಚಕಾರ ।
ತಚ್ಛುಶ್ರುವುರ್ಬ್ರಹ್ಮಗಿರೀಶಮುಖ್ಯಾಃ ಸುರಾ ಮುನೀನಾಂ ಪ್ರವರಾಶ್ಚ ತಸ್ಮಾತ್॥
- ಮ. ಭಾ. ತಾ. ನಿ. (೧೦-೫೮)

೩. ಕೃಷ್ಣದ್ವೈಪಾಯನಂ ವ್ಯಾಸಂ ವಿದ್ಧಿ ನಾರಾಯಣಂ ಪ್ರಭುಮ್ ।
ಕೋ ಹ್ಯನ್ಯಃ ಪುಂಡರೀಕಾಕ್ಷಾನ್ಮಹಾಭಾರತಕೃದ್ಭವೇತ್ ॥
- ಮಹಾಭಾರತ ಮತ್ತು ವಾಯುಪ್ರೋಕ್ತ (ಮ. ಭಾ. ತಾ. ನಿ. ೨/೫೫)

ಹಿನ್ನೆಲೆಯನ್ನು ದ್ರುಪದರಾಜನಿಗೆ ವಿವರಿಸಿ, ದ್ರೌಪದಿಯ ಪಂಚಪತಿತ್ವದ ಸಮಸ್ಯೆಯನ್ನು ಪರಿಹರಿಸಿದವರು ಶ್ರೀವೇದವ್ಯಾಸರು. ಯುದ್ಧದ ಅನಂತರ ಅಶ್ವತ್ಥಾಮ - ಅರ್ಜುನರು ಬಿಟ್ಟ ಬ್ರಹ್ಮಶಿರೋಽಸ್ತ್ರಗಳ ಮಧ್ಯೆ ನಿಂತುದು ಇವರು ನಾರಾಯಣನೇ ಎಂಬುದಕ್ಕೆ ಮತ್ತೊಂದು ಪುರಾವೆ. ಬ್ರಹ್ಮಶಿರೋಽಸ್ತ್ರದ ಉಪಸಂಹಾರಕ್ಕೆ ಅಖಂಡ ಬ್ರಹ್ಮಚರ್ಯ ಅಗತ್ಯ ಎಂದ ಮೇಲೆ, ಹೀಗೆ ಎರಡು ಬ್ರಹ್ಮಶಿರೋಽಸ್ತ್ರಗಳ ಮಧ್ಯೆ ನಿಯಂತ್ರಕರಾಗಿ ನಿಂತ ಶ್ರೀವೇದವ್ಯಾಸರು 'ಅನಾದಿಬ್ರಹ್ಮಚಾರಿ' ಎಂಬುದು ಕೈಮುತ್ಯಸಿದ್ಧ. ಅವರು 'ಶುಕೀ'ರೂಪದ ಘೃತಾಚಿಯನ್ನು ಕಾಮಿಸಿದರು ಎಂಬುದು ಅಸುರಮೋಹನಕ್ಕಾಗಿ ಮಾತ್ರ. ಅರ್ಜುನನಿಗೆ ಶ್ರೀಕೃಷ್ಣನಿತ್ತ ದಿವ್ಯದೃಷ್ಟಿಯಿಂದ ಆತನ 'ವಿಶ್ವರೂಪ' ಗೋಚರಿಸಿತು. ಆ ವಿಶ್ವರೂಪವನ್ನು ಕಾಣಲು ಸಂಜಯನಿಗೆ ಶ್ರೀವೇದವ್ಯಾಸರಿತ್ತ ದಿವ್ಯದೃಷ್ಟಿ ಕಾರಣವಾಯಿತು. ಹೀಗೆ 'ವಿಶ್ವರೂಪ'ವನ್ನು ತೋರಿಸಿಕೊಡುವ ಒಂದೇ ರೀತಿಯ ದಿವ್ಯದೃಷ್ಟಿಗಳನ್ನಿತ್ತ ಶ್ರೀಯಾದವಕೃಷ್ಣ ಶ್ರೀವಾಸಿಷ್ಠಕೃಷ್ಣ ಇಬ್ಬರೂ ಮೂಲತಃ ಒಂದೇ ಆಗಿದ್ದು ಅವರೀರ್ವರೂ ಸಾಕ್ಷಾತ್ ಭಗವದವತಾರರು ಎನ್ನಲು ಇನ್ನೊಂದು ಪ್ರಮಾಣವಾಗಿದೆ.

ಇವುಗಳಲ್ಲದೆ ಶ್ರುತಿಸ್ಮೃತಿಗಳೂ ಇವರನ್ನು ಸಾಕ್ಷಾತ್ ಭಗವದವತಾರ ಎಂದೇ ಕರೆದಿವೆ ಎಂಬುದೂ ಗಮನಾರ್ಹ. ಮಹಾಭಾರತಯುದ್ಧದಲ್ಲಿ ಹತವಾದ ಹದಿನೆಂಟು ಅಕ್ಷೋಹಿಣೀ ಸೇನೆಯನ್ನು, ದುರ್ಯೋಧನಾದಿಗಳನ್ನು ಪುನಃ ಧೃತರಾಷ್ಟ್ರ- ಗಾಂಧಾರಿಯರಿಗೆ ಜೀವಂತವಾಗಿ ತೋರಿಸಿದ ಆಶ್ರಮವಾಸಿಕಪರ್ವದ ಅಪೂರ್ವಪ್ರಸಂಗ ಇವರ ಲೋಕೋತ್ತರವಾದ ಮತ್ತೊಂದು ಮಾಹಾತ್ಮ್ಯ; ಇದು ಇವರು 'ಜನ್ಮಾದ್ಯಸ್ಯ ಯತಃ' ಸೂತ್ರಪ್ರತಿಪಾದ್ಯನಾದ ಪರಬ್ರಹ್ಮನೇ ಆಗಿರುವರು ಎಂಬುದಕ್ಕೆ ಗಮಕವಾಗಿದೆ.

ಇವರು ಯೋಗ್ಯರ ಪಾಲಿಗೆ 'ಜ್ಞಾನಂ ಪ್ರಕರ್ಷೇಣ ದದಾತಿ' (ಜ್ಞಾನದಾಯಕರು) ಎಂಬರ್ಥದಲ್ಲೂ, ಅಯೋಗ್ಯರಿಗೆ 'ಜ್ಞಾನಂ ಪ್ರಕರ್ಷೇಣ ದ್ಯತಿ' (ಜ್ಞಾನನಾಶಕರು) ಎಂಬರ್ಥದಲ್ಲೂ 'ಜ್ಞಾನಪ್ರದ'ರಾಗಿರುವರು.

ಪ್ರತಿ ದ್ವಾಪರಯುಗದಲ್ಲೂ ಒಬ್ಬೊಬ್ಬ 'ವ್ಯಾಸ'ರಿದ್ದರೂ, ಐದು ದ್ವಾಪರಯುಗದ, ಅದರಲ್ಲೂ ಇಪ್ಪತ್ತೆಂಟನೆಯ ದ್ವಾಪರಯುಗದ ವ್ಯಾಸರು ಮಾತ್ರ ಸಾಕ್ಷಾತ್ [೧]ನಾರಾಯಣ ಎಂದು ಶ್ರೀಮದಾಚಾರ್ಯರು ಆಧಾರವನ್ನಿತ್ತಿರುವರು. ಅಶ್ವತ್ಥಾಮರು ಮುಂದಿನ (ಇಪ್ಪತ್ತೊಂಭತ್ತು) ದ್ವಾಪರದ ವ್ಯಾಸರು ಎಂಬುದನ್ನೂ ಅವರೇ ತಿಳಿಸಿರುವರು.

---

೧. ತೃತೀಯೇ ಸಪ್ತಮೇ ಚೈವ ಷೋಡಶೇ ಪಂಚವಿಂಶಕೇ ।
ಅಷ್ಟಾವಿಂಶೇ ಯುಗೇ ಕೃಷ್ಣಃ ಸತ್ಯವತ್ಯಾಮಜಾಯತ ॥
ವ್ಯಾಸಾಚಾರ್ಯಸ್ತು ಪೂರ್ವೇಷು ಚರಮೇ ಸ್ವಯಮೇವ ತು ।
ವಿವ್ಯಾಸ ವೇದಾಂಶ್ಚಕ್ರೇ ಚ ಭಾರತಂ ವೇದಸಂಮಿತಮ್ ॥ – ಭಾಗವತತಾತ್ಪರ್ಯ (೨-೭-೩೮)

ಬ್ರಹ್ಮಸೂತ್ರಗಳ ಅರ್ಥವೈಭವ

ವೇದಗಳಿಗೆ (ಅತಿಕಡಿಮೆ ಎಂದರೂ) ಮೂರು ಅರ್ಥಗಳು, ಮಹಾಭಾರತಕ್ಕೆ ಹತ್ತು ಅರ್ಥಗಳು ಮತ್ತು ವಿಷ್ಣುಸಹಸ್ರನಾಮಕ್ಕೆ ನೂರು ಅರ್ಥಗಳು ಎಂದು ಶ್ರೀಮದಾಚಾರ್ಯರು ತಿಳಿಸಿರುವರು. ಈ ದೃಷ್ಟಿಯಿಂದಲೂ ವೇದಗಳಿಗಿಂತಲೂ ಮಹಾಭಾರತ ಮಿಗಿಲು, ಅದರಲ್ಲೂ ವಿಷ್ಣುಸಹಸ್ರನಾಮ (ಮತ್ತು ಭಗವದ್ಗೀತೆ) ಉತ್ಕೃಷ್ಟ ಎಂದಾಗುತ್ತದೆ. ಅದರಂತೆ ವಿಷ್ಣುಸಹಸ್ರನಾಮಕ್ಕಿಂತಲೂ ಮಿಗಿಲಾದ ಬ್ರಹ್ಮಸೂತ್ರಗಳಿಗೆ ನೂರಕ್ಕಿಂತ ಹೆಚ್ಚು [೧]ಅರ್ಥ ಎಂದು ಸಿದ್ಧವಾಗುತ್ತದೆ. ಭಾಷ್ಯವು 'ಸಹಸ್ರಾರ್ಥಗರ್ಭಿತ' ಎಂಬ ತ್ರಿವಿಕ್ರಮಪಂಡಿತಾಚಾರ್ಯರ ಮಾತು ಸಹ ಸೂತ್ರಗಳ ಅರ್ಥವೈಭವಕ್ಕೆ ದ್ಯೋತಕವಾಗಿದೆ.

ಬ್ರಹ್ಮಸೂತ್ರಗಳು ಪರಬ್ರಹ್ಮತತ್ತ್ವನಿರ್ಣಾಯಕ; ಭಾವಿಬ್ರಹ್ಮರಾದ ವಾಯುದೇವರು ಯೋಗ್ಯಜೀವರನ್ನು ಪರಬ್ರಹ್ಮನ ಬಳಿ ಕರೆದೊಯ್ದು ಮೋಕ್ಷಕೊಡಿಸುವ ಗುರುಗಳು ('ಸೂತ್ರ' ಎಂಬ ಅವರ ಹೆಸರು ಇದನ್ನೇ ಸೂಚಿಸುತ್ತದೆ) ಎಂದರೆ ಬ್ರಹ್ಮಸೂತ್ರಗಳ ಅಭಿಮಾನಿದೇವತೆ ಅವರು.

ಮಹಾವಿಷ್ಣುವು ತನ್ನ ನಾಭಿಕಮಲದಿಂದ ಬ್ರಹ್ಮದೇವರನ್ನು ಸೃಷ್ಟಿಸಿದ ಪ್ರಸಂಗವು ಆತನು ತಂದೆಯಂತೆ ಸ್ವತಃ ತಾಯಿಯೂ ಆಗಬಲ್ಲ ಎಂಬುದಕ್ಕೆ ಸೂಚಕವಾಗಿದ್ದು ಅದರಂತೆ ಶ್ರೀವ್ಯಾಸರ ಪ್ರತಿರೂಪವಾದ ಬ್ರಹ್ಮಸೂತ್ರವು ವೇದನಿರಪೇಕ್ಷ ಸಹ ಪ್ರಮಾಣಕರವಾಗಿ ತಂದೆಯಂತೆ ತಾಯಿಯೂ ಆಗಬಲ್ಲದು ಎಂಬುದಕ್ಕೆ ದ್ಯೋತಕವಾಗಿದೆ. ಈ ದೃಷ್ಟಿಯಿಂದಲೂ ಬ್ರಹ್ಮಸೂತ್ರವು 'ಸರ್ವೋತ್ತಮಶಾಸ್ತ್ರ'ವಾಗಿದೆ. ಶ್ರೀನಾರಾಯಣನಿಗೆ ಸ್ತ್ರೀರೂಪವೂ ಉಂಟು; ಆದರೆ ಮಹಾಲಕ್ಷ್ಮಿಗೆ ಪುರುಷರೂಪ (ಎಂದರೆ ಸ್ವಾತಂತ್ರ್ಯ)ವು ಇಲ್ಲ. ದ್ವೈತವೇದಾಂತವಾಙ್ಮಯದ ಬಹುಭಾಗವು ಸೂತ್ರಪ್ರಸ್ಥಾನಕ್ಕೆ ಮೀಸಲಾಗಿದೆ ಎಂಬುದನ್ನೂ ಗಮನಿಸಬೇಕು. ಉಪೇಂದ್ರನು ಇಂದ್ರನಿಗಿಂತ ಉತ್ತಮನಾಗಿ ಸರ್ವಶ್ರೇಷ್ಠನಾಗಿರುವಂತೆ, 'ಉಪಕರಣ'ವಾದರೂ ಬ್ರಹ್ಮಸೂತ್ರವು ವೇದಭಾರತಾದಿಗಳಿಗಿಂತ ಉತ್ತಮವಾಗಿ ಸರ್ವಶ್ರೇಷ್ಠವಾಗಿದೆ.

ಬ್ರಹ್ಮಸೂತ್ರಗಳ ಸಂಖ್ಯೆ ೫೬೪ ಎಂಬುದು 'ವಿಷ್ಣು' ಎಂಬ ಹೆಸರಿನಿಂದಲೇ ಸೂಚಿತವಾಗಿದೆ (ವಿ-೪;ಷ-೬;ಣು-೫. - **ಅಂಕಾನಾಂ ವಾಮತೋ ಗತಿಃ** - ಆದ್ದರಿಂದ ೫೬೪). ಅದರಂತೆ ೫೬೪ ಎಂಬ ಸೂತ್ರಸಂಖ್ಯೆಯು ಸಹ ಅದು 'ವಿಷ್ಣುಪ್ರತಿಪಾದಕ' ಎನ್ನಲು ಸಾಕ್ಷಿಯಾಗಿದೆ. 'ಬ್ರಹ್ಮಸೂತ್ರಾಣಿ ಭೂಷಣಮ್' ಎಂಬ ಶ್ರೀವಿಜಯೀಂದ್ರತೀರ್ಥರ ಮತ್ತು ಶ್ರೀಸುಧೀಂದ್ರತೀರ್ಥರ ಬ್ರಹ್ಮಸೂತ್ರನ್ಯಾಯಸಂಗ್ರಹಗಳ ಮಾತೂ ಗಮನಾರ್ಹ.

---

೧. **ಗ್ರಂಥೋಽಯಮಪಿ ಬಹ್ವರ್ಥೋ ಭಾಷ್ಯಂ ಚಾತ್ಯರ್ಥವಿಸ್ತರಮ್ ।**
ಬಹುಜ್ಞಾ ಏವ ಜಾನಂತಿ ವಿಶೇಷೇಣಾರ್ಥಮೇತಯೋಃ ॥ - ಅನುವ್ಯಾಖ್ಯಾನ

'ಬ್ರಹ್ಮಸೂತ್ರ'ದ ಸೂತ್ರ ಮತ್ತು ಅಧಿಕರಣಗಳ ಸಂಖ್ಯೆ ಹಾಗು ಅಧ್ಯಾಯಪಾದಗಳ ವಿವರ

೧. ಸಮನ್ವಯಾಧ್ಯಾಯ

	ಅಧಿ	ಸೂತ್ರ
೧. ಅನ್ಯತ್ರಪ್ರಸಿದ್ಧನಾಮಾತ್ಮಕ ಶಬ್ದಸಮನ್ವಯಪಾದ	೧೨	೩೧
೨. ಅನ್ಯತ್ರಪ್ರಸಿದ್ಧಲಿಂಗಾತ್ಮಕ ಶಬ್ದಸಮನ್ವಯಪಾದ	೭	೩೨
೩. ಉಭಯತ್ರಪ್ರಸಿದ್ಧನಾಮಲಿಂಗಾತ್ಮಕ ಶಬ್ದಸಮನ್ವಯಪಾದ	೧೪	೪೩
೪. ಅನ್ಯತ್ರೈವಪ್ರಸಿದ್ಧನಾಮಲಿಂಗಾತ್ಮಕ ಶಬ್ದಸಮನ್ವಯಪಾದ	೭	೨೯

೨. ಅವಿರೋಧಾಧ್ಯಾಯ

೧. ಯುಕ್ತಿಪಾದ	೧೧	೩೮
೨. ಸಮಯಪಾದ	೧೨	೪೫
೩. ಪರಸ್ಪರಶ್ರುತ್ಯವಿರೋಧಪಾದ	೧೯	೫೩
೪. ನ್ಯಾಯೋಪೇತಶ್ರುತ್ಯವಿರೋಧಪಾದ	೧೩	೨೩

೩. ಸಾಧನಾಧ್ಯಾಯ

೧. ವೈರಾಗ್ಯಪಾದ	೨೦	೨೯
೨. ಭಕ್ತಿಪಾದ	೨೦	೪೨
೩. ಉಪಾಸನಾಪಾದ	೪೨	೬೮
೪. ಜ್ಞಾನಪಾದ	೧೧	೫೧

೪. ಫಲಾಧ್ಯಾಯ

೧. ಕರ್ಮಕ್ಷಯಪಾದ	೮	೧೯
೨. ಉತ್ಕ್ರಾಂತಿಪಾದ	೧೦	೨೨
೩. ಮಾರ್ಗಪಾದ	೬	೧೬
೪. ಭೋಗಪಾದ	೧೧	೨೩

– ಒಟ್ಟು ಅಧಿಕರಣಗಳು -೨೨೨(೨೨೩); ಒಟ್ಟು ಸೂತ್ರಗಳು -೫೬೪.

ಬ್ರಹ್ಮಸೂತ್ರಗಳ ಸಾರ

ಬ್ರಹ್ಮಸೂತ್ರದ ಪ್ರತಿಪಾದದ ಸಾರವನ್ನು ಶ್ರೀಮದಾಚಾರ್ಯರು ಹೀಗೆ ಸಂಗ್ರಹಿಸಿರುವರು :

ಪ್ರಥಮಾಧ್ಯಾಯಃ

ತಮೇವ ಸಮನ್ವಯಂ ಪ್ರಕಟಯತ್ಯಾನಂದಮಯೋಽಭ್ಯಾಸಾದಿತ್ಯಾದಿನಾ, ಸಮಸ್ತೇನಾಧ್ಯಾಯೇನ ಪ್ರಾಯೇಣ ।

ಪ್ರಥಮಪಾದ – ಪ್ರಾಯೇಣಾನ್ಯತ್ರಪ್ರಸಿದ್ಧಾನಾಂ ಶಬ್ದಾನಾಂ ಪರಮಾತ್ಮನಿ ಸಮನ್ವಯಃ ಪ್ರದರ್ಶ್ಯತೇಽಸ್ಮಿನ್ ಪಾದೇ (೧/೧/೧)

ದ್ವಿತೀಯಪಾದ – ಲಿಂಗಾತ್ಮಕಾನಾಂ ಶಬ್ದಾನಾಂ ವಿಷ್ಣೌ ಪ್ರವೃತ್ತಿಂ ದರ್ಶಯತ್ಯಸ್ಮಿನ್ ಪಾದೇ ಪ್ರಾಧಾನ್ಯೇನ (೧/೨/೧)

ತೃತೀಯಪಾದ – ತತ್ರ ಚಾನ್ಯತ್ರ ಚ ಪ್ರಸಿದ್ಧಾನಾಂ ಶಬ್ದಾನಾಂ ವಿಷ್ಣೌ ಸಮನ್ವಯಂ ಪ್ರಾಯೇಣಾಸ್ಮಿನ್ ಪಾದೇ ದರ್ಶಯತಿ (೧/೩/೧)

ಚತುರ್ಥಪಾದ – ಶ್ರುತಿಲಿಂಗಾದಿಭಿರನ್ಯತ್ರೈವ ಪ್ರಸಿದ್ಧಾನಾಮಪಿ ಶಬ್ದಾನಾಂ ಸಾಮಸ್ತ್ಯೇನ ವಿಶೇಷಹೇತುಭಿರ್ವಿಷ್ಣಾವೇವ ಪ್ರವೃತ್ತಿಂ ದರ್ಶಯತ್ಯಸ್ಮಿನ್ ಪಾದೇ । (೧/೪/೧)

ದ್ವಿತೀಯಾಧ್ಯಾಯಃ

ಉಕ್ತೇಽರ್ಥೇಽವಿರೋಧಂ ದರ್ಶಯತ್ಯನೇನಾಧ್ಯಾಯೇನ ।

ಪ್ರಥಮಪಾದ – ಪ್ರಥಮಪಾದೇ ಯುಕ್ತ್ಯವಿರೋಧಮ್ (೨/೧/೧)

ದ್ವಿತೀಯಪಾದ – 'ಇತರೇಷಾಂ ಚಾನುಪಲಬ್ಧೇಃ' ಇತಿ ಸಾಮಾನ್ಯತೋ ನಿರಾಕರಣಂ ಸಮಯಾನಾಂ ಕೃತಮ್ । ವಿಶೇಷತೋ ನಿರಾಕರೋತ್ಯಸ್ಮಿನ್ ಪಾದೇ । (೨/೨/೧)

ತೃತೀಯಪಾದ – ಜೀವಪರಮಾತ್ಮಾಧಿಭೂತಾಧಿದೈವೇಷು ಶ್ರುತೀನಾಂ ಪರಸ್ಪರಂ ವಿರೋಧಮಪಾಕರೋತ್ಯನೇನ ಪಾದೇನ । (೨/೩/೧)

ಚತುರ್ಥಪಾದ – ಯುಕ್ತಿಸಹಿತಶ್ರುತಿವಿರೋಧಂ ಶ್ರುತೀನಾಮಪಾಕರೋತ್ಯನೇನಪಾದೇನ (೨/೪/೧)

ತೃತೀಯಾಧ್ಯಾಯಃ

ಸಾಧನವಿಚಾರೋಽಯಮಧ್ಯಾಯಃ ।

ಪ್ರಥಮಪಾದ – ವೈರಾಗ್ಯಾರ್ಥೇ ಗತ್ಯಾದಿನಿರೂಪಣಾ ಪ್ರಥಮಪಾದೇ (೩/೧/೧)

ದ್ವಿತೀಯಪಾದ – ಭಕ್ತಿರಸ್ಮಿನ್ ಪಾದೇ ಉಚ್ಯತೇ । ಭಕ್ತ್ಯರ್ಥಂ ಭಗವನ್ಮಹಿಮೋಕ್ತಿಃ । (೩/೨/೧)

ತೃತೀಯಪಾದ – ಉಪಾಸನಾಽಸ್ಮಿನ್ ಪಾದ ಉಚ್ಯತೇ । ಸರ್ವಪರಿಜ್ಞಾನಂ ಪ್ರಥಮತ ಉಚ್ಯತೇ । (೩/೩/೧)

ಚತುರ್ಥಪಾದ – ಜ್ಞಾನಸಾಮರ್ಥ್ಯಮಸ್ಮಿನ್ ಪಾದ ಉಚ್ಯತೇ (೩/೪/೧)

ಚತುರ್ಥಾಧ್ಯಾಯಃ

ಫಲಂ ನಿಗದ್ಯತೇಽಸ್ಮಿನ್ನಧ್ಯಾಯೇ ।

ಪ್ರಥಮಪಾದ – ಕರ್ಮನಾಶಾಖ್ಯಂ ಫಲಮಸ್ಮಿನ್ ಪಾದೇ । (೪/೧/೧)

ದ್ವಿತೀಯಪಾದ – ದೇವಾನಾಂ ಮೋಕ್ಷ ಉತ್ಕ್ರಾಂತಿಶ್ಚಾಸ್ಮಿನ್ ಪಾದ ಉಚ್ಯತೇ (೪/೨/೧)

ತೃತೀಯಪಾದ – ಮಾರ್ಗೋ ಗಮ್ಯಂ ಚಾಸ್ಮಿನ್ ಪಾದ ಉಚ್ಯತೇ (೪/೩/೧)

ಚತುರ್ಥಪಾದ – ಭೋಗಮಾಹಾಸ್ಮಿನ್ ಪಾದೇ (೪/೪/೧)

ಇದರ ಭಾವವನ್ನು ಒಟ್ಟಾಗಿ ಹೀಗೆ ಸಂಗ್ರಹಿಸಬಹುದು :

ಸಕಲಶಬ್ದಗಳಿಗೂ ಭಗವಂತನ ಗುಣಪೂರ್ಣತ್ವದಲ್ಲಿ 'ಸಮನ್ವಯ'ವೇ ಪ್ರಥಮಾಧ್ಯಾಯದ ಸಾರ. ಇದರ ಪ್ರಥಮಸೂತ್ರದಲ್ಲಿ ಬ್ರಹ್ಮಜಿಜ್ಞಾಸೆಯ ಅಧಿಕಾರ, ವಿಷಯ, ಫಲ ಮತ್ತು ಸಂಬಂಧ ಎಂಬ ಅನುಬಂಧಚತುಷ್ಟಯವೂ, ದ್ವಿತೀಯಸೂತ್ರದಲ್ಲಿ 'ಬ್ರಹ್ಮ'ಲಕ್ಷಣವೂ, ತೃತೀಯಸೂತ್ರದಲ್ಲಿ ಬ್ರಹ್ಮಜಿಜ್ಞಾಸೆಯ ಮೂಲಆಕರವೂ, ಚತುರ್ಥಸೂತ್ರದಲ್ಲಿ ಸಕಲಶಬ್ದಗಳಿಗೂ ಪರಬ್ರಹ್ಮನ ಗುಣಪೂರ್ಣತ್ವದಲ್ಲೇ ಸಮನ್ವಯ ಎಂಬ ಪ್ರತಿಜ್ಞೆಯೂ ಉಕ್ತವಾಗಿವೆ; ಅಧ್ಯಾಯದ ಉಳಿದ ಭಾಗವೆಲ್ಲ ಅಂತಹ ಸಮನ್ವಯವನ್ನು ತೋರಿಸಿ ಕೊಡುತ್ತದೆ. ಇಲ್ಲಿಯ ಸಮನ್ವಯವು ಸಹ ಅನ್ಯತ್ರಪ್ರಸಿದ್ಧನಾಮಾತ್ಮಕಶಬ್ದಸಮನ್ವಯ, ಅನ್ಯತ್ರಪ್ರಸಿದ್ಧಲಿಂಗಾತ್ಮಕಶಬ್ದಸಮನ್ವಯ, ಉಭಯತ್ರಪ್ರಸಿದ್ಧನಾಮಲಿಂಗಾತ್ಮಕಶಬ್ದಸಮನ್ವಯ, ಅನ್ಯತ್ರೈವಪ್ರಸಿದ್ಧನಾಮಲಿಂಗಾತ್ಮಕಶಬ್ದಸಮನ್ವಯ ಎಂಬುದಾಗಿ ನಾಲ್ಕು ತೆರನಾಗಿದೆ.

ಎರಡನೆಯದಾದ ಅವಿರೋಧಾಧ್ಯಾಯದಲ್ಲಿ ಯುಕ್ತಿವಿರೋಧ, (ಇತರ) ಸಮಯವಿರೋಧ, ಶ್ರುತಿವಿರೋಧ ಮತ್ತು ನ್ಯಾಯೋಪೇತಶ್ರುತಿವಿರೋಧ ಎಂಬ ನಾಲ್ಕು ರೀತಿಯ ವಿರೋಧಗಳು ಸಹ ಪ್ರಥಮಾಧ್ಯಾಯದಲ್ಲಿ ಮಾಡಿದ ಸಮನ್ವಯಕ್ಕೆ ಎಂದೂ ಇರುವುದಿಲ್ಲ ಎಂದು ಪ್ರತಿಪಾದಿಸಲಾಗಿದೆ; ಭ್ರಾಂತಿಮೂಲತ್ವ ಮತ್ತು ಯುಕ್ತಿವಿರುದ್ಧತ್ವ ಎಂಬ ಎರಡು ಪ್ರಬಲದೋಷಗಳನ್ನು ಇತರ ಎಲ್ಲಾ ಮತಗಳಿಗೂ ಇಲ್ಲಿ ಪ್ರಧಾನವಾಗಿ ತೋರಿಸಲಾಗಿದೆ.

ಮೂರನೆಯದಾದ ಸಾಧನಾಧ್ಯಾಯದಲ್ಲಿ ವೈರಾಗ್ಯ, ಭಕ್ತಿ(ದಾರ್ಢ್ಯ), ಉಪಾಸನೆ ಮತ್ತು ಜ್ಞಾನ ಎಂಬ ನಾಲ್ಕು ವಿಧ ಮೋಕ್ಷಸಾಧನ ಸಾಮಗ್ರಿಗಳ ಪರಿಪೂರ್ಣ ವಿವೇಚನೆಯು ತುಂಬಿದೆ.

ನಾಲ್ಕನೆಯದಾದ ಫಲಾಧ್ಯಾಯದಲ್ಲಿ ಕರ್ಮಕ್ಷಯ, ಉತ್ಕ್ರಾಂತಿ, ಮಾರ್ಗ ಮತ್ತು ಭೋಗ ಎಂಬುದಾಗಿ ಸಿದ್ಧಿಯ ನಾಲ್ಕು ಹಂತಗಳು ನಿರೂಪಿತವಾಗಿವೆ.

ಹೀಗೆ 'ಸಮನ್ವಯ' ಮತ್ತು 'ಅವಿರೋಧ'ಗಳು ನಾಲ್ಕು ವಿಧವಾಗಿವೆ. 'ಸಾಧನೆ'ಯು ಶ್ರವಣ, ಮನನ, ಧ್ಯಾನ ಎಂಬುದಾಗಿ ತ್ರಿವಿಧವಾದ ಸಾಮಗ್ರಿಯಿಂದ ಗಮ್ಯವಾಗಿದೆ;

ಮತ್ತು 'ಮೋಕ್ಷವೆಂಬ 'ಫಲ'ವು 'ಅನಿಷ್ಟನಿವೃತ್ತಿ' ಮತ್ತು 'ಇಷ್ಟಪ್ರಾಪ್ತಿ' ಎಂಬುದಾಗಿ ದ್ವಿದಲಾತ್ಮಕವಾಗಿದೆ.

ವೇದಾದಿಗಳೂ ಪರವಿದ್ಯೆ – ಆದರೆ ಬ್ರಹ್ಮಸೂತ್ರವೇ ಮುಖ್ಯಪರವಿದ್ಯೆ

ವೇದಾದಿನಿರ್ಣಯಶಾಸ್ತ್ರವು ಸಹ ವಿಷ್ಣುಬೋಧಕವಾದಾಗ 'ಪರವಿದ್ಯೆ' ಎನ್ನಿಸುತ್ತದೆ. ಆದರೆ ವಿಷ್ಣುವಾಚಕವಾಗದೇ ಇದ್ದಾಗ ಮಾತ್ರ ಅವು 'ಅಪರವಿದ್ಯೆ' ಎನ್ನಿಸುವುವು. ಬ್ರಹ್ಮಸೂತ್ರಗಳಿಗೆ ವಿಷ್ಣುವಾಚಕವಲ್ಲದ ದಶಾ ಎಂಬುದೇ ಇಲ್ಲ ಎಂಬುದು ಗಮನಾರ್ಹ. ಬ್ರಹ್ಮಸೂತ್ರಗಳು ಸದಾ 'ಪರವಿದ್ಯೆ'ಯಾಗಿರುವಂತೆ, ವೇದಾದಿಗಳು ಆಗಿಲ್ಲ ಎಂಬುದು ವಿಶೇಷ. ವೇದಾದಿಗಳು ಪರವಿದ್ಯೆ ಎನ್ನಿಸಲು ಬ್ರಹ್ಮಸೂತ್ರಗಳ ಸಹಾಯ ಬೇಕು; ಆದರೆ ಬ್ರಹ್ಮಸೂತ್ರವು ಸ್ವತಃ [೧]ಪರವಿದ್ಯೆ ಎನ್ನಿಸಿದೆ.

ಟೀಕಾಕೃತ್ಪಾದರು ವಿಷ್ಣುತತ್ತ್ವನಿರ್ಣಯಟೀಕೆಯಲ್ಲಿ ಶ್ರುತಿಯನ್ನು 'ತಾಯಿ' ಎಂದು

---

೧. ಪರಮೇವಾಖ್ಯಾ ಯಸ್ಯಾ ವಿದ್ಯಾಯಾಃ ಸಾ ಪರಮಾಖ್ಯವಿದ್ಯಾ । ಬ್ರಹ್ಮಮೀಮಾಂಸೇತ್ಯರ್ಥಃ । ನಿರ್ಣೇತವ್ಯಾರ್ಥೇಷು ಶಾಸ್ತ್ರೇಷು ಭಾರತಸ್ಯೋತ್ತಮತ್ವೇಽಪಿ ನಿರ್ಣಾಯಕೇಷು ಬ್ರಹ್ಮ-ಸೂತ್ರಾಣಾಮೇವೋತ್ತಮತ್ವಮುಚ್ಯಮಾನಂ ನ ವಿರುದ್ಧಮಿತಿ ಭಾವಃ ।

– ಶ್ರೀ ಕಂಬಾಲೂರು ರಾಮಚಂದ್ರತೀರ್ಥರು (ಸುಧಾಟಿಪ್ಪಣೀ)

ನನು ಭಾರತಂ ಸರ್ವಶಾಸ್ತ್ರೇಷೂತ್ತಮಮುಚ್ಯತೇ, ಸತ್ಯಮ್ । ವಿಚಾರ್ಯೇಷು ತದಿತ್ಯ-ವಿರೋಧಃ – ನ್ಯಾಯಸುಧಾ (೧/೧/೧)

ಅತೋ ಬ್ರಹ್ಮಸೂತ್ರಸಮಂ ನ ಪ್ರಮಾಣತಮಮಸ್ತಿ । – ಶ್ರೀಪದ್ಮನಾಭತೀರ್ಥರು

'ಏತೇನ ಉಪನಿಷದಃ ಪರವಿದ್ಯಾ' ಇತಿ ವ್ಯಾಖ್ಯಾನಮಪಿ ಪರಾಸ್ತಮ್ । ಋಗಾದಿಗ್ರಹಣೇನ ತಾಸಾಮಪಿ ಗೃಹೀತತ್ವಾತ್ । ಬ್ರಾಹ್ಮಣಪರಿವ್ರಾಜಕನ್ಯಾಯಶ್ಚ ಅಗತಿಕಾ ಗತಿಃ । ತಜ್ಜನ್ಯಂ ಜ್ಞಾನಂ ಪರವಿದ್ಯೇತ್ಯಪಿ ನ ಯುಕ್ತಮ್ । ಅಧಿಗತಿಕರಣತ್ವಾನುಪಪತ್ತೇಃ ಅನೇಕಾರ್ಥತಾಕಲ್ಪನಾಪತ್ತೇಶ್ಚ । ಅತೋಽನಯಾ ಪರವಿದ್ಯಾಖ್ಯಯಾ ಅಸ್ಯ ಶಾಸ್ತ್ರಸ್ಯ ಸರ್ವೋತ್ತಮತ್ವಪ್ರಾಮಾಣ್ಯಸಾಧನಮುಪ-ಪನ್ನಮಿತಿ ॥ – ನ್ಯಾಯಸುಧಾ(೧/೧/೧)

'ಅಪರವಿದ್ಯಾತ್ವೇನೋಕ್ತವೇದವಿದ್ಯಾಽಪ್ಯಪೌರುಷೇಯತ್ವಾದ್ಯದಾ ಪ್ರಮಾಣಂ ತದಾ ತತೋಽ-ಪ್ಯುತ್ತಮವಿದ್ಯಾತ್ವೇನೋಕ್ತಾಕ್ಷರವಿದ್ಯಾರೂಪಬ್ರಹ್ಮಮೀಮಾಂಸಾಯಾಃ ಪ್ರಾಮಾಣ್ಯಂ ಕಿಂ ವಕ್ತವ್ಯಮ್' – ಶ್ರೀವಾದಿರಾಜಸ್ವಾಮಿಗಳು

'ಅಸ್ಯೈವ ಶಾಸ್ತ್ರಸ್ಯ ಭಾರತಾಪೇಕ್ಷಯಾ ಉತ್ತಮತ್ವೇಽಪಿ ಭಾರತಸ್ಯ ಉತ್ತಮತ್ವೋಕ್ತಿರ್ನಿರ್ಣೇತ-ವ್ಯಾಂತರಾಪೇಕ್ಷಯಾ ಸಂಕೋಚಯಿತವ್ಯಾ'

– ಶ್ರೀವಿದ್ಯಾಧೀಶಸ್ವಾಮಿಗಳು ನ್ಯಾಯಸುಧಾವಾಕ್ಯಾರ್ಥಚಂದ್ರಿಕಾ

ಕರೆದಿರುವರು. 'ಬ್ರಹ್ಮಸೂತ್ರಭಾಷ್ಯ'ವು ಮಧ್ವರ ಪ್ರತಿರೂಪವಾಗಿರುವಂತೆ, 'ಬ್ರಹ್ಮಸೂತ್ರ'ಗಳು ಶ್ರೀವ್ಯಾಸರ ಪ್ರತಿರೂಪವಾಗಿವೆ. ಶ್ರುತಿಯಿಂದ ಜ್ಞಾನ ಹುಟ್ಟಲು ಬ್ರಹ್ಮಸೂತ್ರವು 'ಜನಕ'ಸ್ಥಾನೀಯವಾಗಿದೆ. ಶ್ರುತಿಯು ಬ್ರಹ್ಮಸೂತ್ರಾನುಪಕೃತವಾದಾಗ ಪರವಿದ್ಯೆಯಾಗಲಾರದು; ಆದರೆ ಬ್ರಹ್ಮಸೂತ್ರಗಳು ಸ್ವತಃ ಪರವಿದ್ಯೆಯಾಗಿದ್ದು ವೇದಾದಿಗಳಿಗೂ ಪರವಿದ್ಯಾತ್ವ ತಂದುಕೊಡುವುದರಿಂದ ಅವು ವೇದಾದಿಗಳಿಗಿಂತ [೧]ಮಿಗಿಲು ಎಂಬುದು ಸಯುಕ್ತಿಕವೂ ಆಗಿದೆ. 'ಉತ್ತತ್ವಸಂಭವಾತ್' ಸೂತ್ರದಿಂದ

---

೧. ನ ಚ ಸೂತ್ರೇಷು ನಿಶ್ಚಿತಾರ್ಥಸ್ಯ ಔಪಚಾರಿಕತ್ವಂ ವಕ್ತುಂ ಯುಜ್ಯತೇ । ನಿರ್ಣಯಾತ್ಮಕತ್ವಾತ್ ತೇಷಾಮ್ । – ಐತರೇಯಭಾಷ್ಯ

ಬಲವಾಂಶ್ಚ ಸವಿಚಾರೋ ನಿರ್ಣಯೋ ವಾಕ್ಯಮಾತ್ರಾತ್ । ಗೀತಾಭಾಷ್ಯ (೨/೫೦)

'ಋಚಃ ಸಾಮಾನಿ' ಇತ್ಯಾದಿಕಂ ವಚನಮಾತ್ರಮ್ । 'ಅತ ಏವ ಚ ನಿತ್ಯತ್ವಮ್' ಇತಿ ಶಾರೀರಕೋಕ್ತಂ ವಾಕ್ಯಂ ನಿರ್ಣಯಾತ್ಮಕಮ್ । ವಚನಂ ಚ ವೃತ್ತ್ಯಂತರೇಣಾಪಿ ಸಂಭವತಿ । ನ ತೂಪಚರಿತೋ ವಾಕ್ಯಾರ್ಥಾವಧಾರಣಾತ್ಮಕೋಽಪಿ ನಿರ್ಣಯಃ । ಅತಸ್ತಸ್ಮಾದಿದಂ ಬಲವದಿತ್ಯರ್ಥಃ । – ಗೀತಾಭಾಷ್ಯ ಪ್ರಮೇಯದೀಪಿಕಾ

ಬ್ರಹ್ಮಸೂತ್ರಾನುಸಾರೇಣ ವೇದಾದ್ಯಂ ಸರ್ವಮೇವ ಚ ।
ಯೋಜ್ಯಂ ನ ಬ್ರಹ್ಮಸೂತ್ರಾಣಿ ದೃಶ್ಯಮಾನಾರ್ಥತೋಽನ್ಯಥಾ ॥ – ಛಾಂದೋಗ್ಯಭಾಷ್ಯ

ಬ್ರಹ್ಮಸೂತ್ರಪದೈಶ್ಚೈವ ಹೇತುಮದ್ಭಿರ್ವಿನಿಶ್ಚಿತಮ್ । – ಭಗವದ್ಗೀತಾ ೮/೬

ವೇದಾನ್ ಮಂತ್ರಾನುಪನಿಷತ್ಸಹಿತಾನ್ ಸರ್ವದಾ ಶ್ರುಣು ।
ಇತಿಹಾಸಪುರಾಣೇ ಚ ಪಂಚರಾತ್ರಂ ತಥೈವ ಚ ॥
ತದರ್ಥಾನ್ ಬ್ರಹ್ಮಸೂತ್ರೈಶ್ಚ ಸಮ್ಯಕ್ ನಿರ್ಣೀಯ ತತ್ತ್ವತಃ ।
ವಿಷ್ಣೋಃ ಸರ್ವೋತ್ತಮತ್ವಂ ತು ಸರ್ವದಾ ಪ್ರತಿಪಾದಯ ॥ – ಯತಿಪ್ರಣವಕಲ್ಪ

ನ ಚ ಪೌರುಷೇಯತ್ವೇನೋತ್ತಮತ್ವಾಭಾವ ಇತಿ ವಾಚ್ಯಮ್ । ವೇದಾಪೌರುಷೇಯತ್ವಸ್ಯ ಜಯಯಜ್ಞಾಂಗತ್ವನಿಯತಾಧ್ಯಾನಕತ್ವಧರ್ಮಾದಿಸಿದ್ಧಯದಾವನ್ಯತ್ರೋಪಯೋಗಿತ್ವೇನ ತದುತ್ತಮತ್ವಾನುಪಯೋಗಿತ್ವಾತ್ । ತಸ್ಮಾತ್ ಸರ್ವನಿರ್ಣಾಯಕಬ್ರಹ್ಮಸೂತ್ರಾಣಾಮೇವ ಸರ್ವಶಾಸ್ತ್ರೋತ್ತಮತ್ವಮಿತಿ ಸಂಕ್ಷೇಪಃ ॥ – ಉಮರ್ಜೀ ಆಚಾರ್ಯಾಃ

'ಏತಚ್ಛಾಸ್ತ್ರವಿಚಾರ್ಯೇಷು ಮಧ್ಯೇ ಭಾರತಸ್ಯೋತ್ತಮತ್ವಂ, ಅಸ್ಯ ತು ಸರ್ವೋತ್ತಮತ್ವಂ ಇತಿ ಭಾವಃ' ಇತಿ ಸಂಪ್ರದಾಯವಿದಃ । – ನ್ಯಾಯಸುಧಾ ಟಿಪ್ಪಣೀ (ವಿಠಲಭಟ್ಟೀಯಾ)

ಬ್ರಹ್ಮಮೀಮಾಂಸಾಶಾಸ್ತ್ರಮೇವ ಪರವಿದ್ಯಾ । ತದನ್ಯತ್ ತನ್ನಿರ್ಣೇಯಾರ್ಥಂ ಸರ್ವಮಪಿ ಶಾಸ್ತ್ರಮಪರವಿದ್ಯಾ । – ನ್ಯಾಯಸುಧಾ ಟಿಪ್ಪಣೀ(ಲಘುರಸರಂಜನೀ)

ನ ಚ ಸಾಧನಾದಪೀತಿಕರ್ತವ್ಯತಾಯಾಃ ಪ್ರಾಬಲ್ಯಂ ದೃಷ್ಟಮಿತಿ ವಾಚ್ಯಂ ಯಾಜ್ಞೀಯ-ಸಂಹಿತಾಯಾಮಿತಿಕರ್ತವ್ಯತಾಯಾ ಏವ ಪ್ರಾಬಲ್ಯದರ್ಶನಾತ್ ॥

ಪ್ರಾರಂಭವಾಗುವ ಉತ್ಪತ್ತ್ಯಧಿಕರಣದಲ್ಲಿ ಕೇವಲ ಸ್ತ್ರೀಯಿಂದ ಸೃಷ್ಟಿಯು ಅಸಂಭಾವಿತ-

---

– ನ್ಯಾಯಸುಧಾ ಟಿಪ್ಪಣೀ(ಲಘುರಸರಂಜನೀ)

ತಸ್ಮಾತ್ ಸೂತ್ರಾರ್ಥಮಾಗೃಹ್ಯ ಕರ್ತವ್ಯಃ ಸರ್ವನಿರ್ಣಯಃ। (ಮ.ಭಾ.ತಾ.ನಿ. ೧/೪೪)

ಸೂತ್ರೇಷು ಯೇಷು ಸರ್ವೇಷು ನಿರ್ಣಯಾಃ ಸಮುದೀರಿತಾಃ।
ಶಬ್ದಜಾತಸ್ಯ ಸರ್ವಸ್ಯ ಯತ್ಪ್ರಮಾಣಶ್ಚ ನಿರ್ಣಯಃ॥

– ಬ್ರಹ್ಮಸೂತ್ರಭಾಷ್ಯ ಉದಾಹೃತ ಸ್ಕಾಂದಪುರಾಣವಚನ (೧/೧/೧)

ತಚ್ಚಾನುತ್ತಮಂ ಶಾಸ್ತ್ರಮ್ ಇದಮೇವ ವಿವಕ್ಷಿತಮ್ । ನಿರ್ಣೇತವ್ಯಾರ್ಥಾನಾಂ ಋಗಾದಿಪ-ದೋಪಲಕ್ಷಿತಾನಾಮಶೇಷಶಾಸ್ತ್ರಾಣಾಮ್ ಅಪರವಿದ್ಯಾತ್ವೇನೋಕ್ತತ್ವಾತ್ । ಅನ್ಯಸ್ಯ ಅಪ್ರಸಂಗಾತ್ ಪರತ್ವಾ- ಸಂಭವಾಚ್ಚ। ಸಂಭವತಿ ಚಾಸ್ಯ ಪರತ್ವಮನುಗ್ರಾಹಕತ್ವಾತ್ ।

– ನ್ಯಾಯಸುಧಾ

ಬ್ರಹ್ಮಸೂತ್ರಾಣಾಂ ವೇದಾಂಗತ್ವೇಽಪಿ ತದುತ್ತಮತ್ವಾವಿರೋಧಾತ್ । ಶ್ರವಣಾದೀತಿಕರ್ತವ್ಯ-ತಾರೂಪಸ್ಯಾಪಿ ಗುರುದೇವತಾಪ್ರಸಾದಾದೇಃ ಉತ್ತಮತ್ವದರ್ಶನಾತ್ । ನ ಚ ದರ್ಶಪೂರ್ಣ-ಮಾಸಾದೀತಿಕರ್ತವ್ಯತಾರೂಪಪ್ರಯಾಜಾದಿವತ್ ಅಮುಖ್ಯತ್ವಮೇವ ಕಿಂ ನ ಸ್ಯಾದಿತಿ ವಾಚ್ಯಮ್ । ಶ್ರವಣಮನನಯೋರ್ಮನನಸ್ಯೋತ್ತಮತ್ವೇನ ಬ್ರಹ್ಮಸೂತ್ರಾಣಾಂ ಮನನಶಾಸ್ತ್ರತ್ವೇನ ಉತ್ತಮತ್ವಾವಶ್ಯಂಭಾವಾತ್ । – ಉಮರ್ಜೀ ಆಚಾರ್ಯಾಃ (ಸುಧಾಟಿಪ್ಪಣೀ)

ನ ಚ ಬ್ರಹ್ಮಸೂತ್ರಾಣಾಮಪಿ ವೇದವ್ಯಾಖ್ಯಾನರೂಪತ್ವೇನಾಯಂ ನ್ಯಾಯಃ ಸಮಾನ ಇತಿ ವಾಚ್ಯಮ್ । ವ್ಯಾಖ್ಯಾನರೂಪತ್ವೇಽಪಿ ಸ್ವತಂತ್ರಮನನಶಾಸ್ತ್ರತ್ವೇನೇತ್ಯುಕ್ತತ್ವಾತ್ ।

– ಉಮರ್ಜೀ ಆಚಾರ್ಯಾಃ

ಪರಮಾತ್ಮನೋಽತ್ಯಂತಭಿನ್ನಸ್ಯ ಸ್ವತಶ್ಚಿದಾನಂದಾತ್ಮಕಸ್ಯಾಪಿ ಜೀವಸ್ಯ ಅನಾದ್ಯವಿದ್ಯಾಕಾಮಕ-ರ್ಮಾದಿನಿಮಿತ್ತೋಽಯಂ ಪರಮಾರ್ಥ ಏವಾನ್ಯಥಾಕಾರೋ ದುಃಖಾದ್ಯನರ್ಥೋ ನ ಪರಮೇಶ್ವರ- ಪ್ರಸಾದಾದೃತೇ ಅಪಗಚ್ಛತಿ । ನ ಚಾಸಾಕ್ಷಾತ್ಕೃತೋಽಸೌ ಪ್ರಸೀದತಿ । ನ ಚ ಅವಿದಿತಸ್ವರೂಪಃ ಶಕ್ಯತೇ ಸಾಕ್ಷಾತ್ಕರ್ತುಂ ಇತಿ ಸಕಲಗುಣಾಕರತಯಾ ನಿಃ ಶೇಷದೋಷಗಂಧವಿಧುರತಯಾ ಚ ತಂ ಪ್ರತಿಪಾದಯಿತುಮಶೇಷಾಮ್ನಾಯಾಃ ಪ್ರವರ್ತಂತೇ, ತದುಪಕರಣಭೂತಾ ಚ ಬ್ರಹ್ಮಮೀಮಾಂಸೇತಿ ಪರಮಾರ್ಥಃ॥

– ಶ್ರೀಟೀಕಾಕೃತ್ಪಾದರು (ಉಪಾಧಿಖಂಡನಟೀಕಾ)

ಇಹ ಹಿ ವಿವಿಧಸಾಂಸಾರಿಕದುಃಖದರ್ಶನೇನ ವಿರಕ್ತಸ್ಯ ಶಮದಮಾದಿಮತೋ ಮುಮುಕ್ಷೋರ-ಧಿಕಾರಿಣಸ್ತನ್ನಿವೃತ್ಯೈ ಪರಮಾನಂದಾವಾಪ್ತ್ಯೈ ಚ ಸಕಲಜೀವಜಡಾತ್ಮಕಾತ್ ಪ್ರಪಂಚಾತ್ ಪರಮಾರ್ಥತ ಏವ ಅತ್ಯಂತಭಿನ್ನಂ ನಿಖಿಲಗುಣೋದಾರಂ ನಿರಸ್ತಸಮಸ್ತದೋಷಂ ಪರಬ್ರಹ್ಮ ಪ್ರತಿಪಾದಯಿತುಂ ಸಕಲಶ್ರುತಿಸ್ಮೃತೀನಾಂ ತದುಪಕರಣಭೂತಬ್ರಹ್ಮಮೀಮಾಂಸಾಯಾಶ್ಚ ಪ್ರವೃತ್ತಿರಿತಿ ತತ್ತ್ವಮ್ । – ಶ್ರೀಟೀಕಾಕೃತ್ಪಾದರು (ಮಾಯಾವಾದಖಂಡನಟೀಕಾ)

ವೆಂದು ಸ್ಥಾಪಿಸಿರುವುದರಿಂದ, ಲಕ್ಷ್ಮೀರೂಪವಾದ ಕೇವಲ ವೇದಗಳಿಂದ ಬ್ರಹ್ಮಜ್ಞಾನವು ಹುಟ್ಟಲಾರದು. ಆ ಅಧಿಕಾರಣನ್ಯಾಯದಂತೆ 'ಪುರುಷ'ನಾದ ವಿಷ್ಣುವೇ ಸರ್ವೋತ್ತಮನಾಗಿರುವಂತೆ, ಪುರುಷಸ್ಥಾನೀಯವಾದ 'ಬ್ರಹ್ಮಸೂತ್ರ'ವೇ 'ಸರ್ವೋತ್ತಮಶಾಸ್ತ್ರ'ವಾಗಿದೆ. ಇದೇ ರೀತಿ 'ವಿದ್ಯಯಾ ಅಮೃತಮಶ್ನುತೇ' ಎಂಬ ಈಶಾವಾಸ್ಯಕ್ಕೂ ಸಹ 'ಪರ'ವಿದ್ಯಯಾ ಅಮೃತಮಶ್ನುತೇ ಎಂದೇ ಅರ್ಥವಾಗುತ್ತದೆ.

ಬ್ರಹ್ಮಸೂತ್ರಗಳಲ್ಲಿಯ ಪ್ರತ್ಯಕ್ಷರದ ಅಧ್ಯಯನಕ್ಕೂ ನೂರು ಗಾಯತ್ರಿಯಷ್ಟು ಫಲ ಎಂಬ ಚಾತುರ್ಮಾಸ್ಯಮಾಹಾತ್ಮ್ಯ ವರಾಹಪುರಾಣದ ಮಾತು ಬ್ರಹ್ಮಸೂತ್ರಗಳ ವೇದೋತ್ತಮತ್ವಕ್ಕೆ ಮತ್ತೊಂದು [೧]ಆಧಾರವಾಗಿದೆ.

ಋಗ್ವೇದ, ಉಪನಿಷತ್ತು ಮತ್ತು ಪುರಾಣಗಳ ಮೇಲೆ ಒಂದೊಂದು ಗ್ರಂಥ ರಚಿಸಿರುವ ಶ್ರೀಮಧ್ವಾಚಾರ್ಯರು ಮಹಾಭಾರತ ಮತ್ತು ಭಗವದ್ಗೀತೆಯ ಮೇಲೆ ಎರಡೆರಡು ಗ್ರಂಥಗಳನ್ನು (ಮಹಾಭಾರತತಾತ್ಪರ್ಯನಿರ್ಣಯ ಮತ್ತು ಯಮಕಭಾರತ; ಗೀತಾಭಾಷ್ಯ ಮತ್ತು ಗೀತಾತಾತ್ಪರ್ಯ), ಬ್ರಹ್ಮಸೂತ್ರಗಳ ಮೇಲೆ ನಾಲ್ಕು ಗ್ರಂಥಗಳನ್ನು ರಚಿಸಿರುವರು. ಇದು ಮಹಾಭಾರತ(ಭಗವದ್ಗೀತೆ)ದ ನಿರ್ಣಯಶಾಸ್ತ್ರೋತ್ತಮತ್ವಕ್ಕೂ, ಬ್ರಹ್ಮಸೂತ್ರಗಳ ಸರ್ವೋತ್ತಮಶಾಸ್ತ್ರತ್ವಕ್ಕೂ ಸೂಚಕವಾಗಿದೆ.

ಬ್ರಹ್ಮಸೂತ್ರದ ಮೇಲಿನ ಇತರ ಇಪ್ಪತ್ತೊಂದು ಭಾಷ್ಯಗಳು

ಶ್ರೀಮಧ್ವಾಚಾರ್ಯರಿಗಿಂತ ಮುಂಚಿತವಾಗಿ ಬರೆಯಲ್ಪಟ್ಟ ಬ್ರಹ್ಮಸೂತ್ರಭಾಷ್ಯಗಳು ಇಪ್ಪತ್ತೊಂದು ಎಂದು ಪರಂಪರೆ ದಾಖಲಿಸಿದೆ:

ಭಾರತೀವಿಜಯ	ವಾಮನ	ಪಿಶಾಚ
ಸಂವಿದಾನಂದ	ಯಾದವಪ್ರಕಾಶ	ವೃತ್ತಿಕಾರ
ಬ್ರಹ್ಮಘೋಷ	ರಾಮಾನುಜ	ವಿಜಯಭಟ್ಟ
ಶತಾನಂದ	ಭರ್ತೃಪ್ರಪಂಚ	ವಿಷ್ಣುಕಾಂತ
ಉದ್ವರ್ತ	ದ್ರಮಿಡ	ವಾದೀಂದ್ರ
ವಿಜಯ	ಬ್ರಹ್ಮದತ್ತ	ಮಾಧವದಾಸ
ರುದ್ರಭಟ್ಟ	ಭಾಸ್ಕರ	ಶಂಕರ

೧. ಶಿಷ್ಯಸ್ಯಾಧ್ಯಾಪಕಸ್ಯಾಪಿ ಸಂಹಿತಾಪಾಠತಃ ಫಲಮ್ ।
ಪ್ರತ್ಯಕ್ಷರಂ ತು ಗಾಯತ್ರೀ ಸಕೃತ್ ಪಾಠಸಮಂ ಲಭೇತ್ ॥
ಮೀಮಾಂಸಾ ದ್ವಿವಿಧಾ ಪ್ರೋಕ್ತಾ ಕರ್ಮಣೋ ಬ್ರಹ್ಮಣಸ್ತಥಾ ।
ವೇದಾರ್ಥಜ್ಞಾನತುಲ್ಯಾಽಽದ್ಯಾ ದ್ವಿತೀಯಾಯಾಃ ಫಲಂ ಶೃಣು ॥
ಪ್ರತ್ಯಕ್ಷರಂ ತು ಲಭತೇ ಗಾಯತ್ರೀಶತಜಂ ಫಲಮ್ ॥ – ವರಾಹಪುರಾಣ

ಶ್ರೀಮಧ್ವಾಚಾರ್ಯರದು ಇಪ್ಪತ್ತೆರಡನೆಯ ಭಾಷ್ಯ. ಅವರ ಅನಂತರವೂ ನಿಂಬಾರ್ಕಾಚಾರ್ಯನ ನಿಂಬಾರ್ಕಭಾಷ್ಯ, ಶ್ರೀಪತಿಪಂಡಿತನ ಶ್ರೀಕರಭಾಷ್ಯ, ಶ್ರೀಕಂಠನ ಶ್ರೀಕಂಠಭಾಷ್ಯ, ವಲ್ಲಭಾಚಾರ್ಯಕೃತ ಅಣುಭಾಷ್ಯ, ಗೋವಿಂದವಿದ್ಯಾಭೂಷಣನ ಗೋವಿಂದಭಾಷ್ಯ ಮೊದಲಾಗಿ ಅನೇಕ ಭಾಷ್ಯಗಳು ರಚಿತವಾಗಿದೆ. ಆದರೆ ಅವೆಲ್ಲ ಒಂದಲ್ಲ ಒಂದು ರೀತಿಯಲ್ಲಿ ಹಿಂದಿನ ಭಾಷ್ಯಗಳ ರೂಪಾಂತರವೇ ಆಗಿವೆ ಎಂಬ ಕಾರಣದಿಂದ ಅವನ್ನು ಪ್ರತ್ಯೇಕಭಾಷ್ಯಗಳೆಂದು ಪರಂಪರೆಯು ಪರಿಗಣಿಸಿಲ್ಲ, ಆದ್ದರಿಂದ ಹಿಂದಿನ 'ಏಕವಿಂಶತಿಕುಭಾಷ್ಯದೂಷಕ' ಎಂಬ ಹೆಸರೇ ಶ್ರೀಮಧ್ವಭಾಷ್ಯಕ್ಕೆ ರೂಢಿಯಲ್ಲಿದೆ. ಶ್ರೀವಾದಿರಾಜಸ್ವಾಮಿಗಳ

ಪೂರ್ವಃ ಪೂರ್ವಃ ಪೂರ್ವಪಕ್ಷೋ ಯಾವನ್ಮಧ್ವಮತೋದಯಃ ।
ಅಂತೇ ಸಿದ್ಧಸ್ತು ಸಿದ್ಧಾಂತಃ ಮಧ್ವಸ್ಯಾಗಮ ಏವ ಹಿ ॥

- ಎಂಬ ಯುಕ್ತಿಮಲ್ಲಿಕೆಯ ಮಾತು (೧/೮) ತುಂಬಾ ಸಾರ್ಥಕವಾಗಿದೆ.

ಸೂತ್ರಪ್ರಸ್ಥಾನ ಗ್ರಂಥಗಳು

ಶ್ರೀಮದಾಚಾರ್ಯರು ಸೂತ್ರಪ್ರಸ್ಥಾನಕ್ಕೆ ಸಂಬಂಧಿಸಿದಂತೆ ಬ್ರಹ್ಮಸೂತ್ರಭಾಷ್ಯ, ಅನುವ್ಯಾಖ್ಯಾನ, ಅಣುಭಾಷ್ಯ ಮತ್ತು ನ್ಯಾಯವಿವರಣ ಎಂಬ ನಾಲ್ಕು ಕೃತಿಗಳನ್ನು ರಚಿಸಿರುವರು.

೧. ಬ್ರಹ್ಮಸೂತ್ರ ಭಾಷ್ಯ

ಕವೀಂದ್ರೈರ್ನ ಸಮಾಪ್ಯಂತೇ ಸಂಗೃಹ್ಯಾಪಿ ಯತೋಽನಿಶಮ್ ।
ನ್ಯಾಯರತ್ನಾನಿ ಭಾಷ್ಯಾಬ್ಧೇರಸ್ಯ ಗಾಂಭೀರ್ಯಮದ್ಭುತಮ್ ॥

– ಸುಮಧ್ವವಿಜಯ (೧೫/೭೩)

ಬ್ರಹ್ಮಸೂತ್ರಭಾಷ್ಯವು ಬ್ರಹ್ಮಸೂತ್ರಗಳ ಮೇಲಿನ ನೇರ ಭಾಷ್ಯವಾಗಿದ್ದು ಇದರಲ್ಲಿ ಪ್ರತಿಯೊಂದು ಬ್ರಹ್ಮಸೂತ್ರಕ್ಕೂ ವ್ಯಾಖ್ಯಾನ ದೊರೆಯುತ್ತದೆ. ಅನುವ್ಯಾಖ್ಯಾನವು ಬ್ರಹ್ಮಸೂತ್ರದ ಮೇಲಿನ ಮತ್ತೊಂದು ಅಪೂರ್ವಕೃತಿ. ಇದು ಅವರೇ ತಿಳಿಸಿರುವಂತೆ ತಮ್ಮ ಬ್ರಹ್ಮಸೂತ್ರಭಾಷ್ಯದ ಸ್ಪಷ್ಟೀಕರಣಕ್ಕಾಗಿ ರಚಿತವಾಗಿರುವ ಕೃತಿ :

ಸ್ವಯಂ ಕೃತಾಪಿ ತದ್ವ್ಯಾಖ್ಯಾ ಕ್ರಿಯತೇ ಸ್ಪಷ್ಟತಾರ್ಥತಃ ॥

ಶ್ರೀಜಯತೀರ್ಥರು ತಿಳಿಸಿರುವಂತೆ ಅಂತಹ ಸ್ಪಷ್ಟೀಕರಣ ಅನೇಕ ತೆರನಾದುದು :

ಸ್ಪಷ್ಟೀಕರಣಂ ಚಾನೇಕವಿಧಮ್ । ಕ್ವಚಿತ್ ಅನುಕ್ತಾರ್ಥಸ್ಯ ಉಕ್ತಿಃ । ಕ್ವಾಪಿ ಅತಿಸಂಕ್ಷಿಪ್ತಸ್ಯ ವಿವರಣಮ್। ಕ್ವಚಿತ್ ಅತಿವಿಸ್ತೃತತಯಾ ವಿಕ್ಷಿಪ್ತಸ್ಯ ಏಕೀಕರಣಮ್ । ಕುತ್ರಾಪ್ಯುಕ್ತಸ್ಯೋಪಪಾದನಮ್ ।

ಕ್ವಚಿದಪವ್ಯಾಖ್ಯಾನನಿರಾಕರಣೇನ ದೃಢೀಕರಣಂ ಇತ್ಯಾದಿ। – ನ್ಯಾಯಸುಧಾ
– ಆದಿಪದೇನ ಕ್ವಚಿತ್ ಬಾಧಕೋದ್ಧಾರಾದಿರ್ಗ್ರಾಹ್ಯಃ। - ಪರಿಮಳ

ಎಂದರೆ ''ಅಲ್ಲಿ ಹೇಳದೆ ಇದ್ದ ಹೊಸ ವಿಷಯಗಳನ್ನು ತಿಳಿಸುವುದು, ಸಂಕ್ಷಿಪ್ತವಾಗಿ ಹೇಳಿದ್ದನ್ನು ವಿವರಿಸುವುದು, ವಿಸ್ತಾರವಾಗಿ ಹೇಳಿದ್ದನ್ನು ಸಂಕ್ಷಿಪ್ತವಾಗಿ ತಿಳಿಸುವುದು, ಅಲ್ಲಿ ಹೇಳಿದ ವಿಚಾರಗಳನ್ನು ಉಪಪಾದನೆ ಮಾಡುವುದು, ಅಪವ್ಯಾಖ್ಯಾನಗಳನ್ನು ವಿಮರ್ಶಿಸಿ ತಮ್ಮ ವ್ಯಾಖ್ಯಾನವನ್ನು ದೃಢಪಡಿಸುವುದು, ತಮ್ಮ ವ್ಯಾಖ್ಯಾನದ ಮೇಲೆ ಬಾಧಕಗಳನ್ನು ಶಂಕಿಸಿಕೊಂಡು ತಾವೇ ಪರಿಹಾರ ನೀಡುವುದು ಮುಂತಾದವು.

ಅನುವ್ಯಾಖ್ಯಾನ ಹೀಗೆ ಒಂದು ರೀತಿಯಲ್ಲಿ ಬ್ರಹ್ಮಸೂತ್ರಗಳ ಮೇಲೆ ಅವರೇ ಬರೆದ ಮತ್ತೊಂದು ಭಾಷ್ಯ; ಇನ್ನೊಂದು ರೀತಿಯಲ್ಲಿ ಅವರ ಭಾಷ್ಯಕ್ಕೆ ಅವರೇ ರಚಿಸಿದ ಟೀಕೆ. ಇದರಿಂದಾಗಿ ಅವರ ಭಾಷ್ಯವನ್ನು ಸ್ಫುಟವಾಗಿ ತಿಳಿಯಲು ಯಾವುದೇ ವಿಧವಾದ ಗೊಂದಲಕ್ಕೂ ಅವಕಾಶವಿಲ್ಲದಂತಾಗುತ್ತದೆ. ಬ್ರಹ್ಮಸೂತ್ರಗಳ ಪ್ರತಿಅಧಿಕರಣಕ್ಕೂ ಇರುವ ಪೂರ್ವಪಕ್ಷ ಹಾಗು ಸಿದ್ಧಾಂತ ಯುಕ್ತಿಗಳನ್ನು ಒಂದೆಡೆ ಸಂಗ್ರಹಿಸಿಕೊಟ್ಟಿರುವುದು ಇದರ ಮತ್ತೊಂದು ವಿಶೇಷ. ಅದು ಒಂದು ಅಧಿಕರಣದ ಸಮಗ್ರ ವಿವೇಚನೆಗೆ ತುಂಬಾ ಉಪಯುಕ್ತ. ಶ್ಲೋಕರೂಪವಾಗಿರುವುದು ಇದರ ಮತ್ತೊಂದು ವಿಶೇಷ. ಅನೇಕ ಸಲ ಆದರಲ್ಲಿ ಹೇಳದೆ ಇರುವ ಪ್ರಮಾಣ ವಿಷಯಗಳನ್ನು ಇಲ್ಲಿ ನೀಡಿರುವರು.

ಬ್ರಹ್ಮಸೂತ್ರಗಳ ಮೇಲೆ ಹೀಗೆ ಒಟ್ಟು ನಾಲ್ಕು ಕೃತಿಗಳನ್ನು ರಚಿಸುವ ಮೂಲಕ ಬ್ರಹ್ಮಸೂತ್ರಗಳ ಆಳವಾದ ಅಧ್ಯಯನಕ್ಕೆ ಶ್ರೀಮದಾಚಾರ್ಯರು ಮಾಡಿರುವ ಉಪಕಾರ ಅಪಾರ. ಶಂಕರಾಚಾರ್ಯರು ಭಾಷ್ಯದ ಮೇಲೆ ರಚಿಸಿರುವ ಕೃತಿ ಬ್ರಹ್ಮಸೂತ್ರ-ಭಾಷ್ಯವೊಂದೇ. ರಾಮಾನುಜಾಚಾರ್ಯರು ಶ್ರೀಭಾಷ್ಯ, ವೇದಾಂತದೀಪ ಮತ್ತು ವೇದಾಂತಸಾರ ಎಂಬುದಾಗಿ ಮೂರು ಕೃತಿಗಳನ್ನು ರಚಿಸಿರುವರು. ಅವರಿಬ್ಬರೂ ತಮ್ಮ ಭಾಷ್ಯಗಳಿಗೆ 'ಅಣುಭಾಷ್ಯ'ದಂತಹ ಸಂಗ್ರಹ ಭಾಷ್ಯ ರಚಿಸಿಲ್ಲ. ಅವರ ಪರಂಪರೆಯಲ್ಲೂ ಆ ಬಗೆಯ ಕೃತಿ ಅನಂತರವೂ ರಚಿತವಾಗಿಲ್ಲ. ರಾಮಾನುಜಾಚಾರ್ಯರ ರಚನೆಗಳಲ್ಲಿ ಅಣುಭಾಷ್ಯದಂತಹ ಸಂಗ್ರಹಭಾಷ್ಯವಿಲ್ಲವಾದರೆ, ಶಂಕರಾಚಾರ್ಯರ ಕೃತಿಗಳಲ್ಲಿ ಸಂಗ್ರಹಭಾಷ್ಯ ಹಾಗು ಅಧಿಕರಣಾರ್ಥ ಸಂಗ್ರಹರೂಪವಾದ ನ್ಯಾಯವಿವರಣದಂತಹ ಕೃತಿ ಎರಡೂ ದೊರೆಯುವುದಿಲ್ಲ. ಎಂದಮೇಲೆ ಬ್ರಹ್ಮಸೂತ್ರಗಳ ಅಧ್ಯಯನಕ್ಕೆ ಶ್ರೀಮದಾಚಾರ್ಯರ ಉಪಕಾರದ ಮಹತ್ತ್ವ ಅರ್ಥವಾಗುವುದು.

ಶಂಕರ, ರಾಮಾನುಜರ ಭಾಷ್ಯಗಳು ವಾಕ್ಯರೂಪದ ಭಾಷ್ಯಗಳು. ಆದರೆ ಶ್ರೀಮದಾಚಾರ್ಯರ ಅನುವ್ಯಾಖ್ಯಾನ ಹಾಗು ಅಣುಭಾಷ್ಯ ಎರಡೂ ಶ್ಲೋಕರೂಪದ ಕೃತಿಗಳು. ಎಂದರೆ ಬ್ರಹ್ಮಸೂತ್ರಗಳ ಮೇಲೆ ಹೀಗೆ 'ಅನುಭಾಷ್ಯ' ಹಾಗೂ 'ಅಣುಭಾಷ್ಯ'

ಎರಡನ್ನೂ ಶ್ಲೋಕರೂಪದಲ್ಲಿ ಕೊಟ್ಟ ವೈಶಿಷ್ಟ್ಯ ಶ್ರೀಮಧ್ವಾಚಾರ್ಯರದು. ಬ್ರಹ್ಮಸೂತ್ರದ ಮೇಲೆ ಇರಲಿ, ಯಾವುದೇ ಸೂತ್ರಸಾಹಿತ್ಯದ ಮೇಲೆಯೂ ಹೀಗೆ ಶ್ಲೋಕರೂಪದ ಭಾಷ್ಯ, ಸಂಗ್ರಹಭಾಷ್ಯಗಳು ದೊರೆಯುವುದಿಲ್ಲ. ಎಂದರೆ ವೇದಾಂತದಂತಹ ಅತಿಶ್ರೇಷ್ಠಶಾಸ್ತ್ರವನ್ನು ಶ್ಲೋಕರೂಪದಲ್ಲಿ ಒದಗಿಸಿದ ಏಕಮಾತ್ರ ಆಚಾರ್ಯರು ಅವರು. ಕುಮಾರಿಲಭಟ್ಟರ ಮೀಮಾಂಸಾಶ್ಲೋಕವಾರ್ತಿಕೆಯು ಶ್ಲೋಕರೂಪದ ಕೃತಿಯೇ ಆಗಿದ್ದರೂ, ಅದು ಮೀಮಾಂಸಾಸೂತ್ರಗಳ ಮೇಲೆ ಭಾಷ್ಯವಾಗಿರದೆ, ಶಾಬರದ ಭಾಷ್ಯದ ಮೇಲೆ ಟೀಕೆ ಮಾತ್ರ ಆಗಿದೆ ಎಂಬುದನ್ನು ಗಮನಿಸಬೇಕು.

ಬ್ರಹ್ಮಸೂತ್ರದ ಮೇಲಿನ ಮಧ್ವಭಾಷ್ಯದ ವೈಶಿಷ್ಟ್ಯ

ಬ್ರಹ್ಮಸೂತ್ರಗಳ ಮೇಲೆ ಆಚಾರ್ಯ ಶ್ರೀಮಧ್ವರು ಇಪ್ಪತ್ತೆರಡನೆಯ ಭಾಷ್ಯ. ಆ ಮುಂಚೆ ಒಟ್ಟು ಇಪ್ಪತ್ತೊಂದು ಭಾಷ್ಯಗಳು ಬ್ರಹ್ಮಸೂತ್ರಗಳ ಮೇಲೆ ರಚಿತವಾಗಿದ್ದ ವಿವರವನ್ನು ಸುಮಧ್ವವಿಜಯ ಮತ್ತು ಅದರ ಭಾವಪ್ರಕಾಶಿಕೆಗಳು ನೀಡಿವೆ.

ಇವುಗಳಲ್ಲಿ ಇಂದು ಉಪಲಬ್ಧವಿರುವದು ಶಂಕರರಾಮಾನುಜರ ಭಾಷ್ಯಗಳೊಂದಿಗೆ ಭಾಸ್ಕರಭಾಷ್ಯ ಮಾತ್ರ. ಉಳಿದವು ಅನುಪಲಬ್ಧ. ಎಂದರೆ ಅವುಗಳ ಹೆಸರುಗಳನ್ನು ಉಳಿಸಿದ್ದು ಮಧ್ವಶಿಷ್ಯರಾದ ನಾರಾಯಣಪಂಡಿತಾಚಾರ್ಯರು. ಮಧ್ವಭಾಷ್ಯದ ವೈಶಿಷ್ಟ್ಯಗಳು ಅಸಂಖ್ಯ. ಅವುಗಳಲ್ಲಿ ಕೆಲವನ್ನು ಹೀಗೆ ಪಟ್ಟಿಮಾಡಬಹುದು:

೧) ಬ್ರಹ್ಮಸೂತ್ರಗಳನ್ನು ಬರೆದ ಬಾದರಾಯಣರು (ವೇದವ್ಯಾಸರು) ಒಬ್ಬ ಋಷಿ ಎಂದು ಮಾತ್ರವೇ ಹಿಂದಿನವರು ಭಾವಿಸಿದ್ದರು. ಆದರೆ ಅವರು ಕೇವಲ ಒಬ್ಬ ಋಷಿಯಲ್ಲ; ಸ್ವತಃ ಭಗವಂತನಾದ ನಾರಾಯಣನ ಅವತಾರ ಎಂಬುದನ್ನು ತಿಳಿಸಿ ಅನೇಕ ಪ್ರಮಾಣಗಳನ್ನು ನೀಡಿ ಸಾಧಿಸಿದ ಶ್ರೇಯಸ್ಸು ಶ್ರೀಮಧ್ವಾಚಾರ್ಯರದು.

ಕೃಷ್ಣದ್ವೈಪಾಯನಂ ವ್ಯಾಸಂ ವಿದ್ಧಿ ನಾರಾಯಣಂ ಪ್ರಭುಮ್ ।
ಕೋ ಹ್ಯನ್ಯಃ ಪುಂಡರೀಕಾಕ್ಷಾನ್ಮಹಾಭಾರತಕೃದ್ಭವೇತ್ ॥

'ಮುನೀನಾಮಪ್ಯಹಂ ವ್ಯಾಸಃ' ಎಂಬ ಭಗವದ್ಗೀತೆಯ ಮಾತಿನಲ್ಲೂ ಈ ವಿಷಯ ಬಂದಿದೆ ಎಂಬುದನ್ನು ಗಮನಿಸಿದರೆ, ಮಧ್ವಭಾಷ್ಯದ ಹಿರಿಮೆ ಮನವರಿಕೆಯಾಗುವುದು.

೨) ಬ್ರಹ್ಮಸೂತ್ರಗಳ ಸ್ಥಾನಮಾನದ ಬಗ್ಗೆ ಇತರ ಭಾಷ್ಯಗಳ ನಿಲುವು ಇತರ ಪ್ರಸ್ಥಾನಗಳಂತೆ ಇದೂ ಒಂದು ಪ್ರಸ್ಥಾನ ಎಂಬ ಮಟ್ಟಿಗೆ ಮಾತ್ರ ಆಗಿತ್ತು. ಬ್ರಹ್ಮಸೂತ್ರಗಳಿಗಿಂತ ಉಪನಿಷತ್ತುಗಳೇ ಮಿಗಿಲು ಎಂಬುದಾಗಿಯೂ ಅವರು ಭಾವಿಸಿರುವರು. ಆದರೆ ಬ್ರಹ್ಮಸೂತ್ರಗಳೆಂದರೆ ಪರವಿದ್ಯೆ. ಅವುಗಳಿಗಿಂತ ಮಿಗಿಲಾದ

ಬೇರೊಂದು ಶಾಸ್ತ್ರವಿಲ್ಲ, ಅದೇ ಸರ್ವೋತ್ತಮ ಶಾಸ್ತ್ರ. ಆದ್ದರಿಂದ ವೇದಾದಿ ಯಾವುದೇ ಇತರ ಶಾಸ್ತ್ರಗಳನ್ನು ಬ್ರಹ್ಮಸೂತ್ರಗಳ ಬೆಳಕಿನ ಹಿನ್ನೆಲೆಯಲ್ಲೇ ನೋಡಬೇಕು ಎಂಬ ಮಹತ್ತ್ವಪೂರ್ಣ ಸಂದೇಶವನ್ನು ಅನೇಕ ಪ್ರಮಾಣಗಳನ್ನಿತ್ತು ಸಾರಿರುವುದು ಮಧ್ವಭಾಷ್ಯದ ಪ್ರಧಾನವೈಶಿಷ್ಟ್ಯಗಳಲ್ಲೊಂದು :

'ಅತೋ ನೈತಾದೃಶಂ ಕಿಂಚಿತ್ ಪ್ರಮಾಣತಮಮಿಷ್ಯತೇ ।' – ಅನುವ್ಯಾಖ್ಯಾನ

'ತಸ್ಮಾತ್ ಸೂತ್ರಾರ್ಥಮಾಗೃಹ್ಯ ಕರ್ತವ್ಯಃ ಸರ್ವನಿರ್ಣಯಃ ।'

– ಮಹಾಭಾರತತಾತ್ಪರ್ಯನಿರ್ಣಯ

೩) ಬ್ರಹ್ಮಸೂತ್ರಗಳು ಉಪನಿಷತ್ತುಗಳಿಗೆ ಅದರಲ್ಲೂ ಪ್ರಧಾನವೆನ್ನಿಸಿರುವ ದಶೋಪನಿಷತ್ತುಗಳಿಗೆ ಮಾತ್ರ ಅರ್ಥನಿರ್ಣಯರೂಪ ಕೃತಿಗಳು ಎಂಬ ಸೀಮಿತ ದೃಷ್ಟಿ ಇತರ ಭಾಷ್ಯಗಳದಾಗಿತ್ತು. ಅದಕ್ಕೆ ಅವರು ಉಲ್ಲೇಖಿಸಿರುವ ವಿಷಯವಾಕ್ಯಗಳೆಲ್ಲ ಆ ಉಪನಿಷತ್ತುಗಳಿಗಷ್ಟೆ ಸೀಮಿತವಾಗಿರುವುದೇ ನಿದರ್ಶನ. ಆದರೆ ಬ್ರಹ್ಮಸೂತ್ರಗಳು ಅವುಗಳ ಲಕ್ಷಣವೇ ಹೇಳುವಂತೆ ಸಕಲಶಾಸ್ತ್ರಗಳಿಗೂ ನಿರ್ಣಾಯಕವಾದ ಅನುಪಮಸಾಹಿತ್ಯ. ವ್ಯಷ್ಟಿಯಾಗಿ ಅವು ಯಾವುದೇ ಶಾಸ್ತ್ರಭಾಗಕ್ಕೂ ನಿರ್ಣಯ; ಸಮಷ್ಟಿಯಾಗಿ ಸರ್ವಶಾಸ್ತ್ರಾರ್ಥನಿರ್ಣಯ ಎಂಬ ಅಪೂರ್ವ ಅಂಶವನ್ನು ಸಾಧಾರವಾಗಿ ನಿರೂಪಿಸಿರುವರು:

ಅಲ್ಪಾಕ್ಷರಮಸಂದಿಗ್ಧಂ ಸಾರವದ್ವಿಶ್ವತೋಮುಖಮ್ ।
ಅಸ್ತೋಭಮನವದ್ಯಂ ಚ ಸೂತ್ರಂ ಸೂತ್ರವಿದೋ ವಿದುಃ ॥

ದ್ವಿತೀಯಾಧ್ಯಾಯದ ಆರಂಭಣಾಧಿಕರಣ (೨/೧/೧೫) ಇದಕ್ಕೆ ಉತ್ತಮ ದೃಷ್ಟಾಂತ; ಅದಕ್ಕೆ ವಿಷಯವಾಕ್ಯವನ್ನಾಗಿ 'ವಾಚಾರಂಭಣಂ ವಿಕಾರೋ....' ಎಂಬ ಛಾಂದೋಗ್ಯದ ವಾಕ್ಯವನ್ನು ಶಂಕರರಾಮಾನುಜರು ಗ್ರಹಿಸಿದ್ದರೆ, ಶ್ರೀಮದಾಚಾರ್ಯರು 'ಕಿಂ ಸ್ವಿದಾಸೀದಧಿಷ್ಠಾನಮಾರಂಭಣಂ ಕತಮತ್ಸ್ವಿತ್ಕಥಾಽಽಸೀತ್' ಎಂಬ ಋಗ್ವೇದವಚನವನ್ನು ಗ್ರಹಿಸಿರುವರು.

೪) ಬ್ರಹ್ಮಸೂತ್ರಗಳ ಅವುಗಳ ಕರ್ತೃ, ಅವುಗಳ ರಚನೆಯ ಹಿನ್ನೆಲೆ, ಪ್ರಮಾಣ ಸ್ವರೂಪ, ವಿಷಯವ್ಯಾಪ್ತಿ ಮೊದಲಾದ ಮುಖ್ಯ ವಿವರಗಳ ಬಗ್ಗೆ ಯಾವ ಮಾಹಿತಿಯನ್ನು ಇತರ ಭಾಷ್ಯಗಳು ಚರ್ಚಿಸಿರಲಿಲ್ಲ, ಆದರೆ ಮಧ್ವಭಾಷ್ಯವು ಪ್ರಾರಂಭದಲ್ಲೇ ಈ ಎಲ್ಲ ಅಂಶಗಳ ಬಗ್ಗೆಯೂ ಬೆಳಕು ಚೆಲ್ಲುವ ಆದರ್ಶಭಾಷ್ಯ :

ನಾರಾಯಣಾದ್ವಿನಿಷ್ಪನ್ನಂ ಜ್ಞಾನಂ ಕೃತಯುಗೇ ಸ್ಥಿತಮ್ ।
ಕಿಂಚಿತ್ ತದನ್ಯಥಾ ಜಾತಂ ತ್ರೇತಾಯಾಂ ದ್ವಾಪರೇಽಖಿಲಮ್ ॥
ಗೌತಮಸ್ಯ ಋಷೇಃ ಶಾಪಾಜ್ಜ್ಞಾನೇ ತ್ವಜ್ಞಾನತಾಂ ಗತೇ ।
ಸಂಕೀರ್ಣಬುದ್ಧಯೋ ದೇವಾ ಬ್ರಹ್ಮರುದ್ರಪುರಸ್ಸರಾಃ ॥

ಶರಣ್ಯಂ ಶರಣಂ ಜಗ್ಮುರ್ನಾರಾಯಣಮನಾಮಯಮ್ ।
ತೈರ್ವಿಜ್ಞಾಪಿತಕಾರ್ಯಸ್ತು ಭಗವಾನ್ ಪುರುಷೋತ್ತಮಃ ॥
ಅವತೀರ್ಣೋ ಮಹಾಯೋಗೀ ಸತ್ಯವತ್ಯಾಂ ಪರಾಶರಾತ್ ।
ಚತುರ್ಧಾ ವ್ಯಭಜತ್ತಾಂಶ್ಚ ಚತುರ್ವಿಂಶತಿಧಾ ಪುನಃ ।
ಶತಧಾ ಚೈಕಧಾ ಚೈವ ತಥೈವ ಚ ಸಹಸ್ರಧಾ ॥
ಕೃಷ್ಣೋ ದ್ವಾದಶಧಾ ಚೈವ ಪುನಸ್ತಸ್ಯಾರ್ಥವಿತ್ತಯೇ ।
ಚಕಾರ ಬ್ರಹ್ಮಸೂತ್ರಾಣಿ ಯೇಷಾಂ ಸೂತ್ರತ್ವಮಂಜಸಾ ॥
ಏವಂವಿಧಾನಿ ಸೂತ್ರಾಣಿ ಕೃತ್ವಾ ವ್ಯಾಸೋ ಮಹಾಯಶಾಃ ।
ಬ್ರಹ್ಮರುದ್ರಾದಿದೇವೇಷು ಮನುಷ್ಯಪಿತೃಪಕ್ಷಿಷು ।
ಜ್ಞಾನಂ ಸಂಸ್ಥಾಪ್ಯ ಭಗವಾನ್ ಕ್ರೀಡತೇ ಪುರುಷೋತ್ತಮಃ ॥

೫) ಬ್ರಹ್ಮಸೂತ್ರಗಳಲ್ಲಿ ಒಂದೇ ಅಧಿಕರಣದಲ್ಲಿನ ಸೂತ್ರಗಳನ್ನು ಪೂರ್ವಪಕ್ಷಸೂತ್ರ, ಸಿದ್ಧಾಂತಸೂತ್ರಗಳೆಂಬುದಾಗಿ ಅನೇಕ ಕಡೆ ಶಂಕರರಾಮಾನುಜರು ಗ್ರಹಿಸಿರುವರು. ಆದರೆ ಬ್ರಹ್ಮಸೂತ್ರಗಳಲ್ಲಿರುವ ಪ್ರತಿಯೊಂದು ಸೂತ್ರವೂ ಸಿದ್ಧಾಂತಸೂತ್ರವೇ ಆಗಿದ್ದು ಅದರಲ್ಲಿ ಪೂರ್ವಪಕ್ಷಸೂತ್ರಗಳ ಪ್ರಸಕ್ತಿಯೇ ಇಲ್ಲ ಎಂಬುದಾಗಿ ಶ್ರೀಮಧ್ವಾಚಾರ್ಯರು ನಿರೂಪಿಸಿರುವರು.

೬) ಸೂತ್ರ ಸಂಖ್ಯೆ ಅಧಿಕರಣಗಳ ಸಂಖ್ಯೆಯ ಬಗ್ಗೆಯೂ ಭಾಷ್ಯಗಳಲ್ಲಿ ಒಮ್ಮತವಿಲ್ಲ. ಶಂಕರರಾಮಾನುಜರ ಪ್ರಕಾರ ಸೂತ್ರಸಂಖ್ಯೆ ಕ್ರಮವಾಗಿ ೫೫೫ ಮತ್ತು ೫೪೫. ಆದರೆ ಆಚಾರ್ಯರ ರೀತ್ಯಾ ಸೂತ್ರಗಳ ಸಂಖ್ಯೆ ೫೬೪. 'ವಿಷ್ಣು' ಎಂಬ ಹೆಸರಿನಲ್ಲೇ ಸೂತ್ರಗಳ ಸಂಖ್ಯೆ ಪ್ರತಿಪಾದಿತವಾಗಿದೆ ಎಂಬುದನ್ನು ಅವರ ಪರಂಪರೆ ಸ್ಪಷ್ಟಪಡಿಸಿದೆ. ವಿ, ಷ, ಣ; ವಿ ಎಂಬುದು ಯ ವರ್ಗದ ನಾಲ್ಕನೆಯ ಅಕ್ಷರ; ಷ ಆರನೆಯ ಅಕ್ಷರ; ಣ, ತ ವರ್ಗದ ಐದನೆಯ ಅಕ್ಷರ ಎಂದರೆ ಇವುಗಳ ಸಂಖ್ಯೆ ೪೬೫; ಅಂಕಾನಾಂ ವಾಮನೋ ಗತಿಃ ಎಂಬ ನಿಯಮಾನುಸಾರ ಹಿಂದುಮುಂದಾಗಿ ಓದಿದರೆ ೫೬೪ ಎಂದಾಗುವುದು. ಹೀಗೆ ಸೂತ್ರಸಂಖ್ಯೆಯೂ ವಿಷ್ಣುವಾಚಕವಾಗಿದ್ದು ಬ್ರಹ್ಮಸೂತ್ರಪ್ರತಿಪಾದ್ಯ ಬ್ರಹ್ಮನು ವಿಷ್ಣುವೇ ಎಂದಾಗುವುದು.

೭) ಬ್ರಹ್ಮಸೂತ್ರಗಳಲ್ಲಿ ಜೈಮಿನಿ, ಬಾದರಿ, ಆತ್ಮರಥ್ಯ, ಕಾಶಕೃತ್ಸ್ನ, ಔಡುಲೋಮಿ ಮೊದಲಾದ ಮುನಿಗಳ ಉಲ್ಲೇಖವಿದೆ. ಅವರ ಉಲ್ಲೇಖ ಅವರ ಮತದ ನಿರಾಕರಣೆಗಾಗಿ ಬಂದಿದೆ ಎಂಬುದು ಶಂಕರ ರಾಮಾನುಜರ ದೃಷ್ಟಿ ಆದರೆ ಶ್ರೀಮದಾಚಾರ್ಯರು ಅವರ ಉಲ್ಲೇಖ ಬಂದಿರುವುದು ಅವರ ಮತವನ್ನು ನಿರಾಕರಿಸಲೆಂದಲ್ಲ, ತಮ್ಮ ಶಿಷ್ಯರಾದ ಅವರಿಗೆ ಪ್ರಸಿದ್ಧಿಕೊಡುವ ಉದ್ದೇಶದೊಂದಿಗೆ ಅವರ ವಿಚಾರದ ಇತಿಮಿತಿಗಳನ್ನು

ತೋರಿಸುವುದು ಮಾತ್ರ. ಅವರ ವಿಚಾರಗಳು ತಪ್ಪೇನೂ ಅಲ್ಲ; ಆದರೆ ಪರಿಪೂರ್ಣವಾದುದಲ್ಲ ಎಂಬ ಭಾವ ಮಾತ್ರ ಅಲ್ಲಿನದು ಎಂಬುದಾಗಿ ನಿರೂಪಿಸಿರುವರು :

ವ್ಯಾಸಚಿತ್ತಸ್ಥಿತಾಕಾಶಾದವಚ್ಛಿನ್ನಾನಿ ಕಾನಿಚಿತ್ ।
ಅನ್ಯೇ ವ್ಯವಹರಂತೇತಾನ್ಯೂರೀಕೃತ್ಯ ಗೃಹಾದಿವತ್ ॥
ಇತಿ ಸ್ಕಾಂದವಚನಾನ್ನ ಮತಾನಾಂ ಪರಸ್ಪರವಿರೋಧಃ । (೧/೨/೨೮)

ಸರ್ವಜ್ಞಸ್ಯೈವ ಕೃಷ್ಣಸ್ಯ ತ್ವೇಕದೇಶವಿಚಿಂತಿತಮ್ ।
ಸ್ವೀಕೃತ್ಯ ಮುನಯೋ ಬ್ರೂಯುಸ್ತನ್ಮತಂ ನ ವಿರುಧ್ಯತೇ ॥
–ಇತಿ ಬ್ರಾಹ್ಮೇ (೧/೩/೩೩)

ಕೃಷ್ಣದ್ವೈಪಾಯನಮತಾದೇಕದೇಶವಿದಃ ಪರೇ ।
ವದಂತಿ ತೇ ಯಥಾಪ್ರಜ್ಞಂ ನ ವಿರೋಧಃ ಕಥಂಚನ ॥ –ಇತಿ ಪಾದ್ಮೇ (೧/೪/೨೩)

೮) ಬ್ರಹ್ಮಸೂತ್ರಗಳಲ್ಲಿ ಎಲ್ಲವೂ ಭೇದಬೋಧಕ, ಕೆಲವು ಮಾತ್ರ ಅಭೇದಬೋಧಕ ಎಂಬುದನ್ನು ಅದ್ವೈತಿಗಳೂ ಒಪ್ಪಿರುವರು. ಆದರೆ ಸಕಲಬ್ರಹ್ಮಸೂತ್ರಗಳೂ ಭೇದಬೋಧಕವೇ ಆಗಿರುವವು ಎಂಬುದನ್ನು ಸ್ಫುಟವಾಗಿ ತೋರಿಸುತ್ತ 'ಅದ್ವೈತ'ದ ಸೂಚನೆಯೂ ಅವುಗಳಲ್ಲಿಲ್ಲ ಎಂದು ಪ್ರಥಮಬಾರಿಗೆ ಸಮರ್ಥಿಸಿದ್ದು ಮಧ್ವಭಾಷ್ಯದ ಕೊಡುಗೆ. ರಾಮಾನುಜಭಾಷ್ಯ ಶಂಕರರ ಅದ್ವೈತಭಾಷ್ಯದ ನಿರಾಕರಣೆಯನ್ನು ಮಾಡುವುದಾದರೂ, ಒಟ್ಟಾಗಿ ಅವರ ಅದ್ವೈತದ ಛಾಯೆಯಿಂದ ಪೂರ್ಣವಾಗಿ ಹೊರಬರಲಾಗಲಿಲ್ಲವೆಂಬುದು ಅವರ ಮತದ ಒಟ್ಟು ಪ್ರಮೇಯದ ಅಧ್ಯಯನಗಳಿಂದ ಸ್ಪಷ್ಟ 'ವಿಶಿಷ್ಟಾದ್ವೈತ' ಎಂಬ ಹೆಸರೇ ಅದರ ಮೇಲಿರುವ ಅದ್ವೈತ ಪ್ರಭಾವಕ್ಕೆ ಸ್ಪಷ್ಟ ನಿದರ್ಶನ. ಒಂದರ್ಥದಲ್ಲಿ ಸಾಂಖ್ಯಾದಿ ಇತರ ದರ್ಶನಗಳೂ ಇದಕ್ಕೆ ಹೊರತಲ್ಲ.

೯) ಅಧ್ಯಾಯ, ಪಾದಗಳ ವ್ಯವಸ್ಥೆಯನ್ನು ಒಪ್ಪಿದರೂ ಅವುಗಳ ವಿಷಯ ಪ್ರತಿಪಾದನೆಯ ಬಗ್ಗೆ ನಿಖರತೆಯನ್ನು ಕಾಪಾಡಿಕೊಳ್ಳುವಲ್ಲಿ ಇತರ ಭಾಷ್ಯಗಳು ಯಶಸ್ವಿಯಾಗಲಿಲ್ಲ. 'ಈಕ್ಷತ್ಯಧಿಕರಣ' ಸಾಂಖ್ಯಮತನಿರಾಸಕ್ಕೆ ಹೊರಟಿದೆ; ಉತ್ಪತ್ತ್ಯ-ಧಿಕರಣ ಪಂಚರಾತ್ರದ ಪ್ರಾಮಾಣ್ಯಕ್ಕೆ ಸಂಬಂಧಿಸಿದೆ ಎಂಬ ಶಂಕರರಾಮಾನುಜರ ವಾದಸರಣಿಯನ್ನು ನಿದರ್ಶನವಾಗಿ ಕೊಡಬಹುದು. ಸಮನ್ವಯಾಧ್ಯಾಯದ ಈಕ್ಷತ್ಯಧಿ ಕರಣದಲ್ಲಿ ಸಾಂಖ್ಯಮತದ ನಿರಾಸದ ಪ್ರಸಕ್ತಿ ಎಲ್ಲಿಯದು? ಸಮಯಪಾದ ಮತಗಳ ವಿಮರ್ಶೆಗೇ ಮೀಸಲಾಗಿಲ್ಲವೆ? ಅದರಂತೆ ಉತ್ಪತ್ತ್ಯಧಿಕರಣ ಸಮಯಪಾದದಲ್ಲಿ ಬರುವಾಗ ಸಮನ್ವಯಾಧ್ಯಾಯದ ಶಾಸ್ತ್ರಯೋನಿತ್ವಾಧಿಕರಣಕ್ಕೆ ಸಂಬಂಧಿಸಿದ ಪಂಚರಾತ್ರ-ಪ್ರಾಮಾಣ್ಯದ ಪ್ರಸಕ್ತಿ ಏತಕ್ಕೆ? ವಾಸ್ತವವಾಗಿ ಅವುಗಳಲ್ಲಿ ಚರ್ಚಿತವಾಗಿರುವ ವಿಚಾರ ಸಂಪೂರ್ಣ ಬೇರೆಯೇ ಆಗಿದೆ ಎಂದು ಬೆಳಕು ಚೆಲ್ಲಿದವರು ಶ್ರೀಮಧ್ವಾಚಾರ್ಯರು :

'ನ ಚ ಸಾಂಖ್ಯನಿರಾಕೃತ್ಯೈ ಸೂತ್ರಾಣ್ಯೇತಾನ್ಯಚೀಕ್ಲೃಪತ್'
'ದೂಷಣಂ ಪಂಚರಾತ್ರಸ್ಯ ವೀಕ್ಷಾಯಾಮಪಿ ನ ಕ್ಷಮಮ್ ॥'

೧೦) ಬ್ರಹ್ಮಸೂತ್ರಗಳ ಭಾಷ್ಯಗಳೆಲ್ಲ ಒಂದೇ ತೆರನಾಗಿಲ್ಲ; ಪರಸ್ಪರ ವಿರುದ್ಧಾರ್ಥ ನೀಡುವವು, ಎಂದ ಮೇಲೆ ಅವೆಲ್ಲವೂ ಸರಿಯಾದ ಭಾಷ್ಯಗಳಾಗಿರಲು ಸಾಧ್ಯವೇ ಇಲ್ಲ. ಹಾಗಿದ್ದರೆ ಬ್ರಹ್ಮಸೂತ್ರಗಳ ಯಥಾರ್ಥ ಯಾವುದು? ಈ ಪ್ರಶ್ನೆಗೆ ಬೇರೆ ಭಾಷ್ಯಗಳಲ್ಲಿ ಉತ್ತರವಿಲ್ಲ. ಆದರೆ ಮಧ್ವಭಾಷ್ಯದ ಬಗ್ಗೆ ಈ ಶಂಕೆಗೆ ಅವಕಾಶವೇ ಇಲ್ಲ. ಪ್ರಮಾಣಗಳನ್ನು ಸರ್ವತ್ರ ಉಲ್ಲೇಖಿಸುತ್ತ ಹೋಗುವುದೇ ಇದಕ್ಕೆ ಕಾರಣ. ಶ್ರೀವೇದವ್ಯಾಸರ ಬ್ರಹ್ಮಸೂತ್ರಗಳಿಗೆ ಅವರೇ ರಚಿಸಿದ ಬ್ರಹ್ಮತರ್ಕ, ಸ್ಕಂದಪುರಾಣ ಮೊದಲಾದ ಗ್ರಂಥಗಳಿಂದ ಆಧಾರವಿತ್ತ ಮೇಲೆ ಅವರ ಅಭಿಪ್ರಾಯದ ಬಗ್ಗೆ ಗೊಂದಲಕ್ಕೆ ಎಡೆಯೆಲ್ಲಿ?

ಹೀಗೆ [1]ಮಧ್ವಭಾಷ್ಯವು ಮೇಲ್ನೋಟಕ್ಕೇ ಅತ್ಯಂತ ಯಥಾರ್ಥಭಾಷ್ಯವಾಗಿ ಮನಸ್ಸನ್ನು ತಟ್ಟುತ್ತದೆ.

ಬ್ರಹ್ಮಸೂತ್ರಭಾಷ್ಯವನ್ನು ಶ್ರೀಮದಾಚಾರ್ಯರು ರಚಿಸಿದ್ದು ವಿಶಾಲ ಬದರಿಯಲ್ಲಿ. ವೇದವ್ಯಾಸ ಹಾಗೂ ನಾರಾಯಣರ ಆದೇಶದಂತೆ ಉತ್ತರ ಬದರಿಯಿಂದ ವಿಶಾಲಬದರಿಗೆ ಮರಳಿದ ಆಚಾರ್ಯರು ಅಲ್ಲಿ ಅದನ್ನು ರಚನೆ ಮಾಡಿದರು. ಅವರು ಹೇಳುತ್ತಾ ಹೋದಂತೆ ಭಾಷ್ಯವನ್ನು ಲೇಖನ ಮಾಡಿಕೊಂಡವರು ಅವರ ಜೊತೆಗೆ ಉತ್ತರಬದರಿಗೆ ಹಿಂಬಾಲಿಸುವ ಪ್ರಯತ್ನ ಮಾಡಿದ್ದ ಅವರ ಪ್ರೀತಿಯ ಶಿಷ್ಯ ಶ್ರೀಸತ್ಯತೀರ್ಥರು. ಅದನ್ನು ಅವರು ಪ್ರಕಾಶನ ಪಡಿಸಿದ ಸ್ಥಳ ಗೋದಾವರೀತೀರದ ಒಂದು ವಿದ್ವತ್ಸಭೆ. ಪ್ರಾಯಃ

---

೧. ಸೂತ್ರಾರ್ಥೋ ವರ್ಣ್ಯತೇ ಯತ್ರ ಪದೈಃ ಸೂತ್ರಾನುಕಾರಿಭಿಃ ।
ಸ್ವಪದಾನಿ ಚ ವರ್ಣ್ಯಂತೇ ಭಾಷ್ಯಂ ಭಾಷ್ಯವಿದೋ ವಿದುಃ ॥ – ಪುರಾಣವಚನಮ್

ವ್ಯಾಸದೇವಹೃದಯಾತಿವಲ್ಲಭಂ ವಾಸುದೇವಮಗಣಯ್ಯಸದ್ಗುಣಮ್ ।
ಸಾಧಯತ್ ಸಕಲದೋಷವರ್ಜಿತಂ ಜ್ಞಾನಭಕ್ತಿದಮನಂತಸೌಖ್ಯದಮ್ ॥
ಉಕ್ತಮುಕ್ತಮಭಿಧೇಯಮುತ್ತಮಂ ವೇದವಾಕ್ಯಮನುವಾದಯನ್ಮುಹುಃ ।
ವ್ಯಂಜಯತ್ ಸ್ಮೃತಿವಚೋಭಿರಂಜಸಾ ತಸ್ಯ ಚಾರ್ಥಮತಿಯುಕ್ತಯುಕ್ತಿಮತ್ ॥
ಬಾಲಸಂಘಮಪಿ ಬೋಧಯದ್ಭೃಶಂ ದುರ್ನಿರೂಪವಚನಂ ಚ ಪಂಡಿತೈಃ ।
ಅಪ್ರಮೇಯಹೃದಯಂ ಪ್ರಸಾದವತ್ ಸೌಮ್ಯಕಾಂತಿ ಚ ವಿಪಕ್ಷಭೀಷಣಮ್ ॥
ಅಸ್ತದೂಷಣಮವಂಧ್ಯಭಾಷಣಂ ಲಕ್ಷಿತಂ ಸಕಲಲಕ್ಷಣೈಃ ಸಮಮ್ ।
ಮಾನನೀಯಮಪಿ ನಾಕಿನಾಯಕೈ ರೂಪಮನ್ಯದಿವ ಧನ್ಯಮಾತ್ಮನಃ ॥
ಏಕವಿಂಶತಿಕುಭಾಷ್ಯದೂಷಕಂ ಬ್ರಹ್ಮಸೂತ್ರಗಣಭಾಷ್ಯಮದ್ಭುತಮ್ ।
ಅಪ್ಯದೂಷ್ಯಮತನೋದನಂತಧೀರ್ಭೂತಭಾವಿಭವದಾತ್ಮಭಿಃ ಕ್ವಚಿತ್॥
–ಸುಮಧ್ವವಿಜಯ (೯/೮-೧೨)

[1]ಅದನ್ನು ಮೊದಲಬಾರಿಗೆ ಶ್ರವಣ ಮಾಡಿದ ಹಿರಿಮೆ ಅನಂತರ ಪದ್ಮನಾಭತೀರ್ಥರೆಂಬುದಾಗಿ ಪ್ರಸಿದ್ಧರಾದ ಶ್ರೀಶೋಭನಭಟ್ಟರದು. ಅದರ ಮತ್ತೊಂದು ಪ್ರತಿಯನ್ನು ಬೇರೊಬ್ಬರ ಮೂಲಕ ಶ್ರೀಮದಾಚಾರ್ಯರು ಅಚ್ಯುತಪ್ರೇಕ್ಷರಿಗೆ ತಲುಪಿಸಿದ್ದರು. ಅದರ ಅವಲೋಕನದಿಂದ ಸಂಭ್ರಮಪಟ್ಟು ಪೂರ್ಣವಾಗಿ ಅದನ್ನು ಒಪ್ಪಿಕೊಂಡವರು ಜ್ಯೇಷ್ಠ ಯತಿಗಳು. ಆದರೆ ಅಚ್ಯುತಪ್ರೇಕ್ಷರಿಗೆ ಅದು ಸಮರ್ಪಕವೆನ್ನಿಸಿದರೂ ಕೆಲವು ಸಂದೇಹಗಳು ಅವರ ಮನಸ್ಸಿನಲ್ಲಿ ಉಳಿದುಕೊಂಡಿದ್ದವು. ಆಚಾರ್ಯರ ಮುಖದಿಂದ ಅದರ ವಿವರಣೆ ಕೇಳಿದ ಅನಂತರ ಸಂಪೂರ್ಣವಾಗಿ ಅವರೂ ಅವರ ಸಿದ್ಧಾಂತದ ಅನುಯಾಯಿಗಳಾದರು.

ಬ್ರಹ್ಮಸೂತ್ರಭಾಷ್ಯಕ್ಕೆ ರಚಿತವಾದ ಮೊದಲ ಟೀಕೆ ಶ್ರೀಪದ್ಮನಾಭತೀರ್ಥರ 'ಸತ್ತರ್ಕ-ದೀಪಾವಲಿ'. ಮುಂದೊಮ್ಮೆ ಆಚಾರ್ಯರ ಆದೇಶದಂತೆ ಶ್ರೀತ್ರಿವಿಕ್ರಮ ಪಂಡಿತರು ರಚಿಸಿದ ಟೀಕೆ 'ತತ್ತ್ವಪ್ರದೀಪ', ಶ್ರೀಜಯತೀರ್ಥರ ಸುಪ್ರಸಿದ್ಧ ಟೀಕೆ 'ತತ್ತ್ವಪ್ರಕಾಶಿಕೆ'; ಶ್ರೀವಾದಿರಾಜರ 'ಗುರ್ವರ್ಥದೀಪಿಕಾ', ಶ್ರೀವಿಜಯೀಂದ್ರತೀರ್ಥರ 'ತತ್ತ್ವಮಾಣಿಕ್ಯ-ಪೇಟಿಕಾ', ಶ್ರೀರಘೂತ್ತಮರ 'ಭಾವಬೋಧ', ಶ್ರೀರಾಘವೇಂದ್ರರ 'ಭಾವದೀಪ'. ಶ್ರೀಸತ್ಯನಾಥರ 'ಅಭಿನವಚಂದ್ರಿಕಾ', ಶ್ರೀಸುಮತೀಂದ್ರರ 'ಭಾವರತ್ನಕೋಶ' ಮೊದಲಾದವು ತತ್ತ್ವಪ್ರಕಾಶಿಕೆಗೆ ರಚಿತವಾಗಿರುವ ಪ್ರಸಿದ್ಧ ಟಿಪ್ಪಣಿಗಳು.

ಶ್ರೀವ್ಯಾಸರಾಜರ 'ತಾತ್ಪರ್ಯಚಂದ್ರಿಕೆ' ತತ್ತ್ವಪ್ರಕಾಶಿಕೆಯ ಮೇಲಿನ ಉಪಲಬ್ಧವಿರುವ ಪ್ರಾಚೀನ ಟಿಪ್ಪಣಿ. ಆದರೆ ಅದು ಟಿಪ್ಪಣಿಗಿಂತಲೂ ಮುಖ್ಯವಾಗಿ ಸಕಲಭಾಷ್ಯಗಳ ವಿಮರ್ಶನ ರೂಪವಾಗಿ ಸ್ವತಂತ್ರ ಗ್ರಂಥದ ಛಾಯೆಯನ್ನೇ ಹೊಂದಿದ್ದು ವ್ಯಾಸತ್ರಯಗಳಲ್ಲಿ ಒಂದಾಗಿ ಮಾನ್ಯವಾಗಿದೆ.

೨. ಅಣುಭಾಷ್ಯ

ಅನಂತೋಽರ್ಥಃ ಪ್ರಕಟಿತಸ್ತ್ವಯಾಽಣೌ ಭಾಷ್ಯಸಂಗ್ರಹೇ ।
ಅಹೋ ಆತ್ಮಪರಿಜ್ಞಪ್ತ್ಯೈ ಕೃಷ್ಣೇನೇವಾನನಾಂತರೇ ॥

– ಸುಮಧ್ವವಿಜಯ (೧೫/೮೨)

ಅಣುಭಾಷ್ಯವು ೩೨ ಶ್ಲೋಕಗಳ ಭಾಷ್ಯಾರ್ಥಸಂಗ್ರಹ. ಭಾಷ್ಯವು 'ಸರ್ವ-ಶಾಸ್ತ್ರಾರ್ಥ'ವಾದ್ದರಿಂದ ಇದು 'ಸರ್ವಶಾಸ್ತ್ರಾರ್ಥಸಂಗ್ರಹ'. ಬ್ರಹ್ಮಸೂತ್ರಭಾಷ್ಯವನ್ನು

---

೧. ಗಾಂಗಮಂಗಲತರಂಗಭಂಗದಪ್ರಾಂತಸುಶ್ರೀಹರಿವೇಶ್ಮಕೃತ್ತಮಃ ।
ಯದ್ಗತೈಕತಮವರ್ಣಲೇಖಕಃ ಸತ್ಯತೀರ್ಥ ಇಹ ಭಾಷ್ಯಮಾಲಿಖತ್ ॥

– ಸುಮಧ್ವವಿಜಯ(೯/೧೩)

ಪ್ರತಿನಿತ್ಯ ಪಠಿಸುವ ಪರಿಪಾಠ ಅಚ್ಯುತಪ್ರೇಕ್ಷರದಾಗಿತ್ತಂತೆ. ಒಮ್ಮೆ ಸಾಧನದ್ವಾದಶೀ-ದಿನದಂದು ಅದು ಸಾಧ್ಯವಾಗದೆ ವ್ರತಭಂಗವಾದೀತೆಂಬ ಚಿಂತೆ ಅವರಿಗೆ ಒದಗಿತಂತೆ. ತತ್‌ಕ್ಷಣವೇ ಆಚಾರ್ಯರು ರಚಿಸಿಕೊಟ್ಟ ಕೃತಿ 'ಅಣುಭಾಷ್ಯ'. ಹೀಗೆಂದು ಕೆಲವು ವ್ಯಾಖ್ಯಾನಕಾರರು ಬರೆದಿರುವರು. ಇಂದಿಗೂ ಸಮಗ್ರಭಾಷ್ಯ ಪಾರಾಯಣ ಮಾಡುವ ಪದ್ಧತಿ ಅನೇಕರಲ್ಲಿ ಉಂಟು. ಅಂತಹವರಿಗೂ ಸಾಧನದ್ವಾದಶಿ ಮೊದಲಾದ ಪ್ರಸಂಗಗಳಲ್ಲಿ ಈ ಕೃತಿಯ ಪಾರಾಯಣ ಭಾಷ್ಯ ಪಾರಾಯಣದ ಪ್ರತಿನಿಧಿ ಎಂದು ಮಾನ್ಯವಾಗಿದೆ.

ಪಾಠಮಾಡುವವರಿಗೆ ಮಾತ್ರವಲ್ಲದೆ, ಇಡೀ ಭಾಷ್ಯಾರ್ಥವನ್ನು ಮನನ ಮಾಡು-ವವರೆಗೂ ಇದು ಅಷ್ಟೇ ಉಪಯುಕ್ತ ಕೃತಿ. ಅದನ್ನು ಶ್ರೀರಾಘವೇಂದ್ರರ ತತ್ತ್ವಮಂಜರಿಯು ಸ್ಪಷ್ಟಪಡಿಸಿದೆ.

ಇದಕ್ಕೆ ನಾರಾಯಣಪಂಡಿತರ ಟೀಕೆಯೊಂದು ಉಪಲಬ್ಧವಿದೆ. ಅವರ ಪುತ್ರ ವಾಮನಪಂಡಿತರ 'ಆನಂದಮಾಲಾ' ಇದರ ಪ್ರಸಿದ್ಧ ಪ್ರಾಚೀನ ಟೀಕೆ. ಅನಂತರವೂ ಹತ್ತಾರು ಟೀಕೆಗಳು ರಚಿತವಾಗಿದ್ದು ಅವುಗಳಲ್ಲಿ ಶ್ರೀರಾಘವೇಂದ್ರರ 'ತತ್ತ್ವಮಂಜರೀ' ಅತ್ಯಂತ ವಿಸ್ತಾರವಾಗಿದ್ದು ಅಧ್ಯಯನ ಪರಂಪರೆಯಲ್ಲಿ ವಿಶೇಷ ಪ್ರಸಾರದಲ್ಲಿದೆ.

ಅಣುಭಾಷ್ಯವು ಬ್ರಹ್ಮಸೂತ್ರಭಾಷ್ಯದ ಅಧ್ಯಾಯಸಾರವನ್ನು ಶ್ಲೋಕರೂಪದಲ್ಲಿ ನೀಡುವ ಪುಟ್ಟಕೃತಿ; ಸಮನ್ವಯ, ಅವಿರೋಧ, ಸಾಧನ ಮತ್ತು ಫಲ ಎಂಬ ನಾಲ್ಕು ಅಧ್ಯಾಯಗಳ ಸಾರವನ್ನು, ಆ ಮೂಲಕ ಸಮಗ್ರ ಬ್ರಹ್ಮಸೂತ್ರಗಳ ಒಟ್ಟು ಭಾವವನ್ನು ಸುಲಭವಾಗಿ ಗ್ರಹಿಸಲು ಸಾಧ್ಯವಾಗುತ್ತದೆ. ಇದು ಅಧ್ಯಾಯಗಳ ಸಾರಮಾತ್ರವಾಗಿರದೆ ಪ್ರತಿಪಾದದಲ್ಲಿನ ಸಕಲ ಅಧಿಕರಣಗಳ ಸಾರವನ್ನು ಪ್ರತ್ಯೇಕ ಕೊಡುವ 'ಅಧಿಕರಣಾರ್ಥಸಾರ'ವೂ ಆಗಿದೆ, ಎಂಬ ವಿಶೇಷಾಂಶವನ್ನು ಶ್ರೀರಾಘವೇಂದ್ರತೀರ್ಥರು ಇದರ ಮೇಲಿನ ತಮ್ಮ 'ತತ್ತ್ವಮಂಜರಿ' ಎಂಬ ಟೀಕೆಯಲ್ಲಿ ವಿವರವಾಗಿ ನಿರೂಪಿಸಿರುವರು. ಸುಮಧ್ವವಿಜಯದಲ್ಲಿ ಇದನ್ನು ''ತನ್ನ ಪುಟ್ಟ ಬಾಯಲ್ಲಿ ಬ್ರಹ್ಮಾಂಡವನ್ನು ತೋರಿಸುವ ಮೂಲಕ ಶ್ರೀಕೃಷ್ಣನು ತಾನು ಭಗವಂತ ಎಂಬುದಾಗಿ ತನ್ನ ಸ್ವರೂಪವನ್ನು ತೋರಿಸಿಕೊಟ್ಟಂತೆ, ತಮ್ಮ ಈ ಅಣುಭಾಷ್ಯದ ಮೂಲಕ ತಾವು ವಾಯುದೇವರ ಅವತಾರ ಎಂಬುದನ್ನು ತೋರಿಸಿಕೊಟ್ಟಿರುವರು'' ಎಂಬುದಾಗಿ ಬಣ್ಣಿಸಲಾಗಿದೆ.

೩. ಅನುವ್ಯಾಖ್ಯಾನ

ಇತ್ಯರ್ಥಿತೋ ವ್ಯಧಾನ್ಮಧ್ವಃ ಸೋಽನುವ್ಯಾಖ್ಯಾಂ ಸತಾಂ ಸುಧಾಮ್ ।
ದುರ್ವಾದಿಗರ್ವಾದ್ರಿಪವಿಂ ಮಾಯಿಧ್ವಾಂತರವಿದ್ಯುತಿಮ್ ॥ -ಮ.ವಿ.(೧೫/೮೮)

ಬ್ರಹ್ಮಸೂತ್ರದಲ್ಲಿ ಸೂತ್ರಾರ್ಥದ ನಿರೂಪಣೆಗಷ್ಟೇ ಪ್ರಾಧಾನ್ಯ. ಇತರ ಭಾಷ್ಯಗಳ ವಿಮರ್ಶೆಯನ್ನು ಅಲ್ಲೊಮ್ಮೆ ಇಲ್ಲೊಮ್ಮೆ ಅತ್ಯಂತ ಸಂಕ್ಷಿಪ್ತವಾಗಿ ಮಾಡಿರುವರು.

ಅನುವ್ಯಾಖ್ಯಾನವು ಹಾಗಲ್ಲ. ಪ್ರಧಾನವಾಗಿ ಇತರ ಭಾಷ್ಯಗಳ ವಿಮರ್ಶೆ ಅದರಲ್ಲಿ ಬಂದಿದೆ. ಅದರೊಂದಿಗೆ ತಮ್ಮ ಸಿದ್ಧಾಂತದ ಮುಖ್ಯತತ್ತ್ವಗಳಾದ ವಿಷ್ಣುಸರ್ವೋತ್ತಮತ್ವ, ತಾರತಮ್ಯ, ವಿಶೇಷ, ಭೇದ ಮೊದಲಾದವುಗಳ ಸವಿಸ್ತಾರ ನಿರೂಪಣೆಯನ್ನೂ ನೀಡಿರುವರು. ಬ್ರಹ್ಮಸೂತ್ರಭಾಷ್ಯ ಮೂಲತಃ ಗದ್ಯಕೃತಿಯಾಗಿದ್ದು ಉದಾಹರಿಸಿರುವ ಪ್ರಮಾಣವಾಕ್ಯಗಳು ಮಾತ್ರ ಶ್ಲೋಕರೂಪದಲ್ಲಿವೆ. ಅನುವ್ಯಾಖ್ಯಾನವು ಶ್ಲೋಕರೂಪದಲ್ಲಿದ್ದು ಪ್ರಧಾನವಾಗಿ ಪ್ರಮಾಣಗಳ ಪ್ರತೀಕಗಳು ಶ್ಲೋಕರೂಪದಲ್ಲೇ ಗೃಹೀತವಾಗಿವೆ.

ಅನುವ್ಯಾಖ್ಯಾನವು ರಚಿತವಾದ ಹಿನ್ನೆಲೆ ಮತ್ತು ಸನ್ನಿವೇಶಗಳನ್ನು ಸುಮಧ್ವವಿಜಯ ದಾಖಲಿಸಿದೆ.

ಆಚಾರ್ಯರ ಸರ್ವತೋಮುಖ ಹಿರಿಮೆಯನ್ನು ಗಮನಿಸಿದ ತ್ರಿವಿಕ್ರಮಪಂಡಿತರು ಅವರ ಶಿಷ್ಯತ್ವ ವಹಿಸುವರು. ಅವರಿಗೆ ತಮ್ಮ ಭಾಷ್ಯಕ್ಕೆ ಟೀಕೆಯೊಂದನ್ನು ರಚಿಸಲು ಆದೇಶವಿತ್ತಾಗ, ತ್ರಿವಿಕ್ರಮರು ಪ್ರಾರ್ಥಿಸಿಕೊಂಡರಂತೆ ''ತಮ್ಮ ಪ್ರತಿಯೊಂದು ಗ್ರಂಥವೂ ಅಮೋಘ! ವಿಶಿಷ್ಟ! ಆದರೆ ಅವುಗಳಲ್ಲಿ ಅಡಕವಾಗಿರುವ ಚಿಂತನಸರಣಿಯನ್ನು ಅರಗಿಸಿಕೊಳ್ಳುವ ಯೋಗ್ಯತೆ ನಮ್ಮದಲ್ಲ. ಅವನ್ನೆಲ್ಲ ಸ್ಫುಟಪಡಿಸುವ ಮತ್ತೊಂದು ಕೃತಿಯನ್ನು ತಾವೇ ಅನುಗ್ರಹಿಸಬೇಕು''. ಇದು ಭಾಗವತಪುರಾಣವನ್ನು ರಚಿಸಿ ಅನುಗ್ರಹಿಸಬೇಕೆಂದು ಶ್ರೀವೇದವ್ಯಾಸರನ್ನು ನಾರದರು ಪ್ರಾರ್ಥಿಸಿದ ಪ್ರಸಂಗದಂತಿದೆ. ತಕ್ಷಣವೇ ಆಚಾರ್ಯರು ತಮ್ಮ ಶಿಷ್ಯರಲ್ಲಿ ನಾಲ್ವರನ್ನು ಕೂಡಿಸಿಕೊಂಡು ಬರೆಸತೊಡಗಿದರು. ನಾಲ್ವರು ಶಿಷ್ಯರು; ನಾಲ್ಕು ಅಧ್ಯಾಯಗಳ ಕೃತಿ; ಒಂದೇ ಬಾರಿ ನಾಲ್ವರಿಗೂ ಒಂದೊಂದು ಅಧ್ಯಾಯದ ಉಪದೇಶ. ಅವರು ಬರೆಯುತ್ತಾ ಹೋದರು. ಒಮ್ಮೆಲೇ ನಾಲ್ಕು ಅಧ್ಯಾಯಗಳೂ ಪೂರೈಸಿ ಗ್ರಂಥ ಸಿದ್ಧವಾಯಿತು. ಅದೇ ಅನುವ್ಯಾಖ್ಯಾನ. ಎಂತಹ ಕೌಶಲ! ಎಂತಹ ಕೃತಿ! ವೇದಾಂತ ಚಿಂತನೆಯ ಮೇರು ಕೃತಿ ಆಶುಕವಿತೆಯೆಂಬಂತೆ ನಿರ್ಮಾಣವಾಯಿತು. ಜಟಿಲವಾದ ವೇದಾಂತ ಕಾವ್ಯದಂತೆ ಹೊರಹೊಮ್ಮಿ ಬಂತು. ಈ ಬಗೆಯ ಮತ್ತೊಂದು ವಿದ್ವತ್ಪಾಡವನ್ನು ಜಗತ್ತು ದಾಖಲಿಸಿಲ್ಲ:

ಅಪರೋಕ್ಷಯಿಷ್ಯತೇಽಸ್ಮಾಭಿಗ್ರಂಥೇಷ್ವೇತೇಷು ಸತ್ಸ್ವಪಿ ।
ಸತ್ಸ್ವಪೀಂದ್ರಾದಿಷು ಪುರಾ ತಾರಕಾರಿರಿವಾಮರ್ತ್ಯೈಃ ॥
ಗ್ರಂಥೇಭ್ಯ ಏಭ್ಯೋಽಗಾಧೇಭ್ಯೋ ಯುಕ್ತಯೋ ನೋ ದುರುದ್ಧರಾಃ ।
ಮನೋಮಾಂದ್ಯಾತ್ ತತೋ ಗ್ರಂಥಂ ವ್ಯಕ್ತತರ್ಕತತಿಂ ಕುರು ॥
ಇತ್ಯರ್ಥಿತೋ ವ್ಯಧಾನ್ಮಧ್ವಃ ಸೋಽನುವ್ಯಾಖ್ಯಾಂ ಸತಾಂ ಸುಧಾಮ್ ।
ದುರ್ವಾದಿಗರ್ವಾದ್ರಿಪವಿಂ ಮಾಯಿಧ್ವಾಂತರವಿದ್ಯುತಿಮ್ ॥
ಯುಗಪದ್ರಚಯನ್ನೇನಾಂ ಕದಾಚಿತ್ ಸ ನಿರಂತರಮ್ ।
ಚತುರಶ್ಚತುರಃ ಶಿಷ್ಯಾನ್ ಲೀಲಯಾಽಲೇಖಯತ್ ಖಲು ॥ ಮ.ವಿ.೧೫/೮೬-೮೯

ನಾರದರ ಪ್ರಾರ್ಥನೆಯ ಫಲಶ್ರುತಿ ಶ್ರೀವೇದವ್ಯಾಸರ ಶ್ರೀಮದ್ಭಾಗವತಾಮೃತ. ತ್ರಿವಿಕ್ರಮಪಂಡಿತರ ಪ್ರಾರ್ಥನೆಯ ಫಲಶ್ರುತಿ ಶ್ರೀಮದಾಚಾರ್ಯರ 'ಅನುವ್ಯಾಖ್ಯಾನಾಮೃತ'. ಶ್ರೀಭಾಗವತಸುಧೆ ನೀಡಿದ ವೇದವ್ಯಾಸರು ಸಾಕ್ಷಾತ್ ಭಗವಂತ; ಅನುವ್ಯಾಖ್ಯಾನಸುಧೆ ನೀಡಿದ ಆಚಾರ್ಯ ಶ್ರೀಮಧ್ವರು 'ಭಗವತ್ಪಾದ'ರು.

ಅನುವ್ಯಾಖ್ಯಾನಕ್ಕೆ ಶ್ರೀಪದ್ಮನಾಭತೀರ್ಥರು ರಚಿಸಿದ ಟೀಕೆ 'ಸನ್ನ್ಯಾಯರತ್ನಾವಲಿ', ಶ್ರೀಶಂಕರಪಂಡಿತರ 'ಸಂಬಂಧದೀಪಿಕೆ', ಶ್ರೀನಾರಾಯಣಪಂಡಿತಾಚಾರ್ಯರ ಟೀಕೆ 'ನಯಚಂದ್ರಿಕಾ', ಶ್ರೀಜಯತೀರ್ಥರ ಟೀಕೆಯೇ ವಿಶ್ವವಿಖ್ಯಾತ 'ನ್ಯಾಯಸುಧಾ'; ಇದರ ಮೇಲೆ ರಚಿತವಾಗಿರುವ ಟಿಪ್ಪಣಿಗಳ ಸಂಖ್ಯೆ ಮೂವತ್ತನ್ನೂ ಮೀರುತ್ತದೆ. ಶ್ರೀವಾದಿರಾಜರ 'ಗುರ್ವರ್ಥದೀಪಿಕಾ', ಶ್ರೀವಿಜಯೀಂದ್ರತೀರ್ಥರ 'ಬಿಂದು', ಶ್ರೀಯದುಪತ್ಯಾಚಾರ್ಯರ 'ನ್ಯಾಯಸುಧಾವಿವೃತಿ', ಶ್ರೀವಿದ್ಯಾಧೀಶತೀರ್ಥರ 'ವಾಕ್ಯಾರ್ಥಚಂದ್ರಿಕಾ', ಕೇಶವಾಚಾರ್ಯ-ಪಾಂಡುರಂಗಿ ಅವರ 'ಶೇಷವಾಕ್ಯಾರ್ಥಚಂದ್ರಿಕಾ', ಶ್ರೀರಾಘವೇಂದ್ರರ 'ಪರಿಮಳ' ಇವುಗಳಲ್ಲಿ ಪ್ರಮುಖವಾದವು.

೪. ನ್ಯಾಯವಿವರಣ

ಯುಕ್ತಾಯಾ ಯುಕ್ತಿಮಾಲಾಯಾಃ ಪ್ರೋಕ್ತಾಯಾಸ್ತತ್ರ ಚಾತ್ಮನಾ ।
ವ್ಯಕ್ತಂ ಚಕ್ರೇ ವಿವರಣಂ ಕವೀಂದ್ರೈರೇಷ ದುಷ್ಕರಮ್ ॥ ಮ.ವಿ. (೧೫/೯೦)

ನ್ಯಾಯವಿವರಣವು ಹಿಂದೆ ಹೇಳಿದಂತೆ ಅನುವ್ಯಾಖ್ಯಾನದ 'ಯುಕ್ತಿಮಾಲಾ' ಭಾಗದ ವಿವರಣೆ.

ಇದರ ಮೊದಲ ಮೂರು ಪಾದಗಳಿಗೆ ಶ್ರೀಜಯತೀರ್ಥರು ಟೀಕೆ ರಚಿಸಿರುವರು. ಉಳಿದ ಭಾಗಕ್ಕೆ ಶ್ರೀರಘೂತ್ತಮತೀರ್ಥರ 'ಭಾವಬೋಧ' ಎಂಬ ಟೀಕೆ ಇದೆ. ಅದಕ್ಕೆ ತಾಮ್ರಪರ್ಣೀ ಆನಂದತೀರ್ಥಾಚಾರ್ಯರ ಟಿಪ್ಪಣಿಯೂ ಉಂಟು.

ನ್ಯಾಯವಿವರಣವು ಅದರ ಹೆಸರೇ ಸೂಚಿಸುವಂತೆ ಬ್ರಹ್ಮಸೂತ್ರಗಳ ಪ್ರತಿಪಾದದ ಅಧಿಕರಣದ ಪೂರ್ವಪಕ್ಷ ಹಾಗು ಸಿದ್ಧಾಂತಗಳ ನ್ಯಾಯಗಳನ್ನು ವಿವರಿಸುವ ಕೃತಿ. ಇದು ಮತ್ತೊಂದು ರೀತಿಯಲ್ಲಿ ತಮ್ಮ ಅನುವ್ಯಾಖ್ಯಾನದಲ್ಲಿ ಸಂಗೃಹೀತವಾಗಿರುವ ಪೂರ್ವಪಕ್ಷಸಿದ್ಧಾಂತಯುಕ್ತಿಗಳ ಸಂಗ್ರಹರೂಪವಾದ 'ಯುಕ್ತಿಮಾಲಾ' ಭಾಗಕ್ಕೆ ರಚಿಸಿರುವ ವಿವರಣೆಯೂ ಆಗಿದೆ.

ನ್ಯಾಯವಿವರಣದ ಆದ್ಯಂತಶ್ಲೋಕಗಳಲ್ಲಿ ಬ್ರಹ್ಮಸೂತ್ರಗಳ ಹಿರಿಮೆ, ಅವುಗಳ ಅರ್ಥಗಾಂಭೀರ್ಯ ಅವಕ್ಕೆ ವ್ಯಾಖ್ಯಾನ ರಚಿಸುವ ತಮ್ಮ ಕಾರ್ಯದ ಹಿನ್ನೆಲೆ ಮೊದಲಾದವುಗಳು ತುಂಬಾ ಪರಿಣಾಮಕಾರಿಯಾಗಿ ನಿರೂಪಿಸಿರುವರು :

ಆದಿ: ಕೃತ್ವಾ ಭಾಷ್ಯಾನುಭಾಷ್ಯೇಽಹಮಪಿ ವೇದಾರ್ಥಸತ್ತ್ವತೇಃ ।
ಕೃಷ್ಣಸ್ಯ ಸೂತ್ರಾನುವ್ಯಾಖ್ಯಾಸನ್ನ್ಯಾಯವಿವೃತಿಂ ಸ್ಫುಟಮ್ ॥
ಕರೋಮಿ ಮಂದಬುದ್ಧೀನಾಂ ಬುಧಾನಾಂ ಚೋಪಕಾರಿಕಾಮ್ ।
ಪ್ರೀತ್ಯೈ ತಸ್ಯೈವ ದೇವಸ್ಯ ತತ್ಪ್ರಸಾದಪುರಃಸರಃ ॥

ಅಂತ್ಯ: ಇತ್ಯನಂತಮಹಾನ್ಯಾಯಮೀಮಾಂಸಾಪಾರವಾರಿಧೇಃ ।
ಉತ್ತರಣಾತ್ಯಶಕ್ತ್ಯೈವ ವ್ಯಾಕುಲೀಕೃತಚೇತಸಾಮ್ ॥
ಮಂದಾನಾಮುಪಕಾರಾಯ ಮಹತಾಂ ಚೋಚ್ಛ್ರಿತಾತ್ಮನಾಮ್ ।
ತದ್ವಿಶೇಷಪರಿಜ್ಞಾನಪ್ರದೀಪ್ತಾರ್ಕಾಭಚೇತಸಾಮ್ ॥
ವಿಶೇಷಗಾಢೇ ಮನಸಿ ನಿತರಾಮುಪಕಾರಕಃ ।
ನ್ಯಾಯಪ್ಲವೋ ಮಯಾಽಕಾರಿ ಸಂಕ್ಷೇಪಾತ್ ಪ್ರಮಿತಾಕ್ಷರೈಃ ॥
ವಿಸ್ತಾರೋಽಪ್ಯಯಮೇವ ಸ್ಯಾತ್ ತದ್ವಿಶೇಷಾತಿವೇದಿನಾಮ್ ।
ವ್ಯಾಖ್ಯಾನುವ್ಯಾಖ್ಯಯೋರೇವ ವಿಸ್ತಾರೋ ಯದುದೀರಿತಃ ॥
ಅನಲ್ಪಚೇತಸಾಂ ಪುಂಸಾಮಲಂ ವಿಜ್ಞಾನಸಿದ್ಧಯೇ ।
ತನ್ನ್ಯಾಯೋದ್ಧರಣೇ(ಽ)ಶಕ್ತಾ ಅಪಿ ಹ್ಯೇತೇನ ಸುಸ್ಥಿರಮ್ ॥
ನ್ಯಾಯಾನುಗಂ ಮನಃ ಕುರ್ಯುರಿತಿ ಸಂಗ್ರಹಲಾಲಸಾಃ ।
ಕೋ ನಾಮಾಶೇಷವಿದ್ಯೋರುಸಾಗರೋನ್ಮಥನೋದ್ಧೃತಮ್ ।
ಅಶೇಷತೋಽಧಿಗಚ್ಛೇತ ವಂದ್ಯೋ ವೃಂದಾರಕೋಽಪಿ ಸನ್ ॥
ಏವಂ ಸುದುರ್ಲಭೇಽಪ್ಯದ್ಧಾ ಮಹಾನ್ಯಾಯಪರಾಮೃತೇ ।
ಕೇಚನಾಧಿಕ್ರಿಯಂತೇಽತ್ರ ತತ್ಪ್ರಸಾದಾನುರಂಜಿತಾಃ ॥
ಬ್ರಹ್ಮಾದ್ಯಾ ಅಮೃತೇ ಯದ್ವತ್ ಸಾಗರೋನ್ಮಥನೋದ್ಧೃತೇ ।
ಅಹಂ ತು ತತ್ಪ್ರಸಾದೈಕಮಹಾಸ್ಪದಬಲೋದ್ಧತಃ ॥
ನ್ಯಾಯಮೃತಾರ್ಣವಮಿಮಮವಗಾಹ್ಯ ವಿಭಜ್ಯ ಚ ।
ಸಂಕ್ಷೇಪವಿಸ್ತರಾಭ್ಯಾಂ ಚ ಚಕಾರ ವ್ಯಾಕೃತಿಂ ಕೃತಿಮ್ ॥
ತತ್ಪ್ರಸಾದಮೃತೇ ಕಸ್ಯ ಶಕ್ತಿಃ ಸಂಸಾರಸಾಗರೇ ।
ಮಗ್ನಸ್ಯ ಚೇತನಸ್ಯ ಸ್ಯಾತ್ ತತ್ಕೃತಾನುಕೃತೌ ಕ್ವಚಿತ್ ॥
ನಿತ್ಯಾನಂದಾಮೃತಸ್ಯಂದಿತತ್ಕಟಾಕ್ಷೈಧಿತಸ್ಯ ತು ।
ಕಾ ನು ಶಕ್ತಿರ್ಭವೇನ್ನೈವ ತತಃ ಕೋಽತ್ರಾತಿವಿಸ್ಮಯಃ ॥
ವಿದ್ಯಾವಿದ್ಯೇ ಸುಖಂ ದುಃಖಮಶಕ್ತಿಃ ಶಕ್ತಿರೇವ ಚ ।
ಉತ್ಪತ್ತಿಸ್ಥಿತಿನಾಶಾಶ್ಚ ವಿಶೇಷಾಶ್ಚ ಪರೇಽಖಿಲಾಃ ॥
ಚೇತನಾಚೇತನಸ್ಯಾಸ್ಯ ಸಮಸ್ತಸ್ಯ ಯದಿಚ್ಛಯಾ ।
ಸ ಮಮ ಸ್ವಕೃತೇನೈವ ಪ್ರೀಯತಾಂ ಪುರುಷೋತ್ತಮಃ ॥

-ಇವುಗಳಲ್ಲಿ ಬ್ರಹ್ಮಸೂತ್ರಗಳ ಮಹಿಮೆ, ಅವುಗಳ ಅರ್ಥಗಾಂಭೀರ್ಯ ಅವುಗಳ ಮೇಲಿನ ತಮ್ಮ ಕೃತಿಗಳು ಮತ್ತು ಅವುಗಳ ಸಾರ್ಥಕ್ಯ, ರಚನಾನುಕ್ರಮ, ಭಾಷ್ಯರಚನೆಗೆ ತಮಗಿರುವ ಅರ್ಹತೆ, ಅದರ ಹಿನ್ನೆಲೆ ಮೊದಲಾದ ಮಹತ್ತ್ವಪೂರ್ಣ ವಿವರಗಳನ್ನು ನೀಡಿರುವರು.

ಇವುಗಳಿಂದ ತಿಳಿಯುವಂತೆ ಬ್ರಹ್ಮಸೂತ್ರಭಾಷ್ಯ, ಅಣುಭಾಷ್ಯ, ಅನುವ್ಯಾಖ್ಯಾನ ಮತ್ತು ನ್ಯಾಯವಿವರಣ ಎಂಬುದು ಇವುಗಳ ರಚನೆಯ ಅನುಕ್ರಮ. ಮಧ್ವ-ವಿಜಯದಲ್ಲಿನ ಉಲ್ಲೇಖವೂ ಇದಕ್ಕೆ ಅನುಗುಣವಾಗಿಯೇ ಇದೆ.

ಅನುವ್ಯಾಖ್ಯಾನಕ್ಕೆ 'ಅನುಭಾಷ್ಯ' ಮತ್ತೊಂದು ಹೆಸರು ಎಂಬುದು ಇಲ್ಲಿಯ ಉಲ್ಲೇಖದಿಂದ ತಿಳಿಯುತ್ತದೆ. ಭಾಷ್ಯಾದಿಗ್ರಂಥಗಳು ಬಹ್ವರ್ಥಗರ್ಭಿತ ಎಂಬ ಅನುವ್ಯಾಖ್ಯಾನದ ಮಾತು ಇಲ್ಲಿ ಗಮನಾರ್ಹ:

ಗ್ರಂಥೋಽಯಮಪಿ ಬಹ್ವರ್ಥೋ ಭಾಷ್ಯಂ ಚಾತ್ಯರ್ಥವಿಸ್ತರಮ್ ।
ಬಹುಜ್ಞಾ ಏವ ಜಾನಂತಿ ವಿಶೇಷೇಣಾರ್ಥಮೇತಯೋಃ ॥

ಭಾಷ್ಯಕ್ಕೆ ಅನುವ್ಯಾಖ್ಯಾನರೂಪ ಟೀಕೆ ಬರೆದು ಟೀಕಾರಚನೆಗೆ ಮಾರ್ಗದರ್ಶನ ಮಾಡಿದಂತೆ, ಅನುವ್ಯಾಖ್ಯಾನಕ್ಕೆ ನ್ಯಾಯವಿವರಣರೂಪ ಟಿಪ್ಪಣಿಯನ್ನು ರಚಿಸಿ ಟಿಪ್ಪಣೀರಚನೆಗೂ ಶ್ರೀಮದಾಚಾರ್ಯರು ತಾವೇ ಮಾರ್ಗದರ್ಶನ ಮಾಡಿರುವರು ಎಂದು ಭಾವಿಸಬಹುದು.

ಮಧ್ವಭಾಷ್ಯದ ಟೀಕಾಟಿಪ್ಪಣಿಗಳು

ಶ್ರೀಮಧ್ವರ ಬ್ರಹ್ಮಸೂತ್ರಗಳ ಮೇಲಿನ ನಾಲ್ಕು ಕೃತಿಗಳಲ್ಲಿ ಬ್ರಹ್ಮಸೂತ್ರಭಾಷ್ಯವು ಪ್ರತಿಸೂತ್ರದ ಅರ್ಥವನ್ನು ಶ್ರುತಿಸ್ಮೃತಿಗಳ ಆಧಾರದ ಹಿನ್ನೆಲೆಯಲ್ಲಿ ನಿರೂಪಿಸುವ ಕೃತಿ. ಇತರ ಯಾವ ಭಾಷ್ಯಗಳಲ್ಲೂ ಈ ತೆರನಾದ ಸುಸಂಗತವಾದ ಶ್ರುತಿಸ್ಮೃತಿಗಳ ವಿಪುಲ ಉಲ್ಲೇಖವು ಕಂಡುಬರುವುದಿಲ್ಲ ಎಂಬುದು ಶ್ರೀಮಧ್ವಭಾಷ್ಯದ ಪ್ರಾಮಾಣಿಕತ್ವಕ್ಕೆ ದ್ಯೋತಕ. ಅನುವ್ಯಾಖ್ಯಾನವು ಅವರೇ ತಿಳಿಸಿರುವಂತೆ ಬ್ರಹ್ಮಸೂತ್ರಭಾಷ್ಯದ ಸ್ಪಷ್ಟೀಕರಣಕ್ಕೆಂದು ಹೊರಟಿರುವ ಕೃತಿ (ಸ್ವಯಂ ಕೃತಾಽಪಿ ತದ್ವ್ಯಾಖ್ಯಾ ಕ್ರಿಯತೇ ಸ್ಪಷ್ಟತಾರ್ಥತಃ). ಪ್ರಧಾನವಾಗಿ ಇತರ ಭಾಷ್ಯಗಳ ವಿಮರ್ಶೆಯು ಇದರಲ್ಲಿ ವಿಪುಲವಾಗಿ ದೊರೆಯುತ್ತದೆ. ಬ್ರಹ್ಮಸೂತ್ರಭಾಷ್ಯವು ಪ್ರಧಾನವಾಗಿ 'ಸ್ವಪಕ್ಷಸ್ಥಾಪನೆ'ಯಾದರೆ, ಅನುವ್ಯಾಖ್ಯಾನವು ಪ್ರಧಾನವಾಗಿ 'ಪರಪಕ್ಷವಿಮರ್ಶೆ' ಯಾಗಿದೆ. ಅಣುಭಾಷ್ಯವು ಬ್ರಹ್ಮಸೂತ್ರದ ಸಂಗ್ರಹಭಾಷ್ಯ. ನ್ಯಾಯವಿವರಣವು ಅನುವ್ಯಾಖ್ಯಾನದಲ್ಲಿ ಬಂದಿರುವ ಪೂರ್ವಪಕ್ಷಸಿದ್ಧಾಂತ - ಯುಕ್ತಿಮಾಲೆಯ ವಿವರಣೆ. ಅರ್ಥದಲ್ಲಿ ಮಾತ್ರವಲ್ಲದೆ ರಚನೆಯ ಸಂವಿಧಾನದಲ್ಲೂ ಇಂತಹ ನಾಲ್ಕು ಗ್ರಂಥಗಳು ಬ್ರಹ್ಮಸೂತ್ರಭಾಷ್ಯಗಳ ಇತಿಹಾಸದಲ್ಲೇ ಅಪೂರ್ವ. ಬೇರೆ ಯಾವ ಮತಾಚಾರ್ಯರಿಂದಲೂ

ಇಷ್ಟು ವ್ಯಾಪಕವಾಗಿ, ಸಮಗ್ರವಾಗಿ ಬ್ರಹ್ಮಸೂತ್ರಗಳ ಮೇಲೆ ಕೃತಿಗಳು ರಚಿತವಾಗಿಲ್ಲ. ಶ್ರೀಮದಾಚಾರ್ಯರ ಅನುವ್ಯಾಖ್ಯಾನವು ಸಮಗ್ರ ಸೂತ್ರಸಾಹಿತ್ಯದ ಮೇಲೆ ಉಪಲಬ್ಧವಿರುವ ಏಕಮಾತ್ರ ಶ್ಲೋಕರೂಪಭಾಷ್ಯವಾಗಿದೆ.

ಶ್ರೀಮದಾಚಾರ್ಯರ ಅನುವ್ಯಾಖ್ಯಾನವು ಒಂದರ್ಥದಲ್ಲಿ ಅವರ ಬ್ರಹ್ಮಸೂತ್ರಭಾಷ್ಯದ ಪ್ರಪ್ರಥಮ ಟೀಕೆಯೂ ಆಗಿದೆ(ಸ್ವಯಂ ಕೃತಾऽಪಿ ತದ್ವ್ಯಾಖ್ಯಾ ಕ್ರಿಯತೇ ಸ್ಪಷ್ಟತಾರ್ಥತಃ). ಶ್ರೀಪದ್ಮನಾಭತೀರ್ಥರ ಸತ್ತರ್ಕದೀಪಾವಲಿ, ತ್ರಿವಿಕ್ರಮಪಂಡಿತರ ತತ್ತ್ವಪ್ರದೀಪ ಇವು ಬ್ರಹ್ಮಸೂತ್ರಭಾಷ್ಯದ ಪ್ರಾಚೀನ ಟೀಕೆಗಳು. ಶ್ರೀಪದ್ಮನಾಭತೀರ್ಥರ ಸನ್ನ್ಯಾಯರತ್ನಾವಲಿ ಮತ್ತು ಶ್ರೀನಾರಾಯಣಪಂಡಿತಾಚಾರ್ಯರ ನಯಚಂದ್ರಿಕಾಗಳು ಅವರ ಅನುವ್ಯಾಖ್ಯಾನದ ಪ್ರಾಚೀನ ಟೀಕೆಗಳು. ಶ್ರೀಶಂಕರಪಂಡಿತಾಚಾರ್ಯರ ಅನುವ್ಯಾಖ್ಯಾನ-ಸಂಬಂಧದೀಪಿಕಾ ಮತ್ತು ನ್ಯಾಯವಿವರಣಸಂಬಂಧದೀಪಿಕಾಗಳು ಅನುವ್ಯಾಖ್ಯಾನ ಯುಕ್ತಿಮಾಲೆಯ ಪ್ರಾಚೀನಟೀಕೆಗಳಾಗಿದ್ದರೆ, ನಾರಾಯಣಪಂಡಿತಾಚಾರ್ಯರು ಮತ್ತು ಪ್ರಾಯಃ ಅವರ ಪುತ್ರ ತ್ರೈವಿಕ್ರಮಾಚಾರ್ಯಾನುಚರ(ವಾಮನಪಂಡಿತ)ರ ಟೀಕೆಗಳು ಅಣುಭಾಷ್ಯದ ಪ್ರಾಚೀನಟೀಕೆಗಳಾಗಿವೆ. ಶ್ರೀಟೀಕಾಚಾರ್ಯರೆಂದೇ ಮಾನ್ಯರಾಗಿರುವ ಶ್ರೀಜಯತೀರ್ಥರ ತತ್ತ್ವಪ್ರಕಾಶಿಕಾ (ಸೂತ್ರಭಾಷ್ಯಟೀಕಾ), ನ್ಯಾಯಸುಧಾ (ಅನುವ್ಯಾಖ್ಯಾನ-ಟೀಕಾ) ಗ್ರಂಥಗಳು ಪ್ರಮುಖಟೀಕೆಗಳೆಂದು ಅಧ್ಯಯನ ಪರಂಪರೆಯಲ್ಲಿ ಬಂದ ಟೀಕಾಗ್ರಂಥಗಳಾಗಿವೆ. ಅವರ ನ್ಯಾಯಸುಧೆಯಂತೂ ಟೀಕಾರಚನೆಯ ಪರಮಸಿದ್ಧಿ ಎನ್ನಿಸಿದ್ದು ಲೋಕೋತ್ತಮ ಗ್ರಂಥವೆಂದು ಪ್ರಖ್ಯಾತವಾಗಿದೆ. ಸಕಲಭಾಷ್ಯಗಳ ಪರಿಪೂರ್ಣವಿವೇಚನೆಯೊಂದಿಗೆ ಮಧ್ವಭಾಷ್ಯದ ಹಿರಿಮೆಯನ್ನು ಪ್ರತಿಪಾದಿಸುವ ಈ ಕೃತಿ ಚಿಂತನ ಪ್ರಪಂಚದ ಗೌರೀಶಂಕರವೇ ಆಗಿದೆ. ನ್ಯಾಯವಿವರಣದ ಮೊದಲೆರಡು ಪಾದಗಳಿಗೂ ಶ್ರೀಜಯತೀರ್ಥರು ಟೀಕೆ ರಚಿಸಿದ್ದು ಅವರ ಮುಂದಿನ ಭಾಗವನ್ನು ಶ್ರೀರಘೂತ್ತಮತೀರ್ಥರ (ನ್ಯಾಯವಿವರಣ)ಭಾವಬೋಧ ವಿವರಿಸುತ್ತದೆ. ಶ್ರೀರಘೂತ್ತಮ-ತೀರ್ಥರ 'ಅನುವ್ಯಾಖ್ಯಾನ ನ್ಯಾಯಮಾಲಾ-ಸೂತ್ರಸಂಬಂಧಪ್ರದೀಪ'ವು ಒಂದರ್ಥದಲ್ಲಿ ಶಂಕರಪಂಡಿತಾಚಾರ್ಯರ 'ಸಂಬಂಧದೀಪಿಕೆ'ಗಳಿಗೆ ಪೂರಕವಾದ ಗ್ರಂಥ.

ಶ್ರೀವ್ಯಾಸರಾಜರ 'ತಾತ್ಪರ್ಯಚಂದ್ರಿಕಾ' (ಮೊದಲ ಎರಡು ಅಧ್ಯಾಯಗಳಿಗೆ ಮಾತ್ರ), ಶ್ರೀವಾದಿರಾಜರ ತತ್ತ್ವಪ್ರಕಾಶಿಕಾಗುರ್ವರ್ಥದೀಪಿಕಾ, ಶ್ರೀರಘೂತ್ತಮತೀರ್ಥರ ತತ್ತ್ವ-ಪ್ರಕಾಶಿಕಾಭಾವಬೋಧ, ಶ್ರೀವಿಜಯೀಂದ್ರಸ್ವಾಮಿಗಳ ತತ್ತ್ವಪ್ರಕಾಶಿಕಾ- ತತ್ತ್ವಮಾಣಿಕ್ಯಪೇಟಿಕಾ, ಶ್ರೀರಾಘವೇಂದ್ರತೀರ್ಥರ ತತ್ತ್ವಪ್ರಕಾಶಿಕಾಭಾವದೀಪ, ಶ್ರೀಬಿದರಹಳ್ಳಿ ಶ್ರೀನಿವಾಸತೀರ್ಥರ ತತ್ತ್ವಪ್ರಕಾಶಿಕಾಟಿಪ್ಪಣಿ, ಶ್ರೀಸತ್ಯನಾಥತೀರ್ಥರ 'ಅಭಿನವಚಂದ್ರಿಕಾ', ಶ್ರೀಶರ್ಕರಾಶ್ರೀನಿವಾಸಾ-ಚಾರ್ಯರ ಶರ್ಕರಾ, ಶ್ರೀರಘುನಾಥತೀರ್ಥರ ಶಿಷ್ಟತಾತ್ಪರ್ಯಚಂದ್ರಿಕಾ, ಶ್ರೀಸುಮತೀಂದ್ರ-

ತೀರ್ಥರ ಭಾವರತ್ನಕೋಶ ಮತ್ತು ಶ್ರೀತಾಮ್ರಪರ್ಣೀ ಶ್ರೀನಿವಾಸಾಚಾರ್ಯರ 'ಪ್ರಮೇಯ-ಮುಕ್ತಾವಲಿ' ಮತ್ತು 'ವಾಕ್ಯಾರ್ಥಮುಕ್ತಾವಲಿ'ಗಳು ತತ್ತ್ವಪ್ರಕಾಶಿಕೆಯ ಟಿಪ್ಪಣಿಗಳಲ್ಲಿ ಮುಖ್ಯವಾದವುಗಳು.

ಶ್ರೀವಾದಿರಾಜತೀರ್ಥರ ನ್ಯಾಯಸುಧಾಗುರ್ವರ್ಥದೀಪಿಕಾ, ಶ್ರೀವಿಜಯೀಂದ್ರರ ಬಿಂದು, ಶ್ರೀವಿದ್ಯಾಧೀಶತೀರ್ಥರ ವಾಕ್ಯಾರ್ಥಚಂದ್ರಿಕಾ (ಮೊದಲ ಐದು ಅಧಿಕರಣಗಳಿಗೆ ಮಾತ್ರ) ಪಾಂಡುರಂಗಿ ಕೇಶವಾಚಾರ್ಯರ ಶೇಷವಾಕ್ಯಾರ್ಥಚಂದ್ರಿಕಾ, ಯಾದವಾರ್ಯರ ಟಿಪ್ಪಣಿ, ಶ್ರೀಸತ್ಯವ್ರತತೀರ್ಥರ ಟಿಪ್ಪಣಿ, ಶ್ರೀರಾಘವೇಂದ್ರಸ್ವಾಮಿಗಳ ಪರಿಮಳ, ಶ್ರೀಬಿದರಹಳ್ಳಿ ಶ್ರೀನಿವಾಸತೀರ್ಥರ ಟಿಪ್ಪಣಿ ಮತ್ತು ಶ್ರೀಸತ್ಯನಾಥತೀರ್ಥರ ಸುಧಾದುರ್ಘಟವಾಕ್ಯಾರ್ಥ, ಶ್ರೀಮನ್ನಾರು ಕೃಷ್ಣಾಚಾರ್ಯರ ಚಷಕ, ಶ್ರೀಮಾದನೂರು ವಿಷ್ಣುತೀರ್ಥರ ರಸರಂಜನೀ ಕೃತಿಗಳು ನ್ಯಾಯಸುಧೆಯ ಪ್ರಮುಖಟಿಪ್ಪಣಿಗಳಾಗಿವೆ. ಶ್ರೀರಾಘವೇಂದ್ರಸ್ವಾಮಿಗಳ ತತ್ತ್ವಮಂಜರಿಯು ಅಣುಭಾಷ್ಯದ ಟೀಕೆಯಾಗಿದೆ. ನ್ಯಾಯವಿವರಣಟೀಕೆಗೆ ತಾಮ್ರಪರ್ಣಿ ಆನಂದ-ತೀರ್ಥಾಚಾರ್ಯರ ಟಿಪ್ಪಣಿಯು ಉಪಲಬ್ಧವಿದೆ. ಶ್ರೀಧೀರೇಂದ್ರತೀರ್ಥರ 'ವಿಷಯವಾಕ್ಯ-ಸಂಗ್ರಹ'ವು ಸಹ ಒಂದು ಅಪೂರ್ವಕೃತಿ.

ಇವುಗಳಲ್ಲದೆ ನ್ಯಾಯಸುಧಾ, ತತ್ತ್ವಪ್ರಕಾಶಿಕಾ, ಅಣುಭಾಷ್ಯ ಗ್ರಂಥಗಳಿಗೆ ಇನ್ನೂ ಹತ್ತಾರು ಟಿಪ್ಪಣಿಗಳು ಉಪಲಬ್ಧವಿದ್ದು, ಅವುಗಳ ಮತ್ತು ಇತರ ಅನೇಕ ಅಣುಭಾಷ್ಯಟೀಕೆಗಳ ವಿವರಗಳನ್ನು ನಮ್ಮ ಪ್ರಕಾಶನದ 'ದ್ವೈತವೇದಾಂತಗ್ರಂಥಸೂಚಿ' ಎಂಬ ಕೃತಿಯಲ್ಲಿ ಕೊಡಲಾಗಿದೆ. ಶ್ರೀರಾಘವೇಂದ್ರಸ್ವಾಮಿಗಳ ತಂತ್ರದೀಪಿಕಾ (ಸೂತ್ರಾರ್ಥಸಂಗ್ರಹ) ಮತ್ತು ನ್ಯಾಯಮುಕ್ತಾವಲಿ (ಅಧಿಕರಣಾರ್ಥಸಂಗ್ರಹ) ಮತ್ತು ಶ್ರೀಜಗನ್ನಾಥತೀರ್ಥರ ಸೂತ್ರದೀಪಿಕಾ ಮತ್ತು ಭಾಷ್ಯದೀಪಿಕೆಗಳು, ಬ್ರಹ್ಮಸೂತ್ರಗಳ ಅಧ್ಯಯನಕ್ಕೆ ಉಪಯುಕ್ತವಾಗುವ ಇತರ ಗ್ರಂಥಗಳು. ಇದರೊಂದಿಗೆ ಅಧಿಕರಣಾರ್ಥ-ಸಂಗ್ರಹರೂಪವಾದ ಮತ್ತು ಭಾಷ್ಯೋಕ್ತಶ್ರುತ್ಯರ್ಥನಿರೂಪಕವಾದ ಇನ್ನೂ ಅನೇಕ ಗ್ರಂಥಗಳು ನನ್ನ ಸಂಗ್ರಹ (ಶ್ರೀಜಯತೀರ್ಥ ಸಂಸ್ಕೃತ ಹಸ್ತಲಿಖಿತ ಗ್ರಂಥಾಲಯ ವ್ಯಾಸನಕೆರೆ)ದಲ್ಲೂ ಇತರ ಅನೇಕ ಗ್ರಂಥಾಲಯಗಳಲ್ಲೂ ಉಪಲಬ್ಧವಿದೆ. ಅವುಗಳ ಬಗ್ಗೆ ವಿವರವನ್ನು ನಮ್ಮ ಪ್ರಕಾಶನದ 'ದ್ವೈತವೇದಾಂತಗ್ರಂಥಸೂಚೀ' ಎಂಬ ಕೃತಿಯಲ್ಲಿ ಕೊಡಲಾಗಿದೆ.

★★★★★

ಉಪನಿಷತ್ಪ್ರಸ್ಥಾನಗ್ರಂಥಗಳು

ಉಪನಿಷತ್ತುಗಳು

ಪ್ರತಿಯೊಂದು ವೇದವೂ ಮಂತ್ರ, ಬ್ರಾಹ್ಮಣ, ಉಪನಿಷತ್ತು ಎಂಬುದಾಗಿ ಮೂರು ವಿಧ. ಎಂದರೆ ಉಪನಿಷತ್ತು ವೈದಿಕಸಾಹಿತ್ಯದ ಅವಿಭಾಜ್ಯ ಅಂಗ. ಮೂರೂ ವೈದಿಕಸಾಹಿತ್ಯವೇ ಆದರೂ, ಮಂತ್ರಗಳಿಂದ ಬ್ರಾಹ್ಮಣ ಅರಣ್ಯಕಗಳು ಅದಕ್ಕಿಂತ ಉಪನಿಷತ್ತುಗಳು ಮಿಗಿಲು. 'ಉಪನಿಷತ್' ಎಂಬ ಪದ ಉಪನಿಷತ್ತುಗಳಲ್ಲೇ ಹಲವಾರು ಬಾರಿ ಪ್ರಯೋಗಿಸಲ್ಪಟ್ಟಿದೆ. ಆ ಎಲ್ಲ ಕಡೆಗಳಲ್ಲಿಯೂ ಪ್ರಧಾನವಾಗಿ ರಹಸ್ಯವಿದ್ಯೆ ಎಂಬ ಅರ್ಥದಲ್ಲೇ ಅದು ಬಂದಿದೆ. 'ಉಪನಿಷತ್' ಎಂಬ ಪದದ ನಿರ್ವಚನವೂ ಸಹ (ಉಪ+ ನಿ+ ಷದಲ್ಳ) ಗುರುಗಳ ಹತ್ತಿರ ನೆಲೆಸಿ ಸಂಪಾದಿಸುವ ರಹಸ್ಯವಿದ್ಯೆ ಎಂಬ ಅರ್ಥವನ್ನೇ ಸೂಚಿಸುತ್ತದೆ. ಸ್ವಯೋಗ್ಯಪರಿಜ್ಞಾನ ಎಂಬ ಮತ್ತೊಂದು ಅರ್ಥವನ್ನೂ ಸಹ 'ಉಪನಿಷತ್' ಶಬ್ದಕ್ಕೆ ಶ್ರೀಮದಾಚಾರ್ಯರು ತಿಳಿಸಿರುವರು :

ಸ್ವಯೋಗ್ಯಂ ತು ಪರಿಜ್ಞಾನಂ ಯತ್ ತಸ್ಯೋಪನಿಷತ್ ಸ್ಮೃತಮ್ ।

- ಇತಿ ಛಾಂದೋಗ್ಯೋಪನಿಷದ್ಭಾಷ್ಯೇ

ಆದ್ದರಿಂದಲೇ ಉಪನಿಷತ್ತುಗಳು ವೈದಿಕಸಾಹಿತ್ಯದ 'ಸಾರಭಾಗ' ಎಂಬುದಾಗಿ ಪರಿಗಣಿಸಲ್ಪಟ್ಟಿವೆ.

ಉಪನಿಷತ್ತುಗಳ ಸಂಖ್ಯೆ

ಇಂತಹ ಉಪನಿಷತ್ತುಗಳ ಸಂಖ್ಯೆ ಅಪಾರ. 'ಅನಂತಾ ವೈ ವೇದಾಃ' ಎಂಬ ಮಾತಿನಲ್ಲಿ ವೇದಗಳಿಗೆ ಸಂಬಂಧಿಸಿದಂತೆ ಉಪನಿಷತ್ತುಗಳೂ ಅಸಂಖ್ಯ ಎಂಬ ಸೂಚನೆ ಇದೆ. ಅವುಗಳಲ್ಲಿ ೧೦೮ ಉಪನಿಷತ್ತುಗಳನ್ನು ಪ್ರಧಾನ ಎಂಬುದಾಗಿ ಮುಕ್ತಿಕೋಪನಿಷತ್ತು ಉಲ್ಲೇಖಿಸಿದೆ :

ಸರ್ವೋಪನಿಷದಾಂ ಮಧ್ಯೇ ಸಾರಮಷ್ಟೋತ್ತರಂ ಶತಮ್ ।

- ಮುಕ್ತಿಕೋಪನಿಷತ್ (೪೪)

ಅವುಗಳಲ್ಲಿ ಹತ್ತು ಋಗ್ವೇದಕ್ಕೂ, ಹತ್ತೊಂಬತ್ತು ಶುಕ್ಲಯಜುರ್ವೇದಕ್ಕೂ, ಮೂವತ್ತೆರಡು ಕೃಷ್ಣಯಜುರ್ವೇದಕ್ಕೂ, ಹದಿನಾರು ಸಾಮವೇದಕ್ಕೂ, ಮಿಕ್ಕ ಮೂವತ್ತೊಂದು ಅಥರ್ವಣ ವೇದಕ್ಕೂ ಸಂಬಂಧಿಸಿವೆ. ಈ ೧೦೮ ರಲ್ಲಿ ದಶೋಪ-ನಿಷತ್ತುಗಳನ್ನು ಅತ್ಯಂತ ಪ್ರಧಾನವೆಂಬುದಾಗಿ ಅದೇ ಮುಕ್ತಿಕೋಪನಿಷತ್ತು ಹೆಸರಿಸಿದೆ:

ಈಶಕೇನಕಠಪ್ರಶ್ನಮುಂಡಮಾಂಡೂಕ್ಯತಿತ್ತಿರಿಃ ।
ಐತರೇಯಂ ಚ ಛಾಂದೋಗ್ಯಂ ಬೃಹದಾರಣ್ಯಕಂ ತಥಾ ॥

-ಮುಕ್ತಿಕೋಪನಿಷತ್(೪೪)

ಈ ಹತ್ತರಲ್ಲಿ ನಾಲ್ಕು ವೇದಗಳಿಗೂ ಸಂಬಂಧಿಸಿದ ಉಪನಿಷತ್ತುಗಳಿವೆ; ಎಂದರೆ ಇವು ಪ್ರಾತಿನಿಧಿಕವಾಗಿವೆ. ಆದ್ದರಿಂದ ಇವುಗಳ ಅಧ್ಯಯನ ಸಮಗ್ರ ಉಪನಿಷತ್ಪ್ರಪಂಚದ ಅಧ್ಯಯನವಾಗುತ್ತದೆ; ಉಪನಿಷತ್ಸಾರದ ಸರ್ವಸ್ವವಾಗುತ್ತದೆ. ಉಪನಿಷತ್ತುಗಳು ವೇದಗಳ ಸಾರವಾದ್ದರಿಂದ ಇವುಗಳ ಅರಿವು ವೇದತಾತ್ಪರ್ಯದ ಪರಿಜ್ಞಾನವೇ ಆಗುತ್ತದೆ. 'ದಶ' ಎಂಬುದಕ್ಕೆ ಪೂರ್ಣ ಎಂಬ ಅರ್ಥವೂ ಇದ್ದು ಈ ಹತ್ತು 'ಪೂರ್ಣ'ವಾಗಿ ಸಕಲ ಉಪನಿಷತ್ತುಗಳ ಸಾರ ಎಂಬ ಅರ್ಥವನ್ನೇ ಧ್ವನಿಸುತ್ತವೆ. ಶಂಕರಾಚಾರ್ಯರು ಈ ಹತ್ತೂ ಉಪನಿಷತ್ತುಗಳಿಗೂ ಭಾಷ್ಯ ರಚಿಸಿರುವುದು ಈ ದಶೋಪನಿಷತ್ತುಗಳ ಪ್ರಾಧಾನ್ಯ ಅವರಿಗೂ ಸಮ್ಮತ ಎಂಬುದಕ್ಕೆ ದ್ಯೋತಕ. ಅನಂತರದ ರಾಮಾನುಜಾಚಾರ್ಯರು ಯಾವ ಉಪನಿಷತ್ತಿಗೂ ಭಾಷ್ಯ ರಚಿಸಿಲ್ಲ; 'ವೇದಾರ್ಥಸಂಗ್ರಹ' ಎಂಬ ತಮ್ಮ ಕೃತಿಯಲ್ಲಿ ಅವುಗಳಲ್ಲಿನ ದ್ವೈತಾದ್ವೈತಪರ ವಾಕ್ಯಗಳ ಅರ್ಥವಿವೇಚನೆಯನ್ನು ತಮ್ಮ ಸಿದ್ಧಾಂತಕ್ಕೆ ಪೋಷಕವಾಗುವಂತೆ ಮಾಡಿರುವರು ಮಾತ್ರ.

ಹತ್ತು ಉಪನಿಷತ್ತುಗಳಿಗೂ ಭಾಷ್ಯ ರಚಿಸಿದ ಎರಡನೆಯ ಆಚಾರ್ಯರು ಶ್ರೀಮಧ್ವಾಚಾರ್ಯರು. ಆದರೆ ಉಪನಿಷತ್ತುಗಳೆಲ್ಲ ಇತರ ಶಾಸ್ತ್ರಗ್ರಂಥಗಳಂತೆ ವಿಷ್ಣುಪಾರಮ್ಯವನ್ನು ಸಾರುತ್ತ ಅವೆಲ್ಲ ದ್ವೈತತತ್ತ್ವಬೋಧಕವಾಗಿವೆಯೇ ಹೊರತು ಅದ್ವೈತ ಬೋಧಕವಲ್ಲ ಎಂಬುದನ್ನು ಮೊದಲಬಾರಿಗೆ ಸಾರಿದ ಆಚಾರ್ಯರು ಅವರೇ.

ಹತ್ತು ಉಪನಿಷತ್ತುಗಳಲ್ಲಿ ಐತರೇಯವು ಋಗ್ವೇದಕ್ಕೂ, ಬೃಹದಾರಣ್ಯಕ, ಈಶಾವಾಸ್ಯ, ಕಾಠಕ ಮತ್ತು ತೈತ್ತಿರೀಯ ಎಂಬ ನಾಲ್ಕು ಯಜುರ್ವೇದಕ್ಕೂ, ಛಾಂದೋಗ್ಯ ಮತ್ತು ತಲವಕಾರ ಎಂಬ ಎರಡು ಸಾಮವೇದಕ್ಕೂ ಹಾಗೂ ಆಥರ್ವಣ, ಮಾಂಡೂಕ ಮತ್ತು ಷಟ್ಪ್ರಶ್ನ ಎಂಬ ಮೂರು ಅಥರ್ವಣವೇದಕ್ಕೂ ಸಂಬಂಧಿಸಿವೆ. ಈ ಹತ್ತರಲ್ಲಿ ಈಶಾವಾಸ್ಯ ಕಾಠಕಗಳು ಮಂತ್ರೋಪನಿಷತ್ತುಗಳಾಗಿವೆ.

ವೇದಾಂತದ ಪ್ರಸ್ಥಾನತ್ರಯದಲ್ಲಿ ಸೂತ್ರಪ್ರಸ್ಥಾನ, ಗೀತಾಪ್ರಸ್ಥಾನದೊಂದಿಗೆ ಈ ಉಪನಿಷತ್ಪ್ರಸ್ಥಾನವೂ ಸೇರಿದೆ.

ದಶೋಪನಿಷದ್ಭಾಷ್ಯಗಳು

ದಶೋಪನಿಷತ್ತುಗಳ ಮಧ್ವಭಾಷ್ಯಗಳು ಅನೇಕ ಕಾರಣಗಳಿಂದ ಅತ್ಯಂತ ಮಹತ್ತ್ವಪೂರ್ಣವಾಗಿದ್ದು ಅವುಗಳ ವೈಶಿಷ್ಟ್ಯಗಳಲ್ಲಿ ಕೆಲವು ಹೀಗಿವೆ:

೧) ಉಪನಿಷತ್ತುಗಳು ಮೂಲತಃ ವೈದಿಕಸಾಹಿತ್ಯವಾಗಿರುವುದರಿಂದ ಅವುಗಳ ಅಧ್ಯಯನಕ್ಕೂ ಮೂಲತಃ ಪ್ರತಿಪಾದ್ಯ ದೇವತೆಗಳ, ದರ್ಶನಮಾಡಿದ ಋಷಿಯ ಅರ್ಥ ಮತ್ತು ಛಂದಸ್ಸುಗಳ ಪರಿಜ್ಞಾನ (ಅವಶ್ಯವಿದ್ದೆಡೆ) ಅತ್ಯಂತ ಅವಶ್ಯ. ಇಲ್ಲವಾದಲ್ಲಿ ಅವುಗಳ ಅಧ್ಯಯನ ಅನರ್ಥಕರ :

ಯೋ ಹ ವಾऽವಿದಿತಾರ್ಷಛಂದೋದೈವತಬ್ರಾಹ್ಮಣೇನ ಮಂತ್ರೇಣ ಯಜತಿ ಯಾಜಯತಿ ವಾऽಧ್ಯಾಪಯತಿ ಸ್ಥಾಣುಂ ವರ್ಛತಿ ಗರ್ತೇ ವಾ ಪದ್ಯತೇ ಪ್ರವಾಮೀಯತೇ ಪಾಪೀಯಾನ್ ಭವತಿ ತಸ್ಮಾದೇತಾನಿ ಮಂತ್ರೀ ವಿದ್ಯಾತ್ । (ಸಾಮವೇದ ಬ್ರಾಹ್ಮಣಮ್)

ಆ ಮುಂಚಿನ ಯಾವ ಭಾಷ್ಯವೂ ಸಹ ಇಂತಹ ಮುಖ್ಯವಿವರವನ್ನು ನೀಡುವತ್ತ ಗಮನಹರಿಸಿರಲಿಲ್ಲ. ಆದರೆ ಮಧ್ವಭಾಷ್ಯಗಳು ಪ್ರತಿಯೊಂದು ಉಪನಿಷತ್ತಿಗೂ ಮೇಲೆ ಹೇಳಿದ ಋಷಿ, ದೇವತೆಗಳ ವಿವರಗಳನ್ನು ಸಾಧಾರವಾಗಿ ನೀಡಿವೆ :

ದಶೋಪನಿಷತ್ತುಗಳ ಋಷಿ - ದೇವತಾ ವಿವರ

ಉಪನಿಷತ್	ವೇದಶಾಖೆ	ಋಷಿ	ಪ್ರತಿಪಾದ್ಯದೇವತೆ
ಈಶಾವಾಸ್ಯ	ಶುಕ್ಲಯಜುರ್ವೇದ ವಾಜಸನೇಯ ಸಂಹಿತಾ	ಸ್ವಾಯಂಭುವಮನು	ಯಜ್ಞ
ತಲವಕಾರ	ಸಾಮವೇದ ತಲವಕಾರಬ್ರಾಹ್ಮಣ	ಬ್ರಹ್ಮ ಮತ್ತು ಸದಾಶಿವ	ವಿಷ್ಣು
ಕಠೋಪನಿಷತ್	ಕೃಷ್ಣಯಜುರ್ವೇದ ತೈತ್ತಿರೀಯ ಸಂಹಿತಾ	ಯಮ	ವಾಮನ
ಷಟ್ಪ್ರಶ್ನ	ಅಥರ್ವವೇದ ಪಿಪ್ಪಲಾದಶಾಖಾ	ಪಿಪ್ಪಲಾದಾದಿಗಳು	ವಾಸುದೇವ
ಅಥರ್ವಣ	ಅಥರ್ವವೇದ	ಬ್ರಹ್ಮ - ಅಥರ್ವಣರು	ಅಕ್ಷರನಾಮಕ ವಿಷ್ಣು
ಮಾಂಡೂಕ	ಅಥರ್ವವೇದ	ಮಂಡೂಕರೂಪಿ ವರುಣ	ವಿಶ್ವ, ತೈಜಸ, ಪ್ರಾಜ್ಞ ಮತ್ತು ತುರೀಯ
ತೈತ್ತಿರೀಯ	ಕೃಷ್ಣಯಜುರ್ವೇದ ತೈತ್ತಿರೀಯಾರಣ್ಯಕ	ವಿಷ್ಣು, ಬ್ರಹ್ಮ ವರುಣ, ಭೃಗು	ಸೂರ್ಯಮಂಡಲಸ್ಥ ಹರಿ(ವಾಸುದೇವಾದಿ ಪಂಚರೂಪಗಳು)
ಐತರೇಯ	ಋಗ್ವೇದ ಐತರೇಯಾರಣ್ಯಕ	ಐತರೇಯ	ಐತರೇಯ
ಛಾಂದೋಗ್ಯ	ಸಾಮವೇದ ಛಾಂದೋಗ್ಯಬ್ರಾಹ್ಮಣ	ಹಯಗ್ರೀವ, ರಮಾ ಬ್ರಹ್ಮಾದಿಗಳು	ಲಕ್ಷ್ಮೀಪತಿ
ಬೃಹದಾರಣ್ಯಕ	ಶುಕ್ಲಯಜುರ್ವೇದ ಕಣ್ವಶಾಖಾ	ಬ್ರಹ್ಮ, ಸೂರ್ಯ ಯಾಜ್ಞವಲ್ಕ್ಯ ಮತ್ತು ಕಣ್ವ	ಲಕ್ಷ್ಮೀಶ

೨) ಉಪನಿಷತ್ತುಗಳ ಭಾಷೆ ಸರಳ; ಆದರೆ ಅವು ಪ್ರತಿಪಾದಿಸುವ ವಿಷಯಗಳು ಮಾತ್ರ ಅತ್ಯಂತ ಗಹನ; ನಿರೂಪಣೆ ತುಂಬಾ ಸಂಕೀರ್ಣ. ಎಂದರೆ ಅವುಗಳ ಪದಗಳು, ವಾಕ್ಯಗಳು, ಅರ್ಥವಾಗುವಂತೆ ಕಂಡರೂ, ಅವುಗಳ ಭಾವ ಮಾತ್ರ ಒಗಟಾಗಿಯೇ ಉಳಿಯುವುದು ಅವುಗಳ ವೈಶಿಷ್ಟ್ಯ. ಅದಕ್ಕೆಂದೇ ಅವುಗಳ ಅರ್ಥವನ್ನು ಇತಿಹಾಸ ಪುರಾಣಗಳ ಬೆಳಕಿನಲ್ಲಿಯೇ ಕಾಣಬೇಕೆಂಬುದಾಗಿ ಪರಂಪರೆ ಎಚ್ಚರಿಸಿದೆ :

ಇತಿಹಾಸಪುರಾಣಾಭ್ಯಾಂ ವೇದಂ ಸಮುಪಬೃಂಹಯೇತ್ ।
ಬಿಭೇತ್ಯಲ್ಪಶ್ರುತಾದ್ವೇದೋ ಮಾಮಯಂ ಪ್ರಚಲಿಷ್ಯತಿ ॥

ಎಂದರೆ ಇತಿಹಾಸಪುರಾಣಗಳು ವೈದಿಕಸಾಹಿತ್ಯದ ಪ್ರಥಮ ಭಾಷ್ಯಗಳು. ಅವುಗಳ ಸಹಾಯವಿಲ್ಲದೆ ವೇದಗಳ ಭಾವ ಎಂದೂ ತೆರೆದುಕೊಳ್ಳುವುದಿಲ್ಲ ಎಂದರ್ಥ. ಹಾಗೆ ಇತಿಹಾಸ ಪುರಾಣಗಳ ಬೆಳಕಿನಲ್ಲಿ ವೇದೋಪನಿಷತ್ತುಗಳಿಗೆ ರಚಿತವಾದ ಭಾಷ್ಯಗಳು ಎಂಬುದು ಮಧ್ವಭಾಷ್ಯಗಳ ಹಿರಿಮೆ. ಅವರ ಭಾಷ್ಯಗಳಲ್ಲಿ ಉದ್ದಕ್ಕೂ ಕಂಡುಬರುವ ಪ್ರಮಾಣಗಳ ಉದಾಹರಣೆ ಇದಕ್ಕೆ ಸಾಕ್ಷಿ.

೩) ವೇದೋಪನಿಷತ್ತುಗಳಿಗೆ ಇತಿಹಾಸಪುರಾಣಗಳಲ್ಲದೆ ಋಕ್ಸಂಹಿತಾ, ಯಜುಃ ಸಂಹಿತಾ, ಐತರೇಯಸಂಹಿತಾ ಮೊದಲಾದ (ಪ್ರಾಯಃ ವ್ಯಾಸಪ್ರೋಕ್ತ)ವಿವರಣೆಗಳು ರಚಿತವಾಗಿದ್ದವು ಎಂಬ ಮತ್ತೊಂದು ಅಂಶವನ್ನು ಬೆಳಕಿಗೆ ತಂದು ಅವುಗಳ ಹಿನ್ನೆಲೆಯಲ್ಲಿ ಉಪನಿಷತ್ತುಗಳ ಮರ್ಮವನ್ನು ಅರಿಯಬೇಕೆಂಬುದನ್ನು ಶ್ರುತಪಡಿಸಿದ ಹಿರಿಮೆಯೂ ಮಧ್ವಭಾಷ್ಯಗಳದೇ ಆಗಿದೆ. ಉದಾಹರಣೆಗೆ ಐತರೇಯೋಪನಿಷತ್ತಿನ ಅನೇಕ ಗಹನ-ಭಾಗಗಳಿಗೆ ಐತರೇಯಸಂಹಿತೆ ಎಂಬ ಗ್ರಂಥದ ವಾಕ್ಯಗಳಿಂದಲೇ ಅರ್ಥವಿವರಿಸಿರುವುದನ್ನು ಗಮನಿಸಬಹುದು.

೪) ವೈದಿಕಸಾಹಿತ್ಯ ಪೂರ್ಣವಾಗಿ ತೆರೆದುಕೊಳ್ಳಲು ಶಿಕ್ಷಾ, ವ್ಯಾಕರಣ, ನಿರುಕ್ತ ಛಂದಸ್ಸು, ಜ್ಯೌತಿಷ ಮತ್ತು ಕಲ್ಪ ಎಂಬ ಆರು ವೇದಾಂಗಗಳೂ ಅಷ್ಟೇ ಅವಶ್ಯ. ವೇದಾಂಗ ಎಂಬ ಅವುಗಳ ಹೆಸರಿನಲ್ಲಿಯೇ ಅವುಗಳ ಮಹತ್ತ್ವ ಅಡಗಿದೆ. ಅವುಗಳಲ್ಲೂ ವ್ಯಾಕರಣ, ನಿರುಕ್ತಗಳ ಉಪಯೋಗ ಇನ್ನೂ ಪ್ರಧಾನ. ಹೆಚ್ಚಿನ ವೇದಭಾಷ್ಯಕಾರರು ಇವುಗಳ ಪ್ರಯೋಜನ ಪಡೆದಿದ್ದು ಕಡಿಮೆಯೇ. ಉಪನಿಷದ್ಭಾಷ್ಯಗಳಿಗೆ ಇವುಗಳ ಪ್ರಯೋಜನ-ವನ್ನಂತೂ ಪಡೆದೇ ಇರಲಿಲ್ಲ; ಪಾಣಿನಿಯ ವ್ಯಾಕರಣಗಳಿಗಿಂತ ಮುಂಚಿನ ವ್ಯಾಕರಣಗಳನ್ನು ಹೆಸರಿಗೂ ಉಲ್ಲೇಖಿಸುವುದಿಲ್ಲ, ಆದರೆ ಮಧ್ವಭಾಷ್ಯಗಳಲ್ಲಿ ಇವುಗಳ ಉಪಯೋಗ ವಿಪುಲವಾಗಿದೆ. ಅವರು 'ಮಹಾವ್ಯಾಕರಣ' ಮತ್ತು 'ವ್ಯಾಸನಿರುಕ್ತ'ಗಳನ್ನು ಉಲ್ಲೇಖಿಸಿ-ರುವುದನ್ನು ಗಮನಿಸಬೇಕು :

ಮಹಾವ್ಯಾಕರಣೇ ಸೂತ್ರಮಿತಿ ಸಂಸ್ತುತಿರೂಪತಃ ।

– ಇತಿ ಋಗ್ಭಾಷ್ಯೇ ಅ.೩ ಸೂ.೩೯ ಶ್ಲೋ. ೧೧೫

ಋಕ್ಸಂಹಿತಾಯಾಂ ಸ್ವಾಧ್ಯಾಯೇ ನಿರುಕ್ತೇ ವ್ಯಾಸನಿರ್ಮಿತೇ।

- ಇತಿ ಋಗ್ಭಾಷ್ಯೇ(೧/೧/೫೪)

೫) ಬ್ರಹ್ಮಮೀಮಾಂಸೆ ಅಥವಾ ಬ್ರಹ್ಮಸೂತ್ರಗಳಂತೂ ಸಕಲ ಶಾಸ್ತ್ರಾರ್ಥ ನಿರ್ಣಯದ ಮಾರ್ಗದರ್ಶಕಸೂತ್ರಗಳು. ಅವುಗಳ ಮಾರ್ಗದರ್ಶನವಿಲ್ಲದೆ ತಾತ್ತ್ವಿಕವಿಚಾರದ ಅಂತಿಮ ನಿರ್ಣಯ ಅಶಕ್ಯ :

ತಸ್ಮಾತ್ ಸೂತ್ರಾರ್ಥಮಾಗೃಹ್ಯ ಕರ್ತವ್ಯಃ ಸರ್ವನಿರ್ಣಯಃ।

- ಮ.ಭಾ.ತಾ.ನಿ (೧/೪೪)

ವೇದೋಪನಿಷತ್ತುಗಳಿಗಂತೂ ಅವು ನೇರವಾಗಿಯೇ ನಿರ್ಣಾಯಕ ಸೂತ್ರಗಳು. ಆದರೆ ಅವುಗಳ ಉಪಯೋಗವನ್ನು ಪ್ರಧಾನವಾಗಿ ಪಡೆದುಕೊಂಡದ್ದು ಮಧ್ವಭಾಷ್ಯ-ಗಳು ಮಾತ್ರ.

೬) ಉಪಕ್ರಮ, ಉಪಸಂಹಾರ, ಅಭ್ಯಾಸ, ಅಪೂರ್ವತಾ, ಫಲ ಮತ್ತು ಅರ್ಥವಾದಗಳೆಂಬ ತಾತ್ಪರ್ಯನಿರ್ಣಾಯಕಲಿಂಗಗಳು ವೈದಿಕಸಾಹಿತ್ಯದ ಅರ್ಥವಿಶ್ಲೇಷಣೆಗೆ ಅತ್ಯಂತ ಪ್ರಧಾನ. ಅಂತೆಯೇ ಶ್ರುತಿ, ಲಿಂಗ, ಸಮಾಖ್ಯಾ, ವಾಕ್ಯ ಮತ್ತು ಪ್ರಕರಣಗಳು ಸಹ. ಇವುಗಳಲ್ಲಿ ಉಪಕ್ರಮಾದಿಗಳಲ್ಲಿ ಮುಂಚಿನದಕ್ಕಿಂತ ಅನಂತರದ್ದು ಪ್ರಬಲವಾದರೆ, ಶ್ರುತಿಲಿಂಗಾದಿಗಳಲ್ಲಿ ಅನಂತರದ್ದಕ್ಕಿಂತ ಮುಂಚಿನದೇ ಪ್ರಬಲ. ಈ ಪರಿಜ್ಞಾನದೊಂದಿಗೆ ಉಪನಿಷತ್ತಿನ ಗಹನವಾಕ್ಯಗಳ ಆಂತರ್ಯವನ್ನು ನಿರ್ಣಯಿಸಿರುವುದು ಮಧ್ವಭಾಷ್ಯಗಳ ಪ್ರಮುಖ ವೈಶಿಷ್ಟ್ಯಗಳಲ್ಲೊಂದು. 'ಅಹಂ ಬ್ರಹ್ಮಾಸ್ಮಿ', 'ತತ್ತ್ವಮಸಿ' ಮೊದಲಾದ ವಾಕ್ಯಗಳ ಮೇಲಿನ ಭಾಷ್ಯಗಳನ್ನು ಇಲ್ಲಿ ನಿದರ್ಶನವಾಗಿ ಉಲ್ಲೇಖಿಸಬಹುದು :

ಉಪಕ್ರಮೋಪಸಂಹಾರತದೈಕರೂಪ್ಯಾಭ್ಯಾಸಾಪೂರ್ವತಾಫಲಾರ್ಥವಾದಾಶ್ಚ ಉಪಪತ್ತಿವಿಶೇಷಾಃ। ತ ಏವ ಸೋಪಪತ್ತಯೋ ಲಿಂಗಾನಿ। ಸಮಾಖ್ಯಾವಾಕ್ಯ-ಪ್ರಕರಣಸ್ಥಾನಾನಿ ಚ। - ಪ್ರಮಾಣಲಕ್ಷಣ

'ಉಪಕ್ರಮೋಪಸಂಹಾರಾವಭ್ಯಾಸೋಽಪೂರ್ವತಾ ಫಲಮ್।
ಅರ್ಥವಾದೋಪಪತ್ತೀ ಚ ಲಿಂಗಂ ತಾತ್ಪರ್ಯನಿರ್ಣಯೇ' ಇತಿ॥

- ಬ್ರಹ್ಮಸೂತ್ರಭಾಷ್ಯ (೧/೧/೪)

ವಾಕ್ಯಂ ಪ್ರಕರಣಂ ಸ್ಥಾನಂ ಸಮಾಖ್ಯಾ ಚ ತಥಾವಿಧಾಃ।
ಕುರುಪಾಂಡವವತ್ ತೇಷಾಮುಪಪತ್ತೇಃ ಪೃಥಗ್ವಚಃ॥

- ಅನುವ್ಯಾಖ್ಯಾನ ೨/೩/೩೬

ಉಪಕ್ರಮಾದಿಲಿಂಗಾನಾಂ ಬಲೀಯೋ ಹ್ಯುತ್ತರೋತ್ತರಮ್।

ಶ್ರುತ್ಯಾದೌ ಪೂರ್ವಪೂರ್ವಂ ಚ ಬ್ರಹ್ಮತರ್ಕವಿನಿರ್ಣಯಾತ್ ।

- ಅನುವ್ಯಾಖ್ಯಾನ ೩/೪/೧೯೪,೧೯೫

೭) ಉಪನಿಷತ್ತುಗಳು ಮೂಲತಃ ಆಧ್ಯಾತ್ಮವಿದ್ಯೆಯಾದ್ದರಿಂದ ಅಲ್ಲಿನ ಪದ, ವಾಕ್ಯ, ಪ್ರಕರಣ ಮೊದಲಾದ ಪ್ರತಿಯೊಂದನ್ನೂ ಆಧ್ಯಾತ್ಮ ಪರವಾಗಿ ಕಾಣಬೇಕು. ಹಾಗೆ ಪ್ರತಿಯೊಂದು ಪ್ರಸಂಗವನ್ನೂ ವಿಶ್ಲೇಷಿಸಿದ ಹಿರಿಮೆ ಮಧ್ವಭಾಷ್ಯಗಳದು.

೮) ಉಪನಿಷತ್ತುಗಳಲ್ಲಿ ಅದ್ವೈತಪರವೆಂದು ತೋರುವ 'ಅಹಂ ಬ್ರಹ್ಮಾಸ್ಮಿ' 'ತತ್ತ್ವಮಸಿ', 'ಪ್ರಜ್ಞಾನಂ ಬ್ರಹ್ಮ', 'ಸರ್ವಂ ಖಲ್ವಿದಂ ಬ್ರಹ್ಮ', 'ನೇಹ ನಾನಾಽಸ್ತಿ ಕಿಂಚನ' ಮೊದಲಾದ ನಾಲ್ಕಾರು ವಾಕ್ಯಗಳನ್ನು ಮಾತ್ರ ತತ್ತ್ವಾವೇದಕವೆಂದು ಪರಿಗಣಿಸಿ ಅದ್ವೈತವೇ ಉಪನಿಷತ್ತಿನ ಅಂತರ್ಯವೆಂಬುದಾಗಿ ಪ್ರತಿಪಾದಿಸುವ ವಾದವನ್ನು ವಿಮರ್ಶಿಸಿ ಅವುಗಳು ಸಹ 'ದ್ವಾ ಸುಪರ್ಣಾ ಸಯುಜಾ ಸಖಾಯಾ', ಮೊದಲಾದ ಭೇದಪರವಾಕ್ಯಗಳಂತೆ ಭೇದಬೋಧಕವೇ ಹೊರತು ಯಾವ ರೀತಿಯಲ್ಲೂ ಅಭೇದ ಬೋಧಕವಲ್ಲ ಎಂಬುದನ್ನು ಅನೇಕ ತೆರನಾಗಿ ಪ್ರತಿಪಾದಿಸಿದ್ದು ಮಧ್ವಭಾಷ್ಯದ ಅಸಾಧಾರಣ ಮಹತ್ವ.

೯) ಉಪನಿಷತ್ತಿನ ವಿವರಗಳ ನಿರ್ಣಯಕ್ಕೆ ಅವಶ್ಯವಾದ ಹಿನ್ನೆಲೆ, ಸ್ಪಷ್ಟೀಕರಣ, ಉಪಾಖ್ಯಾನಗಳ ಮರ್ಮ, ವಿರೋಧಪರಿಹಾರಕ್ಕೆ ಸಂಬಂಧಿಸಿದ ವಿವರಗಳನ್ನು ಸಾಧಾರವಾಗಿ ಒದಗಿಸಿರುವುದು ಮಧ್ವಭಾಷ್ಯದ ಮತ್ತೊಂದು ವೈಶಿಷ್ಟ್ಯ. ಉದಾಹರಣೆಗೆ ಈಶಾವಾಸ್ಯೋಪನಿಷತ್ತಿನ ಋಷಿದೇವತೆಗಳ ವಿವೇಚನೆಗೆ ಅವರು ಬ್ರಹ್ಮಾಂಡಪುರಾಣ, ಭಾಗವತಗಳಿಂದ ಒದಗಿಸಿರುವ ವಿವರಗಳ ವೈವಿಧ್ಯವನ್ನು ಗಮನಿಸಬಹುದು.

೧೦) ಮುಖ್ಯ ವಿಷಯಗಳ ಸ್ಪಷ್ಟೀಕರಣದಂತೆ ಆಟಕೀ, ಪ್ರದ್ರಾಣಕ, ಚರಕ, ಕರಕ ಮೊದಲಾದ ನೂರಾರು ಅಪೂರ್ವಪದಗಳ ನಿಖರವಾದ ಅರ್ಥವನ್ನು ಸಾಧಾರವಾಗಿಯೇ ವಿವರಿಸಿರುವುದು ಮಧ್ವಭಾಷ್ಯಗಳ ಪರಿಪೂರ್ಣತೆಗೆ ಮತ್ತೊಂದು ಕಾರಣ :

'ಉಪಲಾ ಇಷ್ಟಕಾಃ ಸ್ಥೂಲಾ ಮಟಚೀತಿ ಪ್ರಕೀರ್ತಿತಾ' ಇತಿ ಶಬ್ದನಿರ್ಣಯೇ ।
'ಆಸನ್ನಯೌವನಾ ಯೋಷಿದಾಟಕೀತ್ಯಭಿಧೀಯತೇ' ಇತಿ ಚ ।
'ಪ್ರದ್ರವನ್ನನ್ನಪಾನಾರ್ಥಂ ಪ್ರದ್ರಾಣಕ ಇತೀರಿತಃ' ಇತಿ ಚ ॥
'ಚರಕಸ್ತೀರ್ಥಸಂಚಾರೀ ವಿತ್ತಾರ್ಥೀ ಕರಕಃ ಸ್ಮೃತಃ' ।

- ಛಾಂದೋಗ್ಯೋಪನಿಷದ್ಭಾಷ್ಯ

೧೧) ಪ್ರತಿಯೊಂದು ವಿಷಯಗಳ ಬಗ್ಗೆ ತಮ್ಮ ವಿವರಣೆಯನ್ನು ಸಂಕ್ಷೇಪವಾಗಿ ನೀಡಿ, ಅದನ್ನು ವಿವರವಾಗಿ ಪ್ರಮಾಣವಾಕ್ಯಗಳಿಂದಲೇ ಸಮರ್ಥಿಸುವ ಅವರ ಶೈಲಿ ಉಪನಿಷದ್ಭಾಷ್ಯಗಳಲ್ಲೂ ವ್ಯಾಪಕವಾಗಿಯೇ ಕಂಡುಬರುವುದು.

೧೨) ಉಪನಿಷತ್ತಿನಲ್ಲೆಲ್ಲ ಬಹು ಪ್ರಧಾನವಾಗಿ ಕಂಡುಬರುವ ಪ್ರಮುಖ ತತ್ತ್ವ 'ಬ್ರಹ್ಮತತ್ತ್ವ' ; ಅನಂತರದ ಮಹತ್ವಪೂರ್ಣವಾದ ಮತ್ತೊಂದು ತತ್ತ್ವ, 'ಪ್ರಾಣತತ್ತ್ವ'; 'ಬ್ರಹ್ಮತತ್ತ್ವ'ವು ಶ್ರೀಹರಿ, ಪ್ರಾಣತತ್ತ್ವವು ಮುಖ್ಯಪ್ರಾಣ ಎಂದರೆ ಅವರ ಮಹತ್ವದ ಪ್ರತಿಪಾದನೆ ಎಂದರೆ ಉಪನಿಷತ್ತುಗಳ ಪ್ರಧಾನ ಸಂದೇಶ ಹರಿಸರ್ವೋತ್ತಮತ್ವ ಮತ್ತು ವಾಯುಜೀವೋತ್ತಮತ್ವದ ಪ್ರತಿಪಾದನೆಯೇ ಆಗಿದೆ. ಇದನ್ನು ಅವರು ಎಲ್ಲೆಡೆಗಳಲ್ಲೂ ಪ್ರತಿಪಾದಿಸಿರುವರು.

೧೩) ಉಪನಿಷತ್ತುಗಳಲ್ಲಿ ಮಧ್ಯೆ ಮಧ್ಯೆ 'ತದಪ್ಯೇಷ ಶ್ಲೋಕಃ' ಎಂಬುದಾಗಿ ಬರುವ ಉಲ್ಲೇಖಗಳ ಬಗ್ಗೆ ಇತರ ಭಾಷ್ಯಗಳು ಯಾವುದೇ ಬೆಳಕನ್ನೂ ಚೆಲ್ಲಿಲ್ಲ. ಆದರೆ ಮಧ್ವಭಾಷ್ಯಗಳು ಅವೆಲ್ಲ ಆ ಉಪನಿಷದ್ದ್ರಷ್ಟಾರಮುನಿಗಳು ಅದಕ್ಕೆ ಸಂವಾದಿಯಾಗುವಂತೆ ಅವರಿಗಿಂತ ಉತ್ತಮರಾದ ಮುನಿಗಳು ದರ್ಶನಮಾಡಿದ ವೇದಮಂತ್ರಗಳು ಎಂಬ ಅರ್ಥದ ವಿವರಣೆಯನ್ನು ನೀಡಿರುವರು:

'ಪ್ರಮಾಣಸ್ಯ ಪ್ರಮಾಣಂ ಚ ಬಲವದ್ವಿದ್ಯತೇ ಮುನೇ ।
ಬ್ರಹ್ಮದೃಷ್ಟಾನ್ ಯತೋ ಮಂತ್ರಾನ್ ಪ್ರಮಾಣಂ ಸಲಿಲೇಶ್ವರಃ ।
ಅತ್ರ ಶ್ಲೋಕಾ ಭವಂತೀತಿ ಚಕಾರ್ಯೈವ ಪೃಥಕ್ ಪೃಥಕ್॥' ಇತಿ ಗಾರುಡೇ ।
ಖಂಡಚತುಷ್ಟಯೇಽಪಿ ಪೃಥಕ್ ಪೃಥಕ್ । – ಇತಿ ಮಾಂಡೂಕೋಪನಿಷದ್ಭಾಷ್ಯೇ

೧೪) ದಶೋಪನಿಷತ್ತುಗಳಲ್ಲಿ ಐಕ್ಯಬೋಧಕವೆಂದು ತೋರುವ ಕೆಲವು ವಾಕ್ಯಗಳು ಹೀಗಿವೆ :

೧) ಈಶಾವಾಸ್ಯ – 'ಯೋಽಸಾವಸೌ ಪುರುಷಃ ಸೋಽಹಮಸ್ಮಿ' ।

೨) ಕಾಠಕೋಪನಿಷತ್ – 'ನೇಹ ನಾನಾಸ್ತಿ ಕಿಂಚನ'(೨/೧೧)

'ಮೃತ್ಯೋಃ ಸ ಮೃತ್ಯುಮಾಪ್ನೋತಿ ಯ ಇಹ ನಾನೇವ ಪಶ್ಯತಿ ॥'

೩) ಷಟ್ಪ್ರಶ್ನೋಪನಿಷತ್ –
'ಷೋಡಶಕಲಾಃ ಪುರುಷಾಯಣಾಃ ಪುರುಷಂ ಪ್ರಾಪ್ಯಾಸ್ತಂ ಗಚ್ಛಂತಿ'(೫/೩)

೪) ಅಥರ್ವಣೋಪನಿಷತ್ (೬/೭)–
'ಕರ್ಮಾಣಿ ವಿಜ್ಞಾನಮಯಶ್ಚ ಆತ್ಮಾ ಪರೇಽವ್ಯಯೇ ಸರ್ವ ಏಕೀಭವಂತೀ'
'ತಥಾ ವಿದ್ವಾನ್ ನಾಮರೂಪಾದ್ವಿಮುಕ್ತಃ ಪರಾತ್ಪರಂ ಪುರುಷಮುಪೈತಿ ದಿವ್ಯಂ ॥'
'ಸ ಹ ಯೋ ವೈ ಪರಮಂ ಬ್ರಹ್ಮ ವೇದ ಬ್ರಹ್ಮೈವ ಭವತಿ' ॥(೬/೯)

೫) ಮುಂಡಕೋಪನಿಷತ್ –
'ಪ್ರಪಂಚೋ ಯದಿ ವಿದ್ಯೇತ ನಿವರ್ತೇತ ನ ಸಂಶಯಃ ।'

'ಮಾಯಾಮಾತ್ರಮಿದಂ ದ್ವೈತಮದ್ವೈತಂ ಪರಮಾರ್ಥತಃ ॥'
'ವಿಕಲ್ಪೋ ವಿನಿವರ್ತೇತ ಕಲ್ಪಿತೋ ಯದಿ ಕೇನಚಿತ್ ।'
'ಉಪದೇಶಾದಯಂ ವಾದೋ ಜ್ಞಾತೇ ದ್ವೈತಂ ನ ವಿದ್ಯತೇ॥' (೨/,೧೦)

೬) ತೈತ್ತಿರೀಯೋಪನಿಷತ್ -
'ಸ ಯಶ್ಚಾಯಂ ಪುರುಷೇ ಯಶ್ಚಾಸಾವಾದಿತ್ಯೇ ಸ ಏಕಃ ।' (೨/೨೭)

೭) ಬೃಹದಾರಣ್ಯಕೋಪನಿಷತ್ -'ಅಹಂ ಬ್ರಹ್ಮಾಸ್ಮಿ'[೧]

---

೧. 'ಅಹಂ' ಎನ್ನುವುದು ಭಗವಂತನ ರಹಸ್ಯ ನಾಮಗಳಲ್ಲೊಂದೆಂದು ಶ್ರೀಮಧ್ವಾಚಾರ್ಯರು ಮಾಡಿದ ನಿರೂಪಣೆ 'ಅವೆಸ್ತಾ' ಮೊದಲಾದ ಇತರ ಮತೀಯಗ್ರಂಥಗಳಲ್ಲಿನ ಉಲ್ಲೇಖಗಳಿಂದಲೂ ಸ್ಫುಟಪಡುವುದು :

In the Zoroastrian Faith also this is one of the most secret names of the Lord as is shown in the following extract from Horm Uzd Yasht :

'Thus spake Zarathustra' - 'Tell them O pure Ahuramazda, the name which is thy greatest, best, fairest and which is most efficacious for prayer'.

Thus answered Ahuramazda : My first name is Ahmi. I AM .... My twentieth name is Ahmi yad Ahmi Mazadao - I am that I am' (Avest xvii, 4 and 6)

This too was also the most secret name of God among the Jews, as we learn from the Old testament. Exodus, Chapter III, verses 13 and 14:

And Moses said unto God : 'Behold, when I come unto the children of Israel and shall say unto them. 'The God of your fathers hath sent me unto you. and they shall say to me, 'What is his name'? What shall I say unto them'?

And God said unto Moses ' I AM THAT I AM; and He said 'Thus shall thou say unto the children of Israel : 'I AM' hath sent me unto you (Old testament 13-14)

Thus among the Israel also both these names were well known - God is called 'I AM' or Ahmir of Parsis, and Asmi of Madhva;

೮) ಛಾಂದೋಗ್ಯೋಪನಿಷತ್-

'ಸರ್ವಂ ಖಲ್ವಿದಂ ಬ್ರಹ್ಮ'; 'ತತ್ತ್ವಮಸಿ'

೯) ಐತರೇಯೋಪನಿಷತ್

'ಯೋಽಹಂ ಸೋಽಸೌ ಯೋಽಸೌ ಸೋಽಹಂ'

— ಈ ರೀತಿಯಾದ ಆತ್ಮೈಕ್ಯಬೋಧಕ, ವಿಶ್ವಮಿಥ್ಯಾತ್ವಬೋಧಕ, ಬ್ರಹ್ಮನಿರ್ಗುಣತ್ವಬೋಧಕ ಎಂದು ಶಂಕರಾಚಾರ್ಯರಿಂದ ಗ್ರಹಿಸಲ್ಪಟ್ಟಿರುವ ಈ ಉಪನಿಷದ್ವಾಕ್ಯಗಳೆಲ್ಲ ಮೂಲತಃ ದ್ವೈತಬೋಧಕ, ಜಗತ್ಸತ್ಯತ್ವಬೋಧಕ, ಬ್ರಹ್ಮನ ಸಗುಣತ್ವಪ್ರತಿಪಾದಕ, ಜೀವೇಶ್ವರಭೇದ ಮೊದಲಾದ ಪಂಚಭೇದಸ್ಥಾಪಕ ಎಂಬುದಾಗಿ ಶ್ರೀಮದಾನಂದತೀರ್ಥರು ತಮ್ಮ ಭಾಷ್ಯಗಳಲ್ಲಿ ವಿಪುಲಪ್ರಮಾಣಗಳನ್ನು ಉದಾಹರಿಸಿ ಪ್ರತಿಪಾದಿಸಿರುವರು.

೧೫) ಇಷ್ಟೇ ಪ್ರಧಾನವಾಗಿ ಉಪನಿಷತ್ತುಗಳ ಸ್ಥಾನಮಾನಗಳನ್ನು ವಿವೇಚಿಸುತ್ತ ಅವು ಮಂತ್ರ, ಆರಣ್ಯಕ, ಬ್ರಾಹ್ಮಣ, ಉಪನಿಷತ್ತು ಎಂಬ [೧]ಪ್ರಭೇದದ ವೈದಿಕಸಾಹಿತ್ಯದಲ್ಲಿ ಉಪನಿಷತ್ತಿನ ಸ್ಥಾನ ಅತ್ಯಂತ ಪ್ರಧಾನ ಎಂಬುದನ್ನು ಸಹ ಸಾಧಾರವಾಗಿ ನಿರೂಪಿಸಿರುವರು :

ಮಂತ್ರಾಶ್ಚೋಪನಿಷಚ್ಚೈವ ಬ್ರಾಹ್ಮಣಾದುತ್ತಮಾಸ್ತತಃ ।
ತತ್ರಾಪ್ಯುಪನಿಷಚ್ಛ್ರೇಷ್ಠಾ ಯುಕ್ತಾವಸ್ಥಾಧಿಗಮ್ಯತಃ ॥ ಇತಿ ಪ್ರಮಾಣವಿವೇಕೇ ।

– ಮಹೈತರೇಯೋಪನಿಷದ್ಭಾಷ್ಯ

'ವಿಷ್ಣುರುಕ್ತಃ ಸರ್ವವೇದೈರ್ಮಂತ್ರೇಷು ಚ ವಿಶೇಷತಃ ।
ಆರಣ್ಯಕೇ ವಿಶೇಷೇಣ ನೈವಾನ್ಯತ್ ಕಿಂಚಿದುಚ್ಯತೇ ।
ಕರ್ಮಾರ್ಥಂ ಚ ಬ್ರಾಹ್ಮಣಂ ಸ್ಯಾದಮುಖ್ಯಾರ್ಥವಿವಕ್ಷಯಾ ।
ಮುಖ್ಯತೋ ವಿಷ್ಣುರೇವೈಕೋ ಬ್ರಾಹ್ಮಣೇಷ್ವಪಿ ಕಥ್ಯತೇ ।
ಆರಣ್ಯಕೇ ಋತೇ ವಿಷ್ಣುಂ ನೈವಾನ್ಯತ್ ಕಿಂಚಿದುಚ್ಯತೇ ।
ಸೂತ್ರಾತ್ಮಾ ತೂಚ್ಯತೇ ವಿಷ್ಣೋಸ್ತದ್ವಿಶಿಷ್ಟತ್ವವಿತ್ತಯೇ ।
ಕುತ್ರಚಿತ್ ತದುಪಾಸ್ತಿಶ್ಚ ತಸ್ಯಾಧ್ಯರ್ಥತನುತ್ವತಃ ।

---

and also 'I AM THAT I AM' of the Parsis and Soham Asmi of Madhva.

- Rai Bahadur Sris Chandra Vidyarnava, **The Sacred Books of Hindus,** I Volume, III Edition, 1909, Introduction ii,iii)

೧. ಬ್ರಾಹ್ಮಣೋಪನಿಷನ್ಮಂತ್ರಭೇದಾ ವೇದಗಿರೋಽಖಿಲಾಃ ।
ಯತ್ಕ್ರೀಡಾಭೂಮಯಸ್ತಸ್ಮೈ ಪರಸ್ಮೈ ಬ್ರಹ್ಮಣೇ ನಮಃ ॥ – ಇತಿ ಕರ್ಮನಿರ್ಣಯಟೀಕಾ

ತಸ್ಮಿನ್ ವಿಷ್ಣೋರುಪಾಸ್ತ್ಯರ್ಥಂ ನಾನ್ಯಥಾ ಕಿಂಚಿದುಚ್ಯತೇ' ಇತಿ ಬ್ರಹ್ಮಾಂಡೇ।

– ಛಾಂದೋಗ್ಯೋಪನಿಷದ್ಭಾಷ್ಯ

'ನ ವಿನೋಪನಿಷದ್ಭಿಃ ಸ ಜ್ಞೇಯಃ ಕೇನಾಪಿ ಕಸ್ಯಚಿತ್।
ಅತ ಔಪನಿಷತ್ಕಂ ತಂ ಪ್ರಾಹುರ್ವಿಷ್ಣುಂ ಸನಾತನಮ್' ಇತಿ ಚ।

– ಇತಿ ಬೃಹದಾರಣ್ಯಕೋಪನಿಷದ್ಭಾಷ್ಯೇ

ಈ ದಶೋಪನಿಷತ್ತುಗಳಲ್ಲಿ ಐತರೇಯೋಪನಿಷತ್ತು ಶ್ರೀಮದಾಚಾರ್ಯರಿಗೆ ವಿಶೇಷಪ್ರಿಯವಾದ ಉಪನಿಷತ್ತು; ಈ ವಿಚಾರ ಸುಮಧ್ವವಿಜಯದಲ್ಲಿ ಸ್ಪಷ್ಟವಾಗಿ ಬಂದಿದೆ :

ಸಾಕ್ಷಾದಥೋಪನಿಷದೋ ವಿಭುರೈತರೇಯ್ಯಾಃ
ಪಾಠಚ್ಛಲೇನ ವಿಜನೇಽಥ ರಸಾನ್ ಬ್ರುವಾಣಃ।
ಅಧ್ಯಾಪಕಾಯ ವಿತತಾರ ವಿಮೋಕ್ಷಬೀಜಂ
ಗೋವಿಂದಭಕ್ತಿಮುಚಿತಾಂ ಗುರುದಕ್ಷಿಣಾಂ ಸಃ॥ (೩/೫೫)

ಐತರೇಯಮಥ ಕಿಂಚನ ಸೂಕ್ತಂ ಸೂಚಯನ್ ಸದಸಿ ತತ್ರ ಗರಿಷ್ಠಃ।
ಶ್ರೋತುಮಿಚ್ಛತಿ ಸಭಾ ಭಗವದ್ಭ್ಯಃ ಸೂಕ್ತಭಾವಮಿತಿ ತಾವದುವಾಚ॥ (೬/೧)

ಸದ್ಗುರೋರ್ನ ವಿರಹಂ ಸಹಮಾನಃ ಸತ್ಯತೀರ್ಥಯತಿರನ್ವಗಮುತ್ತಮ್।
ಯಸ್ತ್ರಿವಾರಮಿತರಾಸುತಶಾಖಾಸ್ವರ್ಥಮಗ್ರ್ಯಮಶ್ರುಣೋತ್ ಪುರುಸಂಖ್ಯಾತ್॥ (೬/೫೦)

ಅಂಭೋಧೇಸ್ತ್ವರಿತತರೋರ್ಮಿಪಾಣಿಮೃಷ್ಟೇ ಸ್ವಚ್ಛೇಽಸೌ ವಿಕಟತಟಾಸನೇ ನಿಷಣ್ಣಃ।
ವ್ಯಾಚಖ್ಯಾವತಿಚಿರಮೈತರೇಯಶಾಖಾಸೂಕ್ತಾನಿ ಪ್ರಭುರತಿಸುಂದರಪ್ರಕಾರಮ್॥ (೧೬/೧೬)

ನಾಕೇಂದ್ರಾಸ್ತಮವನಿಭಾಗಮಾವಸಂತಂ ಸುಶ್ಲೋಕೈರಪಿ ಭುವನಾನಿ ಭೂಷಯಂತಮ್।
ನೇಮುಃ ಖಾದುಪನಿಷದಂ ತದೈತರೇಯೀಂ ವ್ಯಾಖ್ಯಾಂತಂ ವಿವಿಧವಿಶಿಷ್ಟಶಿಷ್ಯಮಧ್ಯೇ॥

(೧೬/೫೪)

ಆದ್ದರಿಂದಲೇ ಅವರ ಐತರೇಯೋಪನಿಷದ್ಭಾಷ್ಯವು ಅತ್ಯಂತ ಗಹನಾರ್ಥಗಳನ್ನು ತಿಳಿಸಿಕೊಡುವ ಮೂಲಕ ಉಪನಿಷತ್ಪ್ರಪಂಚದ ರಹಸ್ಯ-ಸ್ವಾರಸ್ಯಗಳನ್ನೆಲ್ಲ ಅನಾವರಣಗೊಳಿಸುತ್ತದೆ. ಉಪನಿಷತ್ತುಗಳಲ್ಲೆಲ್ಲ ತುಂಬಾ ಗಹನ ಎಂಬುದು ಐತರೇಯದ ಒಂದು ಮುಖ. ಅದರ ವ್ಯಾಪ್ತಿಯ ಬಗ್ಗೆ ಖಚಿತತೆಯನ್ನು ಆ ಹಿಂದಿನ ಭಾಷ್ಯಕಾರರು ಸಹ ಸ್ಪಷ್ಟಚಿತ್ರ ಹೊಂದಿರಲಿಲ್ಲ ಎಂಬುದು ಇದರ ಗಹನತೆಗೆ ಮತ್ತೊಂದು ಕಾರಣ. ಈ ಎರಡನ್ನೂ ಯಶಸ್ವಿಯಾಗಿ ಪರಿಹರಿಸಿದ್ದು ಮಧ್ವಭಾಷ್ಯದ ವೈಶಿಷ್ಟ್ಯ. ಭಗವಂತನ ಸರ್ವಶಬ್ದವಾಚ್ಯತ್ವ, ಬೃಹತೀಸಹಸ್ರದ ಹಿರಿಮೆ, ವಿಷ್ಣುನಾಮದ ವೈಭವ ಮೊದಲಾದ ಅನೇಕ ಪ್ರಧಾನಪ್ರಮೇಯಗಳನ್ನು ಭಾಷ್ಯವು ವಿಶಿಷ್ಟರೀತಿಯಲ್ಲಿ ವಿಶ್ಲೇಷಿಸಿದೆ.

ದಶೋಪನಿಷದ್ಭಾಷ್ಯಗಳ ಸಾರ

ದಶೋಪನಿಷದೋ ದೇವೀರ್ದೇವಾ ಇವ ಸಮೀಪ್ಸಿತಾಃ ।
ಯುಕ್ತಾಃ ಪ್ರಸಾದಯಂತ್ಯರ್ಥಾ ಏಷು ಭಾಷ್ಯಾಲಯೇಷ್ವಲಮ್ ॥ ಮ.ವಿ.೧೫/೭೪

೧. ಈಶಾವಾಸ್ಯೋಪನಿಷದ್ಭಾಷ್ಯ

'ಈಶಾವಾಸ್ಯಂ' ಎಂಬ ಇದರ ಮೊದಲ ಪದದಿಂದಾಗಿ 'ಈಶಾವಾಸ್ಯೋಪನಿಷತ್', 'ಈಶೋಪನಿಷತ್' ಎಂಬುದಾಗಿಯೇ ಹೆಚ್ಚು ಪ್ರಸಿದ್ಧಿಯಲ್ಲಿರುವ ಈ ಉಪನಿಷತ್ತು ಶುಕ್ಲಯಜುರ್ವೇದದ ವಾಜಸನೇಯಸಂಹಿತೆಯ ೧೪ನೇ ಅಧ್ಯಾಯವಾಗಿದ್ದು, ಸಂಹಿತೆಯ ಭಾಗವಾಗಿ ಮಂತ್ರಾತ್ಮಕವಾಗಿದೆ. ಯಜ್ಞನಾಮಕ ಶ್ರೀಹರಿಯು ಇದರ ಪ್ರತಿಪಾದ್ಯದೇವತೆ, ಸ್ವಾಯಂಭುವಮನು ಇದರ ಋಷಿ. ದೇವತೆ ಯಜ್ಞನಾಮಕನಾಗಿರುವುದರಿಂದಲೂ, ಉಪನಿಷತ್ತು ಮಂತ್ರಾತ್ಮಕವಾಗಿರುವುದರಿಂದಲೂ, ಯಾಜ್ಞೀಯೋಪನಿಷತ್ತು, ಯಾಜ್ಞೀಯ-ಮಂತ್ರೋಪನಿಷತ್ ಎಂಬುದಾಗಿಯೂ ಇದು ಪ್ರಸಿದ್ಧ.

ಪ್ರಪ್ರಥಮಬಾರಿಗೆ ಈಶಾವಾಸ್ಯ ಉಪನಿಷತ್ತಿನ ಹಿನ್ನೆಲೆಯನ್ನು ನಿರೂಪಿಸಿದ ಹಿರಿಮೆ ಶ್ರೀಮದಾಚಾರ್ಯರದು. ಸ್ವಾಯಂಭುವ ಮನು ತಪೋನಿರತನಾಗಿದ್ದಾಗ ಅವನನ್ನು ತಿನ್ನಲೆಂದು ರಾಕ್ಷಸರ ಗುಂಪೊಂದು ಧಾವಿಸಿತು. ಆ ಗುಂಪಿಗೆ ಇತರರಿಂದ ಸಾವಿಲ್ಲದ, ಅವರಿಂದ ಇತರರೆಲ್ಲರೂ ಸಾಯುವಂತಹ ವಿಚಿತ್ರವಾದ ವರವೊಂದು ಶಿವನಿಂದ ಲಭಿಸಿತ್ತು. ಮನುವು ಉಪನಿಷನ್ಮಂತ್ರಗಳಿಂದ ಯಜ್ಞರೂಪನಾದ ಶ್ರೀಹರಿಯನ್ನು ಸ್ತುತಿಸುತ್ತಿದ್ದಾಗ ಅದಕ್ಕೆ ವಿಘ್ನವಾಗಿ ಬಂದ ಆ ರಾಕ್ಷಸಸಮುದಾಯವನ್ನು ಯಜ್ಞರೂಪದ ಶ್ರೀಹರಿಯು ಕೂಡಲೆ ಸಂಹರಿಸಿ ಸ್ವಾಯಂಭುವ ಮನುವನ್ನು ಉದ್ಧರಿಸಿದ. ಈ ವಿವರವನ್ನು ಬ್ರಹ್ಮಾಂಡಪುರಾಣದ ಆಧಾರದಿಂದ ತಿಳಿಸಿರುವರು :

ಸ್ವಾಯಂಭುವೋ ಮನುರೇತೈರ್ಮಂತ್ರೈರ್ಭಗವಂತಮಾಕೂತಿಸೂನುಂ
ಯಜ್ಞನಾಮಾನಂ ವಿಷ್ಣುಂ ತುಷ್ಟಾವ —

''ಸ್ವಾಯಂಭುವಃ ಸ್ವದೌಹಿತ್ರಂ ವಿಷ್ಣುಂ ಯಜ್ಞಾಭಿಧಂ ಮನುಃ ।
ಈಶಾವಾಸ್ಯಾದಿಭಿರ್ಮಂತ್ರೈಸ್ತುಷ್ಟಾವಾವಹಿತಾತ್ಮನಾ ॥
ರಕ್ಷೋಭಿರುಗ್ರೈಃ ಸಂಪ್ರಾಪ್ತಃ ಖಾದಿತುಂ ಮೋಚಿತಸ್ತದಾ ।
ಸ್ತೋತ್ರಂ ಶ್ರುತ್ವೈವ ಯಜ್ಞೇನ ತಾನ್ ಹತ್ವಾವಧ್ಯತಾಂ ಗತಾನ್ ॥
ಪ್ರಾದಾದ್ಧಿ ಭಗವಾಂಸ್ತೇಷಾಮವಧ್ಯತ್ವಂ ಹರಃ ಪ್ರಭುಃ ।
ತೈರ್ವಧ್ಯತ್ವಂ ತಥಾಽನ್ಯೇಷಾಮತಃ ಕೋಽನ್ಯೋ ಹರೇಃ ಪ್ರಭುಃ ॥'

ಇತಿ ಬ್ರಹ್ಮಾಂಡೇ ।

ಈ ವಿವರಗಳಿಗೆ ಸಂವಾದಿಯಾಗಿ ಶ್ರೀಮದ್ಭಾಗವತವನ್ನೂ ಉಲ್ಲೇಖಿಸಿರುವರು:

ಭಾಗವತೇ ಚಾಯಮರ್ಥ ಏವ ಉಕ್ತಃ।

ಅದರಂತೆ ಭಾಗವತ ಅಷ್ಟಮಸ್ಕಂಧದ ಮೊದಲ ಅಧ್ಯಾಯದಲ್ಲಿ ಸಮಗ್ರ ಉಪನಿಷತ್ತಿನ ಅರ್ಥರೂಪವಾದ ಶ್ಲೋಕಗಳನ್ನು ಕಾಣಬಹುದು. ಹೀಗೆ ಉಪನಿಷತ್ತಿನ ಹಿನ್ನೆಲೆಯ ಸ್ಪಷ್ಟಚಿತ್ರವನ್ನು ನೀಡುವ ಮೂಲಕ ಅದರ ಮುಖ್ಯಭಾವವನ್ನು ಗ್ರಹಿಸಲು ಅವರು ಮಾಡಿರುವ ಉಪಕಾರ ಅಪಾರ.

''ಸಕಲ ಜಗತ್ತೂ ಭಗವದಧೀನ; ಭಗವಂತನು ಸ್ವತಂತ್ರ, ಸರ್ವಜ್ಞ, ಸರ್ವಶಕ್ತ ಪರಮಪವಿತ್ರ, ಪರಿಪೂರ್ಣ, ಸರ್ವನಿಯಾಮಕ; ವಾಯುದೇವರ ಅಂತರ್ಯಾಮಿಯೂ, ಸರ್ವರ ಅಂತರ್ಯಾಮಿಯಾಗಿಯೂ ಸದಾ ಇರುವವನು. ಶೋಕಾದಿಗಳಾಗಲಿ, ಪ್ರಾಕೃತದೇಹವಾಗಲಿ ಎಂದೂ ಅವನಿಗೆ ಇಲ್ಲ. ಅವನು ನೀಡಿದ್ದನ್ನು ಸ್ವೀಕರಿಸಿ ಸಂತೃಪ್ತಿಯಿಂದ ಬದುಕಬೇಕು. ಅನ್ಯರನ್ನು ಎಂದೂ ಏನನ್ನೂ ಬೇಡಕೂಡದು; ತನ್ನ ಪಾಲಿಗೆ ವಿಹಿತವಾದ ಕರ್ತವ್ಯಕರ್ಮಗಳನ್ನು ಪ್ರತಿಫಲಾಪೇಕ್ಷೆಯನ್ನು ತೊರೆದು ಭಗವತ್ಪ್ರೀತ್ಯರ್ಥವಾಗಿ ಜೀವನಪೂರ್ತಿ ಆಚರಿಸಲೇಬೇಕು. ತತ್ತ್ವಜ್ಞಾನವನ್ನು ಆದರಿಸುವಂತೆ ಮಿಥ್ಯಾಜ್ಞಾನವನ್ನು ತಿರಸ್ಕರಿಸಲೂ ಬೇಕು. ಭಗವಂತನನ್ನು ಕೇವಲ ಸೃಷ್ಟಿಕರ್ತನೆಂದು ಮಾತ್ರವಲ್ಲದೆ ಸಂಹಾರಾದಿ ಅಖಿಲಕ್ಕೂ ಕಾರಣ ಎಂಬುದಾಗಿ ಆರಾಧಿಸಬೇಕು. ಮಿಥ್ಯಾಜ್ಞಾನವನ್ನು ನಿಂದಿಸದಿದ್ದಲ್ಲಿ, ಮಿಥ್ಯಾಜ್ಞಾನಿಗಳಾಗುವ ದುರ್ಗತಿಗಿಂತಲೂ ಹೆಚ್ಚಿನ ದುರ್ಗತಿಯಾಗುವುದು; ಅದರಂತೆ ಭಗವಂತನನ್ನು ಸೃಷ್ಟಿಕರ್ತ ಎಂದು ಮಾತ್ರ ತಿಳಿಯುವುದು, ಅವನು ಸೃಷ್ಟಿಕರ್ತನೂ ಅಲ್ಲ ಎಂದು ತಿಳಿಯುವುದಕ್ಕಿಂತಲೂ ಅಪಾಯಕರ. ಅಂತಹ ಭಗವಂತನನ್ನು ಅವನ ದಿವ್ಯರೂಪವನ್ನು ತೋರಿಸಲು ಸನ್ಮಾರ್ಗದಲ್ಲಿ ನಡೆಸಿ ಮೋಕ್ಷಕ್ಕೆ ಕರೆದೊಯ್ಯಲು ಉದ್ಧರಿಸಲು ಸದಾ ಪ್ರಾರ್ಥಿಸಿಕೊಳ್ಳುತ್ತಿರಬೇಕು. ಅವನಿಗೆ ಭಕ್ತಿಜ್ಞಾನಗಳಿಂದ ಭರಿತವಾದ ನಮಸ್ಕಾರದ ಹೊರತು ಬೇರೇನನ್ನೂ ನೀಡುವ ಸಾಮರ್ಥ್ಯ ನಮ್ಮಲ್ಲಿಲ್ಲ ಎಂಬ ಎಚ್ಚರ ಸದಾ ಇರಬೇಕು'' ಇದು ಮಧ್ವಭಾಷ್ಯಾನುಸಾರಿಯಾಗಿ ಈಶಾವಾಸ್ಯೋಪನಿಷತ್ತಿನ ಸಾರ.

ಇದರಲ್ಲಿನ 'ಯೋಽಸಾವಸೌ ಪುರುಷಃ ಸೋಽಹಮಸ್ಮಿ' ಎಂಬ ಅಭೇದ ಪರವೆಂದು ತೋರುವ ವಾಕ್ಯಕ್ಕೆ ಆಚಾರ್ಯರು 'ಪ್ರಾಣನಲ್ಲಿರುವ ಪೂರ್ಣನಾದ ಪರಮಾತ್ಮನೇ ಸರ್ವಜೀವರಿಗೂ ಅಹೇಯನು, ಅವನು ಸದಾ ಇರುವವನು' ಎಂಬುದಾಗಿ ಅರ್ಥವನ್ನು ತಿಳಿಸಿರುವರು. ಎಂದರೆ ಇಲ್ಲಿಯ 'ಅಹಂ', 'ಅಸ್ಮಿ' ಎಂಬ ಪದಗಳು ಭಗವಂತನ ಹೆಸರುಗಳಾಗಿರುವವೇ ಹೊರತು ಅಭೇದ ಬೋಧಕವಾಗಿಲ್ಲ ಎಂದರ್ಥ. ಇದನ್ನು

'..... .... ಅಹಂ ಚಾಸಾವಹೇಯತಃ।

ಅಸ್ಮಿ ನಿತ್ಯಾಸ್ತಿತಾಮಾನಾತ್ ಸರ್ವಜೀವೇಷು ಸಂಸ್ಥಿತಃ ।
ಸ್ವಯಂ ತು ಸರ್ವಜೀವೇಭ್ಯೋ ವ್ಯತಿರಿಕ್ತಃ ಪರೋ ಹರಿಃ ॥'

- ಎಂಬುದಾಗಿ ಬ್ರಹ್ಮಾಂಡಪುರಾಣದ ಆಧಾರವನ್ನಿತ್ತು ಸಮರ್ಥಿಸಿರುವರು.

ಇದರಲ್ಲಿ ಬರುವ –

"ತದ್ದತ್ತೇನೈವ ಭುಂಜೀಥಾ ಅತೋ ನಾನ್ಯಂ ಪ್ರಯಾಚಯೇತ್ ॥" ಇತಿ ಬ್ರಾಹ್ಮೇ ।

"ಅಜ್ಞಸ್ಯ ಕರ್ಮ ಲಿಪ್ಯೇತ ಕೃಷ್ಣೋಪಾಸ್ತಿಮಕುರ್ವತಃ ।
ಜ್ಞಾನಿನೋಽಪಿ ಯತೋ ಹ್ರಾಸ ಆನಂದಸ್ಯ ಭವೇದ್ಧ್ರುವಮ್ ।
ಅತೋಽಲೇಪೇಽಪಿ ಲೇಪಃ ಸ್ಯಾದತಃ ಕಾರ್ಯೈವ ಸಾ ಸದಾ ॥' ಇತಿ ನಾರದೀಯೇ ॥

ಮೊದಲಾದ ವಾಕ್ಯಗಳ ತಾತ್ತ್ವಿಕಮಹತ್ವ ಅತ್ಯಂತ ಅಪೂರ್ವವಾದುದು.

ಬೃಹದಾರಣ್ಯೋಪನಿಷದ್ಭಾಷ್ಯದಲ್ಲೂ ಸಹ ಈ ಉಪನಿಷನ್ಮಂತ್ರಗಳಿಗೆ ವ್ಯಾಖ್ಯಾನ ರೂಪವಾದ ಅನೇಕ ವಿವರಗಳನ್ನು ನೀಡಿರುವರು. ಅವುಗಳೊಂದಿಗೆ ಇದನ್ನು ಅಧ್ಯಯನ ಮಾಡಿದಲ್ಲಿ ಉಪನಿಷತ್ತಿನ ವಿಶೇಷಾರ್ಥ ಮನವರಿಕೆಯಾಗಲು ಸಾಧ್ಯ.

ಈಶಾವಾಸ್ಯೋಪನಿಷತ್ತಿನಲ್ಲಿ ಉದಾಹರಿಸಲ್ಪಟ್ಟಿರುವ ಗ್ರಂಥಗಳ ಹೆಸರು ಹೀಗಿವೆ.

ಕೌರ್ಮ	ತತ್ತ್ವಸಂಹಿತಾ	ನಾರದೀಯ
ಪಿಪ್ಪಲಾದ ಶಾಖಾ	ಬ್ರಹ್ಮತರ್ಕಃ	ಬ್ರಹ್ಮಾಂಡ
ಬ್ರಾಹ್ಮ	ಭಾಗವತ	ರಾಮಸಂಹಿತಾ
ವಾಮನ	ಸೌಕರಾಯಣಶ್ರುತಿ	ವಾರಾಹ
ಸ್ಕಾಂದ	ಅನಿರ್ದಿಷ್ಟ ಆಕರಗಳು (೧೨)	

೨. ತಲವಕಾರೋಪನಿಷದ್ಭಾಷ್ಯ

ಸಾಮವೇದದ ತಲವಕಾರಬ್ರಾಹ್ಮಣಕ್ಕೆ ಸೇರಿದ್ದು ಕೇನೋಪನಿಷತ್ತು; ತಲವಕಾರ-ಬ್ರಾಹ್ಮಣಕ್ಕೆ ಸೇರಿದ್ದರಿಂದ 'ತಲವಕಾರೋಪನಿಷತ್' ಎಂಬುದಾಗಿಯೂ, 'ಕೇನೇಷಿತಂ ಪತತಿ ಪ್ರೇಷಿತಂ ಮನಃ' ಎಂಬ ಅವರ ಮೊದಲ ಪದದಿಂದಾಗಿ 'ಕೇನೋಪನಿಷತ್' ಎಂಬುದಾಗಿಯೂ ಪ್ರಸಿದ್ಧ. ಇದಕ್ಕೆ ಬ್ರಹ್ಮರುದ್ರರು ಋಷಿಗಳಾಗಿದ್ದು, ಮಹಾವಿಷ್ಣುವು ದೇವತೆಯಾಗಿರುವನು. ಎಂದರೆ ತ್ರಿಮೂರ್ತಿಗಳ ವ್ಯಾಪಾರವೂ ಇದರಲ್ಲಿದ್ದು, ಇದು ಬ್ರಹ್ಮನು ಹರನಿಗೆ ಹೇಳಿದ ಹರಿಮಹಿಮೆಯಾಗಿದೆ. ವಿಷ್ಣುಪಾರಮ್ಯ ಇದರ ಮಹಾ-ತಾತ್ಪರ್ಯ.

ಪ್ರಾರಂಭದಲ್ಲಿ ಈ ಉಪನಿಷತ್ತಿನ ದರ್ಶನದ ಹಿನ್ನೆಲೆಯನ್ನು ಸಮಗ್ರವಾಗಿ ನಿರೂಪಿಸಿರುವರು :

ವೈಜಯಂತೇ ಸಮಾಸೀನಮೇಕಾಂತೇ ಚತುರಾನನಮ್ ।
ವಿಷ್ಣೋರ್ವಿವಿದಿಷುಸ್ತತ್ತ್ವಂ ಪರ್ಯಪೃಚ್ಛತ್ ಸದಾಶಿವಃ ॥
ಯದಿದಂ ಪುರುಷಾವಶ್ಯಂ ತತ್ರ ತತ್ರ ಪತೇನ್ಮನಃ ।
ಕೇನ ತತ್ಪ್ರೇರಿತಂ ಯಾತಿ ಪ್ರಾಣಃ ಸರ್ವೋತ್ತಮಸ್ತಥಾ ॥
ಚಕ್ಷುಃ ಶ್ರೋತ್ರಂ ತಥಾ ವಾಚಂ ಕೋ ದೇವೋ ವಿನಿಯೋಜಯೇತ್ ।
ಇತಿ ಪೃಷ್ಟಸ್ತದಾ ಬ್ರಹ್ಮಾ ಪ್ರಾಹ ದೇವಮುಮಾಪತಿಮ್ ॥
ಧ್ಯಾತ್ವಾ ನಾರಾಯಣಂ ದೇವಂ ಸರ್ವಾಧಾರಮನೂಪಮಮ್ ।
ಸರ್ವಜ್ಞಂ ಸರ್ವಶಕ್ತಿಂ ಚ ಸರ್ವದೋಷವಿವರ್ಜಿತಮ್ ।
ಯಃ ಪ್ರಾಣಸ್ಯ ಪ್ರಣೇತಾ ಚ ಚಕ್ಷುರಾದೇಶ್ಚ ಸರ್ವಶಃ ।
ಅಗಮ್ಯಃ ಸರ್ವದೇವೈಶ್ಚ ಪರಿಪೂರ್ಣತ್ವಹೇತುತಃ ॥
ಪ್ರಾಣಾದೀನಾಂ ಪ್ರಣೇತಾ ಚ ಸರ್ವವೇತ್ತಾ ಚ ಸರ್ವಶಃ ।
ಸರ್ವೋತ್ತಮಶ್ಚ ಸರ್ವತ್ರ ಸ ವಿಷ್ಣುರಿತಿ ಧಾರ್ಯತಾಮ್ ॥

''ವೈಜಯಂತವೆಂಬ ಮೇರುಪರ್ವತದ ಮೇಲಿನ ತಮ್ಮ ಭವನದಲ್ಲಿದ್ದ ಬ್ರಹ್ಮದೇವರ ಬಳಿಗೆ ರುದ್ರದೇವರು ಬಂದು 'ಮನಸ್ಸು, ಮುಖ್ಯಪ್ರಾಣ, ಕಣ್ಣು, ಕಿವಿ, ಮಾತು ಇವುಗಳಿಗೆಲ್ಲ ಮುಖ್ಯ ಪ್ರೇರಕರಾರು? ' ಎಂದು ಪ್ರಶ್ನಿಸುತ್ತಾರೆ. ಅದಕ್ಕೆ ಉತ್ತರವಾಗಿ ಬ್ರಹ್ಮದೇವರು 'ಸರ್ವಾಧಾರನೂ, ಅನುಪಮನೂ, ಸರ್ವಜ್ಞನೂ, ಸರ್ವಶಕ್ತನೂ, ಸಕಲದೋಷದೂರನೂ, ಸಕಲದೇವತೆಗಳಿಂದಲೂ ಅಗಮ್ಯನೂ ಆದ ವಿಷ್ಣುವೇ ಅಂತಹ ಮುಖ್ಯ ಪ್ರೇರಕ' ಎಂಬುದಾಗಿ ಉಪದೇಶಿಸುತ್ತಾರೆ. ಪರಮಾತ್ಮನನ್ನು ಎಷ್ಟು ಚೆನ್ನಾಗಿ ತಿಳಿದುಕೊಂಡರೂ, ತಿಳಿದದ್ದು ಮಾತ್ರ ಸ್ವಲ್ಪವೇ ಆಗಿರುತ್ತದೆ. ಬ್ರಹ್ಮನನ್ನು ಪೂರ್ಣ ತಿಳಿದಿರುವೆನೆಂದು ತಿಳಿದವನು ಆತನ ಬಗ್ಗೆ ಏನನ್ನೂ ತಿಳಿದಿರುವುದಿಲ್ಲ, ಅವನು ಪೂರ್ಣನಾದ್ದರಿಂದ ಪೂರ್ಣವಾಗಿ ತಿಳಿಯಲಾರೆನೆಂದು ತಿಳಿದವನು ಮಾತ್ರವೇ ಅವನ ಬಗ್ಗೆ ಸರಿಯಾಗಿ ತಿಳಿದವನಾಗಿರುವನು. ಅಂತಹ ಪರಮಾತ್ಮನನ್ನು ತಮ್ಮ ಯೋಗ್ಯತೆಗನುಗುಣವಾಗಿ ತಿಳಿದವರಿಗೆ ಮೋಕ್ಷವು ಲಭಿಸುವುದು; ಮಂಗಲವಾಗುವುದು; ತಿಳಿಯದವನಿಗೆ ಮಾತ್ರ ಭಾರಿ ನಷ್ಟ ಉಂಟು; ಪ್ರತಿಯೊಂದು ಪ್ರಸಕ್ತಿಯಲ್ಲಿಯೂ ಪರಮಾತ್ಮನನ್ನು ತಿಳಿದವನು ಈ ದೇಹವನ್ನು ತೊರೆದು ಮುಕ್ತನಾಗುವನು.

ಹೀಗೆ ಬ್ರಹ್ಮತತ್ತ್ವವು ಸಾಕಲ್ಯೇನ ಅಜ್ಞೇಯ ಎಂಬುದಾಗಿ ನಿರೂಪಿಸಿ ಬ್ರಹ್ಮದೇವರು ಅದನ್ನು ವಿವರಿಸಲು ಒಂದು ಆಖ್ಯಾಯಿಕೆಯನ್ನು ಹೇಳುವರು. ಒಮ್ಮೆ ದೇವತೆಗಳು ದೇವರ ದಯೆಯಿಂದ ದೈತ್ಯರನ್ನು ಗೆದ್ದರು; ಆದರೆ ಹಾಗೆ ಗೆದ್ದದ್ದು ತಮ್ಮ ಸ್ವಂತ ಶಕ್ತಿಯಿಂದ ಎಂದು ಭ್ರಮಿಸಿ ಅಹಂಕಾರಪಟ್ಟರು. ಅವರಿಗೆ ತತ್ತ್ವ ತಿಳಿಸಿ ಅನುಗ್ರಹಿಸಲೆಂದು ಶ್ರೀಹರಿಯು ಅಲ್ಲಿಗೆ ಯಕ್ಷರೂಪದಿಂದ ಆಗಮಿಸಿದನು. ಅವನನ್ನು ತಿಳಿಯಲು ಇತರ

ದೇವತೆಗಳಿಂದ ಕಳುಹಿಸಲ್ಪಟ್ಟ ಅಗ್ನಿ, ನಾಸಿಕ್ಯವಾಯುಗಳು ವಿಫಲರಾಗಿ ಹಿಂದಿರುಗುವರು. ಇಂದ್ರದೇವರನ್ನು ತಿಳಿದು ಬರಲು ಕಳಿಸಿದಾಗ, ಯಕ್ಷನು ಮಾಯವಾಗಿ ಪಾರ್ವತಿ ಕಾಣಿಸಿಕೊಂಡು, 'ಯಕ್ಷನು ಬೇರಾರು ಅಲ್ಲ, ನಿಮಗೆಲ್ಲ ಜಯ ತಂದುಕೊಟ್ಟ ಪರಮಾತ್ಮ' ಎಂದು ಸಾರುವರು. ಪರಮಾತ್ಮನು ಕಪಿಲನಾಮಕನಾಗಿ ಸಕಲವನ್ನೂ ಬೆಳಗುವನು, ಕ್ಷೀರಸಾಗರದಲ್ಲಿ ಪವಡಿಸಿರುವವನು. ಇಂತಹ ಪರಮಾತ್ಮನೇ ಮನಸ್ಸು ಮೊದಲಾದ ಸಕಲಕ್ಕೂ ಮುಖ್ಯಪ್ರೇರಕ. ಅವನು ಸರ್ವತ್ರ ವ್ಯಾಪ್ತನಾದ್ದರಿಂದಲೂ ಸರ್ವರಿಂದ ಸೇವ್ಯನಾದ್ದರಿಂದಲೂ 'ತದ್ವನಂ' ಎಂದು ಕರೆಸುವನು. ಹೀಗೆ 'ತದ್ವನಂ' ಎಂದು ಅವನನ್ನು ಉಪಾಸನೆ ಮಾಡುವವನು, ಸರ್ವರಿಗೂ ಪ್ರಿಯನಾಗುವನು. ಇಂತಹ ಬ್ರಹ್ಮವಿದ್ಯೆಯನ್ನು ತಿಳಿಯಲು ತಪಸ್ಸು, ದಮ, (ಇಂದ್ರಿಯನಿಗ್ರಹ) ಮತ್ತು ಸ್ವವಿಹಿತಕರ್ಮಾನುಷ್ಠಾನ ಈ ಮೂರೂ ಅತ್ಯವಶ್ಯ. ಅಂತಹವನಿಗೆ ಮಾತ್ರ ಈ ವಿದ್ಯೆ ಸಿದ್ಧಿಸುತ್ತದೆ. ವೇದಗಳು, ಶಿಕ್ಷಾ ಮೊದಲಾದ ವೇದಾಂಗಗಳು ಮತ್ತು ಬ್ರಹ್ಮ ಮೀಮಾಂಸಾ ಶಾಸ್ತ್ರಗಳು ಇವುಗಳು ಬ್ರಹ್ಮವಿದ್ಯೆಯ ಆಕರ ಸ್ಥಾನಗಳು. ಈ ರೀತಿ ಸರಿಯಾಗಿ ಬ್ರಹ್ಮವಿದ್ಯೆ ಬಲ್ಲವನು ಸಕಲತಾಪಗಳನ್ನೂ ಪರಿಹರಿಸಿಕೊಂಡು ಭಗವಂತನಾದ ಮಹಾವಿಷ್ಣುವಿನ ಬಳಿ ಆಶ್ರಯಪಡೆಯುವನು''.

ಇದು ಮಧ್ವಭಾಷ್ಯಾನುಸಾರ ತಲವಕಾರೋಪನಿಷತ್ತಿನ ಸಾರ.

ಮಹಾಭಾರತದ ಶಾಂತಿಪರ್ವದ ಮೋಕ್ಷಧರ್ಮದಲ್ಲಿ ಶಿವನಿಗೆ ಬ್ರಹ್ಮ ದೇವರು ಇದೇ ರೀತಿ ತತ್ತ್ವೋಪದೇಶ ಮಾಡುವ ಒಂದು ಅಧ್ಯಾಯವಿದ್ದು, ಅದು ಈ ಉಪನಿಷತ್ತಿನ ಸಾರದಂತಿದೆ; ಪ್ರಸಂಗವೂ ಇದೇ ತೆರನಾಗಿದೆ. ಶ್ರೀಮದಾಚಾರ್ಯರು ಮಹಾಭಾರತ-ತಾತ್ಪರ್ಯನಿರ್ಣಯದಲ್ಲಿ 'ಆಹ ಬ್ರಹ್ಮೈತಮೇವಾರ್ಥಂ ಮಹಾದೇವಾಯ ಪೃಚ್ಛತೇ' ಎಂಬುದಾಗಿ ತಿಳಿಸಿ ಈ ಕೆಳಗಿನ ಶ್ಲೋಕವನ್ನು ಉಲ್ಲೇಖಿಸಿರುವರು:

ಅಹಂ ಬ್ರಹ್ಮಾ ಚಾದ್ಯ ಈಶಃ ಪ್ರಜಾನಾಂ ತಸ್ಮಾತ್ ಪ್ರಸೂತಸ್ತ್ವಂ ಚ ಮತ್ತಃ ಪ್ರಸೂತಃ ।
ಮತ್ತೋ ಜಗತ್ ಸ್ಥಾವರಂ ಜಂಗಮಂ ಚ ಸರ್ವೇ ವೇದಾ ಸರಹಸ್ಯಾಶ್ಚ ಪುತ್ರ ॥

ತಲವಕಾರೋಪನಿಷದ್ಭಾಷ್ಯದಲ್ಲಿ ಉದಾಹರಿಸಲ್ಪಟ್ಟಿರುವ ಪ್ರಮಾಣಗ್ರಂಥಗಳಲ್ಲಿ ಪ್ರಧಾನ-ವಾದದ್ದು ಬ್ರಹ್ಮಸಾರ ಎಂಬುದು. ಅದರಲ್ಲಿ ಸಮಗ್ರ ಉಪನಿಷತ್ತಿನ ಅರ್ಥವಿವೇಚನೆ ಅದರ ಹಿನ್ನೆಲೆಯೂ ಒಳಗೊಂಡಂತೆ ಬಂದಿರುವುದು ಗಮನಾರ್ಹ. ಹೀಗೆ ಪ್ರಾಚೀನಕೃತಿಯಿಂದಲೇ ಇಡೀ ಉಪನಿಷತ್ತಿನ ಅರ್ಥವನ್ನು ಆವಿಷ್ಕರಿಸುವುದು ಅವರ ಅದ್ಭುತಶೈಲಿಗೆ ನಿದರ್ಶನ.

ಇದರಲ್ಲಿ ಸತ್ಯಂ ಎಂದರೆ ಮೀಮಾಂಸಾ ಎಂದು ತಿಳಿಸಿ, ಅದಕ್ಕೆ ಶಬ್ದನಿರ್ಣಯದ ಆಧಾರವನ್ನು ಹೀಗೆ ನೀಡಿರುವರು :

ನಿರ್ಣೀಯತೇ ಯತಃ ಸಮ್ಯಗಿದಂ ಸತ್ಯಮಿತಿ ಸ್ಫುಟಮ್ ।
ಶ್ರುತಿಸ್ಮೃತ್ಯುದಿತಂ ಸರ್ವಂ ವ್ಯಕ್ತಂ ಮೀಮಾಂಸಯೈತಯಾ ।
ಸತ್ಯಮಿತ್ಯುಚ್ಯತೇ ತಸ್ಮಾನ್ಮೀಮಾಂಸಾ ಬ್ರಹ್ಮನಿಶ್ಚಯಃ ॥

ಮುಂದೆ ವಿದ್ಯಾನಿರ್ಣಯ ಎಂಬ ಗ್ರಂಥವನ್ನು ಉಲ್ಲೇಖಿಸಿ ವೇದ ಮತ್ತು ವೇದಾಂಗಗಳ ವಿವರವನ್ನು ಕೊಟ್ಟಿರುವುದೂ ಗಮನಾರ್ಹ :

ಋಗ್ಯಜುಃ ಸಾಮಾಥರ್ವಾಖ್ಯಾಃ ಪಂಚರಾತ್ರಂ ಚ ಭಾರತಮ್ ।
ಮೂಲರಾಮಾಯಣಂ ಚೈವ ಪುರಾಣಂ ಭಗವತ್ಪರಮ್ ॥
ವೇದಾ ಇತ್ಯುಚ್ಯತೇ ಸದ್ಭಿಃ ಶಿಕ್ಷಾದ್ಯಂ ಸ್ಮೃತಯಸ್ತಥಾ ।
ಅಂಗಾನಿ ಸತ್ಯಂ ಮೀಮಾಂಸಾ ತದ್ವಿದ್ಯಾಯತನಂ ತ್ರಯಮ್ ॥

ಇದರಲ್ಲಿ ಉದಾಹೃತವಾದ ಇತರ ಪ್ರಮಾಣಗ್ರಂಥಗಳು ಹೀಗಿವೆ : ಭಗವದ್ಗೀತಾ, ಭಾಗವತ, ವಿದ್ಯಾನಿರ್ಣಯ, ಶಬ್ದನಿರ್ಣಯ

೩. ಕಾಠಕೋಪನಿಷದ್ಭಾಷ್ಯ

ಕಾಠಕೋಪನಿಷತ್ ಅಥವಾ ಕಠೋಪನಿಷತ್ ಕೃಷ್ಣಯಜುರ್ವೇದದ ತೈತ್ತಿರೀಯ ಶಾಖೆಗೆ ಸೇರಿದ್ದು, ಇದೂ ಈಶಾವಾಸ್ಯೋಪನಿಷತ್ತಿನಂತೆ ಮಂತ್ರಾತ್ಮಕವಾಗಿದೆ. ಯಮದೇವ ಇದಕ್ಕೆ ಋಷಿ; ವಾಮನರೂಪಿ ಶ್ರೀಹರಿಯು ಇದರ ಪ್ರತಿಪಾದ್ಯ ದೇವತೆ. ವಿಶೇಷವಾಗಿ ಶ್ರಾದ್ಧಕಾಲದಲ್ಲಿ ಪಠಿಸಬೇಕಾದ ಉಪನಿಷತ್ತು ಎಂಬುದು ಇದರ ವೈಶಿಷ್ಟ್ಯ :

ಯ ಇಮಂ ಪರಮಂ ಗುಹ್ಯಂ ಶ್ರಾವಯೇದ್ಬ್ರಹ್ಮಸಂಸದಿ ।
ಪ್ರಯತಃ ಶ್ರಾದ್ಧಕಾಲೇ ವಾ ತದಾನಂತ್ಯಾಯ ಕಲ್ಪತೇ ।
ತದಾನಂತ್ಯಾಯ ಕಲ್ಪತೇ ॥ (೧/೩/೪)

ನಚಿಕೇತನು ಸರ್ವಸ್ವ ದಾನ ಮಾಡಹೋದ ತನ್ನ ತಂದೆ ಉದ್ದಾಲಕರು ನಿರುಪಯುಕ್ತವಾದ ಗೋವುಗಳನ್ನು ದಾನ ಮಾಡುವದನ್ನು ಪ್ರಶ್ನಿಸಿ ಅವರ ಶಾಪಕ್ಕೆ ಗುರಿಯಾಗುತ್ತಾನೆ. ಅದರಂತೆ ದೇಹವನ್ನು ತೊರೆದು ಯಮಲೋಕವನ್ನು ತಲುಪಿದಾಗ ಯಮದೇವರು ಅವರ ಮನೆಯಲ್ಲಿರಲಿಲ್ಲ. ಅವರು ಬರುವವರೆಗೂ ಒಟ್ಟು ಮೂರು ದಿನಗಳ ಕಾಲ ಉಪವಾಸದಿಂದಿದ್ದು ಕಾಯುತ್ತಾನೆ. ಅನಂತರ ಯಮದೇವರು ಅವನ ದೀಕ್ಷೆಗೆ ಸಂತುಷ್ಟರಾಗಿ ಮೂರು ವರಗಳನ್ನು ಕೇಳಿಕೊಳ್ಳಲು ಹೇಳುವರು. ನಚಿಕೇತನು ಮೊದಲ ವರದಿಂದ ತಂದೆಯ ಪ್ರಸನ್ನತೆಯನ್ನೂ, ಎರಡನೆಯ ವರದಿಂದ ಸ್ವರ್ಗಾಗ್ನಿಯ ಸ್ವರೂಪವನ್ನೂ ಕೇಳುತ್ತಾನೆ. ಯಮದೇವರು ಅವುಗಳನ್ನು ನೀಡಿ ಸ್ವರ್ಗಾಗ್ನಿಯು ನಾಚಿಕೇತಾಗ್ನಿಯೆಂದೇ ಪ್ರಸಿದ್ಧವಾಗುವಂತೆ ಅನುಗ್ರಹಿಸುವರು. ಮೂರನೆಯ ವರವನ್ನಾಗಿ

ನಚಿಕೇತನು ಮುಕ್ತಿಯಲ್ಲಿ ಭಗವಂತನ ನಿಯಾಮಕತ್ವದ ಸ್ವರೂಪವನ್ನು ತಿಳಿಯ ಬಯಸುವನು. ಅದು ತುಂಬಾ ರಹಸ್ಯವೆಂದೂ ಅದರ ಬದಲು ಬೇರಾವುದೇ ಭೋಗ್ಯಭಾಗ್ಯವನ್ನು ಬೇಕಾದರೆ ನೀಡುವೆನು ಎಂಬುದಾಗಿ ಯಮದೇವರು ಅನೇಕ ಪ್ರಲೋಭನೆಯನ್ನು ತೋರಿಸುವರು. ಅಂತಹ ಯಾವುದೇ ಪ್ರಲೋಭನೆಗೂ ಒಳಗಾಗದ ನಚಿಕೇತನು ಅವುಗಳೆಲ್ಲಾ ಅಸಾರ ತನಗೆ ಅವುಗಳು ಬೇಕಿಲ್ಲ, ಮುಕ್ತಿಯಲ್ಲಿನ ಭಗವಂತನ ನಿಯಾಮಕತ್ವದ ಪರಿಯನ್ನೇ ತಿಳಿಸಬೇಕು ಎಂದು ಹಠ ಹಿಡಿಯುತ್ತಾನೆ. ಆಗ ಯಮದೇವರು ಐಹಿಕ ಸುಖಕ್ಕೆ ಸಾಧನವಾಗುವ ಪ್ರೇಯಸ್ಸನ್ನು ಬಯಸದೆ ಪಾರಮಾರ್ಥಿಕಸುಖಸಾಧನವಾದ ಶ್ರೇಯಸ್ಸನ್ನೇ ಬಯಸಿರುವಿ ಎಂಬುದಾಗಿ ಅವನನ್ನು ಪ್ರಶಂಸಿಸಿ ಭಗವತ್ಸ್ವರೂಪದ ಬಗ್ಗೆ ಉಪದೇಶವನ್ನು ನೀಡುವರು. ಭಗವಂತನು ಅನಂತಕಲ್ಯಾಣಗುಣನಿಧಿ, ಅಣುಗಳಿಗಿಂತ ಅಣು, ಮಹತ್ತಿಗಿಂತ ಮಹತ್ತು, ಸರ್ವತಂತ್ರಸ್ವತಂತ್ರ ಅವನಿಗೂ ಅವನ ಗುಣರೂಪಕ್ರಿಯಾದಿಗಳಿಗೂ ಎಷ್ಟೂ ಭೇದವಿರುವುದಿಲ್ಲ, ಅವನು ಸ್ವಗತಭೇದವಿವರ್ಜಿತ, ಪರಮನಿತ್ಯ, ಪರಮಚೇತನ, ಸ್ವಪ್ರಕಾಶ; ಅವನನ್ನು ಸರಿಯಾಗಿ ತಿಳಿದು ಭಕ್ತಿಮಾಡುವವನು ಮುಕ್ತಿಯನ್ನು, ತಪ್ಪಾಗಿ ತಿಳಿದವನು ನಿತ್ಯ ನರಕವನ್ನು ಹೊಂದುವನು ಎಂಬುದು ಅವರ ಉಪದೇಶದ ಸಾರ. ಶ್ರಾದ್ಧಕಾಲದಲ್ಲಿ ಇದರ ಪಠನೆ ವಿಶೇಷವಾಗಿ ಪಿತೃಗಳಿಗೆ ತೃಪ್ತಿಕರ.

ಭಗವದ್ಗೀತೆಯ ಅನೇಕ ಶ್ಲೋಕಗಳು ಈ ಉಪನಿಷತ್ತಿನ ಶ್ಲೋಕಗಳ ರೂಪಾಂತರದಂತಿವೆ. ಜಗದ್ವೃಕ್ಷದ ಪರಿಕಲ್ಪನೆಯೂ ಇದರಲ್ಲಿದೆ. ಇದರಲ್ಲಿ ಬರುವ ನಚಿಕೇತನ ಮೂರನೆಯ ಪ್ರಶ್ನೆಯನ್ನು ಇತರರು ಮರಣಾನಂತರ ಜೀವನು ಇರುವನೋ ಇಲ್ಲವೋ ಎಂಬರ್ಥದಲ್ಲಿ ನಿರೂಪಿಸಿರುವರು. ಆದರೆ ಸ್ವತಃ ದೇಹ ತೊರೆದು ಯಮಲೋಕಕ್ಕೆ ತೆರಳಿದ ನಚಿಕೇತನಿಗೆ ಆ ಸಂಶಯ ಎಂತು ಬಂದೀತು? (ನಚ ಮೃತ್ವಾ ಯಮಂ ಪ್ರಾಪ್ತಸ್ಯ ನಚಿಕೇತಸೋ ಮೃತೋಽಸ್ತಿ ನಾಸ್ತಿ ವೇತಿ ಸಂಶಯೋ ಅಸ್ತಿ ॥) ಎಂಬುದಾಗಿ ಶ್ರೀಮದಾಚಾರ್ಯರು ಅದನ್ನು ನಿರಾಕರಿಸಿರುವರು. ಇದರಲ್ಲಿನ 'ನೇಹ ನಾನಾಸ್ತಿ ಕಿಂಚನ' ಎಂಬ ಅದ್ವೈತ ಪರವೆಂದು ತೋರುವ ಶ್ರುತಿಯು ವಾಸ್ತವವಾಗಿ ಪರಮಾತ್ಮನ ಸ್ವಗತಭೇದವಿವರ್ಜಿತತ್ವವನ್ನು ಪ್ರತಿಪಾದಿಸುವದು ಎಂಬುದಾಗಿ ಸಾಧಿಸಿ ತೋರಿಸಿರುವರು.

ಈ ಉಪನಿಷತ್ತಿನ ಹಿನ್ನೆಲೆಯನ್ನು ಪರಿಚಯ ಮಾಡಿಕೊಡುವ ಭಾಷ್ಯದ ಕೆಲವು ವಾಕ್ಯಗಳು ಹೀಗಿವೆ.

> ''ಇಚ್ಛನ್ ವಾಜಶ್ರವೋನಪ್ತಾ ದದೌ ಸರ್ವಸ್ವದಕ್ಷಿಣಾಮ್ ।
> ಉದ್ದಾಲಕಃ ಸ್ವರ್ಗಲೋಕಂ ದದೌ ಗಾಶ್ಚ ನಿರಿಂದ್ರಿಯಾಃ ॥
> ಮಾಂ ದತ್ತ್ವಾಽಪಿ ನ ತೇ ಗಾವೋ ದಾತವ್ಯಾ ಈದೃಶಾ ಇತಿ ।
> ಉವಾಚ ಪುತ್ರಸ್ತಂ ಬಾಲಸ್ತಂ ಶಶಾಪ ಪಿತಾ ಸ್ವಯಮ್ ॥''

"ಸ ಜಗಾಮ ಯಮಂ ಬಾಲೋ ಬ್ರಹ್ಮಚಾರೀ ಯಮಸ್ಯ ತು ।
ಪತ್ನ್ಯಾ ಸಂಪೂಜ್ಯಮಾನೋಽಪಿ ಜಗ್ರಾಹಾರ್ಘ್ಯಾದಿಕಂ ನ ತು ।
ಆಗತೇ ತು ಯಮೇ ಪ್ರಾಹ ಯಮಂ ಸೋದಕಮಾಹರ ॥"

ನಚಿಕೇತನು ಯಮಲೋಕದಲ್ಲಿ ಉಪವಾಸ ಕುಳಿತದ್ದು ಮೂರು ದಿನ. ಯಮನ ನೀಡಿದ್ದು ಮೂರು ವರಗಳನ್ನು. ಉಪದೇಶಿಸಿದ್ದು ಯಜ್ಞ, ದಾನ, ತಪಸ್ಸು ಎಂಬುದಾಗಿ ಮೂರು ಕರ್ಮಗಳನ್ನು, ಪ್ರತಿಪಾದ್ಯರೂಪ ವಾಮನ ಎಂಬ ಮೂರು ಅಕ್ಷರದ್ದು. ಇದನ್ನು ಶ್ರವಣ, ಮನನ, ಧ್ಯಾನರೂಪದಿಂದ ಜಿಜ್ಞಾಸೆ ಮಾಡಿದಾಗ ಲಭಿಸುವುದು ಜ್ಞಾನ, ಭಕ್ತಿ, ವೈರಾಗ್ಯ ಎಂಬ ಮೂರು ವಿಶಿಷ್ಟಫಲಗಳು. ಹೀಗೆ ಮೂರಕ್ಕೂ ಈ ಉಪನಿಷತ್ತಿಗಿರುವ ಸಂಬಂಧ ಗಾಢವಾದದ್ದು.

ಕಾಠಕೋಪನಿಷದ್ಭಾಷ್ಯದಲ್ಲಿ ಉದಾಹರಿಸಲ್ಪಟ್ಟಿರುವ ಪ್ರಮಾಣಗ್ರಂಥಗಳ ಹೆಸರು ಹೀಗಿವೆ.

ಗತಿಸಾರ	ತತ್ತ್ವಸಾರ	ನಾಮನಿರುಕ್ತ
ಪಾದ್ಮ	ಬ್ರಹ್ಮಸಾರ	ಬ್ರಹ್ಮವೈವರ್ತ
ಬ್ರಹ್ಮಾಂಡಪುರಾಣ	ಭಗವದ್ಗೀತಾ	ಭವಿಷ್ಯತ್ಪರ್ವ
ಮಹಾಕೌರ್ಮ	ಮಹಾವರಾಹ	ಶಬ್ದನಿರ್ಣಯ
ಶ್ರುತಿ	ಅನಿರ್ದಿಷ್ಟ ಆಕರಗಳು (೯)	

೪. ಷಟ್ಪ್ರಶ್ನೋಪನಿಷದ್ಭಾಷ್ಯ

ಷಟ್ಪ್ರಶ್ನೋಪನಿತ್ತು ಅಥರ್ವವೇದದ ಪಿಪ್ಪಲಾದ ಶಾಖೆಗೆ ಸೇರಿದ ಉಪನಿಷತ್ತು. ಪಿಪ್ಪಲಾದ ಮೊದಲಾದವರು ಇದಕ್ಕೆ ಋಷಿಗಳು. ವಾಸುದೇವರೂಪಿ ಶ್ರೀಹರಿಯು ಇದರ ಪ್ರತಿಪಾದ್ಯ ದೇವತೆ.

ಕಬಂಧಿ ಕಾತ್ಯಾಯನ, ಭಾರ್ಗವ ವೈಧರ್ಭಿ, ಕೌಸಲ್ಯ ಅಶ್ವಲಾಯನ, ಸೌರ್ಯಾಯಣಿ ಗಾರ್ಗ್ಯ, ಶೈಬ್ಯ ಸತ್ಯಕಾಮ ಮತ್ತು ಸುಕೇಶಾ ಭಾರದ್ವಾಜ ಎಬ ಆರುಜನ ಮುನಿಗಳು ಬ್ರಹ್ಮಜಿಜ್ಞಾಸೆಯನ್ನು ಬಯಸಿ ಪಿಪ್ಪಲಾದ ಮುನಿಯ ಬಳಿಗೆ ತೆರಳುವದು ಮತ್ತು ಅವರ ಅಪ್ಪಣೆಯಂತೆ ಒಂದು ವರ್ಷಕಾಲ ಗುರುಕುಲವಾಸ ಪೂರೈಸಿ ಪ್ರತಿಯೊಬ್ಬರೂ ಒಂದೊಂದು ಪ್ರಶ್ನೆಯನ್ನು ಕೇಳಿ ಅವರಿಂದ ಸಮರ್ಪಕ ಉತ್ತರವನ್ನು ಪಡೆದುಕೊಳ್ಳುವರು ಈ ಉಪನಿಷತ್ತಿನ ಸಂದರ್ಭ.

೧) ಪ್ರಜೆಗಳೆಲ್ಲ ಜನಿಸುವದು ಯಾರಿಂದ?

೨) ಪ್ರಜೆಗಳನ್ನು ಪಾಲಿಸುವವರು ಎಷ್ಟು ಜನ? ಅವರಿಗೆ ಜ್ಞಾನದಾಯಕರಾರು? ಅವರಲ್ಲಿ ಶ್ರೇಷ್ಠರಾರು?

೩) ಮುಖ್ಯಪ್ರಾಣನು ಶರೀರದಲ್ಲಿ ಎಂತು ನೆಲೆಸಿರುವನು? ಅವನಿಗೆ ನಿಯಾಮಕರಾರು?

೪) ಸ್ವಪ್ನ ಸುಷುಪ್ತಿಗಳ ಸ್ವರೂಪ ಎಂತಹದು? ಅವುಗಳಲ್ಲಿ ಯಾರು ಎಚ್ಚೆತ್ತಿರುವವರು? ಸುಷುಪ್ತಿಯಲ್ಲಿನ ಸುಖಾನುಭವದ ಸ್ವರೂಪ ಎಂತಹದು?

೫) ಮರಣಕಾಲದವರೆಗೂ ಓಂಕಾರವನ್ನು ಧ್ಯಾನಿಸುವವನು ಎಂತಹ ಲೋಕವನ್ನು ಪಡೆಯುವನು?

೬) ಷೋಡಶಕಲ ಪುರುಷನಾರು?

ಇವು ಕ್ರಮವಾಗಿ ಅವರು ಕೇಳಿದ ಪ್ರಶ್ನೆಗಳು. ಇಂತಹ ಮೌಲಿಕವಾದ ಆರು ಪ್ರಶ್ನೆಗಳಿಗೆ ಉತ್ತರ ನೀಡುವುದರಿಂದ ಇದು ಷಟ್ಪ್ರಶ್ನೋಪನಿಷತ್ ಎನಿಸಿದೆ.

೧) ಭಗವಂತನು ಸೃಷ್ಟಿಯ ಪ್ರಾರಂಭದಲ್ಲಿ ರಯಿ ಎಂಬ ಭಾರತಿಯನ್ನೂ ಪ್ರಾಣನೆಂಬ ವಾಯುದೇವರನ್ನೂ ಸೃಷ್ಟಿಸಿ ಅವರಿಂದ ಸೃಷ್ಟಿಯನ್ನು ಮುಂದುವರೆಸಿದನು.

೨) ತತ್ತ್ವಾಭಿಮಾನಿದೇವತೆಗಳು ಪ್ರಜೆಗಳನ್ನು ಧರಿಸಿರುವವರು. ಜ್ಞಾನವನ್ನು ನೀಡುವವರೂ ಅವರೇ. ಮುಖ್ಯಪ್ರಾಣನು ಅವರಲ್ಲೆಲ್ಲ ಶ್ರೇಷ್ಠನು.

೩) ಮುಖ್ಯಪಾಣನು ಭಗವಂತನಿಂದ ಜನಿಸುವನು; ಅವನನ್ನೇ ಅವಲಂಬಿಸಿ-ರುವನು. ಪ್ರಾಣಾಪಾನಾದಿ ರೂಪಗಳಿಂದ ಶರೀರದಲ್ಲಿ ನೆಲೆಸಿರುವನು.

೪) ಜೀವನು ನಿದ್ರಿಸಿದಾಗ ಸ್ವಪ್ನಾವಸ್ಥೆಯಲ್ಲಿ ರುದ್ರದೇವರು ಎಚ್ಚೆತ್ತಿರುವರು, ಸುಷುಪ್ತ್ಯವಸ್ಥೆಯಲ್ಲಿ ಪ್ರಾಣದೇವರು ಮಾತ್ರ ವ್ಯಾಪಾರ ಮಾಡುವರು. ಭಗವಂತನಿಂದಲೇ ಜೀವರಿಗೆ ಅವರವರ ಸ್ವರೂಪ ಸುಖದ ಅನುಭವ ಲಭಿಸುವದು.

೫) ಜೀವನಪೂರ್ತಿ ಓಂಕಾರವನ್ನು ಸಮಗ್ರವಾಗಿ ಚಿಂತಿಸುವವರು ಬ್ರಹ್ಮಲೋಕವನ್ನೇ ಪಡೆಯುವರು.

೬) ಷೋಡಶಕಲೆಗಳಿಂದ ಕೂಡಿದ ಪುರುಷನನ್ನು ನಿಯಮನ ಮಾಡುವವನು ಪರಮಪುರುಷನಾದ ಶ್ರೀಹರಿ.

ಇವು ಆರು ಪ್ರಶ್ನೆಗಳಿಗೆ ಅವರು ನೀಡಿದ ಉತ್ತರಗಳ ಸಾರಸಂಗ್ರಹ.

ಇದರಲ್ಲಿ ಷೋಡಶಕಲಾ ಪುರುಷನ ವಿವರಣೆಯ ಸಂದರ್ಭದಲ್ಲಿ ತತ್ತ್ವವಿವೇಕ ಎಂಬ ಗ್ರಂಥದ ಆಧಾರದಿಂದ ನೀಡಿರುವ ಕರ್ಮ ಮೊದಲಾದವುಗಳ ಅಭಿಮಾನಿ ದೇವತೆಗಳ ವಿವರ ಅತ್ಯಂತ ಗಮನಾರ್ಹವಾಗಿದೆ :

''ಕರ್ಮೇತಿ ಪುಷ್ಕರಃ ಪ್ರೋಕ್ತ ಉಷಾ ನಾಮಾಭಿಮಾನಿನೀ ।
ಲೋಕಾಭಿಮಾನೀ ಪರ್ಜನ್ಯಃ ಸ್ವಾಹಾ ವೈ ಮಂತ್ರದೇವತಾ ॥
ತಪೋಽಭಿಮಾನೀ ವಹ್ನಿಶ್ಚ ವರುಣೋ ವೀರ್ಯದೇವತಾ ।
ಅನ್ನಸ್ಯ ದೇವತಾ ಸೋಮೋ ಮನೋ ನಾಮಾಽನಿರುದ್ಧಕಃ ॥
ಇಂದ್ರಿಯೇಶಾಶ್ಚ ಸೂರ್ಯಾದ್ಯಾಶ್ಚಕ್ಷುರಾದ್ಯಭಿಮಾನಿನಃ ।
ರುದ್ರೋ ವೀಂದ್ರಃ ಶೇಷಕಾಮೌ ಮನಸಸ್ತ್ವೇವ ದೇವತಾಃ ॥
ಶ್ರದ್ಧೇತಿ ವಾಯೋಃ ಪತ್ನೀ ಸ್ಯಾತ್ ಸರ್ವೇಷಾಂ ಪ್ರಭವಾಪ್ಯಯಾ ।
ತಸ್ಯಾಶ್ಚ ಕಾರಣಂ ಪ್ರಾಣಃ ಸರ್ವೇಷಾಮುತ್ತಮೋತ್ತಮಃ ॥
ತಸ್ಯಾಪೀಶಃ ಕಾರಣಂ ಚ ವಾಸುದೇವಃ ಪರೋಽವ್ಯಯಃ ।
ನ ತಸ್ಯ ಸದೃಶಃ ಕಶ್ಚಿತ್ ಕುತ ಏವೋತ್ತಮೋ ಭವೇತ್ ॥
ತಂ ಜ್ಞಾತ್ವಾ ಮುಚ್ಯತೇ ಜಂತುರ್ವಿದಿತ್ವೈವಂ ಪರಾತ್ಪರಮ್ ॥'' .....

''ವಿಷ್ಣೋಃ ಪ್ರಾಣಸ್ತತಃ ಶ್ರದ್ಧಾ ತಸ್ಯಾ ರುದ್ರೋ ಮನೋಭಿಧಃ ।
ತಸ್ಮಾದಿಂದ್ರಸ್ತ್ವಿಂದ್ರಿಯಾತ್ಮಾ ತಸ್ಯ ಸೋಮೋಽನ್ನದೇವತಾ ।
ತತಶ್ಚ ವರುಣಃ ಸೃಷ್ಟಸ್ತಸ್ಮಾದಗ್ನಿಸ್ತತೋಽವರಃ ।
ಆಕಾಶದೇವತಾ ವಿಘ್ನಸ್ತತೋ ವಾಯೋಃ ಸುತೋ ಮರುತ್ ॥
ತಸ್ಮಾದಗ್ನಿಃ ಪಾವಕಾಖ್ಯಃ ಪ್ರಥಮೋಽಗ್ನೇಃ ಸುತಸ್ತತಃ ।
ತತಃ ಪರ್ಜನ್ಯ ಉದ್ಭೂತಃ ಸ್ವಾಹಾಽತೋ ಮಂತ್ರದೇವತಾ ॥
ಉದಕಾತ್ಮಕೋ ಬಹುಸ್ತಸ್ಯಾ ಉಷಾ ನಾಮಾತ್ಮಿಕಾ ತತಃ ।
ತತಃ ಶನಿಃ ಪೃಥಿವ್ಯಾತ್ಮಾ ಕರ್ಮಾತ್ಮಾ ಪುಷ್ಕರಸ್ತತಃ ।
ಕ್ರಮಾತ್ ಪ್ರತ್ಯವರಾ ಏತೇ ಮುಕ್ತಾಃ ಸರ್ವಗುಣೈರಪಿ ।
ನಿತ್ಯಮುಕ್ತಸ್ತತೋ ವಿಷ್ಣುಃ ಪ್ರಾಣಾದಪ್ಯುತ್ತಮೋತ್ತಮಃ ॥''

ಷಟ್ಪ್ರಶ್ನೋಪನಿಷತ್ತಿನಲ್ಲಿ ಸೂಚಿಸಲಾದ ಆಕರಗಳು ಹೀಗಿವೆ :

ತತ್ತ್ವವಿವೇಕ	ಪ್ರಜಾಪತಿಸಂಹಿತಾ	ಪ್ರಭಂಜನ
ಬ್ರಹ್ಮಸೂತ್ರ	ಶ್ರುತಿ	ಸತ್ತತ್ತ್ವ

ಅನಿರ್ದಿಷ್ಟ ಆಕರಗಳು (೨)

೫. ಆಥರ್ವಣೋಪನಿಷದ್ಭಾಷ್ಯ

ಮುಂಡಕೋಪನಿಷತ್ ಎಂಬುದಾಗಿಯೂ ಪ್ರಸಿದ್ಧವಾಗಿರುವ ಆಥರ್ವಣೋಪನಿಷತ್ ಅಥರ್ವವೇದಕ್ಕೆ ಸೇರಿದೆ.

ಶ್ರೀಮದಾಚಾರ್ಯರು ಇದಕ್ಕೆ ಬರೆದಿರುವ ಭಾಷ್ಯದ ಸಾರ ಹೀಗಿದೆ: ಬ್ರಹ್ಮದೇವರು

ವೈವಸ್ವತಮನ್ವಂತರದ ಪ್ರಾರಂಭದಲ್ಲಿ ತಮ್ಮ ಜ್ಯೇಷ್ಠಪುತ್ರ ಅಥರ್ವಮುನಿಗೆ ನೀಡಿದ ಉಪದೇಶವೇ ಈ ಉಪನಿಷತ್ತು.

ಪರಾ ಮತ್ತು ಅಪರಾ ಎಂಬುದಾಗಿ ವಿದ್ಯೆ ಎರಡು ಬಗೆಯಾಗಿದೆ. (ದ್ವೇ ವಿದ್ಯೇ ವೇದಿತವ್ಯೇ ಪರಾ ಚ ಅಪರಾ ಚ) ಅಕ್ಷರನಾದ ಭಗವಂತನನ್ನು ತಿಳಿಸಿಕೊಡುವ ವಿದ್ಯೆ ಪರವಿದ್ಯೆ. ಹಾಗಲ್ಲದ್ದು ಅಪರ ವಿದ್ಯೆ. ಋಗಾದಿ ವೇದಗಳು ಶಿಕ್ಷಾದಿ ವೇದಾಂಗಗಳು ಸಹ ಮುಖ್ಯವಾಗಿ ಭಗವಂತನನ್ನೇ ಪ್ರತಿಪಾದಿಸುವದರಿಂದ ಅವೆಲ್ಲ ಪರವಿದ್ಯೆಯೇ ಆಗಿವೆ. ಆದರೆ ಅವುಗಳಲ್ಲಿ ಭಗವತ್ಪರವಲ್ಲದ ವಿಚಾರವನ್ನಷ್ಟೇ ಕಾಣತೊಡಗಿದಾಗ ಅವುಗಳಿಂದ ಬರುವ ವಿದ್ಯೆಯೂ ಅಪರ ವಿದ್ಯೆಯೇ ಆಗುತ್ತದೆ. ಎಂದರೆ ವೇದಗಳು ಮುಖ್ಯವಾಗಿ ಭಗವತ್ಪ್ರತಿಪಾದಕವೇ ಆಗಿರುವುದರಿಂದ ಅವುಗಳಲ್ಲಿ ಸದಾ ಹರಿಸರ್ವೋತ್ತಮತ್ವಾದಿ ಪ್ರಮೇಯಗಳನ್ನೇ ಕಾಣಬೇಕು. ಅದಕ್ಕೆ ಪೋಷಕವಾಗಿ ಇತರ ವಿಚಾರಗಳನ್ನು ಅರ್ಥಮಾಡಿಕೊಳ್ಳಬಹುದು. ಇಲ್ಲವಾದಲ್ಲಿ ಅವುಗಳು ಸಹ ಅಪರ ವಿದ್ಯೆಗಳೇ ಆಗಿ ಅಗ್ರಾಹ್ಯವಾಗಿ ಬಿಡುವವು. ಕೃತಯುಗದಲ್ಲಿ ವೇದಗಳನ್ನು ಇಷ್ಟು ಪರಿಸ್ಫುಟವಾಗಿ ವಿಷ್ಣುಸರ್ವೋತ್ತಮತ್ವ ಪ್ರತಿಪಾದಕವಾಗಿಯೇ ಜನರು ಅರ್ಥ ಮಾಡಿಕೊಳ್ಳುತ್ತಿದ್ದರು. ಅನಂತರದ ಯುಗಗಳಲ್ಲಿ ಅನೇಕರು ಭಗವತ್ಪರವಲ್ಲದ ರೀತಿಯಲ್ಲಿ ಅವುಗಳನ್ನು ಅರ್ಥಮಾಡಿಕೊಳ್ಳುವ ಪರಿಪಾಠವು ಬೆಳೆದು ಅವುಗಳ ಮೂಲ ಉದ್ದೇಶ ಮರೆಯಾಗುವಂತಾಯ್ತು.

ಅಕ್ಷರ ಎಂದರೆ ಭಗವಂತನೇ. ಅವನೇ ಜಗಜ್ಜನ್ಮಾದಿ ಕಾರಣ; ಸರ್ವಜ್ಞ; ಸರ್ವಶಕ್ತ; ಸರ್ವವ್ಯಾಪ್ತ ಹಾಗು ಜ್ಞಾನಾನಂದಮಯಶರೀರ. ಅವನನ್ನು ಅರಿಯದವರು ವೇದ ಹಿಡಿದೂ ಅವಿದ್ಯೆಯಿಂದ ಹೊರಬರದೆ ಸಂಸಾರದಲ್ಲಿಯೇ ತೊಳಲುವನು. ತಮ್ಮನ್ನು ಪಂಡಿತರೆಂದು ಭ್ರಮಿಸಿ ಕುರುಡನ ಹಿಂದೆ ಸಾಗುವ ಕುರುಡರಂತೆ ವಿನಾಶ ಹೊಂದುವರು. ಭೌತಿಕ ಸುಖಗಳ ಇತಿಮಿತಿಗಳನ್ನು ಅರಿತು ಅವುಗಳಲ್ಲಿ ವೈರಾಗ್ಯ ಹೊಂದಿ ಮುಮುಕ್ಷುವು ಬ್ರಹ್ಮಜ್ಞಾನವನ್ನು ಸಂಪಾದಿಸಿಕೊಳ್ಳಬೇಕು.

ಪ್ರಣವವೇ ಧನುಸ್ಸು; ಮನಸ್ಸೇ ಬಾಣ; ಬ್ರಹ್ಮನೇ ಸಾಧಿಸಬೇಕಾದ ಗುರಿ; ಎಚ್ಚರ ತಪ್ಪದೇ ಬಾಣವನ್ನು ಪ್ರಯೋಗಿಸಿ ಗುರಿಯನ್ನು ಸಾಧಿಸಬೇಕು. ಭಗವಂತನನ್ನು ಪೂರ್ಣ ಎಂದು ಉಪಾಸನೆ ಮಾಡಿ ಅವನನ್ನು ಸಾಕ್ಷಾತ್ಕರಿಸಿಕೊಳ್ಳಬೇಕು. ಆಗ ಮುಕ್ತಿಯು ಲಭಿಸುವುದು.

ಜೀವಾತ್ಮ ಮತ್ತು ಪರಮಾತ್ಮರು ಅತ್ಯಂತ ಭಿನ್ನರು. ಒಂದೇ ದೇಹದಲ್ಲಿ ಜೀವನೊಂದಿಗೆ ಅವನ ಅಂತರ್ಯಾಮಿಯಾಗಿ ಪರಮಾತ್ಮನು ನೆಲೆಸಿರುವನು. ಜೀವನ ಸುಖ ದುಃಖಗಳು ಎಂದೂ ಅವನಿಗೆ ತಟ್ಟಲಾರವು. ಮುಕ್ತಿಯಲ್ಲಿ ಜೀವನಿಗೆ ಪ್ರಾಕೃತ

ದೇಹವು ತೊಲಗಿ ಸ್ವರೂಪ ದೇಹವು ವ್ಯಕ್ತವಾಗುವದು. ಪ್ರಾಕೃತದೇಹದ ಷೋಡಶಕಲೆಗಳ ಅಭಿಮಾನಿ ದೇವತೆಗಳು ತಮ್ಮ ತಮ್ಮ ಮೂಲರೂಪಗಳಲ್ಲಿ ಸೇರಿಕೊಳ್ಳುವರು. ಹೀಗೆ ಪರಬ್ರಹ್ಮನನ್ನು ತಿಳಿದವರು ಮುಕ್ತಿಯಲ್ಲಿ ತನ್ನ ಸ್ವರೂಪ ಯೋಗ್ಯತೆಗೆ ಅನುಗುಣವಾಗಿಯೇ ಶಾಶ್ವತವಾದ ಪೂರ್ಣಸುಖವನ್ನು ಪಡೆಯುವನು. ಇಂತಹ ಸಾಧಕನ ವಂಶದಲ್ಲಿಯೂ ಸಾಮಾನ್ಯವಾಗಿ ಬ್ರಹ್ಮಜ್ಞಾನಿಗಳೇ ಜನಿಸುವರು.

ಈ ಉಪನಿಷತ್‌ನಲ್ಲಿಯ 'ಪರೇಽವ್ಯಯೇ ಸರ್ವ ಏಕೀಭವಂತೀ' ಮತ್ತು 'ಪರಮಂ ಬ್ರಹ್ಮ ವೇದ ಬ್ರಹ್ಮೈವ ಭವತಿ' ಎಂಬ ವಾಕ್ಯಗಳು ಅಭೇದಬೋಧಕವೆಂಬಂತೆ ತೋರುತ್ತವೆ. ಶ್ರೀಮದಾಚಾರ್ಯರು ಅವುಗಳ ಆಂತರ್ಯವನ್ನು ವಿವರಿಸುತ್ತಾ ಮುಕ್ತಿಯಲ್ಲಿ ಮುಕ್ತಜೀವರು ಭಗವಂತನೊಂದಿಗೆ ಒಟ್ಟಾಗಿ ಇರುವರು. ಎಂದರೆ ಅವನಿಗೆ ವಿರೋಧವಾಗದ ರೀತಿಯಲ್ಲಿ ಅವನ ಲೋಕದಲ್ಲಿ ಒಂದಾಗಿ ಇರುವರು ಎಂಬುದಾಗಿಯೂ, ಪರಬ್ರಹ್ಮನನ್ನು ತಿಳಿದ ಮೇಲೂ ಜೀವನು ತನ್ನ ಯೋಗ್ಯತೆಗೆ ಅನುಗುಣವಾಗಿ ಮಾತ್ರವೇ ಪೂರ್ಣನಾಗುವನು ಎಂಬುದಾಗಿಯೂ ಸಪ್ರಮಾಣವಾಗಿ ಪ್ರತಿಪಾದಿಸಿರುವರು. ಮುಖ್ಯಪ್ರಾಣನು ಭಗವಂತನ ಪ್ರಧಾನಧಾಮ. ಆದ್ದರಿಂದ ಪ್ರಾಣನ ಮೂಲಕ ಆರಾಧಿಸಿಯೇ ಸಾಧಕನು ಶ್ರೀಹರಿಯನ್ನು ಪ್ರಸನ್ನಗೊಳಿಸಿ ಸದ್ಗತಿ ಪಡೆಯಬೇಕು ಎಂಬ ಅತ್ಯಂತ ಮುಖ್ಯ ಪ್ರಮೇಯವೂ ಈ ಉಪನಿಷತ್ತಿನಲ್ಲಿ ಬಂದಿದೆ.

ಆರಂಭದಲ್ಲಿ ಅಥರ್ವಣನು ಬ್ರಹ್ಮದೇವರ ಜ್ಯೇಷ್ಠಪುತ್ರ ಎಂಬ ಉಪನಿಷತ್ತಿನ ಮಾತಿಗೆ ಭಾಷ್ಯದಲ್ಲಿರುವ ಅಪೂರ್ವ ವಿವರಣೆ ಹೀಗಿದೆ :

ಮನೋರ್ವೈವಸ್ವತಸ್ಯಾದಾವಥರ್ವಾ ಬ್ರಹ್ಮಣೋಽಜನಿ ।
ಮಿತ್ರಶ್ಚ ವರುಣಶ್ಚಾಥೋ ಪ್ರಹೇತಿರ್ಹೇತಿರೇವ ಚ ॥
ಬ್ರಹ್ಮಣಃ ಪ್ರಥಮೇ ಕಲ್ಪೇ ಶಿವಃ ಪ್ರಥಮಜಃ ಸ್ಮೃತಃ ।
ಸನಕಾದ್ಯಾಸ್ತು ವಾರಾಹೇ ಬ್ರಹ್ಮಾ ವಿಷ್ಣೋಃ ಸುತೋಽಗ್ರಜಃ ॥

– ಇತಿ ಬ್ರಹ್ಮಾಂಡೇ

– "ವೈವಸ್ವತಮನ್ವಂತರದಲ್ಲಿ ಬ್ರಹ್ಮದೇವರ ಜ್ಯೇಷ್ಠಪುತ್ರ ಅಥರ್ವ ಮೊದಲಾದವರು. ಬ್ರಹ್ಮದೇವರ ಮೊದಲ ಕಲ್ಪದಲ್ಲಿ ಶಿವ ಅವರ ಮೊದಲ ಮಗ. ವರಾಹಕಲ್ಪದಲ್ಲಿ ಸನಕಾದಿಗಳು ಅವರ ಜ್ಯೇಷ್ಠಪುತ್ರರು. ಬ್ರಹ್ಮದೇವರು ಮಾತ್ರ ವಿಷ್ಣುವಿನ ಜ್ಯೇಷ್ಠಪುತ್ರರೇ ಆಗಿರುವರು." ಎಂದು ಇದರ ಭಾವ.

ಅದರಂತೆ ಪರಾಪರವಿದ್ಯೆಗಳ ಬಗ್ಗೆ ಅವರು ಪರಮಸಂಹಿತೆಯ ಆಧಾರದಲ್ಲಿ ನೀಡಿರುವ ಅಪೂರ್ವವಿವರ ಹೀಗಿದೆ :

ಋಗಾದ್ಯಾ ಅಪರಾ ವಿದ್ಯಾ ಯದಾ ವಿಷ್ಣೋರ್ನ ವಾಚಕಾಃ ।
ತಾ ಏವ ಪರಮಾ ವಿದ್ಯಾ ಯದಾ ವಿಷ್ಣೋಸ್ತು ವಾಚಕಾಃ ॥

ಎಂದರೆ ವಿಷ್ಣುವಾಚಕವಾಗದಿದ್ದಾಗ ಋಗಾದಿಗಳು ಅಪರವಿದ್ಯೆ ಎನ್ನಿಸುವವು. ಸಾಕ್ಷಾದ್ವಿಷ್ಣುವಾಚಕವಾದಾಗ ಆ ಋಗಾದಿಗಳೇ ಪರವಿದ್ಯೆ ಎನ್ನಿಸುವವು ಎಂದರ್ಥ.

ಅದರಂತೆ ಕೃತಾದಿ ಕ್ರಮದಲ್ಲಿ ವೇದವಿದ್ಯೆ ಪ್ರಸಾರವಾಗುವ ಬಗೆಯನ್ನು ಅವರು ನಾರಾಯಣಸಂಹಿತೆಯ ಆಧಾರದಲ್ಲಿ ತಿಳಿಸಿರುವ ಪರಿಯು ವಿಶಿಷ್ಟವಾದುದು :

ಪಂಚರಾತ್ರಮೃಗಾದ್ಯಾಶ್ಚ ಸರ್ವಮೇಕಂ ಪುರಾಽಭವತ್ ।
ಮೂಲವೇದ ಇತಿ ಹ್ಯಾಖ್ಯಾ ಕಾಲೇ ಕೃತಯುಗೇ ತದಾ ॥
ನೈವರ್ಕ್ಸಾಮಾದಿನಾಮಾನಿ ತದಾ ವೇದಸ್ಯ ಚಾಭವನ್ ।
ನೈವ ಚೇಂದ್ರಾದಿನಾಮಾನಿ ವಿಷ್ಣೋರನ್ಯತ್ರ ಕುತ್ರಚಿತ್ ॥
ಬ್ರಹ್ಮರುದ್ರೇಂದ್ರಪೂರ್ವೈಸ್ತು ನಾಮಭಿಃ ಪ್ರೋಚ್ಯತೇ ಹರಿಃ ।
ದೇವತಾತ್ವೇನ ಚೇಜ್ಯಃ ಸ ಬ್ರಹ್ಮಾದ್ಯಾ ಮನುನಾಮಕಾಃ ॥
ವಕ್ತೃತ್ವೇನ ಪಿತೃತ್ವೇನ ಕಾರಿತ್ವೇನೈವ ಚಾದರಾತ್ ।
ಇಜ್ಯಂತೇ ದೇವತಾಃ ಸರ್ವಾ ನ ತು ದೇವತಯಾ ಕ್ವಚಿತ್ ॥
ಅನನ್ಯಯಾಜಿನಸ್ತೇ ತು ತಸ್ಮಾತ್ ಕಾರ್ತಯುಗಾ ಜನಾಃ ।
ಪ್ರಾಪ್ನುವಂತಿ ಹರಿಂ ತಂ ಚ ತಸ್ಮಾದ್ವೇದೇ ನ ಕಿಂಚನ ॥
ಪಾರಾವರ್ಯಂ ಯರೇರ್ಯಸ್ಮಾದುತ್ಥಿತಾಸ್ತುರಗಾನನಾತ್ ।
ಋಗಾದ್ಯಾ ಅನುವ್ಯಾಖ್ಯಾಂತಾಸ್ತಸ್ಮಾತ್ಸರ್ವೈರ್ಹರಿಂ ಯಜೇತ್ ॥
ತಸ್ಮಾದ್ಬ್ರಹ್ಮಾದಯಃ ಸರ್ವೇ ಮನವೋ ಮಾನವಾಸ್ತಥಾ ।
ಯಜಂತಿ ಸರ್ವವೇದೈಸ್ತಂ ಜಾನಂತಿ ಚ ವಿನಿಶ್ಚಯಾತ್ ॥
ಅಶಕ್ತಃ ಪಂಚರಾತ್ರೇಣ ಋಗಾದ್ಯೈರ್ವಾಽಥ ತಂ ಯಜೇತ್ ।
ಋಗಾದ್ಯೈರೇವ ಸ ತ್ರೈತೈರ್ಭಿನ್ನೈರಿಷ್ಟೋ ಜನೈರ್ಹರಿಃ ॥
ದ್ವಾಪರೀಯೈರ್ಜನೈರ್ವಿಷ್ಣುಃ ಪಂಚರಾತ್ರೈಸ್ತು ಕೇವಲೈಃ ।
ಕಲೌ ತು ನಾಮಮಾತ್ರೇಣ ಪೂಜ್ಯತೇ ಭಗವಾನ್ ಹರಿಃ ॥
ಏಕೋ ವೇದಃ ಕೃತೇ ಹ್ಯಾಸೀತ್ ತ್ರೇತಾಯಾಂ ಸ ತ್ರಿಧಾಽಭವತ್ ।
ಸ ಏವ ಪಂಚಧಾ ಜಾತೋ ದ್ವಾಪರಂ ಪ್ರಾಪ್ಯ ವೈ ಯುಗಮ್ ॥
ಉತ್ಸನ್ನಃ ಸ ಕಲಿಂ ಪ್ರಾಪ್ಯ ವೇದಃ ಪ್ರಾಯೇಣ ಸರ್ವಶಃ ।
ಮುಖ್ಯೋ ಧರ್ಮಃ ಕಾರ್ತಯುಗೋ ವರ್ತಿತವ್ಯಃ ಕಲಾವಪಿ ॥
ತ್ರೇತಾದೌ ತದಶಕ್ತ್ಯಾ ಹಿ ಧರ್ಮೋಽನ್ಯಃ ಸಂಪ್ರಕೀರ್ತಿತಃ ।
ಕೃತೇ ಭಾಗವತಾಃ ಸರ್ವೇ ವೇದಾಶ್ಚ ಪುರುಷಾಸ್ತಥಾ ॥

ತ್ರೇತಾಯಾಂ ಭಿನ್ನವಿಷಯಾಸ್ತತಸ್ತ್ರೈವಿದ್ಯತಾಂ ಗತಾಃ ।
ತಸ್ಮಾದೇಕಃ ಸರ್ವವೇದೈರ್ಜ್ಞೇಯೋ ವಿಷ್ಣುಃ ಸನಾತನಃ ।
ಪೂಜ್ಯೋ ಯಜ್ಞೈಃ ಸೋಪಚಾರೈರ್ಧ್ಯೇಯೋ ವಂದ್ಯಶ್ಚ ಸರ್ವದಾ ॥
– ಇತ್ಯಾದಿ ನಾರಾಯಣಸಂಹಿತಾಯಾಮ್ ।

ವೇದವಾದಗಳು ಯುಗ ಕಳೆದಂತೆ ಹ್ರಾಸವಾಗುವವು ಎಂಬುದು ಇಲ್ಲಿಯ ಮತ್ತೊಂದು ವಿಶಿಷ್ಟ ಮಾಹಿತಿ :

ವೇದವಾದಾಶ್ಚಾನುಯುಗಂ ಹ್ರಸಂತೀತಿ ಹಿ ನಃ ಶ್ರುತಿಃ । ಇತಿ ಭಾರತೇ

ಪಂಚರಾತ್ರದ ಪ್ರಾಮಾಣ್ಯವನ್ನು ಉಲ್ಲೇಖಿಸುವ ವರಾಹಪುರಾಣದ ಉದಾಹರಣೆಯು ಇದರಲ್ಲಿದೆ :

ವೇದೈಶ್ಚ ಪಂಚರಾತ್ರೈಶ್ಚ ಭಕ್ತ್ಯಾ ಯಜ್ಞೈಸ್ತಥೈವ ಚ ।
ದೃಶ್ಯೋಽಹಂ ನಾನ್ಯಥಾ ದೃಶ್ಯೋ ವರ್ಷಕೋಟಿಶತೈರಪಿ ॥

ವೇದವ್ರತದ ಮಹಿಮೆಯನ್ನು ಹೇಳುತ್ತಾ ಅವರು ನೀಡಿರುವ ಮಾಹಿತಿ ಹೀಗಿದೆ :

''ಸ್ವವೇದವ್ರತಯುಕ್ತಸ್ಯ ಸರ್ವವೇದಗತಾಸ್ವಪಿ ।
ಅಧಿಕಾರೋಽಸ್ತಿ ವಿದ್ಯಾಸು ನಾವೇದವ್ರತಿನಃ ಕ್ವಚಿತ್ ॥'' ಇತಿ ವ್ಯಾಸಸ್ಮೃತೌ ॥

ವಿಷ್ಣುವನ್ನು ಇತರರಿಗಿಂತ ಸ್ವಲ್ಪ ಉತ್ತಮ ಎಂದು ತಿಳಿದರೆ ಪುನಃ ಈ ಲೋಕಕ್ಕೆ ಮರಳುವನು. ಸಾಮ್ಯವನ್ನಾಗಲೀ ಅಧಮತ್ವವನ್ನಾಗಲೀ ತಿಳಿದರೆ ಅಧೋಲೋಕಕ್ಕೂ ಕ್ರಮವಾಗಿ ತಮಸ್ಸಿಗೂ ಹೋಗುವನು ಎಂಬ ವಿಶೇಷಾಂಶ ಇಲ್ಲಿದೆ :

ವಿಷ್ಣೋಃ ಸರ್ವೇಭ್ಯಃ ಕಿಂಚಿದುತ್ತಮತ್ವಂ ಜಾನಂತ ಇಮಂ ಲೋಕಮಾವಿಶಂತಿ ।
ಸಾಮ್ಯಂ ಹೀನತ್ವಂ ವಾ ಜಾನಂತೋ ಹೀನತರಂ ತಮ ಏವಾವಿಶಂತಿ ॥

'ದೇವೇಭ್ಯ ಉತ್ತಮಂ ವಿಷ್ಣುಂ ರಾಜವದ್ಯಸ್ತು ಮನ್ಯತೇ ।
ಯಾಜೀ ಸ ಮಾನುಷಂ ಯಾತಿ ಸಾಮ್ಯಹೀನತ್ವವಿತ್ತಮಃ ॥' ಇತಿ ಚ ।

ಅಕ್ಷರಗಳು ಮೂರು ಎಂಬ ವಿವರವೂ ಅಪೂರ್ವವಾದುದು :

'ಅಪರಂ ತ್ವಕ್ಷರಂ ಯಾ ಸಾ ಪ್ರಕೃತಿರ್ಜಡರೂಪಿಕಾ ।
ಅಕ್ಷರಂ ಪರಮಂ ಶ್ರೀಸ್ತು ಪರತಃ ಪರಮಕ್ಷರಮ್ ।
ವಾಸುದೇವಃ ಪರಾನಂದ ಇತಿ ತ್ರಿವಿಧಮಕ್ಷರಮ್ ॥'

ಅದರಂತೆ ಪರಾವರ, ಭೋಕ್ತೃತ್ವ, ಸತ್ಯ, ಅನೃತ, ಪ್ರಧಾನಧಾಮ, ಮೊದಲಾದವುಗಳಿಗೆ ನೀಡಿರುವ ಅರ್ಥಗಳು ಹೀಗಿವೆ :

'ಪರಾ ಅಪ್ಯಪರಾ ಯಸ್ಮಾತ್ ಸ ಹಿ ವಿಷ್ಣುಃ ಪರಾವರಃ ।
ಬ್ರಹ್ಮಾಂಡಮಧ್ಯಗೋ ನಿತ್ಯಂ ತಪತ್ಯೇಷ ರವೌ ಸ್ಥಿತಃ ॥'

'ಸ್ವಾತಂತ್ರ್ಯೇಣೈವ ಭೋಕ್ತೃತ್ವಾದ್ದುಃಖಾಭೋಗಾಚ್ಚ ಸರ್ವದಾ ।
ಅಭೋಕ್ತಾ ಚೈವ ಭೋಕ್ತಾ ಚ ಭಗವಾನ್ ವಿಷ್ಣುರವ್ಯಯಃ ॥'

'ಸತ್ಯೋ ಹಿ ಭಗವಾನ್ ವಿಷ್ಣುಃ ಸದ್ಗುಣತ್ವಾತ್ ಪ್ರಕೀರ್ತಿತಃ ।
ಅಸುರಾಸ್ತದ್ವಿರುದ್ಧತ್ವಾದನೃತಾಃ ಪರಿಕೀರ್ತಿತಾಃ ।
ತಸ್ಯ ವಿಷ್ಣೋರ್ನಿಧಾನಂ ತು ವೈಕುಂಠೋ ಲೋಕ ಉತ್ತಮಃ ॥'

'ಪ್ರಧಾನಂ ಧಾಮ ವಿಷ್ಣೋಸ್ತು ಪ್ರಾಣ ಏವ ಪ್ರಕೀರ್ತಿತಃ ।
ಉಪಾಯೈರ್ಯೋ ವಿಜಾನೀಯಾತ್ ಪ್ರಾಣಸ್ಥಂ ಪರಮೇಶ್ವರಮ್ ।
ತಸ್ಯ ಪ್ರಾಣೇ ಹರಿರ್ನಿತ್ಯಮಾವಿಷ್ಟೋ ಭವತಿ ಧ್ರುವಮ್ ॥'

ಐಕ್ಯಬೋಧಕದಂತೆ ತೋರುವ ವಾಕ್ಯಗಳಿಗೆ ಅವಿರೋಧ, ಸಾದೃಶ್ಯ, ಏಕದೇಶದಲ್ಲಿರುವಿಕೆ ಎಂಬುದಾಗಿ ಅರ್ಥೈಸಬೇಕೇ ಹೊರತು, ಸ್ವರೂಪೈಕ್ಯ ಎಂದಲ್ಲ ಎಂಬ ವಿವರಣೆ ಐಕ್ಯಬೋಧಕದಂತೆ ತೋರುವ ಎಲ್ಲ ವಾಕ್ಯಗಳ ವಿವೇಚನೆಗೂ ಮಾರ್ಗದರ್ಶಕವಾದ ಸೂತ್ರವಾಗಿದೆ.

'ಅವಿರೋಧಶ್ಚ ಸಾದೃಶ್ಯಮೇಕದೇಶಸ್ಥಿತಿಸ್ತಥಾ ।
ಏಕೀಭಾವಸ್ತ್ರಿಧಾ ಪ್ರೋಕ್ತೋ ನೈಕೀಭಾವಃ ಸ್ವರೂಪಯೋಃ ।
ಕುತೋಽಭೂತಸ್ಯ ಭವನಂ ಸ್ವರೂಪಸ್ಯೈಕ್ಯಮೇವ ಹಿ ।
ಅತೋ ನದೀನಾಂ ಜೀವಾನಾಂ ವಿರುದ್ಧಾನಾಂ ನೃಣಾಮಪಿ ।
ಅಬ್ಧಿನಾ ಹರಿಣಾ ಚೈವ ತಥೈವ ಚ ನರಾಂತರೈಃ ।
ಏಕೀಭಾವಸ್ತು ಸಂಶ್ಲೇಷೋ ವಿರೋಧಸ್ಯ ಚ ವರ್ಜನಮ್ ॥
ಸ್ವರೂಪೈಕ್ಯಂ ಕುತಸ್ತೇಷಾಂ ನಿತ್ಯಭಿನ್ನಸ್ವರೂಪಿಣಾಮ್ ।
ಹರೇರಪಿ ಸ್ವರೂಪಾಣಾಮೇಕೀಭಾವೋ ಯದೋಚ್ಯತೇ ।
ಸಂಶ್ಲೇಷ ಏವ ಸಿದ್ಧತ್ವಾತ್ ಸ್ವರೂಪೈಕ್ಯಸ್ಯ ನೋ ಭವಃ ॥'

ಮುಕ್ತಿಯಲ್ಲಿ ನಾಮರೂಪಗಳು ಇರುವುದಿಲ್ಲ ಎಂಬುದಕ್ಕೆ ಕೊಟ್ಟಿರುವ ವಿವರಣೆಯೂ ಗಮನಾರ್ಹ.

'ಅಗಮ್ಯನಾಮರೂಪತ್ವಾದಮುಕ್ತೈರ್ಮುಕ್ತಿಗಾ ನರಾಃ ।
ವಿಹೀನನಾಮರೂಪಾಸ್ತು ನ ಹಿ ತದ್ರಹಿತತ್ವತಃ ॥
ಅಶರೀರೋ ಯಥಾ ವಾಯುಃ ಸಾಮಾನ್ಯಾಗಮ್ಯದೇಹತಃ ।
ಏವಂ ನದ್ಯಃ ಸಮುದ್ರಸ್ಥಾಃ ಸಾಮಾನ್ಯಾಗಮ್ಯರೂಪತಃ ॥' ಇತಿ ಚ ।

ಸಮುದ್ರ ಸೇರಿದ ನದಿಗಳು ತಮಗೆ ಸೇರಿದ ನೀರನ್ನು ಗುರುತಿಸಲಾರವು. ಅವುಗಳನ್ನು ಪ್ರತ್ಯೇಕಿಸಿ ತಿಳಿದು ಮೋಡವನ್ನಾಗಿಸಿ ಮಳೆ ಸುರಿಸುವುದು ವಾಯುದೇವರ ಕಾರ್ಯ ಎಂಬ ಸೂಕ್ಷ್ಮ ಪ್ರಮೇಯ ಇಲ್ಲಿದೆ.

'ಸ್ವಕೀಯಮುದಕಂ ನದ್ಯಃ ಸಮುದ್ರೇ ನೈವ ಜಾನತೇ ।
ವಾಯುಸ್ತು ತತ್ಪೃಥಜ್ಜ್ಞಾತ್ವಾ ಮೇಘೇ ಕೃತ್ವಾ ಪ್ರವರ್ಷತಿ ॥' ಇತಿ ಚ ॥

'ನಾಸ್ಯಾಬ್ರಹ್ಮವಿತ್ಕುಲೇ ಭವತಿ' ಎಂಬ ಉಪನಿಷತ್ತಿನ ವಾಕ್ಯಕ್ಕೆ ಬ್ರಹ್ಮಜ್ಞಾನಿಯ ವಂಶದಲ್ಲಿ ಬ್ರಹ್ಮಜ್ಞಾನಿಯಲ್ಲದವನು ಜನಿಸಲಾರ ಎಂದರ್ಥ. ಅದರ ಬಗ್ಗೆ ಅವರು ನೀಡಿರುವ ಸ್ಪಷ್ಟೀಕರಣ ಹೀಗಿದೆ.

ದೇವಾನಾಂ ಸಂತತೌ ಜಾತಾಃ ಪ್ರಾಯಶೋ ಜ್ಞಾನಿನಃ ಕೃತೇ ।
ಬಲವದ್ಧೇತುತಶ್ಚಾನ್ಯೇ ಯಸ್ಮಾದ್ ಬ್ರಹ್ಮವಿದಃ ಸುರಾಃ ॥

ನ ಸಂತತೌ ಬ್ರಹ್ಮವಿದೋ ನರಾಣಾಂ ಜ್ಞಾನಿನಾಮಪಿ ।
ಪ್ರಾಯಶಃ ಸ್ಯುಃ ಸುರಾಣಾಂ ಚ ನಿಯಮೋಽಯಂ ಕೃತೇ ಯುಗೇ ॥

ಎಂದರೆ, ದೇವತೆಗಳ ವಂಶದಲ್ಲಿ ಜನಿಸುವವರು ಸಾಮಾನ್ಯವಾಗಿ ಜ್ಞಾನಿಗಳೇ ಆಗುತ್ತಿದ್ದುದು ಕೃತಯುಗದಲ್ಲಿ, ಪ್ರಬಲಕಾರಣದ ಹೊರತು ಅದು ತಪ್ಪುತ್ತಿರಲಿಲ್ಲ, ಅದರಂತೆ ಬ್ರಹ್ಮಜ್ಞಾನಿಗಳಾದ ಮನುಷ್ಯರ ವಂಶದಲ್ಲೂ ಬ್ರಹ್ಮಜ್ಞಾನಿಗಳೇ ಜನಿಸುವುದು ಕೃತಯುಗದ ವಿಶೇಷ.

ಆಥರ್ವಣೋಪನಿಷತ್ತಿನಲ್ಲಿ ಸೂಚಿತವಾಗಿರುವ ಆಕರಗಳು ಹೀಗಿವೆ.

ಕಠ ಶ್ರುತಿ	ತತ್ತ್ವಸಾರ	ನಾರಾಯಣಸಂಹಿತಾ
ಪರಮಸಂಹಿತಾ	ಪ್ರವೃತ್ತ	ಪಾದ್ಮ
ಬ್ರಹ್ಮಸಾರ	ಬ್ರಹ್ಮಸೂತ್ರ	ಬ್ರಹ್ಮಾಂಡಪುರಾಣ
ಭಗವದ್ಗೀತಾ	ಭಾಗವತ	ಭಾರತ
ಮಹಾವಾರಾಹ	ಮುಕ್ತಿವಿವೇಕ	ಮೂಲಶ್ರುತಿ
ವಾರಾಹ	ವಿಷ್ಣುಸಹಸ್ರನಾಮ	ವ್ಯಾಸಸ್ಮೃತಿ
ಶಬ್ದನಿರ್ಣಯ	ಸ್ಕಾಂದ	ಶ್ರುತಿ

ಅನಿರ್ದಿಷ್ಟ ಆಕರಗಳು (೭)

೬. ಮಾಂಡೂಕೋಪನಿಷದ್ಭಾಷ್ಯ

'ಮಾಂಡೂಕ' ಅಥರ್ವವೇದಕ್ಕೆ ಸೇರಿದ ಉಪನಿಷತ್ತು. ಮಂಡೂಕ(ಕಪ್ಪೆ)ರೂಪಿ ವರುಣನು ಇದಕ್ಕೆ ಋಷಿ. ಆದ್ದರಿಂದ ಇದಕ್ಕೆ 'ಮಾಂಡೂಕೋಪನಿಷತ್' ಎಂದು ಹೆಸರು.

ವಿಶ್ವ, ತೈಜಸ, ಪ್ರಾಜ್ಞ ಮತ್ತು ತುರೀಯ ಎಂಬ ಭಗವದ್ರೂಪಗಳು ಇದರ ಪ್ರತಿಪಾದ್ಯ ದೇವತೆಗಳು :

ಮಂಡೂಕರೂಪಿಣಾ ವರುಣೇನ ಚತೂರೂಪೋ ನಾರಾಯಣಃ ಸ್ತೂಯತೇ ।

'ಧ್ಯಾಯನ್ ನಾರಾಯಣಂ ದೇವಂ ಪ್ರಣವೇನ ಸಮಾಹಿತಃ ।
ಮಂಡೂಕರೂಪೀ ವರುಣಸ್ತುಷ್ಟಾವ ಹರಿಮವ್ಯಯಮ್ ॥' ಇತಿ ಪಾದ್ಮೇ ।

ಓಂಕಾರ ವಾಚ್ಯನಾದವನು ಅಕ್ಷರನಾಮಕ ಪರಮಾತ್ಮ. ಅವನು ಭೂತ, ವರ್ತಮಾನ ಮತ್ತು ಭವಿಷ್ಯತ್ ಎಂಬ ಮೂರು ಕಾಲಗಳಲ್ಲಿಯೂ ಒಂದೇ ತೆರನಾಗಿ ಪರಿಪೂರ್ಣನಾಗಿದ್ದು ''ಓಂ'' ಎನ್ನಿಸಿರುವನು. ಅವನು ಎಲ್ಲೆಡೆಗಳಲ್ಲಿಯೂ ಪರಿಪೂರ್ಣ. ಲಕ್ಷ್ಮೀಬ್ರಹ್ಮಾದಿ ಸಕಲರಿಗೂ ಅವನೇ ಅಂತರ್ನಿಯಾಮಕನಾದ ಸ್ವಾಮಿ. ಆತನ ಅವಸ್ಥಾಪ್ರೇರಕರೂಪಗಳು ವಿಶ್ವ, ತೈಜಸ, ಪ್ರಾಜ್ಞ ಮತ್ತು ತುರೀಯ ಎಂಬುದಾಗಿ ನಾಲ್ಕು ಬಗೆ. ಇವು ಕ್ರಮವಾಗಿ ಜಾಗ್ರತ್, ಸ್ವಪ್ನ, ಸುಷುಪ್ತಿ ಮತ್ತು ಮುಕ್ತಿ ಎಂಬ ನಾಲ್ಕು ಅವಸ್ಥೆಗಳಿಗೆ ನಿಯಾಮಕ. ವಿಶ್ವಮತ್ತು ತೈಜಸಗಳು ಹತ್ತೊಂಬತ್ತು ಮುಖಗಳ ರೂಪಗಳು. ಅವುಗಳ ಮಧ್ಯದ ಮುಖ ಗಜಾಕಾರದ್ದು; ಉಳಿದವುಗಳು ಮಾನವಾಕಾರ. ಇವುಗಳ ಉಪಾಸನೆಯಿಂದಲೇ ವಿನಾಯಕ ಗಜಮುಖನಾದದ್ದು. ಇವುಗಳೊಂದಿಗೆ ಪ್ರಾಜ್ಞರೂಪವನ್ನೂ ಉಪಾಸನೆ ಮಾಡಿ ಇಂದ್ರನು ಇಂದ್ರಪದವಿ ಪಡೆದ; ವಿಶ್ವಾದಿ ನಾಲ್ಕು ರೂಪಗಳ ಉಪಾಸನೆಯಿಂದಾಗಿ ರುದ್ರದೇವರಿಗೆ ರುದ್ರಪದವಿ ಲಭಿಸಿದೆ.

ವಿಶ್ವನು ಬಲಗಣ್ಣಿನಲ್ಲೂ, ತೈಜಸನು ಕಂಠಪ್ರದೇಶದಲ್ಲೂ, ಪ್ರಾಜ್ಞನು ಹೃದಯ-ಕಮಲದ ತುದಿಯಲ್ಲೂ ನೆಲೆಸಿರುವನು. ವಿಶ್ವನು ಜಾಗ್ರದವಸ್ಥೆಯನ್ನಿತ್ತು ಹೊರಗಿನ ಪದಾರ್ಥಗಳ ಅರಿವನ್ನಿತ್ತರೆ, ತೈಜಸನು ಸ್ವಪ್ನವನ್ನು ಕಾಣಿಸುವನು, ಪ್ರಾಜ್ಞನು ಸುಷುಪ್ತಿಯಲ್ಲಿ ಸಾಧಕ ಜೀವನಿಗೆ ಸ್ವರೂಪಸುಖದ ಅನುಭವವನ್ನು ತಂದುಕೊಡುವನು. ತುರೀಯ ಮುಕ್ತಿಯಲ್ಲಿ ಆನಂದಾನುಭವ ನೀಡುವ ರೂಪ.

ಜಗತ್ಸೃಷ್ಟಿಯ ಬಗ್ಗೆ ಅನೇಕರು ತಪ್ಪುಕಲ್ಪನೆ ಹೊಂದಿರುವರು. ಕೆಲವರು ಭಗವಂತನೇ ಜಗತ್ತಾಗಿ ಪರಿಣಾಮ ಹೊಂದಿರುವನು ಎಂದರೆ, ಮತ್ತೆ ಕೆಲವರು ಜಗತ್ತೆಲ್ಲಾ ಸ್ವಪ್ನ ಮಾಯೆಗಳಂತೆ ಭ್ರಮೆ ಎನ್ನುವರು. ಕೆಲವರ ಪ್ರಕಾರ ಇದಕ್ಕೆ ಕಾಲ ಕಾರಣ; ಇನ್ನು ಕೆಲವರ ಪ್ರಕಾರ ರುದ್ರಾದಿ ದೇವತೆಗಳು ಕಾರಣ. ವಾಸ್ತವವಾಗಿ ಭಗವಂತನಾದ ಶ್ರೀಹರಿಯೇ ಇದಕ್ಕೆಲ್ಲ ನಿಮಿತ್ತ ಕಾರಣ.

ಭಗವಂತನು ಜಗತ್ತನ್ನು ಸೃಷ್ಟಿಸಿರುವುದು ತನ್ನ ಭೋಗಕ್ಕಾಗಿ ಎಂದು ಕೆಲವರ ಭಾವನೆ; ಮತ್ತೆ ಕೆಲವರು ತನ್ನ ವಿಲಾಸಕ್ಕಾಗಿ ಅವನು ಜಗತ್ತನ್ನು ಸೃಷ್ಟಿಸಿರುವನು ಎನ್ನುವರು.

ಇಂತಹ ಸೃಷ್ಟ್ಯಾದಿಗಳು ಅವನಿಗೆ ಸಹಜವಾದ ಲೀಲೆ; ಅವನಿಗೆ ಇದರಿಂದ ಏನಾಗಬೇಕಾಗಿದೆ ! ಎಂಬುದು ತತ್ತ್ವ.

ತುರೀಯನು ಮುಕ್ತಿಯಲ್ಲಿ ಆನಂದಪ್ರದ; ಅವನು ದೇಹದಲ್ಲಿ ಮೂಗಿನ ತುದಿಯಿಂದ ಹನ್ನೆರಡು ಅಂಗುಲಗಳ ಮೇಲೆ ಶಿರಸ್ಸಿನ ಮಧ್ಯಭಾಗದಲ್ಲಿ ನೆಲೆಸಿರುವನು. ಅವನು ನಿತ್ಯ ವ್ಯವಹಾರದಲ್ಲಿ ಅಗೋಚರ. ಈ ಸಂಸಾರ ಭಗವದಿಚ್ಛೆಗೆ ಅಧೀನವಾಗಿರುವ ಅವಿದ್ಯೆಯ ಪರಿಣಾಮ. ಆದ್ದರಿಂದಲೇ ಅವನ ಅನುಗ್ರಹದಿಂದಲೇ ಪರಿಹಾರವಾಗುವುದು.

ಓಂಕಾರದಲ್ಲಿನ ಅ, ಉ, ಮ ಎಂಬ ಮೂರು ಅಕ್ಷರಗಳಿಂದ ವಿಶ್ವ, ತೈಜಸ, ಪ್ರಾಜ್ಞರು ಪ್ರತಿಪಾದ್ಯರಾಗಿದ್ದರೆ, ಅದರಲ್ಲಿನ ನಾದವೆಂಬ ಅಕ್ಷರದಿಂದ ತುರೀಯನು ಪ್ರತಿಪಾದ್ಯ-ನಾಗಿದ್ದಾನೆ. ಹೀಗೆ ಪ್ರಣವವನ್ನು ಉಪಾಸನೆ ಮಾಡುವವನಿಗೆ ಎಂದೂ ಸಂಸಾರದ ಭೀತಿ ಇರುವುದಿಲ್ಲ. ಓಂಕಾರವನ್ನು ಹೀಗೆ ಸಮಗ್ರ ಅರಿತವನೇ ಮುನಿ, ಸ್ಥಿತಪ್ರಜ್ಞ.

ದೇಹದಲ್ಲಿ ವಿಶ್ವಾದಿರೂಪಗಳಿಂದ ಶ್ರೀಹರಿಯು ನೆಲೆಸಿರುವನು. ವೈಶ್ವಾನರನು ಜಾಗ್ರದವಸ್ಥಾಪ್ರೇರಕ; ಅವನಿಗೆ ಹತ್ತೊಂಭತ್ತು ಮುಖಗಳು; ಮಧ್ಯಮಮುಖ ಗಜಾಕಾರದ್ದು; ಉಳಿದವುಗಳು ಪುರುಷಾಕಾರ. ಅದರಂತೆ ತೈಜಸರೂಪದ ಶ್ರೀಹರಿಯ ರೂಪವೂ ಉಂಟು. ವಿಶ್ವ,ತೈಜಸ ರೂಪಗಳ ಧ್ಯಾನದಿಂದ ಗಣೇಶ ಗಜಮುಖನಾದ; ನಾಲ್ಕುರೂಪಗಳ ಧ್ಯಾನದಿಂದ ರುದ್ರದೇವರಿಗೆ ರುದ್ರಪದವಿ ಲಭಿಸಿತು ಮೊದಲಾದ ಅನೇಕ ಅಪೂರ್ವವಿವರಗಳನ್ನು ಮಹಾಯೋಗ ಎಂಬ ಗ್ರಂಥವನ್ನು ಉಲ್ಲೇಖಿಸಿ ತಿಳಿಸಿರುವರು :

ಚತುರ್ಧಾಽವಸ್ಥಿತೋ ದೇಹೇ ಪರಮಾತ್ಮಾ ಸನಾತನಃ ।
ವೈಶ್ವಾನರೋ ಜಾಗರಿತಸ್ಥಾನಗೋ ಗಜವಕ್ತ್ರಕಃ ॥
ನಿರ್ಮಾತಾ ಬಾಹ್ಯಸಂವಿತ್ತೇರ್ಜೀವಾನಾಂ ತದಗೋಚರಃ ।
ಅಷ್ಟಾದಶಮುಖಾನ್ಯಸ್ಯ ಪುಮಾಕಾರಾಣಿ ಸರ್ವಶಃ ॥
ಮಧ್ಯಮಂ ತು ಗಜಾಕಾರಂ ಚತುರ್ಬಾಹುಃ ಪರಃ ಪುಮಾನ್ ।
ಪಾದೌ ಹಸ್ತಿಕರೋ ಹಸ್ತಾ ಇತಿ ಸಪ್ತಾಂಗ ಈರಿತಃ ।
ಸ್ಥೂಲಾನ್ ಭೋಗಾನಿಂದ್ರಿಯೈಃ ಸ ಶುಭಾನ್ ಭುಂಕ್ತೇ ನ ಚಾಶುಭಾನ್ ॥
ವಿಶ್ವಂ ಸ್ಥೂಲಂ ಸಮುದ್ದಿಷ್ಟಂ ಸರ್ವಗಮ್ಯತ್ವಹೇತುತಃ ।
ತತ್ಸಂಬಂಧೀ ನರೋಽನಾಶಾದ್ ವೈಶ್ವಾನರ ಉದಾಹೃತಃ ॥
ವಿನಾಯಕಸ್ತು ವಿಶ್ವಸ್ಯ ಧ್ಯಾನಾದ್ವೈದ್ಗಜವಕ್ತ್ರತಾಮ್ ।
ತಥೈವ ತೈಜಸಧ್ಯಾನಾತ್ ತ್ರಿಧ್ಯಾನಾದಿಂದ್ರ ಇಂದ್ರತಾಮ್ ॥
ಚತುರ್ಧ್ಯಾನಾಚ್ಚ ರುದ್ರತ್ವಂ ರುದ್ರ ಆಪ ಜನಾರ್ದನಾತ್ ।
ಏವಂಭೂತಗುಣೋ ವಿಷ್ಣುಶ್ಚತುರಾತ್ಮಾ ಪರಾತ್ಪರಃ ॥

ಸೃಷ್ಟಿಯ ಬಗ್ಗೆ ವಿವಿಧಬಗೆಯ ವಿಕಲ್ಪಗಳನ್ನು ತಿಳಿಸುವ ಉಪನಿಷದ್ವಾಕ್ಯಗಳಿಗೆ ವಿವರಣರೂಪವಾದ ಹರಿವಂಶದ ವಚನಗಳನ್ನು ಉಲ್ಲೇಖಿಸಿರುವರು:

ತಾಂ ಸೃಷ್ಟಿಂ ಬಹುಧಾ ಪ್ರಾಹುರ್ಜ್ಞಾನಿನೋಽಜ್ಞಾನಿನಸ್ತಥಾ ।
ವಿಷ್ಣುರ್ವಿಕೃತಿಮಾಯಾತಿ ಮಹದಾದಿಸ್ವರೂಪಿಣೀಮ್ ॥
ತತ್ತದ್ದ್ವಿವಿಧಭೂತಿಸ್ತು ಸೃಷ್ಟಿಃ ಪ್ರೋಕ್ತಾ ಹ್ಯಪಂಡಿತೈಃ ।
ಸ್ವಪ್ನಮಾಯಾಸ್ವರೂಪಾಂ ಚ ಕೇಚಿದಜ್ಞಾ ಜನಾ ವಿದುಃ ॥
ಅವಿಕಾರಸ್ಯ ಚಿನ್ಮಾತ್ರಸ್ವೇಚ್ಛಯೈವಾಖಿಲಂ ಜಗತ್ ।
ಉತ್ಪದ್ಯತ ಇತಿ ಪ್ರಾಜ್ಞಾಃ ಪ್ರಾಹುರ್ಬ್ರಹ್ಮಾದಯೋಽಖಿಲಾಃ ॥
ಪೂರ್ಣಶಕ್ತೇಃ ಕುತೋ ಮಾಯಾ ಸಾರ್ವಜ್ಞಾತ್ ಸ್ವಪ್ನವತ್ ಕುತಃ ।
ಸರ್ವದೋಷವ್ಯತೀತಸ್ಯ ವಿಕಾರಃ ಕುತ ಇಷ್ಯತೇ ॥
ತಸ್ಮಾದೇವಾವಿಕಾರಸ್ಯ ವಿಷ್ಣೋರಿಚ್ಛಾವಶಾದಿದಮ್ ।
ಯಥಾರ್ಥಮೇವ ಸಂಭೂತಮಿತಿ ವೇದವಚೋಽಖಿಲಮ್ ॥
ಕೇಚಿತ್ಕಾಲತ ಏವೈತಾಂ ಸೃಷ್ಟಿಮಾಹುರಕೋವಿದಾಃ ।
ಕೇಚಿದ್ರುದ್ರಾದ್ಬ್ರಹ್ಮಣಶ್ಚ ಪ್ರಧಾನಾದಿತಿ ಚಾಪರೇ ॥
ವಿಮೂಢಾಃ ಸರ್ವ ಏವೈತೇ ಯತೋ ನಾರಾಯಣಃ ಪರಃ ।
ಸರ್ವಕರ್ತಾ ಸರ್ವಶಕ್ತಿರೇಕ ಏವ ನ ಚಾಪರಃ ॥
ಪ್ರಧಾನಕಾಲಬ್ರಹ್ಮೇಶಮುಖಾಃ ಸರ್ವೇಽಪಿ ತದ್ವಶಾಃ ।
ತಸ್ಯಾಪಿ ವಿಷ್ಣೋಃ ಸೃಷ್ಟಿಂ ತು ಕೇಚಿದಾಹುರನೈಪುಣಾಃ ॥
ಅತೃಪ್ತಸ್ಯೈವ ಭೋಗಾರ್ಥಂ ಕ್ರೀಡಾರ್ಥಂ ತು ವಿಪಶ್ಚಿತಃ ।
ಸಾ ಚ ಕ್ರೀಡಾ ಸ್ವಭಾವೋಽಸ್ಯ ಕುತೋಽತೃಪ್ತ್ಯಾ ಸ್ಪೃಹಾ ವಿಭೋಃ ॥

ಮಾಂಡೂಕೋಪನಿಷತ್ತಿನಲ್ಲಿನ ಅನೇಕ ಮಂತ್ರಗಳನ್ನು ವರುಣ ಕಂಡ ಬ್ರಹ್ಮದೃಷ್ಟವಾದ ಶ್ರುತಿವಾಕ್ಯಗಳು ಎಂಬುದಾಗಿ ಆಚಾರ್ಯರು ಸ್ಪಷ್ಟಪಡಿಸಿರುವರು :

ಪ್ರಮಾಣಸ್ಯ ಪ್ರಮಾಣಂ ಚ ಬಲವದ್ವಿದ್ಯತೇ ಮುನೇ ।
ಬ್ರಹ್ಮದೃಷ್ಟಾನ್ ಯತೋ ಮಂತ್ರಾನ್ ಪ್ರಮಾಣಂ ಸಲಿಲೇಶ್ವರಃ ।
ಅತ್ರ ಶ್ಲೋಕಾ ಭವಂತೀತಿ ಚಕಾರೈವ ಪೃಥಕ್ ಪೃಥಕ್ ॥

- ಎಂದು ಗರುಡಪುರಾಣದ ಆಧಾರವನ್ನಿತ್ತು ತೋರಿಸಿರುವರು.

ಮಾಂಡೂಕೋಪನಿಷತ್ತಿನ ಈ ಮಂತ್ರಗಳು ಗೌಡಪಾದರ ಕಾರಿಕೆಗಳು ಎಂದು ಕೆಲವು ಆಧುನಿಕರ ವಾದ. ಇವರ ವಾದಕ್ಕೆ ಆಚಾರ್ಯರ ಮಾತುಗಳು ಉತ್ತರರೂಪವಾಗಿವೆ ಎಂಬುದು ಗಮನಾರ್ಹ. ಇವುಗಳಲ್ಲಿನ 'ಪ್ರಪಂಚೋ ಯದಿ ವಿದ್ಯೇತ ನಿವರ್ತೇತ ನ ಸಂಶಯಃ' ಎಂಬ ಮಾತನ್ನು ಶಂಕರಾಚಾರ್ಯರೇ ತಮ್ಮ 'ವಿವೇಕಚೂಡಾಮಣಿ' ಯಲ್ಲಿ ಶ್ರುತಿವಾಕ್ಯ ಎಂಬುದಾಗಿಯೇ ಉದಾಹರಿಸಿರುವರು :

ಪ್ರಪಂಚೋ ಯದಿ ವಿದ್ಯೇತ ನಿವರ್ತೇತ ನ ಸಂಶಯಃ ।
ಇತಿ ಬ್ರೂತೇ ಶ್ರುತಿಃ ಸಾಕ್ಷಾತ್ ಸುಷುಪ್ತಾವನುಭೂಯತೇ ॥ ಶ್ಲೋ. ೪೬

'ದೇವಸ್ಯೈಷ ಸ್ವಭಾವೋಽಯಂ ಆಪ್ತಕಾಮಸ್ಯ ಕಾ ಸ್ಪೃಹಾ' ಎಂಬ ವಾಕ್ಯವನ್ನು ಎಲ್ಲ ಆಚಾರ್ಯರೂ ಶ್ರುತಿವಾಕ್ಯವೆಂದೇ ಉದಾಹರಿಸಿರುವುದನ್ನು ಇಲ್ಲಿ ಗಮನಿಸಬಹುದು. ಎಂದರೆ ಮೂಲತಃ ಉಪನಿಷತ್ತಿನಲ್ಲಿನ ಬ್ರಹ್ಮದೃಷ್ಟ ಮಂತ್ರಗಳನ್ನೇ ಗೌಡಪಾದರು ತಮ್ಮ ಕೃತಿಯಲ್ಲಿ ಉಪಯೋಗಿಸಿಕೊಂಡರು; ಅದನ್ನು ಕೆಲವರು ಅವರ ಕಾರಿಕೆಗಳೆಂದೇ ಭ್ರಮಿಸಿದರು ಎಂಬುದು ಸ್ಪಷ್ಟ. ಈ ಶ್ರುತಿವಾಕ್ಯವನ್ನು ಅನುವ್ಯಾಖ್ಯಾನ, ಭಾಗವತತಾತ್ಪರ್ಯ, ವಿಷ್ಣುತತ್ತ್ವವಿನಿರ್ಣಯ, ಛಾಂದೋಗ್ಯೋಪನಿಷದ್ಭಾಷ್ಯ ಮತ್ತು ಗೀತಾತಾತ್ಪರ್ಯಗಳಲ್ಲೂ ವಿಶೇಷರೀತಿಯಲ್ಲಿ ವ್ಯಾಖ್ಯಾನಿಸಿ ಇದು ಮೂಲತಃ ಭೇದಬೋಧಕ ಎಂಬುದನ್ನು ಸ್ಫುಟ ಪಡಿಸಿರುವರು.

ಹೀಗೆ ಮಧ್ವಭಾಷ್ಯವು ಉಪನಿಷತ್ಸ್ವರೂಪ ನಿರ್ಣಯದ ವಿಷಯದಲ್ಲೂ ಅಪೂರ್ವ ರೀತಿಯಲ್ಲಿ ನೆರವಾಗುವುದು.

ಪರಮಾತ್ಮನ ರೂಪಗಳಲ್ಲಿ ಸಾಮರ್ಥ್ಯವ್ಯತ್ಯಾಸದೃಷ್ಟಿಯಿಂದ ಮೊದಲನೆಯದು ಅನಂತರದ್ದು ಎಂಬ ವಿಭಾಗ ಸರ್ವಥಾ ಇಲ್ಲವೇ ಇಲ್ಲ; ಕಾಲಕ್ರಮದಲ್ಲಿ ಮಾತ್ರ ಆ ವ್ಯವಹಾರ ಎಂಬ ವಿಶೇಷಾಂಶವನ್ನು ಕೊನೆಯಲ್ಲಿ ತಿಳಿಸಿರುವರು :

ಪರತ್ವಮಪರತ್ವಂ ಚ ವಿಷ್ಣೋರೇಕಸ್ಯ ವೈ ಯದಾ ।
ಶ್ರೂಯತೇ ನ ತು ಸಾಮರ್ಥ್ಯಭೇದಸ್ತತ್ರ ಕಥಂಚನ ॥
ಅವತಾರಸ್ಯ ಪೂರ್ವತ್ವಾತ್ ಪೌರ್ವಾಪರ್ಯಮುದಾಹೃತಮ್ ॥'

ಇತಿ ಬ್ರಹ್ಮತರ್ಕೇ

ಮಾಂಡೂಕೋಪನಿಷದ್ಭಾಷ್ಯದಲ್ಲಿ ಉದಾಹೃತವಾಗಿರುವ ಪ್ರಮಾಣಗ್ರಂಥಗಳು ಹೀಗಿವೆ.

ಆತ್ಮಸಂಹಿತಾ	ಕೌಷಾರವಶ್ರುತಿ	ಗಾರುಡ
ನೈರ್ಗುಣ್ಯ	ಪ್ರಕಟಶ್ರುತಿ	ಪ್ರಕಾಶಿಕಾ
ಪ್ರತ್ಯಯ	ಪ್ರತ್ಯಾಹಾರ	ಪಾದ್ಮ
ಬೃಹತ್ಸಂಹಿತಾ	ಬ್ರಹ್ಮತರ್ಕ	ಬ್ರಹ್ಮಾಂಡ
ಭಾರತ	ಮಹೋಪನಿಷತ್ತು	ಮಹಾಯೋಗ
ಮಾರ್ಕಂಡೇಯ	ಮಾಹಾತ್ಮ್ಯ	ವಾರಾಹ
ಶ್ರುತಿಃ	ಸಂಕಲ್ಪ	ಹರಿವಂಶ

ಅನಿರ್ದಿಷ್ಟ ಆಕರಗಳು (೪)

೭. ತೈತ್ತಿರಿಯೋಪನಿಷದ್ಭಾಷ್ಯ

ತೈತ್ತಿರಿಯೋಪನಿಷತ್ತು ಕೃಷ್ಣ ಯಜುರ್ವೇದದ ತೈತ್ತಿರೀಯಾರಣ್ಯಕಕ್ಕೆ ಸೇರಿದೆ. ವಿಷ್ಣು ಬ್ರಹ್ಮ ವರುಣ ಮತ್ತು ಭೃಗು ಇದರ ಋಷಿಗಳು. ಸೂರ್ಯಮಂಡಲಸ್ಥನಾದ ಶ್ರೀಹರಿಯ ನಾರಾಯಣಾದಿ ಪಂಚರೂಪಗಳು ಇದರ ಪ್ರತಿಪಾದ್ಯ ದೇವತೆಗಳು.

ಇದರಲ್ಲಿ ಶಿಕ್ಷಾವಲ್ಲಿ, ಬ್ರಹ್ಮವಲ್ಲಿ ಮತ್ತು ಭೃಗುವಲ್ಲಿ ಎಂಬ ಮೂರು ಅಧ್ಯಾಯಗಳಿವೆ. ಶಿಕ್ಷಾವಲ್ಲಿಯು ಶಾಂತಿಮಂತ್ರದಿಂದ ಪ್ರಾರಂಭವಾಗಿ ವರ್ಣಾದಿಗಳನ್ನೂ, ಲೋಕ ಮೊದಲಾದ ಐದು ಅಧಿಕರಣಗಳನ್ನೂ ನಿರೂಪಿಸುತ್ತವೆ. ಸಾಧಕನು ತತ್ತ್ವಜ್ಞಾನ-ಪ್ರಾಪ್ತಿಗಾಗಿ ಕೈಗೊಳ್ಳಬೇಕಾದ ಮುಖ್ಯಸಾಧನವಾದ ಸ್ವಾಧ್ಯಾಯಪ್ರವಚನಗಳ ಸ್ವರೂಪ ಇಲ್ಲಿ ಹೃದಯಂಗಮವಾಗಿ ನಿರೂಪಿತವಾಗಿವೆ. ಅಧ್ಯಯನ ಪೂರೈಸಿದ ಶಿಷ್ಯನಿಗೆ 'ಸತ್ಯಂ ವದ' 'ಧರ್ಮಂ ಚರ' ಮೊದಲಾಗಿ ನೀಡುವ ಭವ್ಯ ಉಪದೇಶವಂತು ವಿಶ್ವವಿಖ್ಯಾತ.

ಬ್ರಹ್ಮವಲ್ಲಿಯು ಬ್ರಹ್ಮಜ್ಞಾನಿಯು ತನ್ನ ಹೃದಯದಲ್ಲಿ ನೆಲೆಸಿರುವ ಪರಬ್ರಹ್ಮನನ್ನು ಆರಾಧಿಸಿ ಮುಕ್ತಿಯನ್ನು ಪಡೆಯುವ ಬಗೆಯನ್ನು ನಿರೂಪಿಸುವುದು. ಭಗವಂತನು ಜಗತ್ತಿನ ಸೃಷ್ಟಿಯನ್ನು ಮಾಡಿ ಪ್ರತಿಯೊಂದು ದೇಹದೊಳಗೆ ಅನ್ನಮಯ, ಪ್ರಾಣಮಯ, ಮನೋಮಯ, ವಿಜ್ಞಾನಮಯ ಮತ್ತು ಆನಂದಮಯ ಎನ್ನಿಸುವ ನಾರಾಯಣಾದಿ ಪಂಚರೂಪಗಳಿಂದ ನೆಲೆಸಿರುವವನು. ಅವನ ಆ ರೂಪಗಳನ್ನು ಅರಿತು ಆರಾಧಿಸಿದವನು ಮಾತ್ರವೇ ಮುಕ್ತಿಯನ್ನು ಪಡೆಯಬಹುದು. ಮುಕ್ತಿಯಲ್ಲಿ ಮಾನುಷಾನಂದದಿಂದ ಪ್ರಾರಂಭಿಸಿ ಚತುರ್ಮುಖ ಬ್ರಹ್ಮದೇವರ ಆನಂದದವರೆಗೆ ಎಲ್ಲವೂ ಯಥಾ ಯೋಗ್ಯವಾಗಿ ಪೂರ್ಣ. ಆದರೆ ಅವರಲ್ಲಿ ತಾರತಮ್ಯ ಇದ್ದೇ ಇರುವುದು. ಇನ್ನು ಪರಬ್ರಹ್ಮನ ಆನಂದವಂತೂ ಬಣ್ಣಿಸಲು ಅಸಾಧ್ಯ; ಮುಕ್ತಿಗೆ ಹೋದವನಿಗೆ ದುಃಖಗಳ ಪ್ರಸಕ್ತಿಯೇ ಇರುವುದಿಲ್ಲ.

ಭೃಗುವಲ್ಲಿಯಲ್ಲಿ ಭೃಗುಮುನಿಯು ತನ್ನ ತಂದೆಯಾದ ವರುಣನ ಬಳಿಗೆ ಮತ್ತೆ ಮತ್ತೆ ತೆರಳಿ ಭಗವಂತನ ಸ್ವರೂಪವನ್ನು ತಿಳಿಯಲು ಮಾಡುವ ಪ್ರಯತ್ನದ ವಿವರಣೆ ಇದೆ. ಅವರು ಅನ್ನ, ಪ್ರಾಣ, ಚಕ್ಷುಸ್ಸು, ಶ್ರೋತ್ರ, ಮನಸ್ಸು ಮತ್ತು ವಾಕ್ ಇವುಗಳಲ್ಲಿ ಬ್ರಹ್ಮನನ್ನು ಆರಾಧಿಸಬೇಕು ಎಂಬುದಾಗಿ ಉಪದೇಶಿಸಿ ಸಕಲ ಪ್ರಾಣಿಗಳ ಹುಟ್ಟು, ಬದುಕು, ಮರಣ ಮತ್ತು ಮೋಕ್ಷಗಳಿಗೆ ಕಾರಣವಾದ ಪರವಸ್ತುವೇ ಭಗವಂತ ಎಂಬುದಾಗಿ ಅವನ ಲಕ್ಷಣವನ್ನು ತಿಳಿಸುತ್ತಾರೆ. ಅನಂತರ ಭೃಗುವು ಮತ್ತೆ ಮತ್ತೆ ತಪಸ್ಸು ಮಾಡಿ ಅನ್ನ, ತಪಸ್ಸು, ಮನಸ್ಸು, ವಿಜ್ಞಾನ ಮತ್ತು ಆನಂದ ಶಬ್ದವಾಚ್ಯವನ್ನಾಗಿ ಭಗವತ್ ತತ್ತ್ವವನ್ನು ಸಾಕ್ಷಾತ್ಕರಿಸಿಕೊಳ್ಳುವನು. ಬ್ರಹ್ಮವಿದ್ಯೆಯನ್ನು ಅರಿಯಲು ಬಯಸಿ ಬರುವ ಯೋಗ್ಯ ಜಿಜ್ಞಾಸುವನ್ನು ತಿರಸ್ಕರಿಸಬಾರದೆಂಬ ಮುಖ್ಯ ಸಂದೇಶವು ಈ ಭಾಗದಲ್ಲಿದೆ.

ವೇದಗಳಿಗೆ ಅಧಿಪತಿಯು ವಿಶ್ವರೂಪನಾದ ಶ್ರೀಹರಿ ಎಂಬುದಾಗಿ ಉಪಾಸನೆ ಮಾಡುವವನು ಮೇಧಾವಿಯೂ ತತ್ತ್ವಜ್ಞಾನಿಯೂ ಆಗಿ ಕ್ಷಿಪ್ರದಲ್ಲೇ ಮುಕ್ತನಾಗುವನು :

'ಯೋ ವಿಶ್ವರೂಪೋ ಭಗವಾಂಶ್ಛಂದಸಾಮಧಿಪೋ ಹರಿಃ ।
ಛಾಂದೋಭ್ಯೋಽಮೃತರೂಪೇಭ್ಯಃ ಸುವ್ಯಕ್ತಸ್ತದುಪಾಸನಾತ್ ॥
ಮೇಧಾವೀ ತತ್ತ್ವವಿಜ್ಞಾನೀ ಭೂತ್ವಾಕ್ಷಿಪ್ರಂ ವಿಮುಚ್ಯತೇ ।'

ಸಕಲಕರ್ಮಗಳನ್ನು ಮಾಡುವಾಗಲೂ ಸ್ವಾಧ್ಯಾಯ ಪ್ರವಚನಗಳು ವಿಶೇಷ ಕರ್ತವ್ಯ ಎಂಬುದನ್ನು ಸೂಚಿಸಲು ಸ್ವಾಧ್ಯಾಯಪ್ರವಚನೇ ಚ ಎಂಬುದಾಗಿ ತಿಳಿಸಿರುವರು:

ಸರ್ವಕರ್ಮಕೃತಿಕಾಲೇಷ್ವಪಿ ಸ್ವಾಧ್ಯಾಯಪ್ರವಚನಯೋಃ ಕರ್ತವ್ಯತ್ವಾತ್ ತಯೋಃ ಸರ್ವತ್ರಾನುಷಂಗಃ ।

ಅದರಂತೆ ಮಂತ್ರ ಮಂತ್ರಾರ್ಥ ಮೊದಲಾದವುಗಳನ್ನು ಸಕಲ ಕರ್ಮಗಳಲ್ಲೂ ಚಿಂತಿಸಬೇಕು. ದೇವತೆಗಳು ಮನುಷ್ಯರಾಗಿ ಅವತರಿಸಿದಾಗ ಮನುಷ್ಯರಂತೆ ವರ್ತಿಸುವರು. ತಮ್ಮ ವಿಶೇಷಸಾಮರ್ಥ್ಯವನ್ನು ತೋರಗೊಡರು. ಯಥಾರ್ಥಜ್ಞಾನಪೂರ್ವಕವಾಗಿ ವಿಷ್ಣುತತ್ತ್ವವನ್ನು ನಿರೂಪಿಸುವವನು ಕೃತಕೃತ್ಯ. ಬ್ರಾಹ್ಮಣನ ಮುಖ್ಯಲಕ್ಷಣ ಜಪ ಮೊದಲಾದ ಅನೇಕ ವಿವರಗಳನ್ನು ಶಿಕ್ಷಾವಲ್ಲಿಯಲ್ಲಿ ತಿಳಿಸಿರುವರು:

ಋತಂ ಯಥಾರ್ಥವಿಜ್ಞಾನಂ ಸತ್ಯಂ ತತ್ಪೂರ್ವಿಕಾ ಕೃತಿಃ ।
ಧ್ಯಾನಸತ್ಯೇ ಪೂಜ್ಯಪೂಜಾ ತಪ ಇತ್ಯಭಿಧೀಯತೇ ॥

ಇತಿ ಶಬ್ದನಿರ್ಣಯೇ ।

'ಮಂತ್ರೋ ಮಂತ್ರಾರ್ಥವಚನಮನ್ಯಸ್ಯ ಸ್ವಾತ್ಮನೋಽಪಿ ವಾ ।
ಸರ್ವಕರ್ಮಸು ಕರ್ತವ್ಯೌ ಸರ್ವಕರ್ಮಾತ್ಮಕೌ ತತಃ ॥'

ಇತಿ ಕರ್ಮತತ್ತ್ವೇ ।

'ಮಾನುಷಂ ಮಾನುಷೋ ಧರ್ಮೋ ದೇವಾ ಅಪಿ ಹಿ ಮಾನುಷೇ ।
ಮನುಷ್ಯವತ್ ಪ್ರವರ್ತಂತೇ ನೈವೈಶ್ವರ್ಯಪ್ರಕಾಶಿನಃ ॥'

'ಸತ್ಯೇ ತಪಸಿ ವಾ ಚೀರ್ಣೇ ಸರ್ವಕರ್ಮ ಕೃತಂ ಭವೇತ್ ।
ಸ್ವಾಧ್ಯಾಯೇ ಚ ಪ್ರವಚನೇ ಹ್ಯಂತರ್ಭಾವೋ ವಿಶೇಷತಃ ॥'

'ಸಮ್ಯಗ್ಜ್ಞಾತ್ವಾ ತು ಯೋ ವಿಷ್ಣುಂ ವ್ಯಾಖ್ಯಾಯೀತ ಜಪೇತ ಚ ।
ನ ತಸ್ಯ ಕಿಂಚಿದಕೃತಂ ಕರ್ತವ್ಯಂ ಮುಚ್ಯತೇ ಚ ಸಃ ॥'

ಇತಿ ಕರ್ಮತತ್ತ್ವೇ ।

ಬ್ರಹ್ಮವಲ್ಲಿಯ ಭಾಷ್ಯದಲ್ಲಿ ಭೇದಗಳ ಪರಮಪ್ರಾಮಾಣ್ಯವನ್ನು ತಿಳಿಸುವ ಪರಿ

ಅಮೋಘವಾದುದು. ಅದರಂತೆ ಶ್ರೋತ್ರಿಯ, ಅಕಾಮಹತ ಮೊದಲಾದ ಶಬ್ದಗಳ ಅರ್ಥವಿವರಣೆಯೂ ಗಮನಾರ್ಹ :

'ಸಾವಿದ್ಯಮಾನಂ ಬ್ರುವತೇ ವೇದಾ ಧ್ಯಾತುಂ ನ ವೈದಿಕಾಃ ।
ಅವಿದ್ಯಮಾನಂ ಧ್ಯಾಯಂತೋ ಯಾಂತಿ ಸರ್ವೇಽಧರಂ ತಮಃ ।
ತಸ್ಮಾತ್ ಸತ್ಯಾರ್ಥತಾಂ ಬ್ರೂಯಾದ್ವೇದಾನಾಮಪಿ ಸರ್ವಶಃ ।
ಯ ಏವಂ ವೇದ ಸ ಜ್ಞಾನೀ ಜ್ಞಾನವಾನ್ ನಾನ್ಯಥಾ ಭವೇತ್ ॥'

ಇತಿ ವೇದಾರ್ಥವಿವೇಕೇ ।

'ಯಸ್ಯ ಕಾಮಾಸ್ತು ಸತ್ಯಾಃ ಸ್ಯುಃ ಸ ಹಿ ಕಾಮೈರ್ನ ಹನ್ಯತೇ ।
ನ ಹ್ಯಕಾಮಃ ಕ್ವಚಿತ್ ಕಶ್ಚಿದ್ದೃಶ್ಯತೇ ಶ್ರೂಯತೇಽಪಿ ಚ ॥' ಇತಿ ಬ್ರಹ್ಮಾಂಡೇ ।

ಪ್ರಾಸಂಗಿಕವಾಗಿ ಭೇದದ ಧರ್ಮಿಸ್ವರೂಪತ್ವವನ್ನು ನಿರೂಪಿಸಿರುವುದು ಇಲ್ಲಿಯ ಭಾಷ್ಯದ ವಿಶೇಷ. ತತ್ತ್ವನಿರ್ಣಯ ಎಂಬ ಗ್ರಂಥವನ್ನು ಉದಾಹರಿಸಿ ತಿಳಿಸಿರುವ ಈ ವಿಷಯ ವಿಷ್ಣುತತ್ತ್ವನಿರ್ಣಯ ಗ್ರಂಥದಲ್ಲಿನ ಪದಾರ್ಥಸ್ವರೂಪತ್ವಾತ್ ಭೇದಸ್ಯ ಎಂಬ ವಾಕ್ಯಕ್ಕೆ ವಿವರಣೆಯಂತಿರುವುದು ಗಮನಾರ್ಹ.

ಗುರುಕುಲವಾಸವನ್ನು ಬಯಸಿ ಬರುವ ವಿದ್ಯಾರ್ಥಿಯನ್ನು ನಿರಾಕರಿಸಕೂಡದು ಎಂಬ ಇಲ್ಲಿಯ ಸಂದೇಶ ವಿದ್ವಾಂಸರಿಗೆ ನೀಡಿದ ಶ್ರೇಷ್ಠ ಉಪದೇಶವಾಗಿದೆ:

'.............................. ವಿದ್ಯಾರ್ಥೀ ವಸತೀಚ್ಛಯಾ ।
ಆಗತಂ ನೇತಿ ನ ಬ್ರೂಯಾತ್ ತದೇತದ್ವಿದುಷೋ ವ್ರತಮ್ ॥

ಮನುಷ್ಯರೂ, ದೇವತೆಗಳೂ ಅದರಲ್ಲೂ ಶಿವ ಬ್ರಹ್ಮ ಮೊದಲಾದವರು ಶ್ರೀಹರಿಯನ್ನು ದರ್ಶನ ಮಾಡುವ ರೀತಿಯನ್ನು ವಿವರಿಸುವ ಕೆಲವು ಶ್ಲೋಕಗಳು ಹೀಗಿವೆ :

ವಿದ್ಯುದ್ವನ್ಮಾನುಷಾ ವಿದ್ಯುಃ ಸೂರ್ಯಮಂಡಲವತ್ ಸುರಾಃ ।
ಪ್ರತಿಬಿಂಬವಚ್ಚ ಗಿರಿಶೋ ಬ್ರಹ್ಮೈನಂ ಪಶ್ಯತಿ ಸ್ಫುಟಮ್ ॥
ಬ್ರಹ್ಮಾ ಹಿ ಸ್ಥಿರಚಿದ್ರೂಪೋ ಬಹುಲಾತ್ಮಾ ವಿಶೇಷತಃ ।
ಅನ್ಯೇ ಕ್ರಮಾದಬಹುಲಾಸ್ತಥಾ ಚಂಚಲಚೇತಸಃ ॥
ತಸ್ಮಾದ್ ಸಮ್ಯಕ್ ನ ಪಶ್ಯಂತಿ ಹರಿಂ ಬ್ರಹ್ಮಾ ತು ಪಶ್ಯತಿ ॥''

ಭಾಷ್ಯದ ಕೊನೆಯಲ್ಲಿ 'ಯಸ್ಯ ತ್ರೀಣ್ಯುದಿತಾನಿ' ಎಂಬುದಾಗಿ ತಮ್ಮ ಸ್ವರೂಪ ಹಾಗೂ ಅವತಾರಗಳನ್ನು ತಿಳಿಸಿರುವರು. ಅದಕ್ಕೆ ಆಧಾರವಾಗಿ ಅನೇಕ ಪ್ರಮಾಣಗಳನ್ನು ನೀಡಿರುವರು. ಅವುಗಳನ್ನು ತ್ರಿವಿಕ್ರಮಪಂಡಿತಾಚಾರ್ಯರು ತಮ್ಮ ತತ್ತ್ವಪ್ರದೀಪ ಕೃತಿಯಲ್ಲಿ ಸದ್ಭಾವ, ಹಾಗೂ ಭಾವವೃತ್ತ ಎಂಬ ಗ್ರಂಥಗಳ ವಚನಗಳು ಎಂದು ತಿಳಿಸಿರುವರು.

ತೈತ್ತಿರೀಯೋಪನಿಷತ್ತಿನಲ್ಲಿ ಉದಾಹೃತವಾಗಿರುವ ಪ್ರಮಾಣಗ್ರಂಥಗಳ ವಿವರ ಹೀಗಿದೆ :

ಕರ್ಮತತ್ತ್ವ	ತತ್ತ್ವನಿರ್ಣಯ	ತತ್ತ್ವಸಂಹಿತಾ
ಪಾದ್ಮ	ಪ್ರಕ್ಲೃಪ್ತ	ಬ್ರಹ್ಮಸಾರ
ಬ್ರಹ್ಮಸೂತ್ರ	ಬ್ರಹ್ಮಾಂಡ	ಭಾಗವತ
ಭಾರತ	ಯಜುರ್ವಿವೇಕ	ಯಜುಃಸಂಹಿತಾ
ವೇದಾರ್ಥವಿವೇಕ	ವ್ಯಾಹೃತಿತತ್ತ್ವ	ವ್ಯಾಹೃತಿಸಾರ
ಶಬ್ದನಿರ್ಣಯ	ಶ್ರುತಿ	ಹರಿವಂಶ
ಅನಿರ್ದಿಷ್ಟ ಆಕರಗಳು (೫)		

೮. ಐತರೇಯೋಪನಿಷದ್ಭಾಷ್ಯ

ದಶೋಪನಿಷತ್ತುಗಳಲ್ಲಿ ಋಗ್ವೇದಕ್ಕೆ ಸೇರಿದ ಏಕಮಾತ್ರ ಉಪನಿಷತ್ತು ಐತರೇಯೋಪನಿಷತ್ತು. ಮಹೈತರೇಯೋಪನಿಷತ್, ಬಹ್ವೃಚೋಪನಿಷತ್, ಮಹಾಭೂತಿಶ್ರುತಿ ಎಂಬುದಾಗಿಯೂ ಇದು ಪ್ರಸಿದ್ಧ. ಆಚಾರ್ಯ ಶ್ರೀಮಧ್ವರಿಗೆ ಅತಿಪ್ರಿಯವಾದ ಉಪನಿಷತ್ತು ಎಂಬುದು ಇದರ ಮತ್ತೊಂದು ಮಹತ್ವ. ಅವರು ಅನೇಕ ಸಲ ಐತರೇಯಶ್ರುತಿಯ ಪ್ರವಚನ ನೀಡಿದ ಉಲ್ಲೇಖ ಸುಮಧ್ವವಿಜಯದಲ್ಲಿ ಬಂದಿದೆ (೩/೫೫, ೬/೧, ೬/೫೦, ೧೬/೧೬, ೧೬/೫೪). ಗುರುದಕ್ಷಿಣೆಯ ನೆಪದಲ್ಲಿ ತೋಟಂತಿಲ್ಲಾಯರಿಗೆ ಅವರು ಇದರ ರಹಸ್ಯಪ್ರಮೇಯಗಳನ್ನು ಉಪದೇಶಿಸಿದ ವಿವರ ಸುಮಧ್ವವಿಜಯದಲ್ಲಿದೆ (೩/೫೫), ಎಂದರೆ ಇದು ಆಚಾರ್ಯರ ಮೊದಲ ಭಾಷ್ಯ. ಇಂಥ ಗಹನ ಉಪನಿಷತ್ತಿಗೆ ವಿವರಣೆ ನೀಡಿದಾಗ ಅವರ ವಯಸ್ಸು ಇನ್ನೂ ಎಂಟರ ಆಸುಪಾಸಿನಲ್ಲಿತ್ತು ! ಅವರನ್ನು ಪೂರ್ಣಪ್ರಜ್ಞರೆಂಬುದನ್ನು ನಿರೂಪಿಸುವ ಅನೇಕ ಪ್ರಸಂಗಗಳಲ್ಲಿ ಇದೂ ಒಂದು.

ಐತರೇಯೋಪನಿಷತ್ ಋಗ್ವೇದದ ಐತರೇಯಾರಣ್ಯಕದ ದ್ವಿತೀಯಾರಣ್ಯಕದ ಏಳು ಅಧ್ಯಾಯಗಳನ್ನು ಮತ್ತು ತೃತೀಯಾರಣ್ಯಕದ ಎರಡು ಅಧ್ಯಾಯಗಳನ್ನು ಎಂದರೆ ಒಟ್ಟಾಗಿ ಒಂಭತ್ತು ಅಧ್ಯಾಯಗಳನ್ನು ಹೊಂದಿದೆ. ಪ್ರಧಾನವಾಗಿ ಗದ್ಯರೂಪದ ಈ ಉಪನಿಷತ್ತಿನಲ್ಲಿಯ ಒಟ್ಟು ಖಂಡಗಳ ಸಂಖ್ಯೆ ೩೮. ಶಂಕರಾಚಾರ್ಯರ ಐತರೇಯಭಾಷ್ಯವು ಎರಡನೇ ಆರಣ್ಯಕದ ೪, ೫, ಮತ್ತು ೬ ನೆಯ ಅಧ್ಯಾಯಗಳಿಗೆ ಮಾತ್ರ ಉಂಟು. ರಾಮಾನುಜರಂತೂ ಯಾವ ಉಪನಿಷತ್ತಿಗೂ ಭಾಷ್ಯ ರಚಿಸಿಲ್ಲವಾದ್ದರಿಂದ ಇದಕ್ಕೆ ಅವರ ಭಾಷ್ಯದ ಪ್ರಸಕ್ತಿಯೇ ಇಲ್ಲ.

ಸಮಗ್ರ ಉಪನಿಷತ್ತಿಗೆ ಮೊಟ್ಟಮೊದಲಿಗೆ ರಚಿತವಾದ ಭಾಷ್ಯ ಎಂಬುದು ಈ ಕೃತಿಯ ವಿಶೇಷ. ಎಂದರೆ ಮಧ್ವಭಾಷ್ಯಕ್ಕಿಂತ ಮುಂಚೆ, ಈ ಉಪನಿಷತ್ತಿನ ಸಮಗ್ರಸ್ವರೂಪದ ಪರಿಚಯವೇ ಇರಲಿಲ್ಲವೆಂದಾಯಿತು. ಆಚಾರ್ಯರು ತೋರಿಸಿದ ಉಪನಿಷತ್ತಿನ ಸ್ವರೂಪ

ಅನಂತರ ಇತರರಿಗೂ ಗ್ರಾಹ್ಯವಾಯಿತೆನ್ನಲು ಇದರ ಮೇಲೆ ಅನಂತರ ರಚಿತವಾದ ಉಪನಿಷದ್ಬ್ರಹ್ಮಯೋಗಿ (ಅದ್ವೈತಪರ) ಮತ್ತು ರಂಗರಾಮಾನುಜ(ವಿಶಿಷ್ಟಾದ್ವೈತಪರ) ಭಾಷ್ಯಗಳು ಸಾಕ್ಷಿ; ಅವೆರಡರಲ್ಲೂ ಆಚಾರ್ಯರು ತೋರಿಸಿಕೊಟ್ಟಿರುವ ೯ ಅಧ್ಯಾಯಗಳೂ ಗೃಹೀತವಾಗಿವೆ.

ವಿಶಾಲ ಎಂಬ ಬ್ರಹ್ಮಪುತ್ರನಿಗೆ ಇತರಾ ಎಂಬವಳಲ್ಲಿ ಅವತರಿಸಿದ ಭಗವದ್ರೂಪವೇ ಐತರೇಯ. ಇದು ಮತ್ಸ್ಯಕೂರ್ಮಾದಿರೂಪಗಳಂತೆ ಸಾಕ್ಷಾದ್ರೂಪ. ಐತರೇಯ ರೂಪದ ಭಗವಂತನು ಯಜ್ಞಭೂಮಿಗೆ ಕಾಲಿರಿಸಿದಾಗ ಅವನ ತೇಜಸ್ಸಿಗೆ ಸುರಭೂಸುರರ ಸಮೂಹವು ಕಂಗೆಟ್ಟಿತು. ಆಗ ಬ್ರಹ್ಮದೇವರು ಆತನನ್ನು ಸ್ತುತಿಸಿದರು. ಆಗ ಐತರೇಯನು ರುದ್ರಾದಿಸಮಸ್ತರಿಗೂ ಉಪದೇಶ ನೀಡಿದನು. ಆಗ ಬ್ರಹ್ಮದೇವರೊಂದಿಗೆ ಇತರ ಎಲ್ಲ ದೇವತೆಗಳೂ ಆತನ ದಾಸತ್ವವನ್ನು ಹೊಂದಿದರು. ಹೀಗೆ ಮಹಾದೇವತೆಗಳೆಲ್ಲ ದಾಸತ್ವ ವಹಿಸಿದ್ದರಿಂದ ಆ ಐತರೇಯರೂಪಕ್ಕೆ ಮಹಿದಾಸ ಎಂದು ಪ್ರಸಿದ್ಧಿ ಬಂದಿತು. ಅವರೆಲ್ಲರೂ ಕೇಳುತ್ತಿದ್ದಂತೆಯೇ ಆ ಶ್ರೀಹರಿಯು ಅತಿ ಶ್ರೇಷ್ಠವಾದ ಐತರೇಯೋಪನಿಷತ್ತನ್ನು ಶ್ರವಣ ಮಾಡಿಸಿದನು. ಅದು ಋಗ್ವೇದಿಗಳಿಂದ ಬ್ರಹ್ಮದೇವರ ಮೂಲಕ ಪಠಿತವಾಯಿತು. ಇದರಲ್ಲಿ ಶ್ರೀಹರಿಯ ಪರಮರಹಸ್ಯ ಉಕ್ತವಾಗಿದೆ. ಮಹಾಭೂತಿಯೆನ್ನಿಸಿದ ಶ್ರೀಹರಿಯು ಇದರಲ್ಲಿ ವಿಶೇಷವಾಗಿ ತಿಳಿಸಲ್ಪಟ್ಟಿದ್ದರಿಂದ ಇದಕ್ಕೆ ಮಹಾಭೂತಿಶ್ರುತಿ ಎಂದೂ ಹೆಸರು :

ಪ್ರಾದುರ್ಬಭೂವ ಭಗವಾಸ್ತಪಸೇತರಾಯಾ ನಾರಾಯಣೋಽಬ್ಜಸುತಸ್ಯ ವಿಶಾಲನಾಮ್ನಃ।
ತಸ್ಮಿನ್ಗತೇಽಧ್ವರಮಭೂತ್ಸುರವಿಪ್ರಸಂಘೋ ನಿಶ್ಚೇತನಸ್ತದನು ಪದ್ಮಭವೋಽಮುಮಸ್ತೌತ್ ॥

ತೇನ ಸ್ತುತಃ ಸ ಭಗವಾನ್ಗಿರಿಶೇಂದ್ರಮುಖ್ಯಾನ್ ಸರ್ವಾನಬೋಧಯದಜೇನ ಸಹೈವ ತೇಽಥ।
ದಾಸತ್ವಮಾಪುರತ ಏವ ಮಹತ್ಸುರಾಣಾಂ ದಾಸತ್ವತಃ ಸ ಮಹಿದಾಸ ಇತಿ ಪ್ರಸಿದ್ಧಃ ॥

ಶೃಣ್ವತ್ಸು ತೇಷು ಭಗವಾನವದದ್ರಮಾಯೈ ದಿವ್ಯಾಂ ಶ್ರುತಿಂ ಸ ಪರಮೋಽತಿಮುದೈತರೀಯಂ।
ಸಾ ಬಹ್ವೃಚೈಃ ಪ್ರಪಠಿತಾ ಚತುರಾನನಾಸ್ಯಾದ್ಯಸ್ಯಾಂ ರಹಸ್ಯಮುದಿತಂ ಪರಮಂ ಹಿ ವಿಷ್ಣೋಃ

ಮಹಾಭೂತಿಃ ಶ್ರುತಿಃ ಸೈಷಾ ಮಹಾಭೂತಿರ್ಯತೋ ಹರಿಃ।
ವಿಶೇಷೇಣಾತ್ರ ಕಥಿತಃ ಸರ್ವಜ್ಞಃ ಶಾಶ್ವತಃ ಪ್ರಭುಃ ॥ — ಇತಿ ಋಕ್ಸಂಹಿತಾಯಾಮ್

ಐತರೇಯರೂಪಕ್ಕೆ ಸಂಬಂಧಿಸಿದ ಅನೇಕ ವಿವರಗಳನ್ನು ಶ್ರೀಮದಾಚಾರ್ಯರು ತಮ್ಮ ಇತರ ಗ್ರಂಥಗಳಲ್ಲೂ ನೀಡಿರುವರು.

'ಏಷ ಪಂಥಾ ಏತತ್ಕರ್ಮ' ಎಂಬುದಾಗಿ ಪ್ರಾರಂಭವಾಗುವ ಉಪನಿಷತ್ತು ಶ್ರೀಹರಿಯನ್ನು ಎಂದೂ ಮರೆಯಕೂಡದು. ಇವನನ್ನು ಎಂದೂ ತೊರೆಯದ ಬ್ರಹ್ಮಾದಿಗಳು ಮುಕ್ತರಾದರು; ಸದಾ ಜೊತೆಯಲ್ಲಿರುವ ಮಹಾಲಕ್ಷ್ಮಿಯಂತೂ ಎಲ್ಲರಿಗಿಂತ ಮಿಗಿಲೆನ್ನಿಸಿ ನಿತ್ಯಮುಕ್ತಳೇ ಆಗಿರುವಳು. ಧರ್ಮ, ಜ್ಞಾನ, ವೈರಾಗ್ಯ ಮತ್ತು ಐಶ್ವರ್ಯ

ಎಂಬುದಾಗಿ ವಾಯುದೇವರ ಸ್ವರೂಪ ನಾಲ್ಕು ಬಗೆಯದು. ಅಸುರರಿಗೆ ನಾಲ್ಕರಲ್ಲಿ ಒಂದಾದ ಹಾಗೂ ಕೊನೆಯದಾದ ಐಶ್ವರ್ಯವಷ್ಟೇ ಪ್ರಿಯವಾದ್ದರಿಂದ ಅವರಿಗೆ ಈರಪಾದರೆಂದು ಹೆಸರು. ಶ್ರೀಹರಿಯನ್ನು ತೊರೆಯುವ ಅಸುರರು ಸಾಧನೆಯಲ್ಲಿ ಪರಾಭವಗೊಳ್ಳುವುದಲ್ಲದೇ ಕೊನೆಯಲ್ಲಿ ಅಂಧಂತಮಸ್ಸಿಗೂ ತೆರಳುವರು.

ಭಗವಂತನನ್ನು ಉಕ್ಥ ಅರ್ಕ, ಬೃಹತ್, ಪವಮಾನ ಎಂಬುದಾಗಿ ಉಪಾಸನೆ ಮಾಡಬೇಕು. ಅವನ ಪ್ರಾಪ್ತಿಗೆ ಅವನ ಅನುಗ್ರಹವೇ ಸಾಧನೆ. ಅವನನ್ನು ಗೌರವಿಸದ ಪಿಶಾಚಿಗಳು, ರಾಕ್ಷಸರು ಮತ್ತು ಅಸುರರು ನಾಶಹೊಂದಿದರು. ಅವನಿಂದಲೇ ದೇವತೆಗಳು ಮೊದಲಾದ ಸಕಲರ ಸೃಷ್ಟಿ ವಾಯುದೇವರು ಜೀವೋತ್ತಮರಾಗಿದ್ದು ಸಕಲಶರೀರಧಾರಕರಾಗಿರುವುದರಿಂದ ಅವರೂ ಉಕ್ಥಶಬ್ದವಾಚ್ಯರಾಗಿರುವರು. ಸರ್ವಶಬ್ದಗಳೂ, ಸಕಲಶಾಸ್ತ್ರಗಳೂ, ಭಗವತ್ಪರ. ಸಮಸ್ತ-ಋಷಿನಾಮಗಳು, ಸಮಸ್ತ ದೇವತಾನಾಮಗಳು, ಸಕಲಛಂದೋನಾಮಗಳು, ಸಕಲವಸ್ತು-ನಾಮಗಳು ಒಟ್ಟಾಗಿ ಸರ್ವಶಬ್ದಗಳು ಮೂಲತಃ ಪರಮಮುಖ್ಯವೃತ್ತಿಯಿಂದ ಭಗವದ್ವಾಚಕ :

ಏವಂ ಋಷಿಷು ಶಬ್ದೇಷು ಚ ವ್ಯವಹ್ರಿಯಮಾಣಾನಿ ಸರ್ವಾಣಿ ನಾಮಾನಿ ವಿಷ್ಣೋರೇವ ಮುಖ್ಯತಃ । ಕಿಮು ದೇವತಾನಾಮಾನಿ । ...... ನ ಕೇವಲಂ ಋಷ್ಯಾದೀನಾಂ ನಾಮ ಭಗವತಃ । ಸರ್ವೇ ವೇದಾಽಪಿ ತಸ್ಯೈವ ನಾಮಾನಿ । ಕಿಮುಚ ವೇದಾಃ, ಸಮುದ್ರಮೇಘ-ವೃಕ್ಷಪತನಭೇರಿತಾಡನಾದಿ ಸರ್ವಘೋಷಾ ಅಪಿ ತಸ್ಯೈವ ನಾಮಾನಿ ಯಥಾಯೋಗ್ಯಂ ಯೋಜನೀಯಾನಿ । .....

ಸರ್ವಛಂದೋಭಿಧಶ್ಚೈವ ಸರ್ವದೇವಾಭಿಧಸ್ತಥಾ ।
ಸರ್ವಮುನ್ಯಭಿಧಶ್ಚೈವ ಸರ್ವವಸ್ತ್ವಭಿಧೋ ಹರಿಃ ।
ಅನಂತಪೂರ್ಣಗುಣಕಸ್ತಸ್ಮಾಜ್ಜ್ಞೇಯೋ ರಮಾಪತಿಃ ॥ ....

ಶ್ರೀಹರಿಯು ಸರ್ವಾಂತರ್ಯಾಮಿಯಾಗಿರುವುದು, ಸರ್ವಗುಣಗಳಿಂದ ಪೂರ್ಣ-ನಾಗಿರುವುದು, ಸಕಲಶಕ್ತಿಸಂಪನ್ನನಾಗಿರುವುದು, ಸರ್ವಶಬ್ದವಾಚ್ಯನಾಗಿರುವುದಕ್ಕೆ ಕಾರಣ :

ತಸ್ಮಾತ್ ಸರ್ವಾಂತರ್ಯಾಮಿತ್ವಾತ್ ಸರ್ವಗುಣವತ್ವಾತ್ ಸರ್ವಶಕ್ತಿತ್ವಾಚ್ಚ
ಸರ್ವನಾಮವತ್ವಮೇವ ವಿಷ್ಣೋರುಚ್ಯತೇ ।

ಉಕ್ಥನಾಮಕರಾದ ವಾಯುದೇವರನ್ನು ಜೀವೋತ್ತಮರೆಂದು ಅರಿತ ರುದ್ರಾದಿದೇವತೆಗಳು ಅವರಿಂದ ಶ್ರೀಹರಿತತ್ತ್ವದ ಉಪದೇಶವನ್ನು ಪಡೆಯುವರು. ತಾವು ಪಡೆದ ಉಪದೇಶವನ್ನು ಶಿಷ್ಯಪ್ರಶಿಷ್ಯಾದಿಗಳಿಗೆ ತಲುಪಿಸಿದರು. ವಾಯುದೇವರು ತಮ್ಮ ಗುಣಗಳನ್ನು ತಿಳಿದವರಿಗೆಲ್ಲ ಪ್ರವೇಶಿಸಿದರು. ಹೀಗೆ ಎಲ್ಲಡೆ ವ್ಯಾಪ್ತರಾದ್ದರಿಂದ ಅವರಿಗೆ ಪ್ರಾತಃ ಎಂದು ಹೆಸರಾಯಿತು.

ಬೃಹತೀಸಹಸ್ರವು ಭಗವಂತನಿಗೆ ಅನ್ನ, ಅದು ವಾಯುಪ್ರತಿಪಾದಕವೂ ಆಗಿದೆ. ಬೃಹತೀಸಹಸ್ರವೂ ವಿಷ್ಣುಸಹಸ್ರನಾಮಕ್ಕೆ ಭಾಷ್ಯರೂಪವೂ ಆಗಿದೆ. ಅಹಂ - ತ್ವಂ - ಅಸ್ಮಿ

- ಪ್ರಾಣ ಮೊದಲಾಗಿ ಸರ್ವಶಬ್ದಗಳು ಭಗವತ್ಪರವೇ. ಬೃಹತೀಸಹಸ್ರದಿಂದ ಪ್ರತಿಪಾದಿತವಾದ ೭೨ ಸಾವಿರ ಭಗವದ್ರೂಪಗಳು ಶರೀರದೊಳಗಿನ ೭೨ ಸಾವಿರನಾಡಿಗಳಲ್ಲಿ ನೆಲೆಸಿವೆ. ಭಗವಂತನಿಗೆ ಪುರುಷರೂಪದಂತೆ ಸ್ತ್ರೀರೂಪಗಳೂ ಉಂಟು. ಆದರೆ ನಪುಂಸಕರೂಪ ಮಾತ್ರ ಸರ್ವಥಾ ಇಲ್ಲ. ಭಗವಂತನ ಪುರುಷ- ರೂಪಗಳು ಬೃಹತೀಸಹಸ್ರದ ಸ್ವರಗಳಿಂದಲೂ ಸ್ತ್ರೀರೂಪಗಳು ವ್ಯಂಜನಗಳಿಂದಲೂ ವಾಚ್ಯವಾಗಿವೆ.

ಭಗವಂತನು ವಾಸುದೇವ, ಸಂಕರ್ಷಣ, ಪ್ರದ್ಯುಮ್ನ, ಅನಿರುದ್ಧ ಮತ್ತು ನಾರಾಯಣ ಎಂಬ ಪಂಚರೂಪಗಳಿಂದ ಸರ್ವತ್ರ ನೆಲೆಸಿರುವನು. ಸಂಕರ್ಷಣ ಮತ್ತು ಪ್ರದ್ಯುಮ್ನ ರೂಪಗಳು ಭೋಕ್ತೃಗಳಲ್ಲಿದ್ದು ಭೋಕ್ತೃಶಕ್ತಿಪ್ರದವೂ ಸ್ವತಃ ಮುಖ್ಯ ಭೋಕ್ತೃಗಳೂ ಆಗಿವೆ. ನಾರಾಯಣ ಮತ್ತು ಅನಿರುದ್ಧ ರೂಪಗಳು ಭೋಗ್ಯವಸ್ತುಗಳಲ್ಲಿ ನೆಲೆಸಿದ್ದು ಸರ್ವರಿಗೂ ತೃಪ್ತಿ ನೀಡುವವು. ವಾಸುದೇವರೂಪವು ಆಕಾಶದಲ್ಲಿದ್ದು ಸದಾ ಅವಕಾಶಪ್ರದವಾಗಿದೆ. ಭಗವಂತನೂ ಸಕಲಕ್ಕೂ ಮುಖ್ಯ ಸೃಷ್ಟಿಕರ್ತನಾಗಿರುವನು. ಅವನು ಕತರ(ಆನಂದತಮ).

ಅನಂತರ ಅಧಿದೈವತ, ಅಧಿಸಂಹಿತೆಗಳ ವಿವರಗಳು ಬಂದಿವೆ. ವಿಷ್ಣುಶಬ್ದದ ಅರ್ಥವಿವರಣೆ, ಶಾರೀರಪುರುಷ ಎಂದರೆ ಶಿವ, ಛಂದಃಪುರುಷ ಎಂದರೆ ಗರುಡ, ವೇದಪುರುಷ ಎಂದರೆ ಶೇಷ ಮತ್ತು ಮಹಾಪುರುಷ ಎಂದರೆ ಚತುರ್ಮುಖ ಬ್ರಹ್ಮ ಎಂಬ ವಿವರಣೆ ಇದೆ. ಭಗವತ್ಸ್ವರೂಪದ ಬಗ್ಗೆ ಮಿಥ್ಯಾಜ್ಞಾನ, ರಮಾಬ್ರಹ್ಮಾದಿಗಳಲ್ಲಿನ ತಾರತಮ್ಯವನ್ನು ತಿಳಿಯದಿರುವಿಕೆ, ಅವಿಹಿತಕರಣ ಮತ್ತು ವಿಹಿತತ್ಯಾಗಗಳು ಹಾಗೂ ಅನರ್ಹರಿಗೆ ಉಪದೇಶ ಎಂಬುದಾಗಿ ಭಗವದ್ವಿಷಯಕವಾದ ತ್ಯಾಗ ನಾಲ್ಕುವಿಧ. ಮೊದಲೆರಡು ತ್ಯಾಗಗಳಿಂದ ಅಂಧಂತಮಸ್ಸು; ಮೂರನೆಯ ತ್ಯಾಗದಿಂದ ಅನೇಕತೆರನಾದ ನರಕಗಳು ಮತ್ತು ನಾಲ್ಕನೆಯ ತ್ಯಾಗದಿಂದ ಊರ್ಧ್ವಲೋಕಕ್ಕೆ ಹೋಗುವ ಶಕ್ತಿಯ ಅಭಾವ - ಇವು ಕ್ರಮವಾಗಿ ಭಗವತ್ತ್ಯಾಗದ ದುಷ್ಪರಿಣಾಮಗಳಾಗಿವೆ. ಮರಣಸೂಚಕ ದುಃಶಕುನಗಳನ್ನು ಮತ್ತು ದುಃಸ್ವಪ್ನಗಳನ್ನು ನಿರೂಪಿಸಿ, ಉಪವಾಸ, ರಾತ್ರಿಸೂಕ್ತದ ಜಪಹೋಮಾದಿಗಳನ್ನು ಅವುಗಳ ಪರಿಹಾರದ ಉಪಾಯಗಳನ್ನಾಗಿ ವಿಧಿಸಲಾಗಿದೆ. ಅವುಗಳಿಂದ ಅಪಮೃತ್ಯುಯೋಗ ಪರಿಹಾರವಾಗುತ್ತದೆ; ಕಾಲಮೃತ್ಯುವಾಗಿದ್ದಲ್ಲಿ ಸದ್ಗತಿಪ್ರಾಪ್ತಿಗೆ ಸಾಧನವಾಗುತ್ತದೆ. ಬ್ರಹ್ಮಾದಿ ದೇವತೆಗಳ ದೇಹವೇ ವಿಷ್ಣುವನ್ನು ಆರಾಧಿಸುವ ದೈವೀವೀಣೆಯಾಗಿದ್ದು ಮಾನುಷವೀಣೆ ಅದರ ಅನುಕರಣೆ ಮಾತ್ರ. ದೈವೀವೀಣೆಯನ್ನು ಹೀಗೆ ಉಪಾಸನೆ ಮಾಡುವವನು ಅಪರೋಕ್ಷಜ್ಞಾನಿಯೂ, ಕೀರ್ತಿಶಾಲಿಯೂ ಆಗುವನು. ವಿಷ್ಣುಶಬ್ದವು ಭಗವಂತನು ವಿಶಿಷ್ಟ ಚೇಷ್ಟಕನೂ, ಬಲವಂತನೂ ಎಂಬುದನ್ನು ತಿಳಿಸುವ ಮೂಲಕ ಸಕಲವೇದಾರ್ಥದ ಸಾರವೇ ಆಗಿದೆ.

ಇದು ಸಂಕ್ಷಿಪ್ತವಾಗಿ ಮಧ್ವಭಾಷ್ಯಾನುಸಾರಿಯಾದ ಐತರೇಯೋಪನಿಷದ್ಭಾಷ್ಯದ ಸಾರ.

ಹರಿಸರ್ವೋತ್ತಮತ್ವ ಮತ್ತು ವಾಯುಜೀವೋತ್ತಮತ್ವಗಳು ಈ ಉಪನಿಷತ್ತಿನಲ್ಲಿ ವಿಶೇಷವಾಗಿ ನಿರೂಪಿತವಾಗಿರುವ ಪ್ರಧಾನ ಪ್ರಮೇಯಗಳು. ಬೃಹತೀಸಹಸ್ರದ ಮಹಿಮೆ ಇಡೀ ಉಪನಿಷತ್ತಿನ ಕೇಂದ್ರ ಬಿಂದು. ರಾತ್ರಿಸೂಕ್ತ ಯದಂತೀಋಕ್ಕುಗಳು ಮೊದಲಾಗಿ ಅನೇಕ ವೇದಮಂತ್ರಗಳಿಗೆ ಇದರಲ್ಲಿ ಅಪೂರ್ವ ವಿವರಣೆ ಉಂಟು. 'ಯೋಽಹಂ ಸೋಽಸೌ ಯೋಽಸೌ ಸೋಽಹಂ' ಎಂಬ ಅದ್ವೈತಪರವೆಂದು ತೋರುವ ಇದರಲ್ಲಿನ ವಾಕ್ಯಕ್ಕೆ ಭೇದ ಪರವಾದ ಸುಂದರ ಅರ್ಥವನ್ನು ಆಚಾರ್ಯರು ಸಪ್ರಮಾಣವಾಗಿ ನೀಡಿರುವರು.

ಪ್ರಾಸಂಗಿಕವಾಗಿ ಬಂದಿರುವ ಇದರಲ್ಲಿಯ ಕೆಲವು ವಿವರಗಳು ಹೀಗಿವೆ :

೧. ಮತ್ಸ್ಯಾದಿ ದಶರೂಪಗಳು ಪರಮಾತ್ಮನ ಅನಂತರೂಪಗಳಿಗೆ ಸಂಗ್ರಾಹಕ.

ಮತ್ಸ್ಯಕೂರ್ಮಕ್ರೋಡಸಿಂಹವಟುಭಾರ್ಗವರಾಘವಾಃ ।
ಕೃಷ್ಣಬುದ್ಧೌ ಚ ಕಲ್ಕೀತಿ ರೂಪಾಣಾಂ ದಶಕಂ ಹರೇಃ । ....
ತಾನಿ ರೂಪಾಣ್ಯಸ್ಯ ದಶ ಸರ್ವರೂಪಾತ್ಮಕಾನಿ ಚ ।
ದಶನಾಮಾನಿ ಚಾಸ್ಯೈವ ಸರ್ವರೂಪಾಭಿಧಾನ್ಯಪಿ ॥ .....
ದಶೇತಿ ಸರ್ವನಾಮೈತತ್ಕಥಿತಂ ಮುಖ್ಯತಃ ಶ್ರುತೌ ।
ಶಂ ರೂಪಂ ಭಗವಂತಂ ಯದ್ದದ್ಯಾದ್ವ್ಯಕ್ತ್ಯಾ ಸಮಸ್ತಶಃ ।
ದಶೇತ್ಯಮಿತನಾಮ್ನಾ ತದಾಖ್ಯಾ ರೂಪೇಷು ಶಂ ದದೇಃ ।
ಸರ್ವನಾಮಾರ್ಥವಚನಾತ್ ಪಂಚಕದ್ವಿತಯಸ್ಯ ಚ ।
ಅಭೂದ್ದಶೇತಿ ವೈ ನಾಮ ತಸ್ಮಾದ್ದೇತದ್ದಶಾಖಿಲಮ್ ॥

೨. ಬೃಹತೀಸಹಸ್ರದ ವರ್ಣಗಳಿಂದ ಪ್ರತಿಪಾದ್ಯವಾದ ಭಗವದ್ರೂಪಗಳ ಧ್ಯಾನದಿಂದ ನೂರುವರ್ಷಗಳ ಕಾಲ ಹರಿಧ್ಯಾನ ಮಾಡಿದ ಫಲ ಲಭಿಸುವುದು :

ದ್ವಾಸಪ್ತತಿಸಹಸ್ರಾಣಿ ರೂಪಾಣ್ಯೇವಂ ರಮಾಪತೇಃ ।
ಶತಾಬ್ದಾನಾಮಹೋರಾತ್ರದೈವತಾನ್ಯುತ್ತಮಾನಿ ಚ ॥
ಬೃಹತೀಸಹಸ್ರವರ್ಣಾನಾಮಪಿ ಧ್ಯಾತ್ವಾಽಖಿಲಾನ್ಯಪಿ ।
ಶತವರ್ಷಹರಿಧ್ಯಾನಫಲಮಾಪ್ನೋತಿ ಪೂರುಷಃ ॥

೩. ವೇದಾದಿಗಳಲ್ಲಿ ಅರ್ಥರಹಿತವಾದ ಸ್ವರ,ವರ್ಣ,ಪದ, ವಾಕ್ಯ ಮೊದಲಾಗಿ ಯಾವುದೂ ಇಲ್ಲ, ಅದರಂತೆ ಅಲ್ಪಾರ್ಥಕ ಹೇಳುವ ಸ್ವರಾದಿಗಳೂ ಇಲ್ಲ, ಉಚ್ಚಾರಣೆಗೋಸ್ಕರವಾಗಿ ಹೇಳುವ ಸ್ತೋಭಾಕ್ಷರಗಳೂ ಇಲ್ಲ. ವೇದ ಹಾಗೂ ವೇದಸಂಬಂಧಿಯಾದ ಸಕಲಶಾಸ್ತ್ರಗಳನ್ನೂ ಹೀಗೆ ಮಹಾರ್ಥಗರ್ಭಿತ ಎಂದೇ ತಿಳಿಯಬೇಕು :

'ನಾನರ್ಥಕಃ ಸ್ವರೋ ವಾಽಪಿ ವರ್ಣೋ ವಾ ಕುತ್ರಚಿದ್ಭವೇತ್ ।
ಪದಂ ವಾಕ್ಯಂ ಕುತಶ್ಚ ಸ್ಯಾನ್ನಾಲ್ಪಾರ್ಥಮಪಿ ಕುತ್ರಚಿತ್ ॥
ಉಚ್ಚಾರ್ಣಾದ್ಯರ್ಥಮಪಿ ವಾ ನಾಸ್ತಿ ಕಿಂಚಿತ್ಸ್ವರಾದಿಕಮ್ ।
ಮಹಾರ್ಥಮೇವ ಸರ್ವಂ ಹಿ ವೇದೇ ವಾ ವೈದಿಕೇಽಪಿ ವಾ ॥'

'ನ ವೇದೇಷು ಪದಂ ಕಿಂಚಿದ್ವರ್ಣೋ ವಾ ವ್ಯರ್ಥ ಇಷ್ಯತೇ ।
ಯಥಾಯೋಗಂ ಚಾರ್ಥಭೇದಃ ಊಹ್ಯಃ ಸರ್ವತ್ರ ವೇದಿಭಿಃ ॥'

– ಇತಿ ಶಬ್ದನಿರ್ಣಯೇ

೪. ನಾರಾಯಣಾದಿ ಪಂಚರೂಪಗಳಲ್ಲಿ ಸಂಕರ್ಷಣ ಮತ್ತು ಪ್ರದ್ಯುಮ್ನ ರೂಪಗಳೂ ಭೋಕ್ತೃಗಳಲ್ಲಿ ಸನ್ನಿಹಿತವಾಗಿದ್ದು ಭೋಕ್ತೃಶಕ್ತಿಯನ್ನು ನೀಡುವವು; ನಾರಾಯಣ ಅನಿರುದ್ಧರೂಪಗಳು ಭೋಗ್ಯವಸ್ತುಗಳಲ್ಲಿ ನೆಲೆಸಿದ್ದು ಸಕಲ ಭೋಕ್ತೃಗಳಿಗೂ ತೃಪ್ತಿಯನ್ನು ನೀಡುವವು. ವಾಸುದೇವ ರೂಪವು ಸದಾ ಅವಕಾಶಪ್ರದವಾಗಿರುವುದು. ಹೀಗೆ ಪಂಚರೂಪದ ವಿಷ್ಣುವನ್ನು ಸದಾ ಉಪಾಸನೆ ಮಾಡುವವನು ತನ್ನ ಗುಂಪಿನವರಿಗೆ ಅವಕಾಶಪ್ರದನಾಗುವನು. ಭೋಕ್ತೃವಾಗುವನು; ಅದರಂತೆ ಇತರರಿಗೆ ತೃಪ್ತಿನೀಡುವವನೂ ಆಗುವನು. ಈ ತೆರನಾದ ಉಪಾಸನೆಗೆ ಮುಖ್ಯವಾಗಿ ಬ್ರಹ್ಮ ಇಂದ್ರಾದಿಗಳು ಅಧಿಕಾರಿಗಳು. ಇತರರು ಇದನ್ನು ತಿಳಿಯಲು ಅರ್ಹರು :

ನಾರಾಯಣಾನಿರುದ್ಧೌ ತೌ ಭೋಗ್ಯವಸ್ತುಷು ಸಂಸ್ಥಿತೌ ।
ತರ್ಪಕೌ ಸರ್ವಲೋಕಾನಾಂ ತಸ್ಮಾದ್ಭೋಗ್ಯೌ ನ ಚರ್ವ್ಯತಃ ॥
ಅವಕಾಶಪ್ರದೋ ನಿತ್ಯಂ ವಾಸುದೇವೋ ನಭಃಸ್ಥಿತಃ ।
ಏವಂ ಪಂಚಾತ್ಮಕಂ ವಿಷ್ಣುಂ ಯ ಉಪಾಸ್ತೇ ಸದೈವ ತು ॥
ಅವಕಾಶಪ್ರದಃ ಸೋಽಪಿ ಸ್ವಜಾತೀನಾಂ ಭವಿಷ್ಯತಿ ।
ಭೋಕ್ತಾ ಚಾಽಪ್ಯಾಯಕಶ್ಚೈವ ತಸ್ಯ ವಿಷ್ಣೋಃ ಪ್ರಸಾದತಃ ॥
ಬ್ರಹ್ಮೇಂದ್ರಾದ್ಯಾಃ ಸ್ವಜಾತೀಶಪದಯೋಗ್ಯಾ ಅಮುಷ್ಯ ಚ ।
ಯೋಗ್ಯಾ ಉಪಾಸನಸ್ಯ ಸ್ಯುಸ್ತದನ್ಯೇ ಜ್ಞಾನಮಾತ್ರಕೇ ॥

೫. ಮೂರು ಕಾಲಗಳಲ್ಲೂ ಸ್ತುತಿಸಲ್ಪಡುವುದರಿಂದ ಅನಿರುದ್ಧರೂಪವು ಗಾಯತ್ರಿ ಎನ್ನಿಸಿದೆ : ಗಾಯತ್ರೀ ತ್ವನಿರುದ್ಧೋಽಸೌ ತ್ರಿಕಾಲೇ ಗೀಯತೇ ಯತಃ ॥

೬. ಅಕಾರವು ಸರ್ವಗುಣಪೂರ್ಣತ್ವ, ಸರ್ವದೋಷದೂರತ್ವ, ಸರ್ವಭಿನ್ನತ್ವ ಎಂಬ ವೈಶಿಷ್ಟ್ಯವನ್ನು ಮಹಾವಿಷ್ಣುವಿಗೆ ವಿಶೇಷವಾಗಿ ತಿಳಿಸಿಕೊಡುವುದರಿಂದ ಅದು ವಿಷ್ಣುವಿನ ಪ್ರಥಮ ನಾಮವಾಗಿದೆ :

ಅಕಾರಃ ಪ್ರಥಮಂ ನಾಮ ವಿಷ್ಣೋಃ ಸರ್ವಗುಣಾನ್ ಬ್ರುವನ್ ।
ಸರ್ವದೋಷವಿರುದ್ಧತ್ವಾದ್ಗುಣಾನಾಮನ್ಯತಾಮಪಿ ॥

ವಿಷ್ಣೋರ್ವದತಿ ಜೀವೇಭ್ಯೋ ಜಡೇಭ್ಯಶ್ಚೈವ ಸರ್ವದಾ ।
ಅಭಾವಂ ಚೈವ ದೋಷಾಣಾಂ ಸರ್ವೇಷಾಂ ಕೇಶವೇ ವದೇತ್ ॥

೭. ವಿಷ್ಣುಸಹಸ್ರನಾಮವು ವಿಷ್ಣುವಿನ ಸಹಸ್ರನಾಮಾವಳಿ ಮಾತ್ರವಾಗಿರದೆ ವಿಷ್ಣುಸಹಸ್ರ ರೂಪಾವಳಿಯೂ ಆಗಿದೆ. ಅದು ಬೃಹತೀಸಹಸ್ರದ ಅರ್ಥವೂ ಆಗಿದ್ದು ವಿಷ್ಣುವಿಗೆ ಅದರಂತೆ ಅನ್ವವೆನಿಸಿದೆ. ಅನಂತನಾಮಗಳನ್ನು ತಿಳಿಸುವುದು ಅಶಕ್ಯವಾದ್ದರಿಂದ ಅದರ ಪ್ರತಿನಿಧಿಯಾಗಿ ಈ ವಿಷ್ಣುಸಹಸ್ರನಾಮಗಳಿವೆ :

'ವಿಷ್ಣೋಃ ಸಹಸ್ರನಾಮ್ನಸ್ತು ಯತ್ತದ್ರೂಪಸಹಸ್ರಕಮ್ ।
ಬೃಹತೀಸಹಸ್ರಮೇತಚ್ಚ ತದ್ವಕ್ತಿ ಹಿ ಪೃಥಕ್ ಪೃಥಕ್ ॥
ಸಹಸ್ರಶಬ್ದೋಽಪ್ಯಮಿತಂ ಯತೋ ವಕ್ತ್ಯಮಿತಾನ್ಯತಃ ।
ನಾಮಾನಿ ವಿಷ್ಣೋರುಚ್ಯಂತೇ ಸಹಸ್ರಮಿತಿ ಚಾಖ್ಯಯಾ ॥
ಅನಂತನಾಮವಚನೇ ತ್ವಶಕ್ತತ್ವಾತ್ಸಹಸ್ರಕಮ್ ।
ನಾಮ್ನಾಂ ಪೃಥಗಿದಂ ಪ್ರೋಕ್ತಮನಂತತನುವಾಚಕಮ್ ॥
ವಿಷ್ಣೋರನಂತರೂಪಾಣಾಮುಕ್ತ್ಯಾ ಪಂಚಶತದ್ವಯೇ ।
ಆಸೀತ್ಸಹಸ್ರಮಿತ್ಯಾಖ್ಯಾ ಸಹಸ್ರಂ ಮುಖ್ಯತೋಽಮಿತಮ್ ॥'

೮. ಹಯಗ್ರೀವನು ವೇದದ್ರಷ್ಟೃವಾದ ಪರಮ ಋಷಿ; ಬ್ರಹ್ಮಾದಿಗಳು ಅವನ ಅನುಗ್ರಹದಿಂದ ಅನಂತರ ಪ್ರಾಧಾನ್ಯಕ್ರಮದಲ್ಲಿ ಋಷಿಗಳು. ಮಂತ್ರಗಳಾಗಲೀ ಉಪನಿಷತ್ತುಗಳಾಗಲೀ ಅತ್ಯಂತದುಸ್ತರವಾದ ಮಹಾತಪಸ್ಸನ್ನು ಮಾಡದವರಿಗೆ ಎಂದೂ ಗೋಚರಿಸಲಾರವು. ಬ್ರಾಹ್ಮಣಗಳಿಗಿಂತ ಮಂತ್ರಗಳು ಉಪನಿಷತ್ತುಗಳು ಶ್ರೇಷ್ಠ ಉಪನಿಷತ್ತುಗಳು ಮಂತ್ರಗಳಿಗಿಂತಲೂ ಶ್ರೇಷ್ಠ.

ಋಷ ಜ್ಞಾನ ಇತಿ ಹ್ಯಸ್ಮಾದ್ಧಾತೋಃ ಸರ್ವಜ್ಞ ಏಕರಾಟ್ ।
ವೇದದ್ರಷ್ಟಾ ಪರಮಋಷಿರ್ಹಯಾಸ್ಯಃ ಪುರುಷೋತ್ತಮಃ ॥
ಮಂತ್ರಾಣಾಂ ಪ್ರಥಮೋ ದ್ರಷ್ಟಾ ಸರ್ವೇಷಾಂ ಯೋಽತ ಏವ ತು ।
ಋಷಿಣೋಕ್ತಮಿತಿ ಪ್ರಾಹುರ್ಮಂತ್ರೋಕ್ತಂ ಬ್ರಾಹ್ಮಣಾನ್ಯತಃ ॥
ತತ್ಪ್ರಸಾದಾದ್ಧಿ ತಪಸಾ ಪಶ್ಚಾನ್ ಮಂತ್ರಾನ್ ಪ್ರಪೇದಿರೇ ।
ಬ್ರಹ್ಮಾದ್ಯಾ ಬ್ರಾಹ್ಮಣಂ ಪಶ್ಚಾತ್ ತೈರ್ದೃಷ್ಟಮೃಷಿಭಿಃ ಪೃಥಕ್ ॥
ಮಂತ್ರಾಶ್ಚೋಪನಿಷದಶ್ಚೈವ ನಾಕೃತ್ವಾ ಸುಮಹತ್ತಪಃ ।
ಪ್ರಥಮಂ ತದ್ಧಯಾಸ್ಯೇನ ದೃಷ್ಟಂ ಕೇನಚಿದೀಕ್ಷ್ಯತೇ ॥
ವಿನಾ ಪೃಥಕ್ತಪೋ ದೃಶ್ಯೇದ್ಬ್ರಾಹ್ಮಣಂ ಮುನಿಭಿರ್ಯತಃ ।
ಮಂತ್ರಾಶ್ಚೋಪನಿಷಚ್ಚೈವ ಬ್ರಾಹ್ಮಣಾದುತ್ತಮಾಸ್ತತಃ ॥
ತತ್ರಾಪ್ಯುಪನಿಷತ್ ಶ್ರೇಷ್ಠಾ ಯುಕ್ತಾವಸ್ಥಾಽಧಿಗಮ್ಯತಃ ॥ (ಪ್ರಮಾಣವಿವೇಕೇ)

೯. ಮಹಾವಿಷ್ಣುವು ತನ್ನ ಭಕ್ತರ ಭಕ್ತರಲ್ಲೂ ಭಕ್ತಿಮಾಡದಿರುವುದು ಪಾಪವೇ ಸರಿ; ಅಂತಹವರನ್ನು ವಿಷ್ಣುವು ರಕ್ಷಿಸನು.

ತದ್ಭಕ್ತಭಕ್ತೇಷ್ವಪಿ ಯೋ ನ ಕುರ್ಯಾತ್ಪ್ರೀತಿಮಂಜಸಾ ।
ವಿಷ್ಣುರ್ಜಹಾತಿ ತಂ ಪಾಪಮಿಹ ಚಾಮುತ್ರ ಚ ಪ್ರಭುಃ ॥ – ಇತಿ ಭಾರತೇ

೧೦. ಇದರಂತೆ ಅಭ್ಯಾಸದ ಲಕ್ಷಣ, ಋಕ್, ಮಿತಾಕ್ಷರ, ಗಾಥಾ, ಕುಂಬ್ಯಾ, ಯಜುಃ, ನಿಗದ, ರಂಗ ಮೊದಲಾದವುಗಳ ಲಕ್ಷಣ, ಅಧ್ಯಾಯದ ಕೊನೆಯಲ್ಲಿ ನಿರುಕ್ತಿಗೆ ಕಾರಣ ಮೊದಲಾದವುಗಳನ್ನು ತಿಳಿಸಿರುವರು.

ಏಕಪ್ರಕಾರಾ ಬಹುಶೋ ವಾಗಭ್ಯಾಸ ಇತೀರಿತಃ ।
ಅರ್ಥಾಂತರಾರ್ಥಾ ದ್ವಿವಿಧಾ ಪ್ರಯುಕ್ತೇತಿ ಹಿ ನಿರ್ಣಯಃ ॥ – ಇತಿ ಗಾರುಡೇ

'ಸರ್ವಪ್ರಮಾಣಸಿದ್ಧತ್ವಂ ವಕ್ತುಮಧ್ಯಾಯಮೂಲತಃ ।
ಅಧ್ಯಾಯಾಂತೇ ದ್ವಿರುಕ್ತಿಃ ಸ್ಯಾತ್ಪೂರ್ವೋಕ್ತಸ್ಯಾವಧಾರಣೇ ॥'

– ಇತಿ ಶಬ್ದನಿರ್ಣಯೇ

'ಸ್ವರಾಣಾಂ ನಿಯಮೋ ಯತ್ರ ಹ್ಯೃಚೋ ನಾಮ್ನೈವ ತಾಃ ಸ್ಮೃತಾಃ ।
ಅನ್ಯಾ ಮಿತಾಕ್ಷರಾ ಯಾಸ್ತು ತಾ ಗಾಥಾಃ ಪರಿಕೀರ್ತಿತಾಃ ।
ಖಂಡವಾಕ್ಯಾನಿ ಕುಂಬ್ಯಾಃ ಸ್ಯುರಸಮಾನಿ ಪರಸ್ಪರಮ್ ।
ಯಜ್ಞಾಂಗಂ ಯಜುರುದ್ದಿಷ್ಟಂ ನಿಗದಂ ವಾಕ್ಯಮಾತ್ರಕಮ್ ॥'

– ಇತ್ಯಾದಿ ಶಬ್ದನಿರ್ಣಯೇ

'ದುರ್ಗಮೇ ಪ್ರಶ್ನವಿಷಯೇ ಪ್ರಶ್ನೋ ರಂಗಯುತೋ ಭವೇತ್'

– ಇತಿ ಶಬ್ದನಿರ್ಣಯೇ

'ಇತಿ ಶಬ್ದೋಽಭಿಧಾನಾಂತೇ ಯತ್ರ ವೈಶೇಷಿಕಂ ಹಿ ತತ್ ।
ನಾಮ ಸ್ಯಾದಿತಿ ಮೇ ಸಾಕ್ಷಾನ್ನಿರ್ಣಯಃ ಸಮುದಾಹೃತಃ ॥

– ಇತಿ ಶಬ್ದನಿರ್ಣಯೇ

'ವಿವೃತಾವಪಿ ಸರ್ಗಃ ಸ್ಯಾತ್ ಸಂಹಿತಾಯಾಂ ಚ ಯತ್ರ ಹಿ ।
ಸಮಾನೋತ್ತಮಹೀನತ್ವಮುಚ್ಯತೇ ವಸ್ತುನೋಽಂಜಸಾ ॥' – ಇತಿ ಶಬ್ದನಿರ್ಣಯೇ

'ರಂಗೋಽವಧಾರಣೇ ಚೈವ ಸಂವಾದೇ ಚ ಪ್ರಯುಜ್ಯತೇ'

– ಇತಿ ಪದವಿವೇಕೇ

'ಪ್ರಯೋಗ ಏಕಕಾಲೀನಃ ಸರ್ವಕಾಲೇಽನುಷಜ್ಯತೇ ।
ದದರ್ಶ ವಿಷ್ಣುರಿತ್ಯಾದೌ ನಿತ್ಯಚಿದ್ರೂಪತೋ ಹರೇಃ ॥'

– ಇತ್ಯಾದಿ ಸತ್ತತ್ತ್ವೇ

೧೧. ತೃತೀಯೋಽತಿಶಯೇ, ಸಪ್ತಸು ಪ್ರಥಮಾ, ಸ್ವಾತಂತ್ರ್ಯೇ ವಿಭಕ್ತಿವ್ಯತ್ಯಯಃ ಮೊದಲಾದ ಮಹಾವ್ಯಾಕರಣಸೂತ್ರಗಳನ್ನು ಇದರಲ್ಲಿ ಉಲ್ಲೇಖಿಸಲಾಗಿದೆ.

೧೨. ವಾಯುದೇವರನ್ನು ವಿದ್ಯಾಭಿಮಾನಿದೇವತೆಗಳು ಅಯೋಗ್ಯರಿಗೆ ತಮ್ಮನ್ನು ಉಪದೇಶಿಸದಂತೆಯೂ ಯೋಗ್ಯರಿಗೆ ಮಾತ್ರ ಉಪದೇಶಿಸುವಂತೆಯೂ ಪ್ರಾರ್ಥಿಸಿದ ವಿವರ :

ವಾಯುಂ ವಿದ್ಯಾಃ ಸಮಾಸಾದ್ಯ ಸರ್ವಾಸಾಂ ಪತಿಮೂಚಿರೇ ।
ಸ್ತೇನೇಭ್ಯೋ ಮೈವ ನೋ ಬ್ರೂಹಿ ಬ್ರೂಹ್ಯಥೋ ವೈಷ್ಣವೇಷು ಚ ॥

೧೩. ಶ್ರೀಹರಿಯ ತ್ಯಾಗ ನಾಲ್ಕು ಬಗೆ; ಮೊದಲನೆಯದು ಶ್ರೀಹರಿಗೆ ಸಮರಾಗಲಿ ಅಧಿಕರಾಗಲಿ ಇರುವರೆಂದು ಅಥವಾ ತನ್ನನ್ನೇ ಶ್ರೀಹರಿ ಎಂದು ಪರಮಾತ್ಮನು ನಿರ್ಗುಣನೆಂದು, ಅವತಾರಗುಣಾದಿಗಳಿಗೆ ಭೇದವಿದೆಯೆಂದೂ, ಜೀವರಂತೆ ಅವನಿಗೂ ಪ್ರಾಕೃತ ದೇಹ ಇರುವುದೆಂದೂ, ಅವನು ಪರಾಧೀನನೆಂದೂ ತಪ್ಪಾಗಿ ತಿಳಿಯುವುದು ಮುಖ್ಯತ್ಯಾಗ, ಪ್ರಥಮತ್ಯಾಗ ಎನ್ನಿಸುವುದು.

ಎರಡನೆಯದು ರಮಾಬ್ರಹ್ಮಾದಿಗಳಲ್ಲಿ ತಾರತಮ್ಯವನ್ನು ತಿಳಿಯದಿರುವುದು; ಶಾಸ್ತ್ರೋಕ್ತ ತತ್ತ್ವಗಳಲ್ಲಿ ಸಂಶಯ ಪಡುವುದು. ಜಗತ್ತನ್ನು ಮಿಥ್ಯೆ ಎನ್ನುವುದು; ವೈಷ್ಣವರನ್ನು ನಿಂದಿಸುವುದು ಎಂಬುದು.

ಮೂರನೆಯದು ನಿಷಿದ್ಧಕರ್ಮದ ಆಚರಣೆ ಹಾಗೂ ವಿಹಿತಕರ್ಮದ ತ್ಯಾಗ.

ನಾಲ್ಕನೆಯದು ಅಯೋಗ್ಯನಲ್ಲಿ ಉಪದೇಶಿಸುವುದು.

ಈ ನಾಲ್ಕೂ ಬಗೆಯ ತ್ಯಾಗಗಳಲ್ಲಿ ಮೊದಲೆರಡು ತ್ಯಾಗಗಳಿಗೆ ಅಂಧಂತಮಸ್ಸೇ ಗತಿ; ಮೂರನೆಯ ಬಗೆಯ ತ್ಯಾಗದಿಂದ ನರಕಪ್ರಾಪ್ತಿ; ನಾಲ್ಕನೆಯ ಬಗೆಯ ತ್ಯಾಗದಿಂದ ಸ್ವರ್ಗದ ಅಪ್ರಾಪ್ತಿ.

ಮುಖ್ಯತ್ಯಾಗೋ ಹರೇರೇಷಃ ಯನ್ನಾಸ್ತೀತಿ ವದೇದಮುಮ್ ।
ತತ್ಸಮಂ ವಾ ಅಧಿಕಂ ವಾಪಿ ಬ್ರೂಯಾದ್ಯೈಕ್ಯಮಥಾಪಿ ವಾ ॥ ....
ಅಚಿಂತ್ಯವಿಭವೇಽಪ್ಯಸ್ಮಿನ್ನಸಂಭವನಿರೂಪಣಮ್ ।
ಸ ಏವ ಮುಖ್ಯತಸ್ತ್ಯಾಗೋ ವಾಸುದೇವಸ್ಯ ಕೀರ್ತಿತಃ ॥
ರಮಾಬ್ರಹ್ಮಾದಿಕಾನಾಂ ಚ ತಾರತಮ್ಯಾನಭಿಜ್ಞತಾ ।
ಸಂಶಯಶ್ಶೋಕ್ತತತ್ತ್ವೇಷು ಜಗನ್ಮಿಥ್ಯಾತ್ವದರ್ಶನಮ್ ॥
ಅಸ್ಮೃತಿರ್ವಾಸುದೇವಸ್ಯ ತದ್ಭಕ್ತಾನಾಂ ಚ ನಿಂದನಮ್ ।
ದ್ವಿತೀಯ ಏಷ ತ್ಯಾಗಸ್ತು ವಿಷ್ಣೋರೇವ ಪ್ರಕೀರ್ತಿತಃ ॥

ನಿಷಿದ್ಧಕರ್ಮಕರಣಂ ವಿಹಿತಸ್ಯ ಚ ವರ್ಜನಮ್ ।
ತ್ಯಾಗಸ್ತೃತೀಯೋ ಹಿ ಹರೇಶ್ಚತುರ್ಥೋಽಯೋಗ್ಯಪೂರುಷೇ ।
ಉಪದೇಶಃ ಕೇಶವಸ್ಯ ಯಥಾ ಶಾಸ್ತ್ರೋದಿತಕ್ರಮಾತ್ ॥.......
ತ್ಯಾಗದ್ವಯಾತ್ ತು ಪ್ರಥಮಾತ್ ಪ್ರಾಪ್ಯತೇಽಂಧತಮಃ ಕ್ರಮಾತ್ ।
ತೃತೀಯಾನ್ನಿರಯಪ್ರಾಪ್ತಿಶ್ಚತುರ್ಥಾನ್ನ ದಿವಂ ವ್ರಜೇತ್ ॥
ಉಪದಿಷ್ಟೇಽಪಿ ಯಸ್ತತ್ತ್ವೇ ಸಂಶಯಂ ಕುರುತೇ ಪುಮಾನ್ ।
ಸೋಽಂಧಂತಮೋ ವ್ರಜೇದನ್ಯೋ ನಿರಯಾಯೈವ ಗಚ್ಛತಿ ॥

೧೪. ಮೃತ್ಯು ಒದಗುವ ಮುನ್ಸೂಚನೆಯಾಗಿ ದುಃಶಕುನಗಳು ಕಾಣುವವು. ಅವೂ ಸಹ ಜಾಗ್ರದವಸ್ಥೆಯಲ್ಲಿ ಕಾಣುವಂತಹವು; ಸ್ವಪ್ನದಲ್ಲಿ ಕಾಣುವಂತಹವು ಎಂದು ಎರಡು ಬಗೆ. ಅಂತಹ ದುಃಶಕುನಗಳು ಕಂಡಾಗ ವಿಶೇಷವಾಗಿ ಪರಲೋಕಕ್ಕೆ ಹಿತವೆನ್ನಿಸುವ ಕಾರ್ಯಗಳಲ್ಲಿ ತೊಡಗಬೇಕು. 'ಯದಂತಿ' ಪವಮಾನಮಂಡಲದ ಇತ್ಯಾದಿ ಆರು ಋಕ್ಕುಗಳನ್ನು ಜಪಿಸಬೇಕು. 'ಉದ್ವಯಂ' ಎಂಬ ಮಂತ್ರದಿಂದಲೂ ಸೂರ್ಯಾಂತರ್ಗತನಾದ ಶ್ರೀಹರಿಯನ್ನು ಆರಾಧಿಸಬೇಕು. ಯದಂತಿ ಋಕ್ಕುಗಳ ಜಪದಿಂದ ಅಪಮೃತ್ಯುಭಯ ಪರಿಹಾರವಾಗುವುದು. ಕಾಲಮೃತ್ಯುವಾದಲ್ಲಿ ಸದ್ಗತಿ ಲಭಿಸುವುದು :

ದ್ವಿರೂಪಶ್ಚ ಯದಾ ವಿಷ್ಣುರಪಗಚ್ಛತಿ ದೇಹತಃ ।
ತದೈವ ದುರ್ನಿಮಿತ್ತಾನಿ ಜಾಯಂತೇ ನಾನ್ಯದಾ ಕ್ವಚಿತ್ ॥
ತಸ್ಮಾತ್ ತೇಷಾಂ ದರ್ಶನೇ ತು ಕರ್ತವ್ಯಂ ಪಾರಲೌಕಿಕಮ್ ।
ಸರ್ವಮೇವ ಜಪೇಚ್ಚೈವ ಯದಂತೀತ್ಯಾದಿಕಾ ಋಚಾಃ ।
ಋಗ್ಭಿಃ ಷಡ್ಭಿರ್ವಾಯುರೇವ ಪವಮಾನಾದಿನಾ ಮತಃ ॥ ....
ಉದ್ವಯಂ ತ್ವಿತಿ ಮಂತ್ರೇಣ ಸ್ತುತ್ಯೋ ವಾಯೋರಪೀಶ್ವರಃ ।
ಅಪಮೃತ್ಯುಭಯಂ ತಸ್ಯ ಯದಂತೀತ್ಯೃಗ್ಜಪಾದ್ಭವೇತ್ ॥
ಕಾಲಮೃತ್ಯುರ್ಯದಿ ಭವೇತ್ ತಥಾ ಜನ್ಮಾದಿಕಂ ಭಯಮ್ ।
ಅನ್ಯಾಭಿಃ ಕರ್ಮತಃ ಪೂತೋ ಯತ್ರ ಬ್ರಹ್ಮೇತಿ ವೈಷ್ಣವಮ್ ॥

೧೧. ಸ್ವಪ್ನದಲ್ಲಿ ಮಧುವಿನೊಂದಿಗೆ ಅಪೂಪವನ್ನು ತಿನ್ನುವುದು, ತನ್ನ ತಲೆಯ ಮೇಲೆ ಎರಡು ಕೆಂಪುಕಮಲಗಳನ್ನು ಧರಿಸಿರುವಂತೆ ಕಾಣುವುದು, ಹತ್ತಿರದಲ್ಲೇ ಮರಣವಿರುವುದನ್ನು ಸೂಚಿಸುವವು :

ಬೃಹತ್ತಮಂ ಮಧು ಯದಿ ಸಹಾಪೂಪಂ ಪ್ರಭಕ್ಷಯೇತ್ ।
ಸ್ವಪ್ನೇ ತಸ್ಯಾಚಿರಾನ್ಮೃತ್ಯೂ ರಕ್ತಾಬ್ಜೇ ವಾ ಶಿರೋಧೃತೇ ॥'

ಇತಿ ಬ್ರಹ್ಮಾಂಡೇ

೧೫. ದುಃಸ್ವಪ್ನಗಳು ಕಂಡಾಗ ರಾತ್ರೀಸೂಕ್ತವನ್ನು ಜಪಿಸಿ, ಪಾಯಸದಿಂದ ಹೋಮಿಸಿದಲ್ಲಿ ಅವುಗಳ ಫಲ ತಪ್ಪುವುದು. ರಾತ್ರಿ ಎಂದರೆ ಮುಖ್ಯವಾಗಿ ವಿಷ್ಣುವೇ. ಬಳಿಕ ರಾತ್ರಿಯ ಸಂಕೇತವಾದ ತಮಸ್ಸಿಗೆ ಅಭಿಮಾನಿದೇವತೆಯಾದ ದುರ್ಗಾದೇವಿಯು ರಾತ್ರಿಶಬ್ದವಾಚ್ಯಳು. ಹೀಗೆ ಲಕ್ಷ್ಮೀನಾರಾಯಣರನ್ನು ರಾತ್ರೀಸೂಕ್ತದಿಂದ ಒಲಿಸಿಕೊಳ್ಳುವುದು ದುಃಸ್ವಪ್ನಪರಿಹಾರಕ್ಕೆ ಅತಿಶ್ರೇಷ್ಠವಾದ ಸಾಧನ :

ರಾತ್ರ್ಯಾಸ್ತು ದೇವತಾ ದುರ್ಗಾ ದುಃಸ್ವಪ್ನೇ ಸಾ ಪ್ರಪೂಜಿತಾ ।
ಪಾಯಸೇನ ಹರೇನ್ಮೃತ್ಯುಂ ರಾತ್ರಿಸೂಕ್ತಾದಕಾಲಿಕಮ್ ॥
ಯದಿ ಕಾಲಿಕಮೃತ್ಯುಃ ಸ್ಯಾತ್ ಪದಂ ಸಾ ಪರಮಂ ವ್ರಜೇತ್ ।
ಸಹೈವ ವಿಷ್ಣುನಾ ಭಕ್ತಂ ವಿಷ್ಣೋಸ್ತದ್ವೇದಿನಂ ತಥಾ ॥
ರತಿದತ್ವಾತ್ಪರೋ ವಿಷ್ಣುರ್ಮುಖ್ಯತೋ ರಾತ್ರಿರುಚ್ಯತೇ ।
ತದಾಶ್ರಯತ್ವಾದ್ದುರ್ಗಾಪಿ ರಾತ್ರಿರಿತ್ಯಭಿಧೀಯತೇ ॥
ಸ್ತ್ರೀರೂಪಃ ಸ ಪರೋ ವಿಷ್ಣುಃ ಪಾಯಸೇಷ್ಟೋ ಹಿ ಮೋಕ್ಷದಃ ।
ತಸ್ಮಾದುಭೌ ಸಹೈವೇಜ್ಯೋ ಭಕ್ತ್ಯಾ ದುಃಸ್ವಪ್ನದರ್ಶನೇ ॥

೧೬. ಇವುಗಳೊಂದಿಗೆ ಯದಂತೀತ್ಯಾದಿ ಆರು ಋಕ್ಕುಗಳ, ಉದ್ವಯಂ, ಆದಿತ್ಯತ್ರಸ್ಯ, ಹಾಗೂ ಸಮಗ್ರರಾತ್ರೀಸೂಕ್ತದ ಭಾಷ್ಯಗಳನ್ನೂ ಸಹ ಒಳಗೊಂಡಿರುವುದು ಇಲ್ಲಿಯ ಮತ್ತೊಂದು ವಿಶೇಷ.

೧೭. ರಾತ್ರೀಸೂಕ್ತದ ಜಪವು ಶೀಘ್ರಅಪರೋಕ್ಷಜ್ಞಾನಕ್ಕೂ, ಅಪರೋಕ್ಷಜ್ಞಾನಿಗಳಿಗೆ ಮೋಕ್ಷದಲ್ಲಿ ಆನಂದವೃದ್ಧಿಗೂ ಸಾಧನ ಎಂಬುದು ಇಲ್ಲಿಯ ಮತ್ತೊಂದು ವಿಶೇಷ :

ಪರೋಕ್ಷಜ್ಞಾನಿನೋ ವಿಷ್ಣುರಾಪರೋಕ್ಷ್ಯಂ ವ್ರಜೇತ್ ತ್ವರನ್ ।
ಅಪರೋಕ್ಷದೃಶಃ ಪ್ರೀತಃ ಸುಖಾಧಿಕ್ಯಂ ಕರೋತ್ಯಜಃ ॥
ಮುಕ್ತಸ್ಯ ದ್ವಿವಿಧೈಸ್ತಸ್ಮಾತ್ ಜಪೋ ಯೋಗಶ್ಚ ಸರ್ವಥಾ ।
ಕರ್ತವ್ಯೌ ನ್ಯಾಸಿಭೀ ರಾತ್ರೀಸೂಕ್ತಂ ಜಪ್ಯಂ ತ್ರಿಶೋಽಂಜಸಾ ॥

ಮಹೈತರೇಯೋಪನಿಷದ್ಭಾಷ್ಯದಲ್ಲಿ ಉದಾಹೃತವಾಗಿರುವ ಆಕರ ಗ್ರಂಥಗಳ ವಿವರ ಹೀಗಿದೆ :

ಅರ್ಧನಾರೀನಾರಾಯಣತಂತ್ರ	ಆದಿತ್ಯಪುರಾಣ	ಋಕ್‌ಸಂಹಿತಾ
ಋಗ್ವೇದಸಂಹಿತಾ	ಐತರೇಯಸಂಹಿತಾ	ಗಾರುಡ
ಚಾತುರಾತ್ಮ್ಯ	ತತ್ತ್ವಸಾರ	ನರಸಿಂಹಪುರಾಣ

ನಾಮನಿರ್ಣಯ	ಪ್ರಮಾಣವಿವೇಕ	ಪದವಿವೇಕ
ಪಾದ್ಮ	ಬೃಹತ್ಸಂಹಿತಾ	ಬ್ರಹ್ಮವೈವರ್ತ
ಬ್ರಹ್ಮಸಾರ	ಬ್ರಹ್ಮಸೂತ್ರ	ಬ್ರಹ್ಮಾಂಡ
ಭಗವದ್ಗೀತಾ	ಭವಿಷ್ಯತ್ಪರ್ವ	ಭಾಗವತ
ಭಾರತ	ಮಹಾಸಂಹಿತಾ	ಮೋಕ್ಷಧರ್ಮ
ವಾಕ್ಯನಿರ್ಣಯ	ವಿಷ್ಣುಸಹಸ್ರನಾಮ	ಶಬ್ದತತ್ತ್ವ
ಶಬ್ದನಿರ್ಣಯ	ಶೈವಪುರಾಣ	ಶ್ರುತಿ
ಸತ್ತತ್ತ್ವ	ಸ್ಕಾಂದ	ಹರಿವಂಶ
ಅನಿರ್ದಿಷ್ಟ ಆಕರಗಳು (೧೫)		

೯. ಛಾಂದೋಗ್ಯೋಪನಿಷದ್ಭಾಷ್ಯ

ಛಾಂದೋಗ್ಯವು ಸಾಮವೇದದ ಉಪನಿಷತ್ತು. ದೊಡ್ಡ ಉಪನಿಷತ್ತುಗಳಲ್ಲಿ ಮೂರನೆಯದು. ಭಾಷ್ಯದ ಗ್ರಂಥಸಂಖ್ಯೆ ೧೨೦೦. ಹಯಗ್ರೀವರೂಪಿ ನಾರಾಯಣನು ಮುಖ್ಯತಃ ಇದರ ಋಷಿ. ಅನಂತರ ರಮಾಬ್ರಹ್ಮಾದಿಗಳು ಋಷಿಗಳು, ಶೇಷಶಾಯಿರೂಪಿ-ಯಾದ ನಾರಾಯಣನು ಪ್ರತಿಪಾದ್ಯ ದೇವತೆ.

ಓಂಕಾರದ ಅರ್ಥ, ಉದ್ಗೀಥಶಬ್ದಾರ್ಥ, ಭಗವಂತನು ಅಷ್ಟಮರಸ, ಪರಾರ್ಧ್ಯ ಎಂಬುದರ ನಿರೂಪಣೆ, ವಾಯುದೇವರ ಆಖಣಾಶ್ಮಸಮತ್ವ ನಿರೂಪಣೆ, ಸಾಮವಿದ್ಯೆ, ಉಷಸ್ತಿಚಾಕ್ರಾಯಣರಕಥೆ,ಸತ್ಯಕಾಮಜಾಬಾಲರಿಗೆ ಋಷಭಾದಿರೂಪದ ವಾಯು ಮೊದಲಾದ ದೇವತೆಗಳಿಂದ ವಾಸುದೇವಾದಿ ಭಗವತ್ಸ್ವರೂಪದ ಉಪದೇಶ, ಉಪಕೋಸಲರಿಗೆ ಆಹವನೀಯ, ಗಾರ್ಹಪತ್ಯ ಮತ್ತು ಅನ್ವಾಹಾರ್ಯಪಚನ ಎಂಬ ಅಗ್ನಿಗಳಿಂದ ಭಗವತ್ಸ್ವರೂಪದ ನಿರೂಪಣೆ, ಜಾನಶ್ರುತಿ ಪೌತ್ರಾಯಣನಿಗೆ ರೈಕ್ವರಿಂದ ಸಂವರ್ಗವಿದ್ಯೆಯ ಉಪದೇಶ; ವಾಯುವೇ ಸಂವರ್ಗ ಎಂಬುದರ ನಿರೂಪಣೆ, ಮೊದಲ ೨೪ ವರ್ಷಗಳಿಗೆ ವಸುಗಳು, ಅನಂತರದ ೪೪ ವರ್ಷಗಳಿಗೆ ರುದ್ರರು, ಕೊನೆಯ ೪೮ ವರ್ಷಗಳಿಗೆ ಆದಿತ್ಯರು ಹೀಗೆ ಜೀವನದಲ್ಲಿನ ೧೧೬ ವರ್ಷಗಳಿಗೆ ದೇವತಾದಿ ನಿರೂಪಣೆ; ವಸ್ವಾದಿಗಳ ಉಪಾಸನೆಯಿಂದ ರೋಗಾದ್ಯುಪದ್ರವ ಪರಿಹಾರ, ಐತರೇಯನೆಂಬ ಋಷಿಯು ಇದರ ಉಪಾಸನೆಯಿಂದ ಗಳಿಸಿದ ಸಿದ್ಧಿ, ಜ್ಯೇಷ್ಠ ಶ್ರೇಷ್ಠ ಎಂಬ ವಾಯುವಿನ ಉಪಾಸನೆ, ಅದರ ಫಲ ಮತ್ತು ಶ್ವೇತಕೇತುವಿಗೆ ಉದ್ದಾಲಕರಿಂದ ಭಗವತ್ತತ್ತ್ವಜ್ಞಾನದ ಮಹಿಮೆ ಹಾಗು ಜಗತ್ಸೃಷ್ಟಿಯ ಕ್ರಮದ ನಿರೂಪಣೆ (ಅ)ತತ್ತ್ವಮಸಿ ವಾಕ್ಯಾರ್ಥ; ಹನ್ನೆರಡು ವರ್ಷಗಳ ಕಾಲ ವೇದಾಧ್ಯಯನ ಮಾಡಿಯೂ ಅದರ ಆಂತರ್ಯವನ್ನು ತಿಳಿಯದೆ ಅಹಂಕಾರಿಯಾಗಿದ್ದ ಶ್ವೇತಕೇತುವಿಗೆ ಆತನ ತಂದೆ ಉದ್ದಾಲಕರು ನೀನೇನು

ಭಗವಂತನೇ? (ಅತತ್ತ್ವಮಸಿ) ಎಂಬುದಾಗಿ ಎಚ್ಚರಿಸಿದ ಪ್ರಸಂಗ ಈ ಉಪನಿಷತ್ತಿನ ಅತ್ಯಂತ ಪ್ರಮುಖ ಭಾಗ. ಅದನ್ನು ಶ್ರೀಮದಾಚಾರ್ಯರು ವಿಶ್ಲೇಷಿಸಿರುವ ರೀತಿ ಅತ್ಯಂತ ಅಪೂರ್ವ. ನಾರದರಿಗೆ ಸನತ್ಕುಮಾರರು ಉಪದೇಶಿಸಿದ ನಾಮವಿದ್ಯಾ ಮತ್ತು ಕೊನೆಯದಾಗಿ ಇಂದ್ರ- ವಿರೋಚನರಿಗೆ ಬ್ರಹ್ಮದೇವರ ಉಪದೇಶ. ಮೋಕ್ಷಸ್ವರೂಪವನ್ನು 'ನ ಚ ಪುನರಾವರ್ತತೇ' ಎಂದು ವರ್ಣಿಸುತ್ತ ಉಪನಿಷತ್ತಿನ ಉಪಸಂಹಾರ.

ಹೀಗೆ ಅನೇಕ ತೆರನಾದ ರಹಸ್ಯ ಪ್ರಮೇಯಗಳಿಂದ ಭರಿತವಾದ ಈ ಉಪನಿಷತ್ತಿಗೆ ಶ್ರೀಮದಾಚಾರ್ಯರು ರಚಿಸಿರುವ ಭಾಷ್ಯವು ಪ್ರತಿಯೊಂದು ಹಂತದಲ್ಲೂ ಮುಖ್ಯ ಪ್ರಮೇಯಗಳ ಮೇಲೆ ಅಪಾರಬೆಳಕು ಚೆಲ್ಲುತ್ತದೆ.

'ಸರ್ವಂ ಹ ವೈ ಭವತಿ', 'ಸರ್ವಂ ಖಲ್ವಿದಂ ಬ್ರಹ್ಮ', 'ತಜ್ಜಲಾನಿತಿ ಶಾಂತ ಉಪಾಸೀತ', 'ತತ್ತ್ವಮಸಿ' ಮೊದಲಾದ ಅಭೇದಬೋಧಕವೆಂದು ತೋರುವ ಶ್ರುತಿಗಳಿಗೆ ಭೇದವೇ ಮುಖ್ಯ ತಾತ್ಪರ್ಯ ಎಂಬುದನ್ನು ಶ್ರೀಮದಾಚಾರ್ಯರು ಸಪ್ರಮಾಣವಾಗಿ ಇದರಲ್ಲಿ ಸಮರ್ಥಿಸಿರುವರು.

೧. ಹಯಗ್ರೀವೋಪದಿಷ್ಟವಾದ ಮಂತ್ರಗಳಿಂದ ರಮಾದೇವಿಯು ಶ್ರೀಹರಿಯನ್ನು ಈ ಉಪನಿಷತ್ತಿನಿಂದ ಸ್ತುತಿಸಿದಳು :

ಹಯಗ್ರೀವೋದ್ಗೀತವಾಕ್ಯೈಃ ರಮಾ ದೇವೀ ರಮಾಪತಿಮ್ ।
ಓಮಿತ್ಯೇತನ್ಮುಖ್ಯೈರ್ದೇವಮಸ್ತುವತ್ ಸಾಮವೇದಗೈಃ ॥ ....
ಹಯಗ್ರೀವಮುಖೋತ್ಥಾನಿ ಯಾನಿ ವಾಕ್ಯಾನಿ ತಾನಿ ತು ।
ರಮಾ ದದರ್ಶ ತಾನ್ಯೇವ ಬ್ರಹ್ಮಾ ತಾನ್ಯೇವ ನಾರದಃ ।
ಯಾನಿ ವಿಷ್ಣೋರಯೋಗ್ಯಾನಿ ಪ್ರಾರ್ಥನಾದ್ಯಾತ್ಮಕಾನಿ ತು ।
ತಾನ್ಯುತ್ತರೇಷಾಂ ವಾಕ್ಯಾನಿ ಭವಿಷ್ಯಾಣ್ಯವದದ್ಧರಿಃ ।
ಏವಂ ರಮಾ ತಥಾ ಬ್ರಹ್ಮಾ ಛಾಂದೋಗ್ಯೋಪನಿಷದ್ಧಿ ಸಾ ।'

– ಇತಿ ಸಾಮಸಂಹಿತಾಯಾಮ್

೨. ಅವೈಷ್ಣವರು ಮಾಡುವ ಪೂಜಾದಿಗಳನ್ನು ಬ್ರಹ್ಮಮೊದಲಾದ ಹೆಸರಿನ ಅಪಭ್ರಷ್ಟದೇವತೆಗಳು ಸ್ವೀಕರಿಸುವರು; ವೈಷ್ಣವರು ಮಾಡುವ ಪೂಜೆಯನ್ನು ಮಾತ್ರವೇ ಬ್ರಹ್ಮಾದಿದೇವತೆಗಳು ಸ್ವೀಕರಿಸಿ ಅನುಗ್ರಹಿಸುವರು :

ಅಪಭ್ರಷ್ಟಾ ಅದೇವಾಶ್ಚ ಬ್ರಹ್ಮಾದ್ಯಾಖ್ಯಾಯುತಾ ಅಪಿ ।
ದೇವಸಂಜ್ಞಾಶ್ಚ ದೀನತ್ವಾತ್ ಪೂಜಯೇಯುರ್ನ ತಾನ್ ಕ್ವಚಿತ್ ॥
ಯದ್ಭಾಗವಬುದ್ಧ್ಯೈವ ದತ್ತಂ ಬ್ರಹ್ಮಾದಯಃ ಸುರಾಃ ।
ವೈದಿಕಾಃ ಪ್ರತಿಗೃಹ್ಣೀಯುರಪಭ್ರಷ್ಟಾಸ್ತಥೇತರತ್ ॥

೩. ತಾರತಮ್ಯಜ್ಞಾನ, ಏಕಾಂತಭಕ್ತಿ ಅಚ್ಛಿದ್ರಸೇವನೆಗಳು ಮೋಕ್ಷಕ್ಕೆ ಮುಖ್ಯಕಾರಣ.

ಯಥಾಕ್ರಮಪರಿಜ್ಞಾನಾದೇಕಾಂತಿತ್ವಾಚ್ಚ ಕೇವಲಮ್ ।
ಅಚ್ಛಿದ್ರತ್ವಾಚ್ಚ ನಿಯತೋ ಮೋಕ್ಷೋಽನ್ಯತ್ ತು ವಿಡಂಬನಮ್ ॥
ವಿಷ್ಣೌ ಭಕ್ತಿರ್ವಿಶೇಷೇಣ ಮೋಕ್ಷಾವಾಪ್ತೌ ಹಿ ಕಾರಣಮ್ ।
ತದ್ಭಕ್ತೇಷು ಕ್ರಮೇಣೈವ ರಮಾದ್ಯೇಷು ತ್ವನಂತರಮ್ ॥
ತೃತೀಯಮಪಿ ವೈರಾಗ್ಯಂ ನ ಚಾನ್ಯನ್ಮೋಕ್ಷಕಾರಣಮ್ ।
ಏತತ್ಸಾಧನತಾ ಹೇತೋಸ್ತದನ್ಯದ್ಧಿ ವಿಧೀಯತೇ ॥

೪. ಶ್ರೀಹರಿಯು ಪರಾರ್ಧ್ಯ ಎಂಬುದನ್ನು ಅಲ್ಲಿ ಸ್ಫುಟಪಡಿಸಿರುವ ರೀತಿ ತುಂಬಾ ಅಪೂರ್ವ :

ಪರರ್ಧಂ ಪರಮಾದುಚ್ಚಂ ಪರಾರ್ಧಂ ತು ತತೋಽಧಿಕಮ್ ।
ತತೋಽಧಿಕಂ ಪರಾರ್ಧಿಃ ಸ್ಯಾತ್ ಪರಾರ್ಧ್ಯಮಿತಿ ತತ್ಪರಮ್ ॥
ಪರತಃ ಪರಮಾಚ್ಚೈವ ಪರಾರ್ಧೋ ವಾಯುರೀರಿತಃ ।
ಪರಾರ್ಧಿನೀ ಶ್ರೀರುದ್ದಿಷ್ಟಾ ಪರಾರ್ಧ್ಯೋ ಭಗವಾನ್ ಹರಿಃ ॥

ಇತಿ ಶಬ್ದನಿರ್ಣಯೇ ।

ಎಂದರೆ ಪರಮಕ್ಕಿಂತ ಹೆಚ್ಚಿನದು ಪರರ್ಧ, ಪರಾರ್ಧ ಅದರ ಮೇಲಿನದು, ಅದಕ್ಕಿಂತ ಮಿಗಿಲಾದದ್ದು ಪರಾರ್ದ್ಧಿ, ಪರಾರ್ಧ್ಯ ಎಲ್ಲದಕ್ಕಿಂತ ಮಿಗಿಲಾದುದು; ಇಲ್ಲಿ ಪರಾರ್ಧ ಎಂದರೆ ವಾಯುದೇವರು ಪರಾರ್ಧಿನೀ ಮಹಾಲಕ್ಷ್ಮಿ ಪರಾರ್ಧ್ಯ ಶ್ರೀಹರಿ.

೫. ಪ್ರಾಣದೇವರು ಜೀವೋತ್ತಮರು ಎನ್ನುವುದನ್ನು ವಿವರವಾಗಿ ನಿರೂಪಿಸಿ, ಪ್ರಾಣದೇವರಿಂದಾಗಿ ತಮ್ಮ ಚೌರ್ಯಕಾರ್ಯಕ್ಕೆ ವಿಘ್ನವೊದಗಿದ್ದರಿಂದ ದೈತ್ಯರು ವಿಶೇಷವಾಗಿ ಪ್ರಾಣದೇವರಿಗೆ ವಿರೋಧವನ್ನು ಮಾಡುವುದಲ್ಲದೆ, ಅವರ ಉಪಾಸಕರ ಮೇಲೆ ವೈರ ಸಾಧಿಸುವರು ಎಂಬ ವಿಶೇಷಾಂಶ ಇಲ್ಲಿದೆ :

ಪ್ರಾಣಂ ಪ್ರಾಪ್ಯೈವ ವಿಧ್ವಸ್ತಾ ಯಥಾ ಸರ್ವೇಽಸುರಾಸ್ತಥಾ ।
ತದುಪಾಸಕಸ್ಯ ಯಶ್ಚಾಪಿ ಪ್ರತೀಪಂ ದಾತುಮಿಚ್ಛತಿ ॥

೬. ಮಟಚಿ, ಆಟಕಿ, ಪ್ರದ್ರಾಣಕ ಮೊದಲಾದ ಅನೇಕ ಪದಗಳಿಗೆ ವಿಶೇಷಾರ್ಥವನ್ನು ತಿಳಿಸಿರುವರು :

ಉಪಲಾ ಇಷ್ಟಕಾಃ ಸ್ಥೂಲಾ ಮಟಚೀತಿ ಪ್ರಕೀರ್ತಿತಾ ॥......

ಆಸನ್ನಯೌವನಾ ಯೋಷಿದಾಟಕೀತ್ಯಭಿಧೀಯತೇ ।
ಪ್ರದ್ರವನ್ನನ್ನಪಾನಾರ್ಥಂ ಪ್ರದ್ರಾಣಕ ಇತೀರಿತಃ ॥

— ಇತಿ ಶಬ್ದನಿರ್ಣಯೇ ॥

ನಿನದಃ ಸಮುದ್ರಘೋಷಸ್ಯಾನ್ನದಥುರ್ಮೇಘಸಂಭವಃ ।
ದೀರ್ಘಬಿಂದುವಿಸರ್ಗಾದೀನಾಂ ಲೋಪೋ ವಾ ಇತಿ
ಸೂತ್ರಾದಾತುವೈವಾಶ್ವಾ॥ (ಮಹಾವ್ಯಾಕರಣಸೂತ್ರ)

ಕೋಲಂ ಪೂಗಫಲಂ ಪ್ರೋಕ್ತಂ ಕಲಂ ತಾಂಬೂಲಮಾತ್ರಕಮ್ ।
ಇತ್ಯಭಿಧಾನಮ್ ।

ಅಸ್ಥಿರಸ್ಮರಣಂ ಚಿತ್ತಂ ಸ್ಥಿರಸಂಸ್ಮರಣಂ ಸ್ಮರಃ । ಇತಿ ಶಬ್ದನಿರ್ಣಯೇ ।

ವೇದನಂ ಜ್ಞಾನಮಾತ್ರಂ ಸ್ಯಾತ್ ವಿದ್ವತ್ವಂ ತು ವಿಶೇಷತಃ । ಇತಿ ಚ ।

ವೇದನಂ ಶಾಸ್ತ್ರತೋ ಜ್ಞಾನಂ ವಿಜ್ಞಾನಂ ಬ್ರಹ್ಮದರ್ಶನಮ್ ॥ ಇತಿ ಚ ।

ಮೋಕ್ಷೇ ಯಸ್ಮಿನ್ ಪ್ರವೇಶಃ ಸ್ಯಾತ್ ಸಾ ಪ್ರತಿಷ್ಠಾ ಹಿ ಮುಖ್ಯತಃ ।
ಉಪಚಾರತಸ್ತ್ವವಸ್ಥಾನಮಿತಿ ಶಬ್ದವಿದೋ ವಿದುಃ । ಇತಿ ಚ ।

ಆನುಪೂರ್ವೀ ಶ್ರುತಿರ್ವೇದ ಆಮ್ನಾಯಶ್ಚೇತಿ ಕಥ್ಯತೇ । ಇತ್ಯಭಿಧಾನಾತ್ ।

೭. ನೀರಿನಲ್ಲಿ ನಾರಾಯಣಾದಿ ಪಂಚರೂಪದ ವಿಷ್ಣುವನ್ನಾರಾಧಿಸುವವನಿಗೆ ಜಲದಲ್ಲಿ ಮೃತ್ಯು ಒದಗದು :

ಅಪ್ಸು ಪಂಚವಿಧೋಪಾಸೀ ಯೋ ನಾರಾಯಣವಾನ್ ಭವೇತ್ ।
ನ ಚಾಸ್ಯ ಮೃತಿರಪ್ಸು ಸ್ಯಾದಪ್ಸುಷದ್ಭಗವಾನ್ ಹರಿಃ ॥

೮. ಚಿತ್ರಾದಿ ನಕ್ಷತ್ರಗಳಲ್ಲಿ ನೆಲೆಸಿದ್ದ ಶ್ರೀಹರಿಯು ಚೈತ್ರ ಮೊದಲಾದ ಮಾಸಗಳಲ್ಲಿದ್ದು ಆ ಶಬ್ದಗಳಿಂದ ವಾಚ್ಯನಾಗಿರುವನು.

ಚಿತ್ರಾದಿಯೋಗದಾತ್ಮತ್ವಾನ್ಮಾಸನಾಮಾ ಸ್ವಯಂ ಹರಿಃ ।

ಇದರಿಂದ ಚೈತ್ರ,ವೈಶಾಖ ಮೊದಲಾದ ಮಾಸಗಳ ಪೂರ್ಣಿಮೆಯಂದು ಆಯಾ ನಕ್ಷತ್ರಗಳು ಒದಗುವುದರಿಂದ ಅವುಗಳಿಗೆ ಆ ಹೆಸರು ಒದಗಿದೆ ಎಂಬ ವಿಷಯ ಸ್ಫುಟಪಡುವುದು.

೯. ಪ್ರಾಸಂಗಿಕವಾಗಿ ಜೀವೇಶ್ವರೈಕ್ಯ, ಜಗನ್ಮಿಥ್ಯಾತ್ವ, ಶೂನ್ಯವಾದ ಮಾಯಾ-ವಾದಗಳ ಸಾಮ್ಯ, ಪ್ರಪಂಚೋ ಯದಿ ವಿದ್ಯೇತ ಇತ್ಯಾದಿ ಅದ್ವೈತಪರವೆಂದು ತೋರುವ ಶ್ರುತಿಗಳ ಮುಖ್ಯಾರ್ಥಗಳನ್ನು ವಿವರಿಸಿರುವರು.

೧೦. ವಿಷ್ಣು ಮೊದಲಾದ ದೇವತೆಗಳ ಸ್ವರವ್ಯತ್ಯಾಸವನ್ನು ತಿಳಿಸುವ ವಾಕ್ಯಗಳು ಹೀಗಿವೆ :

ವಿಷ್ಣೋಃ ಸ್ವರೋ ವೃಷಭವನ್ಮೇಘನಾದವದೇವ ವಾ ।
ಸ್ತ್ರೀಪಶುಸ್ವರವದ್ವಹ್ನೇರ್ಗಂಭೀರೋಽನುಪಮೋ ವಿಭೋಃ ॥

ಬ್ರಹ್ಮಣಸ್ತ್ವಥ ಸೋಮಸ್ಯ ಸಾಕ್ಷಾದ್ಘಂಟಾನಿನಾದವತ್ ।
ಮೃದುಮೇಘಸ್ವರೋ ವಾಯೋರಿಂದ್ರಸ್ಯ ಸ್ತನಯಿತ್ನುವತ್ ॥
ಬೃಹಸ್ಪತೇಃ ಕ್ರೌಂಚವಚ್ಚ ವರುಣಸ್ಯ ತು ವಿಸ್ವರಃ ।
ಏಕಸ್ಯ ಪಾದವರ್ಷಸ್ಯ ಸ್ವರೋ ವಿಷ್ಣೋರುದಾಹೃತಃ ।
ವಾಯೋರ್ವಿಂಶತಿವರ್ಷಸ್ಯ ಬ್ರಹ್ಮಣಸ್ತು ತದಂತರಾ ॥'

೧೧. ಇತರ ಎಲ್ಲ ಧರ್ಮಗಳೂ ಸ್ವರ್ಗಾದಿಸಾಧನಗಳು ಮಾತ್ರ; ಬ್ರಹ್ಮಜ್ಞಾನವೊಂದೇ ಮುಕ್ತಿಸಾಧನ :

ಸರ್ವಧರ್ಮೈಃ ಪುಣ್ಯಲೋಕೋ ಬ್ರಹ್ಮಜ್ಞಾನಾದ್ವಿಮುಚ್ಯತೇ ।...
ಸರ್ವೇಷಾಮಾಶ್ರಮಸ್ಥಾನಾಮಜ್ಞಾನಾಂ ಪುಣ್ಯಲೋಕತಾ ।
ಅಪರೋಕ್ಷದೃಶಾಂ ವಿಷ್ಣೋರಮೃತತ್ವಂ ನ ಚಾನ್ಯಥಾ ॥

ಯಜ್ಞಾಧ್ಯಯನದಾನೈಸ್ತು ಗೃಹೀ ಸ್ಯಾತ್ಸೋಮಲೋಕಗಃ ।
ಯತಯಸ್ತಪಸಾ ಸೂರ್ಯಂ ಚತ್ವಾರೋಽಪಿ ವಿಶೇಷತಃ ।
ಗಚ್ಛಂತಿ ತಪಸೈವರ್ಷೀನ್ ವನಸ್ಥಾ ಬ್ರಹ್ಮಚಾರಿಣಃ ।
ನೈಷ್ಠಿಕಾ ವಾಲಖಿಲ್ಯಾಂಶ್ಚ ಗುರುಶುಶ್ರೂಷಯೈವ ತು ।
ಯದಿ ಪಶ್ಯಂತ್ಯೇತ ಏವ ಸಾಕ್ಷಾದ್ದೇವಂ ಜನಾರ್ದನಮ್ ।
ಅಮೃತತ್ವಂ ತದಾ ಯಾಂತಿ ನಾನ್ಯಥಾ ತು ಕಥಂಚನ ॥

೧೨. ದೇವರನ್ನು ಮರೆಯದಿರುವುದು ಎಂದರೆ ಸದಾ ಸ್ಮರಿಸುವುದು, ತಪ್ಪು ತಿಳುವಳಿಕೆ ಹೊಂದದಿರುವುದು, ಶಾಸ್ತ್ರಾಭ್ಯಾಸವನ್ನು ಸದಾ ಮಾಡುವುದು, ಶ್ರವಣ ಮನನಗಳಲ್ಲಿ ತೊಡಗುವುದು, ನಿಷಿದ್ಧಕರ್ಮಗಳನ್ನು ಬಿಡುವುದು, ಸ್ವಧರ್ಮಾಚರಣೆಯನ್ನು ಸದಾ ಮಾಡುವುದು ಎಂದರ್ಥ :

ಅವಿಸ್ಮೃತಿಃ ಸದಾ ವಿಷ್ಣೋರನ್ಯಥಾಜ್ಞಾನವರ್ಜನಮ್ ।
ಶಾಸ್ತ್ರಾಭ್ಯಾಸಃ ಸದೋದ್ಯೋಗಾಚ್ಛ್ರವಣಾಚ್ಚ ವಿಚಾರತಃ ॥
ನಿಷಿದ್ಧಕರ್ಮಣಾಂ ತ್ಯಾಗಃ ಸ್ವಧರ್ಮಸ್ಯ ಕೃತಿಃ ಸದಾ ।
ಅಪ್ರಮಾದ ಇತಿ ಪ್ರೋಕ್ತಃ ....

೧೩. ಸರ್ವವೇದಗಳಲ್ಲೂ ವಿಷ್ಣುವೇ ಪ್ರತಿಪಾದ್ಯನಾದರೂ, ಆರಣ್ಯಕಾದಿಗಳಲ್ಲಿ ಇನ್ನೂ ವಿಶೇಷವಾಗಿ ಪ್ರತಿಪಾದ್ಯನಾಗಿರುವನು :

'ವಿಷ್ಣುರುಕ್ತಃ ಸರ್ವವೇದೈರ್ಮಂತ್ರೇಷು ಚ ವಿಶೇಷತಃ ।
ಆರಣ್ಯಕೇ ವಿಶೇಷೇಣ ನೈವಾನ್ಯತ್ಕಿಂಚಿದುಚ್ಯತೇ ॥
ಕರ್ಮಾರ್ಥಂ ಚ ಬ್ರಾಹ್ಮಣಂ ಸ್ಯಾದಮುಖ್ಯಾರ್ಥವಿವಕ್ಷಯಾ ।
ಮುಖ್ಯತೋ ವಿಷ್ಣುರೇವೈಕೋ ಬ್ರಾಹ್ಮಣೇಷ್ವಪಿ ಕಥ್ಯತೇ ॥

ಆರಣ್ಯಕೇಷ್ಟುತೇ ವಿಷ್ಣುಂ ನೈವಾನ್ಯತ್ಕಿಂಚಿದುಚ್ಯತೇ ।
ಸೂತ್ರಾತ್ಮಾ ತೂಚ್ಯತೇ ವಿಷ್ಣೋಸ್ತದ್ವಿಶಿಷ್ಟತ್ವವಿತ್ತಯೇ ॥
ಕುತ್ರಚಿತ್ ತದುಪಾಸ್ತಿಶ್ಚ ತಸ್ಯಾಧ್ಯರ್ಥತನುತ್ವತಃ ।
ತಸ್ಮಿನ್ ವಿಷ್ಣೋರುಪಾಸ್ತ್ಯರ್ಥಂ ನಾನ್ಯಥಾ ಕಿಂಚಿದುಚ್ಯತೇ ॥' ಇತಿ ಬ್ರಹ್ಮಾಂಡೇ ।

'ಸರ್ವಾಸು ಶಾಖಾಸ್ವಾರಣಮಾವರ್ತಯೇದಾರಣಮಾವರ್ತಯೇದುಪನಿಷದಮಾವರ್ತಯೇ-ದುಪನಿಷಮಾವರ್ತಯೇತ್' ಇತ್ಯುಪನಿಷದಭ್ಯಾಸಸ್ಯ ಸತಾತ್ಪರ್ಯಂ ವಿಹಿತತ್ವಾದಭಗವದ್ವಿಷಯಸ್ಯ ನಿಂದಿತತ್ವಾಚ್ಚ ನೋಪನಿಷತ್ತ್ವಮನ್ಯದುಚ್ಯತೇ ।

೧೪. ಷಡ್ವಿಧಗಾಯತ್ರಿಯ ವಿವರ :

ಅಯನಾದ್ಧೃದಿ ವಿಷ್ಣುಃ ಸ ಹೃದಯಂ ಕೀರ್ತಿತೋ ಬುಧೈಃ ।
ಗಾಯತ್ರ್ಯಾಂ ಸಂಸ್ಥಿತೋ ವಿಷ್ಣುಃ ಸ್ತ್ರೀರೂಪಃ ಸೂರ್ಯಸಪ್ರಭಃ ॥
ದ್ವಿತೀಯಶ್ಚೈವ ಮತ್ಸ್ಯಾದಿರ್ಭೂತನಾಮಾಽವತಾರಗಃ ।
ತೃತೀಯೋ ವಾಚಿಸಂಸ್ಥಶ್ಚ ಸ್ತ್ರೀರೂಪೋ ಹಯಶೀರ್ಷಕಃ ॥
ಚತುರ್ಥಃ ಪೃಥಿವೀಸಂಸ್ಥಃ ಸ್ತ್ರೀರೂಪಃ ಪೀತವರ್ಣಕಃ ।
ಜೀವಸ್ಯಾಂತರ್ಗತೋ ವ್ಯಾಪ್ಯ ಶರೀರಮಿತಿನಾಮಕಃ ॥
ಪಂಚಮಸ್ತದ್ಧೃದಿಸ್ಥಸ್ತು ಷಷ್ಠೋ ಹೃದಯನಾಮಕಃ ।

೧೫. ಕಿವಿಯಲ್ಲಿ ಕೇಳಿಬರುವ ಶಬ್ದ ಮುಖ್ಯಪ್ರಾಣಮಾಡುವ ಶ್ರೀಹರಿಯ ಸ್ತುತಿ :

'ಸಪ್ರಾಣಃ ಸ್ತೌತಿ ತಂ ವಿಷ್ಣುಂ ಸಾ ಶ್ರುತಿಃ ಶ್ರೂಯತೇ ಸದಾ ।
ಕರ್ಣೌ ಪಿಧಾಯ ತದ್ವಿದ್ವಾನ್ ದಿವ್ಯಚಕ್ಷುಃ ಸುಕೀರ್ತಿಮಾನ್ ।
ಮುಕ್ತೌ ಭೂತ್ವಾ ಭವೇದ್ಯಸ್ಮಾದುಪಾಸೀತೈವ ತಂ ತತಃ ॥'

– ಇತಿ ಶಬ್ದನಿರ್ಣಯೇ ।

೧೬. ವಿಷ್ಣುಲೋಕ ಬ್ರಹ್ಮಲೋಕಗಳ ಬಗ್ಗೆ ಬಂದಿರುವ ವಿಶೇಷವಿವರ :

ಪೃಥಿವೀಸ್ಥೇಷು ಸರ್ವೋಚ್ಚೋ ಲೋಕೋಽನಂತಾಸನಾತ್ಮಕಃ ।
ಅಂತರಿಕ್ಷೇಭ್ಯಶ್ಚ ಶ್ವೇತದ್ವೀಪೇ ಸ್ಥಿತೋ ಹರೇಃ ॥
ದ್ಯಾಷ್ಟತ್ಮಕೇಭ್ಯಶ್ಚ ಸರ್ವೇಭ್ಯೋ ವೈಕುಂಠಶ್ಚೋಚ್ಚ ಉಚ್ಯತೇ ।
ಪೃಥಿವ್ಯಾಂ ದ್ಯೌರ್ಮಹಾಮೇರುರಾಕಾಶೇ ಸೂರ್ಯಮಂಡಲಮ್ ।
ದಿವೀಂದ್ರಸದನಂ ಚೈವ ತತ್ಪರೇ ತು ದಿವಃ ಪರೇ ।
ಪೃಥಿವ್ಯಾಂ ಬ್ರಹ್ಮಣೋ ಮೇರೌ ವೈಜಯಂತೇಽಂತರಿಕ್ಷಗಮ್ ।
ತೃತೀಯಂ ಸತ್ಯಲೋಕೇ ಚ ಸದನಂ ತ್ರಿವಿಧಂ ಸ್ಮೃತಮ್ ।
ತೇಭ್ಯೋಽನಂತಾಸನಾದ್ಯಾ ಯತ್ಪರತೋ ವಿಶ್ವತಃ ಪರಃ ॥' – ಇತಿ ಸತ್ತತ್ತ್ವೇ

೧೭. ಋಗ್ವೇದ ಮೊದಲಾದ ಹೆಸರುಗಳು ಸಹ ಭಗವದ್ವಾಚಕ :

ಋಗ್ವೇದಾಖ್ಯಃ ಸ ಋಗ್ವೇದೇ ಜ್ಞಾನಂ ವೇದಯತೇ ಯತಃ ।
ಯಜುರ್ವೇದೋ ಯಜುರ್ವೇದೇ ಯಜ್ಞಂ ವೇದಯತೇ ಯತಃ ॥
ಸಾಮವೇದಃ ಸಾಮವೇದೇ ಸಾಮ್ಯಂ ವೇದಯತೇ ಹ್ಯಯಂ ।
ಏವಂ ಚತುರ್ವಿಧಂ ತತ್ತ್ವಂ ತದವೋಚಮಹಂ ಹರೇಃ ।
ಇತ್ಯುವಾಚೇಂದಿರಾ ದೇವೀ ಸ್ತುವಂತೀ ಪರಮಂ ಹರಿಮ್ ॥

೧೮. ಆಯುಷ್ಯದ ಮೂರು ಹಂತಗಳಲ್ಲಿ ಕ್ರಮವಾಗಿ ವಸು, ರುದ್ರ, ಆದಿತ್ಯಾಂತರ್ಗತವಾದ ಭಗವದ್ರೂಪಗಳನ್ನು ಸ್ಮರಿಸುವುದರಿಂದ ಆ ಕಾಲದಲ್ಲಿ ಒದಗುವ ಅಪಮೃತ್ಯು ಪರಿಹಾರವಾಗುವುದು :

ವಿಷ್ಣುಪೂಜಾರ್ಥಯಜ್ಞೋಽಹಮಿತ್ಯುಪಾಸನಮಾದರಾತ್ ।
ಕುರ್ವೀತ ಪುರುಷೋ ನಿತ್ಯಂ ತಸ್ಯ ಯತ್ಷೋಡಶೋತ್ತರಮ್ ॥
ಶತಮಾಯುಸ್ತತ್ಸವನತ್ರಯಮೀರಿತಮುತ್ತಮಮ್ ।
ಚತುರ್ವಿಂಶತ್ತು ಯತ್ಪೂರ್ವಂ ಪ್ರಾತಃಸವನಮೇವ ತತ್ ।
ಪ್ರಾರ್ಥಯಿತ್ವಾ ವಸೂಂಸ್ತದ್ಗಂ ಪುಮಾನ್ ಮೃತ್ಯುಮಪಾನುದೇತ್ ।
ಮಧ್ಯೇ ಚತುಶ್ಚತ್ವಾರಿಂಶನ್ಮಧ್ಯಮಂ ಸವನಂ ಸ್ಮೃತಮ್ ।
ರುದ್ರಾಣಾಂ ಪ್ರಾರ್ಥನೇನಾತ್ರ ಪುಮಾನ್ಮೃತ್ಯುಮಪಾನುದೇತ್ ।
ತತೋಽಷ್ಟಚತ್ವಾರಿಂಶತ್ತು ತೃತೀಯಂ ಸವನಂ ಸ್ಮೃತಮ್ ।
ಆದಿತ್ಯಾನಾಂ ಪ್ರಾರ್ಥನೇನ ತದ್ಗಂ ಮೃತ್ಯುಮಪಾನುದೇತ್ ॥'

– ಇತಿ ಸರ್ವಯಜ್ಞೇ ।

೧೯. ಮಹಿದಾಸ, ಕೃಷ್ಣ, ಕಪಿಲ ಎಂಬ ಮೂರು ಭಗವದ್ರೂಪಗಳಲ್ಲದೇ ಅದೇ ಹೆಸರಿನ ಮನುಷ್ಯರೂ ಇರುವರು. ಅವರು ಬ್ರಹ್ಮದೇವರಿಂದ ತಮ್ಮ ಹೆಸರು ಮಾತ್ರವಲ್ಲದೆ ತಮ್ಮ ತಾಯಿಯ ಹೆಸರೂ ಸಹ ಭಗವಂತನ ತಾಯಿಯ ಹೆಸರೇ ಆಗಿರಬೇಕು ಎಂಬ ವರವನ್ನು ಪಡೆದುಕೊಂಡಿದ್ದರು. ಅದರಲ್ಲೂ ಕಪಿಲ ಎಂಬುವನು ತನ್ನ ಶಿಷ್ಯಪ್ರಶಿಷ್ಯರ ಹೆಸರೂ ಸಹ ಕಪಿಲನಾಮಕ ಭಗವಂತನ ಶಿಷ್ಯರ ಹೆಸರೇ ಆಗಿರಬೇಕು ಎಂಬ ವಿಶೇಷವರವನ್ನು ಪಡೆದಿದ್ದ. ಇದರಿಂದಾಗಿ ತಾವೂ ಸಹ ವೇದಪ್ರತಿಪಾದ್ಯರೆಂದಾಗುವುದು ಎಂಬುದು ಅವರ ಭಾವವಾಗಿತ್ತು. ಹೀಗೆ ಭಗವದ್ರೂಪಗಳಲ್ಲದ ಮಹಿದಾಸಾದಿಗಳ ಬಗ್ಗೆ ವಿವೇಚನೆ ಇರಬೇಕು. ಇಲ್ಲವಾದಲ್ಲಿ ಘೋರಅನರ್ಥ ತಪ್ಪಿದ್ದಲ್ಲ :

ಮಹಿದಾಸಸ್ತ್ವೈತರೇಯಃ ಕೃಷ್ಣೋಽನ್ಯೋ ದೇವಕೀಸುತಃ ।
ಕಪಿಲಶ್ಚ ದ್ವಿತೀಯೋಽನ್ಯಸ್ತ್ರಯ ಏತೇ ಪುರಾ ನರಾಃ ।

ಸಂಗತ್ಯೋಚ್ಚೈಸ್ತಪಸ್ತೇಪುರ್ಬ್ರಹ್ಮಣೇ ಪರಮೇಷ್ಠಿನೇ ।
ಮಾತುಃ ಸ್ವಸ್ಯ ಚ ನಾಮೈಕ್ಯಂ ವಿಷ್ಣುನಾ ಸ್ಯಾದಿತಿ ಹ್ಯುಭೌ ।
ಸ್ವಾತ್ಮಶಿಷ್ಯಪ್ರಶಿಷ್ಯಾಣಾಂ ನಾಮೈಕ್ಯಂ ಕಪಿಲಸ್ತಥಾ ।
ಏವಮೇವ ಚ ವೇದೋಕ್ತಾ ಭವೇಮೇತಿ ತ್ವತಂದ್ರಿತಾಃ ।
ತಾನ್ ವರಾನ್ ಪ್ರದದೌ ತೇಷಾಂ ಬ್ರಹ್ಮಾ ಲೋಕಪಿತಾಮಹಃ ।
ತಸ್ಮಾತ್ ತನ್ನಾಮಿನಶ್ಚಾಸಂಸ್ತ್ರಯಸ್ತೇ ಮುನಯೋಽಪಿ ಹಿ ।
ಮಹಿದಾಸಸ್ತ್ವೈತರೇಯೋ ಬಹ್ವೃಚೋಪನಿಷದ್ಗತಃ ।
ಸಾಕ್ಷಾತ್ ಸ ಭಗವಾನ್ ವಿಷ್ಣುಸ್ತನ್ನಾಮೈಕೋ ಮುನಿರ್ಹ್ಯಭೂತ್ ।
ಕೃಷ್ಣಸ್ತು ವಾಸುದೇವಾಖ್ಯಃ ಪರಮಾತ್ಮೈವ ಕೇವಲಮ್ ।
ತನ್ನಾಮಾ ದೇವಕೀಪುತ್ರಸ್ತ್ವನ್ಯೋಽಪ್ಯಭವದಂಜಸಾ ।
ಕಪಿಲೋ ವಾಸುದೇವಾಖ್ಯಃ ಸಾಕ್ಷಾನ್ನಾರಾಯಣಃ ಪ್ರಭುಃ ।
ತನ್ನಾಮಾ ಕಪಿಲೋಽನ್ಯಸ್ತು ಶಿಷ್ಯನಾಮ್ನಾ ಸಹಾಭವತ್ ।
ಸ ಷೋಡಶಶತಂಜೀವೀ ಮಹಿದಾಸೋಽಪರಸ್ತ್ವೃಷಿಃ ।
ಘೋರಶಿಷ್ಯಸ್ತಥಾ ಕೃಷ್ಣಃ ಕಪಿಲಶ್ಚ ಕುಶಾಸ್ತ್ರಕೃತ್ ।
ತ್ರಯ ಏತೇ ವರಂ ಪ್ರಾಪ್ಯ ಬ್ರಹ್ಮಣಃ ಪರಮೇಷ್ಠಿನಃ ।
ಕೃತಕೃತ್ಯಾಃ ಪ್ರಮುಮುದುಸ್ತನ್ನಾಮಾನಶ್ಚ ತೇಽಭವನ್ ' ಇತಿ ಕಾಲಕೀಯೇ ॥

೨೦. ಭೋಜನಕ್ಕೆ ಪೂರ್ವೋತ್ತರಗಳಲ್ಲಿ ಪ್ರಾಣನನ್ನು ಶ್ರೀಹರಿಯ ವಸ್ತ್ರ ಎಂದು ಭಾವಿಸಿ ಆಪೋಶನ ತೆಗೆದುಕೊಳ್ಳುವವರು ಸ್ವರ್ಗದಲ್ಲೂ ಮುಕ್ತಿಯಲ್ಲೂ ದಿವ್ಯವಸ್ತ್ರವನ್ನು ಪಡೆಯುವನು :

ಪ್ರಾಣಸ್ಯ ವಸ್ತ್ರಬುದ್ಧ್ಯಾ ತು ಭೋಜನೋಭಯತಃ ಪಿಬನ್ ।
ಸ್ವರ್ಗೇ ಮುಕ್ತೌ ತಥಾ ದಿವ್ಯವಸ್ತ್ರಲಾಭೀ ಭವತ್ಯಲಮ್ ॥

೨೧. ಪ್ರಾಣವಿದ್ಯೆಯನ್ನು ಉಪಾಸನೆ ಮಾಡುವವನು ಶುಷ್ಕಪದಾರ್ಥಗಳನ್ನೂ ಅಂಕುರಿಸುವಂತೆ ಮಾಡಬಲ್ಲ, ದಿವ್ಯವಾದ ತತ್ತ್ವಜ್ಞಾನವನ್ನು ಪಡೆದು ಉದ್ಧೃತನಾಗಬಲ್ಲ:

ಯೋಗ್ಯಸ್ಯ ಪ್ರಾಣವಿದ್ಯಾಯಾಂ ಸ್ಥಾಣೋರಪಿ ಹಿ ತಚ್ಛ್ರುತೇಃ ।
ಪಲಾಶಾದ್ಯಂ ಭವೇದತ್ರ ಪರತೋ ಮುಕ್ತಿರೇವ ಚ ॥
ವಿಷ್ಣೋರ್ಜ್ಞಾನಮನುಪ್ರಾಪ್ಯ ಭವೇನ್ನಾಸ್ತ್ಯತ್ರ ಸಂಶಯಃ ॥

ಇತಿ ಪ್ರಾಣಸಂಹಿತಾಯಾಂ ।

೨೨. ಇದರಲ್ಲಿ ಬರುವ ತತ್ತ್ವಮಸಿ ಎಂದು ಅದ್ವೈತಬೋಧಕವಾಗಿ ಮಾಯಾವಾದಿಗಳು ಭ್ರಮಿಸಿರುವ ವಾಕ್ಯಕ್ಕೆ ಸಮಗ್ರವಾದ ದ್ವೈತಪರಅರ್ಥವನ್ನು

ನೀಡಿರುವರು. ಆ ಪ್ರಸಂಗದಲ್ಲಿ ಪ್ರಸ್ತಾಪಿತವಾಗಿರುವ ಒಂಭತ್ತು ದೃಷ್ಟಾಂತಗಳನ್ನೂ ಸಹ ದ್ವೈತಪರವಾಗಿ ವಿಶ್ಲೇಷಿಸಿ ಅವು ಮೂಲತಃ ಹರಿಸರ್ವೋತ್ತಮತ್ವಸಾಧಕ ಎಂಬುದನ್ನು ನಿರೂಪಿಸಿರುವರು.

೨೩. 'ಅಹಂ ಬ್ರಹ್ಮಾಸ್ಮಿ' ಶ್ರುತಿಗೂ ಸಹ ಮತ್ತೊಂದು ಬಗೆಯ ಅಪೂರ್ವ ಅರ್ಥವನ್ನು ಇಲ್ಲಿ ನಿರೂಪಿಸಿರುವರು :

ಹಂನಾಮ ಹನ್ಯಮಾನತ್ವಾಜ್ಜೀವಸ್ಯ ಸಮುದಾಹೃತಮ್ ।
ಜೀವಾದನ್ಯೋ ಯತೋ ವಿಷ್ಣುರಹಂನಾಮಾ ತತಃ ಸ್ಮೃತಃ ॥
ಸ್ಮೀತಿ ಜೀವಃ ಸಮುದ್ದಿಷ್ಟಃ ಸ್ಮೀತ್ಯಲ್ಪಂ ಸುಮಿತತ್ವತಃ ।
ಪೂರ್ಣತ್ವಾದಸ್ಮಿನಾಮಾಽಸೌ ಪೂರ್ಣಪೂರ್ಣತ್ವಹೇತುತಃ ।
ಬ್ರಹ್ಮಾಸ್ಮೀತ್ಯುಚ್ಯತೇ ವಿಷ್ಣುರ್ಬೃಹತ್ಪೂರ್ಣೋ ಯತಃ ಸದಾ ।
ಅಸೌ ಸೂರ್ಯಗತೋ ವಿಷ್ಣುರ್ದೂರಸ್ಥತ್ವಾತ್ಪ್ರಕೀರ್ತಿತಃ ।
ಅಹಂನಾಮಾ ಜೀವಗತೋ ನಿತ್ಯಾಹೇಯತ್ವಹೇತುತಃ ॥' ಇತಿ ಬ್ರಹ್ಮಾಂಡೇ ॥

೨೪. ಬ್ರಹ್ಮಸೂತ್ರಗಳಿಗನುಗುಣವಾಗಿಯೇ ವೇದಾದಿಶಾಸ್ತ್ರಗಳನ್ನು ಅರ್ಥೈಸಬೇಕು. ಬ್ರಹ್ಮಸೂತ್ರಗಳ ಅರ್ಥವೇ ನಿರ್ಣಾಯಕ ಎಂಬುದನ್ನು ವಿಶೇಷವಾಗಿ ತಿಳಿಸಿರುವರು :

ಬ್ರಹ್ಮಸೂತ್ರಾನುಸಾರೇಣ ವೇದಾದ್ಯಂ ಸರ್ವಮೇವ ಚ ।
ಯೋಜ್ಯಂ ನ ಬ್ರಹ್ಮಸೂತ್ರಾಣಿ ದೃಶ್ಯಮಾನಾರ್ಥತೋಽನ್ಯಥಾ ॥

– ಇತಿ ಚ ಬ್ರಹ್ಮವೈವರ್ತೇ

೨೫. ಸಪ್ತಸು ಪ್ರಥಮಾ, ಷಟ್ಸು ದ್ವಿತೀಯಾ ಮೊದಲಾದ ಅಪೂರ್ವಸೂತ್ರಗಳ ಉಲ್ಲೇಖದ ಮೂಲಕ ಅಭೇದವಾಕ್ಯಗಳು ಭೇದಬೋಧಕ ಎಂಬುದನ್ನು ತಿಳಿಸಿರುವುದು ಇಲ್ಲಿಯ ಮತ್ತೊಂದು ವಿಶೇಷ :

ನಾಮಾದಿಪ್ರಾಣಪರ್ಯಂತಾಃ ಸಪ್ತಮ್ಯರ್ಥಾಃ ಪ್ರಕೀರ್ತಿತಾಃ ।
ತೃತೀಯಾಪಂಚಮೀಷಷ್ಠೀಚತುರ್ಥ್ಯರ್ಥಾಶ್ಚ ಸರ್ವಶಃ ॥
ಶಬ್ದಾಸ್ತೇ ಬ್ರಹ್ಮಶಬ್ದೇನ ಸಂಬಧ್ಯೇಯುರ್ಯದಾ ತದಾ ।
ಬ್ರಾಹ್ಮಣೋಽಸ್ಯ ಮುಖಂ ಯದ್ವದಾತ್ಮಾ ವೈ ಪುತ್ರಕೋ ಯಥಾ ॥
ಯಥಾ ಚ ಯೂಪ ಆದಿತ್ಯ ಏವಮೇಷ ಪ್ರಕೀರ್ತಿತಃ ।
ಸಪ್ತಸು ಪ್ರಥಮಾ ಯಸ್ಮಾದ್ಭೂಯೋ ಭೂಯಸ್ತ್ವತಸ್ತಥಾ ॥
ಷಟ್ಸು ದ್ವಿತೀಯಾ ಯಸ್ಮಾಚ್ಚ ಕಾರಣತ್ವಾತ್ ಪರಸ್ಯ ಚ ।
ನ ಹ್ಯನ್ಯದನ್ಯದಿತ್ಯೇವ ಧ್ಯಾತಂ ಸ್ಯಾತ್ ಪುರುಷಾರ್ಥದಮ್ ॥
ಅನರ್ಥಶ್ಚ ಭವೇತ್ ತಸ್ಮಾದ್ಭೃತ್ಯೇ ರಾಜೇತಿಬೋಧವತ್ ।

ರಾಜಪೂಜಾಂ ಯಥಾ ಭೃತ್ಯೇ ಕುರ್ಯಾದ್ರಾಜಾ ಹಿನಸ್ತಿ ಹಿ ।
ತದ್ವಶತ್ವಾತ್ ತಥಾ ಭೃತ್ಯ ಏವಂ ನಾಮಾದಿಕಂ ಚ ಯಃ ।
ಉಪಾಸ್ತೇ ಬ್ರಹ್ಮರೂಪೇಣ ತಂ ಬ್ರಹ್ಮಾಥೇತರಣಾಣಿ ಚ ।
ಪಾತಯಂತಿ ತಮಸ್ಯಂಧೇ ತಸ್ಮಾನ್ನೇಕ್ಷೇತ ತಾಂಸ್ತಥಾ '

ಇತಿ ಸಾಮಸಂಹಿತಾಯಾಮ್

೨೬. ಜಡಪದಾರ್ಥಗಳ, ಅನುಚಿತಪದಾರ್ಥಗಳ, ಅತಾತ್ತ್ವಿಕಪದಾರ್ಥಗಳ ಉಪಾಸನೆ ಅನರ್ಥಕರ ಎಂಬುದನ್ನು ವಿಶದವಾಗಿ ನಿರೂಪಿಸಿ ಶ್ರೀಹರಿಸರ್ವೋತ್ತಮತ್ವ ಜ್ಞಾನದ ಅಗತ್ಯವನ್ನು ಸ್ಫುಟಪಡಿಸಿರುವರು :

'ಅಚೇತನಮಯೋಗ್ಯಂ ಚ ತಥೈವಾತಾತ್ತ್ವಿಕಂ ಕ್ವಚಿತ್ ।
ನೋಪಾಸೀತ ಪರೋಽನರ್ಥಃ ಸ್ಯಾತ್ ತಥೋಪಾಸನಾಕೃತಃ ॥
ದರ್ಭಚರ್ಮಾದಯಶ್ಚಾತೋ ದೇವತಾ ಹ್ಯಭಿಮಾನಿನಃ ।
ನ ಹ್ಯಚೇತನಕಂ ಕಿಂಚಿತ್ಫಲದಂ ಸ್ಯಾತ್ ಕದಾಚನ ।
ಓಷಧಾದಿಷು ಚೈತಸ್ಮಾದ್ದೇವಾ ಏವ ವರಪ್ರದಾಃ ।
ಔಷಧಾದಿಸ್ಥಿತಾ ದೇವಾಸ್ತೇಽಜ್ಞೇ ದೃಷ್ಟಫಲಪ್ರದಾಃ ।
ಜ್ಞಾನಿನ್ಯದೃಷ್ಟದಾಶ್ಚ ಸ್ಯುರ್ನಾದೈವಂ ಕಿಂಚಿದಿಷ್ಯತೇ ।
ನ ತ್ವವಿಜ್ಞಾಯ ರಾಜಾನಂ ಗ್ರಾಮಪ್ರಾಪ್ತಿಸ್ತತೋ ಭವೇತ್ ।
ಏವಂ ದೇವಾ ದೃಷ್ಟಫಲಂ ದದ್ಯುರಜ್ಞಸ್ಯ ಚಾಲ್ಪತಃ ।
ಕಿಂಚಿಜ್ಜ್ಞಾನಕೃತಾದೃಷ್ಟಾತ್ ತಚ್ಚ ನೈವಾನ್ಯಥಾ ಭವೇತ್ ।
ಅದೃಷ್ಟಾಖ್ಯಫಲಂ ಯತ್ ತು ತಜ್ಜ್ಞಸ್ಯೈವ ನ ಚಾನ್ಯಗಮ್ ।
ತಸ್ಮಾದಚೇತನೋಪಾಸಾಂ ನ ಕುರ್ಯಾತ್ ಕ್ವಾಪಿ ಕಶ್ಚನ ।
ನ ಚಾಸತ್ಯಾಂ ನ ಚಾಯೋಗ್ಯಾಂ ಯದೀಚ್ಛೇದುತ್ತಮಂ ಫಲಮ್ ।
ಯದಿ ನೇಚ್ಛೇತ್ತಮೋಗಂತುಂ ಯದಿಚೇಚ್ಛೇದ್ಧರೇಃ ಪ್ರಿಯಮ್ ।
ಅಥ ಕರ್ತವ್ಯಕಾರೀ ಚ ಮುಮುಕ್ಷುರಥವಾ ಭವೇತ್ ।
ಸೋಽಪೀಚ್ಛೇತ ಹರೇಃ ಪ್ರೀತಿಂ ನಾತ್ರ ಕಾರ್ಯಾ ವಿಚಾರಣಾ'

ಇತ್ಯುಪಾಸನಾಲಕ್ಷಣೇ

ಅಚೇತನಾಸತ್ಯಾಯೋಗ್ಯಾನ್ಯನುಪಾಸ್ಯಾನ್ಯಫಲತ್ವವಿಪರ್ಯಯಾಭ್ಯಾಮ್ ।

— ಇತಿ ಸಂಕರ್ಷಣಸೂತ್ರಮ್

ದೇವೇಷು ಚರ್ಮಾದಿ ನಾಮಾನಿ ಸಂವಾದಾದೇಃ । ಇತಿ ಚ ದೇವಮೀಮಾಂಸಾಯಾಮ್

೨೭. ಅಚೇತನಗಳಿಗೆ ಚೇತನಗಳಿಂದ, ಸಾಮಾನ್ಯಚೇತನರಿಗೆ ದೇವತೆಗಳಿಂದ, ದೇವತೆಗಳಿಗೆ ಮುಖ್ಯಪ್ರಾಣನಿಂದ, ಮುಖ್ಯಪ್ರಾಣನಿಗೆ ಮಹಾವಿಷ್ಣುವಿನಿಂದ ಪ್ರವೃತ್ತಿ ಮೊದಲಾದವುಗಳು ಸಂಭವಿಸುವವು :

ಅಚೇತನಂ ಚೇತನೇಭ್ಯೋ ದೈವತೇಭ್ಯಶ್ಚ ಚೇತನಾಃ ।
ದೇವಾಃ ಪ್ರಾಣಾಚ್ಚ ಸ ಪ್ರಾಣೋ ವಿಷ್ಣುರೇವ ಸದೈವ ತು ।
ಸ್ವಭಾವಂ ಚ ಪ್ರವೃತ್ತಿಂ ಚ ವಿಕಾರಂ ಚ ಸಮಾಪ್ನುಯುಃ ।
ಕಶ್ಚಿದ್ಭಾವ ಋತೇ ತೇಷಾಂ ನೈತತ್ಸ್ವಾಚ್ಚ ಕದಾಚನ ।
ಅಚೇತನಪ್ರವೃತ್ತೌ ತನ್ನ ದೃಷ್ಟಾಂತೋಽಸ್ತಿ ಕಶ್ಚನ ।
ಚೇತನಾನಾಂ ಪ್ರವೃತ್ತೇಶ್ಚ ದೃಷ್ಟತ್ವಾದೇವ ಸರ್ವಶಃ ।
ಅದೃಷ್ಟಂ ದೃಷ್ಟವಜ್ಞೇಯಂ ಯಥಾ ದೃಷ್ಟಪ್ರಣೇತೃಕಮ್ ।
ವಿಸರ್ಪತ್ತಂಡುಲಂ ದೃಷ್ಟ್ವಾ ಕಲ್ಪ್ಯಾ ತತ್ರ ಪಿಪೀಲಿಕಾ ।
ನ ತದ್ದೃಷ್ಟ್ವೈವ ದೃಷ್ಟಾನಾಮಪಿಪೀಲಿಕಸರ್ಪಣಮ್ ।
ಏವಂ ದೃಷ್ಟಾನುಸಾರೇಣ ಚಿದಧೀನಮಚೇತನಮ್ ।
ದುರ್ಘಟಾ ಶಕ್ತಿರಪಿ ಹಿ ಪಿಶಾಚಾನಾಂ ಹಿ ದೃಶ್ಯತೇ ।
ದೇವಾನಾಂ ಕಿಮು ಕಿಂವೇವ ಪರಮಸ್ಯ ಹರೇಃ ಪ್ರಭೋಃ' ಇತ್ಯಾದೇಶ್ಚ ಬ್ರಹ್ಮತರ್ಕೇ ।

೨೮. ದೇವತೆಗಳು ಮನುಷ್ಯರಾಗಿ ಅವತರಿಸಿದಾಗ ಅವರು ದೇವಮಾನವರು ಎನ್ನಿಸುವರು. ಯಾವಾಗಲೂ ಧ್ಯಾನಿಸುವಂತೆ ಇರುವುದು, ಹೆಚ್ಚು ಮಾತನಾಡದಿರುವುದು, ಅರ್ಥಪೂರ್ಣವಾದ ಮಾತುಗಳನ್ನೇ ಆಡುವುದು, ಅನರ್ಥಕರವಾದ ಮಾತುಗಳನ್ನು ಸರ್ವಥಾ ನುಡಿಯದಿರುವುದು ಇದು ಅಂತಹ ದೇವಮಾನವರ ಲಕ್ಷಣ :

'ದೇವಾ ಮಾನುಷತಾಂ ಪ್ರಾಪ್ತಾ ವಿಜ್ಞೇಯಾ ದೇವಮಾನುಷಾಃ ।
ಧ್ಯಾನಂ ಕುರ್ವಂತ ಇವ ತೇ ನೈವ ಸ್ಯುರ್ಬಹುಭಾಷಿಣಃ ।
ಬ್ರೂಯುರರ್ಥವತೀಂ ವಾಚಂ ನಾನರ್ಥಾಂ ಪ್ರಾಯಶೋ ಹಿ ತೇ' ಇತಿ ಪಾದ್ಮೇ ।

೨೯. ಬಲವು ಜ್ಞಾನಬಲ, ಬಾಹುಬಲ ಎಂಬುದಾಗಿ ಎರಡು ವಿಧ. ಅದರಲ್ಲಿ ಯುಕ್ತಿಯುಕ್ತವಾದ ತಿಳಿವಳಿಕೆ ಜ್ಞಾನಬಲ ಎನ್ನಿಸುವುದು. ಕೇವಲ ಜ್ಞಾನಕ್ಕಿಂತ ಅದು ಮಿಗಿಲು :

'ಬಲಂ ಜ್ಞಾನಬಲಂ ಚೈವ ಬಾಹ್ಯಂ ಚೇತಿ ದ್ವಿಧಾ ಮತಮ್ ।
ಯುಕ್ತಿಜ್ಞತಾ ಜ್ಞಾನಬಲಂ ಸಾ ಜ್ಞಾನಾದಧಿಕಾ ಮತಾ' ಇತಿ ತತ್ತ್ವಸಾರೇ ।

೩೦. ಅನ್ನ, ನೀರು, ತೇಜಸ್ಸು, ಸುಖ ಮೊದಲಾದವುಗಳೆಲ್ಲ ಬಾಹ್ಯ ಮತ್ತು ಆಂತರ ಎಂಬುದಾಗಿ ಎರಡು ಬಗೆ. ಹೊರಗಿನದು ಬಾಹ್ಯಾನ್ನವಾದರೆ ಜ್ಞಾನವು ಒಳಗಿನ ಅನ್ನ ಇತ್ಯಾದಿ ಅನೇಕ ವಿವರಗಳನ್ನು ಇಲ್ಲಿ ಕಾಣಬಹುದು.

೩೧. ಕೆಲವು ವ್ಯಾಖ್ಯಾನದ ವಿವರಗಳನ್ನೂ ಇಲ್ಲಿ ಕಾಣಬಹುದು:

ಯತ್ರಾನವಸರೋಽನ್ಯತ್ರ ಪದಂ ತತ್ರ ಪ್ರತಿಷ್ಠಿತಮ್ ।
ಯತ್ರ ಪ್ರಮಾಣಂ ವಾಕ್ಯಂ ವಾ ಪ್ರತಿಹಾರ್ಯಂ ನ ಸಂಶಯಃ ॥

೩೨. ಗುರುಗಳಿಂದ ಜ್ಞಾನವನ್ನು ಸಂಪಾದಿಸುವುದು ಮುಖ್ಯವಾದ ಆಹಾರ. ಅದು ಶುದ್ಧವಾಗಿದ್ದಲ್ಲಿ ಜ್ಞಾನವು ಶುದ್ಧ. ಜ್ಞಾನ ಶುದ್ಧವಾದಾಗ ಸ್ಮೃತಿಯು ಸ್ಥಿರ; ಸ್ಮೃತಿಯು ಸ್ಥಿರವಾದಾಗ ಅಪರೋಕ್ಷಜ್ಞಾನ ಲಭಿಸಿ ಅದರಿಂದ ಮೋಕ್ಷ ದೊರೆಯುವುದು.

ಗುರೋರ್ವಿದ್ಯಾಹೃತಿರ್ಯಾ ತು ಸ ಆಹಾರ ಇತಿ ಸ್ಮೃತಃ ।
ತಚ್ಛುದ್ಧೌ ಜ್ಞಾನಶುದ್ಧಿಃ ಸ್ಯಾಜ್ಜ್ಞಾನಶುದ್ಧೌ ಸ್ಥಿರಾ ಸ್ಮೃತಿಃ ।
ಸ್ಮೃತಿಸ್ಥೈರ್ಯೇ ತ್ವಾಪರೋಕ್ಷ್ಯಂ ಹರೇರ್ಮೋಕ್ಷಸ್ತತೋ ಭವೇತ್ ।

ಇತಿ ಸಾಧನನಿರ್ಣಯೇ ॥

೩೩. ಶ್ರೀಹರಿಯಲ್ಲಿ ಸ್ತ್ರೀಗುಣಗಳು, ಪುರುಷಗುಣಗಳು, ನಪುಂಸಕ ಗುಣಗಳು ಇರುವವು. ಎಲ್ಲವೂ ಅವನ ಅಧೀನವಾದ್ದರಿಂದ ಲಿಂಗವ್ಯತ್ಯಯಕ್ಕೆ ಅವಕಾಶವಿದೆ. ಆದ್ದರಿಂದ ಕಃ, ಕಿಂ, ಕಮ್, ತತ್, ಸರ್ವಮ್, ಆತ್ಮಾ, ಅದಿತಿ, ದೇವ ಮೊದಲಾದ ಎಲ್ಲ ಹೆಸರುಗಳೂ ಅವನಿಗೆ ಅನ್ವಯಿಸುವವು.

'ಸ್ತ್ರೀಗುಣಾಃ ಪುಂಗುಣಾಶ್ಚೈವ ನಪುಂಸಕಗುಣಾ ಅಪಿ ।
ಯದಧೀನಾ ವ್ಯತ್ಯಯಃ ಸ್ಯಾಲ್ಲಿಂಗಾನಾಂ ತತ್ರ ಸರ್ವಶಃ ।
ಕಃ ಕಿಂ ಕಂ ತತ್ಸರ್ವಮಾತ್ಮಾದಿತಿರ್ದೇವಾದಯಸ್ತತಃ ॥'

– ಇತಿ ಲಿಂಗನಿರ್ಣಯೇ ॥

ಛಾಂದೋಗ್ಯೋಪನಿಷತ್ತಿನಲ್ಲಿ ಉದಾಹೃತವಾಗಿರುವ ಪ್ರಮಾಣಗ್ರಂಥಗಳ ವಿವರ ಹೀಗಿದೆ :

ಅಭಿಧಾನ	ಆಚಾರ್ಯಸಂಹಿತಾ	ಉಪಾಸನಾಲಕ್ಷಣ
ಋಕ್ಸಂಹಿತಾ	ಕರ್ಮಾನುಪೂರ್ವೀ	ಕಾಲಕೇಯ
ಗಾರುಡ	ತತ್ತ್ವವಿವೇಕ	ತತ್ತ್ವಸಾರ
ತತ್ತ್ವಸಂಹಿತಾ	ತಾರ್ತೀಯ	ತ್ರೈವಿದ್ಯ
ದೇವಮೀಮಾಂಸಾ	ದೇವಶ್ರುತಿ	ನಾರಾಯಣೀಯ
ನಿವೃತ್ತ	ಪರಮತತ್ತ್ವ	ಪರಮಶ್ರುತಿಃ
ಪರಮಸಾರ	ಪರಮಸಂಹಿತಾ	ಪರ್ಯಂಕೋಪಾಸನಾ
ಪಾದ್ಮ	ಪ್ರಭಂಜನ	ಪ್ರಭಾವ
ಪ್ರವೃತ್ತ	ಪ್ರಾಣಸಂಹಿತಾ	ಪ್ರಾಥಮ್ಯ
ಪ್ರಧ್ಯಾನ	ಬ್ರಹ್ಮತರ್ಕ	ಬ್ರಹ್ಮತತ್ತ್ವ
ಬ್ರಹ್ಮವೈವರ್ತ	ಬ್ರಹ್ಮಸೂತ್ರ	ಬ್ರಹ್ಮಾಂಡ
ಭಗವದ್ಗೀತಾ	ಭಾಗವತ	ಮಹಾಸಂಹಿತಾ

ಮಾನಸ	ಮಹಾಕೌರ್ಮ	ಮಾಹಾತ್ಮ್ಯ
ಮೋಕ್ಷಧರ್ಮ	ಲಿಂಗನಿರ್ಣಯ	ವಸ್ತುತತ್ತ್ವ
ವಾಕ್ಯನಿರ್ಣಯ	ವಿಶ್ವನಿರ್ಣಯ	ವೈಶ್ವಾನರವಿದ್ಯಾ
ಶಬ್ದನಿರ್ಣಯ	ಶ್ರುತಿ	ಸತ್ತತ್ತ್ವ
ಸದ್ಗುಣ	ಸದ್ಭಾವ	ಸಂಧ್ಯಾನ
ಸಮನ್ವಯ	ಸಂಕರ್ಷಣಸೂತ್ರ	ಸಂಸ್ತತ್ವ
ಸರ್ವಯಜ್ಞ	ಸ್ಕಾಂದ	ಸಾಧನನಿರ್ಣಯ
ಸಾಮಸಂಹಿತಾ	ಅನಿರ್ದಿಷ್ಟ ಆಕರಗಳು (ಸು. ೫೦)	ಸಾರನಿರ್ಣಯ

೧೦. ಬೃಹದಾರಣ್ಯಕೋಪನಿಷದ್ಭಾಷ್ಯ

ಬೃಹದಾರಣ್ಯಕೋಪನಿಷತ್ತು ದಶೋಪನಿಷತ್ತುಗಳಲ್ಲಿ ತುಂಬಾ ದೊಡ್ಡದು. ಆದ್ದರಿಂದ ದಶೋಪನಿಷದ್ಭಾಷ್ಯಗಳಲ್ಲಿ ಬೃಹದಾರಣ್ಯಕೋಪನಿಷದ್ಭಾಷ್ಯವೇ ದೊಡ್ಡದು. ಶುಕ್ಲಯಜುರ್ವೇದಕ್ಕೆ ಸೇರಿದ ಈ ಉಪನಿಷತ್ತಿಗೆ ಬ್ರಹ್ಮದೇವರು, ಸೂರ್ಯ, ಯಾಜ್ಞವಲ್ಕ್ಯ, ಕಣ್ವರು ಋಷಿಗಳು, ಲಕ್ಷ್ಮೀಶನಾದ ನಾರಾಯಣನೇ ಪ್ರತಿಪಾದ್ಯ ದೇವತೆ. ವಾಜಸನೇಯೋಪನಿಷತ್, ಕಣ್ವೋಪನಿಷತ್ ಎಂಬುದಾಗಿ ಸಹ ಇದು ಪ್ರಸಿದ್ಧ.

ಇದರಲ್ಲಿ ಒಟ್ಟು ಆರು ಅಧ್ಯಾಯಗಳಿದ್ದು ಅಶ್ವಮೇಧದ ಕುದುರೆಯ ಆಧ್ಯಾತ್ಮಿಕ ವರ್ಣನೆ, ಆ ಅಶ್ವದ ಅವಯವಗಳಲ್ಲಿ ಬ್ರಹ್ಮದೇವರು, ಇತರ ದೇವತೆಗಳು ಹಾಗು ಪರಮಾತ್ಮನು ನೆಲೆಸಿರುವ ವಿವರ ಬಂದಿದೆ.

ಭಗವಂತನು ಲಯಕರ್ತ. ಲಯ ಎಂದರೆ ಕೇವಲ ಸಂಹಾರವಲ್ಲ; ವಿಶ್ರಾಂತಿ-ಪ್ರದಾನವೇ ಲಯದ ಆಂತರ್ಯ. ದೇವದಾನವರ ಯುದ್ಧದಲ್ಲಿ ದೇವತೆಗಳು ಪರಾಜಿತರಾಗಿ ಜಯದ ಸಾಧನೆಗಾಗಿ ಭಗವಂತನನ್ನು ಸ್ತುತಿಸಲು ಉದ್ಯುಕ್ತರಾಗುವರು. ಆದರೆ ಅವರು ಆ ಕಾರ್ಯಕ್ಕೆ ಆರಿಸಿಕೊಂಡ ಸಕಲ ಇಂದ್ರಿಯಾಭಿಮಾನಿದೇವತೆಗಳಲ್ಲೂ ಅಸುರರು ಪ್ರವೇಶಿಸಿ ಅವರ ಸ್ತೋತ್ರಕಾರ್ಯಕ್ಕೆ ವಿಘ್ನವೆಸಗುವರು. ಕೊನೆಗೆ ಅವರು ವಾಯುದೇವನ ಮೂಲಕ ಭಗವತ್ ಸ್ತುತಿಯನ್ನು ಕೈಗೊಂಡಾಗ ಅಸುರರ ಆಟ ನಡೆಯದಾಯಿತು. ವಾಯುದೇವರೊಳಗೆ ಪ್ರವೇಶಿಸಲು ಯತ್ನಿಸಿದ ದೈತ್ಯರೆಲ್ಲ ಬಂಡೆಗೆ ಅಪ್ಪಳಿಸಿದ ಮಣ್ಣಹೆಂಟೆಗಳಂತೆ ನಾಶವಾಗಿ ಹೋದರು. ವಾಯುದೇವರು ಆಖಣಾಶ್ಮಸಮರು. ಅವರ ಮೂಲಕವೇ ಭಗವಂತನ ಅನುಗ್ರಹ ಪಡೆದು ಸಂಸಾರ ಜಯವನ್ನು ಸಾಧಿಸಲು ಸಾಧ್ಯ ಎಂಬ ಪ್ರಮೇಯ ಸ್ಥಾಪಿತವಾಗಿದೆ.

ಮತ್ತೊಂದು ಪ್ರಸಂಗದಲ್ಲೂ ತತ್ತ್ವಾಭಿಮಾನಿದೇವತೆಗಳಲ್ಲಿ ತಾರತಮ್ಯ ನಿರ್ಣಯಕ್ಕೆ ಪ್ರಯೋಗ ನಡೆಯಿತು. ಶ್ರಮವಿಲ್ಲದೆ ಕಾರ್ಯವನ್ನು ಸದಾ ನಡೆಸುವ ದೇವತೆಯೇ

ತತ್ತ್ವಾಭಿಮಾನಿಗಳಲ್ಲಿ ಶ್ರೇಷ್ಠ ಎಂಬುದಾಗಿ ಬ್ರಹ್ಮದೇವರು ತಿಳಿಸುವರು. ಆದರೆ ಚಕ್ಷುರಾದಿ ಅಭಿಮಾನಿ ದೇವತೆಗಳು ಹಾಗೆ ಮಾಡಲು ಪ್ರಯತ್ನಿಸಿ ಸ್ವಲ್ಪ ಕಾಲದಲ್ಲೇ ಆಯಾಸಗೊಂಡು ಅದನ್ನು ಸಾಧಿಸುವಲ್ಲಿ ಸೋಲುತ್ತಾರೆ. ಆದರೆ ಪ್ರಾಣದೇವರ ಶ್ವಾಸೋಚ್ಛ್ವಾಸಕಾರ್ಯವು ಮಾತ್ರ ಅವ್ಯಾಹತವಾಗಿ ಯಾವ ಶ್ರಮವೂ ಇಲ್ಲದೆ ಸದಾ ನಡೆದೇ ಇರುತ್ತದೆ. ಇದರಿಂದ ವಾಯುದೇವರ ಜೀವೋತ್ತಮತ್ವವೂ ಮತ್ತೊಮ್ಮೆ ಸ್ಥಾಪಿತವಾಗುತ್ತದೆ. ಹರಿವ್ರತದಂತೆ ಹಂಸಮಂತ್ರಜಪರೂಪವಾದ ಪ್ರಾಣವ್ರತವನ್ನೂ ಸರ್ವರೂ ತಪ್ಪದೇ ಆಚರಿಸಬೇಕು ಎಂಬ ವಿಧಿ ಇದರಲ್ಲಿ ನಿರೂಪಿತವಾಗಿದೆ.

ಸಪ್ತಾನ್ನಬ್ರಾಹ್ಮಣ ಈ ಉಪನಿಷತ್ತಿನ ಮತ್ತೊಂದು ಪ್ರಮುಖ ಭಾಗ. ಭಗವಂತನು ದೇವತೆಗಳಿಗೆ ಬಲಿ, ಯಜನ ಎಂಬ ಎರಡು ವಿಧ ಅನ್ನವನ್ನೂ, ಮನುಷ್ಯರಿಗೆ ಅನ್ನವೆಂಬ ಅನ್ನವನ್ನೂ, ಪಶುಗಳಿಗೆ ಹಾಲು ಎಂಬ ಒಂದು ಅನ್ನವನ್ನು ಆಹಾರವಾಗಿ ವಿಧಿಸಿರುವನು. ತನಗಾಗಿ ಮನಸ್ಸು, ವಾಕ್ ಮತ್ತು ಪ್ರಾಣ ಎಂಬ ಮೂರು ವಿಧ ಅನ್ನವನ್ನೂ ಸೃಜಿಸಿರುವನು. ಆದ್ದರಿಂದ ಮನಸ್ಸು, ಮಾತು ಮತ್ತು ಪ್ರಾಣಗಳನ್ನು ಭಗವತ್ಪ್ರೀತಿಕರವಾದ ಕಾರ್ಯಗಳಲ್ಲಿ ತೊಡಗಿಸುವುದೇ ಮುಖ್ಯವಾದ ಅರ್ಥದಲ್ಲಿ ಭಗವಂತನಿಗೆ ಅರ್ಪಿಸಬೇಕಾದ ನೈವೇದ್ಯ ಎಂಬ ಪ್ರಮೇಯ ಸಪ್ತಾನ್ನ ಬ್ರಾಹ್ಮಣದ ಸಾರ. ದೇವಲೋಕ, ಸ್ವರ್ಗಲೋಕ ಮತ್ತು ಮನುಷ್ಯಲೋಕವೆಂಬ ಮೂರು ಲೋಕಗಳನ್ನು ಕ್ರಮವಾಗಿ ತತ್ತ್ವಜ್ಞಾನ, ಸತ್ಕರ್ಮಗಳ ಆಚರಣೆ ಮತ್ತು ಸತ್ಪುತ್ರರ ಉತ್ಪತ್ತಿಯಿಂದ ಸಂಪಾದಿಸಿಕೊಳ್ಳಬೇಕು.

ತಂದೆ ತನ್ನ ಅಂತ್ಯಕಾಲದಲ್ಲಿ ತನ್ನ ಮಗನಿಗೆ 'ತ್ವಂ ಬ್ರಹ್ಮ', 'ತ್ವಂ ಯಜ್ಞಃ' ಮತ್ತು 'ತ್ವಂ ಲೋಕಃ' ಎಂಬುದಾಗಿ ಉಪದೇಶಿಸಬೇಕು. ಅದನ್ನು ಮಗನು 'ಅಹಂ ಬ್ರಹ್ಮ' , 'ಅಹಂ ಯಜ್ಞಃ' ಮತ್ತು 'ಅಹಂ ಲೋಕಃ' ಎಂಬುದಾಗಿ ಅಂಗೀಕರಿಸಬೇಕು. ಎಂದರೆ ನೀನು ವೇದಾಧ್ಯಯನ ಪರಾಯಣನಾಗಿ ವಿಹಿತಯಜ್ಞಗಳನ್ನು ಆಚರಿಸುತ್ತ ಉತ್ತಮಲೋಕಗಳನ್ನು ಸಂಪಾದಿಸಬೇಕು ಎಂದು ತಂದೆ ಆದೇಶವೀಯಬೇಕು. ಮಗನು ಅದನ್ನು ತಪ್ಪದೇ ಪಾಲಿಸಿ ಕೃತಾರ್ಥನಾಗಬೇಕು ಎಂದು ಭಾವ.

ಅದ್ವೈತಪರವೆಂಬುದಾಗಿ ತುಂಬಾ ಪ್ರಸಿದ್ಧವಾಗಿರುವ 'ಅಹಂ ಬ್ರಹ್ಮಾಸ್ಮಿ' ಎಂಬ ವಾಕ್ಯವಿರುವುದು ಈ ಉಪನಿಷತ್ತಿನಲ್ಲಿಯೇ. ಪ್ರತಿಯೊಬ್ಬ ಸಾಧಕನೂ ಭಗವಂತನನ್ನು ಗುಣಪೂರ್ಣನೆಂದು ಉಪಾಸನೆ ಮಾಡಿಯೇ ಪೂರ್ಣಸುಖದ ನೆಲೆಯಾದ ಮುಕ್ತಿಯನ್ನು ಸಂಪಾದಿಸಿಕೊಳ್ಳಬೇಕು.

ಭಗವಂತನು 'ಅಹಂ ಬ್ರಹ್ಮಾಸ್ಮಿ' ಎಂಬುದಾಗಿಯೇ ತನ್ನನ್ನು ತಾನು ತಿಳಿದು-ಕೊಂಡಿರುವನು. ಉಪನಿಷತ್ತಿನ ಈ ಮಾತಿನಲ್ಲಿ ಅದ್ವೈತದ ಪ್ರಸಕ್ತಿಯೇ ಇಲ್ಲ, ಭಗವಂತನು ತನ್ನನ್ನು 'ಅಹಂ ಬ್ರಹ್ಮಾಸ್ಮಿ' ಎಂಬುದಾಗಿ ತಿಳಿದುಕೊಂಡನೆಂದು ಹೇಳಿದರೆ ಇತರರೂ ತನ್ನನ್ನು ಹಾಗೆ ತಿಳಿದುಕೊಳ್ಳಬೇಕೆಂದು ಹೇಗೆ ಅರ್ಥವಾದೀತು? ಇತರರು 'ಅಹಂ

ಬ್ರಹ್ಮಾಸ್ಮಿ' ಎಂಬುದಾಗಿ ಉಪಾಸನೆ ಮಾಡಬೇಕು ಎಂದರೆ ''ಭಗವಂತನು ಅಹೇಯನು, ಪೂರ್ಣನು, ಸದಾ ಒಂದೇ ತೆರನಾಗಿರುವವನೂ ಎಂಬುದಾಗಿ ಉಪಾಸನೆ ಮಾಡಿ ಕೃತಾರ್ಥರಾಗಬೇಕು'' ಎಂಬುದು ಇದರ ಸಂದೇಶ; ಎಂದರೆ ಇಲ್ಲಿಯ ಅಹಂ, ಬ್ರಹ್ಮ ಮತ್ತು ಅಸ್ಮಿ ಎಂಬ ಮೂರು ಪದಗಳೂ ಭಗವಂತನನಾಮಗಳೇ ಆಗಿವೆ ಎಂದು ಭಾವ.

ಅದೇ ಪ್ರಸಂಗದಲ್ಲಿ ಮುಂದೆ ಬರುವ, 'ಅಥ ಯೋಽನ್ಯಾಂ ದೇವತಾಮುಪಾಸ್ತೇ ಅನ್ಯೋಽಸೌ ಅನ್ಯೋಽಹಸ್ಮೀತಿ ನ ಸ ವೇದ ಯಥಾ ಪಶುಃ' ಎಂಬ ಮಾತಿಗೂ 'ಪರಮಾತ್ಮನು ನಮ್ಮಿಂದ ಭಿನ್ನನಾಗಿರುವದು ನಿಜ. ಆದರೆ ಅವನು ಸ್ವಾಮಿ ಮತ್ತು ನಾವು ಭೃತ್ಯರಾಗಿರುವುದರಿಂದ ನಮ್ಮಿಬ್ಬರಿಗೂ ಸಂಬಂಧವಿರುವದು ತಪ್ಪಿದ್ದಲ್ಲ, ಹಾಗೆ ತಿಳಿಯದೆ ತಾನು ಸ್ವತಂತ್ರ ಎಂದು ಭಾವಿಸುವವನು ಪಶುವೇ ಸರಿ. ಎಂದರೆ ಭಗವಂತನನ್ನು ಪ್ರತಿಯೊಬ್ಬರೂ ನಮ್ಮ ಸ್ವಾಮಿ ಎಂಬುದಾಗಿ ಶ್ರದ್ಧಾಭಕ್ತಿಗಳಿಂದ ಆರಾಧಿಸಲೇಬೇಕು' ಎಂದು ಭಾವ. ಶ್ರೀಮದಾಚಾರ್ಯರು ಈ ಪ್ರಸಂಗದಲ್ಲಿ ಅಭೇದಬೋಧಕವೆಂದು ಅದ್ವೈತಿಗಳು ಭಾವಿಸಿರುವ 'ಏಕಮೇವಾದ್ವಿತೀಯಂ ಬ್ರಹ್ಮ', 'ತತ್ತ್ವಮಸಿ', 'ನೇಹ ನಾನಾಽಸ್ತಿ ಕಿಂಚನ' ಮೊದಲಾದ ಸಕಲ ಶ್ರುತಿಗಳಿಗೂ ಭೇದದಲ್ಲಿ ಮಹಾತಾತ್ಪರ್ಯ ಎಂಬುದನ್ನು ವಿಶೇಷ ರೀತಿಯಲ್ಲಿ ಪ್ರತಿಪಾದಿಸಿರುವರು.

ತನ್ನ ಬಳಿಗೆ ಬ್ರಹ್ಮವಿದ್ಯೆಯ ಉಪದೇಶ ನೀಡಲು ಕಾತರದಿಂದ ಬಂದ ಬಾಲಾಕಿ ಮುನಿಗೆ ಅಜಾತಶತ್ರು ಎಂಬ ರಾಜನು ಕೇಳುವನು: 'ನಿಮಗೆ ತಿಳಿದಿರುವುದನ್ನು ಹೇಳಿ.'' ಅವರು ಸೂರ್ಯಾದಿ ಸಕಲ ಅಧಿಷ್ಠಾನಗಳಲ್ಲಿ ಇರುವ ಭಗವಂತನನ್ನು ನಾನು ಬಲ್ಲೆ ಎನ್ನುವರು. ಅಜಾತಶತ್ರುವು 'ನಿಮಗೆ ಗೊತ್ತಿರುವದು ಇಷ್ಟು ಮಾತ್ರ ತಾನೇ?' ಎಂದಾಗ ಅವರು ಹೌದು ಎಂಬುದಾಗಿ ಒಪ್ಪಿಕೊಂಡು ಅದಕ್ಕಿಂತಲೂ ಮಿಗಿಲಾದ ವಿಚಾರವನ್ನು ಅವನಿಂದಲೇ ತಿಳಿದುಕೊಳ್ಳಲು ಬಯಸುವರು. ಆಗ ಅಜಾತಶತ್ರುವು ಈ ರೀತಿಯಾಗಿ ಹೊರಗಿನ ಅಧಿಷ್ಠಾನಗಳಲ್ಲಿ ಮಾತ್ರವೇ ಭಗವಂತನನ್ನು ಅರಿತರೆ ಸಾಲದು; ನಮ್ಮ ಹೃದಯಕಮಲದಲ್ಲಿ ಭಗವಂತನು ನೆಲೆಸಿರುವನು ಎಂದು ತಿಳಿದು ತಪ್ಪದೇ ಆರಾಧಿಸಲೇಬೇಕು ಎಂದು ಎಚ್ಚರಿಸುವನು.

ಯಾಜ್ಞವಲ್ಕ್ಯರು ತಮ್ಮ ಇಬ್ಬರು ಪತ್ನಿಯರಾದ ಮೈತ್ರೇಯಿ ಮತ್ತು ಕಾತ್ಯಾಯನಿಯರಿಗೆ ತಮ್ಮ ಸಂಪತ್ತನ್ನೆಲ್ಲವನ್ನೂ ಹಂಚಿ ತಾವು ಸನ್ಯಾಸಿಯಾಗಲು ಉದ್ಯುಕ್ತರಾಗುವರು. ಕಾತ್ಯಾಯನಿಯು ಒಪ್ಪಿಕೊಳ್ಳುವಳು. ಮೈತ್ರೇಯಿಯು ಕೇಳಿದಳು: 'ನೀವು ನೀಡುವ ಸಂಪತ್ತಿನಿಂದ ನಾನು ಮೋಕ್ಷವನ್ನು ಪಡೆಯಲು ಸಾಧ್ಯವೇ?'. ಯಾಜ್ಞವಲ್ಕ್ಯರು 'ಕೇವಲ ಐಶ್ವರ್ಯದಿಂದ ಮುಕ್ತಿಯು ಎಂದಿಗೂ ಲಭಿಸದು' ಎನ್ನುವರು. ಮೈತ್ರೇಯಿಯು 'ಹಾಗಿದ್ದಲ್ಲಿ, ಮುಕ್ತಿಗೆ ಸಾಧಕವಾಗದ ಇಂತಹ ಸಂಪತ್ತಿನಿಂದೇನು?

ದಯವಿಟ್ಟು ನನಗೆ ಮೋಕ್ಷದ ಉಪಾಯವನ್ನು ಬೋಧಿಸಿ' ಎಂದು ಪ್ರಾರ್ಥಿಸಿಕೊಳ್ಳುವಳು. ಯಾಜ್ಞವಲ್ಕ್ಯರು ಅವಳ ಆಸಕ್ತಿಯನ್ನು ಮೆಚ್ಚಿ, ''ಪತ್ನಿ, ಪುತ್ರ, ಪತಿ, ಬಂಧು ಮೊದಲಾಗಿ ಪ್ರತಿಯೊಂದು ವಸ್ತುವು ಪ್ರಿಯವಾಗುವುದು ಭಗವಂತನ ಇಚ್ಛೆಯಿಂದಲೇ ಹೊರತು ಅವರವರ ಅಪೇಕ್ಷೆ ಮಾತ್ರದಿಂದಲ್ಲ, ಅಂತಹ ಭಗವಂತನೇ ಸಕಲರಿಗೂ ಮುಕ್ತಿದಾಯಕನು. ಶ್ರವಣ, ಮನನ ಮತ್ತು ಧ್ಯಾನಗಳಿಂದ ಅವನನ್ನು ಸಾಕ್ಷಾತ್ಕಾರ ಮಾಡಿಕೊಂಡಾಗಲೇ ಮುಕ್ತಿಯು ಲಭಿಸುವದು'' ಎಂಬುದಾಗಿ ಉಪದೇಶಿಸಿ, ಮುಕ್ತಿಯ ಸ್ವರೂಪವನ್ನು ವಿವರಿಸುತ್ತ 'ನ ಪ್ರೇತ್ಯ ಸಂಜ್ಞಾಽಸ್ತಿ' ಎನ್ನುವರು. ಅದಕ್ಕೆ ಮುಕ್ತಿಗೆ ಹೋದವರಿಗೆ ಜ್ಞಾನವಿರುವುದಿಲ್ಲ ಎಂಬ ಅಭಿಪ್ರಾಯ ಇರುವಂತೆ ತೋರುವುದರಿಂದ ಸ್ಪಷ್ಟೀಕರಣಕ್ಕಾಗಿ ಮೈತ್ರೇಯಿಯು ಕೇಳಿಕೊಳ್ಳುವಳು. ಆಚಾರ್ಯರು ಯಾಜ್ಞವಲ್ಕ್ಯರ ಭಾವವನ್ನು ವಿವರಿಸುತ್ತ ''ಮುಕ್ತಿಯಲ್ಲಿ ನಿರ್ಮಲವಾದ ಸ್ವರೂಪಭೂತಜ್ಞಾನವು ಇದ್ದೇ ಇರುವುದು. ಆದರೆ ಅಲ್ಲಿ ಇಲ್ಲಿಯಂತೆ ಇಂದ್ರಿಯ ಜನ್ಯವಾದ ವೃತ್ತಿಜ್ಞಾನವಿರುವುದಿಲ್ಲ ಎಂಬುದಾಗಿಯೂ, ಮುಕ್ತಿಗೆ ತೆರಳಿದವರ ಬಗ್ಗೆ ಸಂಸಾರಿಗಳಿಗೆ ಯಾವ ಪರಿಜ್ಞಾನವೂ ಇರುವುದಿಲ್ಲ ಎಂಬುದಾಗಿಯೂ ಉತ್ತರಿಸಿದರು'' ಎಂದು ಭಾಷ್ಯದಲ್ಲಿ ವಿವರಿಸಿರುವರು.

ಜನಕರಾಜನ ಸಭೆಯಲ್ಲಿ ಒಮ್ಮೆ ಬೃಹತ್ಪ್ರಮಾಣದ ವಿದ್ವದ್ಗೋಷ್ಠಿಯು ಏರ್ಪಡುವುದು. ಜನಕರಾಜನು ''ನಿಮ್ಮಲ್ಲಿ ಶ್ರೇಷ್ಠ ಬ್ರಹ್ಮಜ್ಞಾನಿಗಳಾದವರು ನಾನು ನೀಡುವ ಸಾವಿರ ಗೋವುಗಳನ್ನು ತೆಗೆದುಕೊಳ್ಳಬಹುದು'' ಎನ್ನುವನು. ಹಾಗೆ ತೆಗೆದುಕೊಳ್ಳಲು ಇತರರಾರೂ ಮುಂದಾಗದಿದ್ದಾಗ ಯಾಜ್ಞವಲ್ಕ್ಯರು ಅವುಗಳನ್ನು ಸ್ವೀಕರಿಸಲು ಸಿದ್ಧರಾಗುವರು; ಇತರರು ಅದನ್ನು ಪ್ರತಿಭಟಿಸಿದಾಗ ಯಾಜ್ಞವಲ್ಕ್ಯರು ತಾವು ಬ್ರಹ್ಮಜ್ಞಾನಿಗಳೆಂದು ನಿರೂಪಿಸಲು ಸಿದ್ಧರಾಗುವರು. ಅಶ್ವಲ, ಕಹೋಲ, ಉಷಸ್ತಿ ಚಾಕ್ರಾಯಣ ಮೊದಲಾದ ವಿದ್ವಾಂಸರು ಅನೇಕ ತೆರನಾದ ಪ್ರಶ್ನೆಗಳನ್ನು ಮುಂದಿಟ್ಟಾಗ ಯಾಜ್ಞವಲ್ಕ್ಯರು ಅವೆಲ್ಲವುಗಳಿಗೂ ಸಮರ್ಪಕ ಉತ್ತರ ನೀಡುವರು. ತಮ್ಮ ಪತ್ನಿ ಗಾರ್ಗಿಯು ಕೇಳಿದ ಪ್ರಶ್ನೆಗಳಿಗೂ ಸಮರ್ಪಕ ಉತ್ತರ ನೀಡುವರು. ಕೊನೆಗೆ ಯಾಜ್ಞವಲ್ಕ್ಯರು ಬ್ರಹ್ಮಜ್ಞಾನಿಗಳೆಂದು ಎಲ್ಲರೂ ಒಪ್ಪಿಕೊಳ್ಳುವರು. ಜನಕರಾಜನು ಸ್ವತಃ ಅವರಿಂದ ಉಪದೇಶ ಪಡೆದು ಕೃತಾರ್ಥನಾಗುವನು. ಈ ಪ್ರಸಂಗದಲ್ಲಿ ''ವಾಯುದೇವರು ಜಗತ್ತಿನ ಸೂತ್ರ, ನಾರಾಯಣನು ಅಂತರ್ಯಾಮಿ, ಮಹಾಲಕ್ಷ್ಮಿಯು ಆಕಾಶ ಶಬ್ದವಾಚ್ಯಳು, ನಾರಾಯಣನು ಅಕ್ಷರಶಬ್ದವಾಚ್ಯನು, ವಿಶ್ವದ ಎಲ್ಲಕ್ಕೂ ಅವನೇ ಕಾರಣ ಪುರುಷ'' ಮೊದಲಾದ ಅನೇಕ ಮಹತ್ವಪೂರ್ಣಪ್ರಮೇಯಗಳು ನಿರೂಪಿತವಾಗಿವೆ.

ಒಮ್ಮೆ ಬ್ರಹ್ಮದೇವರು ತಮ್ಮ ಬಳಿಗೆ ಬಂದ ದೇವತೆಗಳು ಮಾನವರು ಮತ್ತು ದಾನವರು ಎಂಬ ಮೂರು ವರ್ಗದವರಿಗೆ 'ದ' ಎಂಬ ಒಂದೇ ಅಕ್ಷರದ ಉಪದೇಶವನ್ನು ನೀಡುವರು. ಅದನ್ನು ಆ ಮೂವರೂ ತಮ್ಮ ಸ್ವಭಾವಕ್ಕನುಗುಣವಾಗಿ ಅರ್ಥ-

ಮಾಡಿಕೊಳ್ಳುವರು. ದೇವತೆಗಳು 'ದಮ'ವುಳ್ಳವರಾಗಿ ಎಂದೂ, ಮಾನವರು ''ದಾನ'' ಮಾಡುವವರಾಗಿ ಎಂದೂ, ದಾನವರು ''ದಯೆ''ಯುಳ್ಳವರಾಗಿ ಎಂದೂ ಗ್ರಹಿಸುವರು. ಸ್ವರೂಪಯೋಗ್ಯತೆಗೆ ಅನುಗುಣವಾಗಿಯೇ ಶಾಸ್ತ್ರಗಳು ತಮ್ಮ ಭಾವವನ್ನು ತೆರೆದುಕೊಳ್ಳುವವು ಎಂಬ ತತ್ತ್ವವೂ ಇಲ್ಲಿ ನಿರೂಪಿತವಾಗಿದೆ.

ಹೀಗೆ ಬೃಹದ್ಭಾಷ್ಯವು ಅನೇಕ ತೆರನಾದ ಪ್ರಮೇಯಗಳ ತವನಿಧಿಯಾಗಿದೆ.

೧. ಪರ್ವತ, ಶಿಕತ, ನದಿ, ಬಾವಿ, ಸರೋವರಗಳು, ಹವಿಸ್ಸು, ಮೊದಲಾದ ಪ್ರತಿಯೊಂದಕ್ಕೂ ಅಭಿಮಾನಿ ದೇವತೆಗಳಿರುವರು. ಅವರಿಗೂ ಅವೇ ಹೆಸರುಗಳು. ಅವೆಲ್ಲವೂ ಮುಖ್ಯವಾಗಿ ಶ್ರೀಹರಿಯ ನಾಮಗಳು. ಅವನೇ ಸಕಲಗುಣಗಳಿಂದ ಸರ್ವೋತ್ತಮನಾಗಿರುವನು :

ಪರ್ವತಾಃ ಸಿಕತಾಶ್ಚೈವ ನದ್ಯಃ ಕೂಪಃ ಸರಾಂಸಿ ಚ ।
ಹವಿಃ ಕಪಾಲಯೂಪಾದ್ಯಾ ದೇವತಾ ಏವ ಸರ್ವಶಃ ॥
ತತ್ತನ್ನಾಮ್ನೈವ ನಾಮೈಷಾಂ ಭಿನ್ನಾನಾಮಭಿಮಾನತಃ ।
ನಾಮಾನಿ ತಾನ್ಯಪಿ ಹರೇಃ ಸ ಹಿ ಸರ್ವಗುಣಾಧಿಕಃ ॥ ಇತಿ ನಾರದೀಯೇ ।

೨. ಯಾವ ವಾಕ್ಯಗಳೂ ಸಹ ಶ್ರೀಹರಿಯೊಂದಿಗೆ ಇತರರಿಗೆ ಅಭೇದವನ್ನು ಹೇಳುವುದು ಸಾಧ್ಯವಿಲ್ಲ. ಮೇಲ್ನೋಟಕ್ಕೆ ಕಂಡುಬರುವ ಅಂತಹ ವಾಕ್ಯಗಳಿಗೆ ಬೇರೆ ಬೇರೆ ವಿಭಕ್ತಿಗಳ ಅರ್ಥವನ್ನು ಮಾಡಿ ಭೇದದಲ್ಲೇ ತಾತ್ಪರ್ಯ ಎಂದು ಶಾಸ್ತ್ರಗಳು ತಿಳಿಸಿವೆ :

ಉಷಾಃ ಶಿರೋ ಬ್ರಹ್ಮನಾಮ ತತ್ತ್ವಮಸ್ಯಾದಯೋಽಖಿಲಾಃ ।
ಸಪ್ತಮ್ಯರ್ಥಾಃ ಸಮುದ್ದಿಷ್ಟಾಃ ಪಂಚಮ್ಯರ್ಥಾಸ್ತಥಾ ಶ್ರುತಾಃ ॥
ಷಷ್ಠ್ಯರ್ಥಾಶ್ಚ ಚತುರ್ಥ್ಯರ್ಥಾಸ್ತೃತೀಯಾರ್ಥಾಶ್ಚ ಸರ್ವಶಃ ।
ತದೈಕ್ಯವಾಚಿವಚ್ಛನ್ನಾ ಅಪಿ ತದ್ಗತ್ವವಾಚಕಾಃ ।
ಐಕ್ಯಾರ್ಥಾ ನೈವ ತೇ ಸರ್ವೇ ಭಿನ್ನರೂಪಾ ಯತಃ ಸದಾ ।
ಈಶಾಂಗವಾಚಿನೋ ವಾ ಸ್ಯುಸ್ತೇಷಾಮೇವ ತದರ್ಥತಃ ।
ಸಪ್ತಸು ಪ್ರಥಮಾ ಯಸ್ಮಾತ್ ತತ್ತದ್ಯೋಗ್ಯಾರ್ಥತಾ ಭವೇತ್ ॥'

ಇತಿ ಬ್ರಹ್ಮತರ್ಕೇ ।

೩. ವಿಘ್ನೇಶ ಆಕಾಶಕ್ಕೆ ಅಭಿಮಾನಿ, ವಿಘ್ನೇಶನ ಪುತ್ರ ಅಂತರಿಕ್ಷಕ್ಕೆ ಅಭಿಮಾನಿ :

ನಭೋಽಭಿಮಾನೀ ವಿಘ್ನೇಶೋ ವಿಷ್ಣೋರ್ಮಾಂಸಾಶ್ರಿತಃ ಸದಾ ।
ಅಂತರಿಕ್ಷಾಭಿಮಾನೀ ಚ ತತ್ಸೂನುರುದರೇ ಸ್ಥಿತಃ ॥ ಇತಿ ಚ ।

ಇದರಿಂದ ಗಣೇಶ ಅವಿವಾಹಿತ ಎಂಬ ಕೆಲವರ ಕಲ್ಪನೆ ಅಪ್ರಾಮಾಣಿಕ ಎಂಬುದು ಸ್ಫುಟಪಡುವುದು.

೪. ಗಂಧರ್ವರಲ್ಲಿ ಕೆಲವರು ಯುದ್ಧಮಾಡುವವರು; ಕೆಲವರು ಗಾನರತರು; ಕೆಲವರು ನರ್ತಕರು; ಕೆಲವರು ವಾದ್ಯಕೋವಿದರು; ಕೆಲವರು ದೇವಪರಿಚಾರಕರು :

ಗಂಧರ್ವಾಸ್ತು ಸದಾ ಯುದ್ಧರತಾ ದೇವಾನುಗಾ ಯತಃ ।
ತದಶಕ್ತೌ ತು ದೇವಾನಾಂ ಯುಧ್ಯಂತೇ ಸ್ವಾಮಿನೋ ಯತಃ ॥
ಕೇಚಿದ್ಗಾನರತಾ ನಿತ್ಯಂ ಗಂಧರ್ವಾ ನರ್ತಕಾಃ ಪರೇ ।
ಕೇಚಿದ್ವಾದ್ಯರತಾ ನಿತ್ಯಂ ಚಾರಣಾ ದೇವಚಾರಕಾಃ ॥' ಇತಿ ಚ ।

೫. ಪ್ರಳಯದಲ್ಲಿ ಇರುವ ಪದಾರ್ಥಗಳ ವಿವರ ಹೀಗಿದೆ :

ಸರ್ವಸಂಹಾರಕಂ ವಿಷ್ಣುಂ ದೇವೀಂ ಜೀವಾಂಸ್ತಥೈವ ಚ ।
ಕಾಲಂ ತ್ರಿಗುಣಸಾಮ್ಯಂ ಚ ಕರ್ಮಾಣಿ ಪ್ರಾಣಮಿಂದ್ರಿಯಮ್ ।
ಸಂಸ್ಕಾರಂ ಚೈವ ವೇದಾಂಶ್ಚ ನರ್ತೇ ಕಿಂಚಿಲ್ಲಯೇ ತ್ವಭೂತ್'

ಇತಿ ಬ್ರಹ್ಮತರ್ಕೇ ॥

೬. ಶಕ್ತಿಹ್ರಾಸ ಹಾಗೂ ಶಯನಗಳಿಗೆ ಶ್ರಮ ಎನ್ನುವರು. ಶಕ್ತಿಹ್ರಾಸರೂಪವಾದ ಶ್ರಮ ಶ್ರೀಹರಿಗೆ ಸರ್ವಥಾ ಇಲ್ಲ. ಆದ್ದರಿಂದ ಹರಿಗೆ ಶ್ರಮವಾಯಿತು ಎಂಬ ಉಪನಿಷದ್ವಾಕ್ಯಕ್ಕೆ ಶಯನ ಮಾಡಿದ ಎಂಬುದೇ ಅರ್ಥ :

ಶಕ್ತಿವಿಸ್ರಂಸನೇ ಚಾಪಿ ಶಯನೇ ಚಾಪಿ ಕೀರ್ತಿತಃ ।
ಶ್ರಮಶಬ್ದೋ ಹರೇರ್ನೈವ ಶಕ್ತಿವಿಸ್ರಂಸನಂ ಕ್ವಚಿತ್ ।
ಅತೋ ಹರೇಃ ಶ್ರಮೋ ನಾಮ ಶಯನಂ ಸಂಪ್ರಕೀರ್ತಿತಮ್ ।

ಇತಿ ಬ್ರಹ್ಮತರ್ಕೇ ॥

೭. ವಾಯುದೇವರ ಕೂರ್ಮರೂಪದ ವಿವರ ಹಾಗೂ ಅದರ ಉಪಾಸನೆಯ ಫಲಗಳು ಹೀಗಿವೆ :

ಸ ಏಷ ಕೂರ್ಮರೂಪೇಣ ವಾಯುರಂಡೋದಕೇ ಸ್ಥಿತಃ ।
ವಿಷ್ಣುನಾ ಕೂರ್ಮರೂಪೇಣ ಧಾರಿತೋಽನಂತಧಾರಕಃ ॥
ಅಸ್ಯ ಪಾದಾ ಹಿ ಚತ್ವಾರೋ ಹ್ಯಂಡೋದೇ ಕೋಣಸಂಸ್ಥಿತಾಃ ।
ಉರಸ್ತು ಭೂಮಿಸಂಶ್ಲಿಷ್ಟಮತಿರಿಚ್ಯ ಭುವಂ ಪುನಃ ।
ಪಾರ್ಶ್ವತಃ ಪೃಷ್ಠತಶ್ಚೈವ ಶಿರಶ್ಚೋದಕಸಂಸ್ಥಿತಮ್ ।
ಆಕಾಶಮುದರೇ ತಸ್ಯ ದ್ಯೌಃ ಪೃಷ್ಠೇ ಸಂಸ್ಥಿತಾ ವಿಭೋಃ ।
ಏವಂ ವಿದ್ವಾಂಸ್ತು ಯತ್ರೈತಿ ತತ್ರೈವ ಪ್ರತಿತಿಷ್ಠತಿ ' – ಇತಿ ಪ್ರಭಂಜನೇ ।

ಸ್ಥಾನೇಚ್ಛಾ ಚೇತ್ ತತ್ರೈವ ಪ್ರತಿತಿಷ್ಠತಿ ।

'ಉಪಾಸ್ತೇ ಕೂರ್ಮರೂಪಂ ಯೋ ವಾಯುಂ ಸಂಸ್ಥಿತಿಮಾಪ್ನುಯಾತ್ ।
ಇಚ್ಛಯಾ ವಿನಿವೃತಿಂ ವಾ ಲೋಕಂ ಚಾವೃತ್ತಿವರ್ಜಿತಮ್ ॥ – ಇತ್ಯಧ್ಯಾತ್ಮೇ ।

ಸ ಏಷ ಪ್ರಾಣಸ್ತ್ರೇಧಾ ವಿಹಿತ ಇತಿ ವಚನಾಚ್ಚ ವಾಯುಃ ।
ಬಿಭರ್ತ್ಯಂಡಂ ಹರಿಃ ಕೂರ್ಮಸ್ತ್ವಂಡೇ ಚಾಪ್ಯುದಕಂ ಮಹತ್ ।
ಉದಕೇ ಕೂರ್ಮರೂಪಸ್ಯ ವಾಯುಃ ಪುಚ್ಛಂ ಸಮಾಶ್ರಿತಃ ॥
ವಾಯೋಃ ಪುಚ್ಛಂ ಸಮಾಶ್ರಿತ್ಯ ಶೇಷಸ್ತು ಪೃಥಿವೀಮಿಮಾಮ್ ।
ಬಿಭರ್ತಿ ತಸ್ಯಾಂ ಚ ಜಗದಿದಂ ಸರ್ವಂ ಪ್ರತಿಷ್ಠಿತಮ್ ॥ – ಇತಿ ವೈಭವೇ ॥

ವಾಯೋಸ್ತು ಕೂರ್ಮರೂಪಸ್ಯ ಪೂರ್ವತಶ್ಚೋದಕೇ ಮುಖಮ್ ।
ಆಗ್ನೇಯೇಶಾನಗೌ ಬಾಹೂ ಪಾದೌ ನಿರ್ಋತಿವಾಯುಗೌ ॥

– ಇತಿ ಪ್ರಕೃಷ್ಟೇ ॥

೮. ಬ್ರಹ್ಮದೇವರ ಹೆಸರುಗಳು :

ಆತ್ಮಾ ವಿರಿಂಚಃ ಸುಮನಾಃ ಸುಧೌತಶ್ಚೇತಿ ಕಥ್ಯತೇ ।
ಬ್ರಹ್ಮಾ ಚತುರ್ಮುಖಶ್ಚೇತಿ ಪೂರ್ವಜೋ ಯಃ ಪ್ರಜಾಪತಿಃ ॥

– ಇತಿ ಶಬ್ದನಿರ್ಣಯೇ ।

೯. ಕೆಲವು ಶಬ್ದಗಳ ಅರ್ಥಗಳ ವಿವರ :

ಮೇಧೋ ಯಜ್ಞಃ ಸಮುದ್ದಿಷ್ಟೋ ಯಾಜ್ಞೀಯಂ ಮೇಧ್ಯಮುಚ್ಯತೇ ।
ಶುದ್ಧಂ ಮೇಧ್ಯಮಥಾಪಿ ಸ್ಯಾದೇವಂ ವಿದ್ಯೋಽಶ್ವಮೇಧವಿತ್ ॥

(ಮಹಾಸಂಹಿತಾ)

ಅಬುದ್ಧಿಪೂರ್ವಮರಣಾತ್ ಸ್ವರ್ಗಶ್ಚಾಪಿ ಪಶೋರ್ಭವೇತ್ ।
ಜ್ಞಾನಪೂರ್ವಮೃತೇಃ ಪುಂಸಃ ಕಿಮು ವಕ್ತವ್ಯಮಿತ್ಯಜಃ ॥....
ಮಣಿರ್ಮುಖಂ ಪ್ರಧಾನಶ್ಚೇತ್ಯುತ್ತಮಸ್ಯ ವಚೋ ಭವೇತ್ ॥....

ತತ್ತ್ವವಿದ್ದೇವಗೌಃ ಪ್ರೋಕ್ತೋ ನರಗೌಶ್ಚಾಪ್ಯತತ್ತ್ವವಿತ್ ।
ತಸ್ಮಾದ್ದೇವಾಸ್ತತ್ತ್ವವಿದೇ ಪ್ರಿಯಂ ಕುರ್ವಂತ್ಯತಂದ್ರಿತಾಃ ॥ ಇತ್ಯಾಗ್ನೇಯೇ

ಅಭಾವೇ ಪೃಥಗರ್ಥಾನಾಂ ವ್ಯಾಖ್ಯಾಮಭ್ಯಾಸಮೇವ ವಾ ।
ಕಲ್ಪಯೇನ್ನೈವ ತದ್ಭಾವೇ ವ್ಯಾಖ್ಯಾಽಭ್ಯಾಸಶ್ಚ ಯುಜ್ಯತೇ ॥ ಇತಿ ಭಾರತೇ ।

ಇತ್ಯಾದಿಬ್ರಹ್ಮಾಂಡಪುರಾಣೇ ತತ್ತ್ವನಿರ್ಣಯಗೀತಾಯಾಮ್

ಆತ್ಮಾ ಮನಶ್ಚಿಂತನಂ ಚ ಶೇಮುಷೀ ಬುದ್ಧಿರಿತ್ಯಪಿ ।
ಏಕಾರ್ಥವಾಚಕಾ ಧೀಶ್ಚ ಮನೀಷಾ ತಪ ಇತ್ಯಪಿ ॥ – ಇತಿ ಶಬ್ದತತ್ತ್ವೇ

ಅಕ್ಷ್ಣಂ ಪುದಿತಿ ಚ ಚ್ಛಿದ್ರಂ ಪುತ್ರಸ್ತತ್ತ್ರಾಣಕೋ ಭವೇತ್ ॥

ಅಮೃತೋ ವಾಯುರುದ್ದಿಷ್ಟೋ ನಿತ್ಯಜ್ಞಾನಾತ್ಮಕತ್ವತಃ ।
ಸತ್ಯಂ ಯಥಾರ್ಥವಕ್ತೃತ್ವಾತ್ ....

ಸರ್ಗೇ ಸರ್ಗೇ ತು ಯೋ ನೈವ ಶಬ್ದತೋಽಪ್ಯನ್ಯಥಾ ಭವೇತ್ ।
ಶ್ರುತ್ಯಾಖ್ಯಃ ಸ ತು ವಿಜ್ಞೇಯಃ ಇತಿಹಾಸಾದಿರರ್ಥತಃ ॥
ಭಗವದ್ದೃಷ್ಟಮೇವಾನ್ಯೈರ್ಬ್ರಹ್ಮಾದ್ಯೈರ್ದೃಶ್ಯತೇ ಯದಿ ।
ಋಷಿಭೇದಸ್ತು ತತ್ರ ಸ್ಯಾದ್ವೇದೋ ನಾವಿಷ್ಣುನಿರ್ಗತಃ ।
ವೇದ ಇತ್ಯೇವ ವಿಷ್ಣೂಕ್ತಸ್ತಪಸಾ ದೃಶ್ಯತೇ ಪರೈಃ ॥

ಕರ್ಮನಾಮಾ ತು ಭಗವಾನ್ ಫಲಕರ್ತೃತ್ವತೋ ಹರಿಃ ।
ಪಾತನಾತ್ ಪಾಪನಾಮಾಽಸೌ ಪುನಾತೇಃ ಪುಣ್ಯನಾಮವಾನ್ ॥

ಇತಿ ಭಾರತೇ

ಚರಕಸ್ತೀರ್ಥಸಂಚಾರೀ ವಿತ್ತಾರ್ಥೀ ಕರಕಃ ಸ್ಮೃತಃ ॥ ಇತ್ಯಭಿಧಾನಮ್ ।

ಅಹರ್ಮುಹೂರ್ತಂ ವಿಜ್ಞೇಯಮಹರ್ಮಾಸೋಽಪಿ ಭಣ್ಯತೇ ।
ಅಹರ್ದಿನಂ ಪ್ರಕಾಶಶ್ಚ ಕ್ವಚಿಜ್ಜ್ಞಾನಂ ಬಲಂ ಯಥಾ ॥

ಮುಹೂರ್ತಮಷ್ಟಭಾಗೋನಘಟಿಕಾದದ್ವಯಮಿಷ್ಯತೇ ।
ಕ್ವಚಿದ್ವಿಘಟಿಕಾಽಪಿ ಸ್ಯಾತ್ ಕ್ವಚಿತ್ಸ್ಯಾತ್ತಾವದುತ್ತರಃ ॥ ಇತಿ ಕಾಲನಿರ್ಣಯೇ ।

ದ್ವಾತ್ರಿಂಶತ್ತು ಮುಹೂರ್ತಾನಾಂ ದಿನಮೇಕಂ ವಿದುರ್ಬುಧಾಃ ।
ತ್ರಿಂಶನ್ಮುಹೂರ್ತಮಥವಾ ಮುಹೂರ್ತೋನ್ಮಾನಭೇದತಃ ॥

ಆರ್ತಿರ್ದುಃಖಂ ಸಮುದ್ದಿಷ್ಟಮನಾರ್ತೋ ವಿಷ್ಣುರವ್ಯಯಃ ॥

ವೃಜಿನಂ ವ್ರಜನಂ ದುಃಖಂ ಕ್ಲೇಶೋ ಬಾಧೇತಿ ಚೋಚ್ಯತೇ ॥ ಇತ್ಯಭಿಧಾನಮ್

ಅಕಯಪ್ರವಿಸಂಭೂಮಸಖಹಾ ವಿಷ್ಣುವಾಚಕಾಃ ।
ಏಕಾಕ್ಷರಾ ಅ ಇತ್ಯೇಷ ನಿರ್ದೋಷತ್ವಾಜ್ಜನಾರ್ದನಃ ॥ ಇತಿ ಶಬ್ದನಿರ್ಣಯೇ ।

ಬಾಣಸ್ತ್ವಯೋಮಯಃ ಪ್ರೋಕ್ತಃ ಶರೋ ನಾಲೋಽಸ್ಯ ಕೀರ್ತಿತಃ ॥

ಇತ್ಯಭಿಧಾನಮ್

ನ ವಿನೋಪನಿಷದ್ಭಿಃ ಸ ಜ್ಞೇಯಃ ಕೇನಾಪಿ ಕಸ್ಯಚಿತ್ ।
ಅತ ಔಪನಿಷತ್ಕಂ ತಂ ಪ್ರಾಹುರ್ವಿಷ್ಣುಂ ಸನಾತಮ್ ॥

ಸೂತ್ರಂ ತು ಬ್ರಹ್ಮಸೂತ್ರಾಖ್ಯಂ ಮಹಾಮೀಮಾಂಸಿಕಾ ತಥಾ ।
ತಥಾ ಸಾಂಕರ್ಷಣಂ ಸೂತ್ರಂ ಬ್ರಹ್ಮತರ್ಕಾದಯಸ್ತಥಾ ॥
ಪ್ರಕಾಶಿಕಾ ನಿರ್ಣಯಶ್ಚ ತತ್ತ್ವನಿರ್ಣಯ ಏವ ಚ ।

ವ್ಯಾಖ್ಯೇತಿ ಕಥಿತಾಃ ಸರ್ವಾಃ ಸ್ವಯಂ ಭಗವತಾ ಕೃತಾಃ ।
ಬೃಹತ್ತರ್ಕಾದಯಃ ಸರ್ವಾ ಅನುವ್ಯಾಖ್ಯಾಃ ಪ್ರಕೀರ್ತಿತಾಃ ॥

ಇತಿ ಪ್ರತಿಸಂಖ್ಯಾನೇ ।

ಬಾಹ್ಯಪ್ರಕಾಶೋ ಭೇತ್ಯುಕ್ತೋ ಜ್ಯೋತಿರಾಂತರ ಉಚ್ಯತೇ ।
ಸುಖಂ ಸ್ವರೂಪಭೂತಂ ಯದಾನಂದ ಇತಿ ಕಥ್ಯತೇ ।
ಮುನ್ನಾಮವಿಷಯೋತ್ಥಂ ಯತ್ಪ್ರಕೃಷ್ಟವಿಷಯಾತ್ಪ್ರಮುತ್ ॥ ಇತಿ ಚ ।

ಅಂತಃ ಸ್ಥಾನಂ ಸ್ಥಲಂ ವಾಸಃ ಪ್ರದೇಶ ಇತಿ ಚೋಚ್ಯತೇ ॥

ಉಪಮಾರ್ಥೇ ತಥಾಲ್ಪತ್ವೇಽಪೀವಶಬ್ದಃ ಪ್ರಯುಜ್ಯತೇ ॥

ಇತಿ ಶಬ್ದನಿರ್ಣಯೇ ।

ಸ್ವರೂಪಭೇದೇ ಸ್ವಾತಂತ್ರ್ಯೇ ವಿರೋಧೇ ಚ ವಿಲಕ್ಷಣೇ ।
ಅನ್ಯಶಬ್ದಶ್ಚತುರ್ಷ್ವೇಷು ಪ್ರಯೋಕ್ತವ್ಯೋ ಮನೀಷಿಭಿಃ ॥ ಇತಿ ಚ

ಆಮ್ರಂ ಬಾಲ್ಯೇಽಪಿ ಪತತಿ ಪರಿಣಾಮೇ ಹ್ಯುದುಂಬರಮ್ ।
ಸಮ್ಯಕ್ಪಾಕೇ ಯಥಾಽಶ್ವತ್ಥಫಲಂ ಜೀವಮೃತಿಸ್ತಥಾ ॥
ಕಲಾವಾಮ್ರೋಪಮಾ ಜೀವಾಸ್ತ್ರೇತಾಸ್ವೌದುಂಬರೋಪಮಾಃ ।
ಕೃತೇಽಶ್ವತ್ಥಸಮಾಶ್ಚೈವ ಯಾಂತಿ ಬ್ರಹ್ಮವಶಾಃ ಸದಾ ॥ ಇತಿ ಪಾದ್ಮೇ ।

ಏಕಪ್ರಕಾರಶಬ್ದಾನಾಮಭ್ಯಾಸಸ್ತ್ವಾದರಾರ್ಥಕಃ ।
ಸ್ವರವರ್ಣಾದಿಮಾತ್ರಂ ವಾಽಪ್ಯನ್ಯಥಾ ಚೇತ್ ತದಾ ಪರಃ ।
ಅರ್ಥಃ ಸ್ಯಾದೇಷ ನಿಯಮೋ ವಾಕ್ಯೇ ವೀಪ್ಸಾಪದೇ ತಥಾ ।
ಪ್ರಾತಿಸ್ವಿಕಾರ್ಥೇಽಪಿ ಭವೇದಭ್ಯಾಸೇ ವಾ ತಥಾ ಸ್ಥಿತಃ ॥ ಇತಿ ಶಬ್ದನಿರ್ಣಯೇ

ವಿಶದಂ ಕ್ಷೀರಮಾಧುರ್ಯಂ ಗುಡೇ ತೀಕ್ಷ್ಣಂ ಘೃತೇ ಸ್ಥಿರಮ್ ।

ಅವರೇಭ್ಯೋಽಪಿ ಶ್ರುಣ್ವಂತಿ ಪರಮಾಶ್ಚ ಕ್ವಚಿತ್ಕ್ವಚಿತ್ ।
ಲೀಲಯೈವ ನ ಚೈತೇಷಾಂ ಪರಮತ್ವಂ ವಿಹೀಯತೇ ॥

ನೀಚಾದಪ್ಯುತ್ತಮಾ ಜ್ಞಾನಂ ಶೃಣುಯುರ್ಲೀಲಯಾ ಕ್ವಚಿತ್ ।
ಶ್ರೋತೃವಕ್ತೃವಿಭೇದೋಽಯಂ ನಾಧಿಕ್ಯಜ್ಞಾಪಕಸ್ತತಃ ॥
ಯಸ್ಯಾಧಿಕ್ಯಂ ತು ವೇದೋಕ್ತಂ ಪಂಚರಾತ್ರೇಽಥವಾ ಭವೇತ್ ।
ಇತಿಹಾಸಪುರಾಣೇ ವಾ ಸೋಽಧಿಕೋ ನೇತರಃ ಕ್ವಚಿತ್ ' ಇತಿ ಬ್ರಹ್ಮತರ್ಕೇ

೧೦. ದೇವತೆಗಳ ದೇಹಲಕ್ಷಣಗಳ ವಿವರ :

ದ್ವಾತ್ರಿಂಶಲ್ಲಕ್ಷಣೈಃ ಸಮ್ಯಗ್ಯುಕ್ತಾ ವಾಯುತ್ವಯೋಗ್ಯಕಾಃ ।
ನಿಯಮೇನೈವ ವಿಷ್ಣೋಸ್ತು ಪ್ರಾದುರ್ಭಾವಾ ವಿಶೇಷತಃ ॥

ಸಹಸ್ರಾರೇಣ ಚಕ್ರೇಣ ಚಿಹ್ನಿತಾ ದಕ್ಷಿಣೇ ಕರೇ ।
ಗದಯಾಽಷ್ಟಾಶ್ರಯಾ ಚೈವ ಶತಾವರ್ತೇನ ಕಂಬುನಾ ।
ವಾಮೇ ಕರೇ ತಥಾಽಬ್ಜೇನ ಸಹಸ್ರದಲಶೋಭಿನಾ ।
ಅಷ್ಟಾವಿಂಶಲ್ಲಕ್ಷಣಾಶ್ಚ ಗಿರೀಶಪದಯೋಗಿನಃ ॥
ಚತುರ್ವಿಂಶತಿಮಾರಭ್ಯ ಷೋಡಶಾದಾಸುರಾಃ ಸ್ಮೃತಾಃ ॥
ಅಷ್ಟಕಾದೃಷಯಶ್ಚೋಕ್ತಾಸ್ತದೂನಾಶ್ಚಕ್ರವರ್ತಿನಃ ॥ (ಮಹಾಸಂಹಿತಾ)

೧೧. ಶ್ರೀಹರಿಯ ಸರ್ವೋತ್ತಮತ್ವವನ್ನು ವಿಭಿನ್ನ ರೀತಿಯಲ್ಲಿ ವಿವರಿಸುವ ಕೆಲವು ವಾಕ್ಯಗಳು ಹೀಗಿವೆ :

'ಏಕ ಏವಾದ್ವಿತೀಯೋಽಸೌ ಹರಿರ್ವೇದೇಷು ಸರ್ವದಾ ।
ಏಕ ಏವಾದ್ವಿತೀಯೋಽಸಾವಶ್ವಮೇಧಃ ಕ್ರತುಷ್ವಪಿ ॥
ಏಕೈವ ವಾಽದ್ವಿತೀಯಾ ಸಾ ವಿಷ್ಣುಭಕ್ತಿರ್ಹಿ ಸಾಧನೇ ।
ಏಕ ಏವಾದ್ವಿತೀಯೋಽಸೌ ಪ್ರಣವೋ ಮಂತ್ರ ಉಚ್ಯತೇ ॥

೧೨. ಬ್ರಹ್ಮದೇವರ ಬಗ್ಗೆ ಒಂದು ವಿಶೇಷ ವಿವರ :

ಬ್ರಹ್ಮಣೋಽಪಿ ಹ್ಯಮುಕ್ತಸ್ಯ ನಾಕಾಮಹತತಾ ಪರಾ ।
ಯತಸ್ತಸ್ಯಾಪಿ ಕಾಮಸ್ಯ ಕ್ಷಣವ್ಯವಹತಿರ್ಭವೇತ್ ॥ ....

ಬ್ರಹ್ಮಣೋಽಪ್ಯಲ್ಪದುಃಖಂ ಸ್ಯಾತ್ ತದಪ್ಯನಭಿಮಾನತಃ ।
ನಾಸ್ಯಾತ್ಮಸಂಬಂಧತಯಾ ಭೋಗಾಭಾವಾತ್ ಕಥಂಚನ ॥

ಜ್ಞಾನಮಪ್ರತಿಘಂ ಯಸ್ಯ ವೈರಾಗ್ಯಂ ಚ ಜಗತ್ಪತೇಃ ।
ಐಶ್ವರ್ಯಂ ಚೈವ ಧರ್ಮಶ್ಚ ಸಹಸಿದ್ಧಂ ಚತುಷ್ಟಯಮ್ ॥

೧೩. ತತ್ತ್ವಜ್ಞಾನಿಯ ಲಕ್ಷಣ :

ಬ್ರಹ್ಮಾದಯೋ ಹಿ ಭೂತಾನಿ ತೇಷಾಮಂತರ್ಗತೋ ಹರಿಃ ।
ಸಮಃ ಸ ಸರ್ವಭೂತೇಷು ಯ ಏವಂ ವೇದ ತತ್ತ್ವವಿತ್ ॥

೧೪. ವಿಷ್ಣುಸರ್ವೋತ್ತಮತ್ವಜ್ಞಾನದ ಹೊರತು ಇತರ ಸಕಲಸಾಧನಗಳು ಅಮುಖ್ಯ:

ತುಲಾಪುರುಷದಾನಾದ್ಯೈರಶ್ವಮೇಧಾದಿಭಿರ್ಮಖೈಃ ।
ವಾರಣಸೀಪ್ರಯಾಗಾದಿತೀರ್ಥಸ್ನಾನಾದಿಭಿಃ ಪ್ರಿಯೇ ॥
ಗಯಾಶ್ರಾದ್ಧಾದಿಭಿಃ ಪಿತ್ರ್ಯೈರ್ವೇದಪಾಠಾದಿಭಿರ್ಜಪೈಃ ।
ತಪೋಭಿರುಗ್ರೈರ್ನಿಯಮೈರ್ಯಮೈರ್ಭೂತದಯಾದಿಭಿಃ ॥

ಗುರುಶುಶ್ರೂಷಣೈಃ ಸತ್ಯೈಃ ಧರ್ಮೈರ್ವರ್ಣಾಶ್ರಮೋಚಿತೈಃ ।
ಜ್ಞಾನಧ್ಯಾನಾದಿಭಿಃ ಸಮ್ಯಕ್ ಚರಿತೈರ್ಜನ್ಮಜನ್ಮಭಿಃ ।
ನ ಯಾಂತಿ ತತ್ಪರಂ ಶ್ರೇಯೋ ವಿಷ್ಣುಂ ಸರ್ವೇಶ್ವರೇಶ್ವರಮ್ ।
ಸರ್ವಭಾವೈರನಾಶ್ರಿತ್ಯ ಪುರಾಣಪುರುಷೋತ್ತಮಮ್ ॥ ಇತಿ ಪಾದ್ಮೇ ।

೧೫. ಅನುಮಾನದ ಇತಿಮಿತಿಗಳು :

ಅನುಮಾಯಾ ವಿರೋಧಶ್ಚೇತ್ ಪ್ರತ್ಯಕ್ಷೇಣಾಗಮೇನ ವಾ ।
ಸೈವಾಪ್ರಾಮಾಣತಾಂ ಗಚ್ಛೇದಾಗಮದ್ವಿಟ್ ತಥಾಽಕ್ಷಜಮ್ ॥
ತಸ್ಮಾದಾಗಮ ಏವೈಕೋ ಮಾನಾನಾಮುತ್ತಮೋತ್ತಮಃ ।
ಧರ್ಮಾರ್ಥಕಾಮಮೋಕ್ಷಾಣಾಂ ಸಾಕ್ಷಾದೇವ ಪ್ರದಾಯಕಃ ॥

ಇತಿ ವಾಯುಪ್ರೋಕ್ತೇ ।

೧೬. ಆಗಮದ ಹಿರಿಮೆ :

ನಿರ್ಣಯಸ್ತ್ವಾಗಮೇನೈವ ನಾನುಮಾಽಽಗಮವರ್ಜಿತಾ ।
ಕ್ವಚಿನ್ನಿರ್ಣೀತಿಹೇತುಃ ಸ್ಯಾದತಃ ಶಾಸ್ತ್ರಾದ್ವಿನಿರ್ಣಯಃ ॥' ಇತಿ ಭಾರತೇ ।

'ಅಕ್ಷಪಾದಕಣಾದೌ ಚ ಸಾಂಖ್ಯಯೋಗಾರ್ಹತಾಸ್ತಥಾ ।
ಶಿವಶಕ್ತಿಮಹಾಯಾನಲೋಕಾಯತಪುರಃಸರಾಃ ।
ಗಾಣಪತ್ಯಾಶ್ಚ ಸೌರಾಶ್ಚ ಸರ್ವೇ ಪ್ರೋಕ್ತಾ ದುರಾಗಮಾಃ ।
ಋಗ್ಯಜುಃಸಾಮಾಥರ್ವಾಶ್ಚೇತಿಹಾಸಪುರಾಣಕೌ ।
ಸ್ವಾಗಮಾ ಇತಿ ಸಂಪ್ರೋಕ್ತಾ ಮೀಮಾಂಸಾ ಧರ್ಮ ಏವ ಚ ಇತಿ ಪಾದ್ಮೇ ।

'ಪಂಚರಾತ್ರಂ ಭಾರತಂ ಚ ಮೂಲರಾಮಾಯಣಂ ತಥಾ ।
ಇತಿಹಾಸ ಇತಿ ಪ್ರೋಕ್ತೋ ಬ್ರಾಹ್ಮಾದ್ಯಂ ಚ ಪುರಾಣಕಮ್' ಇತಿ ಪ್ರಕಾಶಿಕಾಯಾಂ

ವೇದಾಶ್ಚೈವೇತಿಹಾಸಾಶ್ಚ ಪುರಾಣಂ ಭಾಗವತಂ ತಥಾ ।
ಮೂಲಪ್ರಮಾಣಮುದ್ದಿಷ್ಟಂ ಮೀಮಾಂಸಾ ಚ ತಥೋತ್ತರಾ ।
ಏತೇಷಾಮವಿರೋಧೇ ತು ಮಾನಮನ್ಯದುದೀರಿತಮ್ ।
ಏತೇಷಾಂ ತು ವಿರುದ್ಧಂ ಯದಪ್ರಮಾಣಂ ವಿದೋ ವಿದುಃ ॥' ಇತಿ ವ್ಯಾಸಸ್ಮೃತೌ ।

'ವಿಷ್ಣೋಃ ಸರ್ವೋತ್ತಮತ್ವಸ್ಯ ಜ್ಞಾನಾರ್ಥಂ ಶಾಸ್ತ್ರಮಿಷ್ಯತೇ ।
ಅತಸ್ತತ್ಸಾಧಕಂ ಶಾಸ್ತ್ರಂ ದುಃಶಾಸ್ತ್ರಂ ತದ್ವಿರೋಧಿ ಯತ್ । ಇತಿ ಬ್ರಹ್ಮಾಂಡೇ ।

'ವಿಷ್ಣೋಃ ಸರ್ವೋತ್ತಮತ್ವಂ ಚ ತದ್ಭಕ್ತ್ಯಾ ಮೋಕ್ಷ ಏವ ಚ ।
ಶಾಸ್ತ್ರಾರ್ಥ ಇತಿ ನಿರ್ದಿಷ್ಟಃ ಸರ್ವಶಾಸ್ತ್ರಾರ್ಥನಿರ್ಣಯಾತ್ ॥

ಇತಿ ಪಾದ್ಮೇ ।

೧೭. ಆಗಮಗಳ ಸಂಖ್ಯಾವಿವರ:

ಶತಕೋಟ್ಯಃ ಪಂಚರಾತ್ರಂ ಪುರಾಣಂ ತಾವದೇವ ಚ ।
ರಾಮಸ್ಯ ಚರಿತಂ ತಾವತ್ತಾವದನ್ಯಚ್ಚ ಸರ್ವಶಃ ॥
ಅನಂತಾಶ್ಚ ತಥಾ ವೇದಾಃ ಸಾಂಗೋಪಾಂಗಾಶ್ಚ ಸರ್ವಶಃ ।
ಸರ್ವಾಧಿಕ್ಯಂ ಯತ್ರ ವಿಷ್ಣೋಸ್ತಾತ್ಪರ್ಯಾತ್ ಸಮುದೀರ್ಯತೇ ॥
ವಿಂಶದೇವ ಸಹಸ್ರಾಣಿ ಶ್ಲೋಕಾನಾಂ ಸಮುದೀರಿತಮ್ ।
ಬಾರ್ಹಸ್ಪತ್ಯಂ ತಥಾ ಬೌದ್ಧಂ ಭಾವಾಭಾವಮತಂ ತಥಾ ॥
ಶಿವಶಕ್ತ್ಯಾದಿಕಂ ಯಚ್ಚ ಕಿಂಚಿತ್ಪ್ರಾಮಾಣ್ಯಸಂಯುತಮ್ ।
ತ್ರಿಂಶತ್ಕೋಟ್ಯೇವ ತತ್ಸರ್ವಮತೋ ಮಾನಂ ನ ತತ್ಸ್ಮೃತಮ್ ॥
ಬಹುಮಾನವಿರುದ್ಧಂ ಯನ್ನ ತನ್ಮಾನಂ ವಿದೋ ವಿದುಃ ।
ಗುಣಸಾಮ್ಯೇಽಪಿ ಕಿಮುತ ಗುಣಾಧಿಕವಿರೋಧಿ ಯತ್ ॥
ಯಥಾ ಬಹೂನಾಂ ಜ್ಞಾನಾನಾಂ ಸಮಾನಾಂ ಗುಣತೋಽಪಿ ಚ ।
ವಿರೋಧ್ಯೇಕಂ ತು ಯಜ್ಜ್ಞಾನಂ ನ ಮಾನತ್ವಂ ಗಮಿಷ್ಯತಿ ।
ಪ್ರತ್ಯಕ್ಷಾದೌ ಹಿ ಬಹುಭಿಃ ಸಮೈರೇಕಮಪೋದ್ಯತೇ ।
ತಸ್ಮಾದ್ವೇದಾಃ ಪ್ರಮಾಣಂ ಸ್ಯುರ್ಬಾಹುಲ್ಯಾದೇವ ಕಿಂ ಪುನಃ ॥
ಅದೋಷತ್ವಾದ್ಗುಣಾಚ್ಚೈವ ಬಲವತ್ಕಾರ್ಯಸಾಧನಾತ್ ।
ವೇದೋಕ್ತಕರ್ಮಯುಕ್ತಾನಾಂ ತಥಾ ಸಿದ್ಧಿಮತಾಮಪಿ ॥
ವೇದಬಾಹ್ಯಕ್ರಿಯಾಯೋಗಾನ್ನ ಬಾಧಃ ಕ್ವಾಪಿ ದೃಶ್ಯತೇ ।
ವೇದೋಕ್ತಕರ್ಮಸಿದ್ಧಾನಾಂ ನ ಬಾಧ್ಯಂ ದೃಶ್ಯತೇ ಕ್ವಚಿತ್ ।
ಅಸಾಧ್ಯಂ ವಾ ತತೋ ವೇದಾಃ ಪ್ರಾಮಾಣ್ಯಂ ನಿಶ್ಚಯಾದ್ಗತಾಃ ॥ ಇತಿ ।

೧೮. ಅಗ್ನಿಯಲ್ಲಿ ಹೋಮದ ಹಾಗೂ ವಿಪ್ರಪೂಜೆಯ ವಿಶೇಷ :

ಯಸ್ಮಾದಗ್ನೌ ವಿಶೇಷೇಣ ಬ್ರಹ್ಮಣಃ ಸನ್ನಿಧಿರ್ಭವೇತ್ ।
ಅತೋಽಗ್ನಾವೇವ ದೇವಾನಾಂ ಸರ್ವೇಷಾಂ ನಿಯಮಾದ್ಧವಿಃ ॥
ಹುತ್ವಾ ಲೋಕಾನ್ ಪ್ರಾರ್ಥಯಂತಿ ತಥಾ ವಿಪ್ರೇಷು ಮಾನುಷೇ ।
ಸರ್ವಜಾತ್ಯುತ್ತಮೋ ಬ್ರಹ್ಮಾ ಯತೋ ವಿಪ್ರಾಗ್ನಿಸಂಸ್ಥಿತಃ ॥
ತಸ್ಮಾದ್ವಿಪ್ರಾಂಸ್ತಥೈವಾಗ್ನಿಂ ತರ್ಪಯೇದ್ಬ್ರಹ್ಮತುಷ್ಟಿಕೃತ್ ।
ತುಷ್ಟೇ ಬ್ರಹ್ಮಣಿ ವಿಷ್ಣುಶ್ಚ ತುಷ್ಟೋ ಲೋಕಾನ್ ಪ್ರದಾಸ್ಯತಿ ॥

೧೯. ತಿಳಿಯದವರಿಗೆ ಶ್ರೀಹರಿಯು ಫಲ ನೀಡನು :

ಅಗ್ನಿವಿಪ್ರಾರ್ಚಕೋಽಪ್ಯೇವಂ ಯೋ ನ ವೇದ ಹರಿಂ ಪರಮ್ ।
ಆಶ್ರಯಂ ಸರ್ವಜೀವಾನಾಂ ಹರಿಸ್ತಂ ನೈವ ಭೋಜಯೇತ್ ॥

ಯಥಾನಧೀತೋ ವೇದಸ್ತು ಯಥಾ ಕರ್ಮಾಕೃತಂ ತಥಾ ।
ನ ಸಮ್ಯಕ್ ಫಲದೋ ವಿಷ್ಣುರಜ್ಞಾತೋ ಜಗದೀಶ್ವರಃ ॥

ಯದ್ಯವೇತ್ತಾ ಮಹದಪಿ ಹಯಮೇಧಾದಿಕಂ ಹರೇಃ ।
ಕುರ್ಯಾತ್ ಕ್ಷಯಿಷ್ಣುಫಲವಾನ್ ಸ ಭವೇನ್ನಾತ್ರ ಸಂಶಯಃ ॥ ....

ಸರ್ವಾಶ್ರಯಂ ಚ ಪಿತರಂ ಸರ್ವೇಷಾಮಧಿಕಂ ಗುಣೈಃ ।
ಅವಿದಿತ್ವಾ ಮಹತ್ಪುಣ್ಯಂ ಕೃತ್ವಾ ನ ಫಲಭಾಗ್ ಭವೇತ್ ॥
ತಥಾ ಜ್ಞಾತ್ವಾ ಹರಿಂ ಯಸ್ತು ಕುರ್ಯಾತ್ಕರ್ಮ ಸದೋದಿತಮ್ ।
ಅನಂತಫಲವಾನ್ ಸ ಸ್ಯಾತ್ ಪ್ರಾಪ್ನೋತಿ ಚ ಮನೋಗತಮ್ ॥ (ಬೃಹಚ್ಛ್ರುತಿ)

೨೦. ನರರಿಗೆ ದೇವತೆಗಳು ಆಶ್ರಯರೇ ಹೊರತು ದೇವತೆಗಳಿಗೆ ನರರಲ್ಲ:

ನರಾಣಾಮಾಶ್ರಯಾ ದೇವಾ ನ ದೇವಾನಾಂ ನರಾಃ ಕ್ವಚಿತ್ ।
ನರಾಣಾಂ ಚ ಸುರಾಣಾಂ ಚ ಗತಿರೇಕೋ ಜನಾರ್ದನಃ ॥

ಬೃಹದಾರಣ್ಯಕೋಪನಿಷದ್ಭಾಷ್ಯದಲ್ಲಿ ಉದಾಹೃತವಾಗಿರುವ ಪ್ರಮಾಣಗ್ರಂಥಗಳ ವಿವರ ಹೀಗಿದೆ :

ಅಧ್ಯಾತ್ಮ	ಅಭಿಧಾನ	ಆಗ್ನೇಯ
ಆಧಾರ	ಉಪಾಸಾನಿರ್ಣಯ	ಕಾರಣವಿವೇಕ
ಕಾಲನಿರ್ಣಯ	ಗಾಯತ್ರೀಸಂಹಿತಾ	ಗಾರುಡ
ಗುಣಪರಮ	ಜ್ಯೋತಿರ್ಬ್ರಾಹ್ಮಣ	ತತ್ತ್ವನಿರ್ಣಯ
ತತ್ತ್ವನಿರ್ಣಯಗೀತಾ	ತತ್ತ್ವಸಂಹಿತಾ	ತಂತ್ರಮಾಲಾ
ತ್ರೈವಿದ್ಯ	ನಾರದೀಯ	ನಾರಸಿಂಹ
ನಾರಾಯಣಶ್ರುತಿ	ನಾರಾಯಣೀಯ	ನಿರ್ಣಯ
ಪರಮಶ್ರುತಿಃ	ಪರಮಸಂಹಿತಾ	ಪವಮಾನ
ಪಾದ್ಮ	ಪೈಂಗಿಶ್ರುತಿ	ಪ್ರಕಾಶಿಕಾ
ಪ್ರಕೃಷ್ಟ	ಪ್ರತಿಸಂಖ್ಯಾನ	ಪ್ರತ್ಯಯ
ಪ್ರತ್ಯಾಹಾರ	ಪ್ರಧ್ಯಾನ	ಪ್ರಭಂಜನ
ಪ್ರವೃತ್ತ	ಬೃಹಚ್ಛ್ರುತಿಃ	ಬ್ರಹ್ಮತರ್ಕ
ಬ್ರಹ್ಮಾಂಡ	ಬ್ರಾಹ್ಮ	ಭವಿಷ್ಯತ್ಪರ್ವ
ಭವಿಷ್ಯತ್ಪುರಾಣ	ಭಾವತತ್ತ್ವ	ಭಗವದ್ಗೀತಾ
ಭಾಗವತ	ಮಂತ್ರಮಾಲಾ	ಮಾನಸಂಹಿತಾ
ಭಾರತ	ಮಹಾಮೀಮಾಂಸಾ	ಮಹಾಸಂಹಿತಾ
ಮಾಹಾತ್ಮ್ಯ	ಮಾನ್ಯಸಂಹಿತಾ	ಮುಕ್ತಿಸಂಹಿತಾ

ಮೋಕ್ಷಧರ್ಮ	ರಾಜನೀತಿ	ವಾಮನ
ವಾರಾಹ	ವಾಯುಪ್ರೋಕ್ತ	ವೈಭವ
ವೈಹಾಯಸ	ವ್ಯಾಸನಿರುಕ್ತ	ವ್ಯಾಸಸ್ಮೃತಿ
ಶಬ್ದತತ್ತ್ವ	ಶಬ್ದನಿರ್ಣಯ	ಶ್ರುತಿ
ಸತ್ತತ್ತ್ವ	ಸಂಧಾನ	ಸದ್ಭಾವ
ಸೌಪರ್ಣ	ಸ್ಕಾಂದ	ಹಯಗ್ರೀವಸಂಹಿತಾ
ಹರಿವಂಶ	ಅನಿರ್ದಿಷ್ಟ ಆಕರಗಳು (ಸುಮಾರು ೧೭)	

ಉಪನಿಷದ್ಭಾಷ್ಯಗಳ ಟೀಕಾಟಿಪ್ಪಣಿಗಳು

ದಶೋಪನಿಷದ್ಭಾಷ್ಯಗಳಲ್ಲಿ ಈಶಾವಾಸ್ಯ ಮತ್ತು ಷಟ್ಪ್ರಶ್ನಗಳ ಭಾಷ್ಯಗಳಿಗೆ ಟೀಕಾಕೃತ್ಪಾದರಾದ ಶ್ರೀಜಯತೀರ್ಥರು ಟೀಕೆ ರಚಿಸಿರುವರು. ಅವರ ಅನುಮತಿ[೧] ಪಡೆದು ಉಳಿದ ಎಂಟು ಭಾಷ್ಯಗಳಿಗೆ ಹಾಗೂ ಈಶಾವಾಸ್ಯಕ್ಕೆ ಅವರ ಶಿಷ್ಯರಾದ ಶ್ರೀವ್ಯಾಸತೀರ್ಥರು ಟೀಕೆಗಳನ್ನು ರಚಿಸಿದರು. ಈಶಾವ್ಯಾಸಭಾಷ್ಯಕ್ಕೆ ಶ್ರೀವ್ಯಾಸತೀರ್ಥರ ಟೀಕೆಯು ಇತ್ತೀಚೆಗೆ ಉಪಲಬ್ಧವಾಗಿದೆ. ಪ್ರಾಯಃ ನಾರಾಯಣಪಂಡಿತರ ಪುತ್ರರಾದ ತ್ರೈವಿಕ್ರಮಾರ್ಯದಾಸರೆಂದು ಪ್ರಸಿದ್ಧರಾದ ವಾಮನಪಂಡಿತಾಚಾರ್ಯರು ಉಪನಿಷದ್ಭಾಷ್ಯಗಳ ಪ್ರಾಚೀನಟೀಕಾಕಾರರು. ಅವರು ಐತರೇಯ, ಛಾಂದೋಗ್ಯ ಹಾಗೂ ಬೃಹದಾರಣ್ಯಗಳನ್ನು ಹೊರತು ಇತರ ಏಳು ಉಪನಿಷದ್ಭಾಷ್ಯಗಳಿಗೂ ಟೀಕೆ ರಚಿಸಿರುವ ಉಲ್ಲೇಖವಿದ್ದು, ಅವುಗಳಲ್ಲಿ ಆರು ಉಪನಿಷದ್ಭಾಷ್ಯಟೀಕೆಗಳು ಪ್ರಕಾಶಿತವಾಗಿವೆ. ಹಸ್ತಪ್ರತಿಗಳು ನನ್ನ ಸಂಗ್ರಹದಲ್ಲಿ ಉಪಲಬ್ಧವಿವೆ. ಶ್ರೀವರದತೀರ್ಥರು ಎಂಬವರು ರಚಿಸಿರುವ ಉಪನಿಷದ್ಭಾಷ್ಯಟೀಕೆಗಳು ಉಪಲಬ್ಧವಿವೆ.

ಶ್ರೀವಾದಿರಾಜಸ್ವಾಮಿಗಳು ಶ್ರೀಜಯತೀರ್ಥರ ಈಶಾವಾಸ್ಯ ಹಾಗೂ ಷಟ್ಪ್ರಶ್ನಟೀಕೆಗಳಿಗೆ ಟಿಪ್ಪಣಿ ಬರೆದಿರುವರು; ಆಥರ್ವಣ ಮೊದಲಾದ ಚಿಕ್ಕ ಉಪನಿಷತ್ತುಗಳ ಭಾಷ್ಯಗಳಿಗೆ ಟೀಕೆಗಳನ್ನೂ ಬರೆದಿರುವರು. ಬೃಹದಾರಣ್ಯಕೋಪನಿಷದ್ಭಾಷ್ಯಕ್ಕೆ ಶ್ರೀರಘೂತ್ತಮತೀರ್ಥರ ಭಾವಬೋಧ ಸುಪ್ರಸಿದ್ಧ. ಐತರೇಯೋಪನಿಷತ್ತಿಗೆ ಶ್ರೀವಿಶ್ವೇಶ್ವರತೀರ್ಥರ ಟೀಕೆ, ಛಾಂದೋಗ್ಯ, ಕಾಠಕ, ಐತರೇಯ, ತಲವಕಾರಗಳಿಗೆ ಶ್ರೀವೇದೇಶತೀರ್ಥರ ಟೀಕೆಗಳು ತುಂಬಾ ಪ್ರಸಿದ್ಧ.

ಈಶಾವಾಸ್ಯಕ್ಕೆ ಶ್ರೀರಘುನಾಥಾಚಾರ್ಯರು ವ್ಯಾಖ್ಯಾನವನ್ನು ರಚಿಸಿರುವರು. ಶ್ರೀಬಿದರಹಳ್ಳಿ ಶ್ರೀನಿವಾಸತೀರ್ಥರು ಸಹ ಈಶಾವಾಸ್ಯ, ಷಟ್ಪ್ರಶ್ನ, ಮಾಂಡೂಕ್ಯ, ತೈತ್ತಿರೀಯ

---

೧. ಇತರೋಪನಿಷದ್ಭಾಷ್ಯಟೀಕಾಕೃತಿ ಸಯಾಚನೇ ।
ಶಿಷ್ಯಾರ್ಯೇ ವ್ಯಾಸತೀರ್ಥಾಖ್ಯೇ ಟೀಕಾ ನಾಕೃತ ಸ ಸ್ವಯಮ್ । -- ಜಯತೀರ್ಥವಿಜಯೇ

ಮೊದಲಾದ ಉಪನಿಷತ್ತುಗಳಿಗೆ ಟಿಪ್ಪಣಿ ರಚಿಸಿರುವರು. ಭಾಷ್ಯಾರ್ಥ- ಸಂಗ್ರಹರೂಪವಾದ ಉಪನಿಷದ್ವಿವರಣೆಗಳು ಶ್ರೀರಾಘವೇಂದ್ರಸ್ವಾಮಿಗಳಿಂದ ದಶೋಪನಿಷತ್ತುಗಳಲ್ಲಿ ಐತರೇಯದ ಹೊರತು ಉಳಿದ ೯ ಉಪನಿಷತ್ತುಗಳಿಗೂ ಸಮಗ್ರವ್ಯಾಖ್ಯಾನಗಳನ್ನು ರಚಿಸಿರುವರು. ಐತರೇಯೋಪನಿಷತ್ತಿಗೆ ಮಧ್ವಭಾಷ್ಯಾನುಸಾರಿಯಾದ ಮಂತ್ರಾರ್ಥ-ಸಂಗ್ರಹವನ್ನು ಬರೆದಿರುವರು. ಅವರ ಶಿಷ್ಯರಾದ ಸ್ಮೃತಿಮುಕ್ತಾವಲಿ ಕೃಷ್ಣಾಚಾರ್ಯರು ಐತರೇಯೋಪನಿಷತ್ತಿಗೆ ಸಮಗ್ರವಾಗಿ ವ್ಯಾಖ್ಯಾನ ಬರೆದಿರುವರು. ಉಪನಿಷತ್ತುಗಳಿಗೆ ಭಾಷ್ಯೋಕ್ತವಾದ ಅರ್ಥಗಳನ್ನು ಅರಿಯಲು ಅವು ನೀಡುವ ನೆರವು ಅಪಾರವಾದುದು.

ಅಂತೂ ಉಪನಿಷತ್ತುಗಳ ಮಧ್ವಭಾಷ್ಯಗಳು ಅವರ ಇತರ ಕೃತಿಗಳಂತೆ ಪ್ರಮಾಣಭೂಯಿಷ್ಠವಾಗಿದ್ದು ಇತರ ಸಕಲ ಉಪನಿಷತ್ತುಗಳ ಅರ್ಥಗ್ರಹಣಕ್ಕೂ ಭಾವದೀಪಗಳಂತೆ ಅತ್ಯಂತ ಉಪಕಾರಕವಾಗಿವೆ[೧].

★★★★★

---

೧. ವಿಶ್ವೇಶತೀರ್ಥರ ಟೀಕೆಯ ಸಮೇತ ಐತರೇಯಭಾಷ್ಯವನ್ನು ಕುರಿತ ನನ್ನ ಅಧ್ಯಯನ, ಸಂಪಾದನೆಗಳಿಗೆ ತಿರುಪತಿಯ ರಾಷ್ಟ್ರಿಯ ಸಂಸ್ಕೃತವಿದ್ಯಾಪೀಠದ ಪಿ.ಹೆಚ್.ಡಿ. ಪದವಿ ಲಭಿಸಿದೆ. ಅದರ ಟೀಕಾಭಾಗವನ್ನು ಭಾಷ್ಯದೊಂದಿಗೆ ವಿಸ್ತಾರವಾದ ಪ್ರಸ್ತಾವನೆಯ ಸಮೇತ ಬೆಂಗಳೂರಿನ ಶ್ರೀಪೂರ್ಣಪ್ರಜ್ಞವಿದ್ಯಾಪೀಠವು ಪ್ರಕಾಶನ ಪಡಿಸಿದೆ.

ಋಗ್ಭಾಷ್ಯ

ವೇದಗಳು ಮತ್ತು ಅವುಗಳ ಮಹತ್ತ್ವ

ವೇದಗಳನ್ನು ನಿತ್ಯ ಆಗಮ ಎಂಬುದಾಗಿ ನಮ್ಮ ಪರಂಪರೆ ಅಂಗೀಕರಿಸಿದೆ. [೧]ಶ್ರುತಿ, ದೃಷ್ಟಿ, ತ್ರಯೀ, ಆಮ್ನಾಯ, ಆನುಪೂರ್ವೀ, ಅನಂತಪಾರ, ಅನುವಚನ ಮೊದಲಾದ ಇತರ ಅನೇಕ ಹೆಸರುಗಳಿಂದಲೂ ಇವು ಪ್ರಸಿದ್ಧವಾಗಿವೆ. ಸದಾ ಇರುವುದರಿಂದ 'ವೇದ'ಗಳೆಂದೂ, ಶ್ರವಣದಿಂದಲೇ ಅದರ ಅಧ್ಯೇತೃಗಳು ಅವುಗಳನ್ನು ತಿಳಿದು ಅಧ್ಯಯನ ಮಾಡುವುದರಿಂದ 'ಶ್ರುತಿ'ಗಳೆಂದೂ, ಅರ್ಥತಃ ಮಾತ್ರವಲ್ಲದೆ, ಶಬ್ದತಃ ಸಹ ಅವುಗಳಲ್ಲಿ ನಿತ್ಯತ್ವ ಇರುವುದರಿಂದ 'ಆಮ್ನಾಯ'ಗಳೆಂದೂ, ಆನುಪೂರ್ವಿಯಲ್ಲಿ ಯಾವುದೇ ವ್ಯತ್ಯಾಸ ಎಂದೂ ಇಲ್ಲದಿರುವುದರಿಂದ 'ಆನುಪೂರ್ವಿ'ಗಳೆಂದೂ, ವಿನಾಶ ಹಾಗೂ ಪರಿಮಿತಿಗಳಿಂದ ರಹಿತವಾದ್ದರಿಂದ 'ಅನಂತಪಾರ' ಎಂದೂ ಅವುಗಳಿಗೆ ಆಯಾ ಹೆಸರುಗಳು ಅನ್ವರ್ಥಕವಾಗಿರುವುದನ್ನು ಶ್ರೀಮದಾಚಾರ್ಯರು ವಿವರಿಸಿರುವರು. ಬಹುತೇಕ ಆಧುನಿಕವಿದ್ವಾಂಸರೂ ಸಹ ಇವನ್ನು ಮನುಕುಲದ ಅತಿಪ್ರಾಚೀನಕೃತಿಗಳು ಎಂಬುದಾಗಿ ಅಂಗೀಕರಿಸಿರುವರು.

ವೇದಗಳು ಸಂಖ್ಯೆಯಲ್ಲಿ ಅನಂತ ('ಅನಂತಾ ವೈ ವೇದಾಃ'). ಇವು ಋಗ್ವೇದ, ಯಜುರ್ವೇದ, ಸಾಮವೇದ ಹಾಗೂ ಅಥರ್ವಣವೇದ ಎಂಬುದಾಗಿ ನಾಲ್ಕು

---

೧. ವೇದಾಸ್ತೇ ನಿತ್ಯವಿನ್ನತ್ವಾತ್ ಶ್ರುತಯಶ್ಚಾಖಿಲೈಃ ಶ್ರುತೇಃ ।
ಆಮ್ನಾಯೋಽನನ್ಯಥಾಪಾಠಾದೀಶಬುದ್ಧಿಸ್ಥಿತಾಃ ಸದಾ ॥ ಇತಿ ಮಹಾವಾರಾಹೇ ।

– ವಿಷ್ಣುತತ್ತ್ವವಿನಿರ್ಣಯ

ಯತಸ್ತಾ ಹರಿಣಾ ದೃಷ್ಟಾಃ ಶ್ರುತಾ ಏವಾಖಿಲೈರ್ಜನೈಃ ।
ದೃಷ್ಟಯೋ ಶ್ರುತಯಶ್ಚೇತಿ ತೇನೋಚ್ಯತೆ ಪುರಾತನೈಃ ॥ – ವಿಷ್ಣುತತ್ತ್ವವಿನಿರ್ಣಯ

'ತ್ರಯೀ ಶ್ರುತಿರ್ನಿತ್ಯವಾಕ್ಚ ವೇದೋಽನುವಚನಂ ತಥಾ' ಇತಿ ಹ್ಯಭಿಧಾನಮ್ ।

ಭಾ.ತಾ.೨/೭/೨

ಆನುಪೂರ್ವೀ ಶ್ರುತಿಶ್ಚೈವ ತ್ರಯೀ ಚಾಮ್ನಾಯ ಉಚ್ಯತೇ' ಇತ್ಯಭಿಧಾನಮ್ ।

ಭಾ.ತಾ. ೪/೧೦/೧೬

'ಆನುಪೂರ್ವೀ ಶ್ರುತಿರ್ವೇದ ಆಮ್ನಾಯಶ್ಚೇತಿ ಕಥ್ಯತೇ' ಇತ್ಯಭಿಧಾನಾತ್ ।

– ಛಾಂದೋಗ್ಯಭಾಷ್ಯ

ಅಂತೋ ವಿನಾಶ ಉದ್ದಿಷ್ಟೋ ಪಾರಃ ಪರಿಮಿತಿಸ್ತಥಾ ।
ಅನಂತಪಾರೋ ವೇದೋಽಯಂ ತಾಭ್ಯಾಂ ಸ ರಹಿತೋ ಯತಃ ॥

ವ್ಯಾಸಸ್ಮೃತಿಃ । ಭಾ.ತಾ.೧೧/೨೧/೩೬

ಪ್ರಭೇದಗಳನ್ನು ಹೊಂದಿವೆ. ಇವುಗಳಲ್ಲಿ ಋಗ್ವೇದಕ್ಕೆ ವಿಶೇಷ ಮಹತ್ತ್ವ. ಋಗ್ವೇದ, ಯಜುರ್ವೇದ, ಸಾಮವೇದ ಹಾಗೂ ಅಥರ್ವಣವೇದಗಳನ್ನು ಕ್ರಮವಾಗಿ ಇಪ್ಪತ್ತನಾಲ್ಕು, ನೂರೊಂದು, ಸಾವಿರ ಹಾಗೂ ಹನ್ನೆರಡು ಶಾಖೆಗಳನ್ನಾಗಿ ವಿಭಾಗಿಸಿ[೧], ಸಮಗ್ರವೇದಗಳನ್ನು ಅಧ್ಯಯನ ಮಾಡದವರಿಗೆ ಆಯಾ ಶಾಖೆಗಳನ್ನು ಅಧ್ಯಯನ ಮಾಡುವುದರಿಂದಲೇ ಸಮಸ್ತವೈದಿಕಸಾಹಿತ್ಯದ ಆಂತರ್ಯ ಸ್ಪಷ್ಟ ತಿಳಿಯುವಂತೆ ಮಾಡಿದ ಹಿರಿಮೆ ಸಾಕ್ಷಾತ್ ಭಗವದವತಾರರಾದ ಶ್ರೀವೇದವ್ಯಾಸದೇವರದು. ವೇದವ್ಯಾಸ ಎಂಬ ಇವರ ಹೆಸರು ಮೂಲತಃ ಈ ಹಿನ್ನೆಲೆಯನ್ನೇ ಹೊಂದಿದೆ[೨]. ಅವರು ಯಾರೋ ಒಬ್ಬ ಸಾಮಾನ್ಯ ಮುನಿಯಾಗಿರದೆ ಸ್ವತಃ ಭಗವಂತನ ಅವತಾರರೇ ಆಗಿರುವರು ಎಂಬುದು ಭಗವದ್ಗೀತೆಯಿಂದಲೇ ಸ್ಫುಟಪಡುತ್ತದೆ (ಮುನೀನಾಮಪ್ಯಹಂ ವ್ಯಾಸಃ - ಗೀತಾ ೧೦/೩೭). ಪರಾಶರ-ಸತ್ಯವತಿಯರ ಪುತ್ರತ್ವೇನ ಅವತರಿಸಿದ ಇವರು ಕಾನೀನರೆಂದೂ ಪ್ರಸಿದ್ಧರಾಗಿರುವರು. ಪರಾಶರಸೂನು ಎಂಬ ಕಾರಣದಿಂದ ಪಾರಾಶರ್ಯ, ಉಪರಿಚರ ವಸುವಿನ ಪುತ್ರಿಯಾದ ಸತ್ಯವತಿಯಲ್ಲಿ ಅವತರಿಸಿದ್ದರಿಂದ ವಾಸವೀಸೂನು, ಸಾತ್ಯವತೇಯ ಎಂದೂ, ಯಮುನಾನದಿಯ ದ್ವೀಪವೊಂದರಲ್ಲಿ ಪ್ರಾದುರ್ಭವಿಸಿದ್ದರಿಂದ 'ದ್ವೈಪಾಯನ'ರೆಂದೂ, ಕೃಷ್ಣವರ್ಣರಾದ್ದರಿಂದ 'ಕೃಷ್ಣ' ಎಂದೂ, ಈ ಎರಡೂ ಕಾರಣಗಳಿಂದಾಗಿ ಕೃಷ್ಣದ್ವೈಪಾಯನ ಎಂದೂ, ವಾಸಿಷ್ಠವಂಶೋದ್ಭವರಾದ್ದರಿಂದ 'ವಾಸಿಷ್ಠ(ಕೃಷ್ಣ)' ಎಂದೂ, ಬದರಿಯಲ್ಲಿ ನೆಲೆಸಿದ್ದರಿಂದ 'ಬಾದರಾಯಣ' ಎಂದೂ ಶ್ರೀವೇದವ್ಯಾಸರು ಪ್ರಸಿದ್ಧರಾಗಿರುವರು.

ಜೈಮಿನಿ, ವೈಶಂಪಾಯನ, ಪೈಲ, ಶೇಷ, ಕಾಶಕೃತ್ಸ್ನ, ಔಡುಲೋಮಿ ಮೊದಲಾದ ಶ್ರೇಷ್ಠ ಮುನಿಗಳು ಇವರ [೩]ಸಾಕ್ಷಾಚ್ಛಿಷ್ಯರು. ಇವರಲ್ಲಿ ಪೈಲರು ಋಗ್ವೇದಕ್ಕೂ, ವೈಶಂಪಾಯನ, ಸೂರ್ಯರು ಯಜುರ್ವೇದಕ್ಕೂ, ಜೈಮಿನಿಗಳು ಸಾಮವೇದಕ್ಕೂ,

---

೧. ದ್ವಾಪರೇ ಸರ್ವತ್ರ ಜ್ಞಾನ ಆಕುಲೀಭೂತೇ ತನ್ನಿರ್ಣಯಾಯ ಬ್ರಹ್ಮರುದ್ರೇಂದ್ರಾದಿಭಿರರ್ಥಿತೋ ಭಗವಾನ್ನಾರಾಯಣೋ ವ್ಯಾಸತ್ವೇನಾವತತಾರ । ಅಥೇಷ್ಟಾನಿಷ್ಟಪ್ರಾಪ್ತಿಪರಿಹಾರೇಚ್ಛೂನಾಂ ತದ್ಯೋಗಮವಿಜಾನತಾಂ ತಜ್ಜ್ಞಾಪನಾರ್ಥಂ ವೇದಮುತ್ಸನ್ನಂ ವ್ಯಂಜಯಂಶ್ಚತುರ್ಧಾ ವ್ಯಭಜತ್। ಚತುರ್ವಿಂಶತಿಧೈಕಶತಧಾ ಸಹಸ್ರಧಾ ದ್ವಾದಶಧಾ ಚ । ತದರ್ಥನಿರ್ಣಯಾಯ ಬ್ರಹ್ಮಸೂತ್ರಾಣಿ ಚಕಾರ। - ಬ್ರಹ್ಮಸೂತ್ರಭಾಷ್ಯ (೧/೧/೧)

೨. ವಿವ್ಯಾಸ ವೇದಾನ್ ಯಸ್ಮಾತ್ ಸ ತಸ್ಮಾತ್ ವ್ಯಾಸ ಇತಿ ಸ್ಮೃತಃ। - ಭಾರತ (ಆದಿ.೬೩/೮೮)

೩. ಋಚಾಂ ಪ್ರವರ್ತಕಂ ಪೈಲಂ ಯಜುಷಾಂ ಚ ಪ್ರವರ್ತಕಮ್ ।
ವೈಶಂಪಾಯನಮೇವೈಕಂ ದ್ವಿತೀಯಂ ಸೂರ್ಯಮೇವ ಚ ॥
ಚಕ್ರೇಽಥ ಜೈಮಿನಿಂ ಸಾಮ್ನಾಮಥರ್ವಾಂಗಿರಸಾಮಪಿ ।
ಸುಮಂತುಂ ಭಾರತಸ್ಯಾಪಿ ವೈಶಂಪಾಯನಮಾದಿಶತ್ ॥
- ಇತ್ಯಾದಿ ಮಹಾಭಾರತತಾತ್ಪರ್ಯನಿರ್ಣಯ. (೧೦/೭೬,೭೭)

ಸುಮಂತುಮುನಿಯು ಅಥರ್ವಣವೇದಕ್ಕೂ ಪ್ರವರ್ತಕರೆನ್ನಿಸಿದರು. ವೈಶಂಪಾಯನರು ಮಹಾಭಾರತಕ್ಕೂ ಪ್ರವರ್ತಕರಾದರು. ಜೈಮಿನಿಗಳು ಶ್ರೀವೇದವ್ಯಾಸರ ಅಪ್ಪಣೆಯಂತೆ ಕರ್ಮಮೀಮಾಂಸಾಸೂತ್ರಗಳನ್ನೂ, ಶೇಷ ಹಾಗೂ ಪೈಲರು ದೈವೀಮೀಮಾಂಸಾಸೂತ್ರದ ಮಧ್ಯಭಾಗವನ್ನು ರಚಿಸಿದರು. ದೈವೀಮೀಮಾಂಸೆಯ ಆದ್ಯಂತಗಳನ್ನು ಸ್ವತಃ ವೇದವ್ಯಾಸರೇ ರಚಿಸಿದರು. ವಿಶ್ವದ ಸರ್ವೋತ್ಕೃಷ್ಟಶಾಸ್ತ್ರವೆಂದು ಮಾನ್ಯವಾಗಿರುವ ಬ್ರಹ್ಮಸೂತ್ರಗಳಂತೂ ಶ್ರೀವೇದವ್ಯಾಸರ ರಚನೆಯೇ ಆಗಿವೆ. ಮಹಾಭಾರತ, ಭಾಗವತಾದಿ ಅಷ್ಟಾದಶಮಹಾಪುರಾಣಗಳು ಹಾಗೂ ಉಪಪುರಾಣಗಳು ಸಹ ಶ್ರೀವೇದವ್ಯಾಸರ ಕೃತಿಗಳು. ಐವತ್ತು ಕೋಟಿ ಶ್ಲೋಕಗಳ, ನಾರಾಯಣರೂಪದಿಂದ ರಚಿಸಲ್ಪಟ್ಟ ಬ್ರಹ್ಮತರ್ಕದಿಂದ ಐದುಸಹಸ್ರಶ್ಲೋಕಗಳ ಬ್ರಹ್ಮತರ್ಕವನ್ನು ಉದ್ಧರಿಸಿದ್ದೂ ಶ್ರೀವೇದವ್ಯಾಸರೇ.

ಅವರ ಬ್ರಹ್ಮಸೂತ್ರ ಸಮಸ್ತವೈದಿಕವಾಙ್ಮಯದ ಹೃದಯವನ್ನು ತೆರೆದಿಡುವ ಸೂತ್ರರೂಪದ ಭಾಷ್ಯ; ಅವರ ಇತಿಹಾಸಪುರಾಣಗಳು ವೈದಿಕವಾಙ್ಮಯದ ವಿವರಣೆ-ಯನ್ನು ದೃಷ್ಟಾಂತಪೂರ್ವಕ ನಿರೂಪಿಸುವ ವಿನೂತನಶೈಲಿಯ ವ್ಯಾಖ್ಯಾನಗಳಾಗಿವೆ.

ಋಗ್ಭಾಷ್ಯ

ಋಗ್ಭಾಷ್ಯವು ಋಗ್ವೇದದ ಒಟ್ಟು ೬೪ ಅಧ್ಯಾಯಗಳಲ್ಲಿ ಮೊದಲ ಮೂರು ಅಧ್ಯಾಯಗಳಿಗೆ ಮಾತ್ರ ರಚಿತವಾಗಿರುವ ಭಾಷ್ಯ ಎಂದರೆ ಒಟ್ಟಾಗಿ ನಲ್ವತ್ತು ಸೂಕ್ತಗಳಿಗೆ ೪೮೯ ಋಕ್‌ಗಳಿಗೆ ಶ್ರೀಮದಾಚಾರ್ಯರ ವಿವರಣೆ ಲಭಿಸುತ್ತದೆ. ವೈದಿಕಸಾಹಿತ್ಯದ ಸಂಹಿತಾಭಾಗಕ್ಕೆ ರಚಿತವಾಗಿರುವ ಏಕೈಕ ಶ್ಲೋಕರೂಪ ಭಾಷ್ಯ ಎಂಬುದು ಇದರ ಹಿರಿಮೆ.

ವೈದಿಕಸಾಹಿತ್ಯದ ಆಧ್ಯಾತ್ಮಿಕಮಹತ್ತ್ವವನ್ನು ಆ ಮುಂಚಿನ ಯಾವ ದಾರ್ಶನಿಕರೂ ಗುರುತಿಸಿರಲಿಲ್ಲ. ಅರಣ್ಯಕ ಉಪನಿಷತ್ತುಗಳನ್ನು ಅದರಲ್ಲೂ ಉಪನಿಷತ್ತುಗಳನ್ನು ಮಾತ್ರವೇ ಜ್ಞಾನಕಾಂಡ ಎಂದು ಭಾವಿಸಿ ಅವುಗಳಿಗೆ ಮಾತ್ರ ವಿವರಣೆ ನೀಡುವ ಸಂಪ್ರದಾಯ ಆ ಮುಂಚಿನ ಭಾಷ್ಯಕಾರರದಾಗಿದ್ದಿತು. ವೇದಾಂತಿಗಳ ನಿಲುವು ಹೀಗಿದ್ದರೆ, ಮೀಮಾಂಸಕರ ನಿಲುವು ಇನ್ನೂ ವಿಚಿತ್ರವಾಗಿತ್ತು. ಅವರು ಉಪನಿಷದ್ಭಾಗವನ್ನು ಗೌಣವಾಗಿ ಕಂಡರು. ಅಲ್ಲದೆ ವೇದಗಳ ಸಂಹಿತಾಭಾಗದಲ್ಲಿ ಬಂದಿರುವುದು ಕರ್ಮದ ಮಹತ್ತ್ವ, ಕರ್ಮವೇ ತಾರಕ, ಅದರಲ್ಲಿ ದೇವರಿಗಾಗಲಿ, ದೇವತೆಗಳಿಗಾಗಲಿ, ಅವಕಾಶವೇ ಇಲ್ಲ ಎಂಬ ಧೋರಣೆ ಅವರದು[೧]. ವೇದ ಒಪ್ಪಿಯೂ, ದೇವರನ್ನು ಒಪ್ಪದ ವೈದಿಕ

೧. ನನು ಕರ್ಮನಿರ್ಣಯೋ ಜೈಮಿನಿನಾ ಪೂರ್ವಮೀಮಾಂಸಾಯಾಮೇವ ಕೃತಃ। ತತ್ಕಿಮನೇನ। ಸತ್ಯಮ್ । ಕರ್ಮಸ್ವರೂಪಮಾತ್ರಂ ಜೈಮಿನಿನಾ ನಿರ್ಣೀತಮ್ । ನ ತು ತದಂಗಭೂತಾನಾಂ

ನಾಸ್ತಿಕರು ಅವರು. ಹೀಗೆ ವೇದಭಾಗವನ್ನು ಜ್ಞಾನಕಾಂಡ, ಕರ್ಮಕಾಂಡ ಎಂದು ವಿಭಾಗಿಸಿ ಉಪನಿಷತ್ತುಗಳನ್ನು ಮಾತ್ರ ಜ್ಞಾನಕಾಂಡವೆಂದು ಬಗೆದು ಅದಕ್ಕಷ್ಟೇ ಮಹತ್ತ್ವ ಕೊಟ್ಟವರು ಆವರೆಗಿನ ವೇದಾಂತಿಗಳಾಗಿದ್ದರೆ, ಕರ್ಮವೇ ತಾರಕವೆಂದು ಬಗೆದು ಮಂತ್ರ ಬ್ರಾಹ್ಮಣಗಳಿಗೆ ಮಾತ್ರ ಜೋತುಬಿದ್ದವರು ಮೀಮಾಂಸಕರಾಗಿದ್ದರು.

ಸಮಗ್ರ ವೈದಿಕಸಾಹಿತ್ಯವು ಒಟ್ಟಾಗಿಯೇ ತತ್ತ್ವಶಾಸ್ತ್ರ; ಕರ್ಮಬೋಧಕಭಾಗವೂ ಮೂಲತಃ ಜ್ಞಾನಸಾಧನವನ್ನಾಗಿಯೇ ಕರ್ಮವನ್ನು ವಿಧಿಸಿದೆ ಎಂಬುದನ್ನು 'ವೇದೈಶ್ಚ ಸರ್ವೈರಹಮೇವ ವೇದ್ಯಃ', 'ಸರ್ವೇ ವೇದಾ ಯತ್ಪದಮಾಮನಂತಿ' ಮೊದಲಾದ ಪ್ರಮಾಣಗಳಿಂದ ಸಾಧಿಸಿ ಅವುಗಳಲ್ಲಿನ [1]ತಾತ್ತ್ವಿಕಮಹತ್ತ್ವವನ್ನು ಅನಾವರಣಗೊಳಿಸಿದ ಶ್ರೇಯಸ್ಸು ಶ್ರೀಮಧ್ವಾಚಾರ್ಯರದು.

ಋಗ್ಭಾಷ್ಯವು ಓಂಕಾರ, ವ್ಯಾಹೃತಿ ಮತ್ತು ಗಾಯತ್ರೀ ಮಂತ್ರಗಳ ಅರ್ಥ ವಿವರಣೆಯೊಂದಿಗೆ ಪ್ರಾರಂಭವಾಗಿ ಭಗವಂತನು ಅವುಗಳಿಂದಲೂ ಪುರುಷಸೂಕ್ತದಿಂದಲೂ ಪ್ರತಿಪಾದ್ಯನಾದ ಸಕಲವೇದಾರ್ಥವೂ ಆಗಿರುವನು ಎಂಬುದನ್ನು ಪ್ರತಿಪಾದಿಸುತ್ತದೆ. ಪ್ರಥಮ ಸೂಕ್ತವನ್ನು ವ್ಯಾಖ್ಯಾನಿಸಿದ ನಂತರ ಆಚಾರ್ಯರು ವೈದಿಕ ಸಾಹಿತ್ಯದ ಅಂತರ್ದರ್ಶನಕ್ಕೆ ನೆರವಾಗುವ ಒಂದು ಅಪೂರ್ವಭೂಮಿಕೆಯನ್ನು ನೀಡಿದ್ದಾರೆ.

ಋಷಿ ದೇವತಾದಿಗಳ ಪರಿಜ್ಞಾನವಿಲ್ಲದ ವೈದಿಕ ಸಾಹಿತ್ಯದ ಅಧ್ಯಯನ ತಾರಕವಾಗುವ ಬದಲು ಮಾರಕವಾದೀತು ಎಂಬ ಮಾತು ವೇದದಲ್ಲೇ ಬಂದಿದೆ[2].

> 'ಯೋ ಹ ವಾऽವಿದಿತಾರ್ಷಛಂದೋದೈವತಬ್ರಾಹ್ಮಣೇನ ಮಂತ್ರೇಣ ಯಜತಿ ಯಾಜಯತಿ ವಾऽಧ್ಯಾಪಯತಿ ಸ್ಥಾಣುಂ ವರ್ಛತಿ ಗರ್ತೇ ವಾ ಪದ್ಯತೇ ಪ್ರವಾಮೀಯತೇ ಪಾಪೀಯಾನ್ ಭವತಿ ತಸ್ಮಾದೇತಾನಿ ಮಂತ್ರೀ ವಿದ್ಯಾತ್' -(ಸಾಮವೇದ ಬ್ರಾಹ್ಮಣ)

ಆದರೆ ವೇದಗಳು ಅನಂತವಾಗಿರುವುದರಿಂದ ಅವೆಲ್ಲವುಗಳ ಋಷಿ, ಪ್ರತಿಪಾದ್ಯ ದೇವತೆ ಮೊದಲಾದವುಗಳನ್ನು ಅರಿವುದೆಂತು? ಎಂಬ ಸಮಸ್ಯೆಗೆ ಮೂಲಭೂತ ಪರಿಹಾರವನ್ನು ಋಷಿ ದೇವತಾ ಛಂದಸ್ಸುಗಳ ಪರಿಜ್ಞಾನದ ಮೂಲಸ್ವರೂಪವನ್ನೇ

ಮಂತ್ರಾಣಾಂ ಭಗವತ್ಪರತ್ವಮ್ । ನಾಪ್ಯಂತಃಕರಣಶುದ್ಧಿದ್ವಾರಕಮೀಶ್ವರಸಾಕ್ಷಾತ್ಕಾರರೂಪಂ ಮುಖ್ಯಂ ಫಲಮ್ । ಅತಸ್ತದ್ದರ್ಶನಾರ್ಥೋऽಯಮಾರಂಭಃ । ನ ಚೈತನ್ನಿರ್ಮೂಲಮ್ । ಉತ್ತರಮೀಮಾಂಸಾಸಿದ್ಧತ್ವಾತ್ । ಉಕ್ತಂ ಹಿ 'ಅನ್ಯಾರ್ಥಂ ತು ಜೈಮಿನಿಃ' ಇತ್ಯಾದಿ । ಅತ ಏವ ತದ್ವಿಷಯಾದಿನೈವಾಸ್ಯ ಗ್ರಂಥಸ್ಯ ವಿಷಯಾದಿಮತ್ತೇತಿ । - ಕರ್ಮನಿರ್ಣಯಟೀಕಾ

೧. 'ಏಕೈವ ವಾ ಮಹಾನಾತ್ಮಾ ದೇವತಾ' । - ಇತಿ ಅನುಕ್ರಮಣಿಕಾಯಾಮಪಿ ॥

೨. ಋಷಿಚ್ಛಂದೋದೈವತಾನಿ ಜ್ಞಾತ್ವಾರ್ಥಂ ಚೈವ ಭಕ್ತಿತಃ ।
ಸ್ವಾಧ್ಯಾಯೇನೈವ ಮೋಕ್ಷಃ ಸ್ಯಾದ್ವಿರಕ್ತಸ್ಯ ಹರಿಸ್ಮೃತೇಃ ॥ (೧/೯೩)

ವಿವೇಚಿಸಿ ನೀಡಿದ್ದಾರೆ. ಇಂದು ವೇದದ್ರಷ್ಟಾರರೆಂದು ಪ್ರಸಿದ್ಧವಾಗಿರುವ ವಿಶ್ವಾಮಿತ್ರಾದಿಗಳೆಲ್ಲ ಒಂದು ಹಂತದ ಋಷಿಗಳು ಮಾತ್ರ. ಅವರಿಗಿಂತ ಪ್ರಧಾನರಾದ ಋಷಿಗಳೂ ಇರುವರು. ಸಕಲ ವಿದ್ಯೆಗಳಿಗೂ ವೇದಗಳಿಗೂ ಶ್ರೀಹರಿಯೇ ಪ್ರಧಾನ ದ್ರಷ್ಟಾರ ಮುನಿ. ಎಲ್ಲಾ ವಿದ್ಯೆಗಳೂ ಅವನ ಹಯಗ್ರೀವ ರೂಪದಿಂದ ಹೊರಹೊಮ್ಮಿ ಬಂದಿವೆ ಎಂಬುದಾಗಿ ಆಕರಗಳು ಸಾರಿವೆ. ಬ್ರಹ್ಮದೇವರಿಗೆ ಕಪಿಲರೂಪದಿಂದ ಸಕಲ ವೇದಗಳನ್ನೂ ಉಪದೇಶಿಸಿದವನು ಅವನೇ. ಹಾಗೆ ಶ್ರವಣ ಮಾಡಿದ ಬ್ರಹ್ಮದೇವರು ವೇದಗಳ ಅನಂತರದ ಋಷಿಗಳು. ಅವರ ಅನಂತರದ ದ್ರಷ್ಟಾರರಾಗಿ ವೇದಗಳಿಗೆ ಶೇಷನೂ ಪಂಚರಾತ್ರಕ್ಕೆ ಗರುಡನೂ ಇರುವನು. ವೇದಮಂತ್ರಕ್ಕೆ ಭಾಗಶಃ ದರ್ಶನ-ಮಾಡಿದ ವಿಶ್ವಾಮಿತ್ರ ಮೊದಲಾದವರು ಅನಂತರದ ಋಷಿಗಳು. ವೇದವಾಕ್ಯಗಳನ್ನು ಸ್ವಯಂ ಸಾಕ್ಷಾತ್ಕರಿಸಿಕೊಳ್ಳುವವರೆಲ್ಲರೂ ಆ ವೇದ ಭಾಗಗಳಿಗೆ ಋಷಿಗಳೆನ್ನಿಸುವರು:

ಮುನಿಸ್ತು ಸರ್ವವಿದ್ಯಾನಾಂ ಭಗವಾನ್ ಪುರುಷೋತ್ತಮಃ। (೧/೨೨)

ಯಃ ಪಶ್ಯತಿ ಸ್ವಯಂ ವಾಕ್ಯಂ ಸ ಋಷಿಸ್ತಸ್ಯ ಕೀರ್ತಿತಃ।
ಅರ್ವಾಕ್ ತು ದ್ವಾದಶಾವೃತ್ತೇರಧೀತ್ಯಾಪ್ಯೃಷಿರೇವ ಸಃ॥ (೧/೩೧)

ಋಗ್ವೇದಕ್ಕೆ ಇಂದ್ರನೂ, ಯಜುರ್ವೇದಕ್ಕೆ ಸೂರ್ಯನೂ ಸಾಮವೇದಕ್ಕೆ ಸೋಮನೂ ಮೂರನೇ ಹಂತದ ಋಷಿಗಳಾಗಿರುವರು. ವಿಷ್ಣು ,ಬ್ರಹ್ಮ ವಾಯುಗಳು ಮತ್ತು ಗರುಡರಂತೆ ಕ್ರಮವಾಗಿ ಅವರ ಪತ್ನಿಯರಾದ ಮಹಾಲಕ್ಷ್ಮೀ, ಸರಸ್ವತೀ, ಭಾರತಿಯರು ಹಾಗೂ ಸೌಪರ್ಣಿ ಋಷಿಗಳಾಗಿರುವರು. ಈ ತೆರನಾದ ಋಷಿಗಳ ಪರಿಜ್ಞಾನದಿಂದ ವಿಶೇಷ ಫಲವುಂಟು ಎಂಬುದಾಗಿಯೂ ಆಚಾರ್ಯರು ತಿಳಿಸಿರುವರು :

'ಏತಜ್ಜ್ಞಾನಾದದೃಷ್ಟಸ್ಯ ಫಲಸ್ಯಾಪ್ತಿಃ ಸ್ಫುಟಂ ಭವೇತ್ ।'
'ದ್ರಷ್ಟೄಣಾಂ ತು ಚತುರ್ಥಾನಾಂ ಜ್ಞಾನಾದಪ್ಯೈಹಿಕಂ ಭವೇತ್ ॥'

ವೇದಗಳ ಸ್ವರಗಳಿಗೂ ವಿಶಿಷ್ಟಾರ್ಥವುಂಟು

ಸ್ವರಗಳು ವೈದಿಕಸಾಹಿತ್ಯದ ವಿಶಿಷ್ಟಲಕ್ಷಣ. ಅಂತಹ ಪ್ರತಿಯೊಂದು ಸ್ವರಕ್ಕೂ ತನ್ನದೇ ಆದ ವಿಶಿಷ್ಟ ಅರ್ಥವುಂಟು ಎಂಬುದನ್ನು ಆಚಾರ್ಯರು ವಿವರಿಸಿರುವರು:

ದಾರ್ಢ್ಯಮೇವಾನುದಾತ್ತಾರ್ಥಃ ಉದಾತ್ತಸ್ಯೋಚ್ಚತಾರ್ಥತಾ।
ನೀಚತಾ ಸ್ವರಿತಸ್ಯಾರ್ಥಃ ಪ್ರಚಯಸ್ಯ ಯಥಾಸ್ಥಿತಿಃ॥
ಸಮಾಹಾರೇಽಖಿಲಾ ಅರ್ಥಾಃ ಸ್ವರಾರ್ಥಾನಾಮಿಯಂ ಸ್ಥಿತಿಃ॥

ಬೇರಾವ ವೇದಭಾಷ್ಯಕಾರರೂ ಸ್ವರಗಳ ಅರ್ಥದ ಬಗೆಗಿನ ಈ ಸೂಕ್ಷ್ಮ-ಮಹತ್ತ್ವವನ್ನು ಗುರುತಿಸಿರಲಿಲ್ಲ. ಸಾಯಣಭಾಷ್ಯವೂ ಇದಕ್ಕೆ ಅಪವಾದವಾಗಿಲ್ಲ.

ವೈದಿಕಸಾಹಿತ್ಯದ ಅಧ್ಯಯನಕ್ಕೆ ಅತ್ಯಂತ ಅವಶ್ಯಕವಾಗಿದ್ದ ಈ ವಿವರವನ್ನು ಪ್ರಥಮಬಾರಿಗೆ ಸಾಧಾರವಾಗಿ ನಿರೂಪಿಸಿದ ಶ್ರೇಯಸ್ಸು ಶ್ರೀಮಧ್ವಾಚಾರ್ಯರದು[೧]. ಅವರು ಸ್ವರ ಎಂಬುದಕ್ಕೆ ಹರಿ, ವಾಯು ಎಂಬ ಅರ್ಥಗಳನ್ನು ನೀಡಿರುವರು.

ಹೀಗೆ ಋಷ್ಯಾದಿಗಳ ಬಗ್ಗೆ ಸಮಗ್ರ ಪರಿಜ್ಞಾನದ ಮೂಲಕ ನಡೆಯುವ ವೇದಾಧ್ಯಯನವು ಅಪರೋಕ್ಷಜ್ಞಾನದ್ವಾರಾ ಮೋಕ್ಷಕ್ಕೆ ಸಾಧನ. ಐಹಿಕಫಲವು ಸಹ ಅದನ್ನು ಅಪೇಕ್ಷಿಸುವವರಿಗೆ ಲಭಿಸುವುದು. ಸ್ವಾಧ್ಯಾಯಕ್ಕಿಂತ ಪ್ರವಚನ ಸಾವಿರಪಟ್ಟು ಮಿಗಿಲು; ಅರ್ಥಪರಿಜ್ಞಾನ ಕೋಟಿಪಟ್ಟು ಮಿಗಿಲು. ಅರ್ಥವನ್ನು ಸ್ಫುಟವಾಗಿ ಪ್ರತಿಪಾದಿಸುವವನಿಗೆ ದೊರಕುವ ಫಲವಂತೂ ಅನಂತ. ಹೀಗೆ ಅಧ್ಯಯನ, ಅಧ್ಯಾಪನಗಳ ವೈವಿಧ್ಯ ಮತ್ತು ಫಲಗಳಲ್ಲಿನ ತಾರತಮ್ಯವನ್ನು ಋಗ್ಭಾಷ್ಯದಲ್ಲಿ ವಿವರಿಸಿರುವರು[೨].

ವೇದಾಧ್ಯಯನದ ಬಗೆಬಗೆಯ ಹಂತದ ವಿಭಿನ್ನಫಲಶ್ರುತಿಯ ಪರಿಕಲ್ಪನೆಯು ಸಹ ಈ ಭಾಷ್ಯದ ವಿಶಿಷ್ಟಕೊಡುಗೆ.

---

೧. ನಾನರ್ಥಕಃ ಸ್ವರೋ ವಾಽಪಿ ವರ್ಣೋ ವಾ ಕುತ್ರಚಿದ್ಭವೇತ್ ।
ಪದಂ ವಾಕ್ಯಂ ಕುತಶ್ಚ ಸ್ಯಾನ್ನಾಲ್ಪಾರ್ಥಮಪಿ ಕುತ್ರಚಿತ್ ॥
ಉಚ್ಚಾರಾದ್ಯರ್ಥಮಪಿ ವಾ ನಾಸ್ತಿ ಕಿಂಚಿತ್ ಸ್ವರಾದಿಕಮ್ ।
ಮಹಾರ್ಥಮೇವ ಸರ್ವಂ ಹಿ ವೇದೇ ವಾ ವೈದಿಕೇಽಪಿ ವಾ ॥- ಇತಿ ।
– ಐತರೇಯೋಪನಿಷದ್ಭಾಷ್ಯ

ನ ವೇದೇಷು ಪದಂ ಕಿಂಚಿದ್ವರ್ಣೋ ವಾ ವ್ಯರ್ಥ ಇಷ್ಯತೇ ।
ಯಥಾಯೋಗ್ಯಂ ಚಾರ್ಥಭೇದ ಊಹ್ಯಃ ಸರ್ವತ್ರ ವೇದಿಭಿಃ ॥ ಇತಿ ಶಬ್ದನಿರ್ಣಯೇ ।
– ಐತರೇಯಭಾಷ್ಯ

ನ ಹ್ಯಪ್ರಯೋಜಕಂ ವೇದಪದಂ ವರ್ಣೋಽಥವಾ ಸ್ವರಃ ।
ಸ್ವರತೇಸ್ತು ಸ್ವರೋ ವಿಷ್ಣುಸ್ತದ್ರತೇರ್ವಾಯುರುಚ್ಯತೇ ॥ – ಛಾಂದೋಗ್ಯಭಾಷ್ಯ

೨. 'ಋಕ್ಷು ಸಂಸೃಜ್ಯಮಾನಾಸು ಪ್ರೋಚ್ಯಮಾನಂ ಜನಾರ್ದನಮ್ ।
ಪುಂಸಂಸೃಷ್ಟಸ್ಯ ಪಾಪಸ್ಯ ನಿಹಂತಾರಂ ವಿಶೇಷತಃ।
ತತ್ಪ್ರಸಾದೇನ ಮುಕ್ತಸ್ಯ ಪಾಪಾಸಂಸೃಷ್ಟತಾಮಪಿ ।
ಧ್ಯಾಯನ್ ಕರ್ಮಾಣಿ ಕೃತ್ವಾಽಪಿ ಮುಚ್ಯತೇ ಸರ್ವಪಾತಕೈಃ' ಇತಿ ಪ್ರವೃತ್ತೇ ॥
– ಕರ್ಮನಿರ್ಣಯ

ಸ್ವಾಧ್ಯಾಯಾತ್ ತು ಪ್ರವಚನೇ ಸಹಸ್ರಗುಣಿತಂ ಫಲಮ್ ।
ಅರ್ಥದ್ರಷ್ಟುಃ ಕೋಟಿಗುಣಂ ತತೋಽನಂತಂ ನಿಯಾಮಕೇ ।
ತರ್ಕಾಗಮಾಭ್ಯಾಂ ನಿಯತಿಂ ಯಃ ಕರೋತ್ಯಧಿಕಂ ತತಃ ।
ಪೂರ್ಣಂ ವೇದಾಖಿಲದ್ರಷ್ಟುರ್ಬ್ರಹ್ಮಣಃ ಫಲಮುಚ್ಯತೇ ॥ – ಋಗ್ಭಾಷ್ಯ ೧/೯೩,೧೭

ವೇದಗಳ ಅರ್ಥವೈವಿಧ್ಯ

ವೇದಗಳ ಅರ್ಥ ವಿಸ್ತಾರದ ಬಗ್ಗೆ ಶ್ರೀಮಧ್ವಾಚಾರ್ಯರು ನೀಡಿದ ವಿವರ ವಾಙ್ಮಯ ಪ್ರಪಂಚದಲ್ಲೇ ಅಪೂರ್ವ; ಸ್ಕಂದಪುರಾಣದ ಆಧಾರವನ್ನಿತ್ತು ಅವರು ಸಾರಿದರು – ವೇದಗಳಿಗೆ ಅತಿ ಕಡಿಮೆಯೆಂದರೂ ಮೂರು ಅರ್ಥಗಳು; ಮಹಾಭಾರತಕ್ಕೆ ಹತ್ತು ಅರ್ಥಗಳು ಮತ್ತು ವಿಷ್ಣುಸಹಸ್ರನಾಮದ ಪ್ರತಿನಾಮಕ್ಕೂ ನೂರು ಅರ್ಥಗಳು:

> ತ್ರಯೋऽರ್ಥಾಃ ಸರ್ವವೇದೇಷು ದಶಾರ್ಥಾಃ ಸರ್ವಭಾರತೇ ।
> ವಿಷ್ಣೋಃ ಸಹಸ್ರನಾಮಾಪಿ ನಿರಂತರಶತಾಸರ್ಥಕಮ್ ॥

ಹಾಗೆ ತಿಳಿಸಿದ್ದು ಮಾತ್ರವಲ್ಲದೆ ಅಂತಹ ಅರ್ಥವಿಶೇಷಗಳನ್ನು ನಿರೂಪಿಸಿಯೂ ತೋರಿಸಿರುವರು. ವೇದಗಳ ಆಧ್ಯಾತ್ಮಿಕಾರ್ಥ ಅವರ ಮತ್ತೊಂದು ಕೊಡುಗೆ. ಸೋಮ ಎಂದರೆ ಮನಸ್ಸು, ಹರಿಗಳು ಇಂದ್ರಿಯಗಳು, ವೃತ್ರ ಎಂದರೆ ಮಿಥ್ಯಾಜ್ಞಾನ, ಅತ್ರಿ ಎಂದರೆ ದೇವ, ಮನುಷ್ಯ ಮತ್ತು ಅಪವರ್ಗ ಎಂಬ ಮಾರ್ಗತ್ರಯಗಳಿಂದ ರಹಿತರಾದ ಅಸುರರು. ಇಂತಹ ಅರ್ಥಗಳು ಅವರ ಭಾಷ್ಯದಲ್ಲಿ ಓತಪ್ರೋತವಾಗಿ ತುಂಬಿವೆ. ಯಜ್ಞದ ಬಾಹ್ಯ ಕಲ್ಪನೆಯಲ್ಲೇ ಅನೇಕ ತಲೆಮಾರುಗಳನ್ನು ಕಳೆದಿದ್ದ ಜಿಜ್ಞಾಸು ವರ್ಗಕ್ಕೆ ಇಂತಹ ಅಪೂರ್ವಾರ್ಥಗಳ ಮೂಲಕ ಒಳಗಣ್ಣು ತೆರೆಸಿದ ಹಿರಿಮೆ ಅವರದ್ದು. ಆಚಾರ್ಯರ ಈ ಕೊಡುಗೆಯನ್ನು ಈಚಿನ ದಿನಗಳಲ್ಲಿ ಅರವಿಂದಾಶ್ರಮದ ಶ್ರೀಕಪಾಲಿಶಾಸ್ತ್ರಿಗಳಂತಹವರೂ ಸಹ ಮುಕ್ತ ಕಂಠದಿಂದ ಶ್ಲಾಘಿಸಿರುವರು:

''ಏವಮಪಿ ನ ಕೋऽಪ್ಯಾಸೀದ್ವೇದಾನಾಮಧ್ಯಾತ್ಮಪರತ್ವಪಕ್ಷಸ್ಯೋಜ್ಜೀವನಾಯ ಪ್ರವೃತ್ತಃ ಇತಿ ನ ಶಕ್ಯಂ ವದಿತುಂ ಆಚಾರ್ಯಮಧ್ವಗ್ರಂಥೇಷು ಜಾಗ್ರತ್ಸು । ಯತ್ ಸಾಯಣಾತ್ ಕಿಂಚಿತ್ಪೂರ್ವಂ ಆನಂದತೀರ್ಥಃ ಆಚಾರ್ಯಃ ಋಙ್ಮಂತ್ರತಾತ್ಪರ್ಯಪರಿಗ್ರಹಸ್ಯ ಪ್ರಕಾರೋಪಪ್ರದರ್ಶನಾಯ ಋಕ್ಸಂಹಿತಾಯಾ ಪ್ರಥಮಮಂಡಲೀಯಾನಿ ಚತ್ವಾರಿಂಶತ್ಸೂಕ್ತಾನಿ ವ್ಯಾಚಖ್ಯೌ । ವೈದಿಕಧರ್ಮಾಚರಣೇ ಕರ್ಮಾನುಷ್ಠಾನಸ್ಯಾವಶ್ಯಕತಯಾ ಕರ್ಮಪರವ್ಯಾಖ್ಯಾನಂ ಮಂತ್ರಾಣಾಂ ಸಾಧ್ವಿತಿ ಕರ್ಮಕರಣಮೇವ ಮುಖ್ಯಂ ತಾತ್ಪರ್ಯಮಿತಿಮತಮಸಾಧ್ವಿತಿ ಚ ಮಧ್ವ ಆಚಾರ್ಯೋ ಮನ್ಯತೇ । ಮಂತ್ರಾಣಾಮಧ್ಯಾತ್ಮಪರೋऽರ್ಥೋ ಮುಖ್ಯಃ ಸರ್ವೇಷಾಂ ವೇದಾನಾಂ ವಿಷ್ಣುಪದ ಪ್ರಾಪ್ತಿರೂಪಪರಮಪುರುಷಾರ್ಥೇ ತಾತ್ಪರ್ಯಮಿತಿ ಚ ಪ್ರತಿಪಾದಯತಿ ಆಚಾರ್ಯಃ । ಲಘು ವಿಸ್ತರಂ ಮಾಧ್ವಮೃಗ್ಭಾಷ್ಯಮ್ । ವಿರಲಾನ್ ಮಾಧ್ವಸಂಪ್ರದಾಯಪಂಡಿತಾನಂತರಾ ಪ್ರಾಯಶೋ ವೇದವಿಚಾರಿಣಾಮವಿದಿತಮೇವ ತಾದೃಶಂ ಅಸಮಗ್ರಮಪಿ ಅಸ್ಯೈವ ವೇದಭಾಷ್ಯಮಿತಿ । ತದನುಸಾರಿಣಾ ಮಹಾನುಭಾವೇನ ಶ್ರೀರಾಘವೇಂದ್ರಸ್ವಾಮಿನಾ ಯೋಗೀಂದ್ರೇಣ ಆಚಾರ್ಯಸ್ಯ ಭಾಷ್ಯಮನುಸೃತ್ಯಾಶಯಾನ್ ವಿಶದಯಂತೀ ಮಂತ್ರಾರ್ಥಮಂಜರೀ ನಾಮ ವ್ಯಾಖ್ಯಾ ನಿಬದ್ಧಾ । ಅಗ್ನ್ಯಾದಿದೇವತಾಪರತಯಾ ತದಂತರ್ಗತ ಪರದೇವತಾಭೂತವಿಷ್ಣುಪರತಯಾ ಆಧ್ಯಾತ್ಮಪರತಯಾ

ಚ ಋಚೋ ವ್ಯಾಖ್ಯೇಯಾಃ ಕಿಲ । ಯದ್ಯಪಿ ತದುಕ್ತತ್ರಿವಿಧಾರ್ಥಪ್ರಕಾರಪರೀಕ್ಷಾಯೈ ನ ವಯಂ ಪ್ರವೃತ್ತಾಃ ಸ್ಮಃ ತಥಾಽಪಿ ಕಥಮರ್ಥತ್ರಯಂ ಋಚಾಂ ಸಿದ್ಧ್ಯತಿ ಅಸ್ಮಿನ್ನರ್ಥಾವಿಷ್ಕಾರನಯ ಇತಿ ಸಮಾಸತೋ ಬ್ರೂಮಃ । ಆವಶ್ಯಕಸ್ಥಲೇಷು ಮಂತ್ರಾರ್ಥಮಂಜರೀ ವಾಕ್ಯಾನ್ಯೇವ ಉದ್ಧೃತ್ಯೋದಾಹರಿಷ್ಯಾಮಃ ॥ (ಋಗ್ವೇದ ಸಂಹಿತಾ 'ಭೂಮಿಕಾ' ಪು. ೬೨)

ಮಹರ್ಷಿ ದೇವರಾತ ಎಂಬವರು ಸಹ ಶ್ರೀಮಧ್ವರ ಋಗ್ಭಾಷ್ಯವನ್ನು ಬಹಳವಾಗಿ ಪ್ರಶಂಸಿಸಿರುವರು:

'ವೇದೋ' ವಿಶ್ವವಿಭೂತ್ಯರ್ಥಂ ವಿಶ್ವವಿದ್ಯೋದಯಾಸ್ಪದಮ್ ।
ವಿಶ್ವಕಲ್ಯಾಣಸಿದ್ಧ್ಯರ್ಥಂ 'ವೇದೋ' ವಿಜಯತೇತರಾಮ್ ॥ ೧ ॥

'ಋಗ್ಭಾಷ್ಯಂ' ವೈ ವಿಜಯತೇ ಮಧ್ವಾಚಾರ್ಯಮುಖೋದಿತಮ್ ।
ಅನುಷ್ಟುಪ್‌ಛಂದಸಾ ಬದ್ಧಂ ಸಾರ್ಥತ್ರಯಸಮರ್ಥಿತಮ್ ॥ ೨ ॥

ಅಗ್ನ್ಯಾದಿದೇವತಾದ್ಯರ್ಥಮಧ್ಯಾತ್ಮಂ ಚಾಂತರಾರ್ಥಕಮ್ ।
ತದಂತರ್ಯಾಮಿವಿಷ್ಣ್ವರ್ಥಂ ತತ್ಸಂಕೇತಾದ್ವಿದುಃ ಸಮಮ್ ॥ ೩ ॥

ಏಕೋನನವತ್ಯಧಿಕಂ ಚತುಃಶತಮೃಚಾಂ ಮತಮ್ ।
ಚತ್ವಾರಿಂಶತ್ಸೂಕ್ತಕ್ಲೃಪ್ತಂ ಸಂಕ್ಷೇಪಾತ್ ತತ್ರ ವಾಙ್ಮಯಮ್ ॥ ೪ ॥

ಅಲ್ಪಗ್ರಂಥಸಮೂಹಾಪ್ತಂ ಗಂಭೀರಂ ಗರ್ಭಿತಾರ್ಥಕಮ್ ।
ವೇದಾರ್ಥಾನಾಂ ಪ್ರಕಾಶಾರ್ಥಂ ವಿದುಷಾಂ ಮಾರ್ಗದರ್ಶಕಮ್ ॥ ೫ ॥

ಅತಿಪ್ರಾಚೀನಮಪಿ ತದ್ಗುಪ್ತಮದ್ಯಾಪಿ ಗೋಪಿತಮ್ ।
ಸಾಂಪ್ರತಂ ತತ್‌ಪ್ರಕಾಶೇನ ಭೂಯಾಜ್ಜ್ಞಾನಾಭಿವೃದ್ಧಯೇ ॥ ೬ ॥

ದೇವತೋಪಾಸನಾದ್ಯರ್ಥಂ ಯಜ್ಞಕರ್ಮಾದಿಸಿದ್ಧಯೇ ।
ಈಶಸಂತಪ್ರಸಾದಾರ್ಥಂ ಋಗ್ಭಾಷ್ಯಮುಪಕಾರಕಮ್ ॥ ೭ ॥

ತತ್ತ್ವಜ್ಞಾನೋದಯದ್ವಾರಾ ಜನತಾಸುಖಶಾಂತಯೇ ।
ಋಗ್ಭಾಷ್ಯಸ್ಯ ಪ್ರಕಾಶೇನ ಪ್ರೀಯತಾಂ ಭಗವಾನಿತಿ ॥ ೮ ॥

'ದೈವರಾತಸ್ಯ' ವಿಜ್ಞಪ್ತಿಃ ಸಮೃದ್ಧ್ಯೈ ವೇದಸಂವಿದಾಮ್ ।
ಜನತಾಜಗದೀಶೇಷ್ಟ್ಯೈ ಭೂಯಾತ್ ಸಂತುಷ್ಟಯೇ ಸತಾಮ್ ॥ ೯ ॥

ಋಗ್ಭಾಷ್ಯದ ಪ್ರಶಸ್ತಿ

ವೇದಾರ್ಥನಿರ್ಣಯಕ್ಕೆ ಶಿಕ್ಷಾ, ವ್ಯಾಕರಣ, ನಿರುಕ್ತ, ಛಂದಸ್ಸು, ಜ್ಯೋತಿಷ ಮತ್ತು ಕಲ್ಪ ಎಂಬ ಆರು ವೇದಾಂಗಗಳ ಅವಲಂಬನೆ ಅನಿವಾರ್ಯ. ವೇದಾಂಗಗಳೆಂಬ ಹೆಸರಿನಲ್ಲಿಯೇ ಅವುಗಳ ಮಹತ್ತ್ವ ಅಡಗಿದೆ. ಅವುಗಳಲ್ಲೂ ನಿರುಕ್ತ ಮತ್ತು ವ್ಯಾಕರಣಗಳ ಸ್ಥಾನ ಇನ್ನೂ ಪ್ರಮುಖ. ಪಾಣಿನಿವ್ಯಾಕರಣ ಮತ್ತು ಯಾಸ್ಕನಿರುಕ್ತಗಳನ್ನೇ ಪ್ರಧಾನ ವೇದಾಂಗಗಳೆಂದು ಭ್ರಮಿಸಿ, ಅವುಗಳ ಅವಲಂಬನೆಗಷ್ಟೇ ಸೀಮಿತಗೊಂಡಿದ್ದ ಜನರಿಗೆ

ವ್ಯಾಸನಿರುಕ್ತ ಮತ್ತು ಮಹಾವ್ಯಾಕರಣಗಳೇ ಪ್ರಧಾನವೇದಾಂಗಗಳಾದ ವ್ಯಾಕರಣ ನಿರುಕ್ತಗಳೆಂದು ಶ್ರುತಪಡಿಸಿದವರು ಶ್ರೀಮದಾಚಾರ್ಯರು. ಅವುಗಳ ಉಪಯೋಗವನ್ನು ಪಡೆಯುವ ವಿಧಾನವನ್ನು ತಮ್ಮ ಭಾಷ್ಯದಲ್ಲಿ ನಿರೂಪಿಸಿ ತೋರಿಸಿರುವರು. 'ಆಧಿಕ್ಯೇ ಅಧಿಕಂ', 'ಸ್ವಾತಂತ್ರ್ಯೇ ವ್ಯತ್ಯಯಃ', 'ರೇಫಃ ಸ್ವರವ್ಯತ್ಯಯಶ್ಚ ತದಾಧಿಕ್ಯಾರ್ಥಮೀರಿತೌ', 'ಪುಂಸೋಃ ಪೂರ್ವಸ್ಮಿನ್ ಸ್ವರಿತಾಂತೇ ಸಮಾಸೋ ಬಹುವ್ರೀಹಿಃ', 'ಸ್ವಾತಂತ್ರ್ಯೇ ಭೇದಕರಣೇ ಚೋಕ್ತ ವ್ಯತ್ಯಾಸಃ', 'ಅತಿನಿಶ್ಚಿತೇಽರ್ಥೇ ಭೂತಶಬ್ದಶ್ಚ', 'ಸರ್ವಾ ವಿಭಕ್ತಯಶ್ಚೇತ್ಥಂಭಾವವಾಚಿನ್ಯ ಏವ ಚ', 'ದಾರ್ಢ್ಯೇ ಸ್ವಪ್ರತಿಯೋಗಿತಾ' - ಇವು ಅವರು ಉದಾಹರಿಸಿರುವ ಕೆಲವು ಮಹಾವ್ಯಾಕರಣ ಸೂತ್ರಗಳು. ಕಂಪ ಮೊದಲಾದವುಗಳಿಗೂ ಸಾಧಾರವಾಗಿ ಅರ್ಥವಿಶೇಷಗಳನ್ನು ತಿಳಿಸಿಕೊಟ್ಟಿರುವುದು ಅವರ ಮತ್ತೊಂದು ಹಿರಿಮೆ :

ಕಂಪೋಽಶೇಷಗ್ರಹೇ ಕ್ವಾಪಿ ಲಜ್ಜಾಯಾಂ ವಾ ಪುರಾತನೇ ।
ಪೃಥಕ್ತ್ವೇ ಧೃಷ್ಟತಾಯಾಂ ವಾ ಹರಿಣರ್ಕ್ಷಂಹಿತೋದಿತಃ ॥

ವೇದಾರ್ಥಗಳನ್ನು ಮಾಡುವಲ್ಲಿ ಗುಣಾಧಿಕ್ಯವೇ ಮುಖ್ಯ ಮಾನದಂಡ. ಉಪಕ್ರಮಾದಿಗಳೇ ತಾತ್ಪರ್ಯಾರ್ಥವನ್ನು ಗ್ರಹಿಸಲು ಮುಖ್ಯಸಾಧನ ಎಂಬುದಾಗಿಯೂ ತಿಳಿಸಿರುವರು.

ಗುಣಾಧಿಕ್ಯಂ ಯೇನ ಭವೇದ್ವೇದಸ್ಯಾರ್ಥಃ ಸ ಏವ ಹಿ ।
ಉಪಕ್ರಮಾದಯೋ ಯತ್ರ ತಾತ್ಪರ್ಯಾರ್ಥಃ ಸ ಏವ ಹಿ ॥

ಋಗ್ಭಾಷ್ಯವು ಮೊದಲ ಮೂರು ಅಧ್ಯಾಯಗಳಿಗೆ ಮಾತ್ರ ಇರುವುದರಿಂದ ಇದೊಂದು ಅಪೂರ್ಣ ಕೃತಿಯೇ ಎಂಬ ಶಂಕೆ ಕೆಲವರದು. ಅದಕ್ಕೆ ಅವರ ಟೀಕೆಯಲ್ಲಿ ಶ್ರೀಜಯತೀರ್ಥರು ಇಷ್ಟು ಭಾಷ್ಯದಿಂದ ಮುಂದಿನ ವೇದಭಾಗಕ್ಕೆ ಅರ್ಥಮಾಡಿಕೊಳ್ಳಲು ಮಾರ್ಗದರ್ಶನ ದೊರೆಯುವುದರಿಂದ ಮುಂದಕ್ಕೆ ಭಾಷ್ಯ ರಚಿಸಿಲ್ಲ ಎಂಬುದಾಗಿ 'ಹಿ'ಶಬ್ದದಿಂದ ಆಚಾರ್ಯರೇ ಸೂಚಿಸಿರುವರು ಎಂಬುದಾಗಿ ಪರಿಹಾರವಿತ್ತಿರುವರು :

ಅನೇನ ಮಾರ್ಗೇಣೋತ್ತರಸ್ಯಾಪಿ ಮಂತ್ರಜಾತಸ್ಯ ವ್ಯಾಖ್ಯಾನಂ ಸಿದ್ಧಮೇವಾತ
ಉಪರಮ್ಯತ ಇತಿ ಹಿಶಬ್ದೇನಾಚಷ್ಟೇ ಭಗವಾನ್ ಮುನಿಃ ॥

ಶ್ರೀಮದಾಚಾರ್ಯರ ಸಾಕ್ಷಾತ್ ಶಿಷ್ಯರೊಬ್ಬರಲ್ಲಾದ ಶ್ರೀಮಾಧವತೀರ್ಥರು ಈ ಋಗ್ಭಾಷ್ಯವನ್ನು ಅನುಸರಿಸಿ ಮುಂದಿನ ಸಕಲವೇದಭಾಗಕ್ಕೂ ವಿವೃತಿಯನ್ನು ರಚಿಸಿದ್ದರು ಎಂದು ಪ್ರಬಲ ಪ್ರತೀತಿಯುಂಟು. ಶ್ರೀರಾಘವೇಂದ್ರತೀರ್ಥರು ಋಗ್ಭಾಷ್ಯ ಮತ್ತು ಅದರ ಟೀಕೆಗಳನ್ನು ಆಧರಿಸಿ ಒದಗಿಸಿರುವ ಋಗರ್ಥಮಂಜರಿಯ ಮಾದರಿಯಲ್ಲಿ ವೇದತ್ರಯಗಳಿಗೂ ವಿವೃತಿ ರಚಿಸಿದ್ದ ಉಲ್ಲೇಖ ಗುರುಗುಣಸ್ತವನದಲ್ಲಿದೆ.

ಶ್ರೀಮದಾಚಾರ್ಯರ ಋಗ್ಭಾಷ್ಯಕ್ಕೆ ಸಂಬಂಧದೀಪಿಕಾ ಎಂಬ ಶ್ರೀಜಯತೀರ್ಥರ ಅಪೂರ್ವ ಟೀಕೆಯುಂಟು. ಅದಕ್ಕೆ ಶ್ರೀಬಿದರಹಳ್ಳಿ ಶ್ರೀನಿವಾಸತೀರ್ಥರು, ಶ್ರೀ ವಿದ್ಯಾಧೀಶತೀರ್ಥರು ಹಾಗೂ ಅವರ ತಮ್ಮ ಶ್ರೀಕೇಶವಾಚಾರ್ಯ ಪಾಂಡುರಂಗಿಯವರು, ಶ್ರೀಕಂಬಾಲೂರು ರಾಮಚಂದ್ರತೀರ್ಥರು, ಶ್ರೀಸತ್ಯನಾಥತೀರ್ಥರು, ಶ್ರೀಛಲಾರಿ ನರಸಿಂಹಾಚಾರ್ಯರು ಮತ್ತು ಶ್ರೀಸುಮತೀಂದ್ರತೀರ್ಥರು ರಚಿಸಿರುವ ಟಿಪ್ಪಣಿಗಳು ಉಪಲಬ್ಧವಿದೆ. ಶ್ರೀಸತ್ಯನಾಥತೀರ್ಥರು, ಕೇಶವಾಚಾರ್ಯ ಪಾಂಡುರಂಗಿಯವರು, ಛಲಾರಿಯವರು ಮತ್ತು ಬಿದರಹಳ್ಳಿಯವರ ಟಿಪ್ಪಣಿಗಳು ಮುದ್ರಿತವಾಗಿವೆ.

ಪ್ರತಿಪಾದ್ಯ ದೇವತೆಗಳು

ಸಕಲವಿದ್ಯೆಗಳಿಗೂ ಹಾಗೆಯೇ ವೇದಗಳಿಗೂ [೧]ನಾರಾಯಣನೇ ಪ್ರಧಾನ ಪ್ರತಿಪಾದ್ಯದೇವತೆ. ಅನಂತರದ ದೇವತೆ ಮಹಾಲಕ್ಷ್ಮೀ. ಬ್ರಹ್ಮವಾಯುಗಳು ಅನಂತರದ ದೇವತೆಗಳು. ಇವರೆಲ್ಲರೂ ಸಕಲ ವೇದಗಳಿಗೂ ಪ್ರತಿಪಾದ್ಯರು. ಆದರೆ ಪರಮಮುಖ್ಯವೃತ್ತಿಯಿಂದ ಶ್ರೀಹರಿಮಾತ್ರವೇ ಪ್ರತಿಪಾದ್ಯ. ಮಹಾಲಕ್ಷ್ಮಿ ಹಾಗೂ ಬ್ರಹ್ಮವಾಯುಗಳು ಅನಂತರದಲ್ಲಿ ಪ್ರತಿಪಾದ್ಯರೆಂದು ತಿಳಿಯಬೇಕು. ತಮ್ಮ ಮೇಲಿನವರಿಗೆ ಮೀಸಲಾದ ಸೂಕ್ತಗಳನ್ನು ಹೊರತು ಪಡಿಸಿ ಇಂದ್ರಾದಿ ಇತರ ದೇವತೆಗಳೂ ಯಥೋಚಿತವಾಗಿ ವೇದಪ್ರತಿಪಾದ್ಯರಾಗಿರುವರು.

ವೇದಗಳು ಅನಾದಿ ಮತ್ತು ನಿತ್ಯ; ಆದ್ದರಿಂದ ಅನಾದಿನಿತ್ಯನಾದ ನಾರಾಯಣನೇ ಅವುಗಳ ಪರಮಮುಖ್ಯಪ್ರತಿಪಾದ್ಯ ದೇವತೆ. ವೇದಗಳು ನಿರ್ದೋಷವಾದ್ದರಿಂದ ಸದಾ ಸಕಲದೋಷದೂರನಾದ ಶ್ರೀಹರಿಯೇ ಅವುಗಳ ಪ್ರಧಾನ ದೇವತೆ. ಅನ್ಯ ದೇವತಾಪರವೆಂದು ತೋರುವ ಇಂದ್ರ, ಅಗ್ನಿ ಮೊದಲಾದ ಸೂಕ್ತಗಳಿಂದಲೂ ಆಯಾ ಶಬ್ದವಾಚ್ಯನೂ ಮತ್ತು ಆಯಾ ದೇವತೆಗಳ ಅಂತರ್ಯಾಮಿಯೂ ಆದ ಶ್ರೀಹರಿಯೇ ಮುಖ್ಯ ಪ್ರತಿಪಾದ್ಯನಾಗಿರುವನು.

ಛಂದೋಭಿಮಾನಿದೇವತಾ ವಿವರ

ವೇದದ ಛಂದಸ್ಸನ್ನು ತಿಳಿಯುವುದೆಂದರೆ ಅಕ್ಷರಗಣನೆಯ ಮೂಲಕ ಗಾಯತ್ರಿ ಮೊದಲಾಗಿ ಛಂದಸ್ಸುಗಳನ್ನಷ್ಟೇ ಗುರುತಿಸಿಕೊಳ್ಳುವುದಲ್ಲ ಅದರೊಂದಿಗೆ ಆಯಾ

---

೧. ದೇವತಾ ಸರ್ವವಿದ್ಯಾನಾಂ ಸ್ವಯಂ ನಾರಾಯಣಃ ಪ್ರಭುಃ ।
ಋತೇ ತತ್ರ ಪ್ರಸಿದ್ಧಾಶ್ಚ ದೇವತಾ ಶ್ರೀಸ್ತಥಾಽತ್ರ ಚ ॥
ಋತೇ ಪ್ರಸಿದ್ಧಾ ಬ್ರಹ್ಮೈವ ತತಸ್ತೇನ ಕ್ರಮೇಣ ಚ ।
ಪೂರ್ವಪ್ರಸಿದ್ಧವರ್ಜಂ ತು ಶಕ್ರಾಂತಾ ದೇವತಾ ಮತಾಃ ॥ - ಋಗ್ಭಾಷ್ಯೇ (೧/೪೬,೪೭)

ಛಂದಸ್ಸುಗಳಿಗಿರುವ ಅಭಿಮಾನಿ ದೇವತೆಗಳನ್ನೂ ತಿಳಿಯಬೇಕು ಎನ್ನುವ ಮೂಲಕ ¹ಛಂದಃಪರಿಜ್ಞಾನದ ಬಗ್ಗೆ ಹೊಸಬೆಳಕನ್ನು ನೀಡಿರುವದು ಋಗ್ಭಾಷ್ಯದ ಮತ್ತೊಂದು ವಿಶೇಷ:

ಛಂದಸ್ಸು ಸಂಸ್ಥಿತೋ ವಿಷ್ಣೋರ್ಗೋಽಪಾಯತ್ಯೇವ ತದ್ವಿದಃ।

- ಐತರೇಯಭಾಷ್ಯೇ - ೨/೧/೬

ಅವರು ನೀಡಿರುವ ವೈದಿಕ ಛಂದಸ್ಸುಗಳ ಅಭಿಮಾನಿದೇವತೆಗಳ ವಿವರ ಹೀಗಿದೆ:

ಛಂದಸ್ಸು	ಅಭಿಮಾನಿ ದೇವತೆಗಳು
ಗಾಯತ್ರೀ	ಮಹಾಲಕ್ಷ್ಮಿ, ಸರಸ್ವತಿ -ಭಾರತಿಯರು, ಗರುಡ ಮತ್ತು ಸ್ವಾಹಾ
ಉಷ್ಣಿಕ್	ಸಂಜ್ಞಾ (ಸೂರ್ಯಪತ್ನೀ)
ಅನುಷ್ಟುಪ್	ಸರಸ್ವತಿ, ರೋಹಿಣೀ
ಬೃಹತೀ	ಮಹಾಲಕ್ಷ್ಮೀ, ಸರಸ್ವತಿ -ಭಾರತಿಯರು, ಗರುಡ, ತಾರಾ
ಪಂಕ್ತಿ	ಶಚೀ, ಮಿತ್ರಾವರುಣರ ಪತ್ನಿಯರು
ತ್ರಿಷ್ಟುಪ್	ಶಚೀ
ಜಗತೀ	ವಾರುಣೀ, ಸಕಲದೇವತಾಸ್ತ್ರೀಯರು
ಅತಿಛಂದಸ್	ಸರ್ವದೇವತಾಸ್ತ್ರೀಯರು
ವಿರಾಟ್	ಮಿತ್ರಾವರುಣರ ಪತ್ನಿಯರು

ಹೀಗೆ ಮಧ್ವಾಚಾರ್ಯರ ಋಗ್ಭಾಷ್ಯವು ಅತ್ಯಂತ ಅಪೂರ್ವ ಮಾಹಿತಿಗಳ ವಿಶ್ವಕೋಶವಾಗಿದ್ದು ಇದರ ಸಮಗ್ರ ಅಧ್ಯಯನ ವೈದಿಕ ಪ್ರಪಂಚವನ್ನು ಸರಿಯಾದ ರೀತಿಯಲ್ಲಿ ಅರ್ಥಮಾಡಿಕೊಳ್ಳಲು ನೀಡುವ ನೆರವು ಅಪಾರವಾದುದು.

---

೧. ಛಂದಸ್ತ್ವೇನ ಮುನಿತ್ವೇನ ತಾಸಾಂ ಸ್ಮೃತಿರುದೀರಿತಾ।
ಸ್ಮರ್ತವ್ಯಾಸ್ತೇ ಚ ಸರ್ವೇಽಪಿ ಮುನಿತ್ವೇನ ಪೃಥಕ್ ಪೃಥಕ್ ॥
ಗಾಯತ್ರೀ ಬೃಹತೀ ಚೈವ ತಾಃ ಸರ್ವಾ ಗರುಡಸ್ತಥಾ।
ಬ್ರಹ್ಮಾಣ್ಯನುಷ್ಟುಬಿಂದ್ರಾಣೀ ತ್ರಿಷ್ಟುಪ್ ಸ್ವಾಹೇತಿ ಚೋಚ್ಯತೇ ॥
ಗಾಯತ್ರೀ ಜಗತೀ ಚೈವ ವಾರುಣೀ ರೋಹಿಣೀ ತಥಾ।
ಅನುಷ್ಟುಪ್ ಬೃಹತೀ ಚೈವ ತಾರಾ ಪಂಕ್ತಿಃ ಶಚೀ ತಥಾ ॥
ಉಷ್ಣಿಕ್ ಸೌರೀ ಜಗತ್ಯಶ್ಚ ಸರ್ವದೇವಸ್ತ್ರಿಯೋ ಮತಾಃ।
ವಿರಾಣ್ಮೈತ್ರಾವರುಣಯೋರ್ಭಾರ್ಯೇ ಇತಿ ಚ ಕೀರ್ತಿತೇ ॥
ಅತಿಚ್ಛಂದಾಂಸಿ ಸರ್ವಾಣಿ ಸರ್ವದೇವ್ಯಃ ಪ್ರಕೀರ್ತಿತಾಃ।
ವಿರಾಡಿತಿ ಚ ನಾಮಾಸಾಂ ತಾಸ್ತಾ ಊನಾಧಿಕೇಷ್ವಪಿ।
ನಿಚೃದ್‌ಭುರಿಗ್‌ವಿರಾಟ್‌ಸಂಜ್ಞಾಃ ಪ್ರಸ್ತಾರೇತ್ಯಾದಿ ನಾಮ ಚ ॥

ಇತಿ ಋಗ್ಭಾಷ್ಯೇ (೧/೪೦-೪೪)

ವೇದದ್ರಷ್ಟಾರ ಮುನಿಯೊಬ್ಬರ ಸಮಗ್ರ ಪರಿಚಯವನ್ನು ಅವರು ಮಾಡಿಕೊಟ್ಟಿರುವ ವೈಖರಿಗೆ ಒಂದು ನಿದರ್ಶನ:

ಅಗ್ನೀಂದ್ರಾದಿಗತಂ ಪೃಥಕ್ ಸ್ಥಿತಮಪಿ ಸ್ತೌತ್ಯಚ್ಯುತಂ ಭಕ್ತಿತಃ
ಸ್ವರ್ಣಸ್ತೂಪ ಇತಿ ಪ್ರಸಿದ್ಧಿಮಗಮದ್ ಯಃ ಸಂಸ್ತುವನ್ ಸೂರ್ಯಗಮ್ ।
ವಿಷ್ಣುಂ ಸ್ವರ್ಣಸಮಾನಚಾರುವಪುಷಂ ಸ್ವರ್ಣಾಭಿಧಂ ಶಾಶ್ವತಂ
ತಂ ದೃಷ್ಟ್ವಾ ಪರತೋಽಭವಚ್ಚ ಮಹಿತಃ ಸುಜ್ಞಾನಮಪ್ಯಾಪ್ತವಾನ್ ॥ (೨/೧೮೩)

ಶ್ರೀಮದಾಚಾರ್ಯರು ವೈದಿಕಮಂತ್ರಗಳಲ್ಲಿ ಕೆಲವೆಡೆ ಸ್ಥಾನಪಲ್ಲಟವಾಗಿದ್ದರೆ, ಮತ್ತೆ ಕೆಲವು ಲುಪ್ತವಾಗಿವೆ ಎಂಬ ಮತ್ತೊಂದು ವಿಶೇಷಾಂಶವನ್ನೂ ಸೂಚಿಸಿರುವರು :

ಮಾನಃ ಸ್ತೇನೇತಿಪೂರ್ವಾಸು ಹ್ಯೂನತಾ ದೃಶ್ಯತೇಽರ್ಥತಃ ।
ಶುನಶ್ಶೇಫೋದಿತಾಭ್ಯಶ್ಚ ಪಠ್ಯತೇಽನ್ಯತ್ರ ಕಾಶ್ಚನ ॥ (೧/೧೬೫)

ಋಗ್ಭಾಷ್ಯಕ್ಕೆ ಸಂಬಂಧಿಸಿದ ವ್ಯಾಖ್ಯಾನಗಳು

೧)	ಋಗ್ಭಾಷ್ಯಟೀಕಾ(ಸಂಬಂಧದೀಪಿಕಾ)	ಶ್ರೀಜಯತೀರ್ಥರು
೨)	ಋಗ್ಭಾಷ್ಯಟಿಪ್ಪಣೀ(ವಾಕ್ಯಾರ್ಥದೀಧಿತಿಃ)	ಶ್ರೀ ವಿದ್ಯಾಧೀಶ ತೀರ್ಥರು
೩)	ಋಗ್ಭಾಷ್ಯಟಿಪ್ಪಣೀ(ಶಿಷ್ಟವಾಕ್ಯಾರ್ಥದೀಧಿತಿಃ)	ಶ್ರೀಕೇಶವಾಚಾರ್ಯ ಪಾಂಡುರಂಗಿ
೪)	ಋಗ್ಭಾಷ್ಯಟಿಪ್ಪಣೀ	ಶ್ರೀಬಿದರಹಳ್ಳಿ ಶ್ರೀನಿವಾಸತೀರ್ಥರು
೫)	ಋಗ್ಭಾಷ್ಯಟಿಪ್ಪಣೀ	ಶ್ರೀವಿಜಯೀಂದ್ರತೀರ್ಥರು
೬)	ಋಗ್ಭಾಷ್ಯಟಿಪ್ಪಣೀ(ರೂಪಾವತಾರಃ)	ಶ್ರೀಸತ್ಯನಾಥತೀರ್ಥರು
೭)	ಋಗ್ಭಾಷ್ಯಟಿಪ್ಪಣೀ	ಕಂಬಾಲೂರು ರಾಮಚಂದ್ರತೀರ್ಥರು
೮)	ಋಗ್ಭಾಷ್ಯಟಿಪ್ಪಣೀ	ಛಲಾರಿ ನರಸಿಂಹಾಚಾರ್ಯರು
೯)	ಋಗ್ಭಾಷ್ಯಟಿಪ್ಪಣೀ	ಶ್ರೀಲಕ್ಷ್ಮೀನಾರಾಯಣಾಚಾರ್ಯರು
೧೦)	ಋಗ್ಭಾಷ್ಯಟಿಪ್ಪಣೀ(ಭಾವರತ್ನಕೋಶಃ)	ಶ್ರೀಸುಮತೀಂದ್ರತೀರ್ಥಾಃ
೧೧)	ಋಗ್ಭಾಷ್ಯಟಿಪ್ಪಣೀ	(ನೃಸಿಂಹಾಚಾರ್ಯಪುತ್ರಃ) ಆರೋಗ್ಯನಾಮಕಹರಿಃ
೧೨)	ಋಗ್ಭಾಷ್ಯಟಿಪ್ಪಣೀ(ಪ್ರಕ್ರಿಯಾಕೌಮುದೀ)	ವರಖೇಡೀ ವೇಂಕಟೇಶಾಚಾರ್ಯ - ಶಿಷ್ಯ ವರಖೇಡೀ ಕೃಷ್ಣಾಚಾರ್ಯರು
೧೩)	ಋಗ್ಭಾಷ್ಯಟಿಪ್ಪಣೀ	ಹರಿದಾಸಾಚಾರ್ಯರು
೧೪)	ಋಗ್ಭಾಷ್ಯವ್ಯಾಖ್ಯಾ	ಶ್ರೀವಿಠಲಾಚಾರ್ಯರು
೧೫)	ಋಗ್ಭಾಷ್ಯಟಿಪ್ಪಣೀ	ವರಾಹಾಚಾರ್ಯರು
೧೬)	ಋಕ್ಸಂಹಿತಾಭಾಷ್ಯಮ್	ಶ್ರೀಮುದ್ಗಲಾಚಾರ್ಯರು
೧೭)	ಋಕ್ಸಂಹಿತಾಭಾಷ್ಯಮ್	ಗೂಢಕರ್ತೃಕಮ್

೧೮) ಋಗ್ಭಾಷ್ಯಟಿಪ್ಪಣೀ ಶ್ರೀಜಗನ್ನಾಥತೀರ್ಥರು
೧೯) ಋಗರ್ಥಮಂಜರೀ(ಮಂತ್ರಾರ್ಥಮಂಜರೀ) ಶ್ರೀರಾಘವೇಂದ್ರತೀರ್ಥರು
೨೦) ಋಗರ್ಥೋದ್ಧಾರಃ ಬಿದರಹಳ್ಳಿ ಶ್ರೀನಿವಾಸತೀರ್ಥರು

ಹೀಗೆ ಅನೇಕ ಕಾರಣಗಳಿಂದ ಶ್ರೀಮದಾಚಾರ್ಯರ ಋಗ್ಭಾಷ್ಯವು ವೈದಿಕ-ವಾಙ್ಮಯಕ್ಕೆ ಸಂದಿರುವ ಅನನ್ಯ ಭಾಷ್ಯವಾಗಿದೆ.

ಋಗ್ವೇದಕ್ಕೆ ಸಂಬಂಧಿಸಿದ ಇತರ ಗ್ರಂಥಗಳು

ಹೀಗೆ ಋಗ್ಭಾಷ್ಯ ಅದರ ಟೀಕಾ ಟಿಪ್ಪಣಿಗಳಲ್ಲದೆ ಋಗ್ವೇದದ ಅಭ್ಯಾಸಿಗಳಿಗೆ ಉಪಯುಕ್ತವಾದ ಇನ್ನೂ ಕೆಲವು ಗ್ರಂಥಗಳು ರಚಿತವಾಗಿದ್ದು ಅವುಗಳಲ್ಲಿ ಶ್ರೀರಾಘವೇಂದ್ರಸ್ವಾಮಿಗಳ ಋಗರ್ಥಮಂಜರಿಗೆ ಅಗ್ರಸ್ಥಾನ. ಅವರು ಮೂಲತಃ ಸಮಗ್ರ ಋಗ್ಭಾಷ್ಯಟೀಕೆಗೆ ಟಿಪ್ಪಣಿ ರಚಿಸುವ ಉದ್ದೇಶವನ್ನು ಹೊಂದಿದ್ದುದಾಗಿಯೂ, ಅವರ ಪುತ್ರ ಲಕ್ಷ್ಮೀನಾರಾಯಣಾಚಾರ್ಯರು ಆ ಕಾರ್ಯವನ್ನು ಪೂರೈಸಿದ್ದರಿಂದ ಆ ವಿಚಾರವನ್ನು ಕೈಬಿಟ್ಟು ಋಙ್ಮಂತ್ರಗಳಿಗೆ ನೇರವಾಗಿ ಋಗ್ಭಾಷ್ಯದ ಟೀಕಾ ಟಿಪ್ಪಣಿಗಳ ಅರ್ಥ ಸಂಗ್ರಹವಾಗುವಂತೆ ಋಗರ್ಥಮಂಜರಿ ಕೃತಿಯನ್ನು ರಚಿಸಿದರು ಎಂಬ ಉಲ್ಲೇಖ ಗುರುಗುಣಸ್ತವನದಲ್ಲಿ ಬಂದಿದೆ :

> ಲಕ್ಷ್ಮೀನಾರಾಯಣಾರ್ಯಸ್ತವ ತನಯಮಣಿಃ ಸತ್ಸು ಸರ್ವೇಷು ಧನ್ಯೋ
> ಯಸ್ಮಾದೃಗ್ಭಾಷ್ಯಟೀಕಾ ತನುತರವಿವೃತೇರಂಜಸಾ ತತ್ಕೃತಾಯಾಃ ।
> ಪ್ರೇಮ್ಣಾ ವಿದ್ವತ್ಸು ಭೂಯಃ ಪ್ರಚಯಮಭಿಲಷನ್ ರಾಘವೇಂದ್ರವ್ರತೀಂದ್ರ
> ಪ್ರಾವೋಚಸ್ತ್ವಂ ಪ್ರತೀತವ್ರತ ನಿಚಯಮೃಚಾಮೇವ ಭಾಷ್ಯಾನುರೋಧಾತ್ ॥

ಇಂದು ಮಂತ್ರಾರ್ಥಮಂಜರಿಯೆಂದು ಪ್ರಸಿದ್ಧವಿರುವ ಕೃತಿ ವಾಸ್ತವವಾಗಿ ಈ ಋಗರ್ಥಮಂಜರಿಯೇ ಆಗಿದೆ.

ಬಿದರಳ್ಳಿ ಶ್ರೀನಿವಾಸತೀರ್ಥರ ಋಗರ್ಥೋದ್ಧಾರ ಶ್ರೀರಾಘವೇಂದ್ರಸ್ವಾಮಿಗಳ ಋಗರ್ಥಮಂಜರಿಯನ್ನೇ ಹೋಲುವ ಕೃತಿ. ಇದೂ ಸಹ ಮಧ್ವಭಾಷ್ಯಕ್ಕನುಗುಣವಾಗಿ ಋಗರ್ಥವನ್ನು ವಿವರಿಸುವ ಉಪಕಾರಕವಾದ ಕೃತಿ.

ಋಗ್ಭಾಷ್ಯಟೀಕೆಗೆ ರಚಿತವಾಗಿರುವ ಟಿಪ್ಪಣಿಗಳಲ್ಲಿ ಹುಗ್ಗಿ ಟಿಪ್ಪಣಿಯೂ ಒಂದು. ಹೆಸರಿನಿಂದಲೇ ತಿಳಿಯುವಂತೆ ಇದರಲ್ಲಿ ಅನೇಕ ಪ್ರಾಚೀನಟಿಪ್ಪಣಿಗಳ ಸಂಗ್ರಹವಿದೆ. ನ್ಯಾಯಸುಧೆ ಹಾಗೂ ಮಹಾಭಾರತತಾತ್ಪರ್ಯನಿರ್ಣಯ ವ್ಯಾಖ್ಯಾನಗಳಿಗೆ ಈ ಬಗೆಯ ಹುಗ್ಗಿ ಟಿಪ್ಪಣಿಗಳಿರುವುದು ಪ್ರಸಿದ್ಧವೇ ಆಗಿದೆ. ಋಗ್ಭಾಷ್ಯಟೀಕೆಯ ಹುಗ್ಗಿಟಿಪ್ಪಣಿಯು ನನ್ನ ಸಂಗ್ರಹದಲ್ಲಿ ಉಪಲಬ್ಧವಿದೆ.

ಇನ್ನು ಮಧ್ವಭಾಷ್ಯಕ್ಕನುಗುಣವಾಗಿ ಇತರ ವೇದಭಾಗಕ್ಕೆ ರಚಿತವಾಗಿರುವ ಕೃತಿಗಳನ್ನು ಗಮನಿಸಬಹುದು. ಇಂದು ಆ ಬಗೆಯ ಸಮಗ್ರಕೃತಿ ಉಪಲಬ್ಧವಿಲ್ಲವಾದರೂ ಹಿಂದಿನ ಉಲ್ಲೇಖಗಳಿಂದ ತಿಳಿದು ಬರುವಂತೆ ಶ್ರೀಮಾಧವತೀರ್ಥರು ಚತುರ್ವೇದವಿವೃತಿಯನ್ನು ರಚಿಸಿರುವವರು ಎಂದು ತಿಳಿಯಬಹುದು. ಶ್ರೀಮಾಧವತೀರ್ಥರ ಗ್ರಂಥ ರಚನೆಯ ಬಗ್ಗೆ ಕಂಡು ಬರುವ ಖಚಿತ ಉಲ್ಲೇಖ ತಂತ್ರಸಾರಕ್ಕೆ ರಚಿತವಾಗಿರುವ ಛಲಾರೀ ಆಚಾರ್ಯರ ಟೀಕೆಯಲ್ಲಿದೆ. ಅದರಿಂದ ತಿಳಿಯುವಂತೆ ಅವರು ಮಾಧವತೀರ್ಥಸ್ಮೃತಿ ಎಂಬ ಕೃತಿಯನ್ನು ರಚಿಸಿದ್ದರು. ಅದರ ಬಗ್ಗೆ ಹೆಚ್ಚು ವಿವರಗಳು ತಿಳಿಯುವಂತಿಲ್ಲವಾದರೂ ಪ್ರಧಾನವಾಗಿ ಅದು ತಂತ್ರಸಾರದ ಮಂತ್ರಗಳಿಗೆ ಸಂಬಂಧಿಸಿದ ಕೃತಿ ಎಂದು ಅಲ್ಲಿಯ ಉಲ್ಲೇಖಗಳಿಂದ ಊಹಿಸಬಹುದು.

ಮಾಧವತೀರ್ಥರು ವೇದತ್ರಯವಿವೃತಿಯನ್ನು ರಚಿಸಿರುವ ವಿವರಗಳನ್ನು ದಾಖಲಿಸುವ ಕೆಲವು ಪ್ರಾಚೀನ ಶ್ಲೋಕಗಳನ್ನು ಚಿಕ್ಕೇರೂರು ಗೋವಿಂದಾಚಾರ್ಯರು ತಮ್ಮ ''ಶ್ರೀಮದಾನಂದತೀರ್ಥರವರ ಸಾಕ್ಷಾತ್ ಶಿಷ್ಯರಲ್ಲಿ ನಾಲ್ವರು'' (ಶ್ರೀಹರಿದಾಸಭಾರತೀ ಗ್ರಂಥರತ್ನಮಾಲೆ ವಿಜಯಾಂಕರತ್ನ -೬, ೧೯೫೫) ಎಂಬ ಕೃತಿಯಲ್ಲಿ ಉಲ್ಲೇಖಿಸಿರುವರು :

''ರೇ! ರೇ! ಮಧ್ವಮುನಿಪ್ರಣೀತನಿಗಮವ್ಯಾಖ್ಯಾನಸತ್ಪದ್ಧತಿಂ
ಸಂಶ್ರಿತ್ಯೈವ ಸಮಸ್ತವೇದವಿವೃತಿಂ ಕೃತ್ವಾದ್ಯ ಸಂದರ್ಶಿತಮ್ ।
ಅಲ್ಪೇನಾಪಿ ಮಯಾ ಪರಂ ಕೃತಮಿದಂ ಮಧ್ವಾಂಘ್ರಿರೇಣ್ವಾಶ್ರಯಾತ್
ವಕ್ತವ್ಯಂ ಕಿಮಹೋ ಸಮೀರಣಮಹಾಚಾರ್ಯಾಃ ಸಮರ್ಥಾ ಇತಿ ॥''
''ವದಸಿ ವದನಸತ್ವಾದ್ದೂಷಣಂ ಮಧ್ವಭಾನೌ ।
ಜ್ವಲತಿ ನಿಜಜನಾಂಸ್ತ್ವಂ ಮೋಹಯನ್ ಘೂಕಬುದ್ಧೇ ॥
....
ಪಶ್ಯಾಸ್ಮತ್ತ್ರಿಭಾಂ ಪರಾಕ್ರಮಮಥೋ ಯದ್ಯಸ್ತಿ ಕೌತೂಹಲಮ್ ॥''

ಈ ಶ್ಲೋಕಗಳನ್ನು ಅವರು ದಾವಣಗೆರೆಯಲ್ಲಿದ್ದ ಪಂಡಿತ ಕೊರ್ಲಹಳ್ಳಿ ಕೃಷ್ಣಾಚಾರ್ಯರಿಂದ ಸಂಗ್ರಹಿಸಿದ್ದಾಗಿಯೂ ಅಲ್ಲಿ ತಿಳಿಸಿರುವರು. ಇವುಗಳಲ್ಲಿ ಮಧ್ವ-ಭಾಷ್ಯಕ್ಕನುಗುಣವಾಗಿ ಸಮಸ್ತ ವೇದಗಳಿಗೆ ವ್ಯಾಖ್ಯಾನ ರಚಿಸಿದ ಉಲ್ಲೇಖವಿದೆ. ಆ ವ್ಯಾಖ್ಯಾನವು ಶ್ರೀಮಧ್ವಾಚಾರ್ಯರು ಋಗ್ಭಾಷ್ಯವನ್ನು ಪೂರ್ಣಗೊಳಿಸದ ಆಕ್ಷೇಪದ ಬಗ್ಗೆ ಉತ್ತರರೂಪವೆಂಬಂತೆ ರಚಿತವಾದಂತೆ ಅಲ್ಲಿಯ ನಿರೂಪಣೆಯಿಂದ ತಿಳಿಯುವಂತಿದೆ. ಆದರೆ ಅದು ಯಾರ ಬಗ್ಗೆ ಹಾಗೂ ಯಾರಿಗೆ ಈ ಶ್ಲೋಕಗಳು ಉದ್ದೇಶಿಸಲ್ಪಟ್ಟಿವೆ ಎಂಬ ವಿವರಗಳು ತಿಳಿಯುವಂತಿಲ್ಲ. ಹಾಗಿದ್ದರೂ ಇದೊಂದು ಸಮಗ್ರಮಾಧ್ವವೇದವ್ಯಾಖ್ಯಾನದ ಬಗ್ಗೆ ಬೆಳಕು ಚೆಲ್ಲುವ ಅಪೂರ್ವವಿವರ ಎಂದು ಭಾವಿಸಲು ಅಡ್ಡಿಯಿಲ್ಲ.

ಇನ್ನು ಮಧ್ವಭಾಷ್ಯಕ್ಕನುಗುಣವಾಗಿ ಇತರ ವೇದಭಾಗಕ್ಕೆ ರಚಿತವಾಗಿರುವ ಕೃತಿಗಳನ್ನು ಗಮನಿಸಬಹುದು. ಇಂದು ಆ ಬಗೆಯ ಸಮಗ್ರಕೃತಿ ಉಪಲಬ್ಧವಿಲ್ಲವಾದರೂ ಹಿಂದಿನ ಉಲ್ಲೇಖಗಳಿಂದ ತಿಳಿದು ಬರುವಂತೆ ಶ್ರೀಮಾಧವತೀರ್ಥರು ಚತುರ್ವೇದವಿವೃತಿಯನ್ನು ರಚಿಸಿರುವವರು ಎಂದು ತಿಳಿಯಬಹುದು. ಶ್ರೀಮಾಧವತೀರ್ಥರ ಗ್ರಂಥ ರಚನೆಯ ಬಗ್ಗೆ ಕಂಡು ಬರುವ ಖಚಿತ ಉಲ್ಲೇಖ ತಂತ್ರಸಾರಕ್ಕೆ ರಚಿತವಾಗಿರುವ ಛಲಾರೀ ಆಚಾರ್ಯರ ಟೀಕೆಯಲ್ಲಿದೆ. ಅದರಿಂದ ತಿಳಿಯುವಂತೆ ಅವರು ಮಾಧವತೀರ್ಥಸ್ಮೃತಿ ಎಂಬ ಕೃತಿಯನ್ನು ರಚಿಸಿದ್ದರು[೧]. ಅದರ ಬಗ್ಗೆ ಹೆಚ್ಚು ವಿವರಗಳು ತಿಳಿಯುವಂತಿಲ್ಲವಾದರೂ ಪ್ರಧಾನವಾಗಿ ಅದು ತಂತ್ರಸಾರದ ಮಂತ್ರಗಳಿಗೆ ಸಂಬಂಧಿಸಿದ ಕೃತಿ ಎಂದು ಅಲ್ಲಿಯ ಉಲ್ಲೇಖಗಳಿಂದ ಊಹಿಸಬಹುದು.

ಮಾಧವತೀರ್ಥರು ವೇದತ್ರಯವಿವೃತಿಯನ್ನು ರಚಿಸಿರುವ ವಿವರಗಳನ್ನು ದಾಖಲಿಸುವ ಕೆಲವು ಪ್ರಾಚೀನ ಶ್ಲೋಕಗಳು ಹೀಗಿವೆ[೨]:

''ರೇ! ರೇ! ಮಧ್ವಮುನಿಪ್ರಣೀತನಿಗಮವ್ಯಾಖ್ಯಾನಸತ್ಪದ್ಧತಿಂ
ಸಂಶ್ರಿತ್ಯೈವ ಸಮಸ್ತವೇದವಿವೃತಿಂ ಕೃತ್ವಾಽದ್ಯ ಸಂದರ್ಶಿತಮ್ ।
ಅಲ್ಪೇನಾಪಿ ಮಯಾ ಪರಂ ಕೃತಮಿದಂ ಮಧ್ವಾಂಘ್ರಿರೇಣ್ವಾಶ್ರಯಾತ್
ವಕ್ತವ್ಯಂ ಕಿಮಹೋ ಸಮೀರಣಮಹಾಚಾರ್ಯಾಃ ಸಮರ್ಥಾ ಇತಿ ॥''

''ವದಸಿ ವದನಸತ್ತ್ವಾದ್ದೂಷಣಂ ಮಧ್ವಭಾನೌ ।
ಜ್ವಲತಿ ನಿಜಜನಾಂಸ್ತ್ವಂ ಮೋಹಯನ್ ಘೂಕಬುದ್ಧೇ ॥
....
ಪಶ್ಯಾಸ್ಮತ್ತ್ರಿಭಾಂ ಪರಾಕ್ರಮಮಥೋ ಯದ್ಯಸ್ತಿ ಕೌತೂಹಲಮ್ ॥''

ಇವುಗಳಲ್ಲಿ ಮಧ್ವಭಾಷ್ಯಕ್ಕನುಗುಣವಾಗಿ ಸಮಸ್ತ ವೇದಗಳಿಗೆ ವ್ಯಾಖ್ಯಾನ ರಚಿಸಿದ ಉಲ್ಲೇಖವಿದೆ. ಆ ವ್ಯಾಖ್ಯಾನವು ಶ್ರೀಮಧ್ವಾಚಾರ್ಯರು ಋಗ್ಭಾಷ್ಯವನ್ನು ಪೂರ್ಣಗೊಳಿಸದ ಆಕ್ಷೇಪದ ಬಗ್ಗೆ ಉತ್ತರರೂಪವೆಂಬಂತೆ ರಚಿತವಾದಂತೆ ಅಲ್ಲಿಯ ನಿರೂಪಣೆಯಿಂದ

---

೧. ತದುಕ್ತಂ ಮಾಧವತೀರ್ಥಸ್ಮೃತೌ -

ಸಂಧ್ಯಾಸು ಮಂತ್ರಾ ಇಮ ಏವ ಜಪ್ಯಾಸ್ತಾರೋ ಯತೀನಾಂ ಪ್ರಥಮೋ ಹಿ ಮಂತ್ರಃ ।
ಸಾವಿತ್ರ ಉಕ್ತಶ್ಚ ತಥಾ ಪರೇಷಾಂ ದ್ವಿಜನ್ಮನಾಂ ಶಶ್ವದನಿಂದಿತಾನಾಮ್ ॥ ಇತಿ ।

- ಶ್ರೀಛಲಾರೀಶೇಷಾಚಾರ್ಯಕೃತತಂತ್ರಸಾರಸಂಗ್ರಹಟೀಕಾ (೧/೪೬);
ಪ್ರಕಾಶಿತ: ಮಾಧ್ವರಾದ್ಧಾಂತಸಂವರ್ಧಕಸಭಾ, ೧೯೯೭,
ಸಂ: ಡಾ. ವ್ಯಾಸನಕೆರೆ ಪ್ರಭಂಜನಾಚಾರ್ಯ

೨. ಇವುಗಳನ್ನು ಚಿಕ್ಕೇರೂರು ಗೋವಿಂದಾಚಾರ್ಯರು ತಮ್ಮ ''ಶ್ರೀಮದಾನಂದತೀರ್ಥರವರ ಸಾಕ್ಷಾತ್ ಶಿಷ್ಯರಲ್ಲಿ ನಾಲ್ವರು'' (ಶ್ರೀಹರಿದಾಸಭಾರತೀ ಗ್ರಂಥರತ್ನಮಾಲೆ ವಿಜಯಾಂಕರತ್ನ -೬, ೧೯೫೫) ಎಂಬ ಕೃತಿಯಲ್ಲಿ ಉಲ್ಲೇಖಿಸಿರುವವರು. ಈ ಶ್ಲೋಕಗಳನ್ನು ಅವರು ದಾವಣಗೆರೆಯಲ್ಲಿದ್ದ ಪಂಡಿತ ಕೊರ್ಲಹಳ್ಳಿ ಕೃಷ್ಣಾಚಾರ್ಯರಿಂದ ಸಂಗ್ರಹಿಸಿದ್ದಾಗಿಯೂ ಅಲ್ಲಿ ತಿಳಿಸಿರುವವರು.

ತಿಳಿಯುವಂತಿದೆ. ಆದರೆ ಅದು ಯಾರ ಬಗ್ಗೆ ಹಾಗೂ ಯಾರಿಗೆ ಈ ಶ್ಲೋಕಗಳು ಉದ್ದೇಶಿಸಲ್ಪಟ್ಟಿವೆ ಎಂಬ ವಿವರಗಳು ತಿಳಿಯುವಂತಿಲ್ಲ. ಹಾಗಿದ್ದರೂ ಇದೊಂದು ಸಮಗ್ರಮಾಧ್ವವೇದವ್ಯಾಖ್ಯಾನದ ಬಗ್ಗೆ ಬೆಳಕು ಚೆಲ್ಲುವ ಅಪೂರ್ವವಿವರ ಎಂದು ಭಾವಿಸಲು ಅಡ್ಡಿಯಿಲ್ಲ.

ಇನ್ನು ಶ್ರೀರಾಘವೇಂದ್ರಸ್ವಾಮಿಗಳ ವೇದತ್ರಯವಿವೃತಿಯ ಬಗ್ಗೆ ನೋಡಬಹುದು. ಅವರು ಹಾಗೆ ವೇದತ್ರಯವಿವೃತಿಯನ್ನು ರಚಿಸಿರುವುದರ ಬಗ್ಗೆ ಸ್ಪಷ್ಟ ಉಲ್ಲೇಖ ಶ್ರೀವಾದೀಂದ್ರತೀರ್ಥರ ಗುರುಗುಣಸ್ತವನದಲ್ಲಿದೆ (ಶ್ಲೋ ೨೯):

ಹೃದ್ಯಾ ಟೀಕಾಽನವದ್ಯಾ ಪರವಿವೃತಯಜುಃಸಾಮಸಂಬಂಧಿನೀ ತೇ
ಮಾಲಿನ್ಯಕ್ಷಾಲನಾಂಭಃ ಸ್ವಯಮಜನಿ ಹರೇರುತ್ತರಾಂಗೇ ಚ ಮೂರ್ಧ್ನಿ ।
ಸೈವರ್ಚಾಂ ರಾಘವೇಂದ್ರವ್ರತಿಸಮಿತಿಮಣೇಽನನ್ಯಸಂಪರ್ಕಭಾಜಾ-
ಮೋಜಿಷ್ಠೇ ದಕ್ಷಿಣಾಂಗೇ ಮೃಗಮದಮಿಲಿತೋದಾರಪಾಟೀರಸಾರಃ ॥

ಇದಕ್ಕೆ ರಚಿತವಾಗಿರುವ ವ್ಯಾಖ್ಯಾನಗಳಲ್ಲೂ ಆ ಬಗ್ಗೆ ಉಲ್ಲೇಖವಿದೆ. ಈ ಉಲ್ಲೇಖದಿಂದ ತಿಳಿಯುವಂತೆ ಶ್ರೀರಾಘವೇಂದ್ರರ ಕೃತಿ ವೇದಗಳ ಬಗೆಗಿನ ಅಪವ್ಯಾಖ್ಯಾನಗಳನ್ನು ನಿರಾಕರಿಸಿ ಸರಿಯಾದ ಅರ್ಥವನ್ನು ತಿಳಿಸುವ ಅಪೂರ್ವಕೃತಿ ಎಂದಾಗುವುದು. ಆದರೆ ಇದರ ಉಪಲಬ್ಧಿಯ ಬಗ್ಗೆಯೂ ಸಹ ಖಚಿತ ಮಾಹಿತಿಯಿಲ್ಲ. ಇತ್ತೀಚೆಗೆ ಕೆಲವು ದಶಕಗಳಿಂದ ಅದು ಜರ್ಮನಿಯ ಪ್ರಾಚ್ಯಗ್ರಂಥಭಂಡಾರದಲ್ಲಿ ಇದೆ ಎಂಬ ವದಂತಿಗಳು ಕೇಳಿ ಬಂದರೂ ಅಧಿಕೃತವಾಗಿ ಯಾವ ವಿವರಗಳೂ ಹೊರಬಿದ್ದಿಲ್ಲ ಎಂಬುದು ಗಮನಾರ್ಹ. ಅದು ಸ್ಫುಟಪಟ್ಟಲ್ಲಿ ಸಮಗ್ರವೇದವಾಙ್ಮಯದ ಬಗ್ಗೆ ಮಾಧ್ವವಿಚಾರಧಾರೆಯ ಸ್ವರೂಪ ಖಚಿತಪಡುವುದು[1].

★★★★★

---

೧. ಶ್ರೀರಾಘವೇಂದ್ರಮಠದ ಶ್ರೀಭುವನೇಂದ್ರತೀರ್ಥರು (೧೭೮೫-೧೮೨೯) ಶ್ರೀಮದಾಚಾರ್ಯರ ಋಗ್ಭಾಷ್ಯವನ್ನು ಆಧರಿಸಿ ಋಗ್ವೇದಕ್ಕೆ ಸಮಗ್ರಭಾಷ್ಯವನ್ನು ರಚಿಸಿದರೆಂದು 'ಗುರುಚರಿತೆ'ಯಲ್ಲಿ ಉಲ್ಲೇಖವಿದೆ (ಪುಟ ೩೬೪, ೩೬೫):

"ಶ್ರೀಗಳವರು ಪರವಾದಿಗಳಿಗಾಗಿ ಆಚಾರ್ಯರ ಋಗ್ಭಾಷ್ಯವನ್ನು ಮುಂದುವರಿಸಿ ಸಂಪೂರ್ಣ ಮಾಡಿದರೆಂದೂ, ವಾದಿದಿಗ್ವಿಜಯವಾದ ಮೇಲೆ ಆ ಗ್ರಂಥವನ್ನು ಪ್ರಕಟಪಡಿಸಲಿಲ್ಲವೆಂದೂ ಐತಿಹ್ಯವಿದೆ".

ಇತಿಹಾಸ ಪ್ರಸ್ಥಾನ ಗ್ರಂಥಗಳು

೧. ಮಹಾಭಾರತತಾತ್ಪರ್ಯನಿರ್ಣಯಃ

ಇತಿಹಾಸಪುರಾಣಬ್ಧೇರ್ಭವಚ್ಚಿತ್ತಾದ್ರಿಲೋಡಿತಾತ್ ।
ಜಾತಾಂ ಭಾರತತಾತ್ಪರ್ಯಸುಧಾಂ ಕಃ ಸನ್ನ ಸೇವತೇ ॥

– ಸುಮಧ್ವವಿಜಯ ೧೫/೭೬

ಮಹಾಭಾರತ ಮತ್ತು ರಾಮಾಯಣಗಳು ವೈದಿಕ ಸಂಸ್ಕೃತಿಯ ವಿಶ್ವರೂಪವನ್ನು ದರ್ಶನ ಮಾಡಿಸುವ ಮಹೋನ್ನತ ಕೃತಿಗಳು. ರೋಚಕ ಕಥೆಯಿಂದಾಗಿ ಪಾಮರರಿಗೂ, ಉದ್ಬೋಧಕ ತತ್ತ್ವಗಳಿಂದಾಗಿ ಪಂಡಿತರಿಗೂ ಸಮನಾಗಿಯೇ ಮೆಚ್ಚಿಗೆಯಾಗುವ ವಿಶಿಷ್ಟ ರಚನಾಸಂವಿಧಾನವನ್ನು ಇವು ಒಳಗೊಂಡಿವೆ. ಮಹಾಭಾರತದ ವ್ಯಾಪ್ತಿಯಂತು ಅನುಪಮ. ವಿಶ್ವಸಾಹಿತ್ಯದಲ್ಲೇ ಅದ್ಭುತವೆನ್ನಿಸುವ ಗಾತ್ರ ಮತ್ತು ಆಳವಾದ ಚಿಂತನೆಗೆ ಒಳಪಡಿಸುವ ತತ್ತ್ವಗಳಿಂದಾಗಿ ಮಹಾಭಾರತ ತಾತ್ವಿಕವಿಶ್ವಕೋಶವಾಗಿ ಮಾನ್ಯವಾಗಿದೆ. ತನ್ನ ಅರ್ಥವಿಸ್ತಾರದಿಂದಾಗಿ ಎಂದಿಗೂ ಒಗಟಾಗಿಯೇ ಉಳಿಯುವ ವೈಶಿಷ್ಟ್ಯ ಮಹಾಭಾರತದ್ದು.

ರಾಮಾಯಣವು ಸಹ ಮತ್ತೊಂದು ಅದ್ಭುತಕೃತಿ. ವಾಲ್ಮೀಕಿರಾಮಾಯಣ ಮೊದಲಾಗಿ ಅನೇಕ ಕೃತಿಗಳಲ್ಲಿ ರಾಮಕಥೆಯು ಕಂಡುಬಂದರೂ, ಮೂಲತಃ ಹಯಗ್ರೀವರೂಪಿ ಪರಮಾತ್ಮನಿಂದ ಉಪದಿಷ್ಟವಾದ ಕೃತಿ ಮೂಲರಾಮಾಯಣ. ಹಯಗ್ರೀವದೇವರಿಂದ ರಚಿತ ಎಂಬ ಕಾರಣದಿಂದ ಅದು ಹಯಗ್ರೀವರಾಮಾಯಣವೂ ಹೌದು. ಮೂಲತಃ ಅದು ಶತಕೋಟಿಗ್ರಂಥಾತ್ಮಕವಾದ ವಿಶಿಷ್ಟಕೃತಿ. ವಾಲ್ಮೀಕಿ-ರಾಮಾಯಣವು ಈ ಹಯಗ್ರೀವರಾಮಾಯಣದ ಸಂಕ್ಷಿಪ್ತರೂಪ. ಹಯಗ್ರೀವದೇವರಿಂದ ಚತುರ್ಮುಖಬ್ರಹ್ಮದೇವರಿಗೆ ಉಪದಿಷ್ಟವಾಗಿ, ಅವರ ಮೂಲಕ ನಾರದರು ಉಪದೇಶ ಪಡೆದು, ಅವರು ಅದನ್ನು ವಾಲ್ಮೀಕಿ ಮುನಿಗಳಿಗೆ ಉಪದೇಶಿಸಿದ ವಿವರ ಮತ್ಸ್ಯಪುರಾಣದಲ್ಲಿ ಬಂದಿದೆ. ಅದನ್ನು ಅವರು ಇಪ್ಪತ್ತನಾಲ್ಕು ಸಾವಿರ ಶ್ಲೋಕಗಳಲ್ಲಿ ಸಂಗ್ರಹಿಸಿ, ನಿರೂಪಿಸಿದರು. ಅದೇ ಇಂದಿನ ವಾಲ್ಮೀಕಿ-ರಾಮಾಯಣ. ವಾಲ್ಮೀಕಿ-ರಾಮಾಯಣದ ಮೊದಲಶ್ಲೋಕದಲ್ಲೇ ಇದಕ್ಕೆ ಪೋಷಕವಾದ ವಿವರಗಳು ತುಂಬಿವೆ. ಆದರೂ ಇದನ್ನೆಲ್ಲ ಬೇರೆ ಯಾರೂ ಗಮನಿಸಿರಲಿಲ್ಲ.

ಇಂತಹ ಮಹಾಭಾರತ ರಾಮಾಯಣಗಳ ಬಗ್ಗೆ ಸಮಗ್ರ ಮಾಹಿತಿ ನೀಡಿದ ಏಕಮಾತ್ರ ದಾರ್ಶನಿಕರು ಎಂಬುದು ಆಚಾರ್ಯಶ್ರೀಮಧ್ವರ ವೈಶಿಷ್ಟ್ಯ. ಇತರ ಆಚಾರ್ಯರು ಇವುಗಳಿಂದ ಕೆಲವು ವಾಕ್ಯಗಳನ್ನು ಉಲ್ಲೇಖಿಸಿದ್ದರೂ, ಆ ಕೃತಿಗಳ ಸಮಗ್ರ ವಿವರಣೆಗೆ ಹೊರಟಿಲ್ಲ; ತಾತ್ತ್ವಿಕ ವಿವೇಚನೆಯಂತೂ ದೂರದ ಮಾತೇ. ಇಂತಹ ಸನ್ನಿವೇಶದಲ್ಲಿ ಶ್ರೀಮದಾಚಾರ್ಯರ ಕೃತಿ ಜಿಜ್ಞಾಸುವೃಂದಕ್ಕೆ ಮಾಡಿರುವ ಉಪಕಾರ ಅನುಪಮ. ಮಹಾಭಾರತತಾತ್ಪರ್ಯನಿರ್ಣಯವು ಶ್ರೀಮದಾಚಾರ್ಯರ ಕೃತಿಗಳಲ್ಲೆಲ್ಲಾ

ಗಾತ್ರದಲ್ಲಿ ಅತ್ಯಂತ ಹಿರಿದಾದ ಕೃತಿ. ಐದುಸಾವಿರ ಶ್ಲೋಕಗಳಿಗಿಂತಲೂ ಹೆಚ್ಚಿನ ವ್ಯಾಪ್ತಿಯ ಅಂತಹ ಶ್ಲೋಕರೂಪದ ಕೃತಿ ಸಮಗ್ರ ಸಂಸ್ಕೃತ ಸಾಹಿತ್ಯದಲ್ಲೇ ವಿರಳ. ಮಹಾಭಾರತ, ರಾಮಾಯಣಗಳ ಸಮಗ್ರ ವಿಶ್ಲೇಷಣೆಯನ್ನು ಒಟ್ಟು ಮೂವತ್ತೆರಡು ಅಧ್ಯಾಯಗಳಲ್ಲಿ ಈ ಕೃತಿ ಒದಗಿಸುತ್ತಿದೆ.

ಮೊದಲ ಅಧ್ಯಾಯ ಸಕಲಶಾಸ್ತ್ರಪ್ರಮೇಯಗಳ ಸಂಕಲನವಾದ 'ಸರ್ವಶಾಸ್ತ್ರಾರ್ಥ-ನಿರ್ಣಯ'. ಎರಡನೆಯದು ಅದಕ್ಕೆ ಸಂವಾದಿಯಾಗಿ ಮಹಾಭಾರತದ ವಾಕ್ಯಗಳನ್ನು ಉದ್ಧರಿಸಿ ಕೊಡುವ 'ಸುವಾಕ್ಯೋದ್ಧಾರ'. ಮೂರನೆಯದು ಭಗವಂತನ ವರಾಹಾದಿ ಅವತಾರಗಳ ವೈಭವವನ್ನೂ, ಶ್ರೀರಾಮಪ್ರಾದುರ್ಭಾವವನ್ನೂ ನಿರೂಪಿಸುವ 'ಸರ್ಗಾನು-ಸರ್ಗಲಯಪ್ರಾದುರ್ಭಾವನಿರ್ಣಯ'. ಮೂರನೆಯ ಅಧ್ಯಾಯದಲ್ಲಿ ಪ್ರಾರಂಭವಾಗುವ ರಾಮಕಥಾನಿರ್ಣಯ ನಾಲ್ಕನೆಯದರಿಂದ ಮುಂದುವರೆದು ಒಂಭತ್ತನೆಯ ಅಧ್ಯಾಯದಲ್ಲಿ ಮುಕ್ತಾಯವಾಗುತ್ತದೆ. ಹತ್ತನೆಯದು ಮಹಾಭಾರತದ ಕರ್ತೃವಾದ ವೇದವ್ಯಾಸರ ಅವತಾರದ ಬಗ್ಗೆ ಸಮಗ್ರ ಮಾಹಿತಿಗಳನ್ನು ಒದಗಿಸುವ ಮಹತ್ತ್ವದ ಅಧ್ಯಾಯ. ಹನ್ನೊಂದರಿಂದ ಮೂವತ್ತೆರಡರವರೆಗಿನ ಇತರ ಅಧ್ಯಾಯಗಳೆಲ್ಲ ಮಹಾಭಾರತ-ನಿರ್ಣಯಕ್ಕೆ ಮೀಸಲು. ಇದಿಷ್ಟು ಕೃತಿಯ ಸ್ಥೂಲ ಪರಿಚಯ.

ಲಕ್ಷಶ್ಲೋಕಗಳ ವ್ಯಾಪ್ತಿಯ ಮಹಾಭಾರತದ ಮೂಲಕಥೆಯನ್ನು ಚೊಕ್ಕವಾಗಿ ಸಮಗ್ರವಾಗಿ ನಿರೂಪಿಸುವುದು ಇದರ ಮೊದಲ ಸಾಧನೆ. ಈ ಒಂದನ್ನು ಸಾಧಿಸುವುದರಲ್ಲಿ ಸಹ ಜಗತ್ತಿನ ಬೇರಾವ ಗ್ರಂಥವೂ ಇದರಷ್ಟು ಯಶಸ್ವಿಯಾಗಿಲ್ಲ. ಹಾಗೆ ನೋಡಿದರೆ, ಮಹಾಭಾರತದ ಸಮಗ್ರ ಪರಿಚಯವನ್ನು ನೀಡಲು ಹೊರಟ ಕೃತಿಗಳೇ ತುಂಬಾ ವಿರಳ. ಕ್ಷೇಮೇಂದ್ರನ ಭಾರತಮಂಜರಿಯೊಂದೇ ಈ ಹಾದಿಯಲ್ಲಿ ಹೊರಟ ಗಮನಾರ್ಹ ಕೃತಿ. ತುಂಬಾ ವಿಸ್ತಾರವಾದ ಕೃತಿಯಾದರೂ ಸಹ ಮೂಲಕಥೆಯನ್ನು ಸೆರೆಹಿಡಿಯುವಲ್ಲಿ ಅದು ಅಷ್ಟಾಗಿ ಸಫಲವಾಗಿಲ್ಲ ಎಂಬುದಕ್ಕಿಂತ ವಿಫಲವಾಗಿದೆ ಎಂಬುದೇ ಸೂಕ್ತ. ಅಲ್ಲಿಯ ನಿರೂಪಣೆ ತೀರಾ ಯಾಂತ್ರಿಕ, ಅಸಮಗ್ರ ಮತ್ತು ಎಷ್ಟೋ ಕಡೆ ಅಷ್ಟೇ ಅಸಮರ್ಪಕ. ಆದರೆ ಶ್ರೀಮದಾಚಾರ್ಯರ ತಾತ್ಪರ್ಯನಿರ್ಣಯ ದಿಗ್ಭ್ರಮೆ ಹುಟ್ಟಿಸುವಷ್ಟು ಅಚ್ಚರಿಯ ಸಮಗ್ರ ಕಥಾನಕ. ಯುದ್ಧಪ್ರಸಂಗಗಳ ನಿರೂಪಣೆಯಲ್ಲಂತೂ ಮಹಾಭಾರತದ ಅನಂತ-ರದ ಆ ಬಗೆಯ ಯಶಸ್ವಿ ಕೃತಿ ಇದೊಂದೇ. ನಿರ್ಣಯದ ನಿರೂಪಣೆಯ ಅಚ್ಚುಕಟ್ಟು ಸಮಗ್ರತೆ, ಸ್ಫುಟತೆ ಯಾವುದೂ ಕ್ಷೇಮೇಂದ್ರನ ಭಾರತಮಂಜರಿಯಲ್ಲಿ ಕಾಣಸಿಕ್ಕುವುದಿಲ್ಲ.

ಇನ್ನು ರಾಮಾಯಣದ ವ್ಯಾಪ್ತಿ. ಈ ಮೊದಲೇ ತಿಳಿಸಿದಂತೆ ಮೂಲರಾಮಾಯಣವು ಶತಕೋಟಿಗ್ರಂಥಾತ್ಮಕವಾದ ಮಹೋನ್ನತಕೃತಿ. ಅದರ ಬಗ್ಗೆ ವ್ಯಾಖ್ಯಾನ, ವಿವರಣೆಗಳನ್ನು ನೀಡುವುದಿರಲಿ, ಅದರ ಅಸ್ತಿತ್ವವನ್ನೇ ಶ್ರೀಮಧ್ವರಿಗಿಂತ ಮುಂಚಿನ ಜನ ಗುರುತಿಸಿರಲಿಲ್ಲ. ವಾಲ್ಮೀಕಿರಾಮಾಯಣದ ಮಟ್ಟಿಗಿನ ವಿವರಗಳನ್ನು ಕ್ಷೇಮೇಂದ್ರನ ರಾಮಾಯಣಮಂಜರಿ ನಿರೂಪಿಸುತ್ತದೆ. ಆದರೆ ಭಾರತಮಂಜರಿಯಂತೆ ಅವನ ಈ ರಾಮಾಯಣಮಂಜರಿಯು

ಸಹ ಕೇವಲ ಕಥಾಸಂಗ್ರಹಕ್ಕೆ ಮಾತ್ರ ಸೀಮಿತವಾದ ಕೃತಿ. ವಿಮರ್ಶೆ, ನಿರ್ಣಯಗಳ ಯಾವುದೇ ಪ್ರಯತ್ನವೂ ಇದರಲ್ಲಿ ನಡೆದಿಲ್ಲ.

ಇನ್ನು ಅನಂತಭಟ್ಟನ ಚಂಪೂಭಾರತ, ವಿದರ್ಭರಾಜ ಭೋಜನ ಚಂಪೂ-ರಾಮಾಯಣ ಮೊದಲಾದ ಮಹಾಭಾರತ, ರಾಮಾಯಣ ಕಥಾಸಂಗ್ರಹರೂಪವಾದ ಇನ್ನು ಕೆಲವು ಕೃತಿಗಳು ಸಹ ಕ್ಷೇಮೇಂದ್ರನ ಕೃತಿಗಳಂತೆ ಕಥಾಸಂಗ್ರಹಕ್ಕೆ ಮಾತ್ರ ಸೀಮಿತಗೊಂಡ ಕಾವ್ಯಕೃತಿಗಳು. ಎಂದರೆ ರಾಮಾಯಣ, ಮಹಾಭಾರತಗಳ ಮೇಲೆ ವಿಮರ್ಶಾತ್ಮಕವಾದಂತಹ ಸಮಗ್ರಕೃತಿ ರಚಿತವಾಗಿರಲೇ ಇಲ್ಲ. ಆಚಾರ್ಯಶ್ರೀಮಧ್ವರ ಶ್ರೀಮಹಾಭಾರತತಾತ್ಪರ್ಯನಿರ್ಣಯ ಈ ದೃಷ್ಟಿಯಲ್ಲಿ ಅದ್ವಿತೀಯಕೃತಿ.

ಮಹಾಭಾರತತಾತ್ಪರ್ಯನಿರ್ಣಯದ ಮತ್ತೊಂದು ವಿಶೇಷತೆ ಎಂದರೆ ಮಹಾಭಾರತ ಹಾಗೂ ಕೃಷ್ಣಕಥೆಯ ಇತರ ಆಕರಗಳಾದ ಹರಿವಂಶ, ಭಾಗವತ, ವಿಷ್ಣುಪುರಾಣ ಮೊದಲಾದ ಇತರ ಸಕಲ ಗ್ರಂಥಗಳನ್ನೂ ಅಳವಡಿಸಿಕೊಂಡಿರುವ ರೀತಿ. ಈ ಬಗೆಯ ಪ್ರಯತ್ನವೂ ಆ ಮುಂಚೆ ನಡೆದಿರಲಿಲ್ಲ ಎಂಬುದು ಗಮನಾರ್ಹ. ಆ ಅರ್ಥದಲ್ಲಿ ಇದು ಭಾರತನಿರ್ಣಯವಾಗಿರುವಂತೆ ಹರಿವಂಶ ಮೊದಲಾದವುಗಳ ನಿರ್ಣಯವೂ ಆಗಿದೆ. ಹನುಮಂತ, ಭೀಮಸೇನರ ಪಾತ್ರಗಳ ಹಿರಿಮೆಯ ಮೂಲಕ ಶ್ರೀವಾಯುಜೀವೋತ್ತಮತ್ವವನ್ನು ಸಹ ವಿಶೇಷವಾಗಿ ಸಾರಿರುವರು.

ರಾಮಾಯಣ ಮಹಾಭಾರತಗಳಲ್ಲಿನ ಕೆಲವು ಗಂಭೀರಸಮಸ್ಯೆಗಳನ್ನು ಸ್ಫುಟವಾಗಿ ಪರಿಹರಿಸುವುದು ಮಹಾಭಾರತತಾತ್ಪರ್ಯನಿರ್ಣಯದ ಮತ್ತೊಂದು ಹಿರಿಮೆ. ರಾಮಾಯಣದ ವಾಲಿವಧೆ, ಸೀತಾಕೃತಿ ಅಪಹರಣ, ಸೀತಾಪರಿತ್ಯಾಗ, ಮಹಾಭಾರತದ ದ್ರೌಪದಿಯ ಪಂಚಪತ್ನೀತ್ವ ಮೊದಲಾದ ಘಟ್ಟಗಳನ್ನು ಉದಾಹರಣೆಯಾಗಿ ನೀಡಬಹುದು. ಮಹಾಭಾರತದ ಆಧ್ಯಾತ್ಮಿಕಶ್ರೀಮಂತಿಕೆಯನ್ನು ಮೊಟ್ಟಮೊದಲಬಾರಿಗೆ ಗುರುತಿಸಿ, ಅದು ಮೂಲತಃ ತಾತ್ತ್ವಿಕಕೃತಿ ಎಂಬುದಾಗಿ ನಿರೂಪಿಸಿದವರೂ ಶ್ರೀಮದಾಚಾರ್ಯರೇ. ಅವರು ಎರಡನೆಯ ಅಧ್ಯಾಯದಲ್ಲಿ ಮನ್ವಾದಿ, ಆಸ್ತೀಕಾದಿ, ಉಪಚರಾದಿ ಎಂಬ ಮೂರು ಬಗೆಯ ಅರ್ಥವಿಶೇಷಗಳನ್ನು ನಿರೂಪಿಸಿ ಕುರುಪಾಂಡವರು, ಅವರ ಅನುಯಾಯಿಗಳು ಮೊದಲಾಗಿ ಪ್ರತಿಯೊಬ್ಬರೂ ಹೇಗೆ ಆಧ್ಯಾತ್ಮಿಕ ತತ್ತ್ವಗಳ ಪ್ರತೀಕವಾಗಿರುವರು ಎಂಬುದನ್ನು ಸಾಧಾರವಾಗಿ ವಿವರಿಸಿರುವರು. ಭಾರತಾದಿಗಳಲ್ಲಿ ಸಮಾಧಿ, ದರ್ಶನ, ಗುಹ್ಯ ಎಂಬ ಭಾಷಾತ್ರೈವಿಧ್ಯ, ವ್ಯತ್ಯಾಸ, ಪ್ರಾತಿಲೋಮ್ಯ, ಗೋಮೂತ್ರೀ, ಪ್ರಘಸ, ಉಕ್ಷಣ, ಸುಧುರ ಮತ್ತು ಸಾಧು ಎಂಬ ಸಪ್ತಭೇದಗಳ ನಿರೂಪಣೆ, ವೈಧರ್ಭೀ, ಗೌಡೀ, ಪಾಂಚಾಲೀ ಮೊದಲಾದ ನೂರಾರು ಶೈಲಿಗಳ ಬಳಕೆ ಮೊದಲಾದವುಗಳ ಮೇಲೆ ಬೆಳಕು ಚೆಲ್ಲಿದ ಏಕಮಾತ್ರ ದಾರ್ಶನಿಕರೂ ಅವರೇ. ಹೀಗೆ ಮಹಾಭಾರತದ ಸಮಗ್ರದರ್ಶನ ಮಾಡಿಸುವ ವಿಶ್ವಸಾಹಿತ್ಯದ ಅಮರಕೃತಿ ಎಂಬುದು ಮಹಾಭಾರತತಾತ್ಪರ್ಯನಿರ್ಣಯದ ಹಿರಿಮೆ.

ಈ ಮಹಾಭಾರತತಾತ್ಪರ್ಯನಿರ್ಣಯವನ್ನು ಶ್ರೀಮಧ್ವರು ರಚಿಸಿದ್ದು ಸ್ವತಃ ಮೂಲಕೃತಿಕರ್ತೃಗಳಾದ ಶ್ರೀವೇದವ್ಯಾಸರ ಆದೇಶದಂತೆ. ಪ್ರಥಮ ಬಾರಿಗೆ ಉತ್ತರ-ಬದರಿಯಲ್ಲಿ ಅವರು ಶ್ರೀವೇದವ್ಯಾಸ-ನಾರಾಯಣರನ್ನು ಸಂದರ್ಶಿಸಿದಾಗ ಅವರು ಇವರಿಗೆ ಬ್ರಹ್ಮಸೂತ್ರಗಳಿಗೆ ಭಾಷ್ಯವನ್ನು ರಚಿಸಲು ಆದೇಶಿಸಿದರೆ, ದ್ವಿತೀಯಬಾರಿಯ ಬದರೀಯಾತ್ರೆಯಲ್ಲಿ ಅವರು ಬ್ರಹ್ಮಸೂತ್ರಭಾಷ್ಯವನ್ನು ಸಮರ್ಪಿಸಿದಾಗ, ಅವರು ಮಹಾಭಾರತಕ್ಕೆ ತಾತ್ಪರ್ಯನಿರ್ಣಯವೊಂದನ್ನು ರಚಿಸಲು ಆದೇಶ ನೀಡಿದರು. ಅದರ ಫಲವಾಗಿ ರಚಿತವಾದ ಕೃತಿ ಮಹಾಭಾರತತಾತ್ಪರ್ಯನಿರ್ಣಯ. ಈ ವಿವರಗಳನ್ನೆಲ್ಲ ಸುಮಧ್ವವಿಜಯ ನೀಡಿದೆ; ಸ್ವತಃ ಶ್ರೀಮದಾಚಾರ್ಯರೇ ಈ ಬಗ್ಗೆ ಸಾಕಷ್ಟು ಬೆಳಕು ಚೆಲ್ಲಿರುವರು :

ಇತ್ಯೃಗ್ಯಜುಸ್ಸಾಮಾಥರ್ವಪಂಚರಾತ್ರೇತಿಹಾಸತಃ ।
ಪುರಾಣೇಭ್ಯಸ್ತಥಾಽನ್ಯೇಭ್ಯಃ ಶಾಸ್ತ್ರೇಭ್ಯೋ ನಿರ್ಣಯಃ ಕೃತಃ ॥
ವಿಷ್ಣ್ವಾಜ್ಞಯೈವ ವಿದುಷಾ ತತ್ಪ್ರಸಾದಬಲೋನ್ನತೇಃ ।
ಆನಂದತೀರ್ಥಮುನಿನಾ ಪೂರ್ಣಪ್ರಜ್ಞಾಭಿಧಾಯುಜಾ ॥
ತಾತ್ಪರ್ಯಂ ಶಾಸ್ತ್ರಾಣಾಂ ಸರ್ವೇಷಾಮುತ್ತಮಂ ಮಯಾ ಪ್ರೋಕ್ತಮ್ ।
ಪ್ರಾಪ್ಯಾನುಜ್ಞಾಂ ವಿಷ್ಣೋರೇತಜ್ಜ್ಞಾತ್ವೈವ ವಿಷ್ಣುರಾಪ್ಯೋಽಸೌ ॥
(೧/೧೩೫-೧೩೭)

ಆನಂದತೀರ್ಥಾಖ್ಯಮುನಿಃ ಸುಪೂರ್ಣಪ್ರಜ್ಞಾಭಿಧೋ ಗ್ರಂಥಮಿಮಂ ಚಕಾರ ।
ನಾರಾಯಣೇನಾಭಿಹಿತೋ ಬದರ್ಯಾಂ ತಸ್ಯೈವ ಶಿಷ್ಯೋ ಜಗದೇಕಭರ್ತುಃ ॥
ಯಸ್ತತ್ಪ್ರಸಾದಾದಖಿಲಾಂಶ್ಚ ವೇದಾನ್ ಸಪಂಚರಾತ್ರಾನ್ ಸರಹಸ್ಯಸಂಗ್ರಹಾನ್ ।
ವೇದೇತಿಹಾಸಾಂಶ್ಚ ಪುರಾಣಯುಕ್ತಾನ್ ಯಥಾವದನ್ಯಾ ಅಪಿ ಸರ್ವವಿದ್ಯಾಃ ॥
ಸಮಸ್ತಶಾಸ್ತ್ರಾರ್ಥವಿನಿರ್ಣಯೋಽಯಂ ವಿಶೇಷತೋ ಭಾರತವರ್ತ್ಮಚಾರೀ ।
ಗ್ರಂಥಃ ಕೃತೋಽಯಂ ಜಗತಾಂ ಜನಿತ್ರಂ ಹರಿಂ ಗುರುಂ ಪ್ರೀಣಯತಾಽಮುನೈವ ॥
ವಿನಿರ್ಣಯೋ ನಾಸ್ಯ ಮುನಾ ವಿನಾ ಯದ್ವಿಪ್ರಸ್ಥಿತಾನಾಮಿಹ ಸರ್ವವಾಚಾಮ್ ।
ತದ್ಬ್ರಹ್ಮಸೂತ್ರಾಣಿ ಚಕಾರ ಕೃಷ್ಣೋ ವ್ಯಾಖ್ಯಾಽಥ ತೇಷಾಮಯಥಾ ಕೃತಾಽನ್ಯೈಃ ॥
(೩೨/೧೬೭-೧೭೦)

ಪಾರಿವ್ರಾಜ್ಯಾಧಿರಾಜಃ ಪುನರಪಿ ಬದರೀಂ ಪ್ರಾಪ್ಯ ಕೃಷ್ಣಂ ಚ ನತ್ವಾ
ಕೃತ್ವಾ ಭಾಷ್ಯಾಣಿ ಸಮ್ಯಗ್ ವ್ಯತನುತ ಚ ಭವಾನ್ ಭಾರತಾರ್ಥಪ್ರಕಾಶಮ್ ॥
– ವಾಯುಸ್ತುತಿ (ಶ್ಲೋ. ೩೯)

ಪಾರಾಶರ್ಯಃ ಪರತತ್ತ್ವಪ್ರಸಿದ್ಧ್ಯೈ ತಾತ್ಪರ್ಯಾರ್ಥಂ ಪರಮಂ ಭಾರತಸ್ಯ।
ವ್ಯಕ್ತಂ ವಕ್ತುಂ ನಿಯುನಕ್ತಿ ಸ್ಮ ಸಾಕ್ಷಾದೇನಂ ಧನ್ಯಂ ಭುವನೇ ಮನ್ಯಮಾನಃ ॥
– ಸುಮಧ್ವವಿಜಯಃ (೧೦/೨೫)

ಇದು ರಚಿತವಾದ ಸ್ಥಳ ಉಡುಪಿ ಎಂಬ ಮಾತು ಅಣುಮಧ್ವಚರಿತದಲ್ಲಿ ಬಂದಿದೆ:

ಪುನರ್ಗತ್ವಾ ಚ ಬದರೀಂ ವ್ಯಾಸಮಾನಮ್ಯ ಪೂರ್ಣಧೀಃ ।
ಭಾಷ್ಯಾದಿಸೇವಾಂ ವಿಜ್ಞಾಪ್ಯ ರೂಪ್ಯಪೀಠಮಿದಂ ಪುನಃ ॥
ಆಗತ್ಯ ಭಾರತಸ್ಯಾಥ ತಾತ್ಪರ್ಯಂ ಕರ್ಮನಿರ್ಣಯಮ್ ।
ಕೃತ್ವಾ ಚ ....॥ (ಶ್ಲೋ. ೮,೯)

ಮಹಾಭಾರತ ರಚಿಸಿದ ಶ್ರೀವೇದವ್ಯಾಸರ ಆದೇಶದಿಂದಲೇ ರಚಿತವಾದ ಅನನ್ಯಕೃತಿ ಮಹಾಭಾರತತಾತ್ಪರ್ಯನಿರ್ಣಯ. ಮೂಲಕಾರರು ವೇದವ್ಯಾಸರಾದರೆ, ತಾತ್ಪರ್ಯ-ನಿರ್ಣಯ ರಚಿಸಿದ ಶ್ರೀಮಧ್ವಾಚಾರ್ಯರು ನಿಜವಾದ ಅಭಿನವವೇದವ್ಯಾಸರು.

ಮಹಾಭಾರತತಾತ್ಪರ್ಯನಿರ್ಣಯದ ವೈಶಿಷ್ಟ್ಯ

೧. ಮಹಾಭಾರತತಾತ್ಪರ್ಯನಿರ್ಣಯ - ಶೀರ್ಷಿಕೆಯ ಔಚಿತ್ಯ

ಮಹಾಭಾರತತಾತ್ಪರ್ಯನಿರ್ಣಯ ಎಂಬ ಇದರ ಹೆಸರು ಸಹ ತುಂಬಾ ಅಪೂರ್ವವಾದುದು. ಮಹಾಭಾರತವು ಸಕಲಶಾಸ್ತ್ರಗಳ ಸಾರ, ಇದರ ನಿರ್ಣಯವೆಂದರೆ ಸಕಲಶಾಸ್ತ್ರಗಳ ನಿರ್ಣಯ ಎಂದೇ ಅರ್ಥ. ರಾಮಾಯಣದಲ್ಲಿ ಮಹಾಭಾರತದ ಕಥೆ ನಿರೂಪಿತವಾಗಿಲ್ಲ, ಆದರೆ ಮಹಾಭಾರತದ ವನಪರ್ವದಲ್ಲಿ ಮಾರ್ಕಂಡೇಯ ಸಮಾಸ್ಯಾರೂಪವಾಗಿ ರಾಮೋಪಾಖ್ಯಾನ ಎಂಬ ಉಪಪರ್ವದಲ್ಲಿ ರಾಮಾಯಣದ ಕಥೆ ನಿರೂಪಿತವಾಗಿದೆ. ರಾಮಾಯಣತಾತ್ಪರ್ಯನಿರ್ಣಯವೆಂದಾಗಿ ಈ ಕೃತಿಯನ್ನು ಹೆಸರಿ-ಸಿದ್ದರೆ ಮಹಾಭಾರತತಾತ್ಪರ್ಯನಿರ್ಣಯವು ಅಪ್ರಸಕ್ತವಾಗುತ್ತಿತ್ತು. ಆದರೆ ಮಹಾ-ಭಾರತತಾತ್ಪರ್ಯನಿರ್ಣಯ ಎಂದು ಹೆಸರಿಸಿದಾಗ ರಾಮಾಯಣತಾತ್ಪರ್ಯನಿರ್ಣಯವೂ ಅದರಲ್ಲಿ ಪ್ರಸಕ್ತವಾಗುತ್ತದೆ. ಇದನ್ನು ಗಮನಿಸದ ಕ್ಷೇಮೇಂದ್ರ ರಾಮಾಯಣಮಂಜರಿ, ಭಾರತಮಂಜರಿ ಎಂಬ ಎರಡು ಪ್ರತ್ಯೇಕಕೃತಿಗಳನ್ನು ರಚಿಸಬೇಕಾಯಿತು. ಆದರೆ ಶ್ರೀಮಧ್ವರು ಮಹಾಭಾರತತಾತ್ಪರ್ಯನಿರ್ಣಯ ಎಂಬ ಹೆಸರಿನಲ್ಲಿ ಮಹಾಭಾರತ-ದೊಂದಿಗೆ ರಾಮಾಯಣ, ಹರಿವಂಶ ಮೊದಲಾಗಿ ಸಕಲ ಆಕರಗ್ರಂಥಗಳಲ್ಲಿನ ಮುಖ್ಯವಿವರಗಳನ್ನು ಸಂಗ್ರಹಿಸಿ, ಅದನ್ನು ಸಮಸ್ತಶಾಸ್ತ್ರಾರ್ಥನಿರ್ಣಯವನ್ನಾಗಿ ಮಾಡಿರುವರು :

ಉಕ್ತಾ ರಾಮಕಥಾಽಪ್ಯಸ್ಮಿನ್ ಮಾರ್ಕಂಡೇಯಸಮಾಸ್ಯಯಾ ।
ತಸ್ಮಾದ್ಯದ್ಭಾರತೇ ನೋಕ್ತಂ ತದ್ಧಿ ನೈವಾಸ್ತಿ ಕುತ್ರಚಿತ್ ॥
ಅತ್ರೋಕ್ತಂ ಸರ್ವಶಾಸ್ತ್ರೇಷು ನಹಿ ಸಮ್ಯಗುದಾಹೃತಮ್ ।
ಇತ್ಯಾದಿ ಕಥಿತಂ ಸರ್ವಂ ಬ್ರಹ್ಮಾಂಡೇ ಹರಿಣಾ ಸ್ವಯಮ್ ॥ (೨/೫೦-೫೧)

ಸರ್ವಮೇತಚ್ಚ ಕಥಿತಂ ತತ್ರ ತತ್ರಾಮಿತಾತ್ಮನಾ ।
ವ್ಯಾಸೇನೈವ ಪುರಾಣೇಷು ಭಾರತೇ ಚ ಸ್ವಸಂವಿದಾ ॥ (೧೮/೨೯)

ಸಮಸ್ತಶಾಸ್ತ್ರಾರ್ಥವಿನಿರ್ಣಯೋಽಯಂ ವಿಶೇಷತೋ ಭಾರತವರ್ತ್ಮಚಾರೀ ।
ಗ್ರಂಥಃ ಕೃತೋಽಯಂ ಜಗತಾಂ ಜನಿತ್ರಂ ಹರಿಂ ಗುರುಂ ಪ್ರೀಣಯತಾಽಮುನೈವ ॥
(೩೨/೧೬೯)

೨. ರಾಮಾಯಣ ಮಹಾಭಾರತಗಳ ಕಥಾಸಂಗ್ರಹ

ರಾಮಾಯಣ, ಮಹಾಭಾರತಗಳ ಮುಖ್ಯಕಥೆಯನ್ನು ಗುರುತಿಸುವುದು ಸಾಮಾನ್ಯ ಕಾರ್ಯವೇನಲ್ಲ. ಅದಕ್ಕೆ ಮುಖ್ಯವಾಗಿ ಅವುಗಳ ಕೋಟಿ, ಲಕ್ಷ ಶ್ಲೋಕಗಳ ಅಪಾರವ್ಯಾಪ್ತಿ ಒಂದು ಕಾರಣವಾದರೆ, ಮುಖ್ಯಕಥೆಯ ಮಧ್ಯದಲ್ಲಿ ಅನೇಕ ಉಪಾಖ್ಯಾನಗಳ ಸರಮಾಲೆ ಮತ್ತೊಂದು ಕಾರಣವಾಗುತ್ತದೆ. ಈ ಹಿನ್ನೆಲೆಯಲ್ಲಿ ಅವುಗಳ ಮುಖ್ಯಕಥೆಯನ್ನು ಗ್ರಹಿಸುವಲ್ಲಿಯೇ ಎಂತಹ ಪರಿಣತರೂ ಗೊಂದಲಕ್ಕೊಳಗಾಗುವರು. ಹಾಗೆ ಮೂಲಕಥೆಯನ್ನು ನೇರವಾಗಿ ಒಂದೆಡೆ ಯಶಸ್ವಿಯಾಗಿ ನಿರೂಪಿಸಿದ ಏಕಮಾತ್ರಕೃತಿ ಎಂಬುದು ಮಹಾಭಾರತತಾತ್ಪರ್ಯನಿರ್ಣಯದ ಮೊದಲ ವೈಶಿಷ್ಟ್ಯ :

ಸರ್ವಸ್ಯ ನಿರ್ಣಯಸುವಾಕ್ಯಸಮುದ್ಧೃತೀ ತು ಸ್ವಾಧ್ಯಾಯಯೋರ್ಹರಿಪದಸ್ಮರಣೇನ ಕೃತ್ವಾ।
ಆನಂದತೀರ್ಥವರನಾಮವತೀ ತೃತೀಯಾ ಭೈಮೀ ತನುರ್ಮರುತ ಆಹ ಕಥಾಃ ಪರಸ್ಯ ॥
(೩/೮)

೩. ಸಮಗ್ರ ಆಕರಗಳ ಅಳವಡಿಕೆ

ರಾಮಕಥೆ, ಕೃಷ್ಣಕಥೆಗಳು ರಾಮಾಯಣ, ಮಹಾಭಾರತಗಳಲ್ಲಿ ಮಾತ್ರವಲ್ಲದೆ, ಹರಿವಂಶ, ವಿಷ್ಣುಪುರಾಣ, ಭಾಗವತ ಮೊದಲಾದ ಇತರ ಅನೇಕ ಕಡೆಗಳಲ್ಲಿಯೂ ನಿರೂಪಿತವಾಗಿವೆ. ಅವುಗಳನ್ನೆಲ್ಲ ಅಳವಡಿಸಿಕೊಂಡು ಶ್ರೀರಾಮಕಥೆ, ಕೃಷ್ಣಕಥೆಗಳನ್ನು ಸಮಗ್ರವಾಗಿ ನಿರೂಪಿಸಿರುವುದು ಈ ಕೃತಿಯ ಮತ್ತೊಂದು ವಿಶೇಷ ಹಿರಿಮೆ :

ಇತ್ಯೃಗ್ಯಜುಸ್ಸಾಮಾಥರ್ವಪಂಚರಾತ್ರೇತಿಹಾಸತಃ।
ಪುರಾಣೇಭ್ಯಸ್ತಥಾಽನ್ಯೇಭ್ಯಃ ಶಾಸ್ತ್ರೇಭ್ಯೋ ನಿರ್ಣಯಃ ಕೃತಃ ॥ (೧/೧೩೫)

ಇತ್ಯಶೇಷಪುರಾಣೇಭ್ಯಃ ಪಂಚರಾತ್ರೇಭ್ಯ ಏವ ಚ।
ಭಾರತಾಚ್ಚೈವ ವೇದೇಭ್ಯೋ ಮಹಾರಾಮಾಯಣಾದಪಿ ॥
ಪರಸ್ಪರವಿರೋಧಸ್ಯ ಹಾನಾನ್ನಿರ್ಣೀಯ ತತ್ತ್ವತಃ।
ಯುಕ್ತ್ಯಾ ಬುದ್ಧಿಬಲಾಚ್ಚೈವ ವಿಷ್ಣೋರೇವ ಪ್ರಸಾದತಃ ॥
ಬಹುಕಲ್ಪಾನುಸಾರೇಣ ಮಯೇಯಂ ಸತ್ಕಥೋದಿತಾ।
ನೈಕಗ್ರಂಥಾಶ್ರಯಾ ತಸ್ಮಾನ್ನಾಶಂಕ್ಯಾಽತ್ರ ವಿರುದ್ಧತಾ ॥ (೯/೧೨೫-೧೨೭)

ವೇದೇಷು ಸಪುರಾಣೇಷು ಭಾರತೇ ಚಾವಗಮ್ಯತೇ।
ಉಕ್ತೋಽರ್ಥಃ ಸರ್ವ ಏವಾಯಂ ತಥಾ ಪೂರ್ವೋದಿತಾಶ್ಚ ಯೇ ॥
- (೧೮/೧೫೨)

ಇತ್ಯಾದಿವಾಕ್ಯೋಕ್ತಮಿದಂ ಸಮಸ್ತಂ ತಥಾ ಪುರಾಣೇಷು ಚ ಪಂಚರಾತ್ರೇ।
ಅತ್ರೋದಿತಾ ಯಾಶ್ಚ ಕಥಾಃ ಸಮಸ್ತಾ ವೇದೇತಿಹಾಸಾದಿವಿನಿರ್ಣಯೋಕ್ತಾಃ ॥
- (೩೨/೧೭೫)

ಸಮಸ್ತಶಾಸ್ತ್ರಾರ್ಥವಿನಿರ್ಣಯೋಽಯಂ ವಿಶೇಷತೋ ಭಾರತವರ್ತ್ಮಚಾರೀ।
ಗ್ರಂಥಃ ಕೃತೋಽಯಂ ಜಗತಾಂ ಜನಿತ್ರಂ ಹರಿಂ ಗುರುಂ ಪ್ರೀಣಯತಾಽಮುನೈವ ॥

ವಿನಿರ್ಣಯೋ ನಾಸ್ಯಮುನಾ ವಿನಾ ಯದ್ವಿಪ್ರಸ್ಥಿತಾನಾಮಿಹ ಸರ್ವವಾಚಾಮ್ ।
ತದ್ಬ್ರಹ್ಮಸೂತ್ರಾಣಿ ಚಕಾರ ಕೃಷ್ಣೋ ವ್ಯಾಖ್ಯಾಽಥ ತೇಷಾಮಯಥಾ ಕೃತಾಽನ್ಯೈಃ ॥
- (೩೨/೧೬೯-೧೭೦)

೪. ಆಕರಾಂತರಗಳಲ್ಲಿನ ವಿವರಗಳ ಸಮನ್ವಯ

ಅನೇಕ ಆಕರಗಳಲ್ಲಿ ಶ್ರೀರಾಮಕಥೆ, ಶ್ರೀಕೃಷ್ಣಕಥೆಗಳು ಬಂದಿದ್ದರೂ, ಅವುಗಳಲ್ಲಿ ಮೇಲ್ನೋಟಕ್ಕೆ ಹೊಂದಾಣಿಕೆ ಇರುವಂತೆ ಕಂಡುಬರುವುದಿಲ್ಲ. ಕೆಲವೊಮ್ಮೆ ಪರಸ್ಪರ ವಿರೋಧ ಎನ್ನಿಸುವ ನಿರೂಪಣೆಯೇ ಗೋಚರಿಸುತ್ತದೆ. ಮಹಾಭಾರತತಾತ್ಪರ್ಯ-ನಿರ್ಣಯವು ಅಲ್ಲಿಯ ವಿರೋಧಗಳನ್ನೆಲ್ಲ ಪರಿಹರಿಸಿ, ಯಾವುದೇ ಗೊಂದಲವಾಗದಂತೆ ಕಥಾಸರಣಿಯನ್ನು ಪ್ರಸ್ತುತಪಡಿಸುತ್ತದೆ :

ಇತ್ಯಶೇಷಪುರಾಣೇಭ್ಯಃ ಪಂಚರಾತ್ರೇಭ್ಯ ಏವ ಚ ।
ಭಾರತಾಚ್ಚೈವ ವೇದೇಭ್ಯೋ ಮಹಾರಾಮಾಯಣಾದಪಿ ॥
ಪರಸ್ಪರವಿರೋಧಸ್ಯ ಹಾನಾನ್ನಿರ್ಣೀಯ ತತ್ತ್ವತಃ ।
ಯುಕ್ತ್ಯಾ ಬುದ್ಧಿಬಲಾಚ್ಚೈವ ವಿಷ್ಣೋರೇವ ಪ್ರಸಾದತಃ ॥
ಬಹುಕಲ್ಪಾನುಸಾರೇಣ ಮಯೇಯಂ ಸತ್ಕಥೋದಿತಾ ।
ನೈಕಗ್ರಂಥಾಶ್ರಯಾ ತಸ್ಮಾನ್ನಾಶಂಕ್ಯಾತ್ರ ವಿರುದ್ಧತಾ ॥
ಕ್ವಚಿನ್ಮೋಹಾಯಾಸುರಾಣಾಂ ವ್ಯತ್ಯಾಸಃ ಪ್ರತಿಲೋಮತಾ ।
ಉಕ್ತಾ ಗ್ರಂಥೇಷು ತಸ್ಮಾದ್ಧಿ ನಿರ್ಣಯೋಽಯಂ ಕೃತೋ ಮಯಾ ॥
ಏವಂ ಚ ವಕ್ಷ್ಯಮಾಣೇಷು ನೈವಾಶಂಕ್ಯಾ ವಿರುದ್ಧತಾ ।
ಸರ್ವಕಲ್ಪಸಮಶ್ಚಾಯಂ ಪಾರಂಪರ್ಯಕ್ರಮಃ ಸದಾ ॥
ಪುಂವ್ಯತ್ಯಾಸೇನ ಚೋಕ್ತಿಃ ಸ್ಯಾತ್ ಪುರಾಣಾದಿಷು ಕುತ್ರಚಿತ್ ।
ಕೃಷ್ಣಾಮಾಹ ಯಥಾ ಕೃಷ್ಣೋ ಧನಂಜಯಶರೈರ್ಹತಾನ್ ॥
ಶತಂ ದುರ್ಯೋಧನಾದೀಂಸ್ತೇ ದರ್ಶಯಿಷ್ಯ ಇತಿ ಪ್ರಭುಃ ।
ಭೀಮಸೇನಹತಾಸ್ತೇ ಹಿ ಜ್ಞಾಯಂತೇ ಬಹುವಾಕ್ಯತಃ ॥
ವಿಸ್ತಾರೇ ಭೀಮನಿಹತಾಃ ಸಂಕ್ಷೇಪೇಽರ್ಜುನಪಾತಿತಾಃ ।
ಉಚ್ಯಂತೇ ಬಹವಶ್ಚಾನ್ಯೇ ಪುಂವ್ಯತ್ಯಾಸಸಮಾಶ್ರಯಾತ್ ॥
ವಿಸ್ತಾರೇ ಕೃಷ್ಣನಿಹತಾಃ ಬಲಭದ್ರಹತಾ ಇತಿ ।
ಉಚ್ಯಂತೇ ಚ ಕ್ವಚಿತ್ ಕಾಲವ್ಯತ್ಯಾಸೋಽಪಿ ಕ್ವಚಿದ್ಭವೇತ್ ॥
ಯಥಾ ಸುಯೋಧನಂ ಭೀಮಃ ಪ್ರಾಹಸತ್ ಕೃಷ್ಣಸನ್ನಿಧೌ ।
ಇತಿ ವಾಕ್ಯೇಷು ಬಹುಷು ಜ್ಞಾಯಂತೇ ನಿರ್ಣಯಾದಪಿ ॥
ಅನಿರ್ಣಯೇ ತು ಕೃಷ್ಣಸ್ಯ ಪೂರ್ವಮುಕ್ತಾ ಗತಿಸ್ತತಃ ।
ವ್ಯತ್ಯಾಸಾಸ್ತ್ವೇವಮಾದ್ಯಾಶ್ಚ ಪ್ರಾತಿಲೋಮ್ಯಾದಯಸ್ತಥಾ ॥
ದೃಶ್ಯಂತೇ ಭಾರತಾದ್ಯೇಷು ಲಕ್ಷಣಗ್ರಂಥತಶ್ಚ ತೇ ।
ಜ್ಞಾಯಂತೇ ಬಹುಭಿರ್ವಾಕ್ಯೈಃ ನಿರ್ಣಯಗ್ರಂಥತಸ್ತಥಾ ॥

ತಸ್ಮಾದ್ದ್ವಿನಿರ್ಣಯಗ್ರಂಥಾನಾಶ್ರಿತ್ಯೈವ ಚ ಲಕ್ಷಣಮ್ ।
ಬಹುವಾಕ್ಯಾನುಸಾರೇಣ ನಿರ್ಣಯೋಽಯಂ ಮಯಾ ಕೃತಃ ॥
(೯/೧೨೫-೧೩೭)

ಇತೀರಿತಾ ರಾಮಕಥಾ ಪರಾ ಮಯಾ ಸಮಸ್ತಶಾಸ್ತ್ರಾನುಸೃತೇರ್ಭವಾಪಹಾ ।
ಪಠೇದಿಮಾಂ ಯಃ ಶೃಣುಯಾದಥಾಪಿ ವಾ ವಿಮುಕ್ತಬಂಧಶ್ಚರಣಂ ಹರೇರ್ವ್ರಜೇತ್ ॥
(೯/೧೪೨)

೫. ರಾಮಾಯಣ ಮಹಾಭಾರತಗಳ ಪರಸ್ಪರ ಸಂಬಂಧದ ವಿವೇಚನೆ

ರಾಮಾಯಣ ಮಹಾಭಾರತಗಳ ಪರಸ್ಪರ ಸಂಬಂಧ ತೀರ ವಿಶಿಷ್ಟವಾದುದು. ರಾಮಾಯಣದ ರಾಮನೇ ಮಹಾಭಾರತದ ಕೃಷ್ಣ ಅಲ್ಲಿಯ ಹನುಮಂತ ಇಲ್ಲಿಯ ಭೀಮ; ಲಕ್ಷ್ಮಣ, ಬಲರಾಮ; ವಾಲಿ, ಅರ್ಜುನ; ಸುಗ್ರೀವ, ಕರ್ಣ; ಇತ್ಯಾದಿ. ಅಲ್ಲಿ ನಾಯಕನಾದ ರಾಮನ ವನವಾಸ, ಇಲ್ಲಿ ನಾಯಕರಾದ ಪಾಂಡವರ ವನವಾಸ; ಅಲ್ಲಿ ಮಂಥರೆಯ ಕುತಂತ್ರ, ಇಲ್ಲಿ ಶಕುನಿಯ ಕುತಂತ್ರ; ಅಲ್ಲಿ ರಾವಣನಿಂದ ಸೀತಾಪಹರಣ-ಪ್ರಯತ್ನ, ಇಲ್ಲಿ ಜಯದ್ರಥನಿಂದ ದ್ರೌಪದ್ಯಪಹರಣಪ್ರಯತ್ನ; ಅಲ್ಲಿ ರಾಮ-ರಾವಣರ ಯುದ್ಧ, ಇಲ್ಲಿ ಕುರು-ಪಾಂಡವರ ಯುದ್ಧ; ಹೀಗೆ ಕಥಾಸರಣಿಯಲ್ಲೂ ತುಂಬಾ ಸಾಮ್ಯವಿದೆ. ಇದನ್ನು ಮೊದಲ ಬಾರಿಗೆ ಗುರುತಿಸಿ, ವಿವೇಚಿಸಿದ ಶ್ರೇಯಸ್ಸು ಸಹ ಮಹಾಭಾರತತಾತ್ಪರ್ಯನಿರ್ಣಯದ್ದೇ ಆಗಿದೆ. ಮೊದಲು ರಾಮಾವತಾರ, ಅನಂತರ ಕೃಷ್ಣಾವತಾರ; ಎರಡರಲ್ಲೂ ದೇವತೆಗಳದು ಭಗವಂತನ ಸೇವೆ. ಕೃಷ್ಣಾವತಾರ ಅನಂತರದ ಅವತಾರವಾದ್ದರಿಂದ ರಾಮಾವತಾರಕ್ಕಿಂತಲೂ ಕೃಷ್ಣಾವತಾರದಲ್ಲಿ ಅವರ ಸಾಧನೆ ಹೆಚ್ಚು ನಿರ್ಣಾಯಕ. ರಾಮಾವತಾರದಲ್ಲಿ ಅಪೂರ್ಣವಾದ ತಮ್ಮ ಸೇವೆಯನ್ನು ದೇವತೆಗಳು ಕೃಷ್ಣಾವತಾರದಲ್ಲಿ ಪೂರೈಸಿಕೊಂಡರು. ರಾಮಾವತಾರದಲ್ಲಿ ಹೆಚ್ಚಿನ ಪುಣ್ಯವನ್ನು ಗಳಿಸಿದ್ದ ಲಕ್ಷ್ಮಣ ಮೊದಲಾದವರು ಕೃಷ್ಣಾವತಾರದಲ್ಲಿ ಕಳೆದುಕೊಂಡು ತಮ್ಮ ಯೋಗ್ಯತೆಗೆ ಉಳಿಯುವಷ್ಟೇ ಪುಣ್ಯವನ್ನು ಹೊಂದಿದರು. ಆದ್ದರಿಂದಲೇ ರಾಮಾಯಣಕ್ಕಿಂತಲೂ ಮಹಾಭಾರತದ ಮಹತ್ತ್ವ ಹೆಚ್ಚಿನದು; ಮೊದಲಾದ ಅನೇಕ ವಿವರಗಳನ್ನು ನೀಡಿರುವ ಅನನ್ಯಕೃತಿ ಇದು :

ರಾಮಕಾರ್ಯಂ ತು ಯೈಃ ಸಮ್ಯಕ್ ಸ್ವಯೋಗ್ಯಂ ನ ಕೃತಂ ಪುರಾ ।
ತೈಃ ಪೂರಿತಂ ತತ್ ಕೃಷ್ಣಾಯ ಬೀಭತ್ಸ್ವಾದ್ಯೈಃ ಸಮಂತತಃ ॥
ಅಧಿಕಂ ಯೈಃ ಕೃತಂ ತತ್ರ ತೈರೂನಂ ಕೃತಮತ್ರ ತತ್ ।
ಕರ್ಣಾದ್ಯೈರಧಿಕಂ ಯೈಸ್ತು ಪ್ರಾದುರ್ಭಾವದ್ವಯೇ ಕೃತಮ್ ॥
ವಿವಿದಾದ್ಯೈರ್ಹಿ ತೈಃ ಪಶ್ಚಾದ್ವಿಪ್ರತೀಪಂ ಕೃತಂ ಹರೇಃ ।
ಪ್ರಾದುರ್ಭಾವದ್ವಯೇ ಹ್ಯಸ್ಮಿನ್ ಸರ್ವೇಷಾಂ ನಿರ್ಣಯಃ ಕೃತಃ ॥
ನೈತಯೋರಕೃತಂ ಕಿಂಚಿಚ್ಛುಭಂ ವಾ ಯದಿ ವಾಽಶುಭಮ್ ।
ಅನ್ಯತ್ರ ಪೂರ್ಯತೇ ಕ್ವಾಪಿ ತಸ್ಮಾದತ್ರೈವ ನಿರ್ಣಯಃ ॥

ಪಶ್ಚಾತ್ತನತ್ವಾತ್ ಕೃಷ್ಣಸ್ಯ ವೈಶೇಷ್ಯಾತ್ ತತ್ರ ನಿರ್ಣಯಃ ।
ಪ್ರಾದುರ್ಭಾವಮಿಮಂ ತಸ್ಮಾತ್ ಗೃಹೀತ್ವಾ ಭಾರತಂ ಕೃತಮ್ ॥ (೨/೪೫-೪೯)

ಪುರಾ ಸ ವಾಲಿಮಾರಣಪ್ರಭೂತದೋಷಕಾರಣಾತ್ ।
ಸಹಸ್ರವರ್ಮನಾಮಿನಾಽಸುರೇಣ ವೇಷ್ಟಿತೋಽಜನಿ ॥
ಯಥಾ ಗ್ರಹೈರ್ವಿದೂಷ್ಯತೇ ಮತಿರ್ನೃಣಾಂ ತಥೈವ ಹಿ ।
ಅಭೂಚ್ಚ ದೈತ್ಯದೂಷಿತಾ ಮತಿರ್ದಿವಾಕರಾತ್ಮನಃ ॥
ತಥಾಽಪಿ ರಾಮಸೇವನಾದ್ಧರೇಶ್ಚ ಸನ್ನಿಧಾನಯುಕ್ ।
ಸುದರ್ಶನೀಯಕರ್ಣತಃ ಸ ಕರ್ಣನಾಮಕೋಽಭವತ್ ॥ (೧೧/೧೫೫-೧೫೭)

ಯದಾ ಸ ಮಾಸದ್ವಿತಯೀ ಬಭೂವ ತದಾ ರೋಹಿಣ್ಯಾಂ ಬಲದೇವೋಽಭಿಜಾತಃ ।
ಬಲೀ ಗುಣಾಢ್ಯಃ ಸರ್ವವೇದೀ ಯ ಏವ ಸೇವಾಖಿನ್ನೋ ಲಕ್ಷ್ಮಣೋಽಗ್ರೇ ಹರೇರ್ಭೂತ್ ॥
(೧೨/೧೦೬)

ಜಾತಾ ದೇವಕ್ಯಾಂ ಸಾ ಸುಭದ್ರೇತಿ ನಾಮ್ನಾ ಭದ್ರಾ ರೂಪೇಣಾನಕದುಂದುಭೇಸ್ತಾಮ್ ।
ಕೃತ್ವಾ ಪುತ್ರೀಂ ರೋಹಿಣೀ ಸ್ವಾಮರಕ್ಷತ್ ಪೂರ್ವಂ ತು ಯಾಽಽಸೀತ್ ತ್ರಿಜಟೈವ ನಾಮ್ನಾ ॥

ಸೀತಾಯಾಃ ಪಾಙ್ನಿತ್ಯಶುಶ್ರೂಷಣಾತ್ ಸಾ ಬಭೂವ ವಿಷ್ಣೋರ್ಭಗಿನೀ ಪ್ರಿಯಾ ಚ ।
ಉಮಾವೇಶಾದ್ರೂಪಗುಣೋಪಪನ್ನಾ ಪದ್ಮೇಕ್ಷಣಾ ಚಂಪಕದಾಮಗೌರೀ ॥
(೨೦/೩೭,೩೮)

ಇದರಂತೆ ರಾಮಾಯಣದ ಖಳನಾಯಕನಾದ ರಾವಣನ ಅನುಯಾಯಿಗಳಾಗಿದ್ದ ಇಂದ್ರಜಿತ್, ಅಕ್ಷ ಮೊದಲಾದ ಅಸುರರು ಮಹಾಭಾರತದ ಖಳನಾಯಕನಾದ ದುರ್ಯೋಧನನ ಅನುಯಾಯಿಗಳಾಗಿ ದುಃಶಾಸನ, ಲಕ್ಷಣ ಮೊದಲಾದವರಾಗಿ ಜನಿಸಿದರು ಎಂಬ ಮಾಹಿತಿಯನ್ನೂ ನೀಡಿರುವರು :

ತದಾ ಕಲಿಶ್ಚ ರಾಕ್ಷಸಾ ಬಭೂವುರಿಂದ್ರಜಿನ್ಮುಖಾಃ ।
ವಿಚಿತ್ರವೀರ್ಯನಂದನಪ್ರಿಯೋದರೇ ಹಿ ಗರ್ಭಗಾಃ ॥ (೧೨/೧೯)

ಅವಧ್ಯ ಏವ ಸರ್ವತಃ ಸುಯೋಧನೇ ಸಮುತ್ಥಿತೇ ।
ಘೃತಾಭಿಪೂರ್ಣಕುಂಭತಃ ಸ ಇಂದ್ರಜಿತ್ ಸಮುತ್ಥಿತಃ ॥
ಸ ದುಃಖಶಾಸನೋಽಭವತ್ ತತೋಽತಿಕಾಯಸಂಭವಃ ।
ಸ ವೈ ವಿಕರ್ಣ ಉಚ್ಯತೇ ತತಃ ಖರೋಽಭವದ್ಬಲೀ ॥
ಸ ಚಿತ್ರಸೇನನಾಮಕಸ್ತಥಾಽಪರೇ ಚ ರಾಕ್ಷಸಾಃ ।
ಬಭೂವುರುಗ್ರಪೌರುಷಾ ವಿಚಿತ್ರವೀರ್ಯಜಾತ್ಮಜಾಃ ॥ (೧೨/೪೨-೪೪)

ಉದ್ವಾಹ್ಯ ಕಾಶಿತನಯಾಂ ಗಿರಿಜಾಭಿವಿಷ್ಟಾಂ
ಸಾಕ್ಷಾನ್ನರೇಷು ಜನಿತಾಂ ಪ್ರಥಮಾಮಲಕ್ಷ್ಮೀಮ್ ।
ತಸ್ಯಾಂ ಸುತಂ ತ್ವಜನಯತ್ ಪುರ ಆಸ ಯೋಽಕ್ಷಃ ...... ॥
ಪುತ್ರೋ ಬಭೂವ ಸ ತು ಲಕ್ಷಣನಾಮಧೇಯಃ ..... ॥ (೧೯/೨೦೧-೨೦೨)

೬. ವಾಯುಜೀವೋತ್ತಮತ್ವದ ಪ್ರತಿಪಾದನೆ

ರಾಮಾಯಣ, ಮಹಾಭಾರತಗಳಲ್ಲಿ ಶ್ರೀವಾಯುದೇವರ ಪಾತ್ರವನ್ನು ವಿವೇಚಿಸಿರುವ ಶ್ರೀಮದಾಚಾರ್ಯರ ರೀತಿ ಅತ್ಯಂತ ಅಪೂರ್ವ. ರಾಮಾಯಣದಲ್ಲಿ ರಾಮಭಕ್ತರಲ್ಲೆಲ್ಲ ಹನುಮಂತನಿಗೇ ಅಗ್ರಸ್ಥಾನ. ಶ್ರೀಕೃಷ್ಣಾವತಾರದಲ್ಲಿ ಶ್ರೀಕೃಷ್ಣಭಕ್ತರಲ್ಲೆಲ್ಲ ಶ್ರೀಭೀಮಸೇನನಿಗೇ ಅಗ್ರಸ್ಥಾನ. ರಾಮನಿಗೆ ಎಂದೂ ಅಪಚಾರವೆಸಗದ್ದು ಶ್ರೀಹನುಮಂತನ ಹಿರಿಮೆಯಾದರೆ, ಶ್ರೀಕೃಷ್ಣನಿಗೆ ಎಂದೂ ಅಪಚಾರವೆಸಗದ್ದು ಶ್ರೀಭೀಮಸೇನನ ಹಿರಿಮೆ. ಆದ್ದರಿಂದಲೇ ಅವರಿಬ್ಬರೂ ಶ್ರೀಹರಿಯ ಅಚ್ಛಿನ್ನಭಕ್ತರು. ಇಂದ್ರ ಮೊದಲಾದವರು ವಾಲಿ ಮೊದಲಾದ ರೂಪದಿಂದ ರಾಮನಿಗೆ ಅಪ್ರಿಯರಾಗಿ ವರ್ತಿಸಿದರೆ, ಅವರೇ ಕೃಷ್ಣಾವತಾರದಲ್ಲಿ ಅರ್ಜುನ ಮೊದಲಾದ ರೂಪದಿಂದ ಪ್ರಿಯರೆನ್ನಿಸಿ ಸೇವೆ ಸಲ್ಲಿಸಿದರು. ಸೂರ್ಯಮೊದಲಾದ ದೇವತೆಗಳು ಸುಗ್ರೀವ ಮೊದಲಾದ ರೂಪದಿಂದ ಶ್ರೀರಾಮಪ್ರಿಯರಾಗಿ ಸೇವೆ ಸಲ್ಲಿಸಿದರೆ, ಕೃಷ್ಣಾವತಾರದಲ್ಲಿ ಕರ್ಣ ಮೊದಲಾದ ರೂಪದಿಂದ ಅವತರಿಸಿ ದುರ್ಯೋಧನನ ಪಕ್ಷವಹಿಸಿ, ಶ್ರೀಕೃಷ್ಣನಿಗೆ ಅಪ್ರಿಯರೆನ್ನಿಸಿದರು. ಆದರೆ ಶ್ರೀವಾಯುದೇವರು ಮಾತ್ರ ಹನುಮಂತನಾಗಿ ಶ್ರೀರಾಮಭಕ್ತಾಗ್ರೇಸರರೆನ್ನಿಸಿದರೆ, ಭೀಮಸೇನನಾಗಿ ಶ್ರೀಕೃಷ್ಣಭಕ್ತಾ-ಗ್ರೇಸರ ಎನ್ನಿಸಿದರು. ಎಂದರೆ ಎರಡು ಅವತಾರಗಳಲ್ಲೂ ಅವರದ್ದೇ ಪ್ರಧಾನ ಭಗವ-ತ್ಕಾರ್ಯಸಾಧಕತ್ವ. ಮಹಾಭಾರತತಾತ್ಪರ್ಯನಿರ್ಣಯದ ಈ ವಿವೇಚನೆ ಎಷ್ಟು ಮಾರ್ಮಿಕ ಎಂಬುದನ್ನು ಗಮನಿಸಬೇಕು. ಒಂದರ್ಥದಲ್ಲಿ ಇದು ಉಪನಿಷತ್ತುಗಳು ಪ್ರತಿಪಾದಿಸುವ 'ಪ್ರಾಣೋ ವೈ ಜ್ಯೇಷ್ಠಶ್ಚ ಶ್ರೇಷ್ಠಶ್ಚ' ಎಂಬ ಪ್ರಾಣತತ್ತ್ವದ ಹಿರಿಮೆಯ ವಿಶ್ಲೇಷಣೆಯಂತಿದೆ :

> **ಭೂಭಾರಹಾರಿಣೋ ವಿಷ್ಣೋಃ ಪ್ರಧಾನಾಂಗಂ ಹಿ ಮಾರುತಿಃ ।**
> **ಮಾಗಧಾದಿವಧಾದೇವ ದುರ್ಯೋಧನವಧಾದಪಿ ॥ (೨/೧೬)**
>
> **ತಸ್ಮಾದ್ಬಲಪ್ರವೃತ್ತಸ್ಯ ರಾಮಕೃಷ್ಣಾತ್ಮನೋ ಹರೇಃ ।**
> **ಅಂತರಂಗಂ ಹನೂಮಾಂಶ್ಚ ಭೀಮಸ್ತತ್ಕಾರ್ಯಸಾಧಕೌ ॥ (೨/೩೪)**

೭. ವಾಯುದೇವರ ಶುದ್ಧಭಾಗವತಧರ್ಮ

ಶೇಷಾದಿದೇವತೆಗಳು ರಾಮಭಕ್ತರಾಗಿದ್ದಾಗಲೂ, ಕೃಷ್ಣಭಕ್ತರಾಗಿದ್ದಾಗಲೂ ಸಹ ಯಾವಾಗಲೂ ಒಂದೇ ರೀತಿಯಾಗಿ ವರ್ತಿಸದೆ, ಕೆಲವೊಮ್ಮೆ ಭಗವಂತನಿಗೆ ವಿರೋಧವಾಗಿಯೇ ವರ್ತಿಸಿರುವರು. ಆದ್ದರಿಂದ ಅವರು ಮೂಲರೂಪದಲ್ಲೂ, ಅವತಾರರೂಪದಲ್ಲೂ ಅಚ್ಛಿನ್ನಧರ್ಮರು ಎನ್ನಿಸದೇ ಹೋದರು. ಅವರು ಮೂಲತಃ ಭಾಗವತರೇ ಆದರೂ, ಭಗವತ್ಸೇವೆಯನ್ನು ಮಾಡುವಲ್ಲಿ ಒಮ್ಮೊಮ್ಮೆ ತಪ್ಪಿರುವುದುಂಟು. ಆದರೆ ವಾಯುದೇವರು ಮಾತ್ರ ಮೂಲರೂಪದಲ್ಲೂ, ಅವತಾರರೂಪಗಳಲ್ಲೂ ಸದಾ ಶುದ್ಧಭಾಗವತಧರ್ಮರತರಾಗಿದ್ದ 'ಪರಮಭಾಗವತಶಿರೋಮಣಿಗಳು'. ಆದ್ದರಿಂದಲೇ ಅವರು ಪರಶುಕ್ಲತ್ರಯರಲ್ಲಿ ಒಬ್ಬರು ಎಂಬ ವಿವೇಚನೆ ತೀರ ವಿನೂತನ :

ಅನ್ಯೇ ಭಾಗವತತ್ವೇಽಪಿ ಭಿನ್ನಧರ್ಮಾಃ ಕ್ವಚಿತ್ ಕ್ವಚಿತ್ ।
ಸ್ಯಮಂತಕಾರ್ಥೇ ರಾಮೋಽಪಿ ಕೃಷ್ಣಸ್ಯ ವಿಮನಾಽಭವತ್ ॥
ಅವಮೇನೇಽರ್ಜುನಃ ಕೃಷ್ಣಂ ವಿಪ್ರಸ್ಯ ಶಿಶುರಕ್ಷಣೇ ।
ಪ್ರದ್ಯುಮ್ನ ಉದ್ಧವಃ ಸಾಂಬೋಽನಿರುದ್ಧಾದ್ಯಾಶ್ಚ ಸರ್ವಶಃ ॥
ಹರೇರಿಷ್ಟಂ ಸುಭದ್ರಾಯಾಃ ಫಲ್ಗುನೇ ದಾನಮಂಜಸಾ ।
ಜ್ಞಾತ್ವಾಽಪಿ ರುರುಧುಃ ಸಮ್ಯಕ್ ಸಾತ್ಯಕಿಃ ಕೃಷ್ಣಸಂಮಿತಮ್ ॥
ಕದಾಚಿನ್ಮನ್ಯತೇ ಪಾರ್ಥಂ ಧರ್ಮಜೋಽಪಿ ನರಂ ಹರಿಮ್ ।
ಮತ್ವಾಽಬಿಭೇಜ್ಜರಾಸಂಧವಧೇ ಕೃಷ್ಣಮುದೀರಿತುಮ್ ॥
ಬಂಧನಂ ಶಂಕಮಾನೋಽಪಿ ಕೃಷ್ಣಸ್ಯ ವಿದುರೋಽಪಿ ತು ।
ಕೌರವೇಯಸಭಾಮಧ್ಯೇ ನಾವತಾರಮರೋಚಯತ್ ॥
ನಕುಲಃ ಕರದಾನಾಯ ಪ್ರೇಷಯಾಮಾಸ ಕೇಶವೇ ।
ಅವಮೇನೇ ಹರೇರ್ಬುದ್ಧಿಂ ಸಹದೇವಃ ಕುಲಕ್ಷಯಾತ್ ॥
ದೇವಕೀವಸುದೇವಾದ್ಯಾ ಮೇನಿರೇ ಮಾನುಷಂ ಹರಿಮ್ ।
ಭೀಷ್ಮಸ್ತು ಭಾರ್ಗವಂ ರಾಮಮವಮೇನೇ ಯುಯೋಧ ಚ ॥
ದ್ರೋಣಕರ್ಣದ್ರೌಣಿಕೃಪಾಃ ಕೃಷ್ಣಾಭಾವೇ ಮನೋ ದಧುಃ ।
ದೇವಾಶ್ಚೈವಾದ್ಯಾ ಅಪಿ ತು ವಿರೋಧಂ ಚಕ್ರಿರೇ ಕ್ವಚಿತ್ ॥
ಋಷಿಮಾನುಷಗಂಧರ್ವಾ ವಕ್ತವ್ಯಾಃ ಕಿಮತಃ ಪರೇ ।
ಜನ್ಮಜನ್ಮಾಂತರಾಜ್ಞಾನಾದವಜಾನಂತಿ ಯತ್ ಸದಾ ॥
ತಸ್ಮಾದೇಕೋ ವಾಯುರೇವ ಧರ್ಮೇ ಭಾಗವತೇ ಸ್ಥಿತಃ ।
ಲಕ್ಷ್ಮೀಃ ಸರಸ್ವತೀ ಚೇತಿ ಪರಶುಕ್ಲತ್ರಯಂ ಸ್ಮೃತಮ್ ॥
ಸರ್ವಮೇತಚ್ಚ ಕಥಿತಂ ತತ್ರ ತತ್ರಾಮಿತಾತ್ಮನಾ ।
ವ್ಯಾಸೇನೈವ ಪುರಾಣೇಷು ಭಾರತೇ ಚ ಸ್ವಸಂವಿದಾ ॥ (೧೮/೧೯-೨೯)

೮. ಹನುಮಂತ-ಭೀಮಸೇನರ ಪ್ರಾಧಾನ್ಯ

ಶ್ರೀರಾಮಸೇವೆ ಮಾಡಿದ ಸೂರ್ಯಾದಿದೇವತೆಗಳೆಲ್ಲ ಹನುಮಂತನ ಮೂಲಕವೇ ಶ್ರೀರಾಮನನ್ನು ಅರ್ಥಮಾಡಿಕೊಂಡು ಪೂಜಿಸಿದರು. ಅದರಂತೆ ಶ್ರೀಕೃಷ್ಣಸೇವೆ ಮಾಡಿದ ಇಂದ್ರಾದಿದೇವತೆಗಳೆಲ್ಲ ಶ್ರೀಭೀಮಸೇನನ ಮೂಲಕವೇ ಶ್ರೀಕೃಷ್ಣನನ್ನು ಅರ್ಥಮಾಡಿ-ಕೊಂಡು ಆರಾಧಿಸಿದರು. ಶ್ರೀರಾಮಭಕ್ತನಾದ ಹನುಮಂತನನ್ನೇ ಅನುಸರಿಸಿ ಸುಗ್ರೀವಾದಿ-ರೂಪದಿಂದ ಸೂರ್ಯಾದಿದೇವತೆಗಳು ಅನುಸರಿಸಿದರೆ, ಶ್ರೀಕೃಷ್ಣಭಕ್ತನಾದ ಭೀಮಸೇನ-ನನ್ನೇ ಅರ್ಜುನಾದಿರೂಪದಿಂದ ಅನುಸರಿಸಿ ಕೃತಕೃತ್ಯರಾದರು. ಎಂದರೆ ಭಗವಂತನಿಗೆ ಅತ್ಯಂತಪ್ರಿಯರಾಗಿ ವರ್ತಿಸಲು ಶ್ರೀವಾಯುದೇವರನ್ನು ಅನುಸರಿಸುವುದೇ ಖಚಿತವಾದ ಮಾರ್ಗ ಎಂದು ಅವರು ಸೂಚಿಸಿದರು. ಆದ್ದರಿಂದಲೇ ರಾಮಾವತಾರದಲ್ಲಿ ಹನುಮಂತನ ಪಕ್ಷವನ್ನು ವಹಿಸಿದ ಅವರೆಲ್ಲ ಕೃಷ್ಣಾವತಾರದಲ್ಲಿ ಭೀಮಸೇನನ ಪಕ್ಷವನ್ನು ವಹಿಸಿದರು. ಹಾಗೆ ಮಾಡದ ವಾಲಿ ರಾವಣಸಖ್ಯವನ್ನು ಹೊಂದಿ, ರಾಮಾಯಣದಲ್ಲಿ ಹತನಾದರೆ,

ಕರ್ಣ ಮಹಾಭಾರತದಲ್ಲಿ ದುರ್ಯೋಧನಸಖ್ಯವನ್ನು ಹೊಂದಿ ಹತನಾದ. ಈ ವಿವೇಚನೆಯೂ ಮಹಾಭಾರತತಾತ್ಪರ್ಯನಿರ್ಣಯದ್ದೇ ಕೊಡುಗೆ :

ಏವಂ ಸ ಕೃಷ್ಣತನುರರ್ಜುನಮಪ್ಯರಕ್ಷ-
ದ್ಭೀಮಾರ್ಥಮೇವ ತದರಿಂ ರವಿಜಂ ನಿಹತ್ಯ ।
ಪೂರ್ವಂ ಹಿ ಮಾರುತಿಮವಾಪ ರವೇಃ ಸುತೋಽಯಂ
ತೇನಾಸ್ಯ ವಾಲಿನಮಹನ್ ರಘುಪಃ ಪ್ರತೀಪಮ್ ॥
ಏವಂ ಸುರಾಶ್ಚ ಪವನಸ್ಯ ವಶೇ ಯತೋಽತಃ
ಸುಗ್ರೀವಮತ್ರ ತು ಪರತ್ರ ಚ ಶಕ್ರಸೂನುಮ್ ।
ಸರ್ವೇ ಶ್ರಿತಾ ಹನುಮತಸ್ತದನುಗ್ರಹಾಯ
ತತ್ರಾಗಮದ್ರಘುಪತಿಃ ಸಹ ಲಕ್ಷ್ಮಣೇನ ॥ (೫/೪೬-೪೮)

ಭೀಮಾರ್ಥಂ ಕೇಶವೋಽನ್ಯೇ ಚ ದೇವಾಃ ಫಲ್ಗುನಪಕ್ಷಿಣಃ ॥
ಆಸನ್ ಯಥೈವ ರಾಮಾದ್ಯಾಃ ಸಂಗ್ರಹೇಣ ಹನೂಮತಃ ।
ಸುರಾಃ ಸುಗ್ರೀವಪಕ್ಷಸ್ಥಾಃ ಪೂರ್ವಮಾಸಂಸ್ತಥೈವ ಹಿ ॥
ತದರ್ಥಮೇವ ಭೀಮಸ್ಯ ಹ್ಯನುಜತ್ವಂ ಸುರೇಶ್ವರಃ ।
ಆಪ ಪೂರ್ವಾನುತಾಪೇನ ತೇನ ಭೀಮಸ್ತಥಾಽಕರೋತ್ ॥
ದುರ್ಯೋಧನಾರ್ಥಂ ಕರ್ಣಸ್ಯ ಪಕ್ಷಿಣೋ ದೈತ್ಯದಾನವಾಃ ।
ಆಸುಃ ಸರ್ವೇ ಗ್ಲಹಾವೇತಾವಾಸತುಃ ಕರ್ಣಫಲ್ಗುನೌ ॥ (೧೮/೫೪-೫೭)

೯. ಕೃಷ್ಣಕಥೆ ಪಾಂಡವಕಥೆಗಳ ಕಾಲಾನುಕ್ರಮಸಮನ್ವಯ

ಮಹಾಭಾರತ, ಹರಿವಂಶ, ವಿಷ್ಣುಪುರಾಣ ಮತ್ತು ಭಾಗವತ ಮೊದಲಾದವುಗಳಲ್ಲಿ ಕೃಷ್ಣಕಥೆಯೊಂದಿಗೆ ಪಾಂಡವರ ಕಥೆಯೂ ಬಂದಿದೆ. ಆದರಲ್ಲೂ ಮಹಾಭಾರತ ವಿಶೇಷವಾಗಿ ಪಾಂಡವಕಥೆಯಾದರೆ, ಭಾಗವತಾದಿಗಳು ಪ್ರಧಾನವಾಗಿ ಕೃಷ್ಣಕಥೆ-ಯಾಗಿವೆ. ಆ ಎರಡು ಕಥೆಗಳಲ್ಲೂ ಸಹ ಕಾಲಕ್ರಮದ ಹೊಂದಾಣಿಕೆ ಹೇಗೆ? ಎಂದರೆ ಕೃಷ್ಣಾವತಾರವಾದಾಗ ಪಾಂಡವರು ಎಲ್ಲಿದ್ದರು? ಪಾಂಡವರ ವನವಾಸಕಾಲಕ್ಕೆ ಕೃಷ್ಣಕಥೆ ಯಾವ ಹಂತದಲ್ಲಿತ್ತು? ರುಕ್ಮಿಣೀಕಲ್ಯಾಣದ ಪ್ರಸಂಗದಲ್ಲಿ ಪಾಂಡವಕಥೆಯ ಘಟ್ಟ ಯಾವುದಾಗಿತ್ತು? ಮೊದಲಾದ ಪ್ರಶ್ನೆಗಳು ಉದ್ಭವಿಸುವುದು ಸಹಜ. ಈ ದಿಕ್ಕಿನಲ್ಲಿ ವಿಚಾರ ಮಾಡಿ, ಸಮರ್ಪಕ ಉತ್ತರ ನೀಡಿದ ಏಕಮಾತ್ರ ಕೃತಿ ಎಂಬ ಹಿರಿಮೆಯೂ ಮಹಾಭಾರತ-ತಾತ್ಪರ್ಯನಿರ್ಣಯಕ್ಕೇ ಸಲ್ಲುತ್ತದೆ. ಹನ್ನೊಂದನೆಯ ಅಧ್ಯಾಯದಿಂದ ಮುಂದಿನ ಎಲ್ಲ ಅಧ್ಯಾಯಗಳಲ್ಲೂ ಹೀಗೆ ಕೃಷ್ಣಕಥೆ, ಪಾಂಡವಕಥೆಗಳನ್ನು ಕಾಲಕ್ರಮದಲ್ಲಿ ಸ್ವಲ್ಪವೂ ಗೊಂದಲವಾಗದಂತೆ ನಿರೂಪಿಸಿರುವ ಅಪೂರ್ವ ಹಿರಿಮೆ ಇದರದು.

೧೦. ರಾಮಾಯಣ ಮಹಾಭಾರತಗಳಲ್ಲಿನ ಸಮಸ್ಯೆಗಳ ವಿಶ್ಲೇಷಣೆ

ರಾಮಾಯಣ ಮತ್ತು ಮಹಾಭಾರತಗಳಲ್ಲಿ ಅತ್ಯಂತ ಜಟಿಲವೆನ್ನಿಸುವ ಅನೇಕ-ಸಮಸ್ಯೆಗಳು ತುಂಬಿವೆ. ವಾಲಿವಧೆ, ಶಂಬೂಕವಧೆ, ಸೀತಾಪರಿತ್ಯಾಗ ಮುಂತಾದ

ರಾಮಾಯಣದ ಪ್ರಸಂಗಗಳು ಮೇಲ್ನೋಟಕ್ಕೆ ಅಪರಿಹಾರ್ಯವೆನ್ನಿಸಬಹುದಾದ ಸಂಗತಿಗಳು. ಅವಕ್ಕೆಲ್ಲ ಅತ್ಯಂತಸೂಕ್ತವೆನ್ನಿಸುವ ಪರಿಹಾರಗಳನ್ನು ಶಾಸ್ತ್ರದ ಹಿನ್ನೆಲೆಯಲ್ಲಿ ನೀಡಿರುವುದು ಮಹಾಭಾರತತಾತ್ಪರ್ಯನಿರ್ಣಯದ ಮತ್ತೊಂದು ಅಪೂರ್ವತೆ. ಉದಾಹರಣೆಗೆ ಶಂಬೂಕವಧಪ್ರಸಂಗವನ್ನು ಅವರು ವಿವೇಚಿಸಿರುವ ರೀತಿಯನ್ನು ಗಮನಿಸಬಹುದು :

ಅಥ ಶೂದ್ರತಪಶ್ಚರ್ಯಾನಿಹತಂ ವಿಪ್ರಪುತ್ರಕಮ್ ।
ಉಜ್ಜೀವಯಾಮಾಸ ವಿಭುರ್ಹತ್ವಾತಂ ಶೂದ್ರತಾಪಸಮ್ ॥
ಜಂಘನಾಮಾಽಸುರಃ ಪೂರ್ವಂ ಗಿರಿಜಾವರದಾನತಃ ।
ಬಭೂವ ಶೂದ್ರಃ ಕಲ್ಪಾಯುಃ ಸ ಲೋಕಕ್ಷಯಕಾಮ್ಯಯಾ ॥
ತಪಶ್ಚಚಾರ ದುರ್ಬುದ್ಧಿರಿಚ್ಛನ್ಮಾಹೇಶ್ವರಂ ಪದಮ್ ।
ಅನನ್ಯವಧ್ಯಂ ತಂ ತಸ್ಮಾಜ್ಜಘಾನ ಪುರುಷೋತ್ತಮಃ ॥ (೯/೧೯-೨೧)

ಎಂದರೆ ಶಂಬೂಕನನ್ನು ರಾಮ ವಧಿಸಿದ್ದು ಅವನು ಶೂದ್ರತಪಸ್ವಿ ಎಂಬ ಕಾರಣದಿಂದಲ್ಲ. ಅವನು ಮೂಲತಃ ಜಂಘ ಎಂಬ ಅಸುರ. ಪಾರ್ವತಿಯ ವರವನ್ನು ಪಡೆದು, ಶೂದ್ರನಾಗಿ ಜನಿಸಿ, ಕಲ್ಪಾಯುಷ್ಯವನ್ನೂ ಹೊಂದಿ, ಘೋರತಪಸ್ಸಿನಲ್ಲಿ ತೊಡಗಿದ್ದ. ಅವನ ತಪಸ್ಸಿನ ಉದ್ದೇಶ ತನಗೆ ವರ ನೀಡಿದ ಪಾರ್ವತಿಗೇ ಪತಿಯಾಗುವುದು. ಎಂದರೆ ಅವನು ಮೂಲತಃ ಶೂದ್ರನಲ್ಲ, ರಾಕ್ಷಸ; ಅವನ ತಪಸ್ಸಿನ ಉದ್ದೇಶ ಸಾತ್ತ್ವಿಕವಾಗಿರದೇ ಅತ್ಯಂತ ತಾಮಸವಾಗಿದ್ದಿತು. ಅದಕ್ಕೆಂದೇ ಶ್ರೀರಾಮನಿಂದ ಅವನ ಸಂಹಾರ. ವಾಲ್ಮೀಕಿರಾಮಾಯಣದಲ್ಲೂ ಈ ಅಂಶ ಸೂಚ್ಯವಾಗಿ ಬಂದಿದೆ :

ದೇವತ್ವಂ ಕಾಮಯೇ ರಾಮ ಸಶರೀರೋ ಮಹಾಯಶಃ ।
ನ ಮಿಥ್ಯಾಽಹಂ ವದೇ ರಾಮ ದೇವಲೋಕಜಿಗೀಷಯಾ ॥
– ವಾಲ್ಮೀಕಿರಾಮಾಯಣ (೭/೭೬/೨,೩)

ಮಹಾಭಾರತವಂತು ಸಮಸ್ಯೆಗಳ ಬೀಡು. ದ್ರೌಪದಿಯ ಪಂಚಪತಿತ್ವ, ಭೀಮಸೇನನ ದುಃಶಾಸನರಕ್ತಪಾನ, ದುರ್ಯೋಧನನ ಊರುಭಂಗ ಮೊದಲಾದ ಮುಖ್ಯಸಮಸ್ಯೆಗಳನ್ನು ಪರಿಹರಿಸಲು ಆ ಮುಂಚಿನ ಯಾರಿಂದಲೂ ಸಾಧ್ಯವಾಗಿರಲಿಲ್ಲ. ಬದಲಾಗಿ ಅವೆಲ್ಲ ತಪ್ಪೇ ಎಂಬ ಭಾವನೆ ಬರುವಂತೆಯೇ ನಿರೂಪಿಸಿದವರೇ ಹೆಚ್ಚು. ಆದರೆ ಮಹಾಭಾರತ-ತಾತ್ಪರ್ಯನಿರ್ಣಯ ಇವಕ್ಕೆಲ್ಲ ಮೂಲಗ್ರಂಥಗಳ ಆಧಾರದಿಂದಲೇ ನೀಡಿರುವ ಪರಿಹಾರ ತೀರ ವಿನೂತನವೂ, ಖಚಿತವೂ ಆದುದು. ಮಹಾಭಾರತತಾತ್ಪರ್ಯನಿರ್ಣಯ ಎಂಬ ಇದರ ಹೆಸರು ಅದೆಷ್ಟು ಔಚಿತ್ಯಪೂರ್ಣ ಎನ್ನುವುದನ್ನು ಇಂತಹ ವಿವೇಚನೆಗಳಿಂದ ಅರ್ಥಮಾಡಿಕೊಳ್ಳಬಹುದು.

ಕೌರವಸಭೆಯಲ್ಲಿ ದ್ರೌಪದಿಯು ಭೀಷ್ಮಾದಿಗಳನ್ನು ಪ್ರಶ್ನಿಸುವಳು: ಯುಧಿಷ್ಠಿರನು ದ್ಯೂತದಲ್ಲಿ ಸೋತಿದ್ದು ಮೊದಲು ನನ್ನನ್ನೊ? ಅಥವಾ ತನ್ನನ್ನೋ? ಈ ಪ್ರಶ್ನೆಯ ಔಚಿತ್ಯವನ್ನು ವಿಶ್ಲೇಷಿಸುವುದರಲ್ಲಿ ಎಲ್ಲ ವಿಮರ್ಶಕರೂ ಸೋತವರೇ. ಆದರೆ ಇದರ ಬಗ್ಗೆ

ತಾತ್ಪರ್ಯನಿರ್ಣಯ ನೀಡುವ ಬೆಳಕು ಎಷ್ಟು ಅಪೂರ್ವ ಎಂಬುದನ್ನು ಗಮನಿಸಬೇಕು. ಪತಿ ಎನ್ನಿಸಿದವನು ತನ್ನ ಪತ್ನಿಯನ್ನು ದ್ಯೂತದಲ್ಲಿ ಸೋಲುವ ಹಕ್ಕನ್ನು ಹೊಂದಿಯೇ ಇಲ್ಲ. ಆದ್ದರಿಂದ ಅವನು ಮೊದಲು ನನ್ನನ್ನು ಸೋಲುವುದು ಧರ್ಮವಲ್ಲ. ತನ್ನನ್ನು ಸೋತಾದ ಮೇಲೆ ಸಹ ಅವನು ತನ್ನ ಪತ್ನಿಯನ್ನು ಸೋಲುವಂತಿಲ್ಲ. ತಾನು ಸೋಲುವಾಗಲೇ ಅರ್ಧಾಂಗಿಯಾದ ತನ್ನ ಪತ್ನಿಯ ಸಮೇತನಾಗಿಯೇ ಸೋತಿರುತ್ತಾನೆ. ಪ್ರತ್ಯೇಕವಾಗಿ ಅವಳನ್ನು ಪಣವಾಗಿಟ್ಟು ಸೋಲುವ ಹಕ್ಕು ಅವನಿಗೆ ಇಲ್ಲವೇ ಇಲ್ಲ. ಪತ್ನಿ ಎಂದಿಗೂ ಸಹ ಅಧೀನಳಾಗಿರುವುದು ತನ್ನ ಪತಿಗೇ ಹೊರತು ಮತ್ತೊಬ್ಬ ಗಂಡಸಿಗಲ್ಲ:

> ಕಥಂ ದ್ಯೂತೇ ಜಿತಾ ಚಾಹಮಜಿತೇ ಸ್ವಪತೌ ಸ್ಥಿತೇ ।
> ಸಮಾನಧರ್ಮಿಣೀಮಾಹುರ್ಭಾರ್ಯಾಂ ಯಸ್ಮಾದ್ವಿಪಶ್ಚಿತಃ ॥
> ಸಹೈವ ಕರ್ಮ ಕರ್ತವ್ಯಂ ಪತೌ ದಾಸೇ ಹಿ ಭಾರ್ಯಯಾ ।
> ದಾಸೀತ್ವಂ ನ ಪೃಥಙ್ ಮೇ ಸ್ಯಾತ್ ಜಿತೇಽಪಿ ಹಿ ಪತೌ ತತಃ ॥ (೨೧/೩೩೦, ೩೩೧)

ಭೀಮಸೇನನು ರಕ್ತಪಾನ ಮಾಡಲೇ ಇಲ್ಲ. ತನ್ನ ಪ್ರತಿಜ್ಞೆಯನ್ನು ಪೂರೈಸಲೆಂದು ಪರಸ್ತ್ರೀಯರನ್ನು ಕೆಣಕುವ ದುಷ್ಟಜನರ ಮನಸ್ಸಿನಲ್ಲಿ ಭೀತಿ ಹುಟ್ಟಿಸಲೆಂದು ಕುಡಿದಂತೆ ನಟಿಸಿದನು ಮಾತ್ರ. ಇದನ್ನು ಮೂಲಭಾರತದ ಹಿನ್ನೆಲೆಯಲ್ಲಿ ಅವರು ಸಮರ್ಥಿಸಿರುವುದಂತೂ ತೀರ ವಿಶಿಷ್ಟವಾದುದು :

> ಇತ್ಯುಕ್ತ್ವಾ ತಂ ಪುನಃ ಪ್ರಾಹ ಕಥಂ ತೇ ನರಶೋಣಿತಮ್ ।
> ಪೀತಂ ನರೇಣೈವ ಸತಾ ನ ಪೀತಮಿತಿ ಸೋಽಬ್ರವೀತ್ ॥
> ದಂತಾಂತರಂ ನ ಮೇ ಪ್ರಾಪ ಶೋಣಿತಂ ತತ್ ಸುತಸ್ಯ ತೇ ।
> ಪ್ರತಿಜ್ಞಾಪಾಲನಾಯಾಪಿ ಪ್ರತಿಕರ್ತುಂ ಚ ತತ್ಕೃತಮ್ ॥
> ಭೀಷಣಾಯ ಚ ಶತ್ರೂಣಾಂ ಪೀತವಚ್ಚ ಪ್ರದರ್ಶಿತಮ್ ।
> ವೇದದೃಷ್ಟಶ್ಚ ಧರ್ಮೋಽಯಮಿತಿ ಪಾಪಜನಂ ಪ್ರತಿ ॥ (೨೮/೨೧೬-೨೧೮)

ಹೀಗೆ ದುಃಶಾಸನವಧೆಯ ಕಾರ್ಯವು ನಿಂದ್ಯವಾಗದೆ, ರಣಯಜ್ಞರೂಪವಾಗಿ ವಂದ್ಯವೇ ಆಯಿತು ಎಂದೂ ಸಹ ನಿರೂಪಿಸಿರುವರು(೨೭/೧೪೭-೧೪೯) :

> ದಂತಾಂತರಂ ನ ಪ್ರವಿವೇಶ ತಸ್ಯ ರಕ್ತಂ ಹ್ಯಪೇಯಂ ಪುರುಷಸ್ಯ ಜಾನತಃ ॥
> ತಥಾಽಪಿ ಶತ್ರುಪ್ರತಿಭೀಷಣಾಯ ಪಪಾವಿವಾಸ್ವಾದ್ಯ ಪುನಃ ಪುನರ್ಭೃಶಮ್ ।
> ಸ್ಮರನ್ ನೃಸಿಂಹಂ ಭಗವಂತಮೀಶ್ವರಂ ಸ ಮನ್ಯುಸೂಕ್ತಂ ಚ ದದರ್ಶ ಭಕ್ತ್ಯಾ ॥
> 'ಯಸ್ತೇ ಮನ್ಯೋ' ಇತ್ಯತೋ ನಾರಸಿಂಹಂ ಸೋಮಂ ತಸ್ಮೈ ಚಾರ್ಪಯಚ್ಛೋಣಿತಾಖ್ಯಮ್ ।
> ಯುದ್ಧಾಖ್ಯಯಜ್ಞೇ ಸೋಮಬುದ್ಧ್ಯಾಽರಿವಕ್ಷ ಇಹೇತಿ ಸಾಮ್ನಾ ಗದಯಾ ವಿಭಿಂದನ್ ॥

೧೧. ಅಪೂರ್ವ ಸಂಶೋಧನದೃಷ್ಟಿ

ರಾಮಾಯಣ, ಮಹಾಭಾರತಗಳ ಅರ್ಥನಿರ್ಣಯದಂತೆ ಅವುಗಳ ಪಾಠನಿರ್ಣಯವೂ ಅತ್ಯಂತ ಜಟಿಲ. ಆ ಜಟಿಲತೆಯನ್ನು ಸಕಾರಣವಾಗಿ ವಿಶ್ಲೇಷಿಸುವ ಅವರ ವಾಕ್ಯಗಳು ಗ್ರಂಥಸಂಪಾದನಾಶಾಸ್ತ್ರಕ್ಕೆ ಸಂದಿರುವ ಅತ್ಯಂತ ಅಪೂರ್ವವಾದ ಕೊಡುಗೆ :

ಕ್ವಚಿದ್ಗ್ರಂಥಾನ್ ಪ್ರಕ್ಷಿಪಂತಿ ಕ್ವಚಿದಂತರಿತಾನಪಿ ।
ಕುರ್ಯುಃ ಕ್ವಚಿಚ್ಚ ವ್ಯತ್ಯಾಸಂ ಪ್ರಮಾದಾತ್ ಕ್ವಚಿದನ್ಯಥಾ ॥
ಅನುತ್ಸನ್ನಾ ಅಪಿ ಗ್ರಂಥಾ ವ್ಯಾಕುಲಾ ಇತಿ ಸರ್ವಶಃ ।
ಉತ್ಸನ್ನಾಃ ಪ್ರಾಯಶಃ ಸರ್ವೇ ಕೋಟ್ಯಂಶೋಽಪಿ ನ ವರ್ತತೇ ॥
ಗ್ರಂಥೋಽಪ್ಯೇವಂ ವಿಲುಲಿತಃ ಕಿಮ್ವರ್ಥೋ ದೇವದುರ್ಗಮಃ ।
ಕಲಾವೇವಂ ವ್ಯಾಕುಲಿತೇ ನಿರ್ಣಯಾಯ ಪ್ರಚೋದಿತಃ ॥
ಹರಿಣಾ ನಿರ್ಣಯಾನ್ ವಚ್ಮಿ ವಿಜಾನಂಸ್ತತ್ಪ್ರಸಾದತಃ ।
ಶಾಸ್ತ್ರಾಂತರಾಣಿ ಸಂಜಾನನ್ ವೇದಾಂಶ್ಚಾಸ್ಯ ಪ್ರಸಾದತಃ ॥
ದೇಶೇ ದೇಶೇ ತಥಾ ಗ್ರಂಥಾನ್ ದೃಷ್ಟ್ವಾ ಚೈವ ಪೃಥಗ್ವಿಧಾನ್ ।
ಯಥಾ ಸ ಭಗವಾನ್ ವ್ಯಾಸಃ ಸಾಕ್ಷಾನ್ನಾರಾಯಣಃ ಪ್ರಭುಃ ॥
ಜಗಾದ ಭಾರತಾದ್ಯೇಷು ತಥಾ ವಕ್ಷ್ಯೇ ತದೀಕ್ಷಯಾ ।
ಸಂಕ್ಷೇಪಾತ್ ಸರ್ವಶಾಸ್ತ್ರಾರ್ಥಂ ಭಾರತಾರ್ಥಾನುಸಾರತಃ ॥ (೨/೩-೮)

ಯಾವುದೇ ಗ್ರಂಥ ಜನಪ್ರಿಯವಾಗಿ ಕಾಲ ಕಳೆಯುತ್ತಾ ಹೋದಂತೆ ಮೇಲೆ ಸೂಚಿಸಿದ ಕಾರಣಗಳಿಂದ ಅವುಗಳ ಪಾಠಶುದ್ಧಿ ಮಲಿನವಾಗುತ್ತಾ ಹೋಗುತ್ತದೆ. ಇಂತಹ ಪ್ರಸಂಗ ಸಂಸ್ಕೃತಗ್ರಂಥಗಳಲ್ಲಂತೂ ತುಂಬಾ ಹೆಚ್ಚು. ಪುರಾಣಪ್ರಪಂಚವಂತೂ ಅಪಪಾಠದ ಹಾವಳಿಗೆ ವಿಶೇಷವಾಗಿ ಗುರಿಯಾಗಿದೆ. ವಾಲ್ಮೀಕಿರಾಮಾಯಣವೂ ಇದಕ್ಕೆ ಹೊರತಲ್ಲ. ಮೂಲರಾಮಾಯಣವಂತೂ ಇಂದು ಸಂಪೂರ್ಣ ಲುಪ್ತವಾಗಿದೆ. ಮಹಾಭಾರತದ ಪಾಠಾಂತರಗಳಂತೂ ಊಹೆಗೆ ನಿಲುಕದಷ್ಟು ಅಸಂಖ್ಯ. ದಾಕ್ಷಿಣಾತ್ಯ ಹಾಗೂ ಔತ್ತರೇಯ ಎಂಬ ಎರಡು ಸ್ಪಷ್ಟ ಪಾಠಾಂತರಗಳನ್ನು ಸಂಶೋಧಕರು ಗಮನಿಸಿದ್ದಾರೆ. ಅವುಗಳಲ್ಲಿ ಕಂಡುಬರುವ ವ್ಯತ್ಯಾಸವೂ ಸಾಮಾನ್ಯವಾದುದೇನಲ್ಲ. ಈ ಎಲ್ಲ ಹಿನ್ನೆಲೆಯಲ್ಲಿ ಪಾಠಶುದ್ಧಿಯ ಬಗ್ಗೆ ಶ್ರೀಮಧ್ವಾಚಾರ್ಯರು ನುಡಿದಿರುವ ಮೇಲಿನ ಮಾತುಗಳು ಹೆಚ್ಚಿನ ಮಹತ್ತ್ವವನ್ನು ಪಡೆದುಕೊಳ್ಳುತ್ತವೆ.

ಇಂತಹ ಪ್ರಸಂಗದಲ್ಲಿ ಪಾಠನಿರ್ಣಯಕ್ಕೆ ಅನುಸರಿಸಬೇಕಾದ ಮಾರ್ಗವನ್ನು ಅವರು ಸೂಚಿಸಿ, ಆ ರೀತಿಯಲ್ಲೇ ತಾವು ಶುದ್ಧಪಾಠವನ್ನು ನಿರ್ಣಯಿಸಿ, ಅರ್ಥವನ್ನು ವಿಶ್ಲೇಷಿಸಿರು-ವುದಾಗಿ ಅವರು ನೀಡಿರುವ ವಿವರಣೆ ತುಂಬಾ ಗಮನಾರ್ಹವಾದುದು :

ಶಾಸ್ತ್ರಾಂತರಾಣಿ ಸಂಜಾನನ್ ವೇದಾಂಶ್ಚಾಸ್ಯ ಪ್ರಸಾದತಃ ॥
ದೇಶೇ ದೇಶೇ ತಥಾ ಗ್ರಂಥಾನ್ ದೃಷ್ಟ್ವಾ ಚೈವ ಪೃಥಗ್ವಿಧಾನ್ ।
ಯಥಾ ಸ ಭಗವಾನ್ ವ್ಯಾಸಃ ಸಾಕ್ಷಾನ್ನಾರಾಯಣಃ ಪ್ರಭುಃ ॥
ಜಗಾದ ಭಾರತಾದ್ಯೇಷು ತಥಾ ವಕ್ಷ್ಯೇ ತದೀಕ್ಷಯಾ ।
ಸಂಕ್ಷೇಪಾತ್ ಸರ್ವಶಾಸ್ತ್ರಾರ್ಥಂ ಭಾರತಾರ್ಥಾನುಸಾರತಃ ॥ (೨/೬-೮)

ಶ್ರೀಮದಾಚಾರ್ಯರ ಈ ನಿರ್ಣಯಕ್ರಮ ಅದೆಷ್ಟು ಪರಿಣಾಮಕಾರಿ ಎಂಬುದನ್ನು ಪೂನಾ ಭಂಡಾರ್‌ಕರ್ ಸಂಸ್ಥೆಯ ಮಹಾಭಾರತದ ಪರಿಷ್ಕೃತಪಾಠದ ಪ್ರಕಾಶನವನ್ನು

ಗಮನಿಸಿದವರಿಗೆ ಮನವರಿಕೆಯಾಗುತ್ತದೆ. ಈ ತಾತ್ಪರ್ಯನಿರ್ಣಯದ ಬೆಳಕಿನಲ್ಲಿ ಮಹಾಭಾರತದ ಪಾಠನಿರ್ಣಯಕ್ಕೆ ಕೈಹಾಕಿದಾಗ ಇದರ ಉಪಕಾರ ಅದೆಷ್ಟು ಮಹತ್ತರ ಎಂಬುದು ತಿಳಿಯುತ್ತದೆ.

೧೨. ಅಂಶಾವತಾರಗಳ ನಿರೂಪಣೆ

ರಾಮಾಯಣ, ಮಹಾಭಾರತ ಹಾಗೂ ಪುರಾಣಗಳ ಮತ್ತೊಂದು ವೈಶಿಷ್ಟ್ಯ ಅಲ್ಲಿ ಕಂಡುಬರುವ ದೇವದೈತ್ಯರ ಅಂಶಾವತಾರಗಳ ವಿವರಣೆ. ಮಹಾಭಾರತದ ಆದಿಪರ್ವದ-ಲ್ಲಂತೂ ಅಂಶಾವತರಣಪರ್ವ ಎಂಬ ಉಪಪರ್ವವೇ ಉಂಟು. ಅದರ ಇತರ ಸ್ಥಳಗ-ಳಲ್ಲೂ, ಪುರಾಣಾಂತರಗಳಲ್ಲೂ ಅವುಗಳ ಉಲ್ಲೇಖ ವಿಶೇಷವಾಗಿ ಕಂಡುಬರುತ್ತವೆ. ರಾಮಾಯಣ, ಮಹಾಭಾರತಗಳ ಪ್ರಮುಖ ದೇವದೈತ್ಯರ ಅಂಶಾವತಾರ ವಿಶೇಷವಾಗಿ ಪ್ರಚಾರದಲ್ಲಿದೆ. ಆದರೆ ಅವನ್ನೆಲ್ಲ ವ್ಯವಸ್ಥಿತವಾಗಿ ನಿರೂಪಿಸಿರುವ ಅಸಾಧಾರಣ ಹಿರಿಮೆ ಮಹಾಭಾರತತಾತ್ಪರ್ಯನಿರ್ಣಯದ್ದು. ಮಹಾಭಾರತವನ್ನು ಕುರಿತು ಗ್ರಂಥ ರಚಿಸಿರುವ ಬೇರಾರೂ ತೀರ ಸಾಮಾನ್ಯರೀತಿಯಲ್ಲೂ ಇವುಗಳ ವಿವರಣೆಯ ಬಗ್ಗೆ ಯತ್ನಿಸಿಲ್ಲ. ಆದರೆ ಶ್ರೀಮಧ್ವರು ನೀಡಿದ ವಿವರಗಳು ತುಂಬಾ ಸಮಗ್ರವಾಗಿದ್ದು, ಅವುಗಳನ್ನೆಲ್ಲ ಶ್ರೀನಾರಾಯಣ ಪಂಡಿತರು ತಮ್ಮ 'ಅಂಶಾವತಾರ' ಎಂಬ ಕೃತಿಯಲ್ಲಿ ಅಕಾರಾದಿಕ್ರಮದಲ್ಲಿ ಪಟ್ಟಿಮಾಡಿ ಕೊಟ್ಟಿರುವರು.

೧೩. ವರ-ಶಾಪಗಳ ವಿವೇಚನೆ

ಇತಿಹಾಸ, ಪುರಾಣಪ್ರಪಂಚದ ಮತ್ತೊಂದು ವೈಶಿಷ್ಟ್ಯ ಅವುಗಳಲ್ಲಿ ಉದ್ದಕ್ಕೂ ಕಂಡುಬರುವ ವರ-ಶಾಪಗಳ ವಿವರಗಳು. ಸಾಮಾನ್ಯವಾಗಿ ದೈತ್ಯರ ಉನ್ನತಿಗೆ ವರಗಳು ಕಾರಣವಾಗಿದ್ದರೆ, ದೇವತೆಗಳ ಕ್ಲೇಶಗಳಿಗೆ ಅವರಿಗೆ ಒದಗಿದ್ದ ಶಾಪಗಳು ಕಾರಣವಾಗಿರು-ತ್ತವೆ. ಕೆಲವು ಪ್ರಸಂಗಗಳಲ್ಲಿ ದೈತ್ಯರಿಗೆ ಶಾಪಗಳೂ, ದೇವತೆಗಳಿಗೆ ವಿಶೇಷವರಗಳೂ ಸಹ ಇರುವುದುಂಟು. ಇವೆಲ್ಲವುಗಳ ವಿವೇಚನೆಯನ್ನು ವಿಶೇಷರೀತಿಯಲ್ಲಿ ಮಾಡುವ ಪ್ರಯತ್ನ ಮುಂಚಿನ ಯಾವ ವ್ಯಾಖ್ಯಾನಕಾರರಿಂದಲೂ ನಡೆದಿರಲಿಲ್ಲ. ಶ್ರೀಮಧ್ವರ ಮಹಾಭಾರತ-ತಾತ್ಪರ್ಯನಿರ್ಣಯ ಇಂತಹ ವರ-ಶಾಪಗಳ ಬಗ್ಗೆಯೂ ಸಹ ಖಚಿತವೂ, ಸಮಗ್ರವೂ ಆದ ವಿವರಗಳನ್ನು ನೀಡಿದೆ. ಉದಾಹರಣೆಗೆ ಕರ್ಣನ ಪ್ರಸಂಗವನ್ನು ಗಮನಿಸಬಹುದು. ಕರ್ಣನಿಗೆ ಪರಶುರಾಮರ ಶಾಪವಿದ್ದ ವಿವರವನ್ನು ಜನ ತಿಳಿದಿರುವರು. ಆದರೆ ಆತನಿಗೆ ಪರಶುರಾಮರಿಂದ ಲಭಿಸಿದ್ದ ಅಪೂರ್ವ ವರ, ಅನುಗ್ರಹಗಳನ್ನು ಯಾರೂ ಗಮನಿಸಿಲ್ಲ. ಅದರ ವಿವರಗಳನ್ನು ಸಮಗ್ರ ನೀಡಿರುವ ಶ್ರೇಯಸ್ಸು ಈ ಕೃತಿಯದು (೧೫/೫೭-೫೯):

ಅಥಾಹ ರಾಮಸ್ತಮಸತ್ಯವಾಚೋ ನ ತೇ ಸಕಾಶೇ ಮಮ ವಾಸಯೋಗ್ಯತಾ ।
ತಥಾಽಪಿ ತೇ ನೈವ ವೃಥಾ ಮದೀಯಾ ಭಕ್ತಿರ್ಭವೇಜ್ಜೇಷ್ಯಸಿ ಸರ್ವಶತ್ರೂನ್ ॥
ಅಸ್ಪರ್ಧಮಾನಂ ನ ಕಥಂಚನ ತ್ವಾಂ ಜೇತಾ ಕಶ್ಚಿತ್ ಸ್ಪರ್ಧಮಾನಸ್ತು ಯಾಸಿ ।
ಪರಾಭೂತಿಂ ನಾತ್ರ ವಿಚಾರ್ಯಮಸ್ತಿ ಪ್ರಮಾದೀ ತ್ವಂ ಭವಿತಾ ಚಾಸ್ತ್ರಸಂಖ್ಯೇ ।
ಯಾಹೀತಿ ತೇನೋಕ್ತ ಉದಾರಕರ್ಮಣಾ ಕರ್ಣೋ ಯಯೌ ತಂ ಪ್ರಣಮ್ಯೇಶಿತಾರಮ್ ॥

ದ್ವಾವಿಂಶತಿಮಯುದ್ಧೇ ತು ರಾಮದತ್ತಂ ಸುಭಾಸ್ವರಮ್ ।
ಅಭೇದ್ಯಂ ರಥಮಾರುಹ್ಯ ವಿಜಯಂ ಧನುರೇವ ಚ ॥
ತದ್ದತ್ತಮೇವ ಸಂಗೃಹ್ಯ ತೂಣೀ ಚಾಕ್ಷಯಸಾಯಕೌ । (೨೬/೧೪೬-೧೪೭)

ಈ ಮಾತುಗಳಲ್ಲಿ ಅನುಗ್ರಹದ ವಿವರದೊಂದಿಗೆ ಶಾಪದ ವಿವರವೂ ಸ್ಫುಟವಾಗಿ ನಿರೂಪಿತವಾಗಿದೆ.

೧೪. ಜೀವದ್ವಯಾವೇಶದ ಪರಿಕಲ್ಪನೆ

ಪೂತನಾ, ಶಿಶುಪಾಲ, ದಂತವಕ್ರ ಮೊದಲಾದ ಅಸುರರು ಸದ್ಗತಿಯನ್ನು ಪಡೆದು-ಕೊಂಡಂತೆ ಭಾಗವತಾದಿಗ್ರಂಥಗಳಲ್ಲಿ ಕಂಡುಬರುತ್ತದೆ. ಅಲ್ಲದೆ ಪೂತನೆ ತಾಟಕೆಯೆಂಬ ರಾಕ್ಷಸಿ, ಶಿಶುಪಾಲನು ಹಿರಣ್ಯಕಶಿಪು, ದಂತವಕ್ರನು ಹಿರಣ್ಯಾಕ್ಷ ಎಂಬ ಮೊದಲಾದ ವಿವರಗಳು ಅವುಗಳಲ್ಲೇ ಬಂದಿದ್ದು, ಅವರೆಲ್ಲ ಸ್ವರೂಪತಃ ಭಗವದ್ದ್ವೇಷಿಗಳಾದ ಅಸುರರು. ಅವರಿಗೆಲ್ಲ ದುರ್ಗತಿ ಖಚಿತ ಎಂಬ ಮಾತು ಅವುಗಳಲ್ಲೇ ಬಂದಿದೆ. ಎಂದರೆ ಅವರಿಗೆ ಸದ್ಗತಿ ಆಗುವುದು ಹೇಗೆ ಉಚಿತ? ಈ ವಿರೋಧದ ಪರಿಹಾರವನ್ನು ಆಚಾರ್ಯರು ಪರಿಹರಿಸಿರುವ ರೀತಿ ತುಂಬಾ ಅಪೂರ್ವವಾದುದು (೧೨/೮೭,೮೮):

ಸಾ ತಾಟಕಾ ಚೋರ್ವಶೀಸಂಪ್ರವಿಷ್ಟಾ ಕೃಷ್ಣಾವಧ್ಯಾನಾನ್ನಿರಯಂ ಸಂಜಗಾಮ ॥
ಸಾ ತೂರ್ವಶೀ ಕೃಷ್ಣಭುಕ್ತಸ್ತನೇನ ಪೂತಾ ಸ್ವರ್ಗಂ ಪ್ರಯಯೌ ತತ್ಕ್ಷಣೇನ ।
ಸಾ ತುಂಬುರೋಃ ಸಂಗತ ಆವಿವೇಶ ರಕ್ಷಸ್ತನುಂ ಶಾಪತೋ ವಿತ್ತಪಸ್ಯ ।
ಕೃಷ್ಣಸ್ಪರ್ಶಾಚ್ಛುದ್ಧರೂಪಾ ಪುನರ್ದಿವಂ ಯಯೌ ತುಷ್ಟೇ ಕಿಮಲಭ್ಯಂ ರಮೇಶೇ ॥

ವಿಡೂರಥಸ್ತಮೋಽಗಚ್ಛದ್ದಂತವಕ್ರೇ ಚ ಯೋಽಸುರಃ ।
ಹರೇಶ್ಚ ಪಾರ್ಷದಃ ಕ್ಷಿಪ್ರಂ ಹರಿಮೇವ ಸಮಾಶ್ರಿತಃ ॥
ಕೃಷ್ಣೇ ಪ್ರಾಪ್ತೇ ಸ್ವಲೋಕಂ ಚ ನಿಸ್ಸೃತ್ಯಾಸ್ಮಾತ್ ಸ್ವರೂಪತಃ ।
ಏಕೀಭಾವಂ ಸ್ವರೂಪೇಣ ದ್ವಾರಪೇಣ ಗಮಿಷ್ಯತಿ ॥ (೨೧/೩೯-೪೧)

ನಿಕೃತ್ಯಮಾನಕಂಧರಃ ಸುಭಕ್ತಿಮಾನಭೂದ್ದರಾ ।
ಸಮಾಶ್ರಿತಶ್ಚ ಯೋಽಸುರೋ ಮಹಾತಮಃ ಪ್ರಪೇದಿವಾನ್ ॥
ಜಯಃ ಪ್ರವಿಶ್ಯ ಕೇಶವಂ ಪುನಶ್ಚ ಪಾರ್ಷದೋಽಭವತ್ । (೨೧/೨೬೨-೨೬೩)

- ಸದ್ಗತಿಗೆ ತೆರಳಿದ್ದು ತಾಟಕೆಯಲ್ಲ; ಅವಳಲ್ಲಿ ಆವಿಷ್ಟಳಾಗಿದ್ದ ಊರ್ವಶೀ. ಅದರಂತೆ ಮುಕ್ತರಾದದ್ದು ದಂತವಕ್ರ ಶಿಶುಪಾಲರಲ್ಲ; ಅವರಲ್ಲಿ ಆವಿಷ್ಟರಾಗಿದ್ದ ವಿಷ್ಣುಪಾರ್ಷದರಾದ ಜಯ ಹಾಗೂ ವಿಜಯ ಎಂಬುದು ಇವುಗಳ ಭಾವ.

೧೫. ಅಪ್ರತಿಮ ಸಂಗ್ರಹಣ ಕೌಶಲ

ರಾಮಾಯಣ, ಮಹಾಭಾರತದಂತಹ ಬೃಹದ್ಗ್ರಂಥಗಳನ್ನು ಸಂಗ್ರಹಿಸುವ ಕಾರ್ಯ ಊಹೆಗೂ ನಿಲುಕದಷ್ಟು ಗಹನ. ವಿವರಗಳು ಹೆಚ್ಚಿದಂತೆ ಗ್ರಂಥದ ವ್ಯಾಪ್ತಿ ಹೆಚ್ಚುವುದು.

ಗ್ರಂಥದ ವ್ಯಾಪ್ತಿಯನ್ನು ಮಿತಿಗೊಳಿಸಲು ಹೊರಟಾಗ ಮುಖ್ಯ ವಿವರಗಳು ತಪ್ಪಿ ಹೋಗುವ ಅಪಾಯವೂ ಉಂಟು. ಆದರೆ ಮಹಾಭಾರತತಾತ್ಪರ್ಯನಿರ್ಣಯ ಯಾವ ಮುಖ್ಯ ವಿವರಗಳೂ ಬಿಟ್ಟು ಹೋಗದಂತೆ ಮೂಲದ ಪ್ರಸಂಗಗಳನ್ನು ಸಂಗ್ರಹಿಸುವ ರೀತಿ ಅನ್ಯಾದೃಶವಾದುದು. ವಿರಾಧವೃತ್ತಾಂತ ಮೊದಲಾದ ಪ್ರಸಂಗಗಳಲ್ಲಿನ ಶ್ರೀಮದಾ-ಚಾರ್ಯರ ಸಂಗ್ರಹಣಕೌಶಲವನ್ನು ಇಲ್ಲಿ ಉದಾಹರಣೆಯಾಗಿ ಗಮನಿಸಬಹುದು :

ರಾಮೋಽಪಿ ತತ್ರ ದದೃಶೇ ಧನದಸ್ಯ ಶಾಪಾ-
ದ್ಗಂಧರ್ವಮುರ್ವಶಿರತೇರಥ ಯಾತುಧಾನೀಮ್ ।
ಪ್ರಾಪ್ತಂ ದಶಾಂ ಸಪದಿ ತುಂಬುರುನಾಮಧೇಯಂ
ನಾಮ್ನಾ ವಿರಾಧಮಪಿ ಶರ್ವವರಾದವಧ್ಯಮ್ ॥
ಭಂಕ್ತ್ವಾಽಸ್ಯ ಬಾಹುಯುಗಲಂ ಬಿಲಗಂ ಚಕಾರ
ಸಮ್ಮಾನಯನ್ ವಚನಮಂಬುಜಜನ್ಮನೋಽಸೌ ।
ಪ್ರಾದಾಚ್ಚ ತಸ್ಯ ಸುಗತಿಂ ನಿಜಗಾಯಕಸ್ಯ
ಭಕ್ಷಾರ್ಥಮಂಸಕಮಿತೋಽಪಿ ಸಹಾನುಜೇನ ॥ (೫/೨೦, ೨೧)

ಈ ಎರಡು ಶ್ಲೋಕಗಳಲ್ಲಿ ವಿರಾಧನ ಮೂಲರೂಪ, ಅವನು ಅಸುರನಾಗಲು ಕುಬೇರನ ಶಾಪವೆಂಬ ಕಾರಣ, ಅದಕ್ಕೆ ಅವನು ಮಾಡಿದ ಉರ್ವಶೀಗಮನ, ಅವನಿಗಿದ್ದ ರುದ್ರದೇವರ ವರ, ಬ್ರಹ್ಮದೇವರ ವಿಶೇಷ ವರ ಮತ್ತು ಅವನು ಶ್ರೀರಾಮನನ್ನು ಲಕ್ಷ್ಮಣನ ಸಮೇತ ತಿನ್ನಲು ಯತ್ನಿಸಿದ ಹಿನ್ನೆಲೆ, ಅವನ ಕೈಗಳನ್ನು ಕತ್ತರಿಸಿ, ಶ್ರೀರಾಮ ಅವನನ್ನು ಸಂಹರಿಸಿದ್ದು ಮೊದಲಾದ ಎಲ್ಲ ವಿವರಗಳೂ ಸ್ಪಷ್ಟವಾಗಿ, ನೇರವಾಗಿ ಪ್ರತಿಪಾದಿತ-ವಾಗಿರುವುದನ್ನು ಗಮನಿಸಬೇಕು. ಇಂತಹ ವಿಸ್ಮಯಕಾರಕವಾದ ಸಂಗ್ರಹಣಾಕೌಶಲ ಸಮಗ್ರ ಸಂಸ್ಕೃತಸಾಹಿತ್ಯದಲ್ಲೇ ಅಶ್ರುತಪೂರ್ವ.

ಮಹಾಭಾರತದ ಕರ್ಣಪರ್ವದಲ್ಲಿ ಬಂದಿರುವ ಎರಡು ಕಥೆಗಳನ್ನು ಆಚಾ-ರ್ಯರು ಒಂದೊಂದೇ ಶ್ಲೋಕದಲ್ಲಿ ಸಂಗ್ರಹಿಸಿರುವ ರೀತಿಯಂತೂ ಅತ್ಯದ್ಭುತ :

ಕೌಶಿಕಾಖ್ಯೋ ಬ್ರಾಹ್ಮಣೋ ಹಿ ಲೀನಂ ಗ್ರಾಮಜನಂ ಕ್ವಚಿತ್ ।
ತಸ್ಕರೇಷ್ವಭಿಧಾಯ್ಯೈವ ನಿರಯಂ ಪ್ರತ್ಯಪದ್ಯತ ॥
ಕಶ್ಚಿದ್ವ್ಯಾಧೋ ಮೃಗಂ ಹತ್ವಾ ಮಾತಾಪಿತೃನಿಮಿತ್ತತಃ ।
ಭಕ್ಷಾರ್ಥಮಭ್ಯಗಾತ್ ಸ್ವರ್ಗಮಸುರೋಽಸೌ ಮೃಗೋ ಯತಃ ॥

(೨೭/೧೨೧-೧೨೨)

೧೬. ಅಪೂರ್ವ ಶಬ್ದಪ್ರಯೋಗ

ಪಾಣಿನೀಯ ವ್ಯಾಕರಣಕ್ಕೆ ಅನುಗುಣವೆನ್ನಿಸದ ಕೆಲವು ಅಪೂರ್ವಪ್ರಯೋಗಗಳನ್ನು ಶ್ರೀಮದಾಚಾರ್ಯರು ಅನೇಕ ಕಡೆ ಮಾಡಿರುವರು. 'ಚಕರ' (೪/೧೯), 'ಅವ್ಯೆಹಿ' (೭/೩೮), 'ಅಮುಂಚತ್' (೧೩/೧೦೨), 'ಕರಾಂಸಿ' (೧೪/೬೫), 'ಸ್ವಪ್ಸ್ಯಂತು'

(೨೬/೨೬೫) ಮೊದಲಾದ ಇಂತಹ ಪ್ರಯೋಗಗಳ ಬಗ್ಗೆ ಶ್ರೀವಾದಿರಾಜಸ್ವಾಮಿಗಳ ಭಾವಪ್ರಕಾಶಿಕೆಯಲ್ಲಿನ ಮಾತುಗಳು ಅತ್ಯಂತ ಗಮನಾರ್ಹವಾಗಿದೆ :

ಕ್ವಚಿದಮುಂಚದಿತ್ಯಾದಿನಾ ಲೌಕಿಕಪ್ರಯೋಗಂ ಕರೋಮಿ । ಕ್ವಚಿದಮುಚದಿತ್ಯಾದಿನಾ ವೈದಿಕಪ್ರಯೋಗಂ ಕರೋಮಿ । ಅತೋಽಹಂ ಲೌಕಿಕಾಲೌಕಿಕಪಾಂಡಿತ್ಯಚತುರತ್ವಾತ್ ತ್ರೈಲೋಕ್ಯಾಚಾರ್ಯ ಇತಿ ಸೂಚಿತಮ್॥ - (೧೩/೧೦೨)

ತಸ್ಮಾನ್ಮಹಾವ್ಯಾಕರಣಜ್ಞೈರ್ಮಹಾವೈದಿಕಶಿರೋಮಣಿಭಿರ್ಯತ್ರ್ಪ್ರಯುಕ್ತಂ ಸ ಏವ ಪ್ರಯೋಗಃ ಸಾಧುಃ ॥ - (೧೪/೮೮)

- ಶ್ರೀಮದಾಚಾರ್ಯರು ಪಾಣಿನಿಯ ವ್ಯಾಕರಣಕ್ಕಿಂತ ಭಿನ್ನವಾದ ಮಹಾವ್ಯಾಕರಣ ಮೊದಲಾದ ಪ್ರಾಚೀನವ್ಯಾಕರಣಕ್ಕೆ ಅನುಗುಣವಾದ ಪ್ರಯೋಗಗಳನ್ನು ಕೆಲವೆಡೆ ಮಾಡಿರುವರು. ಆ ಮೂಲಕ ಅನಂತರಕಾಲದ ಜನರಿಗೆ ಸರ್ವಥಾ ಅಜ್ಞಾತವಾಗಿದ್ದ ಮೂಲವ್ಯಾಕರಣವನ್ನು ಪ್ರಕಾಶನಪಡಿಸಿದರು. ಇದನ್ನು ಅರಿಯದವರು ಮಾತ್ರವೆ ಅಂತಹ ಪ್ರಯೋಗಗಳ ಬಗ್ಗೆ ಗೊಂದಲಕ್ಕೀಡಾಗುವರು. ಅಲ್ಲದೆ ಇಂತಹ ಪ್ರಸಂಗಗಳಲ್ಲಿ ಹೆಚ್ಚಿನವು ಆಕರಗ್ರಂಥಗಳ ವಾಕ್ಯಗಳಾಗಿರುತ್ತವೆ. ಪಾಣಿನಿಗಿಂತ ಪ್ರಾಚೀನವಾದ ಆ ವಾಕ್ಯಗಳಲ್ಲಿ ಪಾಣಿನಿಯ ವ್ಯಾಕರಣದ ಅನುಸರಣೆಯನ್ನು ನಿರೀಕ್ಷಿಸುವ ಅವಿವೇಕವನ್ನು ತೋರಕೂಡದು ಎಂಬ ಎಚ್ಚರಿಕೆಯನ್ನೂ ಇಂತಹ ವಿಮರ್ಶಕರು ಹೊಂದಿರಬೇಕು.

೧೭. ಆಕರಗ್ರಂಥಗಳ ವಾಕ್ಯಗಳೊಂದಿಗೆ ಸ್ವವಚನಗಳ ಜೋಡಣೆ

ಮಹಾಭಾರತ, ಭಾಗವತ ಮೊದಲಾದ ಆಕರಗ್ರಂಥಗಳ ಮೂಲಶ್ಲೋಕಗಳನ್ನು ತಮ್ಮ ವಾಕ್ಯಗಳೊಂದಿಗೆ ಜೋಡಿಸಿಕೊಂಡು ನಿರೂಪಿಸುವ ಮತ್ತೊಂದು ವೈಶಿಷ್ಟ್ಯವೂ ಶ್ರೀಮದಾಚಾರ್ಯರ ಕೃತಿಗಳಲ್ಲಿ ಗೋಚರಿಸುತ್ತದೆ. ತಾತ್ಪರ್ಯನಿರ್ಣಯದಲ್ಲಿ ಅನೇಕ ಕಡೆ ಇಂತಹ ರಚನೆಗಳನ್ನು ಕಾಣಬಹುದು :

ತದಾ ವಿಮಾನಾವಲಿಭಿರ್ನಭಸ್ತಲಂ ದಿದೃಕ್ಷತಾಂ ಸಂಕುಲಮಾಸ ನಾಕಿನಾಮ್ ।
ಸುರಾನಕಾ ದುಂದುಭಯೋ ವಿನೇದಿರೇ ಜಗುಶ್ಚ ಗಂಧರ್ವವರಾಃ ಸಹಸ್ರಶಃ ॥ (೪/೩೩)

ಯತ್ಪಾದಪಂಕಜರಜಃ ಶಿರಸಾ ಬಿಭರ್ತಿ ಶ್ರೀರಬ್ಜಜಶ್ಚ ಗಿರಿಶಃ ಸಹ ಲೋಕಪಾಲೈಃ ।
ಸರ್ವೇಶ್ವರಸ್ಯ ಪರಮಸ್ಯ ಹಿ ಸರ್ವಶಕ್ತೇಃ ಕಿಂ ತಸ್ಯ ಶತ್ರುಹನನೇ ಕಪಯಃ ಸಹಾಯಾಃ ॥(೫/೪೯)

ಸಕ್ರೋಧದೀಪ್ತನಯನಾಂತಹತಃ ಪರಸ್ಯ ಶೋಷಂ ಕ್ಷಣಾದುಪಗತೋ ದನುಜಾದಿಸತ್ತ್ವೈಃ ।
ಸಿಂಧುಶ್ಶಿರಸ್ಯರ್ಹಣಂ ಪರಿಗೃಹ್ಯ ರೂಪೀ ಪಾದಾರವಿಂದಮುಪಗಮ್ಯ ಬಭಾಷ ಏತತ್ ॥

ತಂ ತ್ವಾ ವಯಂ ಜಡಧಿಯೋ ನ ವಿದಾಮ ಭೂಮನ್
ಕೂಟಸ್ಥಮಾದಿಪುರುಷಂ ಜಗತಾಮಧೀಶಮ್ ।
ತ್ವಂ ಸತ್ತ್ವತಃ ಸುರಗಣಾನ್ ರಜಸೋ ಮನುಷ್ಯಾಂ-
ಸ್ತಾರ್ತೀಯತೋಽಸುರಗಣಾನಭಿತಸ್ತಥಾಽಸ್ರಾಃ ॥

ಕಾಮಂ ಪ್ರಯಾಹಿ ಜಹಿ ವಿಶ್ರವಸೋಽವಮೇಹಂ
ತ್ರೈಲೋಕ್ಯರಾವಣಮವಾಪ್ನುಹಿ ವೀರಪತ್ನೀಮ್ ।
ಬಧ್ನೀಹಿ ಸೇತುಮಿಹ ತೇ ಯಶಸೋ ವಿತತ್ಯೈ
ಗಾಯಂತಿ ದಿಗ್ವಿಜಯಿನೋ ಯಮುಪೇತ್ಯ ಭೂಪಾಃ ॥ - (೮/೧೦-೧೨)

ಶಿಲೋಂಛವೃತ್ತ್ಯೈವ ಹಿ ವರ್ತಯನ್ ಸ ಧರ್ಮಂ ಮಹಾಂತಂ ವಿರಜಂ ಜುಷಾಣಃ ।
ಉವಾಸ ನಾಗಾಖ್ಯಪುರೇ ಸಖಾಽಽಸ ದೇವವ್ರತಸ್ಯಾಥ ಕೃಪಸ್ಯ ಚೈವ ॥ (೧೧/೭೧)

ಕ್ರಮಾತ್ ಸಂಸ್ಕಾರಾನ್ ಕ್ಷತ್ರಿಯಾಣಾಮವಾಪ್ಯ ತೇಽವರ್ಧಂತ ಸ್ವತವಸೋ ಮಹಿತ್ವನಾ ।
ಸರ್ವೇ ಸರ್ವಜ್ಞಾಃ ಸರ್ವಧರ್ಮೋಪಪನ್ನಾಃ ಸರ್ವೇ ಭಕ್ತಾಃ ಕೇಶವೇಽತ್ಯಂತಯುಕ್ತಾಃ ॥
(೧೨/೧೩೬)

ಕನ್ಯೈವ ಸಾಽಭವದತಃ ಪ್ರತಿವಾಸರಂ ಚ ಜನ್ಮಾಭವದ್ಧ್ಯಭಿಮತೇಃ ಪೃಥಗೇವ ನಾಶಾತ್ ।
ಪ್ರಾಯೋ ಹಿ ನಾಭಿಮತಿನಾಶಮವಾಪ ವಾಣೀ ತಸ್ಮಾನ್ಮರುಚ್ಚ ಸಕಲೇಷ್ವಭಿವಿಷ್ಟ ಆಸೀತ್ ॥
(೧೯/೧೮೪ ॥

ಸ ತಾನ್ ಕ್ರಮೇಣೈವ ನಿಕೃತ್ತಕಂಧರಾಂಛರೋತ್ತಮೈರತ್ರ ವಿಧಾಯ ವಿಪ್ರಃ ।
ನಿನಾಯ ಲೋಕಂ ಪರಮರ್ಕಮಂಡಲಂ ವ್ರಜಂತಿ ನಿರ್ಭಿದ್ಯ ಯಮೂರ್ಧ್ವರೇತಸಃ ॥(೨೬/೮೦)

ಸ ಪಾಂಚಜನ್ಯೋಽಚ್ಯುತವಕ್ತ್ರವಾಯುನಾ ಭೃಶಂ ಸುಪೂರ್ಣೋದರನಿಃಸೃತಧ್ವನಿಃ ।
ಜಗದ್ವಿರಿಂಚೇಶಸುರೇಂದ್ರಪೂರ್ವಕಂ ಪ್ರಕಂಪಯಾಮಾಸ ಯುಗಾತ್ಯಯೇ ಯಥಾ ॥ (೨೬/೯೩)

ಈ ಮೇಲಿನ ಶ್ಲೋಕಗಳೆಲ್ಲ ಒಂದೆರಡು ಪದಗಳ ವ್ಯತ್ಯಾಸಗಳೊಂದಿಗೆ ಕ್ರಮವಾಗಿ ಭಾಗವತ(೭/೮/೩೬), ಭಾಗವತ(೧೦/೫೮/೩೮), ಭಾಗವತ (೯/೧೦/- ೧೩-೧೫), ಭಾಗವತ (೧೧/೧೭/೪೩), ಋಗ್ವೇದ (೧/೮೫/೭), ಮಹಾಭಾರತ (ಆದಿಪರ್ವ ೧೯೭/೧೪), ಭಾಗವತ (೪/೧೧/೫) ಹಾಗೂ ಮಹಾಭಾರತ (ದ್ರೋಣಪರ್ವ ೭೩/೫೨)ದ ಶ್ಲೋಕಗಳೇ ಆಗಿವೆ ಎಂಬುದು ವಿಶೇಷ.

ಇವುಗಳ ಔಚಿತ್ಯವನ್ನು ಶ್ರೀವಾದಿರಾಜರು ತಮ್ಮ ಭಾವಪ್ರಕಾಶಿಕೆಯಲ್ಲಿ ವಿಶೇಷವಾಗಿ ನಿರೂಪಿಸಿರುವರು :

''ತೇಽವರ್ಧಂತ ಸ್ವತವಸೋ ಮಹಿತ್ವನಾ'' ಇತಿ ಶ್ರುತೇಃ ಪಾದಂ ಸ್ವಶ್ಲೋಕೇ ಪಾದತ್ವೇನ ಕಥಯತಾಽಽಚಾರ್ಯೇಣ ಸ್ವಗ್ರಂಥಸ್ಯ ಛಂದಃಸಮಾನತಾ ಸೂಚಿತಾ । ನಹಿ ಸೌವರ್ಣಸರ್ವಾಂಗಂ ವಿನಾ ಪಾದಮಾತ್ರಂ ಸೌವರ್ಣಂ ಕ್ವಾಪಿ ದೃಷ್ಟಮ್ । ಅತಃ ಶ್ಲೋಕೈಕಪಾದಸ್ಯ ಶ್ರೌತತ್ವೇ ಸರ್ವೋಽಪಿ ಶ್ಲೋಕಃ ಶ್ರುತಿಸಮಾನ ಏವೇತಿ ಕಥಂ ನ ಸಿದ್ಧ್ಯೇದಿತಿ ಭಾವಃ । (೧೨/೧೩೭)

ಕಿಂ ಬಹುನಾ ''ಬಭೂವ ಕನ್ಯೈವ ಗತೇ ಗತೇಽಹನಿ'' ಇತಿ ''ಕನ್ಯೈವ ಸಾಽಭವದತಃ ಪ್ರತಿವಾಸರಂ ಚ'' ಇತಿ ಪದವಿನ್ಯಾಸಯೋರಪ್ಯೈಕವಿಧ್ಯಾತ್ ಪ್ರಾಮಾಣಿಕಶಿರೋಮಣಿಗ್ರಂಥಕಾರ ಇತಿ ಜ್ಞೇಯಮ್ ॥ (೧೯/೧೮೪)

ಅತೋ ನ ಕೇವಲಮರ್ಥತಃ ಸಾಮ್ಯಂ ಕಿಂತು ಶಬ್ದತೋಽಪಿ ಗುರುಶಿಷ್ಯಗ್ರಂಥಯೋಃ ಸಾಮ್ಯಮ್ । ಕ್ವಚಿತ್ ಕ್ವಚಿತ್ ಗುರುವಾಕ್ಯರತ್ನೈಃ ಸಹ ಸುವಾಕ್ಯಹೈಮಮಣಿಮಾಲಾಮಲಂಕುರುತೇ ಭಗವಾನಾಚಾರ್ಯ ಇತಿ ಜ್ಞೇಯಮ್ । (೨೧/೩೧೫)

೧೮. ಛಂದೋವೈವಿಧ್ಯ

ಛಂದೋವೈವಿಧ್ಯ ಮಹಾಭಾರತತಾತ್ಪರ್ಯನಿರ್ಣಯದ ಮತ್ತೊಂದು ವೈಶಿಷ್ಟ್ಯ. ಅಕ್ಷರವೃತ್ತ, ಮಾತ್ರಾವೃತ್ತ ಎರಡನ್ನೂ ವಿಶೇಷವಾಗಿ ಬಳಸಿರುವ ಶ್ರೀಮದಾಚಾರ್ಯರು ಅನೇಕ ಕಡೆ ಉಪಜಾತಿಯನ್ನು ವಿಶಿಷ್ಟರೀತಿಯಲ್ಲಿ ಅಳವಡಿಸಿರುವರು. ವಿಷಯದ ಮಹತ್ತ್ವಕ್ಕೆ ತಕ್ಕಂತೆ ಛಂದಸ್ಸನ್ನು ಬಳಸುವ ವಿಶಿಷ್ಟಶೈಲಿ ಅವರದು. ಸುಂದರಕಾಂಡ-ನಿರೂಪಣೆಯ ಏಳನೆಯ ಅಧ್ಯಾಯ, ಯುದ್ಧಕಾಂಡನಿರೂಪಣೆಯ ಎಂಟನೆಯ ಅಧ್ಯಾಯ, ಭೀಷ್ಮಾದಿಗಳ ಜನನದ ವಿವರ ನೀಡುವ ಹನ್ನೊಂದನೆಯ ಅಧ್ಯಾಯ, ಕ್ರಮವಾಗಿ ಸಭಾಪರ್ವ, ವನಪರ್ವ, ವಿರಾಟಪರ್ವ, ಉದ್ಯೋಗಪರ್ವ ನಿರೂಪಣೆಯ ಇಪ್ಪತ್ತೊಂದು, ಇಪ್ಪತ್ತೆರಡು, ಇಪ್ಪತ್ತಮೂರು ಮತ್ತು ಇಪ್ಪತ್ತನಾಲ್ಕನೆಯ ಅಧ್ಯಾಯಗಳು ಮೊದಲಾದವುಗಳಲ್ಲಿ ಪ್ರಮಾಣಿಕಾ, ಅನುಷ್ಟುಪ್, ವಸಂತತಿಲಕ ಮೊದಲಾದ ಅನೇಕ ವಿವಿಧವೃತ್ತಗಳು ವಿಶಿಷ್ಟರೀತಿಯಲ್ಲಿ ಬಳಕೆಯಾಗಿವೆ. ಇವುಗಳಿಂದಾಗಿ ಕಥಾನಿರೂಪಣೆಯ ಓಟ, ವಿಶ್ಲೇಷಣೆ ಹಾಗೂ ವಿಮರ್ಶೆಗಳಿಗೆ ತೀರ ವಿನೂತನವಾದ ಗತಿ ದೊರಕಿರುವುದನ್ನು ಕಾಣಬಹುದು. ಇಂದ್ರವಜ್ರಾ, ಉಪೇಂದ್ರವಜ್ರಾ, ಇಂದ್ರವಂಶ, ವಂಶಸ್ಥ, ಮಾಲಿನೀ, ಶಾಲಿನೀ, ಸ್ರಗ್ಧರಾ, ದ್ರುತವಿಲಂಬಿತ, ರಥೋದ್ಧತಾ, ಶಾರ್ದೂಲವಿಕ್ರೀಡಿತ, ಮಂಜುಭಾಷಿಣೀ, ದಲಿತಾ, ವಾತೋರ್ಮಿ ಮೊದಲಾದ ವಿವಿಧ ಛಂದಸ್ಸು ಸಹ ವಿಶಿಷ್ಟರೀತಿಯಲ್ಲಿ ಬಳಕೆಯಾಗಿವೆ. ವಿವಿಧವೃತ್ತಗಳ ಜೋಡಣೆಯಾದ ಉಪಜಾತಿಯಂತು ಆಚಾರ್ಯರದ್ದೇ ವೈಶಿಷ್ಟ್ಯ.

೧೯. ಉಪಾಖ್ಯಾನಗಳ ವಿವೇಚನೆ

ಇತಿಹಾಸಪುರಾಣಗಳೆಂದರೆ ಉಪಾಖ್ಯಾನಗಳ ಮಹಾಸಾಗರವೇ ಸರಿ. ಉಪಾಖ್ಯಾನ-ಗಳಿಲ್ಲದ ಇತಿಹಾಸಪುರಾಣಗಳನ್ನು ಊಹಿಸಲೂ ಸಾಧ್ಯವಿಲ್ಲ. ಆದರೆ ಅಂತಹ ಉಪಾಖ್ಯಾನಗಳ ಒಟ್ಟು ಹಿನ್ನೆಲೆ ಏನು? ಅವುಗಳ ಆಂತರ್ಯ ಎಂತಹುದು? ಎಂಬು-ದರ ಬಗ್ಗೆಯೂ ತಾತ್ಪರ್ಯನಿರ್ಣಯ ನೀಡುವ ಮಾಹಿತಿ ಅತ್ಯಂತ ರೋಚಕ :

> ಮಾರ್ಕಂಡೇಯಸ್ತದಾऽऽಗತ್ಯ ತೇಷಾಮಕಥಯತ್ ಕಥಾಃ ।
> ಬಹ್ವೀಶ್ಚೈವ ವಿಚಿತ್ರಾಶ್ಚ ಭಾಷಾತ್ರಯಸಮನ್ವಿತಾಃ ॥
> ಲೋಕದರ್ಶನಮಾಶ್ರಿತ್ಯ ದೇವಾಶ್ಚ ಮುನಯಸ್ತಥಾ ।
> ಬ್ರೂಯುಃ ಕಥಾಸ್ತತ್ರ ಶಿಕ್ಷಾ ಗ್ರಾಹ್ಯಾ ನಾರ್ಥಃ ಕಥಂಚನ ॥
> ಅರ್ಥಃ ಸಮಾಧಿಭಾಷಾಸು ಗ್ರಾಹ್ಯಃ ಸರ್ವೋऽಪ್ಯಸಂಶಯಮ್ ।
> ಪರದರ್ಶನಭಾಷಾಸು ಜ್ಞೇಯಂ ತದ್ದರ್ಶನಂ ತಥಾ ॥
> ಗ್ರಾಹ್ಯೋ ನಾರ್ಥೋ ವೈದಿಕಂ ತು ದರ್ಶನಂ ಗ್ರಾಹ್ಯಮೇವ ಚ ।
> ಅನ್ಯಾರ್ಥೋ ಗುಹ್ಯಭಾಷಾಸು ಗ್ರಾಹ್ಯ ಏವಂ ವಿನಿರ್ಣಯಃ ॥
>
> (೨೨/೩೪೪-೩೪೭)

೨೦. ಇತಿಹಾಸಪುರಾಣಗಳ ಆಧ್ಯಾತ್ಮಿಕಮೌಲ್ಯ

ರಾಮಾಯಣ, ಮಹಾಭಾರತಗಳನ್ನು ಮಹತ್ತ್ವದ ಆಧ್ಯಾತ್ಮಿಕಗ್ರಂಥಗಳು ಎಂದು ಗುರುತಿಸುವ ಕಾರ್ಯವನ್ನು ಆ ಮುಂಚಿನ ಮತಾಚಾರ್ಯರು ಮಾಡಿರಲಿಲ್ಲ. ಮೂಲತಃ ಅವು ಮೂಲಶಾಸ್ತ್ರಗಳ ಅತ್ಯಂತಪ್ರಮುಖ ಘಟಕಗಳು ಎಂದು ನಿರೂಪಿಸಿ, ಮಹಾಭಾರತವಂತೂ ಶಾಸ್ತ್ರರಾಜ ಎಂದು ಸ್ಥಾಪಿಸಿದ ಅಪೂರ್ವತೆಯೂ ಆಚಾರ್ಯ ಶ್ರೀಮಧ್ವರದಾಗಿದೆ. ರಾಮಾಯಣ, ಮಹಾಭಾರತಗಳು ಒಂದರ್ಥದಲ್ಲಿ ಮಹಾಕಾವ್ಯ-ಗಳಾದರೂ, ಮೂಲತಃ ಅವೆರಡೂ ಇತಿಹಾಸಗಳು. ಪುರಾಣಕ್ಕಿಂತ ಮೇಲಿನ ಸ್ಥಾನ ಅವುಗಳದು. ಇನ್ನೂ ಹೆಚ್ಚಾಗಿ ಅವೆರಡೂ ಭಾಗವತಾದಿಪುರಾಣಗಳನ್ನೊಳಗೊಂಡಂತೆ ಆಧ್ಯಾತ್ಮಿಕ ಕೃತಿಗಳು. ಅವುಗಳ ಪ್ರಧಾನಮೌಲ್ಯ ಅಡಗಿರುವುದೇ ಅವುಗಳ ಆಧ್ಯಾತ್ಮಿಕತೆಯಲ್ಲಿ. ಆಧ್ಯಾತ್ಮಿಕಮೌಲ್ಯ ಅವುಗಳಲ್ಲಿ ಓತಪ್ರೋತವಾಗಿದೆ ಎಂದು ನಿರೂಪಿಸಿ, ಅವುಗಳನ್ನು ಅರ್ಥೈಸಿಕೊಳ್ಳಲು ಅವರು ಮಾರ್ಗದರ್ಶನವನ್ನೂ ನೀಡಿರುವರು. ಮಹಾಭಾರತದ ಆಧ್ಯಾತ್ಮಿಕ ವಿವೇಚನೆಯ ಬಗ್ಗೆ ಅವರ ವಿವರಣೆ ಇಲ್ಲಿ ಗಮನಿಸಬಹುದು :

ಭಕ್ತಿರ್ಜ್ಞಾನಂ ಸವೈರಾಗ್ಯಂ ಪ್ರಜ್ಞಾ ಮೇಧಾ ಧೃತಿಃ ಸ್ಥಿತಿಃ ।
ಯೋಗಃ ಪ್ರಾಣೋ ಬಲಂ ಚೈವ ವೃಕೋದರ ಇತಿ ಸ್ಮೃತಃ ॥
ಏತದ್ದಶಾತ್ಮಕೋ ವಾಯುಸ್ತಸ್ಮಾದ್ಭೀಮಸ್ತದಾತ್ಮಕಃ ।
ಸರ್ವವಿದ್ಯಾ ದ್ರೌಪದೀ ತು ಯಸ್ಮಾತ್ ಸೈವ ಸರಸ್ವತೀ ॥
ಅಜ್ಞಾನಾದಿಸ್ವರೂಪಸ್ತು ಕಲಿರ್ದುರ್ಯೋಧನಃ ಸ್ಮೃತಃ ।
ವಿಪರೀತಂ ತು ಯಜ್ಜ್ಞಾನಂ ದುಃಶಾಸನ ಇತೀರಿತಃ ॥
ನಾಸ್ತಿಕ್ಯಂ ಶಕುನಿರ್ನಾಮ ಸರ್ವದೋಷಾತ್ಮಕಾಃ ಪರೇ ।
ಧಾರ್ತರಾಷ್ಟ್ರಾಸ್ತ್ವಹಂಕಾರೋ ದ್ರೌಣೀ ರುದ್ರಾತ್ಮಕೋ ಯತಃ ॥
ದ್ರೋಣಾದ್ಯಾ ಇಂದ್ರಿಯಾಣ್ಯೇವ ಪಾಪಾನ್ಯನ್ಯೇ ತು ಸೈನಿಕಾಃ ।
ಪಾಂಡವೇಯಾಶ್ಚ ಪುಣ್ಯಾನಿ ತೇಷಾಂ ವಿಷ್ಣುರ್ನಿಯೋಜಕಃ ॥
ಏವಮಧ್ಯಾತ್ಮನಿಷ್ಠಂ ಹಿ ಭಾರತಂ ಸರ್ವಮುಚ್ಯತೇ ।
ದುರ್ವಿಜ್ಞೇಯಮತಃ ಸರ್ವೈರ್ಭಾರತಂ ತು ಸುರೈರಪಿ ॥
ಸ್ವಯಂ ವ್ಯಾಸೋ ಹಿ ತದ್ವೇದ ಬ್ರಹ್ಮಾ ವಾ ತತ್ಪ್ರಸಾದತಃ ।
ತಥಾಽಪಿ ವಿಷ್ಣುಪರತಾ ಭಾರತೇ ಸಾರಸಂಗ್ರಹಃ ॥
ಇತ್ಯಾದಿ ವ್ಯಾಸವಾಕ್ಯೈಸ್ತು ವಿಷ್ಣೂತ್ಕರ್ಷೋಽವಗಮ್ಯತೇ ॥ (೨/೧೪೧-೧೪೮)

೨೧. ಮೂಲಗ್ರಂಥಗಳ ಅರ್ಥವೈಭವ :

ವೇದಗಳಿಂದ ಹಿಡಿದು ಇತಿಹಾಸಪುರಾಣಗಳ ವರೆಗಿನ ಆಕರಗ್ರಂಥಗಳನ್ನು ಒಂದರ್ಥದಲ್ಲಿ ಮಾತ್ರ ನೋಡುವ ಸೀಮಿತದೃಷ್ಟಿ ಪ್ರಚಾರದಲ್ಲಿದ್ದಿತು. ಕೆಲವರಂತೂ ತತ್ತ್ವಾವೇದಕ, ಅತತ್ತ್ವಾವೇದಕ ಮೊದಲಾಗಿ ವಿಭಾಗ ಮಾಡಿ ಆ ಒಂದು ಅರ್ಥವನ್ನೂ ಸಹ ಇನ್ನೂ ಸೀಮಿತಗೊಳಿಸಿದ್ದರು. ಆದರೆ ಆಚಾರ್ಯ ಶ್ರೀಮಧ್ವರು ಮೂಲಶಾಸ್ತ್ರಗಳ

ಅರ್ಥವೈಭವದ ಬಗ್ಗೆ ಹೊಸದೃಷ್ಟಿಯನ್ನೇ ನೀಡಿದರು. ಅವರು ಹೇಳುವಂತೆ ವೇದಗಳಿಗೆ ಅತಿ ಕಡಿಮೆ ಎಂದರೂ ಮೂರು ಅರ್ಥ. ಮಹಾಭಾರತಕ್ಕೆ ಅತಿಕಡಿಮೆ ಎಂದರೂ ಹತ್ತು ಅರ್ಥಗಳು, ವಿಷ್ಣುಸಹಸ್ರನಾಮದ ಪ್ರತಿಯೊಂದು ನಾಮಕ್ಕೂ ಕನಿಷ್ಠ ನೂರು ಅರ್ಥಗಳು. ತಮ್ಮ ಈ ಮಾತಿಗೆ ಆಧಾರವಾಗಿ ಸ್ಕಂದಪುರಾಣದ ವಚನವನ್ನು ಋಗ್ಭಾಷ್ಯದಲ್ಲಿ ಉಲ್ಲೇಖಿಸಿದ್ದರೆ, ಈ ಕೃತಿಯಲ್ಲಿ ಮಹಾಭಾರತವಾಕ್ಯವನ್ನು ಉಲ್ಲೇಖಿಸಿ ವಿವರಿಸಿರುವರು :

ತ್ರಯೋಽರ್ಥಾಃ ಸರ್ವವೇದೇಷು ದಶಾರ್ಥಾಃ ಸರ್ವಭಾರತೇ ।
ವಿಷ್ಣೋಃ ಸಹಸ್ರನಾಮಾಪಿ ನಿರಂತರಶತಾರ್ಥಕಮ್ ॥
– (ಋಗ್ಭಾಷ್ಯೋದ್ಧೃತಸ್ಕಂದಪುರಾಣವಚನ)

ಭಾರತಾರ್ಥಸ್ತ್ರಿಧಾ ಪ್ರೋಕ್ತಃ ಸ್ವಯಂ ಭಗವತೈವ ಹಿ ।
ಮನ್ವಾದಿ ಕೇಚಿದ್ಬ್ರುವತೇ ಹ್ಯಾಸ್ತೀಕಾದಿ ತಥಾಽಪರೇ ॥
ತಥೋಪರಿಚರಾದ್ಯನ್ಯೇ ಭಾರತಂ ಪರಿಚಕ್ಷತೇ ।
ಸಕೃಷ್ಣಾನ್ ಪಾಂಡವಾನ್ ಗೃಹ್ಯ ಯೋಽಯಮರ್ಥಃ ಪ್ರವರ್ತತೇ ॥
ಪ್ರಾತಿಲೋಮ್ಯಾದಿವೈಚಿತ್ರ್ಯಾತ್ ತಮಾಸ್ತೀಕಂ ಪ್ರಚಕ್ಷತೇ ।
ಧರ್ಮೋ ಭಕ್ತ್ಯಾದಿದಶಕಃ ಶ್ರುತಾದಿಃ ಶೀಲವೈನಯೌ ॥
ಸಬ್ರಹ್ಮಕಾಸ್ತು ತೇ ಯತ್ರ ಮನ್ವಾದಿಂ ತಂ ವಿದುರ್ಬುಧಾಃ ॥ (೨/೧೩೬-೧೩೯)

೨೨. ಅಪೂರ್ವ ಕಾವ್ಯಸೌಂದರ್ಯ

ಸಾಹಿತ್ಯಿಕಕೃತಿಯಾಗಿಯೂ ಮಹಾಭಾರತತಾತ್ಪರ್ಯನಿರ್ಣಯ ತೀರ ವಿಶಿಷ್ಟವಾದ ಕೃತಿ. ಅವುಗಳಲ್ಲಿನ ಶಬ್ದಜೋಡಣೆ, ಸರಸಶೈಲಿ, ಮನೋಜ್ಞಪದಪುಂಜಗಳು, ಊಹಾತೀತವಾದ ಓಟ, ಉದ್ದಕ್ಕೂ ಕಂಡುಬರುವ ಉಪಮಾ, ರೂಪಕ, ಅರ್ಥಾಂತರನ್ಯಾಸಾದಿ ಅಲಂಕಾರಗಳು, ಮನೋಹರವರ್ಣನೆಗಳು ಓದುಗನಿಗೆ ವಿನೂತನ ಅನುಭವವನ್ನು ನೀಡುತ್ತವೆ :

ರಾಮರಾಜ್ಯದ ವರ್ಣನೆ –

ಪ್ರಶಾಸತೀಶೇ ಪೃಥಿವೀ ಬಭೂವ ವಿರಿಂಚಿಲೋಕಸ್ಯ ಸಮಾ ಗುಣೋನ್ನತೌ ।
ಜನೋಽಖಿಲೋ ವಿಷ್ಣುಪರೋ ಬಭೂವ ನ ಧರ್ಮಹಾನಿಶ್ಚ ಬಭೂವ ಕಸ್ಯಚಿತ್ ॥
ಗುಣೈಶ್ಚ ಸರ್ವೈರುದಿತಾಶ್ಚ ಸರ್ವೇ ಯಥಾಯಥಾ ಯೋಗ್ಯತಯೋಚ್ಚನೀಚಾಃ ।
ಸಮಸ್ತರೋಗಾದಿಭಿರುಜ್ಝಿತಾಶ್ಚ ಸರ್ವೇ ಸಹಸ್ರಾಯುಷ ಊರ್ಜಿತಾ ಧನೈಃ ॥
ಸರ್ವೇ ಜನಾ ನಿತ್ಯಬಲೋಪಪನ್ನಾ ಯಥೇಷ್ಟಸಿದ್ಧ್ಯಾ ಚ ಸದೋಪಪನ್ನಾಃ ।
ಸಮಸ್ತದೋಷೈಶ್ಚ ಸದಾ ವಿಹೀನಾಃ ಸರ್ವೇ ಸುರೂಪಾಶ್ಚ ಸದಾ ಮಹೋತ್ಸವಾಃ ॥
ಸರ್ವೇ ಮನೋವಾಕ್ತನುಭಿಃ ಸದೈವ ವಿಷ್ಣುಂ ಯಜಂತೇ ನತು ಕಂಚಿದನ್ಯಮ್ ।
ಸಮಸ್ತರತ್ನೋದ್ಧರಿತಾ ಚ ಪೃಥ್ವೀ ಯಥೇಷ್ಟಧಾನ್ಯಾ ಬಹುದುಗ್ಧಗೋಮತೀ ॥
ಸಮಸ್ತಗಂಧಾಶ್ಚ ಸದಾಽತಿಹೃದ್ಯಾ ರಸಾ ಮನೋಹಾರಿಣ ಏವ ತತ್ರ ।
ಶಬ್ದಾಶ್ಚ ಸರ್ವೇ ಶ್ರವಣಾತಿಹಾರಿಣಃ ಸ್ಪರ್ಶಾಶ್ಚ ಸರ್ವೇ ಸ್ಪರ್ಶೇಂದ್ರಿಯಪ್ರಿಯಾಃ ॥

ನ ಕಸ್ಯಚಿದ್ದುಃಖಮಭೂತ್ ಕಥಂಚಿನ್ನ ವಿತ್ತಹಾನಿಶ್ಚ ಬಭೂವ ಕಶ್ಚನ ।
ನಾಧರ್ಮಶೀಲೋ ನ ಚ ಕಶ್ಚನಾಪ್ರಜೋ ನ ದುಷ್ಪ್ರಜೋ ನೈವ ಕುಭಾರ್ಯಕಶ್ಚ ॥
ಸ್ತ್ರಿಯೋ ನ ಚಾಸನ್ ವಿಧವಾಃ ಕಥಂಚಿನ್ನ ವೈ ಪುಮಾಂಸೋ ವಿಧುರಾ ಬಭೂವುಃ ।
ನಾನಿಷ್ಟಯೋಗಶ್ಚ ಬಭೂವ ಕಸ್ಯಚಿನ್ನ ಚೇಷ್ಟಹಾನಿರ್ನ ಚ ಪೂರ್ವಮೃತ್ಯುಃ ॥
ಯಥೇಷ್ಟಮಾಲ್ಯಾಭರಣಾನುಲೇಪನಾಃ ಯಥೇಷ್ಟಪಾನಾಶನವಾಸಸೋಽಖಿಲಾಃ ।
ಬಭೂವುರೀಶೇ ಜಗತಾಂ ಪ್ರಶಾಸತಿ ಪ್ರಕೃಷ್ಟಧರ್ಮೇಣ ಜನಾರ್ದನೇ ನೃಪೇ ॥ (೯/೪-೧೧)

ವ್ಯಾಸಾವತಾರದ ವರ್ಣನೆ :

ದ್ವೀಪೇ ಭಗಿನ್ಯಾಸ್ತು ಯಮಸ್ಯ ವಿಶ್ವಕೃತ್ ಪ್ರಕಾಶತೇ ಜ್ಞಾನಮರೀಚಿಮಂಡಲಃ ।
ಪ್ರಭಾಸಯನ್ನಂಡಬಹಿಸ್ತಥಾಽಂತಃ ಸಹಸ್ರಲಕ್ಷಾಮಿತಭಾನುದೀಧಿತಿಃ ॥
ಅಗಣ್ಯದಿವ್ಯೋರುಗುಣಾರ್ಣವಃ ಪ್ರಭುಃ ಸಮಸ್ತವಿದ್ಯಾಧಿಪತಿರ್ಜಗದ್ಗುರುಃ ।
ಅನಂತಶಕ್ತಿರ್ಜಗದೀಶ್ವರೇಶ್ವರಃ ಸಮಸ್ತದೋಷಾತಿವಿದೂರವಿಗ್ರಹಃ ॥
ಶುಭಮರತಕವರ್ಣೋ ರಕ್ತಪಾದಾಬ್ಜನೇತ್ರಾಧರಕರನಖರಸನಾಗ್ರಶ್ಚಕ್ರಶಂಖಾಬ್ಜರೇಖಃ ।
ರವಿಕರವರಗೌರಂ ಚರ್ಮ ಚೈಣಂ ವಸಾನಸ್ತಟಿದಮಲಜಟಾಸಂದೀಪ್ತಚೂಡಂ ದಧಾನಃ ॥
ವಿಸ್ತೀರ್ಣವಕ್ಷಾಃ ಕಮಲಾಯತಾಕ್ಷೋ ಬೃಹದ್ಭುಜಃ ಕಂಬುಸಮಾನಕಂಠಃ ।
ಸಮಸ್ತವೇದಾನ್ ಮುಖತಸ್ಸಮುದ್ಗಿರನ್ನನಂತಚಂದ್ರಾಧಿಕಕಾಂತಿಸನ್ಮುಖಃ ॥
ಪ್ರಬೋಧಮುದ್ರಾಭಯದೋರ್ದ್ವಯಾನ್ವಿತೋ ಯಜ್ಞೋಪವೀತಾಜಿನಮೇಖಲೋಲ್ಲಸನ್ ।
ದೃಶಾ ಮಹಾಜ್ಞಾನಭುಜಂಗದಷ್ಟಮುಜ್ಜೀವಯಾನೋ ಜಗದತ್ಯರೋಚತ ॥ (೧೦/೫೦-೫೫)

ರಾಮಾಯಣ ಮಹಾಭಾರತಗಳ ಅಪಾರ ಯಶಸ್ಸಿಗೆ ಅವುಗಳಲ್ಲಿ ಬಂದಿರುವ ಯುದ್ಧವರ್ಣನೆಯೂ ಒಂದು ಪ್ರಮುಖ ಕಾರಣ. ಪ್ರಪಂಚದ ಬೇರಾವ ಕೃತಿಯೂ ಸಮರದ ಚಿತ್ರವನ್ನು ಅಷ್ಟು ಪರಿಣಾಮಕಾರಿಯಾಗಿ ನೀಡಿಲ್ಲ. ಭಾಸಕಾಳಿದಾಸಾದಿ ವಿಶ್ವಖ್ಯಾತಿಯ ಮಹಾಕವಿಗಳೂ ಸಹ ಯುದ್ಧವರ್ಣನೆಯ ಗೋಜಿಗೆ ಹೋಗಿಲ್ಲ. ಮಹಾಭಾರತದ ಅನಂತರ ಯುದ್ಧವರ್ಣನೆಯನ್ನು ಯಶಸ್ವಿಯಾಗಿ, ಪರಿಣಾಮಕಾರಿಯಾಗಿ ಮುಂದಿಟ್ಟ ಏಕಮಾತ್ರ ಕೃತಿ ಎಂಬುದು ಇದರ ಮತ್ತೊಂದು ಹಿರಿಮೆ.

೨೫. ಅಲಂಕಾರಗಳು :

ಉಪಮಾ, ರೂಪಕ ಮೊದಲಾದ ಅಲಂಕಾರಗಳ ಬಳಕೆ ಈ ಕೃತಿಯ ಉದ್ದಕ್ಕೂ ಕಂಡುಬರುತ್ತದೆ :

೧. ಶ್ರೀವೇದವ್ಯಾಸ, ಶ್ರೀರಾಮ ಹಾಗೂ ಶ್ರೀಕೃಷ್ಣ - ಈ ಮೂರು ರೂಪಗಳನ್ನು ಕ್ರಮವಾಗಿ ಸೂರ್ಯ, ಚಂದ್ರ ಹಾಗೂ ಸಾಗರ ಎಂಬುದಾಗಿ ಸುಂದರರೂಪಕದಲ್ಲಿ ವರ್ಣಿಸುವ ಮೂರನೆಯ ಅಧ್ಯಾಯದ ಮಂಗಲಪದ್ಯಗಳು ಅದೆಷ್ಟು ಮನೋಜ್ಞ ಎಂಬುದು ಮೇಲ್ನೋಟಕ್ಕೇ ಕಾಣಬಹುದು :

ಜಯತ್ಯಜೋಽಖಂಡಗುಣೋರುಮಂಡಲಃ ಸದೋದಿತೋ ಜ್ಞಾನಮರೀಚಿಮಾಲೀ ।
ಸ್ವಭಕ್ತಹಾರ್ದೋಚ್ಚತಮೋನಿಹಂತಾ ವ್ಯಾಸಾವತಾರೋ ಹರಿರಾತ್ಮಭಾಸ್ಕರಃ ॥
ಜಯತ್ಯಜೋಽಕ್ಷೀಣಸುಖಾತ್ಮಬಿಂಬಃ ಸ್ವೈಶ್ವರ್ಯಕಾಂತಿಪ್ರತತಃ ಸದೋದಿತಃ ।
ಸ್ವಭಕ್ತಸಂತಾಪದುರಿಷ್ಟಹಂತಾ ರಾಮಾವತಾರೋ ಹರಿರೀಶಚಂದ್ರಮಾಃ ॥
ಜಯತ್ಯಸಂಖ್ಯೋರುಬಲಾಂಬುಪೂರೋ ಗುಣೋಚ್ಚರತ್ನಾಕರ ಆತ್ಮವೈಭವಃ ।
ಸದಾ ಸದಾತ್ಮಜ್ಞನದೀಭಿರಾಪ್ಯಃ ಕೃಷ್ಣಾವತಾರೋ ಹರಿರೇಕಸಾಗರಃ ॥ (೩/೧-೩)

೨. ಶ್ರೀರಾಮನು ಮಿಥಿಲೆಯನ್ನು ಪ್ರವೇಶಿಸುವ ವೈಭವವನ್ನು ಚಿತ್ರಿಸುವ ರೂಪಕ, ಉಪಮೆಗಳು ಹೀಗಿದೆ :

ಪಪುರ್ನಿತಾಂತಂ ಸರಸಾಕ್ಷಿಭೃಂಗೈರ್ವರಾನನಾಬ್ಜಂ ಪುರುಷೋತ್ತಮಸ್ಯ ।
ವಿದೇಹನಾರೀನರವರ್ಯಸಂಘಾ ಯಥಾ ಮಹಾಪೌರುಷಿಕಾಸ್ತದಂಘ್ರಿಮ್ ॥ (೪/೧೩)

೩. ಶೂರ್ಪನಖಿಯು ಶ್ರೀರಾಮನನ್ನು ತನ್ನ ಪತಿಯಾಗು ಎಂದು ಕೇಳುವ ಸನ್ನಿವೇಶ ಕತ್ತಲೆಯು ಸೂರ್ಯನ ಯೋಗವನ್ನು ಬಯಸುವಂತಿತ್ತು ಎಂದು ವರ್ಣಿಸುವ ಉಪಮೆಯ ಸೌಂದರ್ಯ ಊಹಾತೀತ :

ರಾಮಂ ಸಮೇತ್ಯ ಭವ ಮೇ ಪತಿರಿತ್ಯವೋಚ-
ದ್ಭಾನುಂ ಯಥಾ ತಮ ಉಪೇತ್ಯ ಸುಯೋಗಕಾಮಮ್ ॥ (೫/೨೫)

೪. ಕುಂಭಕರ್ಣಪುತ್ರನಾದ ನಿಕುಂಭನು ಹನುಮಂತನ ಎದೆಯ ಮೇಲೆ ಪ್ರಾಸಾಯುಧವನ್ನು ಅಪ್ಪಳಿಸಿದಾಗ ಅದು ಗರುಡನ ಮೇಲೆ ಇಂದ್ರ ಪ್ರಯೊಗಿಸಿದ ವಜ್ರಾಯುಧದಂತೆ ವಿಫಲವಾಯಿತು ಎಂಬ ಮತ್ತೊಂದು ಉಪಮೆ ಹೀಗಿದೆ :

ವಿಚೂರ್ಣಿತೋಽಸೌ ತದುರಸ್ಯಭೇದ್ಯೇ ಯಥೈವ ವಜ್ರೋ ವಿಪತೌ ವೃಥಾಽಭವತ್ ॥
(೮/೩೧)

ಗ್ರಂಥದುದ್ದಕ್ಕೂ ಕಂಡುಬರುವ ಇಂತಹ ಪರಿಣಾಮಕಾರಿಯಾದ ಅಲಂಕಾರಗಳ ಬಳಕೆ ಸನ್ನಿವೇಶದ ಸಮಗ್ರಗ್ರಹಿಕೆಗೆ ನೀಡುವ ನೆರವು ಅಪಾರ.

೨೪. ಹರಿಸರ್ವೋತ್ತಮತ್ವದ ಪ್ರತಿಪಾದನೆ

ವೇದಾದಿಸಮಸ್ತಶಾಸ್ತ್ರಗಳ ಒಟ್ಟು ಹೃದಯ ವಿಷ್ಣುಸರ್ವೋತ್ತಮತ್ವದ ಪ್ರತಿಪಾದನೆ. ರಾಮಾಯಣ, ಮಹಾಭಾರತಗಳಂತೂ ಮೇಲ್ನೋಟಕ್ಕೇ ವಿಷ್ಣುಪರಕೃತಿಗಳು. ರಾಮಾಯಣದ ರಾಮ, ಮಹಾಭಾರತದ ಕೃಷ್ಣ ಇಬ್ಬರೂ ವಿಷ್ಣುವಿನ ಅವತಾರ. ಅವರ ಮಹಿಮೆ ಹೇಳುವ ಅವೆರಡೂ ವೈಷ್ಣವಕೃತಿಗಳೇ. ಭಾಗವತಾದಿಪುರಾಣಗಳು ವಿಷ್ಣುವಿನ ಅವತಾರಗಳನ್ನೇ ವರ್ಣಿಸುವ ವೈಷ್ಣವಪುರಾಣಗಳು. ಇತರ ಯಾವುದೇ ಮೂಲಕೃತಿಯಲ್ಲೂ ಸಹ ಮೂಲತಃ ವಿಷ್ಣುಸರ್ವೋತ್ತಮತ್ವವೇ ಪ್ರತಿಪಾದಿತವಾಗಿದೆ. ಭಾರತೀಯ ತತ್ತ್ವಶಾಸ್ತ್ರದ ಶಿಖರ ಭಗವದ್ಗೀತೆ ಶ್ರೀಕೃಷ್ಣನ ಉಪದೇಶ. ಅವನು ಭಗವಂತನಾದ್ದರಿಂದಲೇ

ಅದು ಭಗವದ್ಗೀತೆ. ಸರ್ವಶ್ರೇಷ್ಠ ಸ್ತೋತ್ರವಾದ ವಿಷ್ಣುಸಹಸ್ರನಾಮ ಹೆಸರಿಂದಲೇ ಸೂಚಿತವಾಗುವಂತೆ ವಿಷ್ಣುಪರಕೃತಿ. ಆಪಾತತಃ ಕೆಲವೆಡೆ ಅನ್ಯದೇವತಾಪಾರಮ್ಯ ಕಂಡುಬಂದರೂ, ಪೂರ್ವಾಪರ ಸಮನ್ವಯ ಮಾಡಿಕೊಂಡಾಗ ಮೂಲತಃ ವಿಷ್ಣು-ಪಾರಮ್ಯವೇ ಸಕಲಶಾಸ್ತ್ರಗಳ ಮಹಾತಾತ್ಪರ್ಯ ಎಂಬುದು ಅವರ ಸ್ಪಷ್ಟ ನಿರೂಪಣೆ.

ರಾಮಾಯಣದಲ್ಲಿ ರಾಮಭಕ್ತರಲ್ಲಿ ಹಿರಿಯ ಹನುಮಂತ, ಸುಗ್ರೀವ ಮೊದಲಾದ ಎಲ್ಲರೂ ಸಹ ಹನುಮಂತನಿಂದ ಉಪಕೃತರು. ಅವನ ಮೂಲಕವೇ ಶ್ರೀರಾಮನ ಕೃಪೆಗೆ ಪಾತ್ರರಾದವರು. ಮಹಾಭಾರತದಲ್ಲಿ ಕೃಷ್ಣಸೇವಕರಲ್ಲಿ ಭೀಮಸೇನನದು ಅಗ್ರಸ್ಥಾನ. ಅರ್ಜುನ ಮೊದಲಾದ ಎಲ್ಲ ಸಾತ್ತ್ವಿಕರು ಆತನನ್ನು ಅವಲಂಬಿಸಿ, ಯಶಸ್ಸನ್ನು ಕಂಡವರು. ದುರ್ಯೋಧನ, ಜರಾಸಂಧ ಮೊದಲಾದಂತಹ ಮಹಾಖಳರು ಭೀಮನಿಂದಲೇ ಹತರಾದವರು. ಎಂದರೆ ಈ ಹನುಮಂತ, ಭೀಮಸೇನರಿಬ್ಬರೂ ಜೀವೋತ್ತಮನಾದ ಶ್ರೀವಾಯುದೇವರ ಅವತಾರ. ಇವರಿಬ್ಬರಿಂದಲೂ ಆರಾಧ್ಯನಾದ ಶ್ರೀರಾಮ, ಶ್ರೀಕೃಷ್ಣ ಇಬ್ಬರೂ ಮಹಾವಿಷ್ಣುವಿನ ಅವತಾರ. ಹೀಗೆ ಜೀವೋತ್ತಮರಾದ ಶ್ರೀವಾಯುದೇವರಿಂದ ವಂದ್ಯನೆಂಬ ಕಾರಣಕ್ಕೂ ಸಹ ಶ್ರೀವಿಷ್ಣುವಿನ ಸರ್ವೋತ್ತಮತ್ವ ಸಿದ್ಧವಾಗುತ್ತದೆ ಎಂಬುದನ್ನು ಮನೋಜ್ಞವಾಗಿ ಪ್ರತಿಪಾದಿಸಿರುವರು :

ನಿರ್ಣಯಃ ಸರ್ವಶಾಸ್ತ್ರಾಣಾಂ ಸದೃಷ್ಟಾಂತೋ ಹಿ ಭಾರತೇ ।
ಕೃತೋ ವಿಷ್ಣುವಶತ್ವಂ ಹಿ ಬ್ರಹ್ಮಾದೀನಾಂ ಪ್ರಕಾಶಿತಮ್ ॥
ಯತಃ ಕೃಷ್ಣವಶೇ ಸರ್ವೇ ಭೀಮಾದ್ಯಾಃ ಸಮ್ಯಗೀರಿತಾಃ ।
ಸರ್ವೇಷಾಂ ಜ್ಞಾನದೋ ವಿಷ್ಣುಃ ಯಶೋದಾತೇತಿ ಚೋದಿತಃ ॥
ಯಸ್ಮಾತ್ ವ್ಯಾಸಾತ್ಮನಾ ತೇಷಾಂ ಭಾರತೇ ಯಶ ಊಚಿವಾನ್ ।
ಜ್ಞಾನದಶ್ಚ ಶುಕಾದೀನಾಂ ಬ್ರಹ್ಮರುದ್ರಾದಿರೂಪಿಣಾಮ್ ॥ (೨/೧೨-೧೪)

೨೫. ಇತಿಹಾಸಪುರಾಣಗಳ ವಿವೇಚನೆಗೆ ಮಾರ್ಗದರ್ಶನ

ಇತಿಹಾಸಪುರಾಣಪ್ರಪಂಚ ಅತ್ಯಂತ ಗಹನವಾದುದು :

''ಯದಿ ವಿದ್ಯಾಚ್ಚತುರ್ವೇದಾನ್ ಸಾಂಗೋಪನಿಷದಾನ್ ದ್ವಿಜಃ ।
ನ ಚೇತ್ ಪುರಾಣಂ ಸಂವಿದ್ಯಾನ್ನೈವ ಸ ಸ್ಯಾದ್ ವಿಚಕ್ಷಣಃ ॥''

ಅದರ ಪರಿಜ್ಞಾನವಿಲ್ಲದೆ ವೇದೋಪನಿಷತ್ತುಗಳ ಅರ್ಥನಿರ್ಣಯವಂತೂ ಅಶಕ್ಯ :

''ಇತಿಹಾಸಪುರಾಣಾಭ್ಯಾಂ ವೇದಂ ಸಮುಪಬೃಂಹಯೇತ್ ।
ಬಿಭೇತ್ಯಲ್ಪಶ್ರುತಾದ್ ವೇದೋ ಮಾಮಯಂ ಪ್ರಚಲಿಷ್ಯತಿ ॥''

ಅಂದರೆ ಇತಿಹಾಸಪುರಾಣಗಳು ಒಂದರ್ಥದಲ್ಲಿ ಸಮಗ್ರವೈದಿಕಸಾಹಿತ್ಯದ ಭಾಷ್ಯ. ಆದರೆ ತನ್ನ ಜಟಿಲತೆಯಿಂದಾಗಿ ಇತಿಹಾಸಪುರಾಣಪ್ರಪಂಚ ತೆರೆದುಕೊಳ್ಳುವುದು ದುರ್ಲಭ. ಈ ನಿಟ್ಟಿನಲ್ಲಿ ಮಹಾಭಾರತತಾತ್ಪರ್ಯನಿರ್ಣಯದ ಕೊಡುಗೆ ಅಪಾರ. ಈ ಮೊದಲೇ ಹೇಳಿರುವಂತೆ ಅದು ಸಮಗ್ರ ಇತಿಹಾಸಪುರಾಣಗಳ ಭಾಷ್ಯ. ಇತಿಹಾಸ

ಪುರಾಣಗಳ ಅರ್ಥಗಳನ್ನು ನಿರ್ಣಯಿಸುವುದರ ಜೊತೆಗೆ ನಿರ್ಣಯಕ್ಕೆ ಮಾರ್ಗದರ್ಶಕ-ವಾದ ಸೂತ್ರಗಳನ್ನು ಸಹ ನೀಡಿರುವುದು ಈ ಕೃತಿಯ ಮತ್ತೊಂದು ಹಿರಿಮೆ:

ನಿರ್ಣಯಾಯೈವ ಯತ್ ಪ್ರೋಕ್ತಂ ಬ್ರಹ್ಮಸೂತ್ರಂ ತು ವಿಷ್ಣುನಾ ।
ವ್ಯಾಸರೂಪೇಣ ತದ್ಗ್ರಾಹ್ಯಂ ತತ್ರೋಕ್ತಾಃ ಸರ್ವನಿರ್ಣಯಾಃ ॥
ಯಥಾರ್ಥವಚನಾನಾಂ ಚ ಮೋಹಾರ್ಥಾನಾಂ ಚ ಸಂಶಯಮ್ ।
ಅಪನೇತುಂ ಹಿ ಭಗವಾನ್ ಬ್ರಹ್ಮಸೂತ್ರಮಚೀಕ್ಲೃಪತ್ ॥
ತಸ್ಮಾತ್ ಸೂತ್ರಾರ್ಥಮಾಗೃಹ್ಯ ಕರ್ತವ್ಯಃ ಸರ್ವನಿರ್ಣಯಃ ।
ಸರ್ವದೋಷವಿಹೀನತ್ವಂ ಗುಣೈಃ ಸರ್ವೈರುದೀರ್ಣತಾ ॥ (೧/೪೨-೪೪)

ವ್ಯತ್ಯಾಸಾಸ್ತ್ವೇವಮಾದ್ಯಾಶ್ಚ ಪ್ರಾತಿಲೋಮ್ಯಾದಯಸ್ತಥಾ ॥
ದೃಶ್ಯಂತೇ ಭಾರತಾದ್ಯೇಷು ಲಕ್ಷಣಗ್ರಂಥತಶ್ಚ ತೇ ।
ಜ್ಞಾಯಂತೇ ಬಹುಭಿರ್ವಾಕ್ಯೈಃ ನಿರ್ಣಯಗ್ರಂಥತಸ್ತಥಾ ॥
ತಸ್ಮಾದ್ವಿನಿರ್ಣಯಗ್ರಂಥಾನಾಶ್ರಿತ್ಯೈವ ಚ ಲಕ್ಷಣಮ್ ।
ಬಹುವಾಕ್ಯಾನುಸಾರೇಣ ನಿರ್ಣಯೋಽಯಂ ಮಯಾ ಕೃತಃ ॥
ಉಕ್ತಂ ಲಕ್ಷಣಶಾಸ್ತ್ರೇ ಚ ಕೃಷ್ಣದ್ವೈಪಾಯನೋದಿತೇ ।
ತ್ರಿಭಾಷಾಂ ಯೋ ನ ಜಾನಾತಿ ರೀತೀನಾಂ ಶತಮೇವ ಚ ॥
ವ್ಯತ್ಯಾಸಾದೀನ್ ಸಪ್ತಭೇದಾನ್ ವೇದಾದ್ಯರ್ಥಂ ತಥಾ ವದೇತ್ ।
ಸ ಯಾತಿ ನಿರಯಂ ಘೋರಮನ್ಯಥಾಜ್ಞಾನಸಂಭವಮ್ ।
ಇತ್ಯನ್ಯೇಷು ಚ ಶಾಸ್ತ್ರೇಷು ತತ್ರ ತತ್ರೋದಿತಂ ಬಹು ॥
ವ್ಯತ್ಯಾಸಃ ಪ್ರಾತಿಲೋಮ್ಯಂ ಚ ಗೋಮೂತ್ರೀ ಪ್ರಘಸಸ್ತಥಾ ।
ಉಕ್ಷಣಃ ಸುಧುರಃ ಸಾಧು ಸಪ್ತ ಭೇದಾಃ ಪ್ರಕೀರ್ತಿತಾಃ ॥
ಇತ್ಯಾದಿಲಕ್ಷಣಾನ್ಯತ್ರ ನೋಚ್ಯಂತೇಽನ್ಯಪ್ರಸಂಗತಃ ।
ಅನುಸಾರೇಣ ತೇಷಾಂ ತು ನಿರ್ಣಯಃ ಕ್ರಿಯತೇ ಮಯಾ ।(೯/೧೩೫-೧೪೧)

ಭಾಷಾಸ್ತು ತ್ರಿವಿಧಾಸ್ತತ್ರ ಮಯಾ ವೈ ಸಂಪ್ರದರ್ಶಿತಾಃ ॥
ಉಕ್ತೋ ಯೋ ಮಹಿಮಾ ವಿಷ್ಣೋಃ ಸ ತೂಕ್ತೋ ಹಿ ಸಮಾಧಿನಾ ।
ಶೈವದರ್ಶನಮಾಲಂಬ್ಯ ಕ್ವಚಿಚ್ಛೈವೀ ಕಥೋದಿತಾ ॥
ಸಮಾಧಿಭಾಷಯೋಕ್ತಂ ಯತ್ ತತ್ ಸರ್ವಂ ಗ್ರಾಹ್ಯಮೇವ ಹಿ ।
ಅವಿರುದ್ಧಂ ಸಮಾಧೇಸ್ತು ದರ್ಶನೋಕ್ತಂ ಚ ಗೃಹ್ಯತೇ ॥
ಆದ್ಯಂತಯೋರ್ವಿರುದ್ಧಂ ಯದ್ದರ್ಶನಂ ತದುದಾಹೃತಮ್ ।
ದರ್ಶನಾಂತರಸಿದ್ಧಂ ಚ ಗುಹ್ಯಭಾಷಾಽನ್ಯಥಾ ಭವೇತ್ ॥ (೨/೧೧೯-೧೨೧)

ಎಂದರೆ "ಬ್ರಹ್ಮಸೂತ್ರ ಮೊದಲಾದಂತಹ ನಿರ್ಣಾಯಕಶಾಸ್ತ್ರಗಳ ಅಧ್ಯಯನ, ಉಪಕ್ರಮ, ಉಪಸಂಹಾರ, ಅರ್ಥವಾದ, ಉಪಪತ್ತಿ ಅಭ್ಯಾಸ, ಅಪೂರ್ವತಾ, ಫಲ ಎಂಬ ಷಡ್ವಿಧತಾತ್ಪರ್ಯನಿರ್ಣಯಗಳ ಅಳವಡಿಕೆ, ಸಮಾಧಿ, ದರ್ಶನ ಮತ್ತು ಗುಹ್ಯ ಎಂಬ ಭಾಷಾತ್ರಯದ ವಿವೇಚನೆ, ವೈದರ್ಭೀ, ಗೌಡೀ, ಪಾಂಚಾಲಿ ಮೊದಲಾದ ಮೂರು

ಶೈಲಿಗಳ ಪರಿಜ್ಞಾನ, ವ್ಯತ್ಯಾಸ, ಪ್ರಾತಿಲೋಮ್ಯ, ಗೋಮೂತ್ರಿ, ಪ್ರಘಸ, ಉಕ್ಷಣ, ಸುಧುರ ಮತ್ತು ಸಾಧು ಎಂಬ ಸಪ್ತವಿಧನಿರೂಪಣಾಪ್ರಭೇದಗಳ ಪರಿಕಲ್ಪನೆ – ಇಷ್ಟೆಲ್ಲ ಪರಿಕರಗಳ ಹಿನ್ನೆಲೆಯಲ್ಲಿ ಮಾತ್ರ ಇತಿಹಾಸಪುರಾಣಗಳ ಹೃದಯವನ್ನು ಅರಿಯಲು ಸಾಧ್ಯ'' ಎಂದರ್ಥ. ಈ ದೃಷ್ಟಿಕೋನ ಸಮಗ್ರ ವಿಮರ್ಶನಪ್ರಪಂಚಕ್ಕೇ ಆಚಾರ್ಯ ಶ್ರೀಮಧ್ವರ ವಿನೂತನ ಕೊಡುಗೆ.

೨೬. ಪಾತ್ರಚಿತ್ರಣ

ಮಹಾಭಾರತ ತನ್ನ ತತ್ತ್ವ ಹಾಗೂ ಕಥೆಗಳಿಂದ ವಿಶ್ವದ ಅನುಪಮಕೃತಿ-ಯಾಗಿರುವಂತೆ, ಅಪೂರ್ವಪಾತ್ರಪ್ರಪಂಚದಿಂದಾಗಿಯೂ ಅದ್ವಿತೀಯವೆನ್ನಿಸಿದೆ. ಕುರು-ಕುಲಪಿತಾಮಹರೆನ್ನಿಸಿದ ಭೀಷ್ಮ, ಕುರುಪಾಂಡವರು ಮೊದಲಾಗಿ ಸಮಸ್ತಕ್ಷತ್ರಿಯವೃಂದದ ಆಚಾರ್ಯರೆನ್ನಿಸಿದ ದ್ರೋಣ, ಧರ್ಮಸ್ವರೂಪನೆನ್ನಿಸಿದ ರಾಜ ಯುಧಿಷ್ಠಿರ, ಅಪ್ರತಿಮ ಧನುರ್ಧಾರಿ ಎನ್ನಿಸಿದ ಅರ್ಜುನ, ಮೇಲ್ನೋಟಕ್ಕೆ ಪಂಚಪತಿಗಳನ್ನು ಹೊಂದಿದ್ದಂತೆ ಕಂಡರೂ ವಿಶ್ವದ ಅಗ್ರಮಾನ್ಯ ಪತಿವ್ರತಾಶಿರೋಮಣಿಯೆನ್ನಿಸಿದ ದ್ರೌಪದೀ, ಸ್ವತಃ ಸೂರ್ಯಾವತಾರನಾಗಿಯೂ ಜೀವನ ಪೂರ್ತಿ ದುರ್ಯೋಧನಾದಿದುಷ್ಟಶಕ್ತಿಗಳ ಗ್ರಹಣಕ್ಕೆ ಒಳಗಾದ ಕರ್ಣ, ಪುತ್ರವ್ಯಾಮೋಹದಿಂದಾಗಿ ಒಳಗೂ ಕುರುಡಾಗಿದ್ದ ಧೃತರಾಷ್ಟ್ರ, ತನ್ನ ಮಕ್ಕಳನ್ನು ಸಾತ್ತ್ವಿಕ ಮಾರ್ಗದಲ್ಲಿಯೇ ಪೂರ್ಣ ಅಭ್ಯುದಯ ಕಾಣಲು ಪ್ರಯತ್ನಿಸಿ ಯಶಸ್ವಿಯಾದ ಕುಂತೀ, ದುರ್ಯೋಧನಾದಿದುಷ್ಟಕೌರವರ ತಾಯಿಯೆನ್ನಿಸಿಕೊಂಡು ವ್ಯಾಮೋಹಕ್ಕೆ ಬೀಳದೆ ಧರ್ಮಪ್ರಜ್ಞೆಯನ್ನು ಮೆರೆದ ಗಾಂಧಾರಿ, ಎಲ್ಲಕ್ಕೂ ಮಿಗಿಲಾಗಿ ಸಮಸ್ತದುಷ್ಟಕೂಟಕ್ಕೆ ಸಿಂಹಸ್ವಪ್ನವಾಗಿ ಮೆರೆದ ಭೀಮಸೇನ, ಸಮಗ್ರಕಾರ್ಯಗಳ ಸೂತ್ರಧಾರನಾದ ಭಗವಂತ ಶ್ರೀಕೃಷ್ಣ - ಹೀಗೆ ಇಲ್ಲಿಯ ಒಂದೊಂದು ಪಾತ್ರವೂ ಅತ್ಯಂತ ವಿಶಿಷ್ಟ. ಇಂತಹ ಪಾತ್ರಗಳ ಹಿರಿಮೆಗರಿಮೆಗಳನ್ನು ದುಷ್ಟಪಾತ್ರಗಳ ದುರ್ಗುಣಗಳನ್ನು ಮೂಲಕೃತಿಯ ಬೆಳಕಿನಲ್ಲಿ ಸಮಗ್ರವಾಗಿ ವಿವೇಚಿಸುವ ಅಸಾಮಾನ್ಯಕೃತಿ ಎಂಬುದಾಗಿಯೂ ಮಹಾಭಾರತತಾತ್ಪರ್ಯನಿರ್ಣಯ ಅತಿಮುಖ್ಯವೆನ್ನಿಸುವ ಕೃತಿ.

ಪಾಂಡುರಾಜ, ಅರ್ಜುನ, ದ್ರೋಣ ಮೊದಲಾದವರ ಹಿರಿಮೆಗಳನ್ನು ಸೂಕ್ತ ವಿಶೇಷಣಗಳ ಮೂಲಕ ಚಿತ್ರಿಸುವ ಅವರ ಕೆಲವು ವಾಕ್ಯಗಳನ್ನು ಗಮನಿಸಬಹುದು:

ಪಾಂಡುಶ್ಚ ಪುತ್ರಕಗುಣೈಃ ಸ್ವಗುಣೈಶ್ಚ ಸಾಕ್ಷಾ-
ತ್ಕೃಷ್ಣಾತ್ಮಜಃ ಸತತಮಸ್ಯ ಪದೈಕಭಕ್ತಃ ।
ಲೋಕಾನವಾಪ ವಿಮಲಾನ್ ಮಹಿತಾನ್ ಮಹದ್ಭಿಃ
ಕಿಂ ಚಿತ್ರಮತ್ರ ಹರಿಪಾದವಿನಮ್ರಚಿತ್ತೇ ॥ (೧೪/೫೪)

ದೇಯಾ ಚ ಕನ್ಯಾ ನಾಸ್ತಿ ಪಾರ್ಥೇನ ತುಲ್ಯೋ
ವರೋಽಸ್ಮಾಕಂ ಕೌರವೇಯಶ್ಚ ಪಾರ್ಥಃ ।
ಪೌತ್ರಶ್ಚ ಕೃಷ್ಣಸ್ಯ ಸುಪೂರ್ಣಶಕ್ತೇಃ
ಪೈತೃಷ್ವಸೇಯೋ ವೀರತಮೋ ಗುಣಾಢ್ಯಃ ॥ (೨೦/೨೦೨)

ಅಥಾಖಿಲಾನಾಂ ಪೃಥಿವೀಪತೀನಾ-
ಮಾಚಾರ್ಯಮಗ್ರ್ಯಂ ರಥಿನಾಂ ಸುವಿದ್ಯಮ್ ।
ರಾಮಸ್ಯ ವಿಶ್ವಾಧಿಪತೇಃ ಸುಶಿಷ್ಯಂ
ಚಕ್ರೇ ಚಮೂಪಂ ಧೃತರಾಷ್ಟ್ರಪುತ್ರಃ ॥ (೨೬/೧)

೨೭. ದೇವತಾತಾರತಮ್ಯದ ವಿವೇಚನೆ

ರಾಮಾಯಣ, ಮಹಾಭಾರತಗಳ ಕಥೆಯಲ್ಲಿನ ವಿವಿಧಪಾತ್ರಗಳು ವರ್ತಿಸುವ ಪರಿಯಲ್ಲಿ ಆ ಪಾತ್ರಗಳ ಸ್ವರೂಪಯೋಗ್ಯತೆ ಪ್ರತಿಫಲಿತವಾಗಿದ್ದು, ಅವುಗಳ ತಾರತಮ್ಯವೂ ಸಹ ಸ್ಫುಟಪಡುತ್ತದೆ. ಮೂಲಗ್ರಂಥಗಳಲ್ಲಿ ಪ್ರತಿಪಾದಿತವಾದ ದೇವತಾತಾರತಮ್ಯ ಹಾಗೂ ದೈತ್ಯತಾರತಮ್ಯಗಳು ಉದ್ದಕ್ಕೂ ಕಂಡುಬರುತ್ತದೆ ಎಂಬುದನ್ನು ಸಹ ಸಮಗ್ರವಿವೇಚಿಸುವ ಕೃತಿಯಾಗಿಯೂ ಮಹಾಭಾರತತಾತ್ಪರ್ಯನಿರ್ಣಯ ಅತ್ಯಂತ ಗಮನಾರ್ಹ. ಇತಿಹಾಸ-ಪುರಾಣಗಳ ಸಕಲ ಆಖ್ಯಾನ, ಉಪಾಖ್ಯಾನಗಳಿಗೂ ಈ ದೇವತಾತಾರತಮ್ಯ-ದಲ್ಲಿಯೇ ಮಹಾತಾತ್ಪರ್ಯ. ತಾರತಮ್ಯದಲ್ಲಿ ವ್ಯತ್ಯಾಸವಾದಂತೆ ಕಂಡುಬರುವ ಪ್ರಸಂಗಗಳನ್ನು ಅವರು ವಿಶ್ಲೇಷಿಸಿ, ಅಲ್ಲಿಯ ಆಂತರ್ಯವನ್ನು ಸ್ಫುಟಪಡಿಸಿರುವರು :

ಬಲದೇವಸ್ತತಃ ಪಶ್ಚಾತ್ ತತಃ ಪಶ್ಚಾಚ್ಚ ಫಲ್ಗುನಃ ।
ನರಾವೇಶಾದನ್ಯಥಾ ತು ದ್ರೌಣಿಃ ಪಶ್ಚಾತ್ ತತೋಽಪರೇ ॥ (೨/೪೩)

ಅಕ್ಷಯಾವಿಷುಧೀ ದಿವ್ಯೌ ಧ್ವಜೋ ವಾನರಲಕ್ಷಣಃ ।
ಗಾಂಡೀವಂ ಧನುಷಾಂ ಶ್ರೇಷ್ಠಂ ತೇನ ದ್ರೌಣೇರ್ವರೋಽರ್ಜುನಃ ॥ (೨/೧೭೮)

೨೮. ತಾತ್ತ್ವಿಕವಿಶ್ಲೇಷಣೆ

ಇತಿಹಾಸಪುರಾಣಗಳು ಮೂಲತಃ ಆಧ್ಯಾತ್ಮಿಕಮೌಲ್ಯಗಳ ವಿವೇಚನೆಯಾಗಿದೆ. ಮಹಾಭಾರತದ ಆಧ್ಯಾತ್ಮಿಕಮೌಲ್ಯ ಮೇಲ್ನೋಟಕ್ಕೆ ಅತಿಸ್ಪಷ್ಟ ಎಂದು ತೋರಿಸುತ್ತ ಅವುಗಳನ್ನು ಅವರು ತೆರೆದಿಟ್ಟಿರುವ ರೀತಿ ಅನನ್ಯವಾದುದು.

ಮಹಾಭಾರತದ ತಾತ್ತ್ವಿಕ ಮೌಲ್ಯದ ಬಗ್ಗೆ ಗಮನಹರಿಸಿದ ಆಧುನಿಕ ವಿದ್ವಾಂಸರಾದ ಡಾ॥ವಿ.ಎಸ್.ಸುಕ್ಥಂಕರ್ ಅವರು, ಮಹಾಭಾರತದ ತಾತ್ತ್ವಿಕವಿವೇಚನೆಯ ಬಗ್ಗೆ ಮೊದಲ ಬಾರಿಗೆ ಬೆಳಕು ಚೆಲ್ಲಿದ ಶ್ರೇಯಸ್ಸು ಮಹಾಮಹಿಮರಾದ ಶ್ರೀಆನಂದತೀರ್ಥರದು ಎಂದು ತುಂಬ ಗೌರವದಿಂದ ಉಲ್ಲೇಖಿಸಿರುವರು :

.... I will only mention that this is no new discovery of mine, but that such psychological and metaphysical explanations of the characters and the plot of the Mahābhārata are scattered in the ancient Indian commentaries of the epic, the best known among them being the Mahābhārata-tātparya-nirṇaya of Ānandatīrtha, the great

Madhvācārya, who has clearly stated in that work that the story of the Great Epic has been related in such a way as to convey also an allegorical meaning :

evam adhyātmaniṣṭhaṁ hi Bhāratam sarvam ucyate /
durvijñeyam ataḥ sarvair Bhāratam tu surair api //

Ānandatīrtha explains the symbolism by giving the psychological concepts corresponding to many of the important characters, differing partly from those given by me. ....

- On the Meaning of the Mahābhārata[೧]

ಮಹಾಭಾರತತಾತ್ಪರ್ಯನಿರ್ಣಯ ನೀಡಿರುವ ಆಧ್ಯಾತ್ಮಿಕ ತತ್ತ್ವವಿವೇಚನೆಯ ಸಂಗ್ರಹ ಹೀಗಿದೆ :

ಭಕ್ತಿರ್ಜ್ಞಾನಂ ಸವೈರಾಗ್ಯಂ ಪ್ರಜ್ಞಾ ಮೇಧಾ ಧೃತಿಃ ಸ್ಥಿತಿಃ ।
ಯೋಗಃ ಪ್ರಾಣೋ ಬಲಂ ಚೈವ ವೃಕೋದರ ಇತಿ ಸ್ಮೃತಃ ॥
ಏತದ್ದಶಾತ್ಮಕೋ ವಾಯುಸ್ತಸ್ಮಾದ್ಭೀಮಸ್ತದಾತ್ಮಕಃ ।
ಸರ್ವವಿದ್ಯಾ ದ್ರೌಪದೀ ತು ಯಸ್ಮಾತ್ ಸೈವ ಸರಸ್ವತೀ ॥
ಅಜ್ಞಾನಾದಿಸ್ವರೂಪಸ್ತು ಕಲಿರ್ದುರ್ಯೋಧನಃ ಸ್ಮೃತಃ ।
ವಿಪರೀತಂ ತು ಯಜ್ಜ್ಞಾನಂ ದುಶ್ಶಾಸನ ಇತೀರಿತಃ ॥
ನಾಸ್ತಿಕ್ಯಂ ಶಕುನಿರ್ನಾಮ ಸರ್ವದೋಷಾತ್ಮಕಾಃ ಪರೇ ।
ಧಾರ್ತರಾಷ್ಟ್ರಾಸ್ತ್ವಹಂಕಾರೋ ದ್ರೌಣೀ ರುದ್ರಾತ್ಮಕೋ ಯತಃ ॥
ದ್ರೋಣಾದ್ಯಾ ಇಂದ್ರಿಯಾಣ್ಯೇವ ಪಾಪಾನ್ಯನ್ಯೇ ತು ಸೈನಿಕಾಃ ।
ಪಾಂಡವೇಯಾಶ್ಚ ಪುಣ್ಯಾನಿ ತೇಷಾಂ ವಿಷ್ಣುರ್ನಿಯೋಜಕಃ ॥
ಏವಮಧ್ಯಾತ್ಮನಿಷ್ಠಂ ಹಿ ಭಾರತಂ ಸರ್ವಮುಚ್ಯತೇ ।
ದುರ್ವಿಜ್ಞೇಯಮತಃ ಸರ್ವೈರ್ಭಾರತಂ ತು ಸುರೈರಪಿ ॥
ಸ್ವಯಂ ವ್ಯಾಸೋ ಹಿ ತದ್ವೇದ ಬ್ರಹ್ಮಾ ವಾ ತತ್ಪ್ರಸಾದತಃ ।
ತಥಾಽಪಿ ವಿಷ್ಣುಪರತಾ ಭಾರತೇ ಸಾರಸಂಗ್ರಹಃ ॥
ಇತ್ಯಾದಿ ವ್ಯಾಸವಾಕ್ಯೈಸ್ತು ವಿಷ್ಣೂತ್ಕರ್ಷೋಽವಗಮ್ಯತೇ ।
ವಾಯ್ವಾದೀನಾಂ ಕ್ರಮಶ್ಚೈವ ತದ್ವಾಕ್ಯೈರೇವ ಚಿಂತ್ಯತೇ ॥(೨/೧೪೧-೧೪೮)

೨೯. ವಿಮರ್ಶೆಯ ಸೂತ್ರಗಳು

ಮಹಾಭಾರತದ ಪಾತ್ರಗಳ ವಿಮರ್ಶೆಗೆ ನೆರವಾಗುವ ಮೂಲಭೂತ ವಿವೇಚನಾ-ಸರಣಿಯನ್ನು ಈ ಕೃತಿ ಒದಗಿಸುತ್ತದೆ. ಬ್ರಾಹ್ಮಣರ ಹಿರಿಮೆಯನ್ನು ಅವರ ಜ್ಞಾನದಿಂದಲೂ, ಕ್ಷತ್ರಿಯರ ಹಿರಿಮೆಯನ್ನು ಅವರ ಬಾಹುಬಲದಿಂದಲೂ, ಸ್ತ್ರೀಯರ ತಾರತಮ್ಯವನ್ನು ಅವರ

---

೧. Pub : Asiatic Society of Bombay, Town hall, Bombay, 1957.

ರೂಪಸಂಪತ್ತಿನಿಂದಲೂ ನಿರ್ಣಯಿಸಬೇಕು ಎಂಬ ಅವರ ವಿವೇಚನೆ ತೀರ ವಿನೂತನವಾದುದು. ಇಂತಹ ವಿವೇಚನೆಗೆ ನೆರವಾಗುವ ಜ್ಞಾನ, ಬಲ ರೂಪಗಳು ಸ್ವಾಭಾವಿಕವಾಗಿರಬೇಕೇ ಹೊರತು, ವರ, ಶಸ್ತ್ರಗಳಿಂದಾಗಿ ಬಂದವುಗಳಾಗಿರಬಾರದು ಎಂಬ ಎಚ್ಚರವನ್ನೂ ಅವರು ನೀಡಿರುವರು :

ಯೋ ಯ ಏವ ಬಲಜ್ಯೇಷ್ಠಃ ಕ್ಷತ್ರಿಯೇಷು ಸ ಉತ್ತಮಃ ।
ಅಂಗಂ ಚೇದ್ವಿಷ್ಣುಕಾರ್ಯೇಷು ತದ್ಭಕ್ತ್ಯೈವ ನ ಚಾನ್ಯಥಾ ॥
ಬಲಂ ನೈಸರ್ಗಿಕಂ ತಚ್ಚೇದ್ವರಾಸ್ತ್ರಾದೇಸ್ತದನ್ಯಥಾ ।
ಅನ್ಯಾವೇಶನಿಮಿತ್ತಂ ಚೇದ್ಬಲಮನ್ಯಾತ್ಮಕಂ ಹಿ ತತ್ ॥
ದೇವೇಷು ಬಲಿನಾಮೇವ ಭಕ್ತಿಜ್ಞಾನೇ ನ ಚಾನ್ಯಥಾ ।
ಸ ಏವ ಚ ಪ್ರಿಯೋ ವಿಷ್ಣೋರ್ನಾನ್ಯಥಾ ತು ಕಥಂಚನ ॥
ತಸ್ಮಾದ್ಯೋ ಯೋ ಬಲಜ್ಯೇಷ್ಠಃ ಸ ಗುಣಜ್ಯೇಷ್ಠ ಏವ ಚ ।
ಬಲಂ ಹಿ ಕ್ಷತ್ರಿಯೇ ವ್ಯಕ್ತಂ ಜ್ಞಾಯತೇ ಸ್ಥೂಲದೃಷ್ಟಿಭಿಃ ॥
ಜ್ಞಾನಾದಯೋ ಗುಣಾ ಯಸ್ಮಾತ್ ಜ್ಞಾಯಂತೇ ಸೂಕ್ಷ್ಮದೃಷ್ಟಿಭಿಃ ।
ತಸ್ಮಾದ್ಯತ್ರ ಬಲಂ ತತ್ರ ವಿಜ್ಞಾತವ್ಯಾ ಗುಣಾಃ ಪರೇ ॥
ದೇವೇಷ್ವೇವ ನ ಚಾನ್ಯೇಷು ವಾಸುದೇವಪ್ರತೀಪತಃ ।
ಕ್ಷತ್ರಾದನ್ಯೇಷ್ವಪಿ ಬಲಂ ಪ್ರಮಾಣಂ ಯತ್ರ ಕೇಶವಃ ।
ಪ್ರವೃತ್ತೋ ದುಷ್ಟನಿಧನೇ ಜ್ಞಾನಕಾರ್ಯೇ ತದೈವ ಚ ॥
ಅನ್ಯತ್ರ ಬ್ರಾಹ್ಮಣಾನಾಂ ತು ಪ್ರಮಾಣಂ ಜ್ಞಾನಮೇವ ಹಿ ।
ಕ್ಷತ್ರಿಯಾಣಾಂ ಬಲಂ ಚೈವ ಸರ್ವೇಷಾಂ ವಿಷ್ಣುಕಾರ್ಯತಾ ॥(೨/೧೭-೨೩)

ಯತ್ರ ರೂಪಂ ತತ್ರ ಗುಣಾಃ ಭಕ್ತ್ಯಾದ್ಯಾಃ ಸ್ತ್ರೀಷು ನಿತ್ಯಶಃ ।
ರೂಪಂ ಹಿ ಸ್ಥೂಲದೃಷ್ಟೀನಾಂ ದೃಶ್ಯಂ ವ್ಯಕ್ತಂ ತತೋ ಹಿ ತತ್ ॥
ಪ್ರಾಯೋ ವೇತ್ತುಂ ನ ಶಕ್ಯಂತೇ ಭಕ್ತ್ಯಾದ್ಯಾಃ ಸ್ತ್ರೀಷು ಯತ್ ತತಃ ।
ಯಾಸಾಂ ರೂಪಂ ಗುಣಾಸ್ತಾಸಾಂ ಭಕ್ತ್ಯಾದ್ಯಾ ಇತಿ ನಿಶ್ಚಯಃ ॥
ತಚ್ಚ ನೈಸರ್ಗಿಕಂ ರೂಪಂ ದ್ವಾತ್ರಿಂಶಲ್ಲಕ್ಷಣೈರ್ಯುತಮ್ ।
ನಾಲಕ್ಷಣಂ ವಪುರ್ಮಾತ್ರಂ ಗುಣಹೇತುಃ ಕಥಂಚನ ॥
ಆಸುರೀಣಾಂ ವರಾದೇಸ್ತು ವಪುರ್ಮಾತ್ರಂ ಭವಿಷ್ಯತಿ ।
ನ ಲಕ್ಷಣಾನ್ಯತಸ್ತಾಸಾಂ ನೈವ ಭಕ್ತಿಃ ಕಥಂಚನ ॥ (೨/೩೭-೪೧)

೩೦. ಪ್ರಮಾಣೋದಾಹರಣೆ

ಆಚಾರ್ಯರ ಇತರ ಕೃತಿಗಳಂತೆ ಈ ಕೃತಿಯೂ ಪ್ರಮಾಣೋದಾಹರಣೆಗಳಿಂದ ತುಂಬಿದೆ. ತಾವು ಹೇಳುವ ಪ್ರತಿ ವಿಚಾರವನ್ನು ಸಹ ಸೂಕ್ತಪ್ರಮಾಣದೊಂದಿಗೆ ದೃಢಪಡಿಸುವ ಅವರ ಅಪೂರ್ವಶೈಲಿ ವಿಮರ್ಶನಪ್ರಪಂಚದ ಮತ್ತೊಂದು ಅದ್ಭುತ. ತಾತ್ಪರ್ಯನಿರ್ಣಯದ ಮೊದಲೆರಡು ಅಧ್ಯಾಯಗಳ ಬಹುಭಾಗ ಮೂಲತಃ ಇಂತಹ

ಪ್ರಮಾಣಸಂಗ್ರಹವೇ ಆಗಿದೆ. ಕಥಾನಿರೂಪಣೆಯ ಪ್ರಸಂಗದಲ್ಲೂ ಅವರು ಮೂಲದಲ್ಲಿ ಬಳಕೆಯಾದ ಪದಗಳನ್ನೇ ಪ್ರಧಾನವಾಗಿ ಅಳವಡಿಸಿಕೊಂಡಿರುವುದು ಕೃತಿಯನ್ನು ಪಾರದರ್ಶಕವನ್ನಾಗಿಸಿದ್ದು, ಜಿಜ್ಞಾಸುಗಳಿಗೆ ಅತ್ಯಂತ ಉಪಕಾರಕವೆನ್ನಿಸಿದೆ.

ತಾತ್ಪರ್ಯನಿರ್ಣಯೋದಾಹೃತಪ್ರಮಾಣಗ್ರಂಥಗಳು :

೧) ಬ್ರಹ್ಮಸೂತ್ರ - ೧/೨೪, ೧/೭೬
೨) ಭವಿಷ್ಯತ್ಪರ್ವ - ೧/೩೦-೪೭, ೭೮-೯೮, ೧೨೭, ೧೨೮, ೨/೧೨೯-೧೩೦
೩) ವರಾಹಪುರಾಣ - ೧/೪೮, ೪೯, ೨೨/೧೬೪, ೧೬೫
೪) ಸ್ಕಂದಪುರಾಣ - ೧/೫೨-೫೬
೫) ಪದ್ಮಪುರಾಣ - ೧/೫೬-೮, ೨೨/೧೫೯, ೧೬೦
೬) ಋಗ್ವೇದ - ೧/೯೯, ೧೨/೧೩೬ ಇತ್ಯಾದಿ
೭) ಅಥರ್ವಣೋಪನಿಷತ್ - ೧/೬೪
೮) ತೈತ್ತಿರೀಯೋಪನಿಷತ್ - ೧/೬೫
೯) ಕಠೋಪನಿಷತ್ - ೧/೭೭
೧೦) ಶ್ವೇತಾಶ್ವತರೋಪನಿಷತ್ - ೧/೧೦೨
೧೧) ಪಂಚರಾತ್ರಮ್ - ೧/೧೨೦-೧೨೬
೧೨) ಬ್ರಹ್ಮಾಂಡಪುರಾಣ - ೨/೯-೫೨, ೨/೧೭೧, ೧೭೨
೧೩) ಮಾರ್ಕಂಡೇಯಪುರಾಣ - ೨/೫೩, ೫೪
೧೪) ವಾಯುಪ್ರೋಕ್ತಮ್ - ೨/೫೫, ೫೬
೧೫) ಭಗವದ್ಗೀತಾ - ೧/ ೨/೮೬-೧೦೭ ಇತ್ಯಾದಿ
೧೬) ಭಾಗವತಪುರಾಣ - ೨/೧೩೧-೧೩೩, ೮/೧೦-೧೨
೧೭) ಬಳಿತ್ಥಾಸೂಕ್ತ - ೨/೧೫೨-೧೫೬
೧೮) ಲಕ್ಷಣಶಾಸ್ತ್ರ - ೮/೧೩೮-೧೪೦
೧೯) ಪೈಂಗಿಶ್ರುತಿಃ - ೨೮/೨೧೫
೨೦) ಮಹಾರಾಮಾಯಣ - ೮/೧೨೫
೨೧) ಮೂಲರಾಮಾಯಣ - ೧/೩೦

೩೧. ಸೂಕ್ತಿಗಳು

ಕೆಲವು ಮುಖ್ಯ ಪ್ರಸಂಗಗಳಿಂದ ಹೊರಹೊಮ್ಮುವ ತತ್ತ್ವಗಳನ್ನು ಆಚಾರ್ಯರು ಸಾರ್ವಕಾಲಿಕ ಮಹತ್ತ್ವದ ಸೂಕ್ತಿಗಳ ರೂಪದಲ್ಲಿ ನಿರೂಪಿಸಿರುವರು. ಶ್ಲೋಕರೂಪವಾಗಿ, ಕೆಲವೊಮ್ಮೆ ಶ್ಲೋಕಭಾಗವಾಗಿ ಪರಿಣಾಮಕಾರಿಯಾಗಿ ನಿರೂಪಿತವಾಗಿರುವಂತಹ ಸೂಕ್ತಿಗಳು ಅಂತಹ ಯಾವುದೇ ಸಂದರ್ಭದಲ್ಲೂ ಸಹ ತತ್ತ್ವಾನ್ವೇಷಣೆಯನ್ನು ಸುಲಭ ಗ್ರಾಹ್ಯವನ್ನಾಗಿಸುವ ಸೂತ್ರಗಳಂತೆ ಅತ್ಯಂತ ಉಪಯುಕ್ತವಾಗುತ್ತವೆ :

ಪ್ರಾಯಃ ಸ್ವಕಾರ್ಯೇ ಪ್ರತಿಪಾದಿತೇ ಹಿ
ಮದೋದ್ಧತಾ ನ ಪ್ರತಿಕರ್ತುಮೀಶತೇ ॥ (೬/೨೯)

ನಿತ್ಯಾತಿದುಃಖಮನಿವೃತ್ತಿಸುಖವ್ಯಪೇತ-
ಮಂಧಂ ತಮೋ ನಿಯತಮೇತಿ ಹರಾವಭಕ್ತಃ ।
ಭಕ್ತೋಽಪಿ ಕಂಜಜಗಿರೀಶಮುಖೇಷು ಸರ್ವ-
ಧರ್ಮಾರ್ಣವೋಽಪಿ ನಿಖಿಲಾಗಮನಿರ್ಣಯೇನ ॥
ಯೋ ವೇತ್ತಿ ನಿಶ್ಚಿತಮತಿರ್ಹರಿಮಬ್ಜಜೇಶ-
ಪೂರ್ವಾಖಿಲಸ್ಯ ಜಗತಃ ಸಕಲೇಽಪಿ ಕಾಲೇ ।
ಸೃಷ್ಟಿಸ್ಥಿತಿಪ್ರಲಯಮೋಕ್ಷದಮಾತ್ಮತಂತ್ರಂ
ಲಕ್ಷ್ಮ್ಯಾ ಅಪೀಶಮತಿಭಕ್ತಿಯುತಃ ಸ ಮುಚ್ಯೇತ್ ॥
ತಸ್ಮಾದನಂತಗುಣಪೂರ್ಣಮಮುಂ ರಮೇಶಂ
ನಿಶ್ಚಿತ್ಯ ದೋಷರಹಿತಂ ಪರಯೈವ ಭಕ್ತ್ಯಾ ।
ವಿಜ್ಞಾಯ ದೈವತಗಣಾಂಶ್ಚ ಯಥಾಕ್ರಮೇಣ
ಭಕ್ತ್ಯಾ ಹರೇರಿತಿ ಸದೈವ ಭಜೇತ ಧೀರಃ ॥ (೧೩/೧೩೩-೧೩೫)

ಧರ್ಮೋ ಹಿ ಸರ್ವವಿದುಷಾಮಪಿ ದೈವತಾನಾಂ
ಪ್ರಾಪ್ತೇ ನರೇಷು ಜನನೇ ನರವತ್ ಪ್ರವೃತ್ತಿಃ ।
ಜ್ಞಾನಾದಿಗೂಹನಮುತಾಧ್ಯಯನಾದಿರತ್ರ
ತಜ್ಜ್ಞಾಪನಾರ್ಥಮವಸದ್ಭಗವಾನ್ ಗುರೌ ಚ ॥ (೧೪/೫)

ಕೃಷ್ಣಾಶ್ರಯೋ ವಸತಿ ಯತ್ರ ಜನೋಽಪಿ ತತ್ರ
ವೃದ್ಧಿರ್ಭವೇತ್ ಕಿಮು ರಮಾಧಿಪತೇರ್ನಿವಾಸೇ ।
ವೃಂದಾವನಂ ಯದಧಿವಾಸತ ಆಸ ಸಂಧ್ಯಜ್
ಮಾಹೇಂದ್ರಸದ್ಮಸದೃಶಂ ಕಿಮು ತತ್ರ ಪುರ್ಯಾಂ॥ (೧೪/೭)

ನಿತ್ಯಪ್ರಭೂತಸುಶುಭಪ್ರತಿಭೋಽಪಿ ವಿಷ್ಣೋಃ
ಶ್ರುತ್ವಾ ಪರಾಂ ಪುನರಪಿ ಪ್ರತಿಭಾಮವಾಪ ।

ಕೋ ನಾಮ ವಿಷ್ಣ್ವನುಪಜೀವಕ ಆಸ ಯಸ್ಯ
ನಿತ್ಯಾಶ್ರಯಾದಭಿಹಿತಾಽಪಿ ರಮಾ ಸದಾ ಶ್ರೀಃ ॥ (೧೫/೫)

ಕ್ಷೇಮಾಯ ನೋ ಭವತಿ ವೋ ಬಲವದ್ವಿರೋಧಃ ।(೧೯/೧೦)

ಕೋ ನಾಮ ಸತ್ಸು ವಿಷಮಃ ಪ್ರಭವೇತ್ ಸುಖಾಯ ॥ (೧೯/೪೫)

ವಿರೋಧಿ ಧರ್ಮಸ್ಯ ವಿನಾಶಕಾರಣಮ್ । (೨೯/೨೯೬)

ಯೇ ಧರ್ಮಂ ನ ವದಂತೀಹ ನ ತೇ ವೃದ್ಧಾ ಇತೀರಿತಾಃ ।
ಅವೃದ್ಧಮಂಡಿತಾಂ ನೈವ ಸಭೇತ್ಯಾಹುರ್ಮನೀಷಿಣಃ ॥ (೨೧/೩೨೯)

ಉತ್ತಮೇ ವಚಸಾ ಶಿಕ್ಷಾ ಮಧ್ಯಮೇಽರ್ಥಾಪಹಾರಣಮ್ ॥
ಅಧಮೇ ದೇಹದಂಡಶ್ಚ.................................. ॥ (೨೧/೩೩೯,೩೪೦)

ಪತಿತಸ್ಯಾಸ್ಯ ದೇಹಸ್ಯ ಕಾಷ್ಠವಿಷ್ಠಾಸಮಸ್ಯ ಚ ॥
ಫಲಾನಿ ತ್ರೀಣಿ ಶಿಷ್ಯಂತೇ ವಿದ್ಯಾ ಕರ್ಮ ಸುತಾ ಇತಿ । (೨೧/೩೬೭,೩೬೮)

೩೨. ಮಹಾಭಾರತದ ಸರ್ವಶಾಸ್ತ್ರೋತ್ತಮತ್ವದ ಸಮರ್ಥನೆ

ಮಹಾಭಾರತವನ್ನು ಇತರ ಮತಾಚಾರ್ಯರು ಅನೇಕ ಪ್ರಮಾಣಗಳಲ್ಲಿ ಒಂದು ಎಂದು ಸಾಮಾನ್ಯ ರೀತಿಯಲ್ಲಿ ಉಲ್ಲೇಖಿಸಿರುವ ಪ್ರಸಂಗವೇ ಹೆಚ್ಚು. ಆದರೆ ಮಹಾಭಾರತವು ವೇದಾದಿಗಳಿಗಿಂತಲೂ ಮಿಗಿಲಾದ ಸರ್ವೋತ್ಕೃಷ್ಟವಾದ ಶಾಸ್ತ್ರ ಮಹಾಭಾರತವೆಂಬ ಅದರ ಹೆಸರೇ ಅದರ ಹಿರಿಮೆಯನ್ನು ಸಾರುತ್ತದೆ. ಬ್ರಹ್ಮಾಂಡ, ಮಾರ್ಕಂಡೇಯ ಮೊದಲಾದ ಇತರ ಅನೇಕ ಪುರಾಣಗಳಲ್ಲೂ ಮಹಾಭಾರತದ ಹಿರಿಮೆ ಸ್ಪಷ್ಟವಾಗಿ ನಿರೂಪಿತವಾಗಿದೆ. ಅದರ ನಿರ್ಣಯವೆಂದರೆ ಸಮಸ್ತಶಾಸ್ತ್ರಾರ್ಥನಿರ್ಣಯ ಎಂದೇ ಅರ್ಥ ಎಂದು ಸಮರ್ಥಿಸಿದ ಹಿರಿಮೆಯೂ ಶ್ರೀಮದಾಚಾರ್ಯರದು.

ನಿರ್ಣಯಃ ಸರ್ವಶಾಸ್ತ್ರಾಣಾಂ ಭಾರತಂ ಪರಿಚಕ್ಷತೇ ।
ಭಾರತಂ ಸರ್ವವೇದಾಶ್ಚ ತುಲಾಮಾರೋಪಿತಾಃ ಪುರಾ ॥
ದೇವೈರ್ಬ್ರಹ್ಮಾದಿಭಿಃ ಸರ್ವೈಃ ಋಷಿಭಿಶ್ಚ ಸಮನ್ವಿತೈಃ ।
ವ್ಯಾಸಸ್ಯೈವಾಜ್ಞಯಾ ತತ್ರ ತ್ವತ್ಯರಿಚ್ಯತ ಭಾರತಮ್ ॥
ಮಹತ್ತ್ವಾದ್ಭಾರವತ್ತ್ವಾಚ್ಚ ಮಹಾಭಾರತಮುಚ್ಯತೇ ।
ನಿರುಕ್ತಮಸ್ಯ ಯೋ ವೇದ ಸರ್ವಪಾಪೈಃ ಪ್ರಮುಚ್ಯತೇ ॥
ನಿರ್ಣಯಃ ಸರ್ವಶಾಸ್ತ್ರಾಣಾಂ ಸದೃಷ್ಟಾಂತೋ ಹಿ ಭಾರತೇ ।
ಕೃತೋ ವಿಷ್ಣುವಶತ್ವಂ ಹಿ ಬ್ರಹ್ಮಾದೀನಾಂ ಪ್ರಕಾಶಿತಮ್ ॥ (೨/೯-೧೨)

ಉಕ್ತಾ ರಾಮಕಥಾಽಪ್ಯಸ್ಮಿನ್ ಮಾರ್ಕಂಡೇಯಸಮಾಸ್ಯಯಾ ।
ತಸ್ಮಾದ್ಯದ್ಭಾರತೇ ನೋಕ್ತಂ ತದ್ಧಿ ನೈವಾಸ್ತಿ ಕುತ್ರಚಿತ್ ॥
ಅತ್ರೋಕ್ತಂ ಸರ್ವಶಾಸ್ತ್ರೇಷು ನಹಿ ಸಮ್ಯಗುದಾಹೃತಮ್ ।
ಇತ್ಯಾದಿ ಕಥಿತಂ ಸರ್ವಂ ಬ್ರಹ್ಮಾಂಡೇ ಹರಿಣಾ ಸ್ವಯಮ್ ॥
ಮಾರ್ಕಂಡೇಯೇಽಪಿ ಕಥಿತಂ ಭಾರತಸ್ಯ ಪ್ರಶಂಸನಮ್ ।
ದೇವತಾನಾಂ ಯಥಾ ವ್ಯಾಸೋ ದ್ವಿಪದಾಂ ಬ್ರಾಹ್ಮಣೋ ವರಃ ॥
ಆಯುಧಾನಾಂ ಯಥಾ ವಜ್ರಮೋಷಧೀನಾಂ ಯಥಾ ಯವಾಃ ।
ತಥೈವ ಸರ್ವಶಾಸ್ತ್ರಾಣಾಂ ಮಹಾಭಾರತಮುತ್ತಮಮ್ ॥
ವಾಯುಪ್ರೋಕ್ತೇಽಪಿ ತತ್ ಪ್ರೋಕ್ತಂ ಭಾರತಸ್ಯ ಪ್ರಶಂಸನಮ್ ।
ಕೃಷ್ಣದ್ವೈಪಾಯನಂ ವ್ಯಾಸಂ ವಿದ್ಧಿ ನಾರಾಯಣಂ ಪ್ರಭುಮ್ ॥
ಕೋ ಹ್ಯನ್ಯಃ ಪುಂಡರೀಕಾಕ್ಷಾನ್ಮಹಾಭಾರತಕೃದ್ಭವೇತ್ ।
ಏವಂ ಹಿ ಸರ್ವಶಾಸ್ತ್ರೇಷು ಪೃಥಕ್ ಪೃಥಗುದೀರಿತಮ್ ।
ಉಕ್ತೋಽರ್ಥಃ ಸರ್ವ ಏವಾಯಂ ಮಾಹಾತ್ಮ್ಯಕ್ರಮಪೂರ್ವಕಃ ॥ (೨/೩೦-೩೩)

ಮಹಾಭಾರತದ ಸರ್ವಶಾಸ್ತ್ರೋತ್ತಮತ್ತ್ವವನ್ನು ಶ್ರೀಮದಾಚಾರ್ಯರು ತಮ್ಮ ಗೀತಾಭಾಷ್ಯಾದಿ ಇತರ ಕೃತಿಗಳಲ್ಲೂ ನಿರೂಪಿಸಿರುವರು.

೩೩. ಮೂಲಶ್ಲೋಕಗಳ ವ್ಯಾಖ್ಯಾನಪದ್ಧತಿ

ಮೂಲಗ್ರಂಥಗಳ ವ್ಯಾಖ್ಯಾನಕ್ಕೆ ಮಾರ್ಗದರ್ಶನ ನೀಡಿರುವುದಲ್ಲದೆ, ಕೆಲವು ಮೂಲಶ್ಲೋಕಗಳಿಗೆ ವ್ಯಾಖ್ಯಾನವನ್ನು ನೀಡಿ, ಆ ಕ್ರಮವನ್ನು ತೋರಿಸಿಕೊಟ್ಟಿರುವುದು ಈ ಕೃತಿಯ ಮತ್ತೊಂದು ವಿಶೇಷ :

ನಾರಾಯಣಂ ಸುರಗುರುಂ ಜಗದೇಕನಾಥಂ
ಭಕ್ತಪ್ರಿಯಂ ಸಕಲಲೋಕನಮಸ್ಕೃತಂ ಚ ।
ತ್ರೈಗುಣ್ಯವರ್ಜಿತಮಜಂ ವಿಭುಮಾದ್ಯಮೀಶಂ
ವಂದೇ ಭವಘ್ನಮಮರಾಸುರಸಿದ್ಧವಂದ್ಯಮ್ ॥ - ಮಹಾಭಾರತ(೧/೧/೧)

ಜ್ಞಾನಪ್ರದಃ ಸ ಭಗವಾನ್ ಕಮಲಾವಿರಿಂಚಿ-
ಶರ್ವಾದಿಪೂರ್ವಜಗತೋ ನಿಖಿಲಾದ್ವರಿಷ್ಠಃ ।
ಭಕ್ತ್ಯೈವ ತುಷ್ಯತಿ ಹರಿಪ್ರವಣತ್ವಮೇವ
ಸರ್ವಸ್ಯ ಧರ್ಮ ಇತಿ ಪೂರ್ವವಿಭಾಗಸಂಸ್ಥಃ ॥
ನಿರ್ದೋಷಕಃ ಸ್ಮೃತಿವಿಹೀನ ಉದಾರಪೂರ್ಣ-
ಸಂವಿದ್ಗುಣಃ ಪ್ರಥಮಕೃತ್ ಸಕಲಾತ್ಮಶಕ್ತಿಃ ।
ಮೋಕ್ಷೈಕಹೇತುರಸುರೂಪಸುರೈಶ್ಚ ಮುಕ್ತೈ-
ರ್ವಂದ್ಯಃ ಸ ಏಕ ಇತಿ ಚೋಕ್ತಮಥೋತ್ತರಾರ್ಧೇ ॥
ನಮ್ಯತ್ವಮುಕ್ತಮುಭಯತ್ರ ಯತಸ್ತತೋಽಸ್ಯ
ಮುಕ್ತೈರಮುಕ್ತಕಗಣೈಶ್ಚ ವಿನಮ್ಯತೋಕ್ತಾ ।
ಇತ್ಥಂ ಹಿ ಸರ್ವಗುಣಪೂರ್ತಿರಮುಷ್ಯ ವಿಷ್ಣೋಃ
ಪ್ರಸ್ತಾವಿತಾ ಪ್ರಥಮತಃ ಪ್ರತಿಜಾನತೈವ ॥ -ಮ.ಭಾ.ತಾ.ನಿ. (೨/೫೮-೬೦)

ಸೃಷ್ಟಾ ಬ್ರಹ್ಮಾದಯೋ ದೇವಾ ನಿಹತಾ ಯೇನ ದಾನವಾಃ ।
ತಸ್ಮೈ ದೇವಾಧಿದೇವಾಯ ನಮಸ್ತೇ ಶಾರ್ಙ್ಗಧಾರಿಣೇ ॥ - ಮಹಾಭಾರತ

ಸ್ರಷ್ಟೃತ್ವಂ ದೇವಾನಾಂ ಮುಕ್ತಿಸ್ರಷ್ಟೃತ್ವಮುಚ್ಯತೇ ನಾನ್ಯತ್ ।
ಉತ್ಪತ್ತಿರ್ದೈತ್ಯಾನಾಮಪಿ ಯಸ್ಮಾತ್ ಸಮ್ಮಿತಾವಿಶೇಷೋಽಯಮ್ ॥
ಅಥ ಚ ದೈತ್ಯಹತಿಸ್ತಮಸಿ ಸ್ಥಿರಾ ನಿಯತಸಂಸ್ಥಿತಿರೇವ ನ ಚಾನ್ಯಥಾ ।
ತನುವಿಭಾಗಕೃತಿಃ ಸಕಲೇಷ್ವಿಯಂ ನ ಹಿ ವಿಶೇಷಕೃತಾ ಸುರದೈತ್ಯಗಾ ॥
-ಮಹಾಭಾರತತಾತ್ಪರ್ಯನಿರ್ಣಯಃ(೨/೬೩-೬೪)

ನಾರಾಯಣಂ ನಮಸ್ಕೃತ್ಯ ನರಂ ಚೈವ ನರೋತ್ತಮಮ್ ।
ದೇವೀಂ ಸರಸ್ವತೀಂ ವ್ಯಾಸಂ ತತೋ ಜಯಮುದೀರಯೇ ॥ -ಮಹಾಭಾರತ

ಜಯೋ ನಾಮೇತಿಹಾಸೋಽಯಂ ಕೃಷ್ಣದ್ವೈಪಾಯನೇರಿತಃ ।
ವಾಯುರ್ನರೋತ್ತಮೋ ನಾಮ ದೇವೀತಿ ಶ್ರೀರುದೀರಿತಾ ॥
ನಾರಾಯಣೋ ವ್ಯಾಸ ಇತಿ ವಾಚ್ಯವಕ್ತೃಸ್ವರೂಪಕಃ ।
ಏಕಃ ಸ ಭಗವಾನುಕ್ತಃ ಸಾಧಕೇಶೋ ನರೋತ್ತಮಃ ॥
ಉಪಸಾಧಕೋ ನರಶ್ಚೋಕ್ತೋ ದೇವೀ ಭಾಗ್ಯಾತ್ಮಿಕಾ ನೃಣಾಮ್ ।
ಸರಸ್ವತೀ ವಾಕ್ಯರೂಪಾ ತಸ್ಮಾನ್ನಮ್ಯಾ ಹಿ ತೇಽಖಿಲಾಃ ।
ಕೃಷ್ಣೌ ಸತ್ಯಾ ಭೀಮಪಾರ್ಥೌ ಕೃಷ್ಣೇತ್ಯುಕ್ತಾ ಹಿ ಭಾರತೇ ॥
-ಮಹಾಭಾರತತಾತ್ಪರ್ಯನಿರ್ಣಯಃ (೩/೪-೭)

ಅಶ್ವಮೇಧಃ ಕ್ರತುಶ್ರೇಷ್ಠೋ ಜ್ಯೋತಿಃಶ್ರೇಷ್ಠೋ ದಿವಾಕರಃ ।
ಬ್ರಾಹ್ಮಣೋ ದ್ವಿಪದಾಂ ಶ್ರೇಷ್ಠೋ ದೇವಶ್ರೇಷ್ಠಸ್ತು ಮಾರುತಃ ॥ -ಮಹಾಭಾರತ

ಯಜ್ಞಾಧಿಕೋ ಹ್ಯಶ್ವಮೇಧೋ ಮನುಷ್ಯ-
ದೃಶ್ಯೇಷು ತೇಜಸ್ಸ್ವಧಿಕೋ ಹಿ ಭಾಸ್ಕರಃ ।
ವರ್ಣೇಷು ವಿಪ್ರಃ ಸಕಲೈರ್ಗುಣೈರ್ವರೋ
ದೇವೇಷು ವಾಯುಃ ಪುರುಷೋತ್ತಮಾದೃತೇ ॥ (೧೨/೫೧)

೩೪. ಸಮಸ್ತಶಾಸ್ತ್ರಾರ್ಥನಿರ್ಣಯ

ತಾವು ರಚಿಸಿರುವ ಮಹಾಭಾರತತಾತ್ಪರ್ಯನಿರ್ಣಯವು ಅತ್ಯಂತ ಪ್ರಾಮಾಣಿಕವಾದುದು. ಅದು ಮಹಾಭಾರತದ ನಿರ್ಣಯ ಮಾತ್ರವಾಗಿರದೆ, ಸಮಸ್ತಶಾಸ್ತ್ರಾರ್ಥನಿರ್ಣಯವೂ ಆಗಿದೆ. ತಾವು ನಿರೂಪಿಸಿದ ಪ್ರತಿಯೊಂದು ವಿಚಾರವೂ ಸಹ ಮೂಲಶಾಸ್ತ್ರಗಳಲ್ಲಿಯೇ ಪ್ರತಿಪಾದಿತವಾಗಿದೆ. ಆದ್ದರಿಂದ ಅದು ಅತ್ಯಂತ ಗ್ರಾಹ್ಯವಾದ ಕೃತಿ ಎಂಬುದನ್ನು ಅವರು ಘೋಷಿಸಿರುವರು :

ಇತ್ಯೃಗ್ಯಜುಸ್ಸಾಮಾಥರ್ವಪಂಚರಾತ್ರೇತಿಹಾಸತಃ ।
ಪುರಾಣೇಭ್ಯಸ್ತಥಾಽನ್ಯೇಭ್ಯಃ ಶಾಸ್ತ್ರೇಭ್ಯೋ ನಿರ್ಣಯಃ ಕೃತಃ ॥
ವಿಷ್ಣ್ವಾಜ್ಞಯೈವ ವಿದುಷಾ ತತ್ಪ್ರಸಾದಬಲೋನ್ನತೇಃ ।
ಆನಂದತೀರ್ಥಮುನಿನಾ ಪೂರ್ಣಪ್ರಜ್ಞಾಭಿಧಾಯುಜಾ ॥
ತಾತ್ಪರ್ಯಂ ಶಾಸ್ತ್ರಾಣಾಂ ಸರ್ವೇಷಾಮುತ್ತಮಂ ಮಯಾ ಪ್ರೋಕ್ತಮ್ ।
ಪ್ರಾಪ್ಯಾನುಜ್ಞಾಂ ವಿಷ್ಣೋರೇತಜ್ಜ್ಞಾತ್ವೈವ ವಿಷ್ಣುರಾಪ್ಯೋಽಸೌ ॥
(೧/೧೩೫-೧೩೭)

ಉಕ್ತಃ ಪೂರ್ವಾಧ್ಯಾಯೇ ಶಾಸ್ತ್ರಾಣಾಂ ನಿರ್ಣಯಃ ಪರೋ ದಿವ್ಯಃ ।
ಅಥ ಭಾರತವಾಕ್ಯಾನ್ಯೇತೈರೇವಾಧ್ಯವಸ್ಯಂತೇ ॥

ಸಮಸ್ತಶಾಸ್ತ್ರಾರ್ಥವಿನಿರ್ಣಯೋಽಯಂ ವಿಶೇಷತೋ ಭಾರತವರ್ತ್ಮಚಾರೀ ।
ಗ್ರಂಥಃ ಕೃತೋಽಯಂ ಜಗತಾಂ ಜನಿತ್ರಂ ಹರಿಂ ಗುರುಂ ಪ್ರೀಣಯತಾಽಮುನೈವ ॥
ವಿನಿರ್ಣಯೋ ನಾಸ್ಯ ಮುನಾ ವಿನಾ ಯದ್ವಿಪ್ರಸ್ಥಿತಾನಾಮಿಹ ಸರ್ವವಾಚಾಮ್ ।
ತದ್ಬ್ರಹ್ಮಸೂತ್ರಾಣಿ ಚಕಾರ ಕೃಷ್ಣೋ ವ್ಯಾಖ್ಯಾಽಥ ತೇಷಾಮಯಥಾ ಕೃತಾಽನ್ಯೈಃ ॥

ನಿಗೂಹಿತಂ ಯತ್ಪುರುಷೋತ್ತಮತ್ವಂ ಸೂತ್ರೋಕ್ತಮಪ್ಯತ್ರ ಮಹಾಸುರೇಂದ್ರೈಃ ।
ಜೀವೈಶ್ವರೈಕ್ಯಂ ಪ್ರವದದ್ಭಿರುಗ್ರೈರ್ವ್ಯಾಖ್ಯಾಯ ಸೂತ್ರಾಣಿ ಚಕಾರ ಚಾವಿಃ ॥
ವ್ಯಾಸಾಜ್ಞಯಾ ಭಾಷ್ಯವರಂ ವಿಧಾಯ ಪೃಥಕ್ ಪೃಥಕ್ ಚೋಪನಿಷತ್ಸುಭಾಷ್ಯಮ್ ।
ಕೃತ್ವಾಽಖಿಲಾನ್ಯಂ ಪುರುಷೋತ್ತಮಂ ಚ ಹರಿಂ ವದಂತೀತಿ ಸಮರ್ಥಯಿತ್ವಾ ॥
ತನುಸ್ತೃತೀಯಾ ಪವನಸ್ಯ ಸೇಯಂ ಸದ್ಭಾರತಾರ್ಥಪ್ರತಿದೀಪನಾಯ ।
ಗ್ರಂಥಂ ಚಕಾರೇಮಮುದೀರ್ಣವಿದ್ಯಾ ಯಸ್ಮಿನ್ ರಮಂತೇ ಹರಿಪಾದಭಕ್ತಾಃ ॥
(೩೨/೧೬೯-೧೭೩)

ಸರ್ವಶಾಸ್ತ್ರಾರ್ಥನಿರ್ಣಯವೆಂಬ ಹೆಸರಿನ ಪ್ರಥಮಾಧ್ಯಾಯವಂತು ನಿಜವಾದ ಅರ್ಥದಲ್ಲಿ ಸಮಸ್ತಶಾಸ್ತ್ರಾರ್ಥನಿರ್ಣಯವೇ ಆಗಿದ್ದು, ಅದು ಒಂದರ್ಥದಲ್ಲಿ ಬ್ರಹ್ಮಸೂತ್ರ-ಭಾಷ್ಯದ ಸಾರಸಂಗ್ರವೂ, ಇನ್ನೊಂದರ್ಥದಲ್ಲಿ ಅವರ ಅಣುಭಾಷ್ಯ (ಸರ್ವಶಾಸ್ತ್ರಾರ್ಥ-ಸಂಗ್ರಹ)ದ ವಿವರಣರೂಪವೂ ಆಗಿದ್ದು, ಸಮಸ್ತಶಾಸ್ತ್ರತತ್ತ್ವಗಳ ತವನಿಧಿ ಎನ್ನಿಸಿದೆ. ಅದು ದ್ವೈತಸಿದ್ಧಾಂತದ ಕೈಪಿಡಿಯಾಗಿಯೂ ಮಾನ್ಯವಾಗುತ್ತದೆ. ಇಪ್ಪತ್ತೈದನೆಯ ಅಧ್ಯಾಯದ ಪ್ರಾರಂಭದಲ್ಲಿ ಒಟ್ಟು ಹದಿನೇಳು ಶ್ಲೋಕಗಳಲ್ಲಿ ಸಮಗ್ರಗೀತಾರ್ಥವನ್ನು ಸಂಗ್ರಹಿಸಿರುವ ರೀತಿಯೂ ಅನುಪಮವಾದುದು. ಅದರಂತೆ ೨೨ನೇ ಅಧ್ಯಾಯದಲ್ಲಿ ಬರುವ ಯುಧಿ-ಷ್ಠಿರನನ್ನು ಕುರಿತ ಭೀಮದ್ರೌಪದಿಯರ ಮಾತುಗಳಲ್ಲಿ ನಿರೂಪಿತವಾಗಿರುವ ಜೀವನ ಪರಾಧೀನಕರ್ತೃತ್ವದ ವಿವರಣೆ ಅತ್ಯಂತ ಗಮನಾರ್ಹವಾದ ಶಾಸ್ತ್ರಪ್ರಮೇಯ. ಈ ಭಾಗ ಒಂದು ರೀತಿಯಲ್ಲಿ 'ಕರ್ತಾ ಶಾಸ್ತ್ರಾರ್ಥವತ್ತ್ವಾತ್' ಎಂಬ ಬ್ರಹ್ಮಸೂತ್ರದ ವಿವರಣೆಯೂ ಆಗಿದೆ.

೩೫. ಜಿಜ್ಞಾಸುಗಳ ಮಾರ್ಗದರ್ಶಿ

ಇಂತಹ ಅದ್ಭುತಕೃತಿಯನ್ನು ನೀಡಿರುವುದಲ್ಲದೆ, ಇಲ್ಲಿಯ ಮಾರ್ಗದರ್ಶನದ ಹಿನ್ನೆಲೆಯಲ್ಲಿ ಸಂಶೋಧಕರು ಅವಶ್ಯ ಪ್ರವರ್ತಿಸಲೇಬೇಕು. ಇಲ್ಲಿ ನೀಡಿರುವುದು ದಿಗ್ದರ್ಶನ ಎಂಬ ಸ್ಫೂರ್ತಿದಾಯಕವಾದ ಮಾತನ್ನು ಆಡಿ ಜಿಜ್ಞಾಸುಗಳ ಸಾಧನ-ಕ್ರಮವನ್ನು ಸಹ ಸೂಚಿಸಿ, ನಿಜವಾದ ಅರ್ಥದಲ್ಲಿ ಶ್ರೀಮದಾಚಾರ್ಯರು ಆದರ್ಶ ಗುರುಗಳಾಗಿರುವರು:

ಇತ್ಯಾದ್ಯನಂತವಾಕ್ಯಾನಿ ಸಂತ್ಯೇವಾರ್ಥೇ ವಿವಕ್ಷಿತೇ ।
ಕಾನಿಚಿದ್ದರ್ಶಿತಾನ್ಯತ್ರ ದಿಙ್ಮಾತ್ರಪ್ರತಿಪತ್ತಯೇ ॥ (೨/೧೭೯)

೩೬. ಮಧ್ವರಾಮಾಯಣ

ಹಿಂದೆ ತಿಳಿಸಿರುವಂತೆ ವಾಲ್ಮೀಕಿರಾಮಾಯಣ ಮೂಲ ಶತಕೋಟಿರಾಮಾಯಣವಾದ ಹಯಗ್ರೀವರಾಮಾಯಣದ ಸಂಗ್ರಹರೂಪ. ಅದನ್ನು ರಚಿಸಿದ ವಾಲ್ಮೀಕಿಗಳು ರಾಮಾಯಣದ ಕೊನೆಯಲ್ಲಿ ಬರುವ ಒಂದು ಪಾತ್ರವೂ ಆಗಿ ಮಾನ್ಯವಾಗಿದ್ದಾರೆ. ಮಹಾಭಾರತತಾತ್ಪರ್ಯನಿರ್ಣಯ ರಚಿಸಿದ ಶ್ರೀಮನ್ಮಧ್ವಾಚಾರ್ಯರು ಹನುಮಂತನ

ಅವತಾರ. ಎಂದರೆ ರಾಮಾಯಣದ ಶ್ರೀರಾಮನ ಅನಂತರದ ಅತ್ಯಂತಪ್ರಧಾನಪಾತ್ರ. ಅವರ ಕೃತಿ ಇದು ಎಂದರೆ ಹನುಮಂತನೇ ಬರೆದ ರಾಮಾಯಣ - ಹನುಮದ್ರಾಮಾಯಣ ಎನ್ನಿಸುತ್ತದೆ. ಮಧ್ವರೂಪದಿಂದ ಬರೆದ ಕಾರಣ ಮಧ್ವರಾಮಾಯಣವೂ ಆಗಿದೆ. ಆದ್ದರಿಂದಲೇ ಗೌಣಪಾತ್ರವಾದ ವಾಲ್ಮೀಕಿಗಳಿಂದ ರಚಿತವಾದ ವಾಲ್ಮೀಕಿರಾಮಾಯಣಕ್ಕಿಂತ ತುಂಬ ಮಿಗಿಲಾದ ರಾಮಾಯಣವೂ ಆಗಿದೆ. ವಾಲ್ಮೀಕಿಗಳಿಗೆ ಬ್ರಹ್ಮದೇವರ ವರಬಲದಿಂದ ರಾಮಾಯಣದ ವಿವರಗಳು ಗೋಚರಿಸಿದರೆ, ಹನುಮಂತನಂತೂ ಭಾವಿಬ್ರಹ್ಮನೇ ಆಗಿರುವನು. ಹೀಗೆ ಮಹಾಭಾರತತಾತ್ಪರ್ಯನಿರ್ಣಯದ ಒಂಭತ್ತನೆಯ ಅಧ್ಯಾಯದಲ್ಲಿ ಮುಕ್ತಾಯಗೊಳ್ಳುವ ಶ್ರೀರಾಮಕಥೆ ಹಯಗ್ರೀವಕೃತ ಮೂಲರಾಮಾಯಣದ ಅನಂತರದ ಪ್ರಧಾನ ರಾಮಕಥೆಯ ಆಕರ ಎನ್ನಿಸುತ್ತದೆ.

೩.೭. ಮಧ್ವಭಾರತ

ಮೂಲಮಹಾಭಾರತ ಶ್ರೀವೇದವ್ಯಾಸಕೃತವಾದ ಕಾರಣ 'ವ್ಯಾಸಭಾರತ'ವೆಂದೇ ವಿಖ್ಯಾತ. ಶ್ರೀವೇದವ್ಯಾಸರು ಮಹಾಭಾರತದ ಕುರುಪಾಂಡವರ ಜನಕರಾದ ಧೃತರಾಷ್ಟ್ರ ಪಾಂಡುರಾಜನಿಗೆ ಜನ್ಮ ನೀಡಿದವರು. ಅಲ್ಲದೆ ಮಹಾಭಾರತದ ಆದ್ಯಂತದ ಪ್ರಮುಖಘಟ್ಟಗಳಲ್ಲಿ ಗೋಚರಿಸಿ ಆಯಾ ಪ್ರಸಂಗಗಳಿಗೆ ಹೊಸ ತಿರುವು ನೀಡುವ ಸೂತ್ರಧಾರರೂ ಆಗಿರುವರು. ಅವರು ರಚಿಸಿರುವ ಮಹಾಭಾರತ ಈ ಕಾರಣದಿಂದಾಗಿ ಅತ್ಯಂತ ಅಧಿಕೃತವಾದ ಕೃತಿ ಎನ್ನಿಸುತ್ತವೆ. ಅದರಂತೆ ಮಹಾಭಾರತತಾತ್ಪರ್ಯನಿರ್ಣಯದ ಕೃತಿಕಾರರಾದ ಶ್ರೀಮಧ್ವಾಚಾರ್ಯರು ಮಹಾಭಾರತದಲ್ಲಿ ಶ್ರೀವ್ಯಾಸಕೃಷ್ಣರ ಅನಂತರದ ಪ್ರಧಾನಪಾತ್ರವೆನ್ನಿಸಿದ ಶ್ರೀಭೀಮಸೇನನ ಅವತಾರರಾಗಿರುವರು. ಆದ್ದರಿಂದ ಇದು 'ಭೀಮಭಾರತ'; ಮಧ್ವರೂಪದಿಂದ ರಚಿತವಾದ್ದರಿಂದ 'ಮಧ್ವಭಾರತ'. ಈ ಕಾರಣದಿಂದಲೇ ವ್ಯಾಸಭಾರತದಂತೆ ಅತ್ಯಂತ ಅಧಿಕೃತವಿವರಗಳ ಮುಖ್ಯ ಆಕರವೆನ್ನಿಸಿ ಮಾನ್ಯವಾಗುತ್ತದೆ.

೩.೮. ವ್ಯಾಖ್ಯಾನಗಳು

ಇಂತಹ ಅಪೂರ್ವಕೃತಿಯಾದ ಮಹಾಭಾರತತಾತ್ಪರ್ಯನಿರ್ಣಯಕ್ಕೆ ಸಹಜವಾಗಿಯೇ ಅನೇಕ ವ್ಯಾಖ್ಯಾನಗಳು ರಚಿತವಾಗಿವೆ. ಆಚಾರ್ಯರ ಗ್ರಂಥಗಳಲ್ಲಿ ಅತಿ ಹೆಚ್ಚು ವ್ಯಾಖ್ಯಾನಿಸಲ್ಪಟ್ಟಿರುವ ಗ್ರಂಥ ಇದೇ ಎನ್ನಬಹುದು. ಇದರ ಪ್ರಪ್ರಥಮ ವ್ಯಾಖ್ಯಾನ ರಚಿಸಿದ ಕೀರ್ತಿ ಶ್ರೀಜಯತೀರ್ಥರ ಸಾಕ್ಷಾಚ್ಛಿಷ್ಯರಾದ ಶ್ರೀವ್ಯಾಸತೀರ್ಥರದು. ಶ್ರೀವಾದಿರಾಜರು ಮೊದಲಾದ ಅಗ್ರಮಾನ್ಯ ಗ್ರಂಥಕಾರರು ಇದಕ್ಕೆ ವ್ಯಾಖ್ಯಾನ ರಚಿಸಿರುವರು. ಶ್ರೀರಾಘವೇಂದ್ರಸ್ವಾಮಿಗಳ ಮಹಾಭಾರತತಾತ್ಪರ್ಯನಿರ್ಣಯಾಶಯಸಂಗ್ರಹ ಎಂಬ ಕೃತಿ ತಾತ್ಪರ್ಯನಿರ್ಣಯದ ಪ್ರತಿಯೊಂದು ಅಧ್ಯಾಯದ ಸಾರವನ್ನು ಒಂದೊಂದೇ ಶ್ಲೋಕದಲ್ಲಿ ಸಂಗ್ರಹಿಸುವ ವಿಶಿಷ್ಟಕೃತಿಯಾಗಿದೆ :

೧) ಶ್ರೀಜಯತೀರ್ಥರ ಸಾಕ್ಷಾಚ್ಛಿಷ್ಯರಾದ ವ್ಯಾಸತೀರ್ಥರ ಟೀಕೆ (ಭಾರತಭಾವಪಂಚಿಕಾ)
೨) ಸೋದೆಮಠದ ಶ್ರೀರತ್ನಗರ್ಭತೀರ್ಥರ ವ್ಯಾಖ್ಯಾನ
೩) ಶ್ರೀವೇದಾಂಗತೀರ್ಥರ ಪದಾರ್ಥದೀಪಿಕಾ
೪) ಶ್ರೀವಾದಿರಾಜಸ್ವಾಮಿಗಳ ಭಾವಪ್ರಕಾಶಿಕಾ
೫) ಶ್ರೀಜನಾರ್ದನಭಟ್ಟೀಯ ಪದಾರ್ಥಪ್ರದೀಪಿಕಾ
೬) ಶ್ರೀ(ಆದ್ಯ)ವರದರಾಜಾಚಾರ್ಯರ ಮಂದಸುಬೋಧಿನೀ
೭) (ತಾಮ್ರಪರ್ಣೀ)ಶ್ರೀನಿವಾಸಾಚಾರ್ಯರ ಪ್ರಮೇಯಮಣಿಮಾಲಾ
೮) (ಭಾರತ)ಶ್ರೀನಿವಾಸಾಚಾರ್ಯರು (ಡಂಬಲ ಆನಂದತೀರ್ಥಾಚಾರ್ಯರ ಶಿಷ್ಯರು)
೯) ನೃಸಿಂಹಾಚಾರ್ಯಸೂನು ಶ್ರೀಅನಂತಭಟ್ಟೀಯ (ಸತ್ತತ್ತ್ವಮಾಲಾ)
೧೦) ಶ್ರೀಅನಂತಾಚಾರ್ಯರ ತಂತ್ರಮಾಲಾ
೧೧) ಶ್ರೀಕರ್ನಾಟಕ ಕೃಷ್ಣಾಚಾರ್ಯರ ಭಾವಚಂದ್ರಿಕಾ
೧೨) ಶ್ರೀವಿದ್ಯಾಧೀಶರ ಶಿಷ್ಯರಾದ ಮಧುಸೂದನಭಿಕ್ಷುಗಳ ಪ್ರಮಾಣಸಂಗ್ರಹ
೧೩) ಜನಾರ್ದನಸೂನುತಿರುಮಲಸಂಗೃಹೀತಪ್ರಮಾಣಸಂಗ್ರಹ (ಅತಿವಿಶದವಾಕ್ಯಾರ್ಥವಿವೃತಿಃ)
೧೪) ಶ್ರೀನರಸಿಂಹಾಚಾರ್ಯರು ಸಂಧಿ (ಉತ್ತರಾದಿಮಠದ ಗ್ರಂಥಾಗಾರ, ಹೊಸಪೇಟೆ)
೧೫) ಶ್ರೀಲಕ್ಷ್ಮೀನೃಸಿಂಹಾಚಾರ್ಯರು ಜಂಬುಖಂಡೀ
೧೬) ಶ್ರೀವಿಠಲಾಚಾರ್ಯಸೂನು ನಾರಾಯಣಾಚಾರ್ಯರು(ಗೂಢವಾಕ್ಯಾರ್ಥ-ವಿವೃತಿಃ, ತಂಜಾವೂರು ಸರಸ್ವತೀಮಹಲ್ ಗ್ರಂಥಾಲಯ)
೧೭) ಶ್ರೀಸತ್ಯಾಭಿನವತೀರ್ಥರು(ದುರ್ಘಟಾರ್ಥಪ್ರಕಾಶಿಕಾ)
೧೮) ಶ್ರೀಸಂಕರ್ಷಣತೀರ್ಥರು (ಶುಭಪ್ರಕಾಶಿಕಾ)
೧೯) ಶ್ರೀನವರತ್ನ ಪುರುಷೋತ್ತಮಾಚಾರ್ಯರು(ಶ್ರೀಸತ್ಯಧರ್ಮತೀರ್ಥರು)
೨೦) ಶ್ರೀಅಚ್ಯುತಭಟ್ಟರು (ಕೋನೇರಿ)
೨೧) ಶ್ರೀರಾಮಾಚಾರ್ಯರು
೨೨) ಶ್ರೀಕಾಶೀ ಶ್ರೀನಿವಾಸಾಚಾರ್ಯರು
೨೩) ಶ್ರೀಚೆಟ್ಟಿಕೋನೇರಿ ಆಚಾರ್ಯರು
೨೪) ಗೂಢಕರ್ತೃಕ – ವಿರೋಧಭಂಜಿನೀ
೨೫) ಮಹಾಭಾರತತಾತ್ಪರ್ಯನಿರ್ಣಯಭಾವದೀಧಿತಿ, ಶ್ರೀವಾಸುದೇವಯತೀಂದ್ರರ ಪೂರ್ವಾಶ್ರಮಪೌತ್ರ ರಾಮಾಚಾರ್ಯರು
೨೬) ಮಹಾಭಾರತತಾತ್ಪರ್ಯನಿರ್ಣಯಟೀಕಾ - ಶ್ರೀಚಕ್ರವರ್ತಿ ಅನಂತಾಚಾರ್ಯರು
೨೭) ಮಹಾಭಾರತತಾತ್ಪರ್ಯನಿರ್ಣಯಟೀಕಾ - ಶ್ರೀನರಸಿಂಹಾಚಾರ್ಯರು
೨೮) ಮಹಾಭಾರತತಾತ್ಪರ್ಯನಿರ್ಣಯಟೀಕಾ - ಶ್ರೀಭಲಾರಿ ಆಚಾರ್ಯರು

ಇವುಗಳಲ್ಲಿ ಮುಂದೆ ಸ್ಥಳ ನಿರ್ದೇಶಿಸದ ವ್ಯಾಖ್ಯಾನಗಳೆಲ್ಲ ನನ್ನ ಹಸ್ತಪ್ರತಿ ಸಂಗ್ರಹ (ಶ್ರೀಜಯತೀರ್ಥಸಂಸ್ಕೃತಲಿಖಿತಗ್ರಂಥಾಲಯ, ವ್ಯಾಸನಕೆರೆ)ದಲ್ಲಿ ಇವೆ. ಉಳಿದವುಗಳು ಅವುಗಳ ಮುಂದೆ ನಿರ್ದೇಶಿಸಿದ ಗ್ರಂಥಾಲಯಗಳಲ್ಲಿ ಇವೆ.

ಅನುಪಲಬ್ಧ

೧) ಶ್ರೀವಿಜಯಧ್ವಜತೀರ್ಥರು[೨] ೨) ಶ್ರೀವರದತೀರ್ಥರು

೩) ಶ್ರೀಬಿದರಹಳ್ಳಿ ಶ್ರೀನಿವಾಸತೀರ್ಥರು ೪) ಶ್ರೀಉಮರ್ಜೀ ಪ್ರಹ್ಲಾದಕೃಷ್ಣಾಚಾರ್ಯರು

ಮಹಾಭಾರತತಾತ್ಪರ್ಯನಿರ್ಣಯವನ್ನು ಕನ್ನಡಗದ್ಯದಲ್ಲಿ ರಚಿಸಿರುವ ಕೃತಿಯೊಂದು ಸಹ ಉಪಲಬ್ಧವಿದ್ದು ಅದನ್ನು ಕೆಲವರು ಶ್ರೀವಾದಿರಾಜತೀರ್ಥವಿರಚಿತ ಎಂದು ಪ್ರಕಟಿಸಿರುವರು. ಆದರೆ ಅದರ ಸಮಗ್ರ ಅವಲೋಕನ ಅದು ಶ್ರೀವಾದಿರಾಜರ ರಚನೆಯಾಗಿರದೆ, ವಾದಿರಾಜಾಚಾರ್ಯ ಎಂಬ ಪ್ರಾಚೀನವಿದ್ವಾಂಸರೊಬ್ಬರ ರಚನೆ-ಯೆಂದು ಸ್ಫುಟಪಡಿಸುತ್ತದೆ.

೨. ಯಮಕಭಾರತ

ಭಗವಂಶ್ಚಿತ್ರಕವಿತಾಂ ಲೌಕಿಕೀಂ ದರ್ಶಯನ್ ಕಿಲ ।
ಗೋಪ್ಯಂ ಭಾರತಸಂಕ್ಷೇಪಮಕೃಥಾ ವಿಶ್ವವಿಸ್ಮಯಮ್ ॥

– ಸುಮಧ್ವವಿಜಯ ೧೫/೮೩

ಯಮಕಭಾರತವು ಮಹಾಭಾರತವನ್ನು ಕುರಿತು ಶ್ರೀಮದಾಚಾರ್ಯರು ನೀಡಿರುವ ಮತ್ತೊಂದು ಕೃತಿ. ಇದೂ ಶ್ಲೋಕರೂಪದ ರಚನೆಯೇ; ಆದರೆ ಗಾತ್ರದಲ್ಲಿ ಅದು ಎಷ್ಟು ದೊಡ್ಡದೋ ಇದು ಅಷ್ಟೇ ಚಿಕ್ಕದು; ಎಂದರೆ ಅದರ ವ್ಯಾಪ್ತಿ ಐದುಸಾವಿರ ಶ್ಲೋಕಗಳನ್ನು ಮೀರಿದ್ದರೆ, ಇದರಲ್ಲಿಯ ಶ್ಲೋಕ ಸಂಖ್ಯೆ ಎಂಭತ್ತೊಂದು ಮಾತ್ರ. ಅಷ್ಟು ವಿಸ್ತೃತಕೃತಿಯನ್ನು ನೀಡಿದ ವ್ಯಕ್ತಿಯೇ ಇಂತಹ ಸಂಕ್ಷಿಪ್ತರೂಪವನ್ನೂ ನೀಡಿರುವರು. ಇದು ಅಂತಹವರಿಗಷ್ಟೇ ಸಾಧ್ಯವಾಗುವ ಕಾರ್ಯವೂ ಹೌದು. ಒಂದರ್ಥದಲ್ಲಿ ಇದು ಅವರ ಮಹಾಭಾರತ-ತಾತ್ಪರ್ಯನಿರ್ಣಯದ ಸಾರವಾದ ಅಣುಮಹಾಭಾರತತಾತ್ಪರ್ಯ ನಿರ್ಣಯ (ಭಾಷ್ಯಕ್ಕೆ ಅಣುಭಾಷ್ಯದಂತೆ), ಇನ್ನೊಂದು ಅರ್ಥದಲ್ಲಿ ಇಡೀ ಮಹಾಭಾರತದ ಸಾರವೂ ಆಗಿದೆ. ಇದರ ಮತ್ತೊಂದು ಹೆಸರು ಭಾರತತಾತ್ಪರ್ಯ ಎಂದೇ. ಹದಿನೆಂಟು ಪರ್ವಗಳ

---

೧. ಇವುಗಳ ಪ್ರತಿಗಳನ್ನು ಉತ್ತರಾದಿಮಠದಿಂದ ಪ್ರಕಾಶಿತವಾಗುತ್ತಿರುವ ಅನೇಕವ್ಯಾಖ್ಯಾನಗಳ ಸಮೇತವಾದ ಮಹಾಭಾರತತಾತ್ಪರ್ಯನಿರ್ಣಯದ ಪ್ರಕಾಶನದ ಯೋಜನೆಗೆ ನೀಡಲಾಗಿದ್ದು ಅವುಗಳನ್ನು ಅವರು ಪ್ರಕಾಶನ ಪಡಿಸಲಿರುವರು.

೨. ಇವರು ಮಹಾಭಾರತತಾತ್ಪರ್ಯನಿರ್ಣಯಕ್ಕೆ ವ್ಯಾಖ್ಯಾನ ರಚಿಸಿರುವರು ಎಂದು ಪ್ರತೀತಿ ಉಂಟು; ಆದರೆ ಅವು ದೊರೆತಿಲ್ಲ; ಪ್ರಾಚೀನರೂ ಉಲ್ಲೇಖಿಸಿಲ್ಲ.

ಭಾರತವನ್ನು ಎಂಭತ್ತೊಂದು ಶ್ಲೋಕಗಳಲ್ಲಿ ಸಂಗ್ರಹಿಸಿರುವುದರಲ್ಲಿ ಸಂಖ್ಯೆಯ ಔಚಿತ್ಯವೂ ಸೇರಿದೆ. ಎಂದರೆ ೧೮ ಪರ್ವಗಳ ಅದೂ 'ಜಯ', ೮೧ ಶ್ಲೋಕಗಳ ಇದೂ 'ಜಯ' ವೇ.

ಒಮ್ಮೆ ತುಂಬಿದ ವಿದ್ವತ್ಸಭೆಯಲ್ಲಿ ಇವರಿಂದ ಎಲ್ಲ ಬಗೆಯಲ್ಲೂ ಸೋತ ವಿದ್ವಾಂಸರುಗಳು ಇವರ ಕಾವ್ಯಪ್ರತಿಭೆಯನ್ನು ತಿಳಿಯುವ ಅಭಿಲಾಷೆ ವ್ಯಕ್ತಪಡಿಸಿದಾಗ, ತಕ್ಷಣವೇ ರಚಿತವಾದ ಕೃತಿ ಇದು ಎಂಬುದಾಗಿ ಸುಮಧ್ವವಿಜಯ ಉಲ್ಲೇಖಿಸಿದೆ; ಎಂದರೆ ಇದು ಅವರ ಆಶುಕವಿತೆ. ಅತ್ಯಂತ ಜಟಿಲವಾದ ಯಮಕಾಲಂಕಾರದಲ್ಲಿ ಸ್ಫುರಿಸಿ ಬಂದ ಕಾರಣದಿಂದ ಇದು ಯಮಕಭಾರತ. ಯಮಕದ ಅನೇಕ ಪ್ರಾಕಾರಗಳನ್ನು ತೆರೆದಿಡುತ್ತಲೇ, ಕೃಷ್ಣಕಥೆಯ ಮರ್ಮವನ್ನು ಬಿಚ್ಚಿಡುವ ಈ ಕೃತಿ ಅಪೂರ್ವ ಚಿತ್ರಕಾವ್ಯವೂ ಹೌದು, ಶ್ರೇಷ್ಠ ಶಾಸ್ತ್ರಕೃತಿಯೂ ಹೌದು. ಕೃಷ್ಣ,ಭೀಮ, ದ್ರೌಪದಿ ಮೊದಲಾದವರ ವ್ಯಕ್ತಿತ್ವವನ್ನು ತುಂಬಾ ಸರಸವಾಗಿ ಇದು ನಿರೂಪಿಸಿತ್ತದೆ. ಇದರಲ್ಲಿಯ -

ಭಾ ಭಾ ಭಾ ಭಾ ಭಾ ಭಾ ಭಾ ಭಾ ಭಾ ಭಾ ಭಾ ಭಾ ಭಾ ಭಾ ।
ಭಾ ಭಾ ಭಾ ಭಾ ಭಾ ಭಾ ಭಾ ಭಾ ಭಾ ಭಾ ಭಾ ಭಾ ಭಾ ಭಾ ॥

ಎಂಬ ಇಪ್ಪತ್ತೆಂಟು 'ಭಾ' ಕಾರಗಳ ಏಕಾಕ್ಷರಯಮಕ ಇಡೀ ಸಂಸ್ಕೃತ ಸಾಹಿತ್ಯದಲ್ಲೇ ಅಪೂರ್ವ. ಆದಕ್ಕೆ ಅವರೇ ನೀಡಿರುವ ವಿವರಣೆಯನ್ನು ಅವರ ಸಾಕ್ಷಾಚ್ಛಿಷ್ಯರುಗಳಾದ ನರಹರಿತೀರ್ಥರು ಮತ್ತು ಹೃಷೀಕೇಶತೀರ್ಥರು ದಾಖಲಿಸಿರುವರು. ಅವರ ಮತ್ತೊಂದು ಕೃತಿ 'ಭಾಗವತತಾತ್ಪರ್ಯನಿರ್ಣಯ'ದಲ್ಲೂ ಮಹಾಭಾರತತಾತ್ಪರ್ಯನಿರ್ಣಯಕ್ಕೆ ಬೇಕಾದ ಅನೇಕ ವಿವರಗಳು ತುಂಬಿವೆ. ಇದು ಮಹಾಭಾರತಕ್ಕೆ ಸಂಬಂಧಿಸಿದ ಕೃತಿಯಾದ್ದ-ರಿಂದಲೇ 'ಭಾ' ಅಕ್ಷರವನ್ನೇ ಆರಿಸಿಕೊಂಡಿರುವರು ಎಂದು ತಿಳಿಯಬಹುದು. ಅದರಂತೆ ಮುಂದೆ ತಾವು ಸೃಷ್ಟಿಯ ಪ್ರಾರಂಭದಲ್ಲಿ 'ಭಾಣ್' ಎಂದು ಉಚ್ಚರಿಸುವ ಬ್ರಹ್ಮದೇವರಾಗು-ವುದಕ್ಕೂ ಸೂಚಕ ಎನ್ನುವಂತಿದೆ. ಹೀಗೆ ಪ್ರತಿಯೊಂದು ಕಾರ್ಯದ ಹಿನ್ನೆಲೆಯಲ್ಲೂ ಅಪೂರ್ವತೆಯನ್ನು ಮೆರೆಯುವುದು ಶ್ರೀಮದಾಚಾರ್ಯರ ಅಪೂರ್ವ ಹಿರಿಮೆ.

'ಯಮ' ಎಂದರೆ ಯಮನ ಅವತಾರನಾದ ಧರ್ಮರಾಜ; 'ಕ' ಎಂದರೆ ವಾಯು-ದೇವರ ಅವತಾರರಾದ ಭೀಮಸೇನ. ಇವರಿಬ್ಬರೂ ಮಹಾಭಾರತದ ಮಹಾರಾಜ ಯುವರಾಜರು. ವಿಶೇಷವಾಗಿ ಇವರಿಬ್ಬರ ಹಾಗೂ ಇವರಿಂದ ಉಪಲಕ್ಷಿತರಾದ ಇತರ ಪಾಂಡವರು ಮೊದಲಾದವರ ಕಥೆಯಾದ ಮಹಾಭಾರತ ಎಂಬ ಅರ್ಥವನ್ನೂ ಸಹ 'ಯಮಕಭಾರತ' ಎಂಬ ಪದಕ್ಕೆ ಮಾಡಬಹುದು. ಹೀಗೆ ಯಮಕಾಲಂಕಾರಗರ್ಭಿತ ಎಂಬ ಕಾರಣದಿಂದ ಮಾತ್ರವಲ್ಲದೆ, ಮಹಾಭಾರತದ ಕಥೆ ಎಂಬ ಅರ್ಥದಲ್ಲೂ ಈ ಹೆಸರು ಸಾರ್ಥಕ ಎಂದು ತಿಳಿಯಬಹುದು. ಅದರಂತೆ ಯಮಲೋಕದ ಭಯವನ್ನು ತಪ್ಪಿಸಿ, 'ಕ' ಎಂದರೆ ಸುಖವನ್ನು ನೀಡುವ ಕೃತಿ ಎಂಬ ಫಲಶ್ರುತಿರೂಪವಾಗಿಯೂ ಇದರ ಶೀರ್ಷಿಕೆ ಅರ್ಥವಾಗುತ್ತದೆ. ಇದೇ ತೆರನಾದ ಇನ್ನೂ ಅನೇಕ ಅರ್ಥಗಳನ್ನು ಇದಕ್ಕೆ ಮಾಡಲು ಸಾಧ್ಯ.

ಇದಕ್ಕೆ ಶ್ರೀನರಹರಿತೀರ್ಥರು ಶ್ಲೋಕರೂಪ ಮತ್ತು ವಾಕ್ಯರೂಪವಾದ ಎರಡು ಟೀಕೆಗಳನ್ನು ರಚಿಸಿರುವರು. ಯಮಕಭಾರತದ ಮೇಲೆ ಟೀಕೆ ರಚಿಸಿರುವ ಪ್ರಾಚೀನ ಟೀಕಾಕಾರರು ಇವರೊಬ್ಬರೇ ಎನ್ನಬಹುದು. ಇವರ ವ್ಯಾಖ್ಯಾನ ಅನೇಕ ರೀತಿಯಲ್ಲಿ ವಿಶಿಷ್ಟವಾಗಿದ್ದು ಮೂಲದ ಅರ್ಥಗಾಂಭೀರ್ಯವನ್ನು ಅರಿಯಲು ತುಂಬಾ ಉಪಕಾರವಾಗಿದೆ. ಶ್ರೀಯಾದವಾರ್ಯರ ಟೀಕೆಯು ಅಧ್ಯಯನ ಪರಂಪರೆಯಲ್ಲಿ ವಿಶೇಷವಾಗಿ ಬಳಕೆಯಲ್ಲಿದೆ. ವಿಜಯಧ್ವಜತೀರ್ಥರು ಇದರ ಮೇಲೆ ಟೀಕೆಯನ್ನು ರಚಿಸಿರುವ ಉಲ್ಲೇಖವುಂಟು.

ಯಮಕಭಾರತದ [೧]ಟೀಕೆಗಳು

೧) ಶ್ರೀನರಹರಿತೀರ್ಥಕೃತಶ್ರೀಕೃಷ್ಣಲೀಲಾಪ್ರಕಾಶಿಕಾ (ಶ್ಲೋಕರೂಪಟೀಕಾ)
೨) ಶ್ರೀನರಹರಿತೀರ್ಥಕೃತವಾಕ್ಯರೂಪಟೀಕಾ
೩) ಶ್ರೀನಾರಾಯಣಪಂಡಿತಾಚಾರ್ಯಕೃತಟೀಕಾ
೪) ಶ್ರೀವಿಜಯಧ್ವಜತೀರ್ಥಕೃತಟೀಕಾ
೫) ಶ್ರೀವ್ಯಾಸತೀರ್ಥಕೃತಟೀಕಾ
೬) ಶ್ರೀಯದುಪತ್ಯಾಚಾರ್ಯಕೃತಟೀಕಾ
೭) ಛಲಾರೀ ಶ್ರೀನರಸಿಂಹಾಚಾರ್ಯಕೃತಟೀಕಾ
೮) ಶ್ರೀರೊಟ್ಟಿವೇಂಕಟಾದ್ರಿಭಟ್ಟಕೃತಟೀಕಾ
೯) ತಾಮ್ರಪರ್ಣೀ ಶ್ರೀನಿವಾಸಾಚಾರ್ಯಕೃತಟೀಕಾ-ಶ್ರೀಕೃಷ್ಣಲೀಲಾಮಣಿಮಾಲಾ
೧೦) ಶ್ರೀತಮ್ಮಣ್ಣಭಟ್ಟಕೃತಟೀಕಾ
೧೧) ಶ್ರೀವೇಂಕಟೇಶ್ವರೀಯಟೀಕಾ
೧೨) ಶ್ರೀಭಗವಂತರಾಯಕೃತಟೀಕಾ
೧೩) ಗೂಢಕರ್ತೃಕ

ಮಹಾಭಾರತತಾತ್ಪರ್ಯನಿರ್ಣಯ ಹಾಗೂ ಯಮಕಭಾರತ ಇವೆರಡು ಕೃತಿಗಳ ಮೂಲಕ ಶ್ರೀಮದಾನಂದತೀರ್ಥರು ಇತಿಹಾಸಪ್ರಸ್ಥಾನದ ಅಧ್ಯಯನಕ್ಕೆ ಕಲ್ಪಿಸಿರುವ ಅವಕಾಶ ಮಹಾಭಾರತದ ವ್ಯಾಖ್ಯಾನಪರಂಪರೆಯಲ್ಲೇ ಅನನ್ಯವಾದುದು.

★★★★

೧. ಇವುಗಳಲ್ಲಿ ಶ್ರೀನರಹರಿತೀರ್ಥರ ಎರಡು ಟೀಕೆಗಳು, ವೈಶ್ವಾನಾಥಿನಾರಾಯಣಾಚಾರ್ಯರ, ತಿಮ್ಮಣ್ಣಭಟ್ಟರ ಹಾಗೂ ಭಗವಂತರಾಯರ ಟೀಕೆಗಳು ಪಂ. ಶ್ರೀ ಗುತ್ತಲ ಹಯಗ್ರೀವಾಚಾರ್ಯರ ಸಂಪಾದಕತ್ವದಲ್ಲಿ ಮುಂಬೈ ಶ್ರೀಸತ್ಯಧ್ಯಾನ ವಿದ್ಯಾಪೀಠದಿಂದ ಪ್ರಕಾಶಿತವಾಗಿವೆ(೧೯೬೧).

ಪುರಾಣಪ್ರಸ್ಥಾನ

ಭಾಗವತತಾತ್ಪರ್ಯನಿರ್ಣಯ

ಪುರಾಣಸ್ಥಾನಪಾಂಥಾನಾಮಭಾಷಾತ್ರಯವೇದಿನಾಮ್ ।
ಭವತಾ ಸುಸಖಾ ಚಕ್ರೇ ಶ್ರೀಭಾಗವತನಿರ್ಣಯಃ ॥

- ಸುಮಧ್ವವಿಜಯ (೧೫/೭೭)

ವೇದೋಪನಿಷತ್ತುಗಳು ಅಪೌರುಷೇಯವೆಂಬ ಕಾರಣದಿಂದ ಸಚ್ಛಾಸ್ತ್ರಗಳೆನ್ನಿಸಿದರೆ, ಇತಿಹಾಸಪುರಾಣಗಳು 'ಇತಿಹಾಸಪುರಾಣಃ ಪಂಚಮೋ ವೇದಾನಾಂ ವೇದಃ' ಎಂಬುದಾಗಿ ವೇದಗಳಿಂದಲೇ ಪಂಚಮವೇದವೆಂಬುದಾಗಿ ಪರಿಗೃಹೀತ ಎಂಬ ಕಾರಣದಿಂದ ಸಚ್ಛಾಸ್ತ್ರಗಳೆನ್ನಿಸಿವೆ. ಮಹಾಭಾರತ, ರಾಮಾಯಣ ಹಾಗೂ ಪಂಚರಾತ್ರಗಳು ಇತಿಹಾಸವೆನ್ನಿಸಿದರೆ, ಭಾಗವತಾದಿಗ್ರಂಥಗಳು ಪುರಾಣಪ್ರಪಂಚದಲ್ಲಿ ಸೇರಿವೆ.

ವೇದಾರ್ಥದ ಸಮಗ್ರಗ್ರಹಿಕೆಗೆ ಇತಿಹಾಸಪುರಾಣಗಳ ಪರಿಜ್ಞಾನ ಅತ್ಯಗತ್ಯ ಎಂಬ ಮಾತು ಮಹಾಭಾರತಾದಿಗಳಲ್ಲಿ ಬಂದಿದೆ :

ಇತಿಹಾಸಪುರಾಣಾಭ್ಯಾಂ ವೇದಂ ಸಮುಪಬೃಂಹಯೇತ್ ।
ಬಿಭೇತ್ಯಲ್ಪಶ್ರುತಾದ್ ವೇದೋ ಮಾಮಯಂ ಪ್ರಚಲಿಷ್ಯತಿ ॥

ಅಲ್ಲದೆ ಪುರಾಣಪ್ರಪಂಚದ ಪರಿಜ್ಞಾನವಿಲ್ಲದವನು ಎಷ್ಟೇ ವೇದವೇದಾಂಗ ಕೋವಿದನಾಗಿದ್ದರೂ ಜ್ಞಾನಿ [1]ಎನ್ನಿಸಲಾರ ಎಂಬ ಶಾಸ್ತ್ರದ ಮಾತು ಪುರಾಣಗಳ ಅಧ್ಯಯನದ ಮಹತ್ತ್ವವನ್ನು ಸ್ಫುಟಪಡಿಸುತ್ತದೆ. ಇಷ್ಟು ಮಹತ್ತ್ವಪೂರ್ಣವಾದ ಪುರಾಣ-ಪ್ರಪಂಚವನ್ನು ಯಾವ ಮತಾಚಾರ್ಯರೂ ಸಹ ತಾತ್ತ್ವಿಕವಿವೇಚನೆಗೆ ಬಳಸಿಕೊಳ್ಳಲಿಲ್ಲ ಎಂಬುದು ಅಚ್ಚರಿಯ ಸಂಗತಿ. ಇತಿಹಾಸ ಪ್ರಪಂಚವನ್ನು ಕಡೆಗಣಿಸಿದಂತೆ, ಪುರಾಣ-ಪ್ರಪಂಚವನ್ನೂ ಅವರು ಕಡೆಗಣಿಸಿದರು. ಅಲ್ಲಲ್ಲಿ ಕೆಲವು ಇತಿಹಾಸಪುರಾಣವಾಕ್ಯಗಳನ್ನು ಉಲ್ಲೇಖಿಸಿದರೂ, ಅವರಾರೂ ಅವುಗಳ ಸಮಗ್ರಪರಿಜ್ಞಾನಕ್ಕೆ ಯಾವುದೇ ರೀತಿಯ ಕಾಣಿಕೆಯನ್ನು ಸಲ್ಲಿಸಿಲ್ಲ.

ಪುರಾಣಗಳು ಮಹಾಪುರಾಣ ಮತ್ತು ಉಪಪುರಾಣ ಎಂಬುದಾಗಿ ಎರಡು ಬಗೆ. ಮಹಾಪುರಾಣಗಳಂತೆ ಉಪಪುರಾಣಗಳು ಸಹ ಹದಿನೆಂಟು ಎಂಬುದಾಗಿ ಪ್ರಸಿದ್ಧ. ಎರಡೂ ಸಹ ಸಾತ್ತ್ವಿಕ, ರಾಜಸ ಹಾಗೂ ತಾಮಸ ಎಂಬುದಾಗಿ ಮೂರು ವಿಧ. ವಿಷ್ಣುಸರ್ವೋತ್ತಮತ್ವ ಪ್ರತಿಪಾದಕಪುರಾಣಗಳು ಸಾತ್ತ್ವಿಕ, ಶಿವಸರ್ವೋತ್ತಮತ್ವ ಪ್ರತಿಪಾದಕಪುರಾಣಗಳು ತಾಮಸ

---

೧. ಯದಿ ವಿದ್ಯಾಚ್ಚತುರ್ವೇದಾನ್ ಸಾಂಗೋಪನಿಷದಾನ್ ದ್ವಿಜಃ ।
ನ ಚೇತ್ ಪುರಾಣಂ ಸಂವಿದ್ಯಾನ್ನೈವ ಸ ಸ್ಯಾದ್ ವಿಚಕ್ಷಣಃ ॥ ಇತಿ ಭಾರತೇ । - ಗೀತಾಭಾಷ್ಯ

ಹಾಗೂ ಬ್ರಹ್ಮ ಅಗ್ನಿ ಮೊದಲಾದ ಇತರ ದೇವತೆಗಳ ಸರ್ವೋತ್ತಮತ್ವವನ್ನು ತಿಳಿಸುವ ಪುರಾಣಗಳು ರಾಜಸ ಎಂಬುದು ಈ ಪರಿಕಲ್ಪನೆಯ ಹಿನ್ನೆಲೆ[೧].

ಶ್ರೀಮದ್ಭಾಗವತಮಹಾಪುರಾಣದ ಹಿರಿಮೆ

ಭಾಗವತವು ಮಹಾಪುರಾಣ. ಅದರಲ್ಲೂ ಸಾತ್ತ್ವಿಕಪುರಾಣ. ಅದು ಒಟ್ಟು ಹನ್ನೆರಡು ಸ್ಕಂಧಗಳನ್ನು ಹೊಂದಿದ್ದು ಹದಿನೆಂಟು ಸಹಸ್ರಗ್ರಂಥಸಂಖ್ಯೆಯಿಂದ ಕೂಡಿದೆ. ದೇವೀಭಾಗವತವೆಂಬ ಮತ್ತೊಂದು ಪುರಾಣವೂ ಪ್ರಸಿದ್ಧವಿದ್ದು ಅದು ಅಷ್ಟಾದಶಪುರಾಣಗಳಲ್ಲಿ ಸೇರುವುದಿಲ್ಲ. ಶ್ರೀಮದ್ಭಾಗವತವೇ ವ್ಯಾಸಕೃತಮಹಾಪುರಾಣ; ದೇವೀಭಾಗವತವಲ್ಲ.

ಈ ಎಲ್ಲ ಪುರಾಣಉಪಪುರಾಣಗಳ ಕರ್ತೃ ಶ್ರೀವೇದವ್ಯಾಸರು. ಸ್ವತಃ ಭಗವದವತಾರರಾದ ಅವರು ವೇದವಿಭಾಗ ಮಾಡಿ, ಮಹಾಭಾರತ, ಇತರ ಹದಿನೇಳು ಪುರಾಣಗಳು ಹಾಗೂ ಬ್ರಹ್ಮಸೂತ್ರಗಳನ್ನು ರಚಿಸಿದ ಅನಂತರ ಬರೆದ ಕೃತಿ ಎಂಬುದು ಇದರ ಪ್ರಶಸ್ತಿ. ಎಂದರೆ ರಚನೆಯ ಕ್ರಮದಲ್ಲಿ ಇದು ಅವರ ಕೊನೆಯ ಕೃತಿ. 'ಅಂತೇ ಸಿದ್ಧಸ್ತು ಸಿದ್ಧಾಂತಃ' ಎಂಬ ನ್ಯಾಯದಂತೆ ಅವರ ಹೃದಯವನ್ನು ಸ್ಪಷ್ಟ ತಿಳಿಯಲು ನೆರವಾಗುವ ಅಪೂರ್ವಕೃತಿ. ಬ್ರಹ್ಮದೇವರಿಂದ ಆಜ್ಞಪ್ತರಾದ ದೇವರ್ಷಿನಾರದರ ವಿಶೇಷಪ್ರಾರ್ಥನೆಯಂತೆ ಸಕಲಸುಜೀವಿಗಳ ಉದ್ಧಾರಕ್ಕೋಸ್ಕರವಾಗಿ ಅತಿ ಸ್ಫುಟವಾಗಿ ಹರಿಸರ್ವೋತ್ತಮತ್ವಾದಿ ಪರಮಪ್ರಮೇಯಗಳನ್ನು ಅಪೂರ್ವರೀತಿಯಲ್ಲಿ ತಿಳಿಸಲೆಂದೇ ರಚಿತವಾದ ವಿಶಿಷ್ಟಕೃತಿ ಇದು ಎಂಬ ಮಾತು ಇದರಲ್ಲೇ ಬಂದಿದೆ.

ಇದು ರಚಿತವಾದ ಸ್ಥಳ ಸರ್ವಶ್ರೇಷ್ಠವಾದ ಬದರೀಕ್ಷೇತ್ರ; ಅದರಲ್ಲೂ ಸರಸ್ವತೀತೀರದ ಶಮ್ಯಾಪ್ರಾಸವೆಂಬ ಪವಿತ್ರ ಆಶ್ರಮ. ರಚಿಸಿದವರಂತೂ ಸ್ವತಃ ಶ್ರೀಹರಿಯ ಅವತಾರರಾದ ಶ್ರೀವೇದವ್ಯಾಸರು. ಅದನ್ನು ಅವರು ಉಪದೇಶಿಸಿದ್ದು ತಮ್ಮ ಪುತ್ರತ್ವೇನ ಅವತರಿಸಿದ ಶುಕರೂಪದ ಶ್ರೀರುದ್ರದೇವರಿಗೆ. ರುದ್ರದೇವರೊಳಗೆ ಆವಿಷ್ಟರಾಗಿ ಅದನ್ನು ಮುಖ್ಯತಃ ಶ್ರವಣ ಮಾಡಿದ್ದು ಭಾವಿಬ್ರಹ್ಮ ಶ್ರೀವಾಯುದೇವರು. ಎಂದರೆ ತ್ರಿಮೂರ್ತಿಗಳ ವ್ಯಾಪಾರವು ಇದರಲ್ಲಿ ಕೂಡಿದ್ದು ಮೇಲ್ನೋಟಕ್ಕೇ ಇದು ಹರಿಸರ್ವೋತ್ತಮತ್ವ, ವಾಯುಜೀವೋತ್ತಮತ್ವ ಮೊದಲಾದ ಪರಮಪ್ರಮೇಯಗಳನ್ನು ಸ್ಫುಟಪಡಿಸುವ ಅಪೂರ್ವಕೃತಿ. ಬ್ರಹ್ಮದೇವರು ಪೂಜಿಸಿ, ಶಿವನು ಜಟೆಯಲ್ಲಿ ಧರಿಸಿದ ವಿಷ್ಣುಪಾದೋದ್ಭವ ಗಂಗೆಯಂತೆ ಈ ಭಾಗವತಗಂಗೆ ತ್ರಿಜಗತ್ಪಾವನ.

---

೧. ಸಾತ್ತ್ವಿಕೇಷು ಪುರಾಣೇಷು ಮಾಹಾತ್ಮ್ಯಮಧಿಕಂ ಹರೇಃ।
ರಾಜಸೇಷು ಚ ಮಾಹಾತ್ಮ್ಯಮಧಿಕಂ ಬ್ರಹ್ಮಣೋ ವಿದುಃ॥
ತದ್ವದಗ್ನೇಶ್ಚ ಮಾಹಾತ್ಮ್ಯಂ ತಾಮಸೇಷು ಶಿವಸ್ಯ ಹಿ।
ಸಂಕೀರ್ಣೇ ಚ ಸರಸ್ವತ್ಯಾಃ ಪಿತೄಣಾಂ ಚ ನಿಗದ್ಯತೇ॥ - ಸ್ಕಾಂದ ೭-೨

ಹೀಗೆ ಪುರಾಣರಾಜ ಎನ್ನಿಸಿರುವ ಮಹೋನ್ನತಕೃತಿಯ ಹೃದಯವನ್ನು ತೆರೆದಿಡುವ ಅಮೋಘಕೃತಿ ಶ್ರೀಮಧ್ವಾಚಾರ್ಯರ 'ಭಾಗವತತಾತ್ಪರ್ಯನಿರ್ಣಯ'.

ಆಚಾರ್ಯರ ಭಾಗವತಪುರಾಣದ ಅಪೂರ್ವಪರಿಜ್ಞಾನದ ಬಗ್ಗೆ ವಿಶೇಷ ಬೆಳಕು ಚೆಲ್ಲುವ ಪ್ರಸಂಗವೊಂದನ್ನು [೧]ಸುಮಧ್ವವಿಜಯ ದಾಖಲಿಸಿದೆ.

ಒಮ್ಮೆ ಅಚ್ಯುತಪ್ರೇಕ್ಷರು ಭಾಗವತಪ್ರವಚನ ನಡೆಸುತ್ತಿದ್ದಾಗ ಅವರ ಶಿಷ್ಯವೃಂದ ತಮ್ಮ ಪ್ರತಿಗಳಲ್ಲಿ ಶ್ಲೋಕಗಳು ವಿಭಿನ್ನ ಪಾಠದಿಂದ ಕೂಡಿರುವುದನ್ನು ಗಮನಕ್ಕೆ ತಂದಿತಂತೆ. ಆಗ ಅಚ್ಯುತಪ್ರೇಕ್ಷರು ಗೊಂದಲಗೊಳ್ಳಲು ಅಲ್ಲಿ ಉಪಸ್ಥಿತರಿದ್ದ ಶ್ರೀಪೂರ್ಣಪ್ರಜ್ಞರು ಅವುಗಳಲ್ಲಿ ಒಂದು ಪಾಠವನ್ನು ವ್ಯಾಸಪ್ರೋಕ್ತವಾದ ಶುದ್ಧಪಾಠ-ವೆಂಬುದಾಗಿ ತಿಳಿಸಿದರಂತೆ. ಅದನ್ನು ಮನವರಿಕೆ ಮಾಡಿಕೊಡಲು ಅಚ್ಯುತಪ್ರೇಕ್ಷರು ವಿಜ್ಞಾಪಿಸಿದಾಗ, ಅವರ ಅಪೇಕ್ಷೆಯಂತೆ ಭಾಗವತಪುರಾಣದ ಪಂಚಮಸ್ಕಂಧವನ್ನು ಸಮಗ್ರವಾಗಿ, ಅರ್ಥಸಮೇತ ಪೂರ್ಣವಾಗಿ ಪಠಿಸಿ ತೋರಿಸಿ, ವ್ಯಾಸಪ್ರೋಕ್ತಪಾಠವನ್ನು ಶ್ರೀಪೂರ್ಣಪ್ರಜ್ಞರು ಖಚಿತಪಡಿಸಿ ಗೊಂದಲವನ್ನು ಪರಿಹರಿಸಿದರಂತೆ. ಈ ಘಟನೆ ನಡೆದಾಗ ಅವರ ವಯಸ್ಸು ಹನ್ನೆರಡನ್ನೂ ದಾಟಿರಲಿಲ್ಲ ಎಂಬುದು ಆ ಪ್ರಸಂಗದ ಹಿನ್ನೆಲೆಯ ಪರಿಶೀಲನೆಯಿಂದ ತಿಳಿಯುತ್ತದೆ. ಇದು ಶ್ರೀಮಧ್ವಾಚಾರ್ಯರ ಪುರಾಣ-ಪ್ರಪಂಚದ ಪರಿಜ್ಞಾನ, ಇತರ ಶಾಸ್ತ್ರಪ್ರಪಂಚದ ಪರಿಜ್ಞಾನದಂತೆ ಸಮಗ್ರವೂ, ಪರಿಪೂರ್ಣವೂ ಆಗಿದ್ದಿತು ಎನ್ನಲು ಅಪೂರ್ವ ನಿದರ್ಶನ.

ಶ್ರೀಮದಾಚಾರ್ಯರು ಭಾಗವತಪುರಾಣವನ್ನು ಜನಸಮುದಾಯಕ್ಕೆ ಪ್ರವಚನ-ರೂಪವಾಗಿ ನಿರೂಪಿಸಿ, ತಾತ್ತ್ವಿಕವಿಷಯಗಳನ್ನು ಸರ್ವಗ್ರಾಹ್ಯವನ್ನಾಗಿಸುತ್ತಿದ್ದ ಮತ್ತೊಂದು ಪ್ರಸಂಗವನ್ನೂ ಸುಮಧ್ವವಿಜಯ ದಾಖಲಿಸಿದೆ. ಆಚಾರ್ಯರ ಪ್ರವಚನದ ವೇಳೆಯಲ್ಲಿ

---

೧. ಗುರೋರುಪಾಂತೇ ಶ್ರವಣೇ ರತೈರ್ದ್ವಿಜೈಃ ಸ ಪಂಚಷೈರ್ಭಾಗವತೇ ಕದಾಚನ ।
ಬಹುಪ್ರಕಾರೇ ಲಿಖಿತೇಽಪಿ ವಾಚಿತೇ ಪ್ರಕಾರಮೇಕಂ ಪ್ರಭುರಭ್ಯಧಾದ್ ದೃಢಮ್ ॥
ಪರಪ್ರಕಾರೇಷ್ವಪಿ ಸಂಭವತ್ಸು ತೇ ವಿನಿರ್ಣಯೋಽಸ್ಮಿನ್ ಕಥಮಿತ್ಯುದೀರಿತೇ ।
ಮುಕುಂದಬೋಧೇನ ಮಹಾಹೃದಬ್ರವೀತ್ ಪ್ರಕಾರಮೇಕಂ ಭಗವತ್ಕೃತಂ ಸ್ಫುಟಮ್ ॥
ನಿಗದ್ಯತಾಂ ಗದ್ಯಮಿಹೈವ ಪಂಚಮೇ ಜಗದ್ಗುರೋರ್ವೇತ್ಥ ಕೃತಿಸ್ಥಿತಿಂ ಯದಿ ।
ಇತಿ ಬ್ರುವಾಣೇ ಯತಿಸತ್ತಮೇ ಸ್ವಯಂ ತದುಕ್ತಮಾರ್ಗೇಣ ಜಗಾದ ಭೂರಿಹೃತ್ ॥
ಅಶೇಷಶಿಷ್ಯೈಶ್ಚ ತದಾಜ್ಞಯಾ ತದಾ ಪರೀಕ್ಷಣಾಯೈಕ್ಷಿ ಸಮಸ್ತಪುಸ್ತಕಮ್ ।
ಸ ತತ್ರ ಹಂತ್ಯೈಕತಮೇಕ್ಷಿತಂ ತ್ಯಜನ್ ನ ತಾವದಧ್ಯಾಯನಿಕಾಯಮಭ್ಯಧಾತ್ ॥
ಅತ್ರ ಜನ್ಮನಿ ನ ಯತ್ಪಠಿತಂ ತೇ ಜೈತ್ರ ಭಾತಿ ಕಥಮಿತ್ಯಮುನೋಕ್ತೇ ।
ಪೂರ್ವಜನ್ಮಸು ಹಿ ವೇದ ಪುರೇದಂ ಸರ್ವಮಿತ್ಯಮಿತಬುದ್ಧಿರುವಾಚ ॥
– ಸುಮಧ್ವವಿಜಯ (೪/೪೯-೫೩)

ಮೂಲಶ್ಲೋಕಗಳನ್ನು ಪಠಿಸುವ ಭಾಗ್ಯ ಫಲಿಮಾರುಮಠದ ಮೂಲಪುರುಷರಾಗಿದ್ದ ಶ್ರೀಹೃಷೀಕೇಶತೀರ್ಥರದಾಗಿದ್ದಿತು ಎಂಬ ವಿವರ ಭಾವಪ್ರಕಾಶಿಕೆಯಲ್ಲಿದೆ[1].

ಈ ನಿರೂಪಣೆಗಳಿಂದ ಶ್ರೀಮದಾಚಾರ್ಯರ ಭಾಗವತಪುರಾಣದ ಸಹಜ ನಂಟು ವಿಶೇಷವಾಗಿ ಸ್ಫುಟಪಡುತ್ತದೆ ಮತ್ತು ಅವರ ಕೃತಿಯ ಅಪೂರ್ವತೆಯನ್ನು ಅರ್ಥಮಾಡಿ-ಕೊಳ್ಳಲು ನೆರವಾಗುತ್ತದೆ.

ಶ್ರೀಭಾಗವತತಾತ್ಪರ್ಯನಿರ್ಣಯವು ಪ್ರತಿಶ್ಲೋಕಕ್ಕೂ ರಚಿತವಾದ ವ್ಯಾಖ್ಯಾನವಲ್ಲ, ಆದರೆ ತಾತ್ತ್ವಿಕವಾಗಿ ಐತಿಹಾಸಿಕವಾಗಿ ಜಟಿಲವೆನ್ನಿಸುವ ಸಾವಿರಕ್ಕೂ ಹೆಚ್ಚಿನ ಶ್ಲೋಕಗಳಿಗೆ ಅನೇಕ ಪ್ರಮಾಣಗಳ ಉದಾಹರಣೆಗಳೊಂದಿಗೆ ಸ್ವರಸವಾದ ಉದ್ಬೋದಕವಾದ ವಿವಣೆಗಳನ್ನು ಒದಗಿಸಿರುವುದು ಇದರ ಹಿರಿಮೆ. ಸಹಜವಾಗಿಯೇ ಏಕಾದಶಸ್ಕಂದಕ್ಕೆ ನೀಡಿರುವ ವಿವರಣೆ ತುಂಬಾ ವಿಸ್ತಾರವಾಗಿದೆ. ಶ್ರುತಿಗೀತಾ, ಕಪಿಲಗೀತಾ ಮೊದಲಾದ ಪ್ರಸಂಗಗಳಿಗೂ ವಿವರವಾದ ವ್ಯಾಖ್ಯಾನವೇ ದೊರೆಯುತ್ತದೆ. ಉದ್ದಕ್ಕೂ ವಿವಿಧ ಪ್ರಾಚೀನ ಗ್ರಂಥಗಳ ಉಲ್ಲೇಖ ನಿಯಮೇನ ಕಂಡು ಬರುತ್ತದೆ. ಒಟ್ಟಾಗಿ ಇದರ ವೈಶಿಷ್ಟ್ಯವನ್ನು ಹೀಗೆ ಸಂಗ್ರಹಿಸಬಹುದು:

೧. ಭಾಗವತದ ಹಿರಿಮೆಯ ಪ್ರತಿಪಾದನೆ

ಭಾಗವತದ ಹಿರಿಮೆಯ ಮರ್ಮವನ್ನು ಗರುಡಪುರಾಣದ ಶ್ಲೋಕದಿಂದ ಅವರು ಸಮರ್ಥಿಸಿರುವ ಪರಿ ಅಪೂರ್ವ; ಭಾಗವತವು ಬ್ರಹ್ಮಸೂತ್ರದ ಭಾವ, ಮಹಾಭಾರತದ ಅರ್ಥನಿರ್ಣಯ, ವೇದಗಳ ವಿವರಣೆ, ಗಾಯತ್ರಿಯ ಭಾಷ್ಯ ಹಾಗೂ ಸಕಲಪುರಾಣಗಳ ಸಾರ. ಈ ತೆರನಾದ ಪಂಚಮುಖ ವೈಶಿಷ್ಟ್ಯ ಇದರದು; ಪಂಚಮುಖ ರುದ್ರದೇವರ ಅವತಾರರಾದ ಶುಕಮುನಿಗಳಿಂದ ಈ ಪಂಚಮುಖ ವೈಶಿಷ್ಟ್ಯದ ಕೃತಿ ಜಗತ್ತಿಗೆ ಪ್ರಸಾರಗೊಂಡಿದ್ದು ತೀರ ಔಚಿತ್ಯಪೂರ್ಣ ಎಂಬ ಭಾವವನ್ನು ಸಹ ಈ ವಿವರಣೆಯಿಂದ ಗ್ರಹಿಸಲು ಸಾಧ್ಯವಾಗುತ್ತದೆ :

'ಅರ್ಥೋಽಯಂ ಬ್ರಹ್ಮಸೂತ್ರಾಣಾಂ ಭಾರತಾರ್ಥವಿನಿರ್ಣಯಃ।
ಗಾಯತ್ರೀಭಾಷ್ಯರೂಪೋಽಸೌ ವೇದಾರ್ಥಪರಿಬೃಂಹಿತಃ।
ಪುರಾಣಾನಾಂ ಸಾರರೂಪಃ ಸಾಕ್ಷಾದ್ಭಗವತೋದಿತಃ।
ದ್ವಾದಶಸ್ಕಂಧಸಂಯುಕ್ತೋ ಶತವಿಚ್ಛೇದಸಂಯುತಃ।
ಗ್ರಂಥೋಽಷ್ಟಾದಶಸಾಹಸ್ರಃ ಶ್ರೀಮದ್ಭಾಗವತಾಭಿಧಃ' ಇತಿ॥ (ಗಾರುಡೇ) (೧/೧/೧)

---

೧. ಅವದತ್ ಸ ಕಥಾಂ ರಥಾಂಗಪಾಣೇರ್ಭಗವಾನ್ ಭಾಗವತೇ ಭವಾಪಹಂತ್ರೀಮ್।
ಅನುಕೂಲಗುಣಸ್ವರಾದಿಭಾಜಾ ನಿಜಶಿಷ್ಯಪ್ರವರೇಣ ವಾಚ್ಯಮಾನೇ॥

– ಸುಮಧ್ವವಿಜಯ (೧೩/೪೦)

ನಿಜಶಿಷ್ಯಪ್ರವರೇಣ - ಹೃಷೀಕೇಶತೀರ್ಥೇನ – ಭಾವಪ್ರಕಾಶಿಕಾ

೨. ಜಟಿಲಶ್ಲೋಕಗಳ ಅರ್ಥವಿವರಣೆ

ಈ ಮೊದಲೇ ಹೇಳಿದಂತೆ ಇದು ಭಾಗವತದ ಪ್ರತಿಶ್ಲೋಕಗಳಿಗೂ ರಚಿತವಾದ ವ್ಯಾಖ್ಯಾನವಲ್ಲ. ವಿಶಿಷ್ಟರೀತಿಯ ಪದಪ್ರಯೋಗಗಳಿಂದ ಶಬ್ದಾರ್ಥ ತಿಳಿದೂ, ಭಾವಾರ್ಥ ಸ್ಫುಟಪಡದ ಶ್ಲೋಕಗಳ ಬಗ್ಗೆ ಬೆಳಕು ಚೆಲ್ಲುವುದು ಇದರ ಪ್ರಮುಖ ಉದ್ದೇಶಗಳಲ್ಲೊಂದು.

'ಜನ್ಮಾದ್ಯಸ್ಯ ಯತಃ' ಎಂಬ ಮೊದಲ ಶ್ಲೋಕದ ವಿವರಣೆಯೇ ಇದಕ್ಕೆ ಉತ್ತಮ ನಿದರ್ಶನ. ಮೂಲಗ್ರಂಥದ ಒಂದು ಶ್ಲೋಕವನ್ನು ಸಮಗ್ರವಾಗಿ ವಿವೇಚಿಸುವ ಕೌಶಲಕ್ಕೆ ಇದು ಶ್ರೇಷ್ಠನಿದರ್ಶನವೂ ಆಗಿದೆ.

೩. ಕಠಿಣ ಪದಗಳ ವಿವರಣೆ

ಮೇಲ್ನೋಟಕ್ಕೆ ಸುಲಭವೆನ್ನಿಸಿಯೂ ತಾತ್ಪರ್ಯ ದುರ್ಬೋಧ ಎನ್ನಿಸುವ ಶಬ್ದಗಳ ರಾಶಿಯೇ ಪುರಾಣಪ್ರಪಂಚದಲ್ಲಿ ಉಂಟು. ಅಂತಹ ಪದಗಳ ಬಗ್ಗೆ ಸ್ಪಷ್ಟವಾದ ವಿವರಣೆ ಈ ಕೃತಿಯಲ್ಲಿ ದೊರೆಯುತ್ತದೆ.

ಪ್ರಥಮಸ್ಕಂದದಲ್ಲಿ ಬರುವ 'ಕೌಶಿಕ್ಯಪ ಉಪಸ್ಪೃಶ್ಯ'' ಎಂಬಲ್ಲಿನ 'ಕೌಶಿಕೀ' ಎಂಬ ಪದವನ್ನು ಕೆಲವರು ಕೌಶಿಕೀನದಿ ಎಂದೂ ಮತ್ತೆ ಕೆಲವರು ಕೌಶಿಕ ಗೋತ್ರದವನು ಎಂದೂ ವ್ಯಾಖ್ಯಾನಿಸಿರುವರು. ಆದರೆ ಭಾಗವತದ ಆ ಪ್ರಸಂಗದಲ್ಲಿ ಕೌಶಿಕೀ ನದಿ ಇಲ್ಲವೇ ಇಲ್ಲ. ಪರೀಕ್ಷಿದ್ರಾಜನಿಗೆ ಶಾಪವಿತ್ತ ಶೃಂಗಿಮುನಿಯದು ಅಂಗೀರಸ ಗೋತ್ರವೇ ಹೊರತು ಕೌಶಿಕ-ಗೋತ್ರವಲ್ಲ. ಹೀಗೆ ಈ ಎರಡು ವಿವರಣೆಗಳೂ ಅಸಮಂಜಸ. ಶ್ರೀಮದಾಚಾರ್ಯರು 'ಕೌಶಿಕೀ' ಎಂಬ ಪದಕ್ಕೆ 'ಕುಶಪಾಣಿಃ' ಎಂಬುದಾಗಿ ವಿವರಣೆ ನೀಡಿ ಹೊಸ ಬೆಳಕು ಚೆಲ್ಲಿರುವರು.

ಇದರಂತೆ 'ಆವೀಚ್ಯ', 'ಬದರ' ಮೊದಲಾದ ಅನೇಕ ಪದಗಳಿಗೆ ಸಾಧಾರವಾಗಿ ಅರ್ಥಗಳನ್ನು ವಿವರಿಸಿರುವರು :

> ಮದವಿಘೂರ್ಣಿತಲೋಚನ ಈಷನ್ಮಾನದಃ ಸ್ವಸುಹೃದಾಂ ವನಮಾಲೀ ।
> ಬದರಪಾಂಡುವದನೋ ಮೃದುಗಂಡಮ್ಮಂಡಯನ್ ಕನಕಕುಂಡಲಲಕ್ಷ್ಮ್ಯಾ ॥
>
> – ಭಾಗವತ
>
> ಮಾನವೋ ಬದರಃ ಸಿಂಧುಃ ಶಶಿನಸ್ತು ತ್ರಿನಾಮಕಮ್ ।
> ಯೋ ವೇದ ಮುಚ್ಯತೇ ರೋಗೈರ್ವಿಷ್ಣುನಾಮ್ನೇವ ಸಂಸೃತೇಃ ॥
>
> ಇತಿ ಸ್ಕಾಂದೇ ॥ (೧೦/೩೩/೨೪)

೪. ತಾತ್ತ್ವಿಕವಿಶ್ಲೇಷಣೆ

ಹರಿಸರ್ವೋತ್ತಮತ್ವ, ಜಗತ್ಸತ್ಯತ್ವ ಮೊದಲಾದ ಮುಖ್ಯಪ್ರಮೇಯಗಳಿಗೆ ವಿರುದ್ಧವೆನ್ನಿಸಿ, ಅದ್ವೈತಪರ ಎಂದು ತೋರುವ ಶ್ಲೋಕಗಳಿಗೆ ಅವು ಸ್ಪಷ್ಟವಾಗಿ ಹರಿ-

ಸರ್ವೋತ್ತಮತ್ವಾದಿಪ್ರಮೇಯಸಾಧಕವಾದ ದ್ವೈತಪರಶ್ಲೋಕಗಳೇ ಹೊರತು ಎಷ್ಟು ಮಾತ್ರಕ್ಕೂ ಅದ್ವೈತಪರವಲ್ಲ ಎಂಬುದನ್ನು 'ಭೇದಮೋಹ' ಮೊದಲಾದ ಪದಗಳ ಅರ್ಥವನ್ನು ವಿವರಿಸುವ ಮೂಲಕ ಸಾಧಿಸಿ ತೋರಿಸಿರುವರು :

ಶಶ್ವತ್ಸ್ವರೂಪಮಹಸೈವ ನಿಪೀತಭೇದ-
ಮೋಹಾಯಬೋಧಧಿಷಣಾಯ ನಮಃ ಪರಸ್ಮೈ ।
ವಿಶ್ವೋದಯಸ್ಥಿತಿಲಯೇಷು ನಿಮಿತ್ತಲೀಲಾ-
ರಾಮಾಯ ತೇ ನಮ ಇದಂ ಚಕೃಮೇಶ್ವರಾಯ ॥ – ಭಾಗವತ(೩/೧೦/೧೪)
'ಈಶಸ್ಯಾಪೂರ್ಣತಾಜ್ಞಾನಂ ವಿಷ್ಣೋರನ್ಯಸ್ಯ ಚೇಶತಾ ।
ಭೇದಸ್ತಸ್ಯಾವತಾರೇಷು ಜೀವಸ್ಯೇಶತ್ವಮೇವ ಚ ॥
ತಥಾ ಜೀವತ್ವಮೀಶಸ್ಯ ಜಡಾಭೇದಸ್ತಯೋರಪಿ ।
ಭೇದಮೋಹ ಇತಿ ಪ್ರೋಕ್ತಃ ಸ ಸದಾ ನ ಹರೌ ಕ್ವಚಿತ್ ।
ಅನ್ಯೇಷಾಂ ತತ್ಪ್ರಸಾದೇನ ಶನೈರ್ಯಾತಿ ಸತಾಮಪಿ' ಇತಿ ಸ್ಕಾಂದೇ ॥

೫. ಮಹಾಭಾರತದೊಂದಿಗೆ ಬರುವ ವಿರೋಧಗಳ ಪರಿಹಾರ

ಶ್ರೀಮದ್ಭಾಗವತವು ಮಹಾಭಾರತದ ಅರ್ಥನಿರ್ಣಯ ಎಂದು ಗರುಡಪುರಾಣ ಸಾರಿದೆ ಎಂಬುದನ್ನು ಅವರು ತೋರಿಸಿರುವುದನ್ನು ಈಗಾಗಲೇ ಉಲ್ಲೇಖಿಸಿದ್ದಾಗಿದೆ. ಆದರೆ ಕೆಲವೆಡೆ ಭಾಗವತದ ನಿರೂಪಣೆಗೂ, ಮಹಾಭಾರತದ ನಿರೂಪಣೆಗೂ ವಿರೋಧವಿರುವಂತೆ ತೋರುತ್ತದೆ. ಅಂತಹ ಪ್ರಸಂಗಗಳನ್ನು ವಿವೇಚಿಸಿ, ವಾಸ್ತವವಾಗಿ ಯಾವುದೇ ವಿರೋಧವೂ ಆ ಕೃತಿಗಳಲ್ಲಿ ಬಂದಿಲ್ಲ ಎಂಬುದನ್ನು ಸಾಧಾರವಾಗಿ ನಿರೂಪಿಸುವುದು ಈ ಕೃತಿಯ ಮತ್ತೊಂದು ಸಾಧನೆ.

ಉದಾಹರಣೆಗೆ ಅಶ್ವತ್ಥಾಮರನ್ನು ಪರಾಭವಗೊಳಿಸಿ ಅವರ ತಲೆಯ ಮೇಲಿದ್ದ ಅಪೂರ್ವ ಮಣಿಯನ್ನು ತೆಗೆದುಕೊಳ್ಳುವ ಪ್ರಸಂಗದಲ್ಲಿನ ಭಾರತಭಾಗವತಗಳಲ್ಲಿನ ವಿರೋಧವನ್ನು ಶ್ರೀಮದಾಚಾರ್ಯರು ಭಾಗವತ ಪುರಾಣದ ನಿರೂಪಣೆ ಅಶ್ವತ್ಥಾಮರ ಸ್ವಪ್ನದರ್ಶನದ ವಿವರವಾಗಿದ್ದರೆ ಮಹಾಭಾರತದ ನಿರೂಪಣೆ ವಾಸ್ತವಿಕವಾಗಿ ನಡೆದ ಪ್ರಸಂಗ ಎಂದು ತಿಳಿಸಿ ಪರಿಹರಿಸಿರುವುದು :

ಸ್ವಪ್ನೋಽಯಮ್ –

'ಪಾರ್ಥಾನುಯಾತಮಾತ್ಮಾನಂ ದ್ರೌಣಿಃ ಸ್ವಪ್ನೇ ದದರ್ಶ ಹ ।
ಬಂಧನಂ ಚಾತ್ಮನಸ್ತತ್ರ ದ್ರೌಪದ್ಯಾ ಚೈವ ಮೋಕ್ಷಣಮ್' ಇತಿ ಸ್ಕಾಂದೇ ।
ತಸ್ಮಾನ್ನೈಷೀಕವಿರೋಧಃ ॥ (೧/೭/೧೫-೫೭)

ಅರ್ಜುನನು ಯಾದವರ ವಿಚಾರವನ್ನು ತಿಳಿದು ಬರಲು ದ್ವಾರಕೆಗೆ ತೆರಳಿ ಏಳು ತಿಂಗಳುಗಳಾದವು ('ಗತಾಃ ಸಪ್ತಾಧುನಾ ಮಾಸಾಃ') ಎಂಬಲ್ಲಿನ 'ಮಾಸ'ಶಬ್ದಕ್ಕೆ 'ದಿನಗಳು' ಎಂಬ ಅರ್ಥವನ್ನು ತಿಳಿಸಿ, ಅದನ್ನು ನಾಮಮಹೋದಧಿ ಆಧಾರದ ಮೇಲೆ ಸ್ಫುಟಪಡಿಸುವ ಮತ್ತೊಂದು ಪ್ರಸಂಗವೂ ಇದರಂತಹುದೇ :

ಮಾಸಶಬ್ದೇನಾಹಾನ್ಯುಚ್ಯಂತೇ । ತಥಾಹಿ ಮಹಾಭಾರತೇ –
'ಅಹಸ್ತು ಮಾಸಶಬ್ದೋಕ್ತಂ ಯತ್ರ ಚಿಂತಾಯುತಂ ವ್ರಜೇತ್ ।
ಏವಂ ಸಂವತ್ಸರಾದ್ಯಂ ಚ ವಿಪರೀತೇ ವಿಪರ್ಯಯಃ'
–ಇತಿ ನಾಮಮಹೋದಧೌ ॥ (೧/೧೩/೨)

ಶ್ರೀರಾಮನು ರಾಜ್ಯವಾಳಿದ್ದು ಹನ್ನೊಂದು ಸಾವಿರ ವರ್ಷಗಳ ಕಾಲ ಎಂದು ಮಹಾಭಾರತದ ವನಪರ್ವ ಹಾಗೂ ವಾಲ್ಮೀಕಿರಾಮಾಯಣದಲ್ಲಿ ಬಂದಿದ್ದರೆ, ಭಾಗವತಪುರಾಣದಲ್ಲಿ ಹದಿಮೂರು ಸಾವಿರ ವರ್ಷಗಳು ಎಂಬುದಾಗಿ ನಿರೂಪಿತವಾಗಿದೆ. ಭಾಗವತಪುರಾಣದ ಉಲ್ಲೇಖ ನಕ್ಷತ್ರಮಾಸದ ಪರಿಗಣನೆಯನ್ನು ಆಧರಿಸಿರುವುದರಿಂದ ಅದು ಮಹಾಭಾರತದ ಹನ್ನೊಂದು ಸಾವಿರ ವರ್ಷಗಳಿಗೆ ಸಂವಾದಿಯೇ ಆಗಿದೆ ಎಂದು ನಿರೂಪಿಸಿ, ಅವುಗಳ ವಿರೋಧವನ್ನು ಪರಿಹರಿಸಿರುವರು :

'ನಕ್ಷತ್ರಮಾಸಗಣಿತಂ ತ್ರಯೋದಶಸಹಸ್ರಕಮ್ ।
ಬ್ರಹ್ಮಲೋಕಸಮಂ ಚಕ್ರೇ ಸಮಸ್ತಂ ಕ್ಷಿತಿಮಂಡಲಮ್ ॥ (೯/೯/೧೭)

೬. ಪುರಾಣಗಳಲ್ಲಿನ ಪರಸ್ಪರ ವಿರೋಧಗಳ ಪರಿಹಾರ

ಕೆಲವು ಪುರಾಣಗಳಲ್ಲಿ ಬರುವ ವಿವರಗಳು ಒಂದಕ್ಕೊಂದು ವಿರುದ್ಧವಾಗಿರುವಂತೆ ಕಾಣುವುದುಂಟು. ವಾಮನರೂಪಿ ಭಗವಂತನು ಊರ್ಧ್ವಲೋಕವನ್ನು ಅಳೆಯಲು ಎತ್ತಿದ್ದು ಎಡಪಾದ ಎಂದು ಭಾಗವತಪುರಾಣದ ಉಲ್ಲೇಖ. ಬಲಪಾದ ಎಂದು ಬೇರೆ ಪುರಾಣಗಳ ಹೇಳಿಕೆ. ಆಚಾರ್ಯರು ಶ್ವೇತವರಾಹಕಲ್ಪದಲ್ಲಿ ವಾಮಪಾದವನ್ನೂ, ಇತರ ಕಲ್ಪಗಳಲ್ಲಿ ಬಲಪಾದವನ್ನೂ ಶ್ರೀಹರಿ ಎತ್ತಿದ ಎಂದು ತಿಳಿಸಿ, ಇಂಥ ವಿರೋಧಗಳನ್ನು ಕಲ್ಪವ್ಯತ್ಯಾಸದ ಮೂಲಕ ಪರಿಹರಿಸಿಕೊಳ್ಳಬೇಕು ಎಂದು ನಿರ್ದೇಶಿಸಿರುವರು :

'ವಾರಾಹೇ ವಾಮಪಾದಂ ತು ತದನ್ಯೇಷು ತು ದಕ್ಷಿಣಮ್ ।
ಪಾದಂ ಕಲ್ಪೇಷು ಭಗವಾನುಜ್ಜಹಾರ ತ್ರಿವಿಕ್ರಮಃ' ॥ ಇತಿ ಚ । (೫/೧೭/೧)

ಈ ಮೂಲಕ ಕಲ್ಪಭೇದದ ಹಿನ್ನೆಲೆಯಲ್ಲಿ ಪುರಾಣಗಳಲ್ಲಿನ ಕೆಲವು ವಿರೋಧಾಭಾಸಗಳನ್ನು ಪರಿಹರಿಸಿಕೊಳ್ಳಬೇಕು ಎಂಬ ವಿಶೇಷಾಂಶವನ್ನು ತೋರಿಸಿಕೊಟ್ಟಿರುವರು.

ಮಂದರಪರ್ವತವನ್ನು ವೈವಸ್ವತಮನ್ವಂತರದಲ್ಲಿ ಅನಂತನಾಮಕ ಗರುಡನೂ, ರೈವತಮನ್ವಂತರದಲ್ಲಿ ಸುಪರ್ಣನಾಮಕ ಗರುಡನೂ ಧರಿಸಿದ್ದರು ಎಂಬುದು ಈ ಕಲ್ಪಭೇದದ ಪ್ರಸಂಗಕ್ಕೆ ಮತ್ತೊಂದು ನಿದರ್ಶನ :

ಅನಂತೋಢೋ ಮಂದರಸ್ತು ಯದಾ ವೈವಸ್ವತಾಂತರಮ್ ।
ಅಮೃತಾರ್ಥಂ ಸುಪರ್ಣೋಢೋ ರೈವತಸ್ಯಾಂತರೇ ಮನೋಃ ॥ ಇತಿ ಬ್ರಾಹ್ಮೇ ॥
- (೮/೬/೩೯)

ಆದರೆ ಈ ವ್ಯವಸ್ಥೆ ರಾಮಾಯಣ ಮಹಾಭಾರತಗಳ ಪ್ರಸಂಗಗಳ ವಿರೋಧ ಪರಿಹಾರಕ್ಕೆ ಅನ್ವಯವಾಗುವುದಿಲ್ಲ; ಅದಕ್ಕೆ ಪುರುಷವ್ಯತ್ಯಾಸ ಮೊದಲಾದ ರೀತಿಗಳಲ್ಲಿ ಪರಿಹಾರವನ್ನು ಕಂಡುಕೊಳ್ಳಬೇಕು ಎಂಬ ಮತ್ತೊಂದು ವಿಶೇಷಾಂಶವನ್ನೂ ತಿಳಿಸಿರುವರು :

'ಋತೇ ತು ಪಾಂಡವಕಥಾಂ ಕಾರ್ಷ್ಣಂ ರಾಮಾಯಣಂ ತಥಾ ।
ವಿಷ್ಣೋರ್ಬ್ರಹ್ಮಾದಿನಾಂ ಚೈವ ಕ್ರಮಾದ್ವ್ಯತ್ಯಸ್ತಶಕ್ತಿತಾಮ್ ।
ಏತದಾಪಾದಕಂ ಚಾನ್ಯದೃತೇ ಕಲ್ಪಾದಿಭೇದತಃ ।
ಕಥಾಭೇದಸ್ತು ವಿಜ್ಞೇಯೋ ಮೋಹಾಯೈತೇಷು ಭಿನ್ನತಾ'

ಇತಿ ವಾರಾಹೇ ॥ (೪/೧/೩೩)

೭. ತಾತ್ತ್ವಿಕ ಸಮನ್ವಯ

ಭಾಗವತಪುರಾಣದಲ್ಲೇ ಹಲವೆಡೆ ದೇವತಾತಾರತಮ್ಯ ಮೊದಲಾದ ಪ್ರಮೇಯಗಳ ಬಗ್ಗೆ ವಿರೋಧವೆನ್ನಿಸುವ ಪ್ರಸಂಗಗಳು ಕಂಡುಬರುತ್ತವೆ. ಅವುಗಳನ್ನು ಸಮನ್ವಯವನ್ನು ಸಹ ಸ್ಪಷ್ಟಮಾತುಗಳ ಹಿನ್ನೆಲೆಯಲ್ಲಿ ಮಾಡಿಕೊಳ್ಳಬೇಕಾದ ವಿಧಾನವನ್ನು ಸಹ ಈ ಕೃತಿಯು ತಿಳಿಸುತ್ತದೆ. ಉದಾಹರಣೆಗೆ ನವಮಸ್ಕಂಧದ ಅಂಬರೀಷ ಪ್ರಸಂಗ. ಅದರಲ್ಲಿ ರುದ್ರಾವತಾರರಾದ ದುರ್ವಾಸಮುನಿಗಳು ಚಕ್ರವರ್ತಿಯ ಶ್ರೇಣಿಯ ಅಂಬರೀಷ-ರಾಜನಿಂದ ಪರಾಭವಗೊಂಡಂತೆ ಕಥಾಪ್ರಸಂಗದಿಂದ ತಿಳಿಯುತ್ತದೆ; ಎಂದರೆ ಅಂಬರೀಷನ ವಿಷ್ಣುಭಕ್ತಿ ದುರ್ವಾಸರ ಭಕ್ತಿಗಿಂತ ಮಿಗಿಲು ಎಂಬ ತಪ್ಪು ಕಲ್ಪನೆಗೆ ಅವಕಾಶ ಕಲ್ಪಿಸುತ್ತದೆ. ಅದನ್ನು ಈ ಕೃತಿಯು ಸ್ವಲ್ಪವೂ ಸಂದೇಹಕ್ಕೆ ಅವಕಾಶ ನೀಡದಂತೆ ಪರಿಹರಿಸಿ, ಅಂಬರೀಷನ ಭಕ್ತಿಯು ದುರ್ವಾಸರ ಭಕ್ತಿಯ ಕೋಟ್ಯಂಶಕ್ಕೂ ಸಾಟಿಯಾಗದು ಎಂಬ ತತ್ತ್ವವನ್ನು ಸ್ಫುಟಪಡಿಸುತ್ತದೆ :

'ಬ್ರಹ್ಮಾದಿಭಕ್ತಿಕೋಟ್ಯಂಶಾದಂಶೋ ನೈವಾಂಬರೀಷಕೇ ।
ನೈವಾನ್ಯಸ್ಯ ಚ ಕಸ್ಯಾಪಿ ತಥಾऽಪಿ ಹರಿರೀಶ್ವರಃ ।
ತಾತ್ಕಾಲಿಕೋಪಚೇಯತ್ವಾತ್ ತೇಷಾಂ ಯಶಸ ಆದಿರಾಟ್ ।
ಬ್ರಹ್ಮಾದಯಶ್ಚ ತತ್ಕೀರ್ತಿಂ ವ್ಯಂಜಯಾಮಾಸುರುತ್ತಮಾಮ್ ।
ಮೋಹನಾಯ ಚ ದೈತ್ಯಾನಾಂ ಬ್ರಹ್ಮಾದೇರ್ನಿಂದನಾಯ ಚ ।
ಅನ್ಯಾರ್ಥಂ ಚ ಸ್ವಯಂ ವಿಷ್ಣುರ್ಬ್ರಹ್ಮಾದ್ಯಾಶ್ಚ ನಿರಾಶಿಷಃ ।
ಮಾನುಷೇಷೂತ್ತಮತ್ವಾಚ್ಚ ತೇಷಾಂ ಭಕ್ತ್ಯಾದಿಭಿರ್ಗುಣೈಃ ।
ಬ್ರಹ್ಮಾದೇರ್ವಿಷ್ಣ್ವಧೀನತ್ವಜ್ಞಾಪನಾಯ ಚ ಕೇವಲಮ್ ।
ದುರ್ವಾಸಾಶ್ಚ ಸ್ವಯಂ ರುದ್ರಸ್ತಥಾऽಪ್ಯನ್ಯಾಯ್ಯಮುಕ್ತವಾನ್ ।
ತಸ್ಯಾಪ್ಯನುಗ್ರಹಾರ್ಥಾಯ ದರ್ಪನಾಶಾರ್ಥಮೇವ ಚ' ॥

ಇತಿ ಗಾರುಡೇ ॥ (೯/೬/೮೫)

೮. ಜೀವದ್ವಯಾವೇಶದ ಪರಿಕಲ್ಪನೆ

ಕಂಸ, ಶಿಶುಪಾಲ, ದಂತವಕ್ರ, ಪೂತನಾ ಮೊದಲಾದ ಹರಿದ್ವೇಷಿಗಳು ಸಹ ಸದ್ಗತಿ ಪಡೆದಂತೆ ಭಾಗವತದ ನಿರೂಪಣೆಯಲ್ಲಿ ಕಂಡುಬರುತ್ತದೆ. ಇದರಿಂದಾಗಿ ಅನೇಕರು ಹರಿಭಕ್ತಿಯಂತೆ ಹರಿದ್ವೇಷವೂ ಸಹ ಮುಕ್ತಿಗೆ ಸಾಧನ ಎಂಬ ಭ್ರಮೆಗೆ ಒಳಗಾಗಿರುವರು. ಆದರೆ ಅಂತಹ ಪ್ರಸಂಗಗಳೆಲ್ಲ ಜೀವದ್ವಯಾವೇಶದಿಂದ ಕೂಡಿದ ಪ್ರಸಂಗಗಳು; ಎಂದರೆ ಅಲ್ಲಿ ಸಚ್ಚೇತನರು, ದುಶ್ಚೇತನರು ಒಂದೇ ದೇಹದಲ್ಲಿ ನೆಲೆಸಿದ್ದು, ಸಚ್ಚೇತನರು ಮೂಲತಃ ವಿಷ್ಣುಭಕ್ತರಾಗಿದ್ದು ಸದ್ಗತಿಯನ್ನೂ, ದುಶ್ಚೇತನರು ವಿಷ್ಣುದ್ವೇಷಿಗಳೂ ಆಗಿದ್ದು ಸಚ್ಚೇತನರು ಮಾತ್ರವೇ ಸದ್ಗತಿ ಪಡೆದರು; ದುಶ್ಚೇತನರು ತೆರಳಿದ್ದು ಮಾತ್ರ ತಮಸ್ಸಿಗೇ. ಆದ್ದರಿಂದ ಮುಕ್ತಿಗೆ ಹರಿಭಕ್ತಿಯೇ ಸಾಧನ, ಹರಿದ್ವೇಷವಲ್ಲ ಎಂಬ ಪ್ರಮೇಯವು ಅಬಾಧಿತ ಎಂಬುದಾಗಿ ಈ ಕೃತಿ ಸ್ಫುಟಪಡಿಸುತ್ತದೆ:

'ಪೂತನಾಕಂಸನರಕಶಿಶುಪಾಲಾದಿಷು ದ್ವಿಧಾ ।
ಜೀವಾಃ ಸಂತಸ್ತ್ವಸಂತಶ್ಚ ತತ್ರ ಬಂಧ್ವಾದಿರೂಪಿಣಃ ।
ವಿಷ್ಣೋಃ ಸಂತ ಇತಿ ಜ್ಞೇಯಾ ಅಸಂತಃ ಶತ್ರುರೂಪಿಣಃ ।
ಶುಭಜೀವಪ್ರಕಾಶೇನ ಕದಾಚಿಚ್ಛುಭಬುದ್ಧಯಃ ।
ವಿಪರ್ಯಯೇಽನ್ಯಥಾ ಚ ಸ್ಯುಃ ಶುಭಾಸ್ತತ್ರ ಹರಿಂ ಯಯುಃ ।
ಅಸುರಾಶ್ಚ ತಮೋ ಘೋರಂ ಯದಿ ತತ್ರೈವ ಮಧ್ಯಮಾಃ ।
ಮಧ್ಯಮಾಂ ಗತಿಮೇವಾಪುರೇಕದೇಹಗತಾ ಅಪಿ' ಇತಿ ಗಾರುಡೇ ॥

(೧೦/೫/೧)

'ಸ್ನೇಹಾದನ್ನಂ ದದಾತೀತಿ ಸ್ವಾಕರ್ಷಣಭಯೇಽಪಿ ಚ ।
ವಿದ್ಯಮಾನೇಽಪ್ಯಲ್ಪಕೋಪೇ ಸಂಗತಿಸ್ನೇಹತಸ್ತಥಾ ॥
ಪೇಶಸ್ಕೃದ್ರೂಪತಾಂ ಕೀಟೋ ಯಥಾ ಯಾತಿ ತಥೈವ ತು ।
ಚೈದ್ಯಾದಯೋಽಸುರಾವೇಶಾದ್ಧರೌ ದ್ವೇಷಯುತಾ ಅಪಿ ॥
ನಿಜಸ್ವಭಾವಯಾ ಭಕ್ತ್ಯಾ ನೀತಾ ಹರಿಸರೂಪತಾಮ್ ।
ತಥಾ ಹಿ ಕರುಣೋ ವಿಷ್ಣುರನ್ಯಾವೇಶಾದ್ಯದಿ ದ್ವಿಷನ್ ॥
ಹೀಯತೇ ಕಿಂ ಮಮಾನೇನ ನಿತ್ಯಾನಂದಸ್ವರೂಪಿಣಃ ।
ದೇಹಬಂಧಯುತಾನಾಂ ಹಿ ದ್ವೇಷಿಣಾಽಪಕೃತಂ ಭವೇತ್ ॥
ಮಮ ಕೋ ಹ್ಯಪರಾಧ್ಯೇತ ನಿರ್ದೋಷಸುಖರೂಪಿಣಃ ।
ಅತೋ ಮಯ್ಯಪರಾಧಸ್ತು ಸ್ವಸ್ಮಿನ್ನೇವ ನ ಮೇ ಭವೇತ್ ॥
ಅತೋ ಯಚ್ಚಾಸುರಾವೇಶಾತ್ ಕೃತಮೇನೇನ ದುಷ್ಕೃತಮ್ ।
ಅನಾದಿಭಕ್ತೋ ಯಸ್ಮಾನ್ಮೇ ಮೋಚಯಿಷ್ಯೇ ತತಸ್ತ್ವಹಮ್ ॥
ಇತಿ ಮತ್ವಾ ಮೋಚಯತಿ ಚೈದ್ಯಾದೀನಪಿ ಕೇಶವಃ' ಇತಿ ಬ್ರಹ್ಮಾಂಡೇ ॥

(೭/೧/೩೦)

'ಅಸುರಾ ಅಪಿ ಯೇ ವಿಷ್ಣುಂ ಶಂಖಚಕ್ರಗದಾಧರಮ್ ।
ಭಕ್ತಿಪೂರ್ವಮವೇಕ್ಷಂತೇ ಜ್ಞೇಯಾ ಭಾಗವತಾ ಇತಿ ॥

ವಿದ್ವಿಷಂತಿ ತು ಯೇ ವಿಷ್ಣುಮೃಷಿಪುತ್ರಾ ಅಪಿ ಸ್ಫುಟಮ್ ।
ಅಸುರಾಸ್ತೇಽಪಿ ವಿಜ್ಞೇಯಾ ಗಚ್ಛಂತಿ ಚ ಸದಾತಮಃ ॥
ಜೀವದ್ವಯಸಮಾಯೋಗಾದ್ಧಿರಣ್ಯಕಮುಖಾಃ ಪರೇ ।
ಭಕ್ತಿದ್ವೇಷಯುತಾಶ್ಚ ಸ್ಯುರ್ಗತಿಸ್ತೇಷಾಂ ಯಥಾ ನಿಜಮ್ ।
ಕಂಸಪೂತನಿಕಾದ್ಯಾಶ್ಚ ಬಾಂಧವಾದಿಯುತಾ ಯತಃ ।
ಜೀವದ್ವಯಸಮಾಯೋಗಾದ್ಗತಿದ್ವಯಜಿಗೀಷವಃ ।
ಸರ್ವಥಾ ಭಕ್ತಿತೋ ಮುಕ್ತಿರ್ದ್ವೇಷಾತ್ ತಮ ಉದೀರಿತಮ್ ।
ನಿಯಮಸ್ತ್ವನಯೋರ್ನಿತ್ಯಂ ಮೋಹಾಯಾನ್ಯವಚೋ ಭವೇತ್'

ಇತಿ ಬ್ರಹ್ಮವೈವರ್ತೇ ॥ (೩/೨/೨೪)

೯. ಪತಿತರ ಉದ್ಧಾರದ ಹಿನ್ನೆಲೆ

ಅಜಾಮಿಳ ಅಂತ್ಯಕಾಲದಲ್ಲಿ ಹರಿಸ್ಮರಣೆಯಿಂದ ಉದ್ಧೃತನಾದ ಕಥೆ ಲೋಕವಿದಿತ. ಅವನದು ಜೀವದ್ವಯಾವೇಶದ ಪ್ರಸಂಗವಲ್ಲ. ಎಂದ ಮೇಲೆ ಅವನಿಗೆ ಸದ್ಗತಿಯಾದುದೆಂತು? ಎಂಬುದು ಮತ್ತೊಂದು ಬಗೆಯ ಪ್ರಶ್ನೆ. ಅಲ್ಲದೆ ಅವನು ನಾರಾಯಣ ಎಂದದ್ದು ತನ್ನ ಪುತ್ರನೊಬ್ಬನನ್ನು ಕರೆಯಲೆಂದೇ ಹೊರತು ಶ್ರೀಹರಿಯನ್ನು ಕರೆಯಲೆಂದಲ್ಲ. ಭಗವಂತನ ನಾಮೋಚ್ಚಾರಣೆ ಯಾವ ಹಿನ್ನೆಲೆಯಲ್ಲೂ ಸಫಲ ಎನ್ನುವುದಕ್ಕಾದರೂ ಏನರ್ಥ? ಇದನ್ನೂ ಸಹ ಈ ಕೃತಿ ಸಂದೇಹಕ್ಕೆ ಎಡೆಯಿರದಂತೆ ನಿವಾರಿಸುತ್ತದೆ. ಅಜಾಮಿಳನು ಮೂಲತಃ ಭಗವದ್ಭಕ್ತ. ಚಿಕ್ಕಂದಿನಲ್ಲಿಯೂ ಹಾಗೆಯೇ ಇದ್ದ. ಪ್ರಾರಬ್ಧವಶಾತ್ ಮುಂದೊಮ್ಮೆ ಅಗಮ್ಯಾಗಮನಾದಿಪಾಪಕರ್ಮಗಳಲ್ಲಿ ತೊಡಗಿದ. ಅಂತ್ಯಕಾಲಕ್ಕೆ ಯಮದೂತರು ಬಂದಾಗ ರಕ್ಷಣೆಗೆಂದು 'ನಾರಾಯಣ' ಎಂಬ ಹೆಸರಿನ ಕೊನೆಯ ಮಗನನ್ನು ಕರೆಯಹೊರಟ. ಆ ಕ್ಷಣದಲ್ಲಿ ಅವನಿಗೆ ಆ ನಿಮಿತ್ತದಿಂದ ಭಗವತ್ಸ್ಮರಣೆ ಉಂಟಾಯಿತು. ಅದರಿಂದಾಗಿ ಅವನಿಗೆ ಸಕಲಪಾಪಗಳಿಂದ ಪರಿಹಾರ ದೊರಕಿ ಸದ್ಗತಿ ಲಭಿಸಿತು. ಎಂದರೆ ಇದು ಭಕ್ತನೊಬ್ಬ ಆಕಸ್ಮಿಕವಾಗಿ ಪತಿತನಾಗಿ ಅನಂತರ ಪಶ್ಚಾತ್ತಾಪ ಪಟ್ಟು ಉದ್ಧೃತನಾದ ಕಥೆಯೇ ಹೊರತು, ಸ್ವಾಭಾವಿಕವಾಗಿ ಪತಿತನಾದವನೊಬ್ಬನ ಉದ್ಧಾರದ ಕಥೆಯಲ್ಲ ಎಂದರ್ಥ. 'ಯಾವ ನೆಪದಿಂದಲಾದರೂ ಹರಿನಾಮಸ್ಮರಣೆ ಉಂಟಾದರೆ ಸದ್ಗತಿ ಖಚಿತ' ಎಂಬುದು ಇಲ್ಲಿ ಪ್ರತಿಪಾದಿತವಾಗಿರುವ ಮತ್ತೊಂದು ಪ್ರಮೇಯ :

ನಾರಾಯಣೋಽಯಮಿತ್ಯನ್ಯಹೇಲನವಿಷಯತ್ವೇನೋಕ್ತಮಘಹರಮ್ –

'ಸರ್ವಥಾಽಘಹರಂ ವಿಷ್ಣೋರ್ನಾಮ ತದ್ಭಕ್ತಿಪೂರ್ವಕಮ್ ।
ಅಭಕ್ತ್ಯೋದಾಹೃತಂ ನೈವ ಫಲದಾತೃ ಭವಿಷ್ಯತಿ ।
ನಾಮಸ್ವಾಮಿತಯಾ ತಸ್ಯ ಸ್ಮರಣಂ ಜಾಯತೇ ಯತಃ ।
ಭಕ್ತಸ್ಯಾತೋ ನಾಮಕೀರ್ತಿಃ ಸಂಕೇತಾದಾವಪೀರಿತಾ ।
ಅಜಾಮಿಲೋಽಪಿ ಸ್ಮರಣಾದ್ಭಕ್ತ್ಯಾ ಮೃತ್ಯೋರಮುಚ್ಯತ'

ಇತಿ ನಾರದೀಯೇ ॥ (೬/೨/೨೪)

ಇದೆಲ್ಲ ಭಗವದ್ಗೀತೆಯ ಸಿದ್ಧಾಂತಕ್ಕೆ ಅನುಗುಣವಾಗಿಯೇ ಇರುವುದು ಗಮನಾರ್ಹ :

ಅಪಿ ಚೇತ್ ಸುದುರಾಚಾರೋ ಭಜತೇ ಮಾಮನನ್ಯಭಾಕ್ ।
ಸಾಧುರೇವ ಸ ಮಂತವ್ಯಃ ಸಮ್ಯಗ್ವ್ಯವಸಿತೋ ಹಿ ಸಃ ॥
ಕ್ಷಿಪ್ರಂ ಭವತಿ ಧರ್ಮಾತ್ಮಾ ಶಶ್ವಚ್ಛಾಂತಿಂ ನಿಗಚ್ಛತಿ ।
ಕೌಂತೇಯ ಪ್ರತಿಜಾನೀಹಿ ನ ಮೇ ಭಕ್ತಃ ಪ್ರಣಶ್ಯತಿ ॥ -ಭಗವದ್ಗೀತಾ (೯/೩೦, ೩೧)

೧೦. ವರಶಾಪಾದಿಗಳ ವಿವೇಚನೆ

ವರಶಾಪಗಳನ್ನು ಉತ್ತಮರು ಅಧಮರಿಗೆ ಕೊಡಲು ಸಾಧ್ಯ. ಆದರೆ ಕೆಲವೊಂದು ಪ್ರಸಂಗಗಳಲ್ಲಿ ಯೋಗ್ಯತೆಯಲ್ಲಿ ಚಿಕ್ಕವರಾದವರು ತಮಗಿಂತ ಉತ್ತಮರಾದವರಿಗೆ ಶಾಪ ಕೊಟ್ಟಂತೆ ಪುರಾಣಗಳಲ್ಲಿ ಉಲ್ಲೇಖ ಬರುವುದುಂಟು. ಇದು ಮೇಲೆ ಹೇಳಿದ ಸಾಮಾನ್ಯನಿಯಮಕ್ಕೆ ವಿರುದ್ಧವೆನ್ನಿಸುವುದು. ಇಂತಹ ಪ್ರಸಂಗಗಳಲ್ಲಿ ಚಿಕ್ಕವರು ನೀಡುವ ಶಾಪವು ಉತ್ತಮರಿಗೆ ಯಾವ ಅನರ್ಥಕ್ಕೂ ಕಾರಣವಾಗಲಾರದು. ಕೆಲವೊಮ್ಮೆ ಅವರು ಅವುಗಳನ್ನು ಸ್ವೇಚ್ಛೆಯಿಂದ ಅಂಗೀಕರಿಸಿ ವರ್ತಿಸಬಹುದು; ಕೆಲವೊಮ್ಮೆ ತಿರಸ್ಕರಿಸಲೂ ಬಹುದು. ಆದರೆ ಅಂತಹ ಪ್ರಸಂಗಗಳಲ್ಲಿ ಶಾಪ ನೀಡಿದ ಸಾಮಾನ್ಯಜನರಿಗೆ ಮಾತ್ರ ಜ್ಞಾನಭಕ್ತ್ಯಾದಿನಾಶರೂಪವಾದ ಅನರ್ಥವೇ ಖಚಿತ ಎಂಬ ಸೂಕ್ಷ್ಮ ವಿಚಾರದ ಬಗ್ಗೆ ಈ ಕೃತಿಯು ಬೆಳಕುಚೆಲ್ಲುತ್ತದೆ :

'ದೇವಾ ಏವ ತದನ್ಯೇಭ್ಯಃ ಶಕ್ತಾ ನಾಸ್ತ್ಯತ್ರ ಸಂಶಯಃ ।
ಅಶಕ್ತಾ ಅಪಿ ಶಕ್ತಾನಾಂ ಶಕ್ತಾಃ ಶಾಪಾದಿಷು ಸ್ಫುಟಮ್ ।
ತಥಾऽಪ್ಯಶಕ್ತೈರ್ವಿಹಿತಾಃ ಶಾಪಾದ್ಯಾಃ ಶಕ್ತಿಮತ್ಸು ತು ।
ಅತ್ಯಲ್ಪಾಶ್ಚಾಲ್ಪಕಾಲಾಶ್ಚ ನ ಸಮ್ಯಕ್ಪ್ರಭವಂತಿ ಚ ।
ಯತ್ನೇನಾಪೋಹಿತುಂ ಶಕ್ಯಾ ಉತ್ತಮೈಸ್ತು ನ ಸಂಶಯಃ ।
ಉತ್ತಮೇಷು ಕೃತಾಃ ಶಾಪಾಃ ಕರ್ತ್ರೂಣಾಂ ಜ್ಞಾನಪುಣ್ಯಯೋಃ ।
ನಿಃಶೇಷೇಣ ನಿಹಂತಾರಸ್ತದನುಗ್ರಹಮಂತರಾ ।
ಸದಾರಯೋರ್ಬ್ರಹ್ಮವಿಷ್ಣ್ವೋರ್ವರಶಾಪಾದಯೋऽಖಿಲಾಃ ।
ತದನ್ಯೇನ ಕೃತಾಃ ಸರ್ವೇ ನಿಷ್ಫಲಾ ಏವ ನಿಶ್ಚಯಾತ್ ।
ನ ಚಾಪ್ಯವಾಂತರಾಃ ಶಾಪಾ ಭವಂತ್ಯೇಷಾಂ ತು ಕುತ್ರಚಿತ್ ।
ವರಾ ವಿಷ್ಣೋಃ ಶ್ರಿಯಶ್ಚಸ್ಯುರ್ಬ್ರಹ್ಮಣಶ್ಚ ಯಥಾಕ್ರಮಮ್ ।
ಉತ್ತಮೈರಧಮಾನಾಂ ತು ವರಾಃ ಶಾಪಾ ಯಥೋದಿತಮ್ ।
ಸಂಪೂರ್ಣಫಲದಾ ಏವ ನಾತ್ರ ಕಾರ್ಯಾ ವಿಚಾರಣಾ' ಇತಿ ಸ್ಕಾಂದೇ ॥
(೬/೧೭/೩೭)

೧೧. ಅಪೂರ್ವ ಶಬ್ದನಿರ್ವಚನಗಳು

'ಯೋಷಿತ್', 'ವನಿತಾ', 'ಪ್ರಮದಾ' ಮೊದಲಾದ ಪ್ರಸಿದ್ಧಪದಗಳಿಗೆ ಅವುಗಳ ನಿಷ್ಪತ್ತಿಯನ್ನು ವಿವರಿಸುವ ಮೂಲಕ ಆಯಾ ಪ್ರಸಂಗಕ್ಕೆ ಆ ರೀತಿಯ ನಿರ್ವಚನ ಸಿದ್ಧವಾದ ಅರ್ಥವೇ ಮೂಲತಃ ಸಂಗತ ಎಂಬುದನ್ನು ತಿಳಿಸಿಕೊಡುವುದು ಇದರ ಮತ್ತೊಂದು ವೈಶಿಷ್ಟ್ಯ :

ಜುಷ್ಟತ್ವಾದ್ಯೋಷಿದಿತ್ಯುಕ್ತಾ ವನಸಾದ್ವನಿತೇತಿ ಚ ।
ಪ್ರಮಾದಕರಣತ್ವಾತ್ತು ಪ್ರಮದೇತಿ ಚ ಗೀಯತೇ ।
ತ್ಯಜೇತ್ ತತ್ಸಂಗಿನಾಂ ಸಂಗಂ ಬುಭೂಷುಃ ಪುರುಷಃ ಸದಾ ।
ನ ತಾದೃಶಃ ಕ್ವಚಿದ್ದೋಷಃ ಪುರುಷಸ್ಯಾಸುಖಾವಹಃ । (೧೧/೧೪/೩೦)

೧೨. ಭಾಷಾವಿವೇಕ

ಇತಿಹಾಸಪುರಾಣಾದಿಶಾಸ್ತ್ರಪ್ರಪಂಚದ ಮತ್ತೊಂದು ವಿಶೇಷ ಅವುಗಳ ವಿಶಿಷ್ಟ ಗಹನತೆ. ಸಮಾಧಿ, ದರ್ಶನ, ಗುಹ್ಯ ಎಂಬ ಭಾಷಾ ತ್ರೈವಿಧ್ಯ, ವ್ಯತ್ಯಾಸ, ಪ್ರಾತಿಲೋಮ್ಯ, ಗೋಮೂತ್ರಿ, ಪ್ರಘಸ, ಉಕ್ಷಣ, ಸುಧುರ ಮತ್ತು ಸಾಧು ಎಂಬ ನಿರೂಪಣಪ್ರಭೇದ, ವೈದರ್ಭೀ, ಗೌಡೀ, ಪಾಂಚಾಲೀ ಮೊದಲಾದ ರೀತಿಶತಕ ಮೊದಲಾದವುಗಳು ಅವುಗಳ ಅಂತಹ ಗಹನತೆಗೆ ಮುಖ್ಯಕಾರಣ. ಈ ವಿವೇಚನೆಯು ಮಹಾಭಾರತತಾತ್ಪರ್ಯ-ನಿರ್ಣಯದಲ್ಲಿ ಬಂದಿದ್ದು, ಅದರ ಬಗ್ಗೆ ಇನ್ನೂ ಹೆಚ್ಚಿನ ವಿವೇಚನೆಯನ್ನು ಈ ಕೃತಿ ನೀಡುತ್ತದೆ :

'ಗುಹ್ಯದರ್ಶನಭಾಷೇ ಚ ಭಾಷಾ ಚೈವ ಸಮಾಧಿಕಾ ।
ತಿಸ್ರಸ್ತು ಮೂಲಭಾಷಾಃ ಸ್ಯುರೇಕೈಕಾ ಚ ತ್ರಿಧಾ ಪುನಃ ।
ಗುಹ್ಯದರ್ಶನಸಂಜ್ಞಾಂ ಚ ಗುಹ್ಯಗುಹ್ಯಾ ತಥಾಽಪರಾ ।
ಏವಮಾದಿಕ್ರಮೇಣೈವ ತ್ವೇಕಾಶೀತಿವಿಭೇದಿತಾಃ ।
ಭಾಷಾಸ್ತತ್ರ ಚ ಗುಹ್ಯಾ ಚ ಪ್ರಸಿದ್ಧಾರ್ಥೇಷ್ವನನ್ವಿತಾ ।
ಗುಹ್ಯಾರ್ಥತತ್ಪರೈವಾಂಧೋ ಮಣಿಮಿತ್ಯಾದಿಕಾ ಚ ಸಾ ।
ದರ್ಶನಾನ್ಯವಲಂಬ್ಯೈವ ಪಶುಪತ್ಯಾದಿನಾಂ ತು ಯಾ ।
ಬಹುಶ್ರುತಿವಿರುದ್ಧಂ ತು ವದೇತ್ ಸಾ ದರ್ಶನಾತ್ಮಿಕಾ ।
ಅಂತೇ ನಿಷೇಧಸಂಯುಕ್ತಾ ಭಸ್ಮಸ್ನಾನಾದಿಕಾ ಚ ಸಾ ।
ಯಥಾಪ್ರದೃಶ್ಯಮಾನಾರ್ಥಾ ಸಮಾಧಿಃ ಸಾ ಪ್ರಕೀರ್ತಿತಾ ।
ವಿಷ್ಣುಃ ಪರಮ ಇತ್ಯಾದ್ಯಾ ಸಾ ಚ ವಿದ್ವದ್ಭಿರೀರಿತಾ' ಇತಿ ಭಾಷಾವಿವೇಕೇ ।
(೧೧/೨೧/೪೦)

ಈ ಬಗೆಯ ಭಾಷಾವಿವೇಚನೆ ಇತಿಹಾಸಪುರಾಣಗಳ ವ್ಯಾಖ್ಯಾನಪರಂಪರೆಯಲ್ಲೇ ತೀರ ವಿನೂತನ ಹಾಗೂ ಅತ್ಯಂತ ವಿಶಿಷ್ಟ, ಇದರಿಂದಾಗಿ ವಿರುದ್ಧ, ಅಸಂಗತ ಎನ್ನಿಸುವ

ಎಷ್ಟೋ ವಿವರಗಳು ಸ್ಪಷ್ಟವಾಗಿ ಸುಸಂಗತವೆನ್ನಿಸಲು ಸಾಧ್ಯವಾಗುತ್ತವೆ. ಅವರೇ ತಿಳಿಸಿರುವಂತೆ ಹರಿವಂಶದ ಆಧಾರದಿಂದ ಶ್ರೀದಾಮನನ್ನು ಶ್ರೀಕೃಷ್ಣ ಹೊತ್ತ ಎಂಬರ್ಥದ ಭಾಗವತವಾಕ್ಯಕ್ಕೆ ಪುರುಷವ್ಯತ್ಯಾಸದ ಹಿನ್ನೆಲೆಯಲ್ಲಿ ಶ್ರೀದಾಮನೇ ಪರಾಜಿತನಾಗಿ ಶ್ರೀಕೃಷ್ಣನನ್ನು ಹೊತ್ತ ಎಂದರ್ಥವಾಗುತ್ತದೆ :

ಶ್ರೀದಾಮಾ ಕೃಷ್ಣಮುವಾಹ। ಹರಿವಂಶಾದಿವಚನಾತ್ –

'ಬಹುಮಾನವಿರೋಧೇ ತು ವ್ಯತ್ಯಾಸಃ ಶಬ್ದತೋಽರ್ಥತಃ।
ಕಾರ್ಯೋಽನಿರುಕ್ತದೇವಾನಾಂ ಗುಣಸಿದ್ಧ್ಯೈ ನ ಚಾನ್ಯಥಾ।
ವಿಷ್ಣುರ್ಬ್ರಹ್ಮಾ ತಥಾ ವಾಯುರನಿರುಕ್ತಾಃ ಪ್ರಕೀರ್ತಿತಾಃ।
ತತ್ತತ್ತ್ವಶ್ಚೇತರಗುಣಾ ವ್ಯತ್ಯಸ್ಯಾಸ್ತೇಷ್ವಸಂಶಯಃ' ಇತಿ ಬ್ರಹ್ಮತರ್ಕೇ॥

(೧೦/೧೬/೨೩)

೧೩. ಅಂಶಾವತಾರಗಳ ವಿವೇಚನೆ

ವಿವಿಧ ದೇವದೈತ್ಯರು ಭೂಮಿಯಲ್ಲಿ ಅವತರಿಸಿದ ಹಿನ್ನೆಲೆಯನ್ನು ಸಾಮಾನ್ಯವಾಗಿ ಸಕಲಪುರಾಣಕಥೆಗಳು ಹೊಂದಿವೆ. ರಾಮಾಯಣ, ಮಹಾಭಾರತಗಳಂತೂ ಇಂತಹ ಅಂಶಾವತಾರ ವಿವರಗಳಿಂದ ತುಂಬಿಹೋಗಿವೆ. ಆದರೆ ಅಂತಹ ವಿವರಗಳ ಬಗ್ಗೆ ಅಲ್ಲಲ್ಲಿ ತೋರುವ ವಿರೋಧಾಭಾಸವನ್ನು ಶ್ರೀಮದಾಚಾರ್ಯರು ಸಪ್ರಮಾಣವಾಗಿ ಪರಿಹರಿಸಿರುವರು. ಹಿರಣ್ಯಾಕ್ಷನ ಬಗ್ಗೆ ಅವರು ನೀಡಿರುವ ವಿವರ ಇದಕ್ಕೊಂದು ಉತ್ತಮ ನಿದರ್ಶನ :

'ಬ್ರಹ್ಮಜಸ್ತು ಹಿರಣ್ಯಾಕ್ಷಃ ಪ್ರಥಮಂ ದಂಷ್ಟ್ರಯಾ ಹತಃ।
ಸ ಏವ ಪಾರ್ಷದಾವಿಷ್ಟೋ ದ್ವಿತೀಯಂ ಕರ್ಣತಾಡನಾತ್।
ಪೂರ್ವಂ ಲಯೋದಕೇ ಮಗ್ನಾಂ ದ್ವಿತೀಯಂ ತೇನ ಮಜ್ಜಿತಾಮ್।
ಭುವಮುದ್ಧರತ್ಯೈವಾಸೌ ಹರಿಣಾ ಕ್ರೋಡರೂಪಿಣಾ' ಇತಿ ಬ್ರಹ್ಮಾಂಡೇ॥

(೩/೧೪/೩೪)

೧೪. ಭೂಗೋಳನಿರ್ಣಯ

ಭೂಗೋಳನಿರ್ಣಯದ ಬಗ್ಗೆ ಅವರು ಬರೆದಿರುವ ಮಾತುಗಳಂತೆ ಕೆಲವು ಸೂಕ್ಷ್ಮವ್ಯತ್ಯಾಸಗಳನ್ನು ಹೊರತುಪಡಿಸಿದರೆ ಭಾಗವತಪುರಾಣಪ್ರೋಕ್ತವಾದ ಭೂಗೋಳನಿರ್ಣಯವೇ ಅಂತಿಮ :

'ಯಥಾ ಭಾಗವತೇ ತೂಕ್ತಂ ಭೌವನಂ ಕೋಶಲಕ್ಷಣಮ್।
ತಸ್ಯಾವಿರೋಧತೋ ಯೋಜ್ಯಂ ಸರ್ವಂ ಗ್ರಂಥಾಂತರಸ್ಥಿತಮ್।
ಮಂಡೋದೇ ಪೂರಣಂ ಚೈವ ವ್ಯತ್ಯಾಸಂ ಕ್ಷೀರಸಾಗರೇ।
ರಾಹುಸೋಮರವೀಣಾಂ ಚ ಮಂಡಲಾದ್ದ್ವಿಗುಣೋಕ್ತಿತಾಮ್।
ವಿನ್ನೈವ ಸರ್ವಮುನ್ನೇಯಂ ಯೋಜನಾಭೇದತೋಽತ್ರ ತು' ಇತಿ ಬ್ರಹ್ಮಾಂಡೇ॥

೧೫. ಗೀತೆಯ ಮತ್ತೊಂದು ಭಾಷ್ಯ

ಭಾರತಪಾರಿಜಾತದ ಮಧು ಭಗವದ್ಗೀತೆಯಾದರೆ, ಭಾಗವತಪಾರಿಜಾತದ ಮಧು ಏಕಾದಶಸ್ಕಂಧ ಭಾಗವತ. ಅದರಲ್ಲೂ ಶ್ರೀಕೃಷ್ಣೋದ್ಧವಸಂವಾದ. ಎಂದರೆ ಅದು ಭಾಗವತಪುರಾಣದ ಭಗವದ್ಗೀತೆ. ಸಹಜವಾಗಿಯೇ ಈ ಭಾಗದ ವಿವರಣೆ ಭಾಗವತತಾತ್ಪರ್ಯನಿರ್ಣಯದಲ್ಲಿ ತುಂಬಾ ವಿಸ್ತಾರವಾಗಿ ಬಂದಿದೆ. ಭಗವದ್ಗೀತೆಯ ಕರ್ಮಯೋಗ, ಜ್ಞಾನಯೋಗ, ವಿಭೂತಿಯೋಗ ಮೊದಲಾದವುಗಳ ಬಗ್ಗೆ ಇಲ್ಲಿಯ ವಿವರಗಳು ವ್ಯಾಖ್ಯಾನರೂಪವಾಗಿದೆ. ಆದ್ದರಿಂದಾಗಿ ಇದು ಶ್ರೀಮದಾಚಾರ್ಯರು ಗೀತಾಭಾಷ್ಯ ಗೀತಾತಾತ್ಪರ್ಯದೊಂದಿಗೆ ಮತ್ತೊಂದು ರೀತಿಯ ಭಾಷ್ಯವನ್ನು ಭಗವದ್ಗೀತೆಗೆ ನೀಡಿದಂತಾಗಿದೆ. ಅದರಂತೆ ಗೀತಾಭಾಷ್ಯತಾತ್ಪರ್ಯಗಳು ಏಕಾದಶಸ್ಕಂಧ ಭಾಗವತದ ತಾತ್ಪರ್ಯನಿರ್ಣಯವಾಗಿಯೂ ಅಧ್ಯೇತೃಗಳಿಗೆ ಉಪಯುಕ್ತವೆನ್ನಿಸುತ್ತವೆ. ವಿಭೂತಿಯೋಗದ ಕೆಲವು ಗೊಂದಲಗಳಿಗೆ ಇಲ್ಲಿಯ ತಾತ್ಪರ್ಯ ಸೂಕ್ತ ರೀತಿಯಾದ ಪರಿಹಾರವಾಗಿರುವುದು ಇದಕ್ಕೆ ಒಂದು ಉತ್ತಮನಿದರ್ಶನ :

> 'ಋತೇ ರುದ್ರಾದಿಕಾನಿಂದ್ರಃ ಸರ್ವದೇವಾಧಿಕಃ ಸ್ಮೃತಃ ।
> ಋತೇ ಭೀಮಂ ಫಾಲ್ಗುನಶ್ಚ ಪಾಂಡವೇಭ್ಯೋ ವರಸ್ತಥಾ ।
> ತಥಾ ಶುಕ್ರಃ ಕವೀಶಸ್ತು ಬೃಹಸ್ಪತ್ಯಾದಿಕಾನೃತೇ ।
> ಯಮಃ ಸಂಯಮತಾಮೀಶಃ ಶಂಕರಾದೀನ್ ವಿನೈವ ತು' ಇತಿ ಗೀತಾಕಲ್ಪೇ ॥
> (೧೧/೧೬/೧೩)

ದೇವತೆಗಳಲ್ಲಿ ಇಂದ್ರ ಅಧಿಕ ಎಂದರೆ, ರುದ್ರಾದಿಗಳ ಅನಂತರ ಎಂದರ್ಥ; ಅದರಂತೆ ಪಾಂಡವರಲ್ಲಿ ಅರ್ಜುನ ಶ್ರೇಷ್ಠ ಎಂದರೆ ಭೀಮನ ಅನಂತರ ಎಂದರ್ಥ ಎಂಬುದು ಇಲ್ಲಿಯ ನಿರೂಪಣೆಯಾಗಿದೆ.

೧೬. ಪ್ರಮಾಣೋದಾಹರಣೆ

ತಮ್ಮ ಇತರ ಗ್ರಂಥಗಳಂತೆ ಈ ಕೃತಿಯಲ್ಲೂ ಶ್ರೀಮದಾಚಾರ್ಯರು ಪ್ರಮಾಣಗ್ರಂಥಗಳನ್ನು ವಿಪುಲವಾಗಿ ಉಲ್ಲೇಖಿಸಿರುವರು. ಇದರಲ್ಲಿ ಅವರು ನೀಡಿರುವ ಪ್ರಮಾಣಗ್ರಂಥಗಳ ಸಂಖ್ಯೆ ಇನ್ನೂರೈವತ್ತನ್ನೂ ಮೀರುತ್ತದೆ. ವಿಶ್ವದ ಯಾವ ವ್ಯಾಖ್ಯಾನಕಾರರೂ ಇಷ್ಟು ವಿಪುಲರೀತಿಯಲ್ಲಿ ಪ್ರಮಾಣಗ್ರಂಥಗಳನ್ನು ಉದಾಹರಿಸಿಲ್ಲ ಎಂಬುದು ಇದರ ಹಿರಿಮೆಗೆ ಮತ್ತೊಂದು ರೀತಿಯಲ್ಲಿ ಸಾಧನವಾಗಿದೆ. ಅಂತಹ ಪ್ರಮಾಣಗ್ರಂಥಗಳ ಪಟ್ಟಿಯನ್ನು ಕೆಳಗೆ ಕೊಡಲಾಗಿದೆ.

ಅಂತರ್ಯಾಮಿಸಂಹಿತಾ	ಅಭಿಧಾನ	ಅಂಶವಿವೇಕ
ಆಗಮತಾತ್ಪರ್ಯ	ಆಗ್ನೇಯ	ಆತ್ಮಸಂಹಿತಾ

ಅಧ್ಯಾತ್ಮ	ಆರುಣಿಶ್ರುತಿ	ಆಶ್ರಮವಿವೇಕ
ಇಂದ್ರದ್ಯುಮ್ನ	ಶ್ರುತಿ	ಉದ್ದಾಮಸಂಹಿತಾ
ಉದ್ಯೋಗ	ಉಭಯನಿರುಕ್ತ	ಋಕ್ಸಂಹಿತಾ
ಐಶ್ವರ್ಯ	ಔದ್ದಾಲಕಾಯನಶ್ರುತಿ	ಕಪಿಲಸಂಹಿತಾ
ಕಮಠಶ್ರುತಿ	ಕರ್ಮತಂತ್ರ	ಕರ್ಮವಿವೇಕ
ಕಲಾಪಶ್ರುತಿ	ಕಾಪಿಲೇಯ	ಕಾಪಿಲೇಯಯೋಗ
ಕಾಲಸಂಹಿತಾ	ಕುಶಿಕಶ್ರುತಿ	ಕೌಂಠರವ್ಯಶ್ರುತಿ
ಕೌರ್ಮ	ಕೌಶಿಕಶ್ರುತಿ	ಕ್ರಿಯಾಯೋಗ
ಕ್ರಿಯಾವಿಧಾನ	ಗಾಂಧರ್ವ	ಗಾರುಡ
ಗೀತಾ	ಗೀತಾಕಲ್ಪ	ಗುರುವಿವೇಕ
ಚಾಕ್ರಾಯಣಶ್ರುತಿ	ಚೈತನ್ಯವಿವೇಕ	ಛಂದೋವಿಧಾನ
ಜೀವತತ್ತ್ವ	ಜೀವನಿರ್ಣಯ	ಜ್ಯೋತಿಃಸಂಹಿತಾ
ತತ್ತ್ವ	ತತ್ತ್ವನಿರ್ಣಯ	ತತ್ತ್ವಪ್ರತಿಪತ್ತಿ
ತತ್ತ್ವಲಯ	ತತ್ತ್ವವಿವೇಕ	ತತ್ತ್ವೋದಯ
ತಂತ್ರನಿರುಕ್ತ	ತಂತ್ರನಿರ್ಣಯ	ತಂತ್ರಪ್ರಕಾಶಿಕಾ
ತಂತ್ರಭಾಗವತ	ತಂತ್ರಮಾಲಾ	ತಂತ್ರಸಾರ
ತಾತ್ತ್ವಿಕ	ತಾತ್ಪರ್ಯ	ತ್ರಿಯೋಗ
ತ್ರೈಕಾಲ್ಯ	ದತ್ತಾತ್ರೇಯಯೋಗ	ದರ್ಶನ
ದೇವತತ್ತ್ವ	ದೇವಹಾರ್ದ	ಧರ್ಮತತ್ತ್ವ
ಧರ್ಮವಿವೇಕ	ಧರ್ಮಶ್ರುತಿ	ಧರ್ಮಸಂಹಿತಾ
ಧ್ಯಾನಯೋಗ	ನಾಮಮಹೋದಧಿ	ನಾಮಸಂಹಿತಾ
ನಾರದೀಯ	ನಾರಾಯಣಾಧ್ಯಾತ್ಮ	ನಿತ್ಯಸಂಹಿತಾ
ನಿವೃತ್ತ	ನಿಸರ್ಗ	ಪದ್ಮಪುರಾಣ
ಪರಭೋಗ	ಪರಾಯಣ	ಪವನವಿಜಯ
ಪುರುಷೋತ್ತಮತಂತ್ರ	ಪೈಂಗಿಶ್ರುತಿ	ಪೌತ್ರಾಯಣಶ್ರುತಿ
ಪ್ರಕಾಶಸಂಹಿತಾ	ಪ್ರಕಾಶಿಕಾ	ಪ್ರತ್ಯಯ
ಪ್ರಣವಮಾಹಾತ್ಮ್ಯ	ಪ್ರದ್ಯೋತ	ಪ್ರಭಂಜನ
ಪ್ರಭವ	ಪ್ರಭಾವಲಿ	ಪ್ರಭಾಸ
ಪ್ರಭಾಸಕ	ಪ್ರಮಾಣಸಂಹಿತಾ	ಪ್ರಯೋಗ
ಪ್ರವೃತ್ತ	ಪ್ರವೃತ್ತಸಂಹಿತಾ	ಪ್ರವೃತ್ತಿತಂತ್ರ

ಪ್ರಾಕಾಶ್ಯ	ಪ್ರಾಣಸಂಹಿತಾ	ಪ್ರಾತಿಸ್ವಿಕ
ಪ್ರಾಥಮ್ಯ	ಪ್ರಾಧಾನ್ಯ	ಪ್ರಿಯವಿವೇಕ
ಬೃಹತ್ತಂತ್ರ	ಬೃಹತ್ಸಂಹಿತಾ	ಬೋದ್ಧವ್ಯ
ಬ್ರಹ್ಮತರ್ಕ	ಬ್ರಹ್ಮಸೂತ್ರ	ಬ್ರಹ್ಮಸಂಹಿತಾ
ಬ್ರಹ್ಮದರ್ಶನ	ಬ್ರಹ್ಮನಯ	ಬ್ರಹ್ಮವೈವರ್ತ
ಬ್ರಹ್ಮಾಂಡ	ಬ್ರಾಹ್ಮ	ಭಕ್ತಿವಿವೇಕ
ಭದ್ರಮಾನ	ಭದ್ರಿಕಾ	ಭವಿಷ್ಯತ್ಪರ್ವ
ಭವಿಷ್ಯತ್ಪುರಾಣ	ಭಾಗವತ	ಭಾಗವತತಂತ್ರ
ಭಾಗವತಸಂಹಿತಾ	ಭಾರತ	ಭಾಷಾವಿವೇಕ
ಭಾಲ್ಲವೇಯಶ್ರುತಿ	ಭಾವವಿವೇಕ	ಭೂತಿ
ಭೋಗನಿರ್ಣಯ	ಮಹಾಕೂರ್ಮಪುರಾಣ	ಮಹಾಮೀಮಾಂಸಾ
ಮಹಾರವಶ್ರುತಿ	ಮಹಾವಾರಾಹ	ಮಹಾವ್ಯಾಕರಣ
ಮಹಾಶಾಲೀನಶ್ರುತಿ	ಮಹಾಸಂಹಿತಾ	ಮಹೋಪನಿಷತ್
ಮಾತ್ಸ್ಯ	ಮಾಧ್ಯಂದಿನಾಯನಶ್ರುತಿ	ಮಾನಸಂಹಿತಾ
ಮಾನಸಸಂಹಿತಾ	ಮಾನ್ಯಸಂಹಿತಾ	ಮಾಯಾವೈಭವ
ಮಾಹಾತ್ಮ್ಯ	ಮುಕ್ತಿತತ್ತ್ವ	ಮುಕ್ತಿವಿವೇಕ
ಮುಕ್ತಿಸಂಹಿತಾ	ಮೂರ್ತಿಭೇದ	ಮೈತ್ರಾಯಣಶ್ರುತಿ
ಮೋಕ್ಷಧರ್ಮ	ಯಾದವಾಧ್ಯಾತ್ಮ	ರಾಜನೀತಿ
ಲಕ್ಷಣ	ಲೋಕತತ್ತ್ವ	ಲೋಕಸಂಹಿತಾ
ವಸ್ತುತತ್ತ್ವ	ವರಾಹಪುರಾಣ	ವಹ್ನಿಪುರಾಣ
ವಾಕ್ಯಶೇಷ	ವಾಮನಪುರಾಣ	ವಾಯುಪ್ರೋಕ್ತ
ವಾಲ್ಲಭ್ಯ	ವಾಸುದೇವಾಧ್ಯಾತ್ಮ	ವಿಕ್ಷೇಪ
ವಿಚಾರ	ವಿಜ್ಞಾನ	ವಿನಿರ್ಣಯ
ವಿಪರೀತಶ್ರುತಿ	ವಿಭೂತಿ	ವಿಮದಶ್ರುತಿ
ವಿವೃತ್ತ	ವಿವೇಕ	ವಿಶೇಷ
ವಿಶ್ವಂಭರಶ್ರುತಿ	ವಿಶ್ವಸಂಹಿತಾ	ವಿಷ್ಣುತಂತ್ರ
ವಿಷ್ಣುಧರ್ಮ	ವಿಷ್ಣುಧರ್ಮೋತ್ತರ	ವಿಷ್ಣುಸಂಹಿತಾ
ವೈಭವ	ವೈಭಾವ್ಯ	ವೈಲಕ್ಷಣ್ಯ
ವೈಶಾರದ್ಯ	ವೈಶೇಷ್ಯ	ವ್ಯಕ್ತ
ವ್ಯಾಸತಂತ್ರ	ವ್ಯಾಸನಿರುಕ್ತ	ವ್ಯಾಸಸ್ಮೃತಿ

ವ್ಯೋಮಸಂಹಿತಾ	ಶಕ್ತಿತತ್ತ್ವ	ಶಕ್ತಿವಿವೇಕ
ಶಬ್ದತತ್ತ್ವ	ಶಬ್ದನಿರ್ಣಯ	ಶಾಂಡಿಲ್ಯಶ್ರುತಿ
ಶಾಬ್ದ	ಶಾಶ್ವತಸಂಹಿತಾ	ಶ್ರುತಿನಿರ್ಣಯ
ಶ್ರುತಿ	ಶ್ವೇತಾಶ್ವತರಶ್ರುತಿ	ಷಾಡ್ಗುಣ್ಯ
ಸಂಕೃತಿಶ್ರುತಿ	ಸಂಖಯನ	ಸತ್ಕಾರ
ಸತ್ತತ್ತ್ವ	ಸತ್ಯಸಂಹಿತಾ	ಸತ್ಸಂಗ
ಸದ್ಗುಣ	ಸಂಧಾರಣಮ್	ಸಮಯಾಚಾರ
ಸಮಾಚಾರ	ಸಮ್ಯಜ್ಜ್ಞಾನಮ್	ಸಹಸ್ರಾವರಣ
ಸಂದೃಶ್ಯ	ಸಾತ್ವತಸಂಹಿತಾ	ಸಾಮ್ಯ
ಸಾರ್ವಜ್ಞ	ಸುಮತ	ಸೂತ್ರಾಯಣಶ್ರುತಿ
ಸೃಷ್ಟಿವಿಕ್ಷೇಪ	ಸೌಕರಾಯಣಶ್ರುತಿ	ಸ್ಕಾಂದಪುರಾಣ
ಸ್ವಾತಂತ್ರ್ಯ	ಸ್ವಾತಂತ್ರ್ಯವಿವೇಕ	ಸ್ವಾಭಾವ್ಯ
ಹರಿವಂಶ	ಹರಿಸಂಹಿತಾ	ಹಿರಣ್ಯನಾಭಶ್ರುತಿ

★★★★★

೧೭. ಮಹಾಭಾರತತಾತ್ಪರ್ಯನಿರ್ಣಯದ ಅವಳಿಕೃತಿ

ಇದು ಅವರ ಮಹಾಭಾರತತಾತ್ಪರ್ಯನಿರ್ಣಯಕ್ಕೆ ಪೂರಕಕೃತಿಯಂತಿದ್ದು ಎರಡನ್ನೂ ಒಟ್ಟಾಗಿ ಅಧ್ಯಯನ ಮಾಡಿದಾಗ ಇತಿಹಾಸಪುರಾಣಪ್ರಪಂಚದ ಆಂತರ್ಯ ಸ್ಫುಟಪಡುತ್ತದೆ. ಇಲ್ಲಿಯ ಅಷ್ಟಮಸ್ಕಂಧದ ಅನೇಕಭಾಗಗಳಿಗೆ ಮಹಾಭಾರತ-ತಾತ್ಪರ್ಯನಿರ್ಣಯದಲ್ಲಿ ವಿವರಣೆ ಬಂದಿದ್ದು ಅವೆಲ್ಲ ಭಾಗವತತಾತ್ಪರ್ಯದಂತೆ ಮಾನ್ಯವಾಗಿಬಿಡುತ್ತದೆ. ಅದರಂತೆ ಮಹಾಭಾರತತಾತ್ಪರ್ಯನಿರ್ಣಯದಲ್ಲಿನ ಇತರ ಅನೇಕ ವಿವರಗಳಿಗೂ ಇದರಲ್ಲಿನ ಪ್ರಮಾಣಗಳು ಸೂಕ್ತ ವಿವರಣೆಗಳನ್ನೊದಗಿಸುತ್ತವೆ.

೧೮. ಪುರಾಣಪ್ರಪಂಚದ ಭಾಷ್ಯ

ಭಾಗವತತಾತ್ಪರ್ಯವು ನೇರವಾಗಿ ಭಾಗವತಶ್ಲೋಕಗಳನ್ನು ವಿವರಿಸುವ ಕೃತಿ. ಆದರೆ ಇಲ್ಲಿ ವಿವರಣೆ ಮಾತ್ರ ಬಂದಿರದೆ, ಅದರ ಹಿನ್ನೆಲೆಯಾಗಿ ವಿವೇಚನೆಯ ಕ್ರಮವೂ ನಿರೂಪಿತವಾಗಿರುವುದರಿಂದ ಇದು ಸಮಗ್ರ ಭಾಗವತಪುರಾಣದ ಅರ್ಥನಿರ್ಣಯಕ್ಕೆ ಮಾತ್ರವಲ್ಲದೆ ಇತರ ಎಲ್ಲ ಪುರಾಣಗಳ ಅರ್ಥಗ್ರಹಣಕ್ಕೂ ಅಪಾರ ನೆರವನ್ನು ನೀಡುತ್ತದೆ. ಅದರಿಂದಾಗಿ ಇದು ಸಕಲಪುರಾಣಪ್ರಪಂಚಕ್ಕೂ ಒಟ್ಟಾಗಿ ರಚಿತವಾದ ಭಾಷ್ಯ ಎಂಬ ಮನ್ನಣೆಗೆ ಪಾತ್ರವಾಗುತ್ತದೆ. ಪುರಾಣಪ್ರಪಂಚದ ಜಿಜ್ಞಾಸುಗಳಿಗೆಲ್ಲ ಇದು

ಶ್ರೀಮದಾಚಾರ್ಯರು ನೀಡಿರುವ ಅಪೂರ್ವಮಿತ್ರ ಎಂಬ ಸುಮಧ್ವವಿಜಯದ ಮಾತಿನಿಂದ ಈ ಅಂಶ ಖಚಿತಪಡುತ್ತದೆ :

ಪುರಾಣಸ್ಥಾನಪಾಂಥಾನಾಮಭಾಷಾತ್ರಯವೇದಿನಾಮ್ ।
ಭವತಾ ಸುಸಖಾ ಚಕ್ರೇ ಶ್ರೀಭಾಗವತನಿರ್ಣಯಃ ॥ (ಸುಮಧ್ವವಿಜಯ ೧೫/೭೭)

೧೯. ಭಾಗವತವ್ಯಾಖ್ಯಾನಗಳು

ಶ್ರೀಮಧ್ವಾಚಾರ್ಯರ ಭಾಗವತತಾತ್ಪರ್ಯನಿರ್ಣಯವನ್ನು ಆಧರಿಸಿ ಅನೇಕರು ಭಾಗವತದ ಮೇಲೆ ವ್ಯಾಖ್ಯಾನಗಳನ್ನು ರಚಿಸಿರುವರು. ಅವುಗಳಲ್ಲೆಲ್ಲ ಶ್ರೀವಿಜಯಧ್ವಜರ 'ಪದರತ್ನಾವಲಿ'ಯು ಅತ್ಯಂತ ವಿಸ್ತೃತವಾದ ವ್ಯಾಖ್ಯಾನವಾಗಿದೆ. ಶ್ರೀಸುಧೀಂದ್ರತೀರ್ಥರು, ಶ್ರೀಯದುಪತ್ಯಾಚಾರ್ಯರು, ಶ್ರೀಬಿದರಹಳ್ಳಿ ಶ್ರೀನಿವಾಸತೀರ್ಥರು, ಶ್ರೀಸತ್ಯನಾಥ-ತೀರ್ಥರು, ಶ್ರೀಸತ್ಯಧರ್ಮತೀರ್ಥರು, ಶ್ರೀವ್ಯಾಸತತ್ತ್ವಜ್ಞತೀರ್ಥರು, ಛಲಾರಿ ಶೇಷಾಚಾರ್ಯರು, ಲಿಂಗೇರಿ ಶ್ರೀನಿವಾಸಾಚಾರ್ಯರು ಮೊದಲಾದವರು ಭಾಗವತದ ಮೇಲೆ ವ್ಯಾಖ್ಯಾನವನ್ನು ರಚಿಸಿರುವರು. ಶ್ರೀವಿಜಯೀಂದ್ರತೀರ್ಥರ 'ಭಾಗವತಕಥಾ-ಸಂಗ್ರಹ'ವು ಭಾಗವತಕಥೆಯನ್ನು ಗದ್ಯರೂಪದಲ್ಲಿ ಸಂಗ್ರಹಿಸುವ ವಿಶಿಷ್ಟಕೃತಿ ಎಂಬುದಾಗಿ ಶ್ರೀಸುಮತೀಂದ್ರತೀರ್ಥರ ಪ್ರಮೇಯದೀಪಿಕಾಭಾವರತ್ನಕೋಶದಿಂದ ತಿಳಿದು ಬರುತ್ತದೆ. ಶ್ರೀಮಾದನೂರು ವಿಷ್ಣುತೀರ್ಥರ ಭಾಗವತಸಾರೋದ್ಧಾರವು ಭಾಗವತದ ಸಾರವನ್ನು ಭಾಗವತದ ಶ್ಲೋಕಗಳಿಂದಲೇ ಸಂಗ್ರಹಿಸಿಕೊಡುವ ವಿಶಿಷ್ಟಕೃತಿಯಾಗಿದೆ. ಈ ಎಲ್ಲ ವ್ಯಾಖ್ಯಾನಗಳು ಸಹ ಶ್ರೀಮದಾಚಾರ್ಯರ ಭಾಗವತತಾತ್ಪರ್ಯನಿರ್ಣಯದ ಪ್ರಭಾವದಿಂದಾಗಿಯೇ ರಚಿಸಲ್ಪಟ್ಟವು ಎಂಬುದು ಗಮನಾರ್ಹ.

ಶ್ರೀಛಲಾರೀನಾರಾಯಣಾಚಾರ್ಯರು, ಶ್ರೀಆಯೀನರಹರಿಆಚಾರ್ಯರು, ಪ್ರಕಾಶಿಕಾ ಶ್ರೀನಿವಾಸಾಚಾರ್ಯರು ಮೊದಲಾದ ಅನೇಕರು ನೇರವಾಗಿ ಭಾಗವತ-ತಾತ್ಪರ್ಯನಿರ್ಣಯಕ್ಕೆ ಕ್ರಮವಾಗಿ ಪ್ರಬೋಧಿನೀ, ದೀಪಿಕಾ ಹಾಗೂ ಪ್ರಕಾಶಿಕಾ ಎಂಬ ವ್ಯಾಖ್ಯಾನಗಳನ್ನು ರಚಿಸಿರುವರು.

ಅಂತೂ ಶ್ರೀಮದ್ಭಾಗವತತಾತ್ಪರ್ಯನಿರ್ಣಯ ಒಟ್ಟಾಗಿ ತತ್ತ್ವಜಿಜ್ಞಾಸೆಗೆ ನೀಡುವ ನೆರವು ಅನನ್ಯವಾದುದು. ಅದು ಕೆಲವು ಶ್ಲೋಕಗಳಿಗೆ ಮಾತ್ರ ರಚಿತವಾಗಿದ್ದರೂ, ಅದು ನೀಡುವ ಮಾರ್ಗದರ್ಶನದಿಂದ ಶ್ರೀಮದ್ಭಾಗವತ ಮಾತ್ರವಲ್ಲದೆ ಸಮಗ್ರ ಇತಿಹಾಸಪುರಾಣಪ್ರಪಂಚವೇ ತೆರೆದುಕೊಳ್ಳುತ್ತದೆ.

★★★★

ಪ್ರಕರಣ ಗ್ರಂಥಗಳು

ದಶಪ್ರಕರಣಗಳು ಆಚಾರ್ಯರ ವಿಶಿಷ್ಟ ರೀತಿಯ ರಚನೆಗಳು. 'ಪ್ರಕರಣ' ಪ್ರಕಾರ ದರ್ಶನಪ್ರಪಂಚಕ್ಕೆ ಹೊಸತಲ್ಲ.

ಶಾಸ್ತ್ರೈಕದೇಶಸಂಬದ್ಧಂ ಶಾಸ್ತ್ರಕಾರ್ಯಾಂತರೇ ಸ್ಥಿತಮ್ ।
ಆಹುಃ ಪ್ರಕರಣಂ ನಾಮ ಗ್ರಂಥಭೇದಂ ವಿಪಶ್ಚಿತಃ ॥

ಎಂಬುದು 'ಪ್ರಕರಣ'ದ ಲಕ್ಷಣ. ಪ್ರಮಾಣ ಮತ್ತು ಪ್ರಮೇಯ ಎಂಬ ಶಾಸ್ತ್ರದ ಎರಡು ಮುಖ್ಯ ಭಾಗಗಳಲ್ಲಿ ಯಾವುದಾದರೂ ಒಂದಕ್ಕೆ ಸಂಬಂಧಿಸಿದಂತೆ ಸ್ವಮತಸ್ಥಾಪನ ಮತ್ತು ಪರಪಕ್ಷಖಂಡನ ಎಂಬ ಎರಡು ಕಾರ್ಯಗಳಲ್ಲಿ ಯಾವುದಾದರೂ ಒಂದನ್ನು ಮಾಡುವ ಕೃತಿವಿಶೇಷವೇ ಪ್ರಕರಣ. ಈ ಲಕ್ಷಣವು ಅವರ ಪ್ರಕರಣಗಳಲ್ಲಿ ಸ್ಪಷ್ಟ. ಅವುಗಳಲ್ಲಿ ತತ್ತ್ವಸಂಖ್ಯಾನ,ತತ್ತ್ವವಿವೇಕಗಳು ಪ್ರಮೇಯವಿಭಾಗಕ್ಕೆ ಸಂಬಂಧಿಸಿದ್ದರೆ, ಪ್ರಮಾಣಲಕ್ಷಣ, ಕಥಾಲಕ್ಷಣಗಳು ಪ್ರಮಾಣವಿಭಾಗಕ್ಕೆ ಸಂಬಂಧಿಸಿವೆ. ತತ್ತ್ವಸಂಖ್ಯಾನಾದಿಗಳಲ್ಲಿ ಸ್ವಮತಸ್ಥಾಪನೆ ಪ್ರಧಾನವಾಗಿದ್ದರೆ, ಖಂಡನತ್ರಯ ಮತ್ತು ತತ್ತ್ವೋದ್ಯೋತಗಳಲ್ಲಿ ಪರಪಕ್ಷನಿರಾಸವಿದೆ. ತತ್ತ್ವೋದ್ಯೋತವು ಖಂಡನತ್ರಯದ ವಿವರಣರೂಪವಾಗಿದ್ದರೆ, ವಿಷ್ಣುತತ್ತ್ವನಿರ್ಣಯವು ಸಕಲಪ್ರಕರಣಗಳ ಸಾರರೂಪವಾಗಿರುವ ಬೃಹತ್ಪ್ರಕರಣವಾಗಿದೆ. ಕರ್ಮನಿರ್ಣಯವು ವೇದಾರ್ಥಮೀಮಾಂಸೆಗೆ ಪ್ರಸ್ತಾವನೆಯಂತಿರುವ ವ್ಯಾಖ್ಯಾನಕ್ರಮದ ನಿದರ್ಶನರೂಪ ಪ್ರಕರಣವಾಗಿದೆ.

ಅದ್ವೈತಮತದ ಆಚಾರ್ಯರಾದ ಶಂಕರರು ಈ ಬಗೆಯ ಪ್ರಕರಣಗಳನ್ನು ರಚಿಸಿಲ್ಲ. ಅವರ ಹೆಸರಿನಲ್ಲಿ ಉಪಲಬ್ಧವಿರುವ ಕೆಲವು ಪ್ರಕರಣಗಳು ಅವರವೇ ಎಂಬುದು ಖಚಿತಪಟ್ಟಿಲ್ಲ. ರಾಮಾನುಜಾಚಾರ್ಯರ 'ವೇದಾರ್ಥಸಂಗ್ರಹ' ಮಾತ್ರ ಈ ಬಗೆಯ ರಚನೆ. ಆದರೆ ಅವರ ಮತದ ಸಾರಸರ್ವಸ್ವವನ್ನು ತತ್ತ್ವಸಂಖ್ಯಾನ, ತತ್ತ್ವವಿವೇಕಗಳ ಮಾದರಿಯಲ್ಲಿ ಒದಗಿಸುವ ಕೃತಿಗಳನ್ನು ಅವರಾರೂ ರಚಿಸಿಲ್ಲ. ಎಂದರೆ ಮೂಲಕಾರರ ವಾಕ್ಯಗಳಲ್ಲೇ ಅವರ ಸಿದ್ಧಾಂತಕ್ಕೆ ಪ್ರವೇಶ ಪಡೆಯುವ ಸೌಲಭ್ಯ ಮಧ್ವದರ್ಶನಕ್ಕಿರುವಂತೆ ಇತರ ದರ್ಶನಗಳಿಗೆ ಇಲ್ಲವೆಂದೇ ಹೇಳಬೇಕು.

ಪ್ರಮಾಣಲಕ್ಷಣ, ಕಥಾಲಕ್ಷಣಗಳು ದ್ವೈತದರ್ಶನದ ಪ್ರಮಾಣಪ್ರಕ್ರಿಯೆ (Epistemology)ಯನ್ನು ನಿಖರವಾಗಿ ತಿಳಿಸುವ ಕೃತಿಗಳು. ಪ್ರಮಾಣಸ್ವರೂಪವೇ ಅಸ್ಪಷ್ಟವಾದಾಗ ಅವುಗಳಿಂದ ಸಾಧಿತವಾಗುವ ಪ್ರಮೇಯಪರಿಕಲ್ಪನೆಯೂ ಅಸ್ಪಷ್ಟವಾಗುವುದು ಅನಿವಾರ್ಯ. ಜ್ಞಾನ ನೀಡುವ ಇಂದ್ರಿಯಗಳಲ್ಲೇ ದೋಷವಿದ್ದರೆ ಅವುಗಳಿಂದ ಬರುವ ಜ್ಞಾನವು ನಿರ್ದುಷ್ಟವಾಗಿರಲು ಎಂತು ಸಾಧ್ಯ? ಕಾಮಾಲೆ ರೋಗದ ಕಣ್ಣು ಬಿಳಿಯವಸ್ತುವನ್ನು ಹಳದಿಯಾಗಿ ಗ್ರಹಿಸುವ ಅಪಾಯ ತಪ್ಪಿದ್ದಲ್ಲ! ಅಲ್ಲವೆ!

ಶ್ರೀಮಧ್ವಾಚಾರ್ಯರು ತಮ್ಮ ದರ್ಶನದ ಪ್ರಮಾಣಮೀಮಾಂಸೆಯನ್ನು ತಮ್ಮ ಈ ಎರಡು ಕೃತಿಗಳಲ್ಲೂ, ಅನುವ್ಯಾಖ್ಯಾನ, ತತ್ತ್ವನಿರ್ಣಯ ಮೊದಲಾದ ಇತರ ಕೃತಿಗಳಲ್ಲೂ ಮಾಡುವ ಮೂಲಕ ಪರಿಪೂರ್ಣವಾದ ಪ್ರಮಾಣಪ್ರಕ್ರಿಯೆಯನ್ನು ಒದಗಿಸಿರುವರು. ಇತರರು ನೀಡುವ ಪ್ರಮಾಣಗಳ ಲಕ್ಷಣ, ವಿಭಾಗ, ಸಂಖ್ಯೆ ಮೊದಲಾದವುಗಳನ್ನು ವಿಮರ್ಶಿಸಿ ಅವುಗಳ ಅಸಮಗ್ರತೆಯನ್ನು ಸ್ಪಷ್ಟಪಡಿಸಿರುವರು.

ಸಾಕ್ಷಿಪ್ರತ್ಯಕ್ಷ, ಪ್ರಾಮಾಣ್ಯಸ್ವತಸ್ತ್ವ, ಪಟುಪ್ರತ್ಯಕ್ಷ, ಅಪಟುಪ್ರತ್ಯಕ್ಷ, ಸಾವಕಾಶ ನಿರವಕಾಶ ವಾಕ್ಯಗಳ ಬಲಾಬಲ, ಶ್ರುತಿಸ್ಮೃತಿಗಳ ಪ್ರಮಾಣವ್ಯವಸ್ಥೆ, ಉಪಜೀವ್ಯ ಉಪಜೀವಕ ಎಂಬ ವಿವೇಚನೆ, ಪ್ರಮಾಣಗಳ ವ್ಯಾಪ್ತಿ, ಅನುಮಾನದ ಇತಿಮಿತಿ ಮೊದಲಾಗಿ ಎಲ್ಲವೂ ಅತ್ಯಂತ ಪರಿಷ್ಕೃತ ವಿವರಗಳಾಗಿವೆ. ಜಾಗತಿಕ ದರ್ಶನಪ್ರಪಂಚ ಆವರೆಗೂ ಕಂಡು ಕೇಳರಿಯದ ಪ್ರಮಾಣವಿವೇಚನೆಯನ್ನು ಇಲ್ಲಿ ಕಾಣಬಹುದು.

ಸ್ವತಃಸಂಪನ್ನವಾದ ಅದರ ಮಹತ್ತ್ವನ್ನು ಬ್ರಹ್ಮತರ್ಕ ಮೊದಲಾದ ಅಧಿಕೃತಗ್ರಂಥಗಳ ಉಲ್ಲೇಖದಿಂದ ಸ್ಪಷ್ಟಪಡಿಸಿರುವರು.

ಈ ಬಗೆಯ ಪ್ರಮಾಣಪ್ರಕ್ರಿಯೆಯನ್ನು ಇತರ ದರ್ಶನಗಳು ಅದರಲ್ಲೂ ಮುಖ್ಯವಾಗಿ ಅದ್ವೈತವಿಶಿಷ್ಟಾದ್ವೈತದರ್ಶನಗಳು ಒದಗಿಸಿಲ್ಲ. ಪ್ರಮೇಯ-ಮೀಮಾಂಸೆಗೆ ಅದ್ವೈತವು ಭಾಟ್ಟಮೀಮಾಂಸಕರ ಪ್ರಕ್ರಿಯೆಯನ್ನು ಅಳವಡಿಸಿಕೊಂಡರೆ, ವಿಶಿಷ್ಟಾದ್ವೈತವು ಪ್ರಾಭಾಕರಮೀಮಾಂಸಕರ ಪ್ರಕ್ರಿಯೆಯನ್ನು ಅಳವಡಿಸಿಕೊಂಡಿತು.

ಈ ಕಾರಣಕ್ಕಾಗಿಯೇ ಮಧ್ವದರ್ಶನದಂತೆ ಇತರ ವೇದಾಂತದರ್ಶನಗಳು ಸ್ವಯಂಪೂರ್ಣವಾಗಲು ಸಾಧ್ಯವಾಗಲಿಲ್ಲ. ಆಚಾರ್ಯರ ಪ್ರಮಾಣವಿವೇಚನೆಯ ವಿರಾಡ್ರೂಪದಂತಿರುವ ಕೃತಿಯೇ ಶ್ರೀವ್ಯಾಸರಾಜರ ತರ್ಕತಾಂಡವ.

ಸಭೆಯೊಂದರಲ್ಲಿ ನಡೆದ ಅವರ ಉಪನ್ಯಾಸವೇ ತತ್ತ್ವೋದ್ಯೋತ ಅಥವಾ ವಾದ ಎಂಬ ಹೆಸರಿನಿಂದ ಒಂದು ಗ್ರಂಥವಾಗಿ ಸಿದ್ಧವಾಯಿತು. ವಾದ ಮಾಡುತ್ತಲೇ ರಚಿತವಾದ ಅಪೂರ್ವಕೃತಿ ಅದು. ಕಣಕ್ಕಿಳಿದಾಗ ಬರುವ ಸಮಸ್ಯೆಗಳಿಗೆ ಸ್ಪಂದಿಸಲು ಅನುಕೂಲವಾಗುವ ಶಿಕ್ಷಣವನ್ನು ನೀಡುವ ಮೂಲಕ ವಿಶಿಷ್ಟ ಬಗೆಯ ರಚನೆಯಾಗಿ ಮಾನ್ಯವಾಯಿತು. ವಿಷಯಗಳೊಂದಿಗೆ ವಾದ ನಡೆದ ದಾಖಲೆಯೂ ಆಗಿ ಮಹತ್ತ್ವ ಪಡೆಯಿತು.

ವಿಷ್ಣುತತ್ತ್ವನಿರ್ಣಯವಂತು ಅವರ ಸಮಗ್ರ ದರ್ಶನದ ಕೈಪಿಡಿಯಂತಹ ಪ್ರಕರಣ. ಬೇರಾವ ದರ್ಶನವೂ ತನ್ನೆಲ್ಲ ಮುಖ್ಯ ಪ್ರಮೇಯಗಳನ್ನು ಇಷ್ಟು ಸಂಗ್ರಹವಾಗಿ ಪರಿಣಾಮಕಾರಿಯಾಗಿ ಒಂದೇ ಗ್ರಂಥದಲ್ಲಿ ಹೀಗೆ ನೀಡಿದ ನಿದರ್ಶನವಿಲ್ಲ.

ಅವರ ಮತ್ತೊಂದು ಪ್ರಕರಣ ಕರ್ಮನಿರ್ಣಯವೂ ಹೀಗೆಯೇ ವಾದಪ್ರಸಂಗ-ವೊಂದರ ವಿವರಗಳ ದಾಖಲೆಯ ರೂಪದ ಕೃತಿ. ಜ್ಞಾನಕಾಂಡ ಕರ್ಮಕಾಂಡ ಎಂಬುದಾಗಿ

ವೈದಿಕಸಾಹಿತ್ಯವನ್ನು ವಿಭಾಗಿಸುವ ಪ್ರವೃತ್ತಿಯನ್ನು ನಿರಾಕರಿಸಿ ಸಮಗ್ರ ವೈದಿಕಸಾಹಿತ್ಯವು ಅಖಂಡವಾಗಿ ಜ್ಞಾನಕಾಂಡವೇ ಆಗಿದೆ ಎಂದು ಸಾಧಿಸಿ ತೋರಿಸಿದ್ದು ಅದರ ಮಹತ್ತ್ವ.

ಅದ್ವೈತಮತ ಒಂದರ ವಿಮರ್ಶೆಗೇ ಖಂಡನತ್ರಯವೆಂಬ ಮೂರುಕೃತಿಗಳನ್ನು ಮೀಸಲಿರಿಸುವ ಮೂಲಕ ಪರಪಕ್ಷವೊಂದರ ಸಮಗ್ರ ವಿಮರ್ಶೆಗೆ ದಾರಿದೀಪದಂತಿರುವ ಕೃತಿಗಳನ್ನು ನೀಡಿರುವರು. ಆಗ ಅದ್ವೈತ ಪಡೆದಿದ್ದ ಪ್ರಸಿದ್ಧಿಯನ್ನು ಇದು ಪರ್ಯಾಯವಾಗಿ ಸೂಚಿಸುವುದು. ಇವುಗಳಲ್ಲಿ ಒಮ್ಮೆಯೂ ವ್ಯಕ್ತಿನಿಂದೆಯ ಸೋಂಕೂ ಇಲ್ಲ. ಅವರ ವಿಮರ್ಶನ ಸರಣಿ ಆರೋಗ್ಯಕರ ವಿಮರ್ಶೆ ಎಂದೂ ವ್ಯಕ್ತಿನಿಂದೆಯ ಮಟ್ಟವನ್ನು ತಲುಪಬೇಕಿಲ್ಲ ಎಂಬುದಕ್ಕೆ ನಿದರ್ಶನವೂ ಆಗಿದೆ.

ಆಚಾರ್ಯರ ಪರಮತವಿಮರ್ಶೆಯ ಪರಿಪೂರ್ಣತೆ ಹಾಗು ಅದ್ವೈತ ವಿಮರ್ಶೆಯ ಸಮಗ್ರತೆಯ ವಿಶ್ವರೂಪವನ್ನು ದರ್ಶನ ಮಾಡಿಸುವ ಕೃತಿ ಶ್ರೀವ್ಯಾಸರಾಜರ ನ್ಯಾಯಾಮೃತ. ದಶಪ್ರಕರಣಗಳಲ್ಲಿ ಹೆಚ್ಚಿನವು ಗಾತ್ರದಲ್ಲಿ ತುಂಬಾ ಚಿಕ್ಕವು. ಈ ಪ್ರಕರಣಗಳ ಒಟ್ಟು ವ್ಯಾಪ್ತಿ ಡೆಮ್ಮಿ ಅಷ್ಟಪತ್ರಾಕಾರದ ಮುದ್ರಣದಲ್ಲಿ ಸುಮಾರು ನಲವತ್ತು ಪುಟಗಳಷ್ಟು ಮಾತ್ರ.

★★★★★

ಪ್ರಮೇಯಗ್ರಂಥಗಳು

೧. ತತ್ತ್ವಸಂಖ್ಯಾನ

ವೇದಾದಿಮೂಲಶಾಸ್ತ್ರಗಳಲ್ಲಿ ನಿರೂಪಿತವಾದ ತತ್ತ್ವವಿಭಾಗದ ಕಥನ ತತ್ತ್ವ-ಸಂಖ್ಯಾನದ ಮುಖ್ಯ ವಿಷಯ. ತತ್ತ್ವ ಎಂದರೆ ಪ್ರಮೇಯ ಎಂದರ್ಥ. ಇಂಥ ಪ್ರಮೇಯವು ಸ್ವತಂತ್ರ ಪರತಂತ್ರ ಎಂಬುದಾಗಿ ಎರಡು ಬಗೆ : **ಸ್ವತಂತ್ರಮಸ್ವತಂತ್ರಂ ಚ ದ್ವಿವಿಧಂ ತತ್ತ್ವಮಿಷ್ಯತೇ ।** ಸ್ವತಂತ್ರತತ್ತ್ವವು ಭಗವಂತನಾದ ಮಹಾವಿಷ್ಣು ಒಬ್ಬನೇ : **ಸ್ವತಂತ್ರೋ ಭಗವಾನ್ ವಿಷ್ಣುಃ ।**

ಅಸ್ವತಂತ್ರ ತತ್ತ್ವವು ಭಾವ ಮತ್ತು ಅಭಾವ ಎಂಬುದಾಗಿ ಎರಡು ವಿಧ. ಅಭಾವವು ಪ್ರಾಗಭಾವ, ಪ್ರಧ್ವಂಸಾಭಾವ ಮತ್ತು ಸದಾಭಾವ ಎಂಬುದಾಗಿ ಮೂರುವಿಧ : **ಪ್ರಾಕ್ಪ್ರಧ್ವಂಸಸದಾತ್ವೇನ ತ್ರಿವಿಧೋಽಭಾವ ಇಷ್ಯತೇ ।**

ಭಾವವು ಚೇತನ, ಅಚೇತನ ಎಂಬುದಾಗಿ ಎರಡು ವಿಧ. ಚೇತನದಲ್ಲೂ ದುಃಖಸಂಪರ್ಕವಿಲ್ಲದ ಚೇತನ ಮತ್ತು ದುಃಖ ಸಂಪರ್ಕವಿರುವ ಚೇತನ ಎಂಬುದಾಗಿ ಎರಡು ಬಗೆ. ಮಹಾಲಕ್ಷ್ಮಿಯು ಎಂದೂ ದುಃಖಗಳ ಸಂಪರ್ಕವಿಲ್ಲದ ಚೇತನ; ಅವರು ನಿತ್ಯಮುಕ್ತರು. ಉಳಿದೆಲ್ಲ ಚೇತನಗಳು ದುಃಖಸಂಪರ್ಕ ಹೊಂದಿದವರು :

ದುಃಖಸ್ಪೃಷ್ಟಂ ತದಸ್ಪೃಷ್ಟಮಿತಿ ದ್ವೇಧೈವ ಚೇತನಮ್ ।
ನಿತ್ಯಾದುಃಖಾ ರಮಾಽನ್ಯೇ ತು ಸ್ಪೃಷ್ಟದುಃಖಾಃ ಸಮಸ್ತಶಃ ॥

ದುಃಖಸಂಪರ್ಕವಿರುವ ಚೇತನವು ಮುಕ್ತ ಮತ್ತು ಸಂಸಾರಿ ಎಂಬುದಾಗಿ ಎರಡು ವಿಧ. ಮುಕ್ತರು ದೇವತೆಗಳು, ಋಷಿಗಳು, ಪಿತೃಗಳು, ಚಕ್ರವರ್ತಿಗಳು ಮತ್ತು ಮನುಷ್ಯೋತ್ತಮರು ಎಂಬುದಾಗಿ ಐದು ಬಗೆ. ಸಂಸಾರಿಗಳು ಮುಕ್ತಿಯೋಗ್ಯರು ಮತ್ತು ಮುಕ್ತಿಗೆ ಅಯೋಗ್ಯರು ಎಂಬುದಾಗಿ ಎರಡು ವಿಧ. ಮುಕ್ತಿಯೋಗ್ಯರು ಸಹ ದೇವತೆಗಳು, ಋಷಿಗಳು, ಪಿತೃಗಳು, ಚಕ್ರವರ್ತಿಗಳು ಮತ್ತು ಮನುಷ್ಯೋತ್ತಮರು ಎಂಬುದಾಗಿ ಐದು ವಿಧ : ದೇವರ್ಷಿಪಿತೃಪನರಾ ಇತಿ ಮುಕ್ತಾಸ್ತು ಪಂಚಧಾ ।, ಏವಂ ವಿಮುಕ್ತಿಯೋಗ್ಯಾಶ್ಚ......

ಮುಕ್ತಿಗೆ ಅಯೋಗ್ಯರು, ತಾಮಸರು ಮತ್ತು ನಿತ್ಯಸಂಸಾರಿಗಳು ಎಂಬುದಾಗಿ ಎರಡು ಬಗೆ. ತಾಮಸರು ಅಂಧಂತಮಸ್ಸಿಗೆ ತೆರಳಿದವರು ಮತ್ತು ತೆರಳಲಿರುವವರು ಎಂಬುದಾಗಿ ಎರಡು ವಿಧ. ಇವರಿಬ್ಬರೂ ದೈತ್ಯರು, ರಾಕ್ಷಸರು, ಪಿಶಾಚಿಗಳು ಮತ್ತು ಮನುಷ್ಯಾಧಮರು ಎಂಬುದಾಗಿ ನಾಲ್ಕು ವಿಧ : ದೈತ್ಯರಕ್ಷಃಪಿಶಾಚಕಾಃ । ಮರ್ತ್ಯಾಧಮಾಶ್ಚತುರ್ಧೈವ ತಮೋಯೋಗ್ಯಾಃ ಪ್ರಕೀರ್ತಿತಾಃ ।

ಅಚೇತನವು ನಿತ್ಯ, ನಿತ್ಯಾನಿತ್ಯ ಮತ್ತು ಅನಿತ್ಯ ಎಂಬುದಾಗಿ ಮೂರುಬಗೆ : ನಿತ್ಯಾನಿತ್ಯವಿಭಾಗೇನ ತ್ರಿಧೈವಾಚೇತನಂ ಮತಮ್ । ವೇದಗಳು, ಪಂಚಾಶದ್ವರ್ಣಗಳು ಮತ್ತು ಅವ್ಯಾಕೃತ ಆಕಾಶ ಇವು ನಿತ್ಯ : ನಿತ್ಯಾ ವೇದಾಃ ಪುರಾಣಾದ್ಯಾಃ ಪುರಾಣಾದಿಗಳು, ಕಾಲ ಮತ್ತು ಪ್ರಕೃತಿ ಈ ಮೂರು ನಿತ್ಯಾನಿತ್ಯ : ಕಾಲಃ ಪ್ರಕೃತಿರೇವ ಚ । ನಿತ್ಯಾನಿತ್ಯಂ .... ಅನಿತ್ಯವು ಸಂಸೃಷ್ಟ ಮತ್ತು ಅಸಂಸೃಷ್ಟ ಎಂಬುದಾಗಿ ಎರಡು ವಿಧ. ಪಂಚಭೂತಗಳು, ದಶೇಂದ್ರಿಯಗಳು, ಪಂಚತನ್ಮಾತ್ರಗಳು, ಬುದ್ಧಿ, ಮನಸ್ಸು, ಅಹಂಕಾರ ಮತ್ತು ಮಹತತ್ತ್ವ ಇವೆಲ್ಲ ಅಸಂಸೃಷ್ಟ, ಬ್ರಹ್ಮಾಂಡ ಮತ್ತು ಅದರೊಳಗಿನ ಎಲ್ಲವೂ ಸಂಸೃಷ್ಟ

ಸಕಲ ಅಸ್ವತಂತ್ರತತ್ತ್ವಗಳ ಹುಟ್ಟು, ಪಾಲನೆ, ವಿನಾಶ, ನಿಯಮನ, ಅಜ್ಞಾನ, ಜ್ಞಾನ, ಬಂಧ, ಸಂಸಾರ, ಸುಖ, ದುಃಖ, ಮಿಥ್ಯಾಜ್ಞಾನ ಮತ್ತು ಪ್ರಕಾಶ ಇವೆಲ್ಲವೂ ಯಥಾಯೋಗ್ಯವಾಗಿ ಸ್ವತಂತ್ರನಾದ ಮಹಾವಿಷ್ಣುವಿನಿಂದಲೇ ನಡೆಯುವವು :

ಸೃಷ್ಟಿಃ ಸ್ಥಿತಿಃ ಸಂಹೃತಿಶ್ಚ ನಿಯಮೋಽಜ್ಞಾನಬೋಧನೇ ।
ಬಂಧೋ ಮೋಕ್ಷಃ ಸುಖಂ ದುಃಖಮಾವೃತಿರ್ಜ್ಯೋತಿರೇವ ಚ ।
ವಿಷ್ಣುನಾಽಸ್ಯ ಸಮಸ್ತಸ್ಯ ಸಮಾಸವ್ಯಾಸಯೋಗತಃ ॥

ಇದು ತತ್ತ್ವಸಂಖ್ಯಾನದ ಸಾರಸಂಗ್ರಹ.

ತತ್ತ್ವಸಂಖ್ಯಾನಕ್ಕೆ ಶ್ರೀಪದ್ಮನಾಭತೀರ್ಥರು ಮತ್ತು ಶ್ರೀಜಯತೀರ್ಥರು ಟೀಕೆ ರಚಿಸಿರುವರು. ಅದಕ್ಕೆ ಶ್ರೀವಿಜಯೀಂದ್ರತೀರ್ಥರು, ಶ್ರೀವೇದೇಶತೀರ್ಥರು, ಶ್ರೀರಾಘವೇಂದ್ರತೀರ್ಥರು ಶ್ರೀಯದುಪತ್ಯಾಚಾರ್ಯರು, ಶ್ರೀಬಿದರಹಳ್ಳಿ ಶ್ರೀನಿವಾಸತೀರ್ಥರು,

ಶ್ರೀಪಾಂಡುರಂಗೀ ಕೇಶವಾಚಾರ್ಯರು, ಶ್ರೀಕಾಶಿ ತಿಮ್ಮಣ್ಣಾಚಾರ್ಯರು ಮೊದಲಾದವರು ಟಿಪ್ಪಣಿಗಳನ್ನು ಬರೆದಿರುವರು. ತತ್ತ್ವಸಂಖ್ಯಾನಕ್ಕೆ ಶ್ರೀವ್ಯಾಸರಾಜರು ಮಂದಾರಮಂಜರಿ ಎಂಬ ವಿಸ್ತೃತವಾದ ಟಿಪ್ಪಣಿಯನ್ನು ರಚಿಸಿರುವರು.

೨. ತತ್ತ್ವವಿವೇಕ

ತತ್ತ್ವವಿವೇಕವು ಸಹ ತತ್ತ್ವವಿವೇಚನೆಗೆಂದೇ ಮೀಸಲಾಗಿರುವ ಕೃತಿ. ತತ್ತ್ವಸಂಖ್ಯಾನವು ಶ್ರೀಮದಾಚಾರ್ಯರ ಸ್ವತಂತ್ರಕೃತಿ. ಅದರಲ್ಲಿನ ವಿಚಾರಗಳಿಗೆ ಆಧಾರವಾಗಿ ಸ್ವತಃ ಭಗವಂತನ ತತ್ತ್ವವಿವೇಕ ಎಂಬ ಕೃತಿಯಿಂದ ವಾಕ್ಯಗಳನ್ನು ಸಂಗ್ರಹಿಸಿ ಈ ಕೃತಿಯನ್ನು ನೀಡಿರುವರು. ಆದ್ದರಿಂದಲೇ ಒಂದೇ ವಿಷಯದ ಮೇಲೆ ಎರಡು ಪ್ರತ್ಯೇಕ ಗ್ರಂಥಗಳೇಕೆ? ಎಂಬ ಆಕ್ಷೇಪಕ್ಕೆ ಅವಕಾಶವಿಲ್ಲ ಎಂಬುದಾಗಿ ಶ್ರೀಜಯತೀರ್ಥರು ಇದಕ್ಕೆ ರಚಿಸಿರುವ ಟೀಕೆಯಲ್ಲಿ ವಿವೇಚಿಸಿರುವರು.

ನನು ಪರಮಪುರುಷಾದಿತತ್ತ್ವಾನಾಂ ವಿವೇಕಃ ಶಾಸ್ತ್ರ ಏವ ಕೃತಃ । ತತ್ಕಿಮನೇನ ಪ್ರಕರಣೇನ । ವಿಕ್ಷಿಪ್ತಸಂಗ್ರಹಾರ್ಥಮಿತಿ ಚೇನ್ನ । ಸಂಗ್ರಹಸ್ಯಾಪಿ ತತ್ತ್ವಸಂಖ್ಯಾನೇ ಕೃತತ್ವಾತ್ । ಸತ್ಯಮ್, ತಥಾಽಪಿ ತತ್ತ್ವಸಂಖ್ಯಾನೋಕ್ತಾರ್ಥೇ ಸಾಕ್ಷಿತ್ವೇನ ಭಗವತ್ಪ್ರಣೀತ-ತತ್ತ್ವವಿವೇಕಗತವಾಕ್ಯಾನ್ಯೇವಾಚಾರ್ಯೈರುದಾಹೃತಾನೀತ್ಯದೋಷಃ ॥ – ಟೀಕಾ

ಶ್ರೀಮದಾಚಾರ್ಯರು ತಮ್ಮ ಭಾಗವತತಾತ್ಪರ್ಯನಿರ್ಣಯ ಮೊದಲಾದ ಗ್ರಂಥಗಳಲ್ಲಿ ತತ್ತ್ವವಿವೇಕ ಎಂಬ ಕೃತಿಯನ್ನು ಉದಾಹರಿಸಿರುವುದನ್ನು ಗಮನಿಸ-ಬಹುದು. ತತ್ತ್ವಸಂಖ್ಯಾನವೆಂಬ ಮೂಲಕೃತಿಯನ್ನು ಸಹ ಶ್ರೀಮದಾಚಾರ್ಯರು ಭಾಗವತತಾತ್ಪರ್ಯಾದಿಗಳಲ್ಲಿ ಉಲ್ಲೇಖಿಸಿರುವರು. ಅದು ಪ್ರತ್ಯೇಕ ಗ್ರಂಥ. ಶ್ರೀಮದಾಚಾರ್ಯರ ತತ್ತ್ವಸಂಖ್ಯಾನವು ಅದೇ ಹೆಸರಿನ ಮತ್ತೊಂದು ಕೃತಿಯೆಂದು ತಿಳಿಯಬೇಕು. ಇದಕ್ಕೆಲ್ಲ ಮೇಲೆ ಉಲ್ಲೇಖಿಸಿದ ಶ್ರೀಜಯತೀರ್ಥರ ವಚನವೇ ಆಧಾರ.

ಪ್ರಮೇಯವು ಸ್ವತಂತ್ರ ಮತ್ತು ಪರತಂತ್ರ ಎಂಬುದಾಗಿ ಎರಡು ಬಗೆ. ನಿರ್ದೋಷನೂ, ಅನಂತಕಲ್ಯಾಣಗುಣಪೂರ್ಣನೂ ಆದ ಮಹಾವಿಷ್ಣುವು ಒಬ್ಬನೇ ಸ್ವತಂತ್ರ ಪ್ರಮೇಯ. ಉಳಿದೆಲ್ಲವೂ ಅವನ ಅಧೀನವಾಗಿದ್ದು ಪರತಂತ್ರ ಪ್ರಮೇಯ ಎನ್ನಿಸಿವೆ :

ಸ್ವತಂತ್ರಂ ಪರತಂತ್ರಂ ಚ ಪ್ರಮೇಯಂ ದ್ವಿವಿಧಂ ಮತಮ್ ।
ಸ್ವತಂತ್ರೋ ಭಗವಾನ್ ವಿಷ್ಣುರ್ನಿರ್ದೋಷಾಖಿಲಸದ್ಗುಣಃ ॥

ಪರತಂತ್ರ ಪ್ರಮೇಯವು ಭಾವ ಮತ್ತು ಅಭಾವ ಎಂಬುದಾಗಿ ಎರಡು ಬಗೆ. ಅಭಾವವು ಪೂರ್ವಾಭಾವ(ಪ್ರಾಗಭಾವ), ಅಪರಾಭಾವ (ಪ್ರಧ್ವಂಸಾಭಾವ) ಮತ್ತು ಸದಾಭಾವ (ಅತ್ಯಂತಾಭಾವ) ಎಂಬುದಾಗಿ ಮೂರು ಬಗೆ : ಪೂರ್ವಾಪರಸದಾತ್ವೇನ ತ್ರಿವಿಧೋಽಭಾವ ಇಷ್ಯತೇ. ಕೆಲವರು ಅನ್ಯೋನ್ಯಾಭಾವ ಎಂಬುದು ನಾಲ್ಕನೆಯ ಅಭಾವ

ಎಂಬುದಾಗಿ ಹೇಳುವರು. ಆದರೆ ಅನ್ಯೋನ್ಯಾಭಾವವೆಂಬುದು ಭೇದವೇ ಆಗಿದ್ದು ಅದು ಆಯಾ (ಭಾವಾಭಾವ) ವಸ್ತುಗಳ ಸ್ವರೂಪವೇ ಆಗಿರುವುದರಿಂದ ಅದನ್ನು ಅಭಾವದ ಗುಂಪಿನಲ್ಲಿ ಪರಿಗಣಿಸಕೂಡದು : ಭಾವಾಭಾವಸ್ವರೂಪತ್ವಾತ್ ನಾನ್ಯೋನ್ಯಾಭಾವತಾ ಪೃಥಕ್ ।

ಭಾವವು ಚೇತನ ಮತ್ತು ಅಚೇತನ ಎಂಬುದಾಗಿ ಎರಡು ವಿಧ. ಚೇತನವು ನಿತ್ಯಮುಕ್ತ ಮತ್ತು ಸಂಸಾರಿ ಎಂಬುದಾಗಿ ಎರಡು ವಿಧ. ನಿತ್ಯಮುಕ್ತ ಚೇತನವು ಮಹಾಲಕ್ಷ್ಮಿ ಒಬ್ಬರೇ. ಅವರು ಬ್ರಹ್ಮಾದಿ ಸಕಲ ದೇವತೆಗಳಿಗಿಂತಲೂ ಮಿಗಿಲು. ಶ್ರೀಹರಿಯು ಅವರಿಗಿಂತ ಅನಂತಪಟ್ಟು ಮಿಗಿಲು :

ಮುಕ್ತಾಃ ಶತಗುಣಾಃ ಪ್ರೋಕ್ತಾ ರಮಾ ತೇಭ್ಯೋಽಖಿಲೈರ್ಗುಣೈಃ ।
ನಿತ್ಯಂ ಬಹುಗುಣೋದ್ರಿಕ್ತಾ ತತೋಽನಂತಗುಣೋ ಹರಿಃ ॥

ಸಂಸಾರಿಚೇತನರು ಮುಕ್ತರು ಮತ್ತು ಅಮುಕ್ತರು ಎಂಬುದಾಗಿ ಎರಡು ಬಗೆ. ಮುಕ್ತರಲ್ಲಿ ಮನುಷ್ಯೋತ್ತಮರಿಂದ ಪ್ರಾರಂಭಿಸಿ ಚತುರ್ಮುಖಬ್ರಹ್ಮದೇವರವರೆಗೂ ಆನಂದಾದಿಗುಣಗಳಲ್ಲಿ ತಾರತಮ್ಯ ಉಂಟು. ಅಮುಕ್ತರು ಉತ್ತಮರು, ಮಧ್ಯಮರು ಮತ್ತು ಅಧಮರು ಎಂಬುದಾಗಿ ಮೂರು ವಿಧ. ಬ್ರಹ್ಮದೇವರಿಂದ ಪ್ರಾರಂಭಿಸಿ ಮನುಷ್ಯೋತ್ತಮರವರೆಗಿನ ಸಾತ್ವಿಕರು ಉತ್ತಮಚೇತನ. ನಿತ್ಯಸಂಸಾರಿಗಳು ಮಧ್ಯಮರು. ನಿತ್ಯವಾದ ತಮಸ್ಸಿಗೆ ಅರ್ಹರಾದವರು ಅಧಮರು.

ಅಚೇತನವು ನಿತ್ಯ ಹಾಗೂ ಅನಿತ್ಯ ಎಂಬುದಾಗಿ ಎರಡು ವಿಧ. ದೇಶ, ಕಾಲ, ವೇದ, ಪಂಚಭೂತಗಳು, ದಶೇಂದ್ರಿಯಗಳು, ಪ್ರಾಣ, ಸತ್ವ, ರಜಸ್ಸು ಮತ್ತು ತಮಸ್ಸೆಂಬ ಮೂರು ಗುಣಗಳು. ಪಂಚತನ್ಮಾತ್ರಾಗಳು, ಮಹತತ್ತ್ವ, ಅಹಂಕಾರತತ್ತ್ವ ಮತ್ತು ಬುದ್ಧಿತತ್ತ್ವ ಇವುಗಳ ಸೂಕ್ಷ್ಮರೂಪಗಳು ನಿತ್ಯ; ಇವುಗಳ ವಿಕಾರಗಳೆಲ್ಲ ಅನಿತ್ಯ.

ಮೇಲ್ನೋಟಕ್ಕೆ ತತ್ತ್ವಸಂಖ್ಯಾನ ಮತ್ತು ತತ್ತ್ವವಿವೇಕಗಳಲ್ಲಿ ತತ್ತ್ವವಿವೇಚನೆಯ ರೀತಿಯಲ್ಲಿ ಸ್ವಲ್ಪ ವ್ಯತ್ಯಾಸ ಕಾಣುವುದು. ಇದಕ್ಕೆ ಶ್ರೀಮದಾಚಾರ್ಯರು ಶ್ರೀಭಾಗವತತಾತ್ಪರ್ಯನಿರ್ಣಯದಲ್ಲಿ ವಿವಕ್ಷಾಭೇದದಿಂದ ತತ್ತ್ವಸಂಖ್ಯಾನವು ಅನೇಕ ಬಗೆ ಎಂಬುದಾಗಿ ಹೇಳಿರುವುದು ಉತ್ತರವಾಗಿದೆ : ತತ್ತ್ವಸಂಖ್ಯಾ ವಿವಕ್ಷಾಭೇದೇನ ಬಹುಧಾ ಭವತಿ (೧೧/೨೨/೬)

ತತ್ತ್ವವಿವೇಕದಲ್ಲಿ ಮುಂದೆ ವಸ್ತುವಿನ ಧರ್ಮಗಳನ್ನು ಯಾವದ್ದ್ರವ್ಯಭಾವಿ (ನಿತ್ಯ) ಮತ್ತು ಅಯಾವದ್ದ್ರವ್ಯಭಾವಿ (ಅನಿತ್ಯ) ಎಂಬುದಾಗಿ ವಿವೇಚಿಸಿ, ವಸ್ತುಗಳಿಗೂ ಅದರ ಅಯಾವದ್ದ್ರವ್ಯಧರ್ಮಗಳಿಗೂ ಸವಿಶೇಷಾಭೇದವೂ ಮತ್ತು ವಸ್ತುವಿಗೂ ಮತ್ತು ಅದರ ಅಯಾವದ್ದ್ರವ್ಯಭಾವಿಧರ್ಮಗಳಿಗೂ ಭೇದಾಭೇದ ಸಂಬಂಧವೂ ಇರುವುದು ಎಂಬುದಾಗಿ ನಿರೂಪಿಸಿರುವರು :

ಗುಣಕ್ರಿಯಾಜಾತಿಪೂರ್ವಾ ಧರ್ಮಾಃ ಸರ್ವೇಽಪಿ ವಸ್ತುನಃ ।
ರೂಪಮೇವ ದ್ವಿಧಂ ತಚ್ಚ ಯಾವದ್ವಸ್ತು ಚ ಖಂಡಿತಮ್ ॥
ಖಂಡಿತೇ ಭೇದ ಐಕ್ಯಂ ಚ ಯಾವದ್ವಸ್ತು ನ ಭೇದವತ್ ।
ಖಂಡಿತಂ ರೂಪಮೇವಾತ್ರ ವಿಕಾರೋಽಪಿ ವಿಕಾರಿಣಃ ॥
ಕಾರ್ಯಕಾರಣಯೋಶ್ಚೈವ ತಥೈವ ಗುಣತದ್ವತೋಃ ।
ಕ್ರಿಯಾಕ್ರಿಯಾವತೋಸ್ತದ್ವತ್ ತಥಾ ಜಾತಿವಿಶೇಷಯೋಃ ॥
ವಿಶಿಷ್ಟಶುದ್ಧಯೋಶ್ಚೈವ ತಥೈವಾಂಶಾಂಶಿನೋರಪಿ ॥

ಪರತಂತ್ರವಾದ ಸಕಲಪ್ರಮೇಯವನ್ನು ಸದಾ ಸ್ವತಂತ್ರನಾದ ಶ್ರೀಹರಿಗೆ ಅಧೀನ ಎಂಬುದಾಗಿ ಅರಿಯುವವನು ಸಂಸಾರದಿಂದ ಬಿಡುಗಡೆ ಹೊಂದುವನು ಎನ್ನುವ ಸಂದೇಶದೊಂದಿಗೆ ತತ್ತ್ವವಿವೇಕವನ್ನು ಮುಕ್ತಾಯ ಮಾಡಿರುವರು :

ಯ ಏತತ್ ಪರತಂತ್ರಂ ತು ಸರ್ವಮೇವ ಹರೇಃ ಸದಾ ।
ವಶಮಿತ್ಯೇವ ಜಾನಾತಿ ಸಂಸಾರಾನ್ಮುಚ್ಯತೇ ಹಿ ಸಃ ॥

ತತ್ತ್ವವಿಭಾಗ ಕಥನವು ಪ್ರತಿಯೊಂದು ದರ್ಶನಕ್ಕೂ ಒಂದು ಅವಿಭಾಜ್ಯ ಅಂಗ. ಮುಖ್ಯ ಪ್ರಮೇಯಗಳೆಲ್ಲ ಒಂದೆಡೆ ವ್ಯವಸ್ಥಿತವಾಗಿ ಸಂಕಲಿತವಾದಾಗ ಸಾಧಕರಿಗೆ ಅವುಗಳ ಅನುಸಂಧಾನವು ಸಾಧ್ಯವಾಗಿ ತತ್ತ್ವಸಾಕ್ಷಾತ್ಕಾರಕ್ಕೆ ಅನುಕೂಲವಾಗುತ್ತದೆ. ಆಧುನಿಕ-ಪರಿಭಾಷೆಯಲ್ಲಿ ಇದನ್ನು Ontology ಎನ್ನುವರು. ಆದರೆ ಹೀಗೆ ವ್ಯವಸ್ಥಿತವಾದ ತತ್ತ್ವವಿವೇಚನೆಯನ್ನು ಸ್ಪಷ್ಟವಾಗಿ ಸಪ್ರಮಾಣವಾಗಿ ರೂಪಿಸಿಕೊಟ್ಟಿರುವ ಏಕಮಾತ್ರ ಆಚಾರ್ಯರು ಶ್ರೀಮಧ್ವರು.

ತತ್ತ್ವವಿವೇಕಕ್ಕೆ ಶ್ರೀಪದ್ಮನಾಭತೀರ್ಥರ ಮತ್ತು ಶ್ರೀಜಯತೀರ್ಥರ ಟೀಕೆಗಳು ಉಪಲಬ್ಧವಿವೆ. ಇದಕ್ಕೆ ಶ್ರೀವ್ಯಾಸರಾಜರು ಮಂದಾರಮಂಜರಿಯೆಂಬ ವಿಸ್ತೃತವಾದ ಟಿಪ್ಪಣಿಯನ್ನು ಬರೆದಿರುವರು. ಇವೆರಡಕ್ಕೂ ಬಿದರಹಳ್ಳಿ ಶ್ರೀನಿವಾಸತೀರ್ಥರ ಟಿಪ್ಪಣಿಗಳೂ ಉಂಟು; ಶ್ರೀರಾಘವೇಂದ್ರಸ್ವಾಮಿಗಳು ಸಹ ಟಿಪ್ಪಣಿ ರಚಿಸಿರುವ ಪ್ರತೀತಿ ಉಂಟು.

ಲಕ್ಷಣಗ್ರಂಥಗಳು

ಲೋಕಾನಾಮವಲೋಕಾಯ ಮಾರ್ಗಸ್ಯಾಸ್ಯ ವ್ಯಧಾದ್ಭವಾನ್ ।
ಕರುಣಾಕರ ನೇತ್ರಾಭೇ ವಾದಸನ್ಮಾನಲಕ್ಷಣೇ ॥ – ಮ.ವಿ. (೧೫/೭೯)

೩. ಪ್ರಮಾಣಲಕ್ಷಣ

ಪ್ರಮಾಣಲಕ್ಷಣವು ಪ್ರಮಾಣಗಳ ಲಕ್ಷಣ, ವಿಭಾಗ ಮತ್ತು ಇತರ ಮತಗಳ ಪ್ರಮಾಣಲಕ್ಷಣಗಳ ವಿಮರ್ಶೆಯನ್ನು ಒಳಗೊಂಡ ಪ್ರಕರಣ. ಅದ್ವೈತಮತ ಮತ್ತು ವಿಶಿಷ್ಟಾದ್ವೈತಮತದ ಆಚಾರ್ಯರುಗಳು ಪ್ರಮಾಣವಿವೇಚನೆಯನ್ನು ಕುರಿತು ಈ ಬಗೆಯ ಗ್ರಂಥವನ್ನು ಬರೆದಿಲ್ಲ ಎಂಬುದು ಗಮನಾರ್ಹ. ಅದ್ವೈತಮತವು ಭಾಟ್ಟಮೀಮಾಂಸಕರ

ಪ್ರಮಾಣಪ್ರಕ್ರಿಯೆಯನ್ನು ಅವಲಂಬಿಸಿದರೆ (ವ್ಯವಹಾರೇ ಭಾಟ್ಟನಯಃ), ವಿಶಿಷ್ಟಾದ್ವೈತ-ಮತವು ಪ್ರಾಭಾಕರಮೀಮಾಂಸಾ ಮತದ ಪ್ರಮಾಣ ಪ್ರಕ್ರಿಯೆಯನ್ನು ಅವಲಂಬಿಸಿದೆ. ತಮ್ಮದೇ ಆದ ಪರಿಸ್ಫುಟವಾದ ಪ್ರಮಾಣಮೀಮಾಂಸೆಯನ್ನು ಅವರು ರೂಪಿಸಿಕೊಳ್ಳಲಿಲ್ಲ-ವೆಂಬುದು ಗಮನಾರ್ಹ.

ಪ್ರಮಾಣವೆಂದರೆ ಯಾವುದೇ ವಸ್ತುವನ್ನು ಯಥಾರ್ಥವಾಗಿ ತಿಳಿಸುವುದು. ಅದು ಕೇವಲಪ್ರಮಾಣ ಮತ್ತು ಅನುಪ್ರಮಾಣ ಎಂಬುದಾಗಿ ಎರಡು ಬಗೆ. ಕೇವಲಪ್ರಮಾಣ-ವೆಂದರೆ ಯಥಾರ್ಥಜ್ಞಾನ ಕೇವಲ ಪ್ರಮಾಣವು ಈಶಜ್ಞಾನ, ಲಕ್ಷ್ಮೀಜ್ಞಾನ, ಯೋಗಿಜ್ಞಾನ ಮತ್ತು ಅಯೋಗಿಜ್ಞಾನವೆಂಬುದಾಗಿ ನಾಲ್ಕು ಬಗೆ. ಈಶಜ್ಞಾನವೆಂದರೆ ಭಗವಂತನ ಜ್ಞಾನ; ಅದು ತನ್ನನ್ನು ಹಾಗೂ ಇತರ ಸಕಲವಸ್ತುಗಳನ್ನು ಸಂಪೂರ್ಣವಾಗಿ ಬಲ್ಲುದು; ಅನಾದಿ ಮತ್ತು ನಿತ್ಯ. ಅದರಷ್ಟು ಸ್ಫುಟವಾದ ಜ್ಞಾನ ಮತ್ತೊಂದಿಲ್ಲ. ಲಕ್ಷ್ಮೀಜ್ಞಾನವು ಅನಾಲೋಚನೆ-ಯಿಂದ ಭಗವಂತನನ್ನು ಹೊರತು ಬೇರೆಲ್ಲವನ್ನು ಬಲ್ಲದು. ಅದು ಅನಾದಿ ಮತ್ತು ನಿತ್ಯ. ಭಗವಂತನಿಗೆ ಮಾತ್ರ ಅಧೀನ. ಭಗವಂತನನ್ನು ವೇದಾದಿ ಇತರ ಎಲ್ಲ ಶಾಸ್ತ್ರಗಳಿಗಿಂತಲೂ ಮಿಗಿಲಾಗಿ ಬಲ್ಲದು. ಆದರೆ ಭಗವಂತನನ್ನು ಸಾಕಲ್ಯೇನ [1] ತಿಳಿಯಲಾರದು.

[2] ಋಜುಯೋಗಿಜ್ಞಾನ, ತಾತ್ತ್ವಿಕಯೋಗಿಜ್ಞಾನ ಮತ್ತು ಅತಾತ್ತ್ವಿಕಯೋಗಿಜ್ಞಾನ ಎಂಬುದಾಗಿ ಯೋಗಿಜ್ಞಾನವು ಮೂರು ಬಗೆ. ಋಜುಗಳೆಂದರೆ ಬ್ರಹ್ಮದೇವರು ಮತ್ತು ಆ ಪದವಿಗೆ ಯೋಗ್ಯರಾದ ಚೇತನರು. ಅವರು ಆಲೋಚನೆಯಿಂದ ಲಕ್ಷ್ಮೀನಾರಾಯಣರನ್ನು ಹೊರತು ಬೇರೆಲ್ಲವನ್ನು ಸಂಪೂರ್ಣವಾಗಿ ಬಲ್ಲ ಪೂರ್ಣಪ್ರಜ್ಞರು. ಭಗವಂತನಲ್ಲಿ ಲಕ್ಷ್ಮೀಜ್ಞಾನಕ್ಕಿಂತ ಕಡಿಮೆ, ರುದ್ರಾದಿ ಇತರ ಜೀವರಿಗಿಂತ ತುಂಬಾ ಮಿಗಿಲು.

ಆಲೋಚನೆ ಮಾಡಿಯೂ ಇತರ ವಿಷಯಗಳನ್ನು ಸಂಪೂರ್ಣ ತಿಳಿಯಲಾಗದ ಜ್ಞಾನ ತಾತ್ತ್ವಿಕಯೋಗಿಜ್ಞಾನ. ತಾತ್ತ್ವಿಕರು ಎಂದರೆ ತತ್ತ್ವಾಭಿಮಾನಿದೇವತೆಗಳು ಎಂದು ಅರ್ಥ. ತತ್ತ್ವಾಭಿಮಾನಿಗಳಲ್ಲದ ದೇವತೆಗಳು ಅತಾತ್ತ್ವಿಕರು. ಈಶನನ್ನು ಬಿಟ್ಟು ಇತರ ವಿಷಯಗಳಲ್ಲೂ ಒಮ್ಮೊಮ್ಮೆ ಅದು ತಪ್ಪು ತಿಳಿಯುವಂತಹದು.

---

೧. ಯಥಾರ್ಥಂ ಪ್ರಮಾಣಮ್ । ತದ್ದ್ವಿವಿಧಮ್ । ಕೇವಲಮನುಪ್ರಮಾಣಂ ಚ । ಯಥಾರ್ಥಜ್ಞಾನಂ ಕೇವಲಮ್ । ತತ್ಸಾಧನಮನುಪ್ರಮಾಣಮ್ । ಕೇವಲಂ ಚತುರ್ವಿಧಮ್। ಈಶಲಕ್ಷ್ಮೀಯೋಗ್ಯಯೋಗಿಭೇದೇನ । ಪೂರ್ವದ್ವಯಮನಾದಿನಿತ್ಯಮ್ । ಸ್ವಾತಂತ್ರ್ಯ-ಪಾರತಂತ್ರ್ಯಾಭ್ಯಾಂ ತದ್ವಿಶೇಷಃ । ಪೂರ್ವಂ ಸ್ವಪರಗತಾಖಿಲವಿಶೇಷವಿಷಯಮ್ । ದ್ವಿತೀಯ-ಮೀಶೇಽನ್ಯೇಭ್ಯೋಽಧಿಕಮ್ । ಅಸಾರ್ವತ್ರಿಕಮ್ । ಅನ್ಯತ್ರ ಸರ್ವವಿಷಯಮ್ । ಸ್ಪಷ್ಟತ್ವೇ ಭೇದಃ

೨. ಯೋಗಿಜ್ಞಾನಮೃಜೂನಾಮನಾದಿನಿತ್ಯಮ್ । ಈಶೇ ಜೀವೇಭ್ಯೋಽಧಿಕಮ್ । ಅಸಾರ್ವತ್ರಿಕಮ್। ಅನ್ಯತ್ರಾಲೋಚನೇ ಸರ್ವವಿಷಯಮ್ । ಕ್ರಮೇಣ ವರ್ಧಮಾನಮ್ । ಆಮುಕ್ತೇಃ । ತತೋಽವ್ಯಯಮ್ ।

ಇತರ ಚೇತನರು ಅಯೋಗಿಗಳು; ಅವರಲ್ಲೂ ಸಾತ್ವಿಕ, ರಾಜಸ ಮತ್ತು ತಾಮಸ ಎಂಬುದಾಗಿ ಮೂರು [1]ಬಗೆ. ಸಾತ್ವಿಕರ ಸ್ವರೂಪಜ್ಞಾನ ನಿಯಮೇನ ಯಥಾರ್ಥ. ರಾಜಸರದು ಮಿಶ್ರ, ತಾಮಸರದು ಅಯಥಾರ್ಥ. ಮೂವರ ಬಾಹ್ಯಜ್ಞಾನವು ಎರಡು ಬಗೆಯೂ ಆಗಿರುವುದು.

ಅನುಪ್ರಮಾಣವು ಪ್ರತ್ಯಕ್ಷ, ಅನುಮಾನ ಹಾಗೂ ಆಗಮ ಎಂಬುದಾಗಿ ಮೂರು ವಿಧ : **ಅನುಪ್ರಮಾಣಂ ತ್ರಿವಿಧಮ್ । ಪ್ರತ್ಯಕ್ಷಮನುಮಾನಮಾಗಮ ಇತಿ ।** ನಿರ್ದೋಷವಾದ ಇಂದ್ರಿಯಗಳೇ ಪ್ರತ್ಯಕ್ಷ : **ನಿರ್ದೋಷಾರ್ಥೇಂದ್ರಿಯಸನ್ನಿಕರ್ಷಃ ಪ್ರತ್ಯಕ್ಷಮ್ ।** ನಿರ್ದೋಷವಾದ ಯುಕ್ತಿಯು ಅನುಮಾನ : **ನಿರ್ದೋಷೋಪಪತ್ತಿರನುಮಾನಮ್ ।** ನಿರ್ದೋಷವಾದ ಶಬ್ದವು ಆಗಮ : **ನಿರ್ದೋಷಃ ಶಬ್ದಃ ಆಗಮಃ ।**

ಪ್ರತ್ಯಕ್ಷವು ಸಾಕ್ಷಿ, ಮನಸ್ಸು ಮತ್ತು ಐದು ಜ್ಞಾನೇಂದ್ರಿಯಗಳು ಎಂಬುದಾಗಿ ಏಳುವಿಧ : **ಪ್ರತ್ಯಕ್ಷಂ ಸಪ್ತವಿಧಮ್ । ಸಾಕ್ಷಿಷಡಿಂದ್ರಿಯಭೇದೇನ ।**

ಸ್ಮೃತಿಯು ಮನಸ್ಸಿನಿಂದ ಹುಟ್ಟುವ ಜ್ಞಾನ : **ಮಾನಸಪ್ರತ್ಯಕ್ಷಜಾ ಸ್ಮೃತಿಃ ।**

ಇತರ ಅರ್ಥಾಪತ್ತಿ ಉಪಮಾ, ಅಭಾವ, ಸಂಭವ, ಪರಿಶೇಷ, ಐತಿಹ್ಯ ಮೊದಲಾದವುಗಳು ಪ್ರತ್ಯೇಕ ಪ್ರಮಾಣಗಳಾಗಿರದೆ ಈ ಮೂರು ಪ್ರಮಾಣಗಳಲ್ಲಿ ಅಂತರ್ಭೂತವಾಗುತ್ತವೆ. ಅರ್ಥಾಪತ್ತಿ ಮತ್ತು ಉಪಮೆಗಳು ಅನುಮಾನದ ಪ್ರಭೇದಗಳು. ಅಭಾವವು ಕೆಲವೊಮ್ಮೆ ಅನುಮಾನದಲ್ಲೂ, ಪ್ರತ್ಯಕ್ಷದಲ್ಲೂ ಸೇರುವುದು. ಸಂಭವ ಮತ್ತು ಪರಿಶೇಷಗಳು ಅನುಮಾನದಲ್ಲೂ, ಐತಿಹ್ಯವು ಆಗಮದಲ್ಲೂ ಅಂತರ್ಭೂತವಾಗುವದು:

ಅರ್ಥಾಪತ್ತ್ಯುಪಮೇ ಅನುಮಾವಿಶೇಷಃ। ಅಭಾವೋಽನುಮಾಪ್ರತ್ಯಕ್ಷಂ ಚ।ಪರಾಮರ್ಶಾ-ಪರಾಮರ್ಶವಿಶೇಷಾತ್ । ಸಂಭವಪರಿಶೇಷಾವನುಮಾ । ...ಐತಿಹ್ಯಮಾಗಮಭೇದಃ।

ವೇದಾರ್ಥನಿರ್ಣಾಯಕವಾದ ಉಪಕ್ರಮ, ಉಪಸಂಹಾರ, ಅಭ್ಯಾಸ, ಅಪೂರ್ವತಾ, ಫಲ ಮತ್ತು ಅರ್ಥವಾದಗಳು ಮತ್ತು ಶ್ರುತಿ, ಲಿಂಗ ಸಮಾಖ್ಯಾ, ವಾಕ್ಯ ಪ್ರಕರಣ ಮತ್ತು ಸ್ಥಾನಗಳು ಅನುಮಾನ ವಿಶೇಷಗಳಾಗಿವೆ :

ಉಪಕ್ರಮೋಪಸಂಹಾರಃ ತದೈಕ್ಯರೂಪ್ಯಭ್ಯಾಸಾಪೂರ್ವತಾಫಲಾರ್ಥವಾದಾಶ್ಚ ಉಪಪತ್ತಿ-ವಿಶೇಷಾಃ । ತ ಏವ ಸೋಪಪತ್ತಯೋ ಲಿಂಗಾನಿ । ಸಮಾಖ್ಯಾವಾಕ್ಯಪ್ರಕರಣಸ್ಥಾನಾನಿ ಚ ಲಿಂಗವಿಶೇಷಾಃ।

ವ್ಯಾಪ್ತಿಯು ಉಪಪತ್ತಿಗೆ ಮೂಲ; ವಿರೋಧ, ಅಸಂಗತಿ, ನ್ಯೂನ ಮತ್ತು ಅಧಿಕ ಈ ನಾಲ್ಕು ಅನುಮಾನ ದೋಷಗಳು; ಅದರಂತೆ ನಿಗ್ರಹಸ್ಥಾನಗಳು ವಿರೋಧ, ಅಸಂಗತಿ, ನ್ಯೂನ, ಅಧಿಕ, ಸಂವಾದ ಮತ್ತು ಅನುಕ್ತಿ ಎಂದು ಆರು ಬಗೆ : **ವ್ಯಾಪ್ತಿರುಪಪತ್ತಿಮೂಲಮ್।**

---

೧. ತತೋಽರ್ವಾಕ್ ಕ್ರಮೇಣ ಹ್ರಸಿತಮ್ । ಸಾದಿ ಚ ತಾತ್ತ್ವಿಕೇಭ್ಯೋಽನ್ಯತ್ರ ।
ಅಯೋಗಿಜ್ಞಾನಮುತ್ಪತ್ತಿವಿನಾಶವತ್ ಅಲ್ಪಮ್ ।

ಸಾ ಪ್ರತಿಜ್ಞಾ ಹೇತುದೃಷ್ಟಾಂತರೂಪಾ । .... ಉಪಪತ್ತಿದೋಷೌ ವಿರೋಧಾಸಂಗತೀ । .... ಸಂವಾದಾನುಕ್ತಿಯುತಾ ನಿಗ್ರಹಾಃ ।

ಇತರ ವಾದಿಗಳು ಅನೇಕ ತೆರನಾಗಿ ಪ್ರಮಾಣಲಕ್ಷಣಗಳನ್ನು ಹೇಳುವರು; ಆದರೆ ಅವು ದೋಷಯುಕ್ತವಾಗಿದ್ದು ಅಂಗೀಕರಿಸಲು ಅನರ್ಹವಾಗಿವೆ. ಕೆಲವರು ಸ್ಮೃತಿಗೆ ಪ್ರಾಮಾಣ್ಯವನ್ನು ಒಪ್ಪುವುದಿಲ್ಲ, ಆದರೆ ಅದು ಮನಸ್ಸು ಎಂಬ ಇಂದ್ರಿಯದಿಂದ ಜನಿಸುವುದರಿಂದ ಮತ್ತು ಪ್ರಮಾಣ ಎಂಬುದಾಗಿ ಅನುಭವದಿಂದಲೂ ಸಿದ್ಧವಾಗುವುದರಿಂದ ಪ್ರಮಾಣವೇ ಆಗಿರುವುದು[೧].

ಸ್ವಮತಸ್ಥಾಪನೆಯನ್ನು ನಾವು ಒಪ್ಪಿರುವ ಪ್ರಮಾಣಗಳಿಂದ ಸಾಧಿಸಬೇಕು; ಪರಪಕ್ಷವನ್ನು ಪರರು ಒಪ್ಪುವ ಪ್ರಮಾಣಗಳಿಂದಲೇ ನಿರಾಕರಿಸಬೇಕು :

ಸ್ವಸಿದ್ಧೈಃ ಸಾಧನಂ ಕಾರ್ಯಂ ಪರನ್ಯಾಯೈಸ್ತು ದೂಷಣಮ್ ।

ಇದು ಸಂಕ್ಷಿಪ್ತವಾಗಿ ಪ್ರಮಾಣಲಕ್ಷಣದಲ್ಲಿ ಬಂದಿರುವಂತೆ ದ್ವೈತಸಿದ್ಧಾಂತದ ಪ್ರಮಾಣವಿವೇಚನೆ. ಆಚಾರ್ಯರು ಬ್ರಹ್ಮತರ್ಕವೆಂಬ ಭಗವತ್ಕೃತಗ್ರಂಥವನ್ನು ಆಧರಿಸಿ ಇದನ್ನು ರಚಿಸಿರುವುದಾಗಿ ಕೊನೆಯಲ್ಲಿ ತಿಳಿಸಿರುವರು :

ಆನಂದತೀರ್ಥಮುನಿನಾ ಬ್ರಹ್ಮತರ್ಕಾನುಸಾರತಃ ।
ಮಾನಲಕ್ಷಣಮಿತ್ಯುಕ್ತಂ ಪ್ರೀತ್ಯರ್ಥಂ ಶಾರ್ಙ್ಗಧನ್ವನಃ ॥

ಅಂತಹ ಬ್ರಹ್ಮತರ್ಕ ವಚನಗಳನ್ನು ವಿಷ್ಣುತತ್ತ್ವವಿನಿರ್ಣಯ ಗ್ರಂಥದಲ್ಲಿ ಅವರೇ ಉದಾಹರಿಸಿರುವರು.

ಎಲ್ಲ ಅನುಮಾನದೋಷಗಳಿಗೆ ನಿದರ್ಶನವನ್ನಾಗಿ ವಿಮತಂ ಮಿಥ್ಯಾ ದೃಶ್ಯತ್ವಾತ್ ಎಂಬ ಅದ್ವೈತಿಗಳ ಅನುಮಾನವನ್ನು ನೀಡಿರುವರು : ಸರ್ವ ಏತೇ ದೃಶ್ಯತ್ವಾನುಮಾನೇ ದ್ರಷ್ಟವ್ಯಾಃ . ಈ ದೃಷ್ಟಿಯಿಂದ ಇದು ಮಿಥ್ಯಾತ್ವಾನುಮಾನಖಂಡನಗ್ರಂಥಕ್ಕೆ ಪೂರಕವಾದ ಕೃತಿಯೂ ಆಗಿದೆ.

---

೧. ನ ಪ್ರಮಾಸಾಧನಂ ಪ್ರಮಾಣಮ್ । ಜ್ಞಾನವ್ಯತಿರಿಕ್ತಾಯಾಂ ಪ್ರಮಾಯಾಂ ಪ್ರಮಾಣಾಭಾವಾತ್। ನ ಚಾಜ್ಞಾತಪರಿಚ್ಛಿತ್ತಿರೇವ ಪ್ರಮೇತ್ಯತ್ರ ಕಿಂಚಿನ್ಮಾನಮ್ । ಯಾಥಾರ್ಥ್ಯಮೇವ ಪ್ರಾಮಾಣ್ಯಮಿತ್ಯಂಗೀಕಾರಾತ್ । ನ ಚಾನುಭೂತಿರೇವ ಪ್ರಮಾಣಮ್ । ಸ್ಮೃತ್ಯಾದಾವವ್ಯಾಪ್ತೇಃ। ವೇದಾನುಮಾನಾದಿಪ್ರಾಮಾಣ್ಯಪ್ರಸಿದ್ಧೇಶ್ಚ।

'ಸ್ಮೃತಿಃ ಪ್ರತ್ಯಕ್ಷಮೈತಿಹ್ಯಮನುಮಾನಂ ಚತುಷ್ಟಯಮ್ ।
ಪ್ರಮಾಣಮಿತಿ ವಿಜ್ಞೇಯಂ ಧರ್ಮಾದ್ಯರ್ಥೇ ಬುಭೂಷುಭಿಃ ॥' ಇತಿ ಶ್ರುತೇಶ್ಚ।

ನ ಚ ಸಮ್ಯಗನುಭವಸಾಧನಂ ಪ್ರಮಾಣಮ್ । ಈಶ್ವರಜ್ಞಾನಾದಾವವ್ಯಾಪ್ತೇಃ । ಅಪ್ರಾಮಾಣ್ಯೇ ಪ್ರಮಾಣಾಭಾವಾಚ್ಚ । ಪ್ರಾಮಾಣ್ಯಜ್ಞಾನೇ ಚ । ತತ್ರಾಪ್ಯಂಗೀಕಾರೇಽನವಸ್ಥಿತೇಃ । ಸ್ವಪ್ರಕಾಶಾತ್ಮಾಂಗೀಕಾರೇ ತತ್ರಾವ್ಯಾಪ್ತೇಃ । ಸ್ಮೃತೇಶ್ಚ ಪ್ರಾಮಾಣ್ಯಾನಂಗೀಕಾರೇ ಅನುಭೂತಂ ಮಯೇತ್ಯತ್ರ ಪ್ರಮಾಣಾಭಾವಾತ್ । ಲಿಂಗತ್ವೇನ ಪ್ರಾಮಾಣ್ಯೇ ಕಲ್ಪನಾಗೌರವಾತ್ । ದೃಷ್ಟಹಾನಿಶ್ಚ। ಸ್ಮೃತಿಪ್ರಮಾಣದ್ವೈವಿಧ್ಯಮಾತ್ರಕಲ್ಪನೇ ಮಿಥ್ಯಾಜ್ಞಾನಾದೇರ್ನಿರಾಕಾರಣಾದನುಭವವಿರೋಧಃ । ತದನುಭವಾಭಾವ ಇತ್ಯುಕ್ತೇ ಅನುಭವಃ ಸ್ಮೃತಿಶ್ಚ ನಾಸ್ತೀತ್ಯುಕ್ತೇ ಕಿಮುತ್ತರಮ್ ॥

ಪ್ರಮಾಣಲಕ್ಷಣಕ್ಕೆ ಶ್ರೀಪದ್ಮನಾಭತೀರ್ಥರು ಮತ್ತು ಶ್ರೀಜಯತೀರ್ಥರು ಟೀಕೆಗಳನ್ನು ರಚಿಸಿರುವರು. ಶ್ರೀಜಯತೀರ್ಥರ ಪ್ರಮಾಣಲಕ್ಷಣಟೀಕೆಗೆ ಶ್ರೀವಿಜಯೀಂದ್ರತೀರ್ಥರು, ಶ್ರೀರಾಘವೇಂದ್ರತೀರ್ಥರು, ಶ್ರೀವೇದೇಶತೀರ್ಥರು, ಬಿದರಳ್ಳಿ ಶ್ರೀನಿವಾಸತೀರ್ಥರು, ಶ್ರೀಚೆನ್ನಕೇಶವಾಚಾರ್ಯರು ಮೊದಲಾದವರ ಟಿಪ್ಪಣಿಗಳು ಉಪಲಬ್ಧವಿವೆ.

ಶ್ರೀಜಯತೀರ್ಥರ ಪ್ರಮಾಣಪದ್ಧತಿ ಪ್ರಮಾಣ ವಿವೇಚನೆಯನ್ನು ವಿಸ್ತಾರವಾಗಿ ಮಾಡಿರುವ ಕೃತಿ. ಅವರ ಪ್ರಮಾಣಲಕ್ಷಣದ ಟೀಕೆ ಮತ್ತು ಪ್ರಮಾಣಪದ್ಧತಿಗಳಿಗೆ ಶ್ರೀವಿಜಯೀಂದ್ರರು, ಶ್ರೀರಾಘವೇಂದ್ರರು, ಶ್ರೀಸತ್ಯನಾಥತೀರ್ಥರು, ಶ್ರೀನಿವಾಸತೀರ್ಥರು ಮೊದಲಾದವರು ಟಿಪ್ಪಣಿಗಳನ್ನು ರಚಿಸಿರುವರು.

ಶ್ರೀವ್ಯಾಸತೀರ್ಥರ ತರ್ಕತಾಂಡವವು ಪ್ರಧಾನವಾಗಿ ತಾರ್ಕಿಕರ ಪ್ರಮಾಣವಿವೇಚನೆಯಲ್ಲಿನ ದೋಷಗಳನ್ನು ವಿವರಿಸಿ, ಶ್ರೀಮಧ್ವರ ಪ್ರಮಾಣವಿವೇಚನೆಯನ್ನು ಸಮರ್ಥಿಸುವ ಕೃತಿ.

೪. ಕಥಾಲಕ್ಷಣ

ಪ್ರಮಾಣಲಕ್ಷಣವು ಪ್ರಮಾಣಗಳ ವಿವೇಚನೆಗೆ ಮೀಸಲಾದರೆ ಕಥಾಲಕ್ಷಣವು ಅಂತಹ ಪ್ರಮಾಣಗಳ ಹಿನ್ನೆಲೆಯಲ್ಲಿ ನಡೆಯುವ ಶಾಸ್ತ್ರಚರ್ಚೆಯ ವಿವರಗಳನ್ನು ನಿರೂಪಿಸುತ್ತದೆ. ಶಾಸ್ತ್ರಚರ್ಚೆಯ ಸ್ವರೂಪ, ಅದರಲ್ಲಿ ಪಾಲ್ಗೊಳ್ಳಬೇಕಾದವರ ಅರ್ಹತೆಗಳು, ಉದ್ದೇಶ ಮತ್ತು ಫಲಶ್ರುತಿ, ಮೊದಲಾದವುಗಳ ಬಗ್ಗೆ ಈ ಪುಟ್ಟ ಕೃತಿಯಲ್ಲಿ ನಿಖರವಾದ ವಿವರಗಳಿವೆ. ಶಂಕರ, ರಾಮಾನುಜರು ಈ ಬಗೆಯ ಕೃತಿಯನ್ನು ರಚಿಸಿಲ್ಲ.

ವಾದ, ಜಲ್ಪ ಮತ್ತು ವಿತಂಡಾ ಎಂಬುದಾಗಿ ಶಾಸ್ತ್ರಚರ್ಚೆ ಮೂರು ವಿಧ : ವಾದೋ ಜಲ್ಪೋ ವಿತಂಡೇತಿ ತ್ರಿವಿಧಾ ವಿದುಷಾಂ ಕಥಾ. ಗುರುಶಿಷ್ಯರ ಮಧ್ಯೆ ತತ್ತ್ವನಿರ್ಣಯಕ್ಕೋಸ್ಕರ ನಡೆಯುವ ಚರ್ಚೆಯೇ ವಾದ; ವಿಚಾರ ತಿಳಿಯುವ ಕುತೂಹಲ ಶಿಷ್ಯನದಾದರೆ, ಅದನ್ನು ತಿಳಿಸುವ ಪ್ರಾಮಾಣಿಕ ಕಳಕಳಿ ಗುರುವಿನದು. ಇದಕ್ಕೆ ಸಭೆ, ಪ್ರಾಶ್ನಿಕ ಮೊದಲಾಗಿ ಯಾವ ಕಟ್ಟುಪಾಡೂ ಇರುವುದಿಲ್ಲ, ಕಾಲಮಿತಿಯೂ ಇರುವುದಿಲ್ಲ. ತತ್ತ್ವನಿರ್ಣಯವಷ್ಟೇ ಇದರ ಫಲಶ್ರುತಿ. ಶಿಷ್ಯನಂತೆ ಸಭೆಯಲ್ಲಿ ಉಪಸ್ಥಿತರಿರುವ ಇತರರ ತತ್ವನಿರ್ಣಯಕ್ಕೂ ಇದು ಕಾರಣವಾಗಬಹುದು:

> ತತ್ವನಿರ್ಣಯಮುದ್ದಿಶ್ಯ ಕೇವಲಂ ಗುರುಶಿಷ್ಯಯೋಃ ||
> ಕಥಾಽನ್ಯೇಷಾಮಪಿ ಸತಾಂ ವಾದೋ ವಾ ಸಮಿತೇಃ ಶುಭಾ ।

ತತ್ತ್ವಕ್ಕೆ ಅಪಲಾಪ ಮಾಡುವುದು ವಾದಕಥೆಯಲ್ಲಿ ಪರಾಭವವೆನ್ನಿಸುವುದು. ತತ್ತ್ವವನ್ನು ಅಂಗೀಕರಿಸುವುದು ಗೌರವಕ್ಕೆ ಕಾರಣವಾಗುವುದು. ತತ್ತ್ವವನ್ನು ಅಪಲಾಪ ಮಾಡುವವನು ನಿಂದ್ಯನೆನ್ನಿಸುವನು.

ಇಬ್ಬರು ಸಾತ್ವಿಕ ವಿದ್ವಾಂಸರ ಮಧ್ಯೆ ಖ್ಯಾತಿ, ಐಶ್ವರ್ಯಗಳಿಗೋಸ್ಕರ ನಡೆಯುವ ಚರ್ಚೆ ಜಲ್ಪಕಥೆ : ಖ್ಯಾತ್ಯಾದ್ಯರ್ಥಂ ಸ್ಪರ್ಧಯಾ ವಾ ಸತಾಂ ಜಲ್ಪ ಇತೀರ್ಯತೇ. ನಿರ್ದಿಷ್ಟ

ಸ್ಥಳ ಮತ್ತು ಅವಧಿಗಳಲ್ಲಿ ಅದಕ್ಕಾಗಿ ನಿಶ್ಚಿತವಾದ ಸಭೆಯಲ್ಲಿ ಪ್ರಾಶ್ನಿಕರ ಸಮ್ಮುಖದಲ್ಲಿ ನಡೆಯಬೇಕು. ಗೆದ್ದವನು ಪುರಸ್ಕಾರಕ್ಕೂ, ಸೋತವನು ತಿರಸ್ಕಾರಕ್ಕೂ ಅರ್ಹನಾಗುವನು. ವಿರೋಧ, ಅಸಂಗತಿ, ನ್ಯೂನ, ಅಧಿಕ, ಸಂವಾದ ಮತ್ತು ಅನುಕ್ತಿ ಎಂಬ ಆರು ದೋಷಗಳು ಸೋಲಿಗೆ ಕಾರಣವಾಗುವ ದೋಷಗಳಾಗಿವೆ(ನಿಗ್ರಹಸ್ಥಾನಗಳು). ಇದರಲ್ಲಿ ಸ್ವಪಕ್ಷಸ್ಥಾಪನೆ ಮತ್ತು ಪರಪಕ್ಷನಿರಾಕರಣೆ ಎರಡೂ ಆಗಲೇ ಬೇಕು:

ತತ್ತ್ವನಿರ್ಣಯವೈಲೋಮ್ಯಂ ವಾದೇ ಸಾಕ್ಷಾತ್ ಪರಾಜಯಃ ।
ಸಂವಾದೇ ಶ್ಲಾಘ್ಯತೈವ ಸ್ಯಾತ್ ಗುರುತ್ವಮಿತರಸ್ಯ ಚ ॥
ತತ್ತ್ವನಿರ್ಣಯವೈಲೋಮ್ಯೇ ನಿಂದ್ಯೋ ದಂಡ್ಯೋಽಥವಾ ಭವೇತ್ ॥

ಇಂತಹುದೇ ಚರ್ಚೆ ಯೋಗ್ಯ ಮತ್ತು ಅಯೋಗ್ಯರ ಮಧ್ಯೆ ನಡೆದಾಗ ವಿತಂಡಾ ಎನ್ನಿಸುತ್ತದೆ. ಇದರಲ್ಲಿ ಸ್ವಪಕ್ಷಸ್ಥಾಪನೆಯು ಇರುವುದಿಲ್ಲ, ಪ್ರತಿವಾದಿಯು ತತ್ತ್ವಜ್ಞಾನಕ್ಕೆ ಅನರ್ಹನಾಗಿರುವುದೇ ಅದಕ್ಕೆ ಕಾರಣ. ಪರಪಕ್ಷಖಂಡನೆಯೇ ಪ್ರಧಾನ. ಉಳಿದಂತೆ ಜಲ್ಪದಂತೆಯೇ ಇದೂ ನಡೆಯಬೇಕು. ಪರಾಜಿತನನ್ನು ನಿಂದೆ ಅಥವಾ ದಂಡನೆಗೆ ಗುರಿಮಾಡಬೇಕು :

ವಿತಂಡಾ ತು ಸತಾಮನ್ಯೈಸ್ತತ್ತ್ವಮೇಷು ನಿಗೂಹಿತಮ್ ।
ಸ್ವಯಂ ವಾ ಪ್ರಾಶ್ನಿಕೈರ್ವಾದೇ ಚಿಂತಯೇತ್ ತತ್ತ್ವನಿರ್ಣಯಮ್ ॥

ನಿಗ್ರಹಸ್ಥಾನಗಳ ಮೂಲಕ ಪರಾಭವಗೊಳ್ಳುವುದು ಜಲ್ಪವಿತಂಡಗಳಲ್ಲಿ ಪರಾಜಯವೆನ್ನಿಸುವುದು. ಪರಾಭವಗೊಂಡವನು ಸಭೆಯ ನಿರ್ಣಯಕ್ಕೆ ತಕ್ಕಂತೆ ದಂಡನೆಗೆ ಗುರಿಯಾಗುವನು.

ಪ್ರಾಶ್ನಿಕರು, ಉತ್ತಮ ವಿದ್ವಾಂಸರೂ ರಾಗದ್ವೇಷ ರಹಿತರೂ ಆಗಿರಬೇಕು. ವಿಷ್ಣುಭಕ್ತಿ ಅವರ ಕನಿಷ್ಠ ಅರ್ಹತೆ. ಪ್ರಾಶ್ನಿಕರು ವಿಷಮಸಂಖ್ಯೆಯಲ್ಲಿರಬೇಕು; ಅವರ ಸ್ವಭಾವ ಮಾತ್ರ ವಿಷಮವಾಗಿರಕೂಡದು :

[೧]ರಾಗದ್ವೇಷವಿಹೀನಾಸ್ತು ಸರ್ವವಿದ್ಯಾವಿಶಾರದಾಃ ।
ಪ್ರಾಶ್ನಿಕಾ ಇತಿ ಸಂಪ್ರೋಕ್ತಾ ವಿಷಮಾ ಏಕ ಏವ ವಾ ॥

ಸರ್ವಶಾಸ್ತ್ರಪಾರಂಗತನೂ, ಸಕಲಸಂಶಯನಿವಾರಕನೂ, ಸಕಲದೋಷವಿವರ್ಜಿತನು ಆದ ವ್ಯಕ್ತಿ ಸಿಕ್ಕಲ್ಲಿ ಅವನೊಬ್ಬನೇ ಪ್ರಾಶ್ನಿಕನಾಗಬಹುದು :

---

೧. ಶ್ರೀವೇದವ್ಯಾಸರು ಒಬ್ಬರೇ ರಾಜಸೂಯಯಾಗದ ಜ್ಞಾನಯಜ್ಞದಲ್ಲಿ ಪ್ರಾಶ್ನಿಕರಾಗಿದ್ದ ವಿವರ ಮಹಾಭಾರತತಾತ್ಪರ್ಯನಿರ್ಣಯದಲ್ಲಿ ನಿರೂಪಿತವಾಗಿದ್ದು, ಅದು ಇಂತಹ ಪ್ರಸಂಗಕ್ಕೆ ಅತ್ಯಂತ ಶ್ರೇಷ್ಠವಾದ ನಿದರ್ಶನವಾಗಿದೆ (೨೧/೨೩೬):

ತತ್ರ ಸರ್ವಜಗದೇಕಸಂಗಮೇ ತತ್ತ್ವನಿರ್ಣಯಕಥಾ ಬಭೂವಿರೇ ।
ಪ್ರಾಶ್ನಿಕೋಽತ್ರ ಪರಿಪೂರ್ಣಚಿದ್ಘನೋ ವ್ಯಾಸ ಏವ ಭಗವಾನ್ ಬಭೂವ ಹ ॥

ಅಶೇಷಸಂಶಯಚ್ಛೇತ್ತಾ ನಿಃಸಂಶಯ ಉದಾರಧೀಃ ।
ಏಕಶ್ಚೇತ್ ಪ್ರಾಶ್ನಿಕೋ ಜ್ಞೇಯಃ ಸರ್ವದೋಷವಿವರ್ಜಿತಃ ॥

ಪ್ರಾಶ್ನಿಕರೆಲ್ಲರೂ ಸಜ್ಜನರಾಗಿರಲೇಬೇಕು ಎಂಬುದು ಮುಖ್ಯನಿಯಮ. ಸಜ್ಜನಿಕೆಯ ಅತ್ಯಂತ ಮುಖ್ಯಲಕ್ಷಣ ಎಂದರೆ ಭಗವದ್ಭಕ್ತಿ. ಭಗವದ್ಭಕ್ತಿ ಇಲ್ಲದವನು ಎಂತಹ ವಿದ್ವಾಂಸನಾಗಿದ್ದರೂ ಪ್ರಾಶ್ನಿಕನೆನ್ನಿಸಲು ಅರ್ಹನಾಗಲಾರ ಎಂಬುದು ಮತ್ತೊಂದು ಮುಖ್ಯವಾದ ವಿವರ ಅತ್ಯಂತ ಗಮನಾರ್ಹವಾದುದು :

ಏಕೋ ವಾ ಬಹವೋ ವಾ ಸ್ಯುರ್ವಿಷ್ಣುಭಕ್ತಿಪರಾಃ ಸದಾ ।
ವಿಷ್ಣುಭಕ್ತಿರ್ಹಿ ಸರ್ವೇಷಾಂ ಸದ್ಗುಣಾನಾಂ ಸ್ವಲಕ್ಷಣಮ್ ॥

ವಾದಿಪ್ರತಿವಾದಿಗಳಿಬ್ಬರೂ ತಮ್ಮ ವಾದಮಂಡನೆಗೆ ಸದಾಗಮಗಳನ್ನೇ ಆಧಾರವನ್ನಾಗಿ ಉಲ್ಲೇಖಿಸಬೇಕು. ಋಗ್ವೇದ, ಯಜುರ್ವೇದ, ಸಾಮವೇದ, ಅಥರ್ವಣವೇದ, ಮಹಾಭಾರತ, ಪಂಚರಾತ್ರ ಹಾಗೂ ಮೂಲರಾಮಾಯಣ, ಈ ಏಳು ಮಹಾಸದಾಗಮಗಳು. ಇವಕ್ಕೆ ಅನುಗುಣವಾದವುಗಳೂ ಸಹ ಸದಾಗಮಗಳೇ. ಇವಕ್ಕೆ ವಿರುದ್ಧವಾದವುಗಳು ದುರಾಗಮಗಳು. ಅವುಗಳಿಂದ ಎಂದೂ ತತ್ತ್ವನಿರ್ಣಯ-ವಾಗಲಾರದು:

ಋಗ್ಯಜುಃಸಾಮಾಥರ್ವಾಶ್ಚ ಭಾರತಂ ಪಂಚರಾತ್ರಕಮ್ ।
ಮೂಲರಾಮಾಯಣಂ ಚೈವ ಸಂಪ್ರೋಚ್ಯಂತೇ ಸದಾಗಮಾಃ ॥
ಅನುಕೂಲಾ ಯ ಏತೇಷಾಂ ತೇ ಚ ಪ್ರೋಕ್ತಾಃ ಸದಾಗಮಾಃ ।
ಅನ್ಯೇ ದುರಾಗಮಾ ನಾಮ ತೈರ್ನ ಸಾಧ್ಯಂ ಹಿ ಸಾಧ್ಯತೇ ॥

ಶಾಸ್ತ್ರಚರ್ಚೆಗೆ ಎಂದೂ ಅನುಮಾನವನ್ನು ಸ್ವತಂತ್ರಪ್ರಮಾಣವನ್ನಾಗಿ ಉಲ್ಲೇಖಿಸ-ಕೂಡದು; ಯುಕ್ತಿಗೆ ಅವಕಾಶ ಆಗಮಾರ್ಥದ ನಿರ್ಣಯಕ್ಕೇ ಹೊರತು ಪ್ರತ್ಯೇಕವಾಗಿ ಅಲ್ಲ.

ಉಪಪತ್ತ್ಯವಕಾಶೋಽತ್ರ ಹ್ಯಾಗಮಾರ್ಥವಿನಿರ್ಣಯೇ ।
ವಾದ್ಯಾಗಮಾರ್ಥೇ ನಿರ್ಣೀತೇ ಆಗಮಾರ್ಥಃ ಪರಸ್ಯ ತು ।
ನಿರ್ಣೇಯಃ ಸಹಿತೈಃ ಪಶ್ಚಾತ್ ತತೋ ನಿಃಶೇಷನಿರ್ಣಯಃ ॥

ಭೌತಿಕವಿಚಾರದ ಬಗ್ಗೆ ಚರ್ಚೆ ನಡೆದಾಗ ಪ್ರತ್ಯಕ್ಷವನ್ನು ಆಧಾರವನ್ನಾಗಿ ನೀಡಬೇಕು. ಅತೀಂದ್ರಿಯ ವಿಷಯಗಳಲ್ಲಿ ಆಗಮವನ್ನು ಹೇಗೋ ಹಾಗೆ :

ಪ್ರತ್ಯಕ್ಷಸಿದ್ಧೇಷ್ವರ್ಥೇಷು ಪ್ರಶ್ನೇ ಮಾಮಕ್ಷಜಂ ವದೇತ್ ।
ಜ್ಞಾನಂ ವಾ ಜ್ಞಾನಸಿದ್ಧೇಷು ನಾನುಮಾಂ ಪ್ರಥಮಂ ವದೇತ್ ॥

ಕಥಾಲಕ್ಷಣವನ್ನು ಸಹ ಬ್ರಹ್ಮತರ್ಕದ ಆಧಾರದ ಮೇಲೆಯೇ ರಚಿಸಿರುವುದಾಗಿ ತಿಳಿಸಿರುವರು. ಬೃಹದಾರಣ್ಯಕಭಾಷ್ಯದಲ್ಲಿ ಅದಕ್ಕೆ ಸಂಬಂಧಿಸಿದ ಬ್ರಹ್ಮತರ್ಕ ವಚನಗಳನ್ನೇ ಉದಾಹರಿಸಿರುವರು.

ಆನಂದತೀರ್ಥಮುನಿನಾ [1]ಬ್ರಹ್ಮತರ್ಕಾನುಸಾರತಃ ।
ಕಥಾಲಕ್ಷಣಮಿತ್ಯುಕ್ತಂ ಪ್ರೀತ್ಯರ್ಥಂ ಶಾರ್ಙ್ಗಧನ್ವನಃ ॥

ಪ್ರಮಾಣಲಕ್ಷಣ ಮತ್ತು ಕಥಾಲಕ್ಷಣ ಎರಡೂ ಸಹ ತಾತ್ತ್ವಿಕಪ್ರಪಂಚವನ್ನು ತೆರೆದಿಡುವ ದಿವ್ಯನೇತ್ರಗಳು ಎಂಬುದಾಗಿ 'ಸುಮಧ್ವವಿಜಯ' ಬಣ್ಣಿಸಿದೆ. ಕಥಾಲಕ್ಷಣಕ್ಕೆ ಶ್ರೀಪದ್ಮನಾಭತೀರ್ಥರು ಮತ್ತು ಶ್ರೀಜಯತೀರ್ಥರು ಟೀಕೆಗಳನ್ನು ರಚಿಸಿರುವರು. ಶ್ರೀಜಯತೀರ್ಥರ ಟೀಕೆಗಳಿಗೆ ಶ್ರೀವೇದೇಶತೀರ್ಥರು, ಶ್ರೀರಾಘವೇಂದ್ರರು, ಬಿದರಹಳ್ಳಿ ಶ್ರೀನಿವಾಸತೀರ್ಥರು ಮೊದಲಾದವರ ಟಿಪ್ಪಣಿಗಳು ಪ್ರಸಿದ್ಧವಾಗಿವೆ.

೫-೭. ಖಂಡನತ್ರಯಗಳು

೫. ಉಪಾಧಿಖಂಡನ

ಉಪಾಧಿಖಂಡನವು ಅದ್ವೈತಮತದ ಉಪಾಧಿ ಎಂಬ ಪ್ರಕ್ರಿಯೆಯನ್ನು ವಿಮರ್ಶಿಸುವ ಕೃತಿ. ಜೀವಬ್ರಹ್ಮರಿಗೆ ಸ್ವಾಭಾವಿಕ ಐಕ್ಯವಿದ್ದರೂ ಔಪಾಧಿಕ ಭೇದದಿಂದಾಗಿ ಅಜ್ಞಾನವು ಕೂಡುತ್ತದೆ ಎಂಬುದು ಅದ್ವೈತಿಗಳ ವಾದ. ಬ್ರಹ್ಮನು ಸ್ವಾಭಾವಿಕವಾಗಿ ಸರ್ವಜ್ಞ. ಅಂತಹ ಸರ್ವಜ್ಞನಿಗೆ ಅಜ್ಞಾನವೆಂತು ಒದಗೀತು? ಉಪಾಧಿಯಿಂದ ಒದಗುವ ಭೇದದಿಂದಾಗಿ ಅಜ್ಞಾನವು ಕೂಡುವುದು ಎಂದರೆ ಆ ಉಪಾಧಿಗೆ ಏನು ಕಾರಣ ? ಎಂದು ಪ್ರಶ್ನಿಸಬೇಕಾಗುತ್ತದೆ. ಅದಕ್ಕೆ ಯಾವುದೇ ರೀತಿಯ ಉತ್ತರಕ್ಕೂ ಆತ್ಮಾಶ್ರಯ, ಅನ್ಯೋನ್ಯಾಶ್ರಯ, ಚಕ್ರಕಾಶ್ರಯ, ಅನವಸ್ಥಾ ಮೊದಲಾದ ಒಂದಲ್ಲ ಒಂದು ದೋಷವು ತಪ್ಪಿದ್ದಲ್ಲ. ಉಪಾಧಿಯು ಸತ್ಯವಾದರೆ ಅದ್ವೈತಕ್ಕೆ ಹಾನಿ. ಸತ್ಯವಲ್ಲವೆಂದರೆ ಅದಕ್ಕಾಗಿ ಅಜ್ಞಾನದ ಕಲ್ಪನೆ. ಹೀಗೆ ಸಮಸ್ಯೆ ಅಪರಿಹಾರ್ಯವೇ ಆಗುವುದು. ಅಲ್ಲದೆ ಉಪಾಧಿಗೆ ಇರುವ ಭೇದವನ್ನು ಪ್ರಕಟಿಸುವ, ತಿಳಿಸಿಕೊಡುವ ಸಾಮರ್ಥ್ಯವುಂಟೇ ಹೊರತು ಇಲ್ಲದ ಭೇದವನ್ನು ಸೃಷ್ಟಿಸಲು ಅಲ್ಲ ಎಂಬ ವಿಶೇಷಾಂಶವನ್ನೂ ತೋರಿಸಿರುವರು[2]

---

೧. ಇಲ್ಲಿ ಪ್ರಸ್ತಾಪಿಸಿರುವ ಬ್ರಹ್ಮತರ್ಕದ ಮೂಲವಾಕ್ಯಗಳನ್ನು ಶ್ರೀಮದಾಚಾರ್ಯರು ತಮ್ಮ ಬೃಹದಾರಣ್ಯಕೋಪನಿಷದ್ಭಾಷ್ಯದಲ್ಲಿ ಉಲ್ಲೇಖಿಸಿರುವರು. ಅವರ ಅನುವ್ಯಾಖ್ಯಾನದಲ್ಲೂ ಈ ಕಥಾಲಕ್ಷಣದ ಬಗ್ಗೆ ಅನೇಕ ವಿವರಗಳು ಬಂದಿವೆ (೨/೧/೪೦-೫೧)

೨. ಅಜ್ಞತಾಽಖಿಲಸಂವೇತ್ತುರ್ಘಟತೇ ನ ಕುತಶ್ಚನ ।
ಉಪಾಧಿಭೇದಾದ್ಘಟತ ಇತಿ ಚೇತ್ ಸ ಸ್ವಭಾವತಃ ॥
ಅಜ್ಞಾನತೋ ವಾ ದ್ವೈತಸ್ಯ ಸತ್ಯತಾ ಸ್ವತ ಏವ ಚೇತ್ ।
ಅನವಸ್ಥಿತಿರಜ್ಞಾನಹೇತೌ ವಾಽನ್ಯೋನ್ಯಸಿದ್ಧಿತಾ ॥
ಚಕ್ರಕಾಪತ್ತಿರಥವಾ ಭೇದಶ್ಚೋಪಾಧಿತಃ ಕುತಃ ।
ವಿದ್ಯಮಾನಸ್ಯ ಭೇದಸ್ಯ ಜ್ಞಾಪಕೋ ನೈವ ಕಾರಕಃ ॥ (೨-೪)

ಜೀವಬ್ರಹ್ಮರಿಗೆ ಐಕ್ಯವಿದ್ದಲ್ಲಿ ಅವರಿಬ್ಬರಿಗೂ ಒಂದೇ ತೆರನಾದ ಅನುಭವವೂ ಇರಬೇಕು. ಅಂಥ ಅನುಭವವನ್ನು ಒಪ್ಪಿದ್ದಲ್ಲಿ ಜೀವರ ದುಃಖಾನುಭವವು ಬ್ರಹ್ಮನಿಗೂ ಒದಗಬೇಕಾಗುವುದರಿಂದ ಅವನೂ ದುಃಖಿಯಾಗಬೇಕಾಗುವುದು. ಭೋಗಾನು-ಭವದಲ್ಲಿ ಆ ತೆರನಾದ ಐಕ್ಯಾನುಸಂಧಾನವು ಆಗದಿದ್ದಲ್ಲಿ ಬಹುರೂಪಗಳನ್ನು ಸ್ವೀಕರಿಸಿ ಯೋಗಿಗಳು ಸಾಧನೆ ಮಾಡಿಕೊಳ್ಳುವ ಪ್ರಸಂಗಕ್ಕೆ ಅರ್ಥ ತಪ್ಪಿಹೋಗುತ್ತಿತ್ತು. ಸೌಭರಿ ಮೊದಲಾದ ಯೋಗಿಗಳು ಬಹುರೂಪ ಸ್ವೀಕರಿಸಿದ ನಿದರ್ಶನವಿರುವುದರಿಂದ ದೇಹಭೇದವಿದ್ದಾಗಲೂ ಸ್ವರೂಪೈಕ್ಯವಿದ್ದಲ್ಲಿ ಐಕ್ಯಾನುಸಂಧಾನವನ್ನು ಒಪ್ಪಲೇ ಬೇಕಾಗುವುದು. ಆದ್ದರಿಂದ ಉಪಾಧಿಯನ್ನು ಒಪ್ಪಿದರೂ ಬ್ರಹ್ಮಾತ್ಮೈಕ್ಯವಾದ ಸ್ವರಸವಾಗುವುದಿಲ್ಲ. ಅದು ಪ್ರಮಾಣಗಳಿಗೆ ವಿರುದ್ಧ ಮತ್ತು ಅಪ್ರಾಮಾಣಿಕ ಎಂಬುದಂತೂ ಅಪರಿಹಾರ್ಯ.[೧]

ಜೀವಜೀವಭೇದ, ಜೀವೇಶ್ವರಾದಿಭೇದಗಳು ಪ್ರತ್ಯಕ್ಷ, ಅನುಮಾನ ಮತ್ತು ಆಗಮ ಎಂಬ ಸಕಲ ಪ್ರಮಾಣಗಳಿಂದಲೂ ಸಿದ್ಧವಾಗಿರುವುದರಿಂದ ತತ್ತ್ವವಾದವೇ ಗ್ರಾಹ್ಯ ಎಂಬುದು ಉಪಾಧಿಖಂಡನದ ಸಾರ.[೨]

---

೧. ಸುಖದುಃಖಾದಿಭೋಗಶ್ಚ ಸ್ವರೂಪೈಕ್ಯೇ ನ ಭೇದತಃ।
ದೃಶ್ಯೋ ಹ್ಯುಪಾಧಿಭೇದೇಽಪಿ ಹಸ್ತಪಾದಾದಿಗೋ ಯಥಾ ॥
ನಾನಾದೇಹಗಭೋಗಾನುಸಂಧಾನಂ ಯೋಗಿನೋ ಯಥಾ।
ನ ಚೇದ್ಭೋಗಾನುಸಂಧಾನಂ ತದಿಚ್ಛಾ ಯೋಗಿನಃ ಕುತಃ ॥
ಅನುಸಂಧಾನರಹಿತದೇಹಬಾಹುಲ್ಯಮನ್ಯಥಾ।
ಸಿದ್ಧಮೇವ ಹಿ ತತ್ಪಕ್ಷೇ ವಿಶೇಷೋ ಯೋಗಿನಃ ಕುತಃ ॥
ಸಿದ್ಧೌ ಹಿ ಕರ್ಮಭೇದಸ್ಯ ಸ್ಯಾದುಪಾಧಿವಿಭಿನ್ನತಾ।
ತತ್ಸಿದ್ಧೌ ಚೈವ ತತ್ಸಿದ್ಧಿರಿತ್ಯನ್ಯೋನ್ಯವ್ಯಪಾಶ್ರಯಃ ॥ (೭-೧೦)

೨. ಆತ್ಮಸ್ವಭಾವಭೇದಸ್ಯ ವಿದೋಷತ್ವೇನ ಚಾಖಿಲಃ।
ಪ್ರತ್ಯಕ್ಷಾದಿವಿರೋಧಾಚ್ಚ ದುಷ್ಟಃ ಪಕ್ಷೋಽಯಮಂಜಸಾ ॥
ಚೇಷ್ಟಾಲಿಂಗೇನ ಸಾತ್ಮತ್ವೇ ಪರದೇಹಸ್ಯ ಸಾಧಿತೇ।
ಅನ್ಯತ್ವಂ ಸ್ವಾತ್ಮನಸ್ತಸ್ಮಾತ್ ಸರ್ವೈರೇವಾನುಭೂಯತೇ ॥
ಅಜ್ಞತಾ ಚಾಲ್ಪಶಕ್ತಿತ್ವಂ ದುಃಖಿತ್ವಂ ಸ್ವಲ್ಪಕರ್ತೃತಾ।
ಸರ್ವಜ್ಞತಾದೀಶಗುಣವಿರುದ್ಧಾ ಹ್ಯನುಭೂತಿಗಾಃ ॥
ಸಾರ್ವಜ್ಞಾದಿಗುಣಾ ವಿಷ್ಣೋಃ ಶ್ರುತಿಷು ಪ್ರತಿಪಾದಿತಾಃ।
ಸತ್ಯಃ ಸೋ ಅಸ್ಯ ಮಹಿಮೇತ್ಯಾದಿವಾಕ್ಯಾನ್ಮೃಷಾ ನ ಚ ॥
ನ ಚ ವೇದೋಕ್ತಮಿಥ್ಯಾತ್ವೇ ಮಾನಂ ತನ್ಮಾನತಾಽಪಿ ನ।
ಅತೋಽಜ್ಞಾಸಂಭವಾದೇವ ನಾಧಿಕಾರ್ಯೈಕ್ಯವಾದಿನಾಮ್ ॥ (೧೧-೧೫)

ಹೀಗೆ ಅಜ್ಞಾನಕ್ಕೆ ನಿಮಿತ್ತವಾಗಿವ ಉಪಾಧಿಯ ಪರಿಕಲ್ಪನೆ ಸರ್ವಥಾ ಅಯುಕ್ತವಾದ್ದರಿಂದ ಮಾಯಾವಾದಮತದಲ್ಲಿ ಅಧಿಕಾರಿ, ವಿಷಯ, ಪ್ರಯೋಜನ, ಹಾಗೂ ಸಂಬಂಧ ಎಂಬ ಅನುಬಂಧಚತುಷ್ಟಯಕ್ಕೆ ಅವಕಾಶವೇ ಇರದು. ಆದ್ದರಿಂದ ಅದು ಉಪಾದೇಯ ಎನ್ನಿಸಲಾರದು :

ಅತೋ ನಾಜ್ಞಾತಮಿತಿ ಚ ವಿಷಯೋ ವಿಷಯಾಂತರೇ ।
ಅಜ್ಞಾಭಾವಾತ್ ಫಲಂ ಕಸ್ಯ ಯೋಗಃ ಶಶನೃಶೃಂಗಯೋಃ ॥ ೧೬ ॥

ಮಾಯಾವಾದದ ಕತ್ತಲೆಯಿಂದ ಮುಚ್ಚಿಹೋಗಿದ್ದ ತತ್ವಜ್ಞಾನ ಪ್ರಪಂಚ ಶ್ರೀಮಧ್ವಾಚಾರ್ಯರೆಂಬ ಸೂರ್ಯರಿಂದ ಪುನಃ ಪ್ರಕಾಶಿತವಾಯಿತು ಎಂಬುದು ಇದರ ಉಪಸಂಹಾರ ವಾಕ್ಯ :

ಮಾಯಾವಾದತಮೋವ್ಯಾಪ್ತಮಿತಿ ತತ್ತ್ವದೃಶಾ ಜಗತ್ ।
ಭಾತಂ ಸರ್ವಜ್ಞಸೂರ್ಯೇಣ ಪ್ರೀತಯೇ ಶ್ರೀಪತೇಃ ಸದಾ ॥ ೧೮ ॥

೬. ಮಾಯಾವಾದಖಂಡನ

ಅದ್ವೈತಮತಕ್ಕೆ ಮಾಯಾವಾದ ಎಂದೂ ಹೆಸರು. ಎಂದರೆ ವಿಶ್ವವು ಮಾಯಾ (ಅಜ್ಞಾನ) ಕಲ್ಪಿತ. ಆದ್ದರಿಂದ ಮಿಥ್ಯೆ. ಬ್ರಹ್ಮ ಪಾರಮಾರ್ಥಿಕ ಸತ್ಯ; ಜೀವ ಬ್ರಹ್ಮನಿಂದ ಭಿನ್ನನಲ್ಲ; ಬ್ರಹ್ಮಾತ್ಮೈಕ್ಯವೇ ಸಕಲಶಾಸ್ತ್ರಾರ್ಥ ಎಂಬುದು ಅವರ ವಾದ.

ನರಸಿಂಹೋಽಖಿಲಾಜ್ಞಾನಮತಧ್ವಾಂತದಿವಾಕರಃ ।
ಜಯತ್ಯಮಿತಸಜ್ಜ್ಞಾನಸುಖಶಕ್ತಿಪಯೋನಿಧಿಃ ॥

- ಎಂಬ ನರಸಿಂಹದೇವರ ಸ್ತುತಿಯೊಂದಿಗೆ ಮಾಯಾವಾದಖಂಡನ ಗ್ರಂಥವನ್ನು ಪ್ರಾರಂಭಿಸಿ ಶ್ರೀಮದಾಚಾರ್ಯರು ಬ್ರಹ್ಮಾತ್ಮೈಕ್ಯವನ್ನು ಪ್ರತಿಪಾದಿಸುವ ಮಾಯಾವಾದವು ಉಪಾದೇಯವಲ್ಲ, ವೇದಾದಿ ಶಾಸ್ತ್ರಗಳೇ ಅದನ್ನು ಪ್ರತಿಪಾದಿಸುತ್ತವೆ ಎಂದರೆ ಅವೂ ಅನುಪಾದೇಯವೇ ಆಗಬೇಕಾಗುವುದು ಎಂದು ತೋರಿಸಿಕೊಟ್ಟಿರುವರು.[೧] ಅನುಬಂಧ, ಚತುಷ್ಟಯಯುಕ್ತವಾದ ಶಾಸ್ತ್ರ ಉಪಾದೇಯ; ಹಾಗಲ್ಲದ್ದು ಅನುಪಾದೇಯ. ಅಧಿಕಾರಿ, ವಿಷಯ, ಪ್ರಯೋಜನ ಮತ್ತು ಸಂಬಂಧ ಈ ನಾಲ್ಕನ್ನು ಅನುಬಂಧಚತುಷ್ಟಯ ಎನ್ನುವರು. ವಿಷಯವು ಪ್ರಾಮಾಣಿಕವಾಗಿರಬೇಕು; ಆದರೆ ಅದ್ವೈತಿಗಳು ಹೇಳುವ ಬ್ರಹ್ಮಾತ್ಮೈಕ್ಯವು ಶ್ರುತಿ ಪ್ರತ್ಯಕ್ಷಾದಿ ಸಕಲ ಪ್ರಮಾಣಗಳಿಗೂ ವಿರುದ್ಧ. ಅದ್ವೈತಿಗಳು ಬ್ರಹ್ಮನು ಒಂದೇ ಸತ್ಯ ಎನ್ನುವರು. ಬ್ರಹ್ಮಾತ್ಮೈಕ್ಯವು ಸತ್ಯವೆಂದರೆ ಅವರ ಮತಕ್ಕೆ ವಿರುದ್ಧವಾಗಿ ಎರಡು ಸತ್ಯಗಳನ್ನು ಒಪ್ಪಿಕೊಳ್ಳಬೇಕಾದ ಪ್ರಸಂಗ ಒದಗುವುದರಿಂದ ಅಪಸಿದ್ಧಾಂತವೆಂಬ ದೋಷವು

---

೧. ವಿಮತಮನಾರಂಭಣೀಯಮ್, ಅನ್ಯಥಾಪ್ರತಿಪಾದಕತ್ವಾತ್, ಯದಿತ್ಥಂ ತತ್ ತಥಾ, ಯಥಾ ಸಂಪ್ರತಿಪನ್ನಮ್ ।

ಬರುವುದು. ಅದು ಬ್ರಹ್ಮನ ಸ್ವರೂಪವೆಂದಲ್ಲಿ, ಬ್ರಹ್ಮನು ಸ್ವಪ್ರಕಾಶನಾದ್ದರಿಂದ ಬ್ರಹ್ಮಾತ್ಮೈಕ್ಯವೂ ಸ್ವಪ್ರಕಾಶವಾಗಬೇಕಾಗುವುದು. ಸ್ವಪ್ರಕಾಶವಾದದ್ದನ್ನು ಸಾಧಿಸಹೊರಟಾಗ ಶಾಸ್ತ್ರಗಳಿಗೆ ಸಿದ್ಧಸಾಧನತಾ ಎಂಬ ದೋಷ ಬರುವುದು. ಬ್ರಹ್ಮನ ಸ್ವರೂಪವಲ್ಲದೆ ಐಕ್ಯವು ಅವನಿಂದ ಬೇರೆಯಾಗಿದೆ ಎಂದರೆ ಬ್ರಹ್ಮನಿಂದ ಭಿನ್ನವಾದ ಸಕಲವೂ ಮಿಥ್ಯೆ ಎಂಬ ಅವರ ಮತದ ಪ್ರಕ್ರಿಯೆಗನುಗುಣವಾಗಿ ಅದೂ ಮಿಥ್ಯೆಯಾಗಬೇಕಾಗುವುದು ಅಂಥಾ ಮಿಥ್ಯಾ ವಿಷಯವನ್ನು ಪ್ರತಿಪಾದಿಸುವ ಶಾಸ್ತ್ರ ಅಪ್ರಾಮಾಣಿಕವೇ ಆಗುವುದು.[೧]

ಐಕ್ಯವು ಬ್ರಹ್ಮಸ್ವರೂಪವಾಗಿ ಅಭಿನ್ನವಾಗಿದ್ದರೂ ವಿಶೇಷವೊಂದನ್ನು ಹೇಳಲು ಅವರ ಶಾಸ್ತ್ರ ಹೊರಟಿದೆ ಎನ್ನುವಂತಿಲ್ಲ. ಏಕೆಂದರೆ ಅವರ ಪ್ರಕಾರ ಬ್ರಹ್ಮ ನಿರ್ವಿಶೇಷ. ನಿರ್ವಿಶೇಷ ವಸ್ತುವಿನಲ್ಲಿ ವಿಶೇಷ ಹೇಳುವುದು ವ್ಯಾಹತಿಯಲ್ಲವೆ? ಶಾಸ್ತ್ರವು ಬ್ರಹ್ಮಭಿನ್ನವಾದ ಆತ್ಮೈಕ್ಯಕ್ಕೆ ಒದಗಿರುವ ಆವರಣವೊಂದನ್ನು ಕಳೆಯಲು ಹೊರಟಿದೆ ಎನ್ನುವುದೂ ಉಚಿತವಲ್ಲ. ಬ್ರಹ್ಮ ಸ್ವಪ್ರಕಾಶವೆಂದ ಮೇಲೆ ಅದಕ್ಕೆ ಆವರಣವೊಂದನ್ನು ಒಪ್ಪುವುದು ಎಂತು? ಹೀಗೆ ಅಜ್ಞಾನವನ್ನು ಸಾಧಿಸಲು ಮಾಯಾವಾದಮತದಲ್ಲಿ ಸಾಧ್ಯವಾಗುವುದಿಲ್ಲ. ಅಜ್ಞಾನವನ್ನು ಸಾಧಿಸದೆ ಹೋದಾಗ ಅದನ್ನೇ ಅವಲಂಬಿಸಿ ಸಿದ್ಧವಾಗುವ ಅಧಿಕಾರಿ, ವಿಷಯ, ಪ್ರಯೋಜನ ಎಂಬ ಮೂರನ್ನು ಸಾಧಿಸಲು ಸಾಧ್ಯವಾಗುವುದಿಲ್ಲ.

ಅಜ್ಞಾನವಿರುವವನು ಅಧಿಕಾರಿ, ಅಜ್ಞಾತವಾದದ್ದು ವಿಷಯ. ಅಜ್ಞಾನ ನಿವೃತ್ತಿಯು ಪ್ರಯೋಜನ ಹೀಗೆ ಮೂರಕ್ಕೂ ಮೂಲವಾದ ಅಜ್ಞಾನವನ್ನೇ ಸಾಧಿಸಲು ಅಸಾಧ್ಯವಾದಾಗ ಆ ಮತಕ್ಕೆ ಅಧಿಕಾರಿ, ವಿಷಯ ಮತ್ತು ಪ್ರಯೋಜನಗಳು ಸಿದ್ಧಿಸದೇ ಹೋಗುವವು. ಅವುಗಳ ಮಧ್ಯೆ ಸಂಬಂಧಕ್ಕೆ ಅವಕಾಶವೇ ಸಿದ್ಧಿಸುವುದಿಲ್ಲ.[೨]

ಹೀಗೆ ಮಾಯಾವಾದ ಮತವು ಅಪ್ರಾಮಾಣಿಕ ಮತ್ತು ಪ್ರಮಾಣ ವಿರುದ್ಧ ಎಂಬುದನ್ನು ತೋರಿಸಿ, ಅನಂತರ ಜೀವೇಶ್ವರ ಭೇದ, ಜಗತ್ಸತ್ಯತ್ವ, ಹರಿಸರ್ವೋತ್ತಮತ್ವ, ದೇವತಾತಾರತಮ್ಯ ಮೊದಲಾದವುಗಳನ್ನು ಅಂಗೀಕರಿಸುವ ತಮ್ಮ ತತ್ತ್ವವಾದವು ಅತ್ಯಂತ

---

೧. ನ ಹಿ ಬ್ರಹ್ಮಾತ್ಮೈಕ್ಯಸ್ಯ ಯಾಥಾರ್ಥ್ಯಂ ತತ್ಪಕ್ಷೇ । ಅದ್ವೈತಹಾನೇಃ ಸ್ವರೂಪಾತಿರೇಕೇ । ಅನತಿರೇಕೇ ಸ್ವಪ್ರಕಾಶತ್ವಾದಾತ್ಮನಃ ಸಿದ್ಧಸಾಧನತಾ । ನಿರ್ವಿಶೇಷತ್ವಾದಾತ್ಮನೋ ನಾನಧಿಗತೋ ವಿಶೇಷಃ । ಸಿದ್ಧತ್ವಾತ್ ಸ್ವರೂಪಸ್ಯ ವಿಶೇಷಾಭಾವಾಚ್ಚ ನಾಜ್ಞಾನಂ ಕಸ್ಯಚಿದಾವರಕಮ್ । ಅನಧಿಗತಾರ್ಥಗಂತೃ ಪ್ರಮಾಣಮಿತಿ ಚ ತನ್ಮತಮ್ ।

೨. ಅಜ್ಞಾನಾಸಂಭವಾದೇವ ತನ್ಮತಮಖಿಲಮಪಾಕೃತಮ್ । ಮಿಥ್ಯಾತ್ವೇ ಚೈಕ್ಯಸ್ಯಾತತ್ತ್ವಾವೇದಕತ್ವಮಾಗಮಸ್ಯ ಸ್ಯಾತ್ । ಸತ್ಯತಾ ಚ ಭೇದಸ್ಯ । ಏವಮೇವ ಪ್ರಯೋಜನಮಪಿ ನಿರಸ್ತಮ್ । ಸ್ವರೂಪತ್ವಾನ್ಮೋಕ್ಷಸ್ಯ ಪೂರ್ವಮೇವ ಸಿದ್ಧತ್ವಾತ್ । ಅಜ್ಞಾನಾಸಂಭವೇನ ಚತುರ್ಥಪ್ರಕಾರಾಭಾವಾತ್ ಪಂಚಮಪ್ರಕಾರತಾಽಪಿ ನಿರಸ್ತಾ । ವಿಷಯಪ್ರಯೋಜನಾಭಾವಾದೇವಾಧಿಕಾರೀ ಚ । ತದಭಾವಾದೇವ ಸಂಬಂಧೋಽಪಿ ॥

ಪ್ರಾಮಾಣಿಕ ಮತ್ತು ಸಕಲ ಪ್ರಮಾಣಗಳಿಗೆ ಅವಿರುದ್ಧ ಎಂಬುದನ್ನು ಭಗವದ್ಗೀತೆ, ಕಠೋಪನಿಷತ್ತು ಮತ್ತು ಬ್ರಹ್ಮಸೂತ್ರದ ವಾಕ್ಯಗಳನ್ನು ಉದಾಹರಿಸಿ ಪ್ರತಿಪಾದಿಸಿರುವರು :

'ದ್ವಾವಿಮೌ ಪುರುಷೌ ಲೋಕೇ ಕ್ಷರಶ್ಚಾಕ್ಷರ ಏವ ಚ ।
ಕ್ಷರಃ ಸರ್ವಾಣಿ ಭೂತಾನಿ ಕೂಟಸ್ಥೋಽಕ್ಷರ ಉಚ್ಯತೇ ॥
ಉತ್ತಮಃ ಪುರುಷಸ್ತ್ವನ್ಯಃ ಪರಮಾತ್ಮೇತ್ಯುದಾಹೃತಃ ।
ಯೋ ಲೋಕತ್ರಯಮಾವಿಶ್ಯ ಬಿಭರ್ತ್ಯವ್ಯಯ ಈಶ್ವರಃ ॥
ಯಸ್ಮಾತ್ ಕ್ಷರಮತೀತೋಽಹಮಕ್ಷರಾದಪಿ ಚೋತ್ತಮಃ ।
ಅತೋಽಸ್ಮಿ ಲೋಕೇ ವೇದೇ ಚ ಪ್ರಥಿತಃ ಪುರುಷೋತ್ತಮಃ ॥
ಯೋ ಮಾಮೇವಮಸಮ್ಮೂಢೋ ಜಾನಾತಿ ಪುರುಷೋತ್ತಮಮ್ ।
ಸ ಸರ್ವವಿದ್ಭಜತಿ ಮಾಂ ಸರ್ವಭಾವೇನ ಭಾರತ ॥
ಇತಿ ಗುಹ್ಯತಮಂ ಶಾಸ್ತ್ರಮಿದಮುಕ್ತಂ ಮಯಾಽನಘ ।
ಏತದ್ಬುದ್ಧ್ವಾ ಬುದ್ಧಿಮಾನ್ ಸ್ಯಾತ್ ಕೃತಕೃತ್ಯಶ್ಚ ಭಾರತ' ॥
'ಇಂದ್ರಿಯೇಭ್ಯಃ ಪರಾ ಹ್ಯರ್ಥಾ ಅರ್ಥೇಭ್ಯಶ್ಚ ಪರಂ ಮನಃ ।
ಮನಸಸ್ತು ಪರಾ ಬುದ್ಧಿರ್ಬುದ್ಧೇರಾತ್ಮಾ ಮಹಾನ್ ಪರಃ ॥
ಮಹತಃ ಪರಮವ್ಯಕ್ತಮವ್ಯಕ್ತಾತ್ ಪುರುಷಃ ಪರಃ ।
ಪುರುಷಾನ್ನ ಪರಂ ಕಿಂಚಿತ್ ಸಾ ಕಾಷ್ಠಾ ಸಾ ಪರಾ ಗತಿಃ' ॥
'ಭೂಮ್ನಃ ಕ್ರತುವಜ್ಜ್ಯಾಯಸ್ತ್ವಂ ತಥಾ ಚ ದರ್ಶಯತಿ' ।

ಇತಿ ವಿಷ್ಣೋಃ ಪುರುಷೋತ್ತಮತ್ವಮೇವ ಸರ್ವಶಾಸ್ತ್ರಾರ್ಥತ್ವೇನ ಭಗವತಾ ಶ್ರುತ್ಯಾ ಚಾಭಿಹಿತಮ್ ॥

ಮಾಯಾವಾದಮತದ ವಾಙ್ಮಯರಾಶಿಯನ್ನೆಲ್ಲ ಆಚಾರ್ಯರು ಒಂದೇ ವಾಕ್ಯದಲ್ಲಿ ನಿರಾಸ ಮಾಡಿದರು ಎಂಬ ಪ್ರಸ್ತಾಪ ಸುಮಧ್ವವಿಜಯದಲ್ಲಿದೆ¹(೧೨/೧೧). ಆ ಮಾತು 'ಅಜ್ಞಾನಾಸಂಭವಾದೇವ ತನ್ಮತಮಖಿಲಮಪಾಕೃತಂ' ಎಂಬ ಇದರಲ್ಲಿಯ ಮಾತು ಎಂಬುದಾಗಿ ಶುಭಾಭರಣ ಎಂಬ ಸುಮಧ್ವವಿಜಯದ ವ್ಯಾಖ್ಯಾನದಲ್ಲಿದೆ : ತಚ್ಚ ವಾಕ್ಯಂ ''ಅಜ್ಞಾನಾಸಂಭವಾದೇವ ಚ ತನ್ಮತಮಖಿಲಮಪಾಕೃತಮ್'' ಇತಿ ಮಾಯಾವಾದ-ಖಂಡನಸ್ಥಂ ಜ್ಞೇಯಮ್ (೧೨/೧೧)

ಇಲ್ಲಿಯೂ ಸಹ ಮಾಯಾವಾದವೆಂಬ ಕತ್ತಲೆಯ ರಾಶಿಯನ್ನು ಶ್ರೀಮಧ್ವಾಚಾರ್ಯರೆಂಬ ಸೂರ್ಯ ನಾಶಗೊಳಿಸಿ ತತ್ತ್ವಪ್ರಪಂಚವನ್ನು ಬೆಳಗಿಸಿದರು ಎಂಬ ಮಾತಿನೊಂದಿಗೆ ಗ್ರಂಥಮುಕ್ತಾಯವಾಗಿದೆ:

ಇತಿ ಸರ್ವಜ್ಞಮುನಿನಾ ಮಾಯಾವಾದತಮೋಽಖಿಲಮ್ ।
ನಿರಸ್ತಂ ತತ್ತ್ವವಾದೇನ ಸತಾಂ ಸಂಶಯನುತ್ತಯೇ ॥

---

೧. ಪ್ರಾಚ್ಯಂ ಶಾಸ್ತ್ರಂ ಯತ್ ಸಪಾದಂ ತು ಲಕ್ಷಂ ವಾಕ್ಯೈನ್ಯೈಕೇನಾಕ್ಷಿಪದ್ದರ್ಷತೀರ್ಥಃ ।
ಇತ್ಥಂ ಪಾಂಥೈರ್ವರ್ಣಿತಂ ಶೃಣ್ವತಃ ಪ್ರಾಗ್ಯುಷ್ಮಾನ್ ಪ್ರಾಪದ್ದೂಯಮಾನಂ ಮನೋ ಮೇ ॥

೭. ಪ್ರಪಂಚಮಿಥ್ಯಾತ್ವಾನುಮಾನ ಖಂಡನ

ಶ್ರೀಮದಾಚಾರ್ಯರ ದಶಪ್ರಕರಣಗಳಲ್ಲಿ ಮಾಯಾವಾದಖಂಡನ, ಉಪಾಧಿಖಂಡನ ಮತ್ತು ಪ್ರಪಂಚಮಿತ್ಯಾತ್ವಾನುಮಾನಖಂಡನ ಎಂಬ ಮೂರು ಕೃತಿಗಳು ಖಂಡನತ್ರಯ ಎಂದೇ ಪ್ರಸಿದ್ಧವಾಗಿವೆ. ಇವು ಮೂರೂ ಪ್ರಧಾನವಾಗಿ ಅದ್ವೈತಮತದ ವಿಮರ್ಶೆಗೆ ಮೀಸಲಾದ ಕೃತಿಗಳು.

ಅದ್ವೈತಮತವು ಬ್ರಹ್ಮ ಒಂದೇ ಸತ್ಯ ಉಳಿದೆಲ್ಲ ಮಿಥ್ಯೆ ಎನ್ನುವದು. ಜಗನ್ಮಿಥ್ಯಾತ್ವವನ್ನು ಸಾಧಿಸಲು ಅವರು ದೃಶ್ಯತ್ವಾತ್, ಜಡತ್ವಾತ್ ಮತ್ತು ಪರಿಚ್ಛಿನತ್ವಾತ್ ಎಂಬ ಮೂರು ಹೇತುಗಳನ್ನು ಕೊಡುವರು. ಅವುಗಳಲ್ಲಿ ವಿಮತಂ ಮಿಥ್ಯಾ, ದೃಶ್ಯತ್ವಾತ್ ಎಂಬ ಅನುಮಾನವನ್ನು ಪ್ರಪಂಚಮಿಥ್ಯಾತ್ವಾನುಮಾನಖಂಡನದಲ್ಲಿ ವಿಮರ್ಶಿಸಲಾಗಿದೆ.

ದೂರದಲ್ಲಿರುವ ಕಪ್ಪೆಚಿಪ್ಪನ್ನು ನೋಡಿದಾಗ ಅದು ಬೆಳ್ಳಿಯಂತೆ ಕಂಡು, ಪರೀಕ್ಷಿಸಿದಾಗ ಅದು ಬೆಳ್ಳಿಯಲ್ಲ, ಕಪ್ಪೆಚಿಪ್ಪು ಎಂದು ಖಚಿತಪಡುತ್ತದೆ. ಇಲ್ಲಿ ಬೆಳ್ಳಿಯೆಂಬುದು ಭ್ರಮೆ; ಕಪ್ಪೆಚಿಪ್ಪು ಎಂಬುದು ಸತ್ಯ. ಇದರಿಂದ ಯಾವುದು ಇರುವಂತೆ ತೋರುತ್ತದೋ ಅದು ವಾಸ್ತವವಾಗಿ ಇರುವುದಿಲ್ಲ; ಎಂದರೆ ಜಗತ್ತು ಇರುವಂತೆ ತೋರುವುದರಿಂದ ಅದು ಮಿಥ್ಯೆ ಎಂಬುದು ಅದ್ವೈತಿಗಳ ವಾದಸರಣಿ. ಇದನ್ನು ಆಚಾರ್ಯರು ಸಮಗ್ರವಾಗಿ ವಿಮರ್ಶಿಸಿ ಒಂದು ಅನುಮಾನಕ್ಕೆ ಇರಬಹುದಾದ ಅಸಿದ್ಧಿ, ವಿರೋಧ, ಆಶ್ರಯಾಸಿದ್ಧಿ ಅಪ್ರಸಿದ್ಧವಿಶೇಷಣತ್ವ, ಸಿದ್ಧಸಾಧನತಾ ಅನೇಕಾಂತಿಕತಾ, ಸಾಧನವೈಕಲ್ಯ, ಸಾಧ್ಯವೈಕಲ್ಯ ಉಪಾಧಿ, ಅನಧ್ಯವಸಾಯ, ಪ್ರಕರಣಸಮ, ಕಾಲತ್ಯಯಾಪದಿಷ್ಟ, ಮೊದಲಾದ ಸಕಲ ದೋಷಗಳೂ ಇದರಲ್ಲಿ ಉಂಟು ಎಂಬುದನ್ನು ತೋರಿಸಿರುವರು. ತೋರುವುದು ಮಿಥ್ಯೆ ಎನ್ನುವುದಾದರೆ ಬ್ರಹ್ಮನೂ ತೋರುವುದರಿಂದ ಅವನೂ ಮಿಥ್ಯೆಯಾಗಬೇಕಾಗುವದು ಎಂದು ಸಾಧಿಸುತ್ತ ಅದ್ವೈತಿಗಳು ಜಗನ್ಮಿಥ್ಯಾತ್ವವನ್ನು ಸಾಧಿಸಹೊರಟು [೧]ಬ್ರಹ್ಮಮಿಥ್ಯಾತ್ವವನ್ನು ಒಪ್ಪಿಕೊಳ್ಳಬೇಕಾದ ವಿಚಿತ್ರಪರಿಸ್ಥಿತಿಗೆ ಸಿಲುಕಿಕೊಳ್ಳಬೇಕಾಗುತ್ತದೆ ಎಂಬುದನ್ನು ತೋರಿಸಿ ಆ ವಾದದ ಪೊಳ್ಳುತನವನ್ನು ನಿರೂಪಿಸಿರುವರು. ಕೊನೆಯಲ್ಲಿ ಪಕ್ಷ, ಸಪಕ್ಷ,

---

೧. 'ವಿಮತಂ ಮಿಥ್ಯಾ ದೃಶ್ಯತ್ವಾದ್ಯದಿತ್ಥಂ ತತ್ ತಥಾ ಯಥಾಸಂಪ್ರತಿಪನ್ನಮ್।' - ಇತ್ಯುಕ್ತೇ ಜಗತೋಽಭಾವಾದಾಶ್ರಯಾಸಿದ್ಧಃ ಪಕ್ಷಃ। ಅನಿರ್ವಚನೀಯಾಸಿದ್ಧೇರಪ್ರಸಿದ್ಧವಿಶೇಷಣಃ। ಸದಸದ್ವೈಲಕ್ಷಣ್ಯೇ ಮಿಥ್ಯಾತ್ವೇ ಸಿದ್ಧಸಾಧನತಾ। ದೃಶ್ಯತ್ವಾಭಾವಾದಸಿದ್ಧೋ ಹೇತುಃ। ಅನಿರ್ವಚನೀಯಾಸಿದ್ಧೇರೇವ। ಅನಿರ್ವಚನೀಯಾಸಿದ್ಧೇರೇವ ಸಪಕ್ಷಾಭಾವಾದ್ವಿರುದ್ಧಃ। ಆತ್ಮನೋಽಪಿ ದೃಶ್ಯತ್ವಾದನೈಕಾಂತಿಕಃ। ಜಗತೋಽಭಾವೇಽನುಮಾನಸ್ಯಾಪ್ಯಭಾವ ಇತಿ ತರ್ಕಬಾಧಿತತ್ವೇನಾನಧ್ಯವಸಿತಃ। ಪ್ರತ್ಯಕ್ಷಾದಿವಿರುದ್ಧತ್ವಾದ್ವಿಶ್ವಂ ಸತ್ಯಮಿತ್ಯಾದಿವಾಕ್ಯವಿರುದ್ಧತ್ವಾಚ್ಚ ಕಾಲಾತ್ಯಯಾಪದಿಷ್ಟಃ। ರಜತಂ ದೃಷ್ಟಮಿತಿಭ್ರಮಮಾತ್ರತ್ವಾತ್, ವಿಮತಂ ಸತ್ಯಂ ದೃಶ್ಯತ್ವಾತ್, ಆತ್ಮವದಿತ್ಯಪಿ ಪ್ರಯೋಜ್ಯತ್ವಾತ್ ಪ್ರಕರಣಸಮಃ। ವಿಮತಂ ಸತ್ಯಂ ಪ್ರಮಾಣದೃಷ್ಟತ್ವಾದ್ಯದಿತ್ಥಂ ತತ್ ತಥಾ ಯಥಾತ್ಮೇತಿ ಪ್ರಯೋಗಾತ್ ಸಪ್ರತಿಸಾಧನಃ। ಶುಕ್ತಿರಜತಸ್ಯಾಪ್ಯನಿರ್ವಚನೀಯತ್ವಾಭಾವಾತ್ ಸಾಧ್ಯವಿಕಲೋ ದೃಷ್ಟಾಂತಃ । ಉಕ್ತಪ್ರಕಾರೇಣ ದೃಶ್ಯತ್ವಾಭಾವಾತ್ ಸಾಧನವಿಕಲಶ್ಚ। ಪ್ರಮಾಣವಿರುದ್ಧತ್ವಮುಪಾಧಿಃ।

ವಿಪಕ್ಷ, ದೃಷ್ಟಾಂತ, ಹೇತು ಮೊದಲಾದ ಪಾರಿಭಾಷಿಕ ಪದಗಳ ಲಕ್ಷಣಗಳನ್ನು ವಿವರಿಸಿರುವರು.[೧]

ಯೋ ದೃಶ್ಯತೇ ಸದಾನಂದನಿತ್ಯವ್ಯಕ್ತಚಿದಾತ್ಮನಾ ।
ನಿರ್ದೋಷಾಖಿಲಕಲ್ಯಾಣಗುಣಂ ವಂದೇ ರಮಾಪತಿಮ್ ॥

- ಎಂಬುದು ಇದರ ಅಂತ್ಯಮಂಗಲಶ್ಲೋಕ. ಇದರಲ್ಲಿ ಪರಬ್ರಹ್ಮನಾದ ಶ್ರೀಹರಿಯು ಸಕಲಶಾಸ್ತ್ರಪ್ರತಿಪಾದ್ಯನಾಗಿ, ರಮಾಬ್ರಹ್ಮಾದಿಗಳಿಂದ ಸಾಕ್ಷಾತ್ಕರಿಸಲ್ಪಡುವವನಾಗಿ ಇರುವುದರಿಂದ ಅವನು ಯಥೋಚಿತನಾಗಿ ದೃಶ್ಯನೇ ಆಗಿರುವನು ಎಂದು ತಿಳಿಸುವ ಮೂಲಕ ದೃಶ್ಯವಾದದ್ದು ಮಿಥ್ಯೆ ಎನ್ನುವುದಾದರೆ ಪರಬ್ರಹ್ಮನೇ ಮಿಥ್ಯೆಯಾಗುವನು ಎಂಬ ಬಾಧಕವನ್ನು ಸೂಚಿಸುತ್ತ ಪ್ರಮಾಣದೃಶ್ಯವಾದದ್ದು ಪಾರಮಾರ್ಥಿಕ ಎಂಬ ಪ್ರಮೇಯವನ್ನು ನಿರೂಪಿಸಿರುವರು.

ಖಂಡನತ್ರಯಗಳು ಅದ್ವೈತದ ವಿಮರ್ಶೆಗೆ ಮೀಸಲಾಗಲು ಕಾರಣ ಅದು ಇತರ ಸಕಲ ಮತಗಳನ್ನು ಹಿಂದಕ್ಕೆ ಹಾಕಿ ವಿಜೃಂಭಿಸಿ ತೊಡಗಿದ್ದೇ ಆಗಿದೆ. ಅದಕ್ಕೆ ಉತ್ತರವಾಗಿ ಹೊರಟ ವಿಶಿಷ್ಟಾದ್ವೈತವು ಸಹ ಅದರ ಪ್ರಭಾವದಿಂದ ಮುಕ್ತವಾಗಲು ಸಾಧ್ಯವಾಗಲಿಲ್ಲ ಎನ್ನಲು ವಿಶಿಷ್ಟಾದ್ವೈತ ಎಂಬ ಅದರ ಹೆಸರೇ ಸಾಕ್ಷಿ. ಎಂದರೆ ಅದ್ವೈತಮತದ ವಿಮರ್ಶೆ ಉಳಿದೆಲ್ಲ ಮತಗಳ ವಿಮರ್ಶೆಗೂ ದಾರಿದೀಪವಾಗಿದೆ ಮತ್ತು ತತ್ತ್ವವಾದಕ್ಕೆ ಮಾಯಾವಾದವಾಗಿ ದ್ವೈತಮತಕ್ಕೆ ಅದ್ವೈತ ಮತವಾಗಿ ನೇರವಾಗಿ ಅದು ಪ್ರಬಲ ವಿರೋಧಿಯಾಗಿದೆ ಎಂಬುದನ್ನು ತೋರಿಸುತ್ತದೆ. ಈ ದೃಷ್ಟಿಯಿಂದ ವಿವೇಚಿಸಿದಾಗ ಅದ್ವೈತಮತದ ವಿಮರ್ಶೆಗೆ ಆಚಾರ್ಯ ಶ್ರೀಮಧ್ವರು ವಿಶೇಷ ಮಹತ್ತ್ವ ಕೊಟ್ಟಿದ್ದರ ಹಿನ್ನೆಲೆಯು ಸ್ಪಷ್ಟಪಡುತ್ತದೆ.

ಖಂಡನತ್ರಯಗಳಿಗೆ ಶ್ರೀಪದ್ಮನಾಭತೀರ್ಥರ ಶ್ರೀಜಯತೀರ್ಥರ ಟೀಕೆಗಳು, ಶ್ರೀಶ್ರೀನಿವಾಸತೀರ್ಥರ ಟಿಪ್ಪಣಿಗಳು ತುಂಬಾ ಪ್ರಸಿದ್ಧ. ಶ್ರೀವ್ಯಾಸರಾಜರು ಶ್ರೀಜಯತೀರ್ಥರ ಈ ಟೀಕೆಗಳಿಗೆ 'ಮಂದಾರಮಂಜರೀ' ಎಂಬ ಸ್ವತಂತ್ರಗ್ರಂಥದಂತಹ ಅಪೂರ್ವಟಿಪ್ಪಣಿಗಳನ್ನು ರಚಿಸಿದ್ದು ಅವೆಲ್ಲ ಅವರ ನ್ಯಾಯಾಮೃತಗ್ರಂಥದ ವಿಶೇಷ ಅಧ್ಯಯನಕ್ಕೆ ಪೂರಕವಾಗಿವೆ. ಮಿಥ್ಯಾತ್ವಾನುಮಾನಖಂಡನಕ್ಕೆ ಶ್ಲೋಕರೂಪದ ಪ್ರಾಚೀನಟೀಕೆಯೊಂದಿದ್ದು ಅದು ಪ್ರಾಯಃ ಶ್ರೀನಾರಾಯಣಪಂಡಿತರದ್ದು ಎನ್ನಲಾಗುತ್ತದೆ.

ಈ ಖಂಡನತ್ರಯ ಮತ್ತು ತತ್ತ್ವನಿರ್ಣಯಗಳನ್ನು ಆಧರಿಸಿ ಶ್ರೀಜಯತೀರ್ಥರು ರಚಿಸಿದ 'ವಾದಾವಲೀ' ಎಂಬ ಗ್ರಂಥ ಅದ್ವೈತಮತದ ವಿಮರ್ಶೆಯನ್ನು ವ್ಯಾಪಕವಾಗಿ ಮಾಡುವ ಅಪೂರ್ವ ಕೃತಿ. ಇದರ ಆಧಾರದ ಮೇಲೆ ಬಂದದ್ದು ಶ್ರೀವಿಷ್ಣುದಾಸಾ-

೧. ಸಾಧ್ಯಧರ್ಮವಿಶಿಷ್ಟಃ ಪಕ್ಷಃ । ಸಾಧ್ಯಸಮಾನಧರ್ಮವಿಶಿಷ್ಟಃ ಸಪಕ್ಷಃ । ಸಾಧ್ಯವಿಪರೀತಧರ್ಮ-ವಿಶಿಷ್ಟೋ ವಿಪಕ್ಷಃ। ಪಕ್ಷವಚನಂ ಪ್ರತಿಜ್ಞಾ। ಲಿಂಗಂ ಹೇತುಃ। ನಿದರ್ಶನಂ ದೃಷ್ಟಾಂತಃ॥

ಚಾರ್ಯರ 'ವಾದರತ್ನಾವಲೀ'. ಶ್ರೀವ್ಯಾಸರಾಜರ 'ನ್ಯಾಯಾಮೃತ'ವು, ಆಚಾರ್ಯರ ಆಕ್ಷೇಪಗಳಿಗೆ ಅದ್ವೈತಿಗಳು ಕೊಡಬಹುದಾದ ಸಕಲವಾದಗಳ ಸಮಗ್ರ ಪರಿಶೀಲನೆಗೆ ಮೀಸಲಾಗಿರುವ ಉದ್ಗ್ರಂಥ; ಅದನ್ನು ಆಧರಿಸಿಯೇ ವ್ಯಾಪಕವಾದ ಖಂಡನ ಮಂಡನ ಸಾಹಿತ್ಯ ಅನಂತರದ ಕಾಲದಲ್ಲಿ ರಚಿತವಾಗಿದೆ. ಇಂದಿಗೂ ದ್ವೈತಾದ್ವೈತಗಳ ವಾಕ್ಯಾರ್ಥಗೋಷ್ಠಿಗಳು ಈ ಕಾರಣಕ್ಕಾಗಿ ಅತ್ಯಂತ ರೋಚಕ. ಮೊಟ್ಟಮೊದಲ ಬಾರಿಗೆ ದಾರ್ಶನಿಕಪ್ರಪಂಚದಲ್ಲಿ ಅದ್ವೈತಮತಕ್ಕೆ ಅತ್ಯಂತ ಪ್ರಬಲವಾದ ಪ್ರತಿಪಕ್ಷವಾಗಿ ರೂಪುಗೊಂಡಿದ್ದು ಆಚಾರ್ಯ ಶ್ರೀಮಧ್ವರ ದ್ವೈತವಾದ ಅಥವಾ ತತ್ತ್ವವಾದ. ಅವರ ಅಂತಹ ವಾದಸರಣಿಯನ್ನು ಸೆರೆಹಿಡಿಯುವ ಪ್ರಕರಣಗ್ರಂಥಗಳು ಖಂಡನತ್ರಯ, ತತ್ತ್ವನಿರ್ಣಯ ಹಾಗೂ ತತ್ತ್ವೋದ್ಯೋತಗಳು.

೮. ತತ್ತ್ವೋದ್ಯೋತ

ಸುಮಧ್ವವಿಜಯ ಮತ್ತು ಅದರ ಭಾವಪ್ರಕಾಶಿಕೆಗಳಲ್ಲಿ ತತ್ತ್ವೋದ್ಯೋತ ಗ್ರಂಥದ ರಚನೆಯ ಹಿನ್ನೆಲೆಯು ನಿರೂಪಿತವಾಗಿದೆ (೧೨/೫೧-೫೩) :

> ''ಆನಂದತೀರ್ಥಪಾರ್ಥಸ್ಯ ಭಯಾದಾಸ್ತೇ ಸ ಪೃಷ್ಠತಃ ।
> ಪುರತಃ ಸ್ಥಾಪಯಿತ್ವಾನ್ಯಾನ್ ಪದ್ಮತೀರ್ಥಜಯದ್ರಥಃ ॥' ಇತಿ ।
>
> ''ವಿಷ್ಣುಮಂಗಲದೇಶಾಂತೇ ಹೃತಾಂ ಕವಲಿಕಾಂ ನಿಜಾಮ್ ।
> ಶ್ರುತ್ವಾ ರಜತಪೀಠಸ್ಥ ಏಕವಾಟಂ ಯಯೌ ಗುರುಃ ॥
> ತತ್ರಸ್ಥಂ ಚೋಲಜಂ ದೃಷ್ಟ್ವಾ ಸ್ವಶಿಷ್ಯೈಸ್ತಂ ರುರೋಧ ಸಃ ।
> ತ್ವಚ್ಛಾಸ್ತ್ರಂ ಸಾಧಯಸಿ ಚೇತ್ ಪ್ರಾಶ್ನಿಕಾನಾಹ್ವಯೇತ್ಯಸೌ ॥
> ಮಧ್ವಸ್ತೇನೋದಿತಃ ಪ್ರೋಚೇಽತ್ರಾಹ್ವಯೇಚ್ಛಸಿ ಚೇದಿತಿ ।
> ಕೃತಕೃತ್ಯೋಽಸ್ಮಿ ಮೇ ಶಾಸ್ತ್ರಂ ವ್ಯಾಪ್ತಮಿತ್ಯುದಿತೇಽಮುನಾ ॥
> ಪ್ರೋಚೇ ಮಧ್ವೋ ಮಮ ವ್ಯಾಪ್ತಂ ತ್ರೈಲೋಕ್ಯೇ ಶಾಸ್ತ್ರಮಿತ್ಯಮುಮ್ ।
> ಅಂತರ್ಯಾಮೀ ಹಂತ ವೇದ ತವೇದಂ ಶಾಠ್ಯಭಾಷಿತಮ್ ॥
> ಇತಿ ಬ್ರುವಾಣಂ ತಂ ಪ್ರೋಚೇ ಮಧ್ವಃ ಸ್ಮಿತಮುಖಾಂಬುಜಃ ।
> ವ್ಯಾಪ್ತಂ ತ್ವಯ್ಯೇವ ಮಚ್ಛಾಸ್ತ್ರಂ ಕಿಮುತಾನ್ಯತ್ರ ಬಾಲಿಶ ॥
> ಅಂತರ್ಯಾಮೀ ನಿಯಮ್ಯಶ್ಚ ತ್ವಯೈವಾಂಗೀಕೃತಾವಿತಿ ।
> ಮಿಲಿತೇಷ್ವಥ ಸಭ್ಯೇಷು ಪ್ರಾಶ್ನಿಕೇಷ್ವಭವತ್ ಕಥಾ ॥
> ತತ್ರ ಮಾಧ್ವಉಪನ್ಯಾಸೋ ಗ್ರಂಥೋ ವಾದಾಹ್ವಯೋಽಭವತ್''॥

ಶ್ರೀಜಯತೀರ್ಥರ ತತ್ತ್ವೋದ್ಯೋತ ಟೀಕೆಯ ಕೊನೆಯಲ್ಲೂ ಇದರ ರಚನೆಗೆ ಸಂಬಂಧಿಸಿದ ವಿವರ ಬಂದಿದೆ :

ಏವಮತ್ರ ಕಥಾಂ ಕಥಯಂತಿ । ಪುಂಡರೀಕವನಾಭಿಧಾನೇನ ಮಾಯಿನಾ ಸಹ ಭಗವತ ಆಚಾರ್ಯಸ್ಯ ಕಥಾಪ್ರಸಕ್ತೌ ಸಭ್ಯಸಭಾಪತಿಪ್ರಾಶ್ನಿಕೇಷು ಮಿಲಿತೇಷು ಆಚಾರ್ಯ-

ದರ್ಶನಮಾತ್ರೇಣ ಭೀತಃ ಪ್ರತಿವಾದೀ ತೂಷ್ಣೀಂ ಬಭೂವ । ತದಾಽಽಚಾರ್ಯೇಣ ತಸ್ಯಾಕರ್ಣ್ಯಯತಃ ಸತಃ ಮಾಯಾಮತನಿಕೃಂತನೋಪನ್ಯಾಸೋಽಯಂ ನಿರ್ಮಿತಃ । ತಚ್ಛ್ರವಣೇನಾತ್ಯಂತತ್ರಸ್ತಹೃದಯೋಽಸೌ ಪಲಾಯಿತವಾನ್ ತದಾಽಽಚಾರ್ಯಶಿಷ್ಯಾಃ ಪ್ರತಿವಾದಿಭಯಂಕರಂ ಭಗವತಂಮಾಚಾರ್ಯಂ ತದಭೀಷ್ಟದೇವತಾಂ ನರಹರಿಂ ಚೋಪಶ್ಲೋಕಯಾಂ ಬಭೂವುಃ । ತೇ ಚ ಶ್ಲೋಕಾಃ ಅವಿಚ್ಛಿನ್ನಪ್ರವೃತ್ತಯೇ ಶಿಷ್ಯೈರರ್ಥಿತೇನ ಭಗವತಾ ಪ್ರಕರಣಾಂತೇ ನಿವೇಶಿತಾ ಇತಿ । ಅತ ಏವ ತೇ ಜಾಹ್ನವೀಜಲಾನುಗತಯಾಮುನೋದಕವತ್ ಪ್ರಕರಣಾಂತರ್ಗತಾ ಏವ । ಅನೇಕಕರ್ತೃಕತ್ವಾನ್ನ ತೇಷಾಮನ್ಯೋನ್ಯಸಂಗತಿಃ ।

ಶ್ರೀಮದಾನಂದತೀರ್ಥರ ಹಿರಿಮೆಯನ್ನು ಸಹಿಸಿಕೊಳ್ಳಲಾಗದ ಮಾಯಾವಾದಿಗಳಿಂದ ಪದ್ಮತೀರ್ಥ ಮತ್ತು ಪುಂಡರೀಕಪುರಿಯೆಂಬ ಇಬ್ಬರು ಮಾಯಾವಾದಿಗಳ ನೇತೃತ್ವದಲ್ಲಿ ಆಚಾರ್ಯರ ಗ್ರಂಥ ಭಂಡಾರವನ್ನು ಅಪಹರಿಸಲು ಯೋಜನೆಯೊಂದು ರೂಪಿತವಾಗುತ್ತದೆ. ಅವರ ಗ್ರಂಥಗಳನ್ನು ಅಪಹರಿಸುವ ಮೂಲಕ ಆಚಾರ್ಯರನ್ನು ಪರಾಭವಗೊಳಿಸಬಹುದೆಂಬ ಭ್ರಮೆ ಅದಕ್ಕೆ ಕಾರಣ. ಅದರಂತೆ ಗ್ರಂಥಾಪಹರಣ ಕಾರ್ಯವನ್ನು ಅವರು ಮಾಡಿಯೂ ಬಿಡುವರು. ಆ ವಿಚಾರ ತಿಳಿಯುತ್ತಲೇ ಉಡುಪಿಯಿಂದ ಆಚಾರ್ಯರು ಆಗಮಿಸಿ ಏಕವಾಟವೆಂಬಲ್ಲಿ ಪದ್ಮತೀರ್ಥನನ್ನು ಹಿಡಿದು ನಿಲ್ಲಿಸುವರು. ಆತನು ''ನಿಮ್ಮ ಶಾಸ್ತ್ರವನ್ನು ಸಾಧಿಸಬಯಸುವಿರಾದಲ್ಲಿ ಪ್ರಾಶ್ನಿಕರನ್ನು ಕರೆಸಿರಿ'' ಎಂದನು. ಅದಕ್ಕೆ ಅವರು ''ಬೇಕಿದ್ದಲ್ಲಿ ನೀನೇ ಅವರನ್ನು ಕರೆಸು'' ಎನ್ನಲು ಅವನು ''ನಾನು ಕೃತಕೃತ್ಯ; ನನ್ನ ಶಾಸ್ತ್ರ ಎಲ್ಲೆಡೆ ವ್ಯಾಪಿಸಿದೆ'' ಎಂದು ನುಡಿದನು. ಅದಕ್ಕೆ ಆಚಾರ್ಯರು ''ನಿನ್ನ ಶಾಸ್ತ್ರ ಇಲ್ಲಿ ಮಾತ್ರ ವ್ಯಾಪಿಸಿರಬಹುದು, ನಮ್ಮ ಶಾಸ್ತ್ರ ಮೂರು ಲೋಕಗಳಲ್ಲೂ ಹಬ್ಬಿದೆ'' ಎಂದರು. ಅದಕ್ಕೆ ಅವನು ''ನಿಮ್ಮದು ಶಾಠ್ಯದ ಮಾತು ಎಂಬುದನ್ನು ನನ್ನ ಅಂತರ್ಯಾಮಿ ಬಲ್ಲನು'' ಎನ್ನಲು, ತತ್‌ಕ್ಷಣವೇ ಆಚಾರ್ಯರು ನಸುನಗುತ್ತಾ ನುಡಿದರಂತೆ, ''ಎಲವೋ! ನನ್ನ ಶಾಸ್ತ್ರ ನಿನ್ನಲ್ಲೂ ಹಬ್ಬಿದೆ, ಅಂತರ್ಯಾಮಿ ಒಬ್ಬನಿರುವನೆಂಬುದನ್ನು ನೀನೇ ಒಪ್ಪಿದೆಯಲ್ಲವೇ?'' ಎಂದಾಗ ಅವನಿಗೆ ಪರಾಜಿತನಾಗದೆ ಬೇರೆ ದಾರಿಯೇ ಇರಲಿಲ್ಲ. ಮುಂದೆ ಪ್ರಾಶ್ನಿಕರು ಆಗಮಿಸಿ ಶಾಸ್ತ್ರ ಚರ್ಚೆ ನಡೆಯಿತು. ನಿರುತ್ತರನಾದ ಪದ್ಮತೀರ್ಥ ಮತ್ತು ಪುಂಡರೀಕಪುರಿ ಇಬ್ಬರೂ ತಮ್ಮ ಅನುಯಾಯಿಗಳೊಂದಿಗೆ ಪಲಾಯನ ಮಾಡಿದರು. ಆ ಸಭೆಯಲ್ಲಿ ಆಚಾರ್ಯರು ಮಂಡಿಸಿದ ವಾದಸರಣಿಯೇ ತತ್ತ್ವೋದ್ಯೋತ ಗ್ರಂಥ; 'ವಾದ' ಎಂಬುದು ಇದರ ನಾಮಾಂತರ.

ಆಗ ಶ್ರೀಮದಾಚಾರ್ಯರ ಶಿಷ್ಯರು ಪ್ರತಿವಾದಿಭಯಂಕರರಾದ ಆಚಾರ್ಯರನ್ನು ಅವರ ಇಷ್ಟದೇವತೆಯಾದ ನರಸಿಂಹದೇವರನ್ನು ಸ್ತುತಿಸುವ ಶ್ಲೋಕಗಳನ್ನು ರಚಿಸಿದರು. ಅವರ ಪ್ರಾರ್ಥನೆಯಂತೆ ಅವರ ಶ್ಲೋಕಗಳನ್ನು ಶ್ರೀಮದಾಚಾರ್ಯರು ತಮ್ಮ ತತ್ತ್ವೋದ್ಯೋತ ಗ್ರಂಥದ ಕೊನೆಯಲ್ಲಿ ಅಂತರ್ಗತವಾಗುವಂತೆ ಅನುಗ್ರಹಿಸಿದರು.

ಆ ಶ್ಲೋಕಗಳು ಹೀಗಿವೆ :

ಆನಂದತೀರ್ಥಪುಂಸಿಂಹೋ ಮಾಯಾವಾದಿದಿತೇಃಸುತಾನ್ ।
ವಿದಾರ್ಯ ಯುಕ್ತಿನಖರೈರಪ್ರತೀಪೋ ವಿಭಾಸತೇ ॥
ಪಲಾಯಧ್ವಂ ಪಲಾಯಧ್ವಂ ತ್ವರಯಾ ಮಾಯಿದಾನವಾಃ ।
ಸರ್ವಜ್ಞಹರಿರಾಯಾತಿ ತರ್ಕಾಗಮದರಾರಿಧೃತ್ ॥
ದ್ರವತ ದ್ರವತಾಶು ಮಾಯಿನಃ ಪ್ರವಿಶಧ್ವಮತಂದ್ರಿತಾ ಗುಹಾಃ ।
ಕಮಲಾರಮಣಾಂಬರಾಶ್ರಯಃ ಸಮುದೇತ್ಯಖಿಲಜ್ಞಭಾಸ್ಕರಃ ॥
ನೃಹರಿಃ ಸಕಲಜ್ಞನಾಮಕಃ ಸಮುಪೈತಿ ಹಿ ಮಾಯಿದಾನವಾನ್ ।
ಪ್ರಪಲಾಯನಮತ್ರ ತತ್ ಕ್ಷಮಂ ತ್ವರಯಾ ವಸತಿರ್ಗುಹಾಸು ಚ ॥
ಜಯತ್ಯಾನಂದತೀರ್ಥೇಷ್ಟದೇವತಾ ನರಕೇಸರೀ ।
ವಿಪಾಟಿತಾಜ್ಞಾನತಮಃಕವಾಟಾತ್ಯುರುಹುಂಕೃತಃ ॥
ಜಯತ್ಯಮಿತಪೌರುಷಃ ಸ್ವಜನತೇಷ್ಟಚಿಂತಾಮಣಿಃ ।
ಅಜೇಶಮುಖವಂದಿತೋ ಗುಣಗುಣಾರ್ಣವಃ ಶ್ರೀಪತಿಃ ॥
ಸರ್ವಜ್ಞಸನ್ಮುನೀಂದ್ರೋಚ್ಚಸನ್ಮನಃಪಂಕಜಾಲಯಃ ।
ಅಜಿತೋ ಜಯತಿ ಶ್ರೀಶೋ ರಮಾಬಾಹುಲತಾಶ್ರಯಃ ॥

[೧]ಅದ್ವೈತಿಗಳು ಜೀವೇಶ್ವರಲ್ಲಿನ ಭೇದವನ್ನು ವ್ಯಾವಹಾರಿಕ ಎನ್ನುವರು; ಅಂತಹ ವ್ಯಾವಹಾರಿಕ ಎಂಬುದಕ್ಕೆ ಅನಿರ್ವಚನೀಯ, ಸದಸದ್ವಿಲಕ್ಷಣ ಎಂದು ಅವರ ಅರ್ಥ. ಸದಸದ್ವಿಲಕ್ಷಣವೆಂದರೆ ಸತ್ಯವೂ ಅಲ್ಲದೆ ಅಸತ್ಯವೂ ಅಲ್ಲದೆ ಅವೆರಡರಿಂದ ಭಿನ್ನವಾದುದು ಎಂಬುದು ಅವರ ವಿವರಣೆ. ಇಂತಹ ಅನಿರ್ವಚನೀಯವೆಂಬ ಪ್ರಕ್ರಿಯೆಯನ್ನು ಪ್ರತ್ಯಕ್ಷ, ಅನುಮಾನ ಮತ್ತು ಆಗಮ ಎಂಬ ಯಾವ ಪ್ರಮಾಣವೂ ಒಪ್ಪುವುದಿಲ್ಲ. "ನಾಸದಾಸೀನ್ನೋ ಸದಾಸೀತ್" ಎಂಬ ನಾಸದೀಯ ಸೂಕ್ತದ ಮಂತ್ರದಲ್ಲೂ ಅನಿರ್ವಚನೀಯ ಪ್ರಸ್ತಾಪವಿಲ್ಲ; ಎಂದ ಮೇಲೆ ಭೇದ ಪಾರಮಾರ್ಥಿಕವಾದುದು ಎಂದೇ ಸಿದ್ಧವಾಗುವುದು ಎಂದು ನಿರೂಪಿಸಿರುವರು.

ಜಗತ್ತು ಅನಿರ್ವಚನೀಯ ಎಂದು ಸಾಧಿಸಲು ಅದ್ವೈತಿಗಳು ನೀಡುವ ದೃಶ್ಯತ್ವ, ಜಡತ್ವ ಮತ್ತು ಪರಿಚ್ಛಿನ್ನತ್ವ ಎಂಬ ಮೂರು ಹೇತುಗಳಲ್ಲಿ ದೃಶ್ಯತ್ವಹೇತುವನ್ನು ಮಾತ್ರ ಪ್ರಪಂಚಮಿಥ್ಯಾತ್ವಾನುಮಾನಖಂಡನದಲ್ಲಿ ನಿರಾಕರಿಸಿದ್ದರೆ, ಈ ಕೃತಿಯಲ್ಲಿ ಆ ಮೂರೂ ಹೇತುಗಳನ್ನು ಶ್ರೀಮದಾಚಾರ್ಯರು ವಿವರವಾಗಿ ನಿರಾಕರಿಸಿರುವರು. ಜಗತ್ತು ಮಿಥ್ಯೆಯೆಂಬುದು ಪ್ರತ್ಯಕ್ಷಕ್ಕೆ ವಿರುದ್ಧವಾದುದು. ಜಗತ್ಸತ್ಯತ್ವವನ್ನು ಸಾಧಿಸುವ ಪ್ರತ್ಯಕ್ಷವು

---

೧. ವಿಮತೋ ಭಿನ್ನೋ ಮುಕ್ತತ್ವಾದ್ಯದಿತ್ಥಂ ತತ್ ತಥಾ ಯಥಾ ಸಂಪ್ರತಿಪನ್ನಃ । ನ ಚ ಭೇದೇ ವಿಕಲ್ಪೋ ಯುಜ್ಯತೇ । ಅನಿರ್ವಚನೀಯಸ್ಯ ಸರ್ವತ್ರಾಪ್ರಸಿದ್ಧತ್ವಾದೇವ । ಶಶವಿಷಾಣಂ ಗೋವಿಷಾಣಂ ವೋಚ್ಯತ ಇತಿವತ್ । ನ ಚಾನಿರ್ವಚನೀಯೇ ಕಿಂಚಿನ್ಮಾನಮ್ । ಮಿಥ್ಯಾಶಬ್ದೋಽನಿರ್ವಚನೀಯಂ ವದತೀತ್ಯತ್ರ ಚ । ಅನುಮಾನಸ್ಯ ಚಾಪ್ರಸಿದ್ಧವಿಶೇಷಣಃ ಪಕ್ಷಃ । ನ ಚ ಧೂಮತ್ವವನ್ಮಿಥ್ಯಾತ್ವಮಿತ್ಯುಭಯಸಂಪ್ರತಿಪನ್ನಂ ಸಾಮಾನ್ಯಮಸ್ತಿ । ನ ಚ ಬಾಷ್ಪಾರೋಪಿತಧೂಮೇನ ಧೂಮವತ್ತ್ವಂ ವ್ಯಭಿಚರತಿ ।

ಯಾವ ದೋಷವೂ ಇಲ್ಲದ ಪಟುಪ್ರತ್ಯಕ್ಷವಾಗಿದೆ; ''ನಾಸತೋಽದೃಷ್ಟತ್ವಾತ್'', ''ನಾಭಾವ ಉಪಲಬ್ಧೇಃ'', ''ವೈಧರ್ಮ್ಯಾಚ್ಚ ನ ಸ್ವಪ್ನಾದಿವತ್'' - ಎಂಬುದಾಗಿ ಬ್ರಹ್ಮಸೂತ್ರಗಳಲ್ಲೂ ಜಗತ್ತಿನ ಮಿಥ್ಯಾತ್ವ ನಿರಾಕರಿಸಲ್ಪಟ್ಟಿದೆ ಎಂಬ ವಿಶೇಷಾಂಶ ಇದರಲ್ಲಿದೆ.

ಅನಿರ್ವಾಚ್ಯ, ಅಚಿಂತ್ಯ, ಋತ, ಅನೃತ, ಸತ್, ಅಸತ್ ಮೊದಲಾದ ಶಬ್ದಗಳಿಗೆ ಅದ್ಭುತ, ಅಚಿಂತ್ಯ, ಅತರ್ಕ್ಯ, ನಿತ್ಯ ಅನಿತ್ಯ, ಶುಭ, ಅಶುಭ ಮೊದಲಾದ ಅರ್ಥಗಳನ್ನು ಪೈಂಗಿಶ್ರುತಿ, ವ್ಯಾಸಸ್ಮೃತಿ ಮೊದಲಾದ ಆಕರಗಳಿಂದ ನೀಡಿರುವುದು ಇಲ್ಲಿಯ ವಿಶೇಷಗಳಲ್ಲೊಂದು :

'ಮೂರ್ತಂ ಸದಿತಿ ಸಂಪ್ರೋಕ್ತಮಮೂರ್ತಮಸದುಚ್ಯತೇ ।
ಮೂರ್ತಾಮೂರ್ತೇತರದ್ಬ್ರಹ್ಮ ನ ಸತ್ ತನ್ನಾಸದುಚ್ಯತೇ ॥' ಇತಿ ಪೈಂಗಿಶ್ರುತಿಃ ॥

'ಅದ್ಭುತತ್ವಾದನಿರ್ವಾಚ್ಯಂ ಬ್ರಹ್ಮ ಚಿಚ್ಚೇತ್ಯಮೇವ ಚ ।
ಅಚಿಂತ್ಯಂ ತತ ಏವೈತದತರ್ಕ್ಯಾಜ್ಞೇಯಮೇವ ಚ ।
ಋಗತಾವಿತಿ ಧಾತೋಸ್ತು ಪೂರ್ವಾವಗತವತ್ ಸದಾ ।
ಸ್ಥಿತೇರ್ಬ್ರಹ್ಮರ್ತಮಿತ್ಯುಕ್ತಮನೃತಂ ಪರಿಣಾಮತಃ ।
ಪ್ರಕೃತಿಪ್ರಾಕೃತಂ ಪ್ರೋಕ್ತಮಸತ್ ತದಶುಭತ್ವತಃ ।
ಅಸತಾಂ ಬುದ್ಧಿಗಮ್ಯತ್ವಾದಸತ್ಯಮಿತಿ ಚೋಚ್ಯತೇ ।
ನಿಯಮೇನ ಬಹಿಶ್ಚಿತ್ತಾಸ್ತೇ ಸಂತೋ ಬ್ರಹ್ಮಣಿ ಸ್ಥಿತಾಃ ।
ವಿಶ್ವಂ ಸತ್ಯಂ ವಶೇ ವಿಷ್ಣೋರ್ನಿತ್ಯಮೇವ ಪ್ರವಾಹತಃ ।
ನ ಕ್ವಾಪ್ಯನೀದೃಶಂ ವಿಶ್ವಂ ತತ್ತತ್ಕಾಲಾನುಸಾರತಃ ।
ಅಸತ್ಯಮಪ್ರತಿಷ್ಠಂ ಯೇ ಜಗದಾಹುರನೀಶ್ವರಮ್ ।
ತ ಆಸುರಾಃ ಸ್ವಯಂ ನಷ್ಟಾ ಜಗತಃ ಕ್ಷಯಕಾರಿಣಃ' ಇತ್ಯಾದಿ ವ್ಯಾಸಸ್ಮೃತೌ ॥

''ಈ ಸೂತ್ರಗಳಲ್ಲಿ ಬೌದ್ಧಮತದ ನಿರಾಸವಿದೆ; ಇವು ನಮಗೆ ಸಂಬಂಧಿಸಿದ್ದಲ್ಲ'' ಎಂದು ಅದ್ವೈತಿಗಳು ಹೇಳುವಂತಿಲ್ಲ, ಏಕೆಂದರೆ ಮಾಯಾವಾದಕ್ಕೂ ಬೌದ್ಧರ ಶೂನ್ಯವಾದಕ್ಕೂ ಯಾವುದೇ ಮುಖ್ಯ ವ್ಯತ್ಯಾಸವೂ ಇಲ್ಲ.

ಜಗತ್ತು ಬಾಧ್ಯವಾದ್ದರಿಂದ ಸತ್ಯವಲ್ಲ; ಪ್ರತೀತವಾದ್ದರಿಂದ ಅಸತ್ಯವೂ ಅಲ್ಲ. ಸದಸತ್ ಎಂದರೆ ವ್ಯಾಹತಿ. ಆದ್ದರಿಂದ ಸದಸದ್ವಿಲಕ್ಷಣ ಎಂಬುದು ಅದ್ವೈತಿಗಳು ಜಗತ್ತಿನ ಸದಸದ್ವಿಲಕ್ಷಣದ ಸಾಧನೆಗೆ ಕೊಡುವ ಅನುಮಾನ. ಇದನ್ನು ಶ್ರೀಮದಾಚಾರ್ಯರು ಜಗತ್ತು ಬಾಧ್ಯವಲ್ಲವಾದ್ದರಿಂದ ಸತ್ ಎನ್ನಿಸುತ್ತದೆ. ಅಸತ್ತಿಗೆ ಪ್ರತೀತಿ ಇಲ್ಲ ಎಂಬುದು ಸರಿಯಲ್ಲ. ಅಸತ್‌ನಿಂದ ವೈಲಕ್ಷಣ್ಯ ತಿಳಿಯಲು ಅಸತ್ತಿಗೆ ಪ್ರತೀತಿಯನ್ನು ಒಪ್ಪಿದಾಗ ಮಾತ್ರವೇ ಸಾಧ್ಯ. ಆದ್ದರಿಂದ ಈ ಅರ್ಥಾಪತ್ತಿಯು ಜಗತ್ತಿನ ಅನಿರ್ವಚನೀಯಕ್ಕೆ ಸಾಧಕವಲ್ಲ ಎಂದು ಅತ್ಯಂತ ಪರಿಣಾಮಕಾರಿಯಾಗಿ ಪ್ರತಿಪಾದಿಸಿರುವರು :

ನ ಚಾರ್ಥಾಪತ್ತ್ಯಾಽನಿರ್ವಚನೀಯಸಿದ್ಧಿಃ । ಅಸತಃ ಪ್ರತೀತಿಂ ವಿನಾಽಸದ್ವೈಲಕ್ಷಣ್ಯ-ಜ್ಞಾನಾನುಪಪತ್ತೇಃ । ನ ಚ ಬಾಧ್ಯಂ ಜಗದಿತ್ಯತ್ರ ಕಿಂಚಿನ್ಮಾನಮ್ । ಬಾಧ್ಯತ್ವಮಪಿ ಹಿ ತೇಷಾಂ ಮಿಥ್ಯಾ । ತಸ್ಯ ಚ ಮಿಥ್ಯಾತ್ವೇಽಬಾಧ್ಯತ್ವಮೇವ ಸತ್ಯಂ ಸ್ಯಾತ್।

ಭೌತಿಕವಿಚಾರಗಳ ಬಗ್ಗೆ ಪ್ರತ್ಯಕ್ಷವನ್ನು ನಿರಾಕರಿಸುವ ಸಾಮರ್ಥ್ಯ ಬೇರೆ ಯಾವುದೇ ಪ್ರಮಾಣಕ್ಕೆ ಇಲ್ಲದುದರಿಂದಲೂ, ಪ್ರತ್ಯಕ್ಷದಂತೆಯೇ ಇತರ ಪ್ರಮಾಣವೂ ಸಹ ಜಗತ್ಸತ್ಯತ್ವವನ್ನೇ ಸಮರ್ಥಿಸುವುದರಿಂದಲೂ ಜೀವೇಶ್ವರಭೇದ ಸತ್ಯ ಮತ್ತು ನಿತ್ಯ ಎಂಬುದೇ ಸಕಲಶಾಸ್ತ್ರಗಳ ಸಾರ.

ದೃಶ್ಯತ್ವಾತ್, ಜಡತ್ವಾತ್, ಪರಿಚ್ಛಿನ್ನತ್ವಾತ್ ಎಂಬ ಹೇತುಗಳಲ್ಲಿ ಅನುಮಾನಕ್ಕಿರುವ ಎಲ್ಲ ದೋಷಗಳು ಸಹ ಸ್ಫುಟವಾಗಿ ಕಂಡುಬರುತ್ತವೆ ಎಂಬುದನ್ನು ಪ್ರತಿಪಾದಿಸಿರುವರು: ದೃಶ್ಯತ್ವಾದ್ಯನುಮಾನೇಷ್ವಪ್ಯೇತ ಏವ ದೋಷಾಃ।

ಶ್ರೀಮದಾಚಾರ್ಯರು ಈ ಗ್ರಂಥದಲ್ಲಿ ಮಾಯಾವಾದ ಮತ್ತು ಶೂನ್ಯವಾದ-ಗಳಿಗಿರುವ ಸಾಮ್ಯವನ್ನು ಅವರವರ ಗ್ರಂಥಗಳ ಉಲ್ಲೇಖವನ್ನಿತ್ತೇ ಸಾಧಿಸಿ ತೋರಿಸಿರುವರು. ಆ ಮುಂಚೆಯೇ ಯಾದವಪ್ರಕಾಶ ಮೊದಲಾದವರು ಮಾಯಾವಾದಿಗಳನ್ನು ಪ್ರಚ್ಛನ್ನಬೌದ್ಧರೆಂದು ಕರೆದಿದ್ದರೂ, ಅವರಿಬ್ಬರಲ್ಲಿನ ಸಾಮ್ಯವನ್ನು ಅವರವರ ವಾಕ್ಯ-ಗಳಿಂದಲೇ ಸ್ಪಷ್ಟವಾಗಿ ಸಾಧಿಸಿ ತೋರಿಸಿದವರಲ್ಲಿ ಶ್ರೀಮಧ್ವಾಚಾರ್ಯರೇ ಮೊದಲಿಗರು.

ತನ್ನ ಮಾಯೆಯಿಂದ ನಿರ್ಮಿತವಾದ ವಸ್ತುವನ್ನು ಮಾಯೆ ನಿರ್ಮಾಣಮಾಡಿದ ಮಾಯಾವಿ ಸರ್ವಥಾ ಕಾಣಲಾರ - ಐಂದ್ರಜಾಲಿಕನು ತಾನು ಪ್ರೇಕ್ಷಕರಿಗೆ ತೋರಿಸುವ ವಸ್ತುವನ್ನು ಹೇಗೆ ಕಾಣಲಾರನೋ ಹಾಗೆ. ಆದರೆ ವಿಶ್ವನಿರ್ಮಾತೃವಾದ ಭಗವಂತ ಜಗತ್ತನ್ನು ಸ್ಪಷ್ಟವಾಗಿ ಕಾಣುತ್ತಾನೆ ಎಂದರೆ ಜಗತ್ತು ಸತ್ಯ ಎಂಬುದು ದೃಢಪಡುತ್ತದೆ. ಅದರಂತೆ ಎಲ್ಲವನ್ನೂ ಸಾಕ್ಷಾತ್ತಾಗಿ ನೋಡುವ ಸರ್ವಜ್ಞ ಮಿಥ್ಯಾವಸ್ತುವನ್ನು ಕಾಣಲಾರ. ಭಗವಂತನಾದರೂ ಸರ್ವವನ್ನು ಸದಾಕಾಲವೂ ಸಾಕ್ಷಾತ್ತಾಗಿಯೇ ನೋಡುವವನು. ಅವನು ವಿಶ್ವವನ್ನು ಸತ್ಯವೆಂದೇ ಕಾಣುತ್ತಿರುವುದರಿಂದ ಇದು ಸರ್ವಥಾ ಮಿಥ್ಯೆಯಾಗ-ಲಾರದು ಎಂಬ ವಿಶಿಷ್ಟವಾದ ವಾದಸರಣಿಯನ್ನು ಶ್ರೀಮದಾಚಾರ್ಯರು ಬ್ರಹ್ಮಾಂಡ ಪುರಾಣದ ಆಧಾರದಲ್ಲಿ ಇಲ್ಲಿ ಮುಂದಿಟ್ಟು ವಿಶ್ವಸತ್ಯತ್ವವನ್ನು ಸ್ಫುಟಪಡಿಸಿರುವರು :

> 'ನ ಚ ಮಾಯಾವಿನಾ ಮಾಯಾ ದೃಶ್ಯತೇ ವಿಶ್ವಮೀಶ್ವರಃ।
> ಸದಾ ಪಶ್ಯತಿ ತೇನೇದಂ ನ ಮಾಯೇತ್ಯವಧಾರ್ಯತಾಮ್ ॥
> ಅಪರೋಕ್ಷದೃಶೋ ಮಿಥ್ಯಾದರ್ಶನಂ ನ ಕ್ವಚಿದ್ಭವೇತ್ ।
> ಸರ್ವಾಪರೋಕ್ಷವಿದ್ವಿಷ್ಣುರ್ವಿಶ್ವದೃಕ್ ತನ್ನ ತನ್ಮೃಷಾ' ಇತಿ ಬ್ರಹ್ಮಾಂಡೇ।

ಸದಾಗಮಗಳಲ್ಲಿ ಪರಸ್ಪರ ವಿರೋಧ ಬಂದಾಗ ಪ್ರತ್ಯಕ್ಷಕ್ಕನುಗುಣವಾದ ಅರ್ಥವನ್ನು ಮಾಡಿ ಅಂತಹ ವಿರೋಧವನ್ನು ಪರಿಹರಿಸಿಕೊಳ್ಳಬೇಕು ಎಂಬ ಮಹತ್ತ್ವದ ವಿಚಾರವನ್ನು ಬ್ರಹ್ಮಪುರಾಣದ ಆಧಾರವನ್ನಿತ್ತು ನಿರೂಪಿಸಿರುವರು :

'ವಿರುದ್ಧವತ್ ಪ್ರತೀಯಂತ ಆಗಮಾ ಯತ್ರ ವೈ ಮಿಥಃ।
ತತ್ರ ದೃಷ್ಟಾನುಸಾರೇಣ ತೇಷಾಮರ್ಥೋಽನ್ವವೇಕ್ಷ್ಯತೇ' ಇತಿ ಬ್ರಾಹ್ಮವಚನಾಚ್ಚ।
ವ್ಯಾವಹಾರಿಕಸತ್ತ್ವಸ್ಯ ತೇನಾಪ್ಯಂಗೀಕ್ರಿಯಮಾಣತ್ವಾತ್।
'ಸತ್ಯಂ ತು ದ್ವಿವಿಧಂ ಪ್ರೋಕ್ತಂ ಸಾಂವೃತಂ ಪಾರಮಾರ್ಥಿಕಮ್।

ಈಶನು ಈಶನಲ್ಲ; ಜಗತ್ತು ಮಿಥ್ಯೆ; ಗುರುಗಳು ಪೂಜ್ಯರಲ್ಲ; ಒಬ್ಬನೇ ಆತ್ಮ; ಬ್ರಹ್ಮೈಕ್ಯವೇ ಮುಕ್ತಿ ಮೊದಲಾದವುಗಳು ಈ ಬಗೆಯ ವಾಕ್ಯಗಳು. ಇವುಗಳು ಬಹುಪ್ರಮಾಣದಿಂದ ಅಯಥಾರ್ಥ ಎಂದು ದೃಢಪಟ್ಟಿರುವ ವಿಚಾರಗಳು. ಆದ್ದರಿಂದ ಇವುಗಳಿಗೆ ಶಾಸ್ತ್ರಕ್ಕೆ ಅನುಗುಣವಾದ ಅರ್ಥವನ್ನು ಮಾಡಬೇಕೇ ಹೊರತು ಮೇಲ್ನೋಟದ ಅರ್ಥವನ್ನೇ ಅಲ್ಲ:

'ಈಶೋಽನೀಶೋ ಜಗನ್ಮಿಥ್ಯಾ ನ ಪೂಜ್ಯೋ ಗುರುರಿತ್ಯಪಿ।
ಏಕ ಆತ್ಮಾ ಪರಬ್ರಹ್ಮಭಾವೋ ಮುಕ್ತಿರಿತಿ ಹ್ಯಪಿ।
ಏವಮಾದಿ ವಿರುದ್ಧಾನಿ ವಚನಾನ್ಯಥ ಯುಕ್ತಯಃ।
ಪ್ರಮಾಣೈರ್ಬಹುಭಿರ್ಜ್ಞೇಯಾ ಆಭಾಸಾ ಇತಿ ವೈದಿಕೈಃ।

ಆದರೆ ಈ ಬಗೆಯ ಸಮನ್ವಯ ವೇದ ಹಾಗೂ ವೇದಾನುಸಾರಿಯಾದ ಸದಾಗಮಗಳಲ್ಲಿ ವಿರೋಧ ತೋರಿದಾಗ ಮಾತ್ರ ಅಗತ್ಯವೆನ್ನಿಸುವುದು. ಅವೈದಿಕ ಆಗಮುಗಳಲ್ಲಿ ಇಂತಹ ವಿರೋಧ ಕಂಡುಬಂದಾಗ ಆ ಆಗಮುಗಳನ್ನು ಅಪ್ರಮಾಣವೆಂದು ನಿರಾಕರಿಸಬೇಕೇ ಹೊರತು ಸಮನ್ವಯಿಸಿ ಅರ್ಥಮಾಡಿಕೊಳ್ಳಬೇಕಾದ ಅಗತ್ಯ ಇರುವುದಿಲ್ಲ:

ವೇದವೇದಾನುಸಾರೇಷು ವಿರೋಧೇಽನ್ಯಾರ್ಥಕಲ್ಪನಾ।
ಇತರಾಣಿ ವಿರುದ್ಧಾನಿ ಪ್ರಲಂಭಭ್ರಮಜಾನ್ಯಪಿ' ಇತಿ ವ್ಯಾಸಸ್ಮೃತಿಃ।

ಹೀಗೆ ತತ್ತ್ವೋದ್ಯೋತ ಅನೇಕ ಅಪೂರ್ವ ವಾದಸರಣಿಗೆ ನೆಲೆ ಎನ್ನಿಸಿರುವ ವಿಶಿಷ್ಟಪ್ರಕರಣ. ಒಂದರ್ಥದಲ್ಲಿ ಇದು ಖಂಡನತ್ರಯಗಳ ವಿಸ್ತೃತರೂಪವಾದರೆ ಮತ್ತೊಂದರ್ಥದಲ್ಲಿ ಅವರ ವಿಷ್ಣುತತ್ತ್ವವಿನಿರ್ಣಯ ಅನುವ್ಯಾಖ್ಯಾನ ಗ್ರಂಥಗಳಿಗೆ ಪೀಠಿಕೆಯಂತೆ ಉಪಕಾರಕವಾದ ಕೃತಿ. ಶ್ರೀಜಯತೀರ್ಥರ 'ವಾದಾವಲೀ' ಹಾಗೂ ಶ್ರೀವ್ಯಾಸರಾಜರ 'ನ್ಯಾಯಾಮೃತ'ಗಳಿಗೆ ಮೂಲಸಾಮಗ್ರಿಯನ್ನು ಒದಗಿಸುವ ಕೃತಿ.

ಶ್ರೀಮದಾಚಾರ್ಯರ ಈ ಕೃತಿ ಹೀಗೆ ಉಪನ್ಯಾಸರೂಪದಲ್ಲಿ ಪ್ರಕಟವಾಗಿ, ಮುಂದೆ ಗ್ರಂಥದ ಸ್ವರೂಪವನ್ನು ಪಡೆಯಿತು. ಇದನ್ನು ಕೇಳುತ್ತಲೇ ದಿಗ್ಭ್ರಮೆಗೊಂಡ ಮಾಯಾವಾದಿಗಳು ಅಲ್ಲಿಂದ ಪಲಾಯನಗೈಯ್ದರು. ಈ ರೀತಿಯ ಮಧ್ವವಿಜಯದಿಂದ ಅಪಾರ ಹರುಷಪಟ್ಟ ಶ್ರೀಮದಾಚಾರ್ಯರ ಶಿಷ್ಯರು ಅನೇಕ ಶ್ಲೋಕಗಳನ್ನು ರಚಿಸಿ ಮಾಯಾವಾದಿಗಳ ಪಲಾಯನ ಅನಿವಾರ್ಯವಾಗಿತ್ತು ಎಂಬುದನ್ನು ತಿಳಿಸಿದರು.

ಅವರ ಪ್ರಾರ್ಥನೆಯಂತೆ ಶ್ರೀಮದಾಚಾರ್ಯರು ತತ್ತ್ವೋದ್ಯೋತದ ಕೊನೆಯಲ್ಲಿ ಅವುಗಳನ್ನು ಸೇರಿಸಿಕೊಂಡು ಪಠಿಸಲು ಅನುಮತಿಯಿತ್ತರು. ಈ ಕಾರಣಕ್ಕಾಗಿಯೇ ತಾವು ಅವುಗಳಿಗೂ ಟೀಕೆಯನ್ನು ರಚಿಸಿರುವುದಾಗಿ ಶ್ರೀಜಯತೀರ್ಥರು ಬರೆದಿರುವರು. ಶ್ರೀಜಯತೀರ್ಥರ ಮಾತಿಗೆ ಸುಮಧ್ವವಿಜಯದ ಆ ಪ್ರಸಂಗದ ನಿರೂಪಣೆಯು ಸಂವಾದಿಯಾಗಿದೆ.

ಇದಕ್ಕಿರುವ ಟೀಕೆಗಳು ಶ್ರೀಪದ್ಮನಾಭತೀರ್ಥರದು ಹಾಗೂ ಶ್ರೀಜಯತೀರ್ಥರದು. ಶ್ರೀಜಯತೀರ್ಥರ ಟೀಕೆಗೆ ಶ್ರೀವಿಜಯೀಂದ್ರತೀರ್ಥರು, ಶ್ರೀವೇದೇಶತೀರ್ಥರು, ಶ್ರೀರಾಘವೇಂದ್ರರು, ಶ್ರೀಯದುಪತ್ಯಾಚಾರ್ಯರು, ಶ್ರೀಬಿದರಹಳ್ಳಿ ಶ್ರೀನಿವಾಸ-ತೀರ್ಥರು ಮೊದಲಾದವರು ಟಿಪ್ಪಣಿಗಳನ್ನು ರಚಿಸಿರುವರು. ಶ್ರೀಹುಲಗಿ ಶ್ರೀನಾಥಾಚಾರ್ಯರು ಬರೆದಿರುವ ದ್ವೈತದ್ಯುಮಣಿಯೆಂಬ ಟಿಪ್ಪಣಿಯು ತುಂಬಾ ವಿಸ್ತಾರವಾಗಿದ್ದು ನ್ಯಾಯಾಮೃತಕ್ಕೆ ಮಂಡನೆಯಾಗಿರುವ ಅದು ಸ್ವತಂತ್ರಗ್ರಂಥದಂತೆಯೂ ಮಾನ್ಯವಾಗಿದೆ.

೯. ವಿಷ್ಣುತತ್ತ್ವವಿನಿರ್ಣಯ

ಏಕಾಕೀ ಕಿಲ ಯಶ್ಚಕ್ರೇ ಪದಂ ಮೌಲಿಷು ವಿದ್ವಿಷಾಮ್ ।
ತತ್ತ್ವನಿರ್ಣಯಪಾರ್ಥೋऽಯಂ ಕೇನ ನಾಮ ನ ಪೂಜ್ಯತೇ ॥
– ಮಧ್ವವಿಜಯ (೧೫/೮೦)

ದಶಪ್ರಕರಣಗಳಲ್ಲಿ ವಿಷ್ಣುತತ್ತ್ವವಿನಿರ್ಣಯವು ಅತ್ಯಂತ ವಿಸ್ತಾರವಾಗಿರುವ ಕೃತಿ. ಒಂದು ರೀತಿಯಲ್ಲಿ ಇದು ಶ್ರೀಮದಾಚಾರ್ಯರ ಇತರ ಒಂಭತ್ತು ಪ್ರಕರಣಗಳ ಸಾರಸಂಗ್ರಹ. ಮತ್ತೊಂದು ದೃಷ್ಟಿಯಲ್ಲಿ ಅವರ ಸಮಗ್ರಸಿದ್ಧಾಂತದ ಸಂಕ್ಷಿಪ್ತ ಕೈಪಿಡಿ. ಅವರ ಅನುವ್ಯಾಖ್ಯಾನದಲ್ಲಿ ಸಮಗ್ರಸಿದ್ಧಾಂತದ ವಿವೇಚನೆಯು ಶ್ಲೋಕರೂಪವಾಗಿ ಬಂದಿದ್ದರೆ, ಇದರಲ್ಲಿ ವಾಕ್ಯರೂಪವಾಗಿ ಬಂದಿದೆ. ಶ್ರೀಜಯತೀರ್ಥರ ಅನುವ್ಯಾಖ್ಯಾನ ಟೀಕೆ 'ಸುಧಾ' ಎನ್ನಿಸಿದ್ದರೆ, ಅವರ ಇದರ ಟೀಕೆ 'ಅಣುಸುಧಾ' ಎಂದು ಮಾನ್ಯವಾಗಿದೆ. ಹೆಸರೇ ಹೇಳುವಂತೆ ಅವರ ಸಿದ್ಧಾಂತದ ಅತ್ಯಂತ ಪ್ರಧಾನಪ್ರಮೇಯವಾದ ವಿಷ್ಣುತತ್ತ್ವದ ಬಗ್ಗೆ ವಿವರವಾದ ವಿವೇಚನೆಯನ್ನು ಇದು ಒದಗಿಸುತ್ತದೆ.

ವಿಷ್ಣುತತ್ತ್ವವಿನಿರ್ಣಯದಲ್ಲಿ ಒಟ್ಟು ಮೂರು ಪರಿಚ್ಛೇದಗಳಿದ್ದು ಅವುಗಳಲ್ಲಿ ಕ್ರಮವಾಗಿ ಭಗವಂತನ ಸದಾಗಮೈಕವಿಜ್ಞೇಯತ್ವ, ಸಮತೀತಕ್ಷರಾಕ್ಷರತ್ವ ಮತ್ತು ನಿರ್ದೋಷಾಶೇಷಸದ್ಗುಣತ್ವ ಎಂಬ ಮೂರು ವಿಶೇಷಣಗಳು ಪ್ರತಿಪಾದಿತವಾಗಿವೆ.

ಭಗವಂತನನ್ನು ತಿಳಿಯಲು ಸದಾಗಮಗಳೇ ಪ್ರಮುಖ ಆಧಾರ; ಸಕಲ ಸದಾಗಮಗಳೂ ಅವನ ಸರ್ವೋತ್ತಮತ್ವವನ್ನೇ ಪ್ರತಿಪಾದಿಸುವವು.

ಋಗ್ವೇದ ಮೊದಲಾದ ನಾಲ್ಕು ವೇದಗಳು, ಮಹಾಭಾರತ, ಮೂಲರಾಮಾಯಣ ಮತ್ತು ಪಂಚರಾತ್ರ ಎಂಬ ಮೂರು ಇತಿಹಾಸಗಳು ಅತ್ಯಂತ ಮುಖ್ಯವಾದ ಸದಾಗಮಗಳು. ಭಾಗವತ ಮೊದಲಾದ ಅದಕ್ಕೆ ಅನುಕೂಲವಾಗುವ ಇತರ ಆಗಮಗಳು ಸಹ ಸದಾಗಮಗಳೇ ಆಗಿವೆ. ಅವುಗಳಿಂದ ಮಾತ್ರವೇ ಭಕ್ತರು ಭಗವಂತನನ್ನು ತಿಳಿಯಲು ಸಾಧ್ಯ. ಕೇವಲ ಯುಕ್ತಿ ಮತ್ತು ಪ್ರತ್ಯಕ್ಷಗಳಿಂದ ಭಗವಂತನನ್ನು ತಿಳಿಯಲು ಸಾಧ್ಯವಿಲ್ಲ. ವೇದಗಳು ಅಪೌರುಷೇಯವಾದ್ದರಿಂದ ಅವುಗಳಲ್ಲಿ ಯಾವುದೇ ವಿಧವಾದ ದೋಷಗಳಿಗೂ ಅವಕಾಶವೇ ಇಲ್ಲ. ಅವುಗಳ ಪ್ರಾಮಾಣ್ಯ ಪ್ರಶ್ನಾತೀತವಾದದ್ದು.

ವೇದಾಪೌರುಷೇಯತ್ವ ಸಮರ್ಥನೆ ವಿಷ್ಣುತತ್ತ್ವನಿರ್ಣಯದ ಪ್ರಥಮ ಪರಿಚ್ಛೇದದ ಪ್ರಧಾನ ವಿಷಯಗಳಲ್ಲೊಂದು.[೧]

ಅವುಗಳಿಂದ 'ಪಂಚಮವೇದ'ವೆಂಬುದಾಗಿ ಪರಿಗೃಹೀತವಾಗಿರುವುದರಿಂದ ಇತಿಹಾಸಪುರಾಣಗಳೂ ಪ್ರಮಾಣಗಳೇ. ಇವುಗಳ ಪ್ರಾಮಾಣ್ಯವನ್ನು ಒಡಂಬಡದೆ ಧರ್ಮಾಧರ್ಮಾದಿ ಅತೀಂದ್ರಿಯ ಪದಾರ್ಥಗಳ ಪರಿಜ್ಞಾನ ಅಶಕ್ಯ.

---

೧. ನ ಚೈತೇಷಾಂ ವಚನಾನಾಮೇವಾಪ್ರಾಮಾಣ್ಯಮ್। ಅಪೌರುಷೇಯತ್ವಾದ್ವೇದಸ್ಯ। 'ಇತಿಹಾಸಪುರಾಣಃ ಪಂಚಮೋ ವೇದಾನಾಂ ವೇದಃ' ಇತಿ ತದ್ಗೃಹೀತತ್ವಾಚ್ಚ।

ನ ಚಾಪೌರುಷೇಯಂ ವಾಕ್ಯಮೇವ ನಾಸ್ತೀತಿ ವಾಚ್ಯಮ್ । ತದಭಾವೇ ಸರ್ವಸಮಯಾಭಿಮತ-ಧರ್ಮಾದ್ಯಸಿದ್ಧೇಃ। ಯಸ್ಯ ತೌ ನಾಭಿಮತೌ ನಾಸೌ ಸಮಯೀ। ಸಮಯಪ್ರಯೋಜನಾಭಾವಾತ್। ನ ಚ ತೇನ ಲೋಕೋಪಕಾರಃ ಧರ್ಮಾದ್ಯಭಾವಜ್ಞಾನೇ ಪರಸ್ಪರಹಿಂಸಾದಿನಾ ಅಪಕಾರಸ್ಯೈವ ಪ್ರಾಪ್ತೇಃ। ನ ಚೋಪಕಾರೇಣ ತಸ್ಯ ಪ್ರಯೋಜನಮ್ । ಅದೃಷ್ಟಾಭಾವಾತ್ । ಅತೋ ಧರ್ಮಾದ್ಯಭಾವಂ ವದತಾ ಸ್ವಸಮಯಸ್ಯಾನರ್ಥಕ್ಯಮಂಗೀಕೃತಮೇವೇತಿ ನಾಸೌ ಸಮಯೀ।

ನ ಚ ಪೌರುಷೇಯೇಣ ವಾಕ್ಯೇನ ತತ್ಸಿದ್ಧಿಃ, ಅಜ್ಞಾನವಿಪ್ರಲಂಭಯೋಃ ಪ್ರಾಪ್ತೇಃ। ನ ಚ ತದರ್ಥತ್ವೇನ ಸರ್ವಜ್ಞಃ ಕಲ್ಪ್ಯೇತ । ಅನ್ಯತ್ರಾದೃಷ್ಟಸ್ಯ ಸರ್ವಜ್ಞತ್ವಸ್ಯ ಕಲ್ಪನಂ ತಸ್ಯಾವಿಪ್ರಲಂಭಕತ್ವಕಲ್ಪನಂ ತಸ್ಯ ತತ್ಕೃತತ್ವಕಲ್ಪನಂ, ಚೇತಿ ಕಲ್ಪನಾಗೌರವಪ್ರಾಪ್ತೇಃ।

ಅಪೌರುಷೇಯವಾಕ್ಯಾಂಗೀಕಾರೇ ನ ಕಿಂಚಿತ್ ಕಲ್ಪ್ಯಮ್ । ಅಪೌರುಷೇಯತ್ವಂ ಚ ಸ್ವತ ಏವ ಸಿದ್ಧಮ್ । ವೇದಕರ್ತುರಪ್ರಸಿದ್ಧೇಃ । ಅಪ್ರಸಿದ್ಧೌ ಚ ತತ್ಕರ್ತುಸ್ತತ್ಕಲ್ಪನೇ ಕಲ್ಪನಾಗೌರವಮ್ । ಅಕಲ್ಪನೇ ಚಾಕರ್ತೃಕತ್ವಂ ಸಿದ್ಧಮೇವ । ನ ಚ ಲೌಕಿಕವಾಕ್ಯವತ್ ಸಕರ್ತೃಕತ್ವಮ್ । ತಸ್ಯ ಅಕರ್ತೃಕತ್ವಪ್ರಸಿದ್ಧ್ಯಭಾವಾತ್ । ನ ಚ ಕೇನಚಿತ್ ಕೃತ್ವಾ ವೇದ ಇತ್ಯುಕ್ತಂ ವೇದಸಮಮ್ । ಪರಂಪರಾಭಾವಾತ್ । ನ ಚ ಸ್ವಯಂಪ್ರತಿಭಾತವೇದೈರ್ದೃಷ್ಟಮವೇದವಾಕ್ಯಂ ಭವತಿ। ಪರಂಪರಾ-ಸಿದ್ಧವೇದವಾಕ್ಯಾನುಸಾರಿತ್ವಾತ್ । ವೇದದ್ರಷ್ಟೄಣಾಮುಕ್ತಗುಣವತ್ವಾಚ್ಚ ತೇಷಾಮ್ ।

ಉಕ್ತಂ ಚ ಬ್ರಹ್ಮಾಂಡೇ -

ವಿಂಶಲ್ಲಕ್ಷಣತೋಽನೂನಃ ತಪಸ್ವೀ ಬಹುವೇದವಿತ್ ।
ವೇದ ಇತ್ಯೇವ ಯಂ ಪಶ್ಯೇತ್ ಸ ವೇದೋ ಜ್ಞಾನದರ್ಶನಾತ್ ॥ ಇತಿ । ....

ನ ಚಾನುಮಾನಾದೀನಾಮಾಗಮಂ ವಿನಾ ಪ್ರಾಮಾಣ್ಯಂ ಧರ್ಮಾದಿಷು। ತದಗೋಚರತ್ವಾತ್ । ಅತೋಽಪೌರುಷೇಯವಾಕ್ಯೇನೈವ ಧರ್ಮಾದಿಸಿದ್ಧೇಃ ಸರ್ವವಾದಿನಾಮಪಿ ತದಂಗೀಕಾರ್ಯಮ್।

ಪ್ರಾಮಾಣ್ಯಸ್ವತಸ್ತ್ವದ ವಿವೇಚನೆಯು ಸಹ ಇಲ್ಲಿ ಪ್ರತಿಪಾದಿತವಾಗಿದೆ.[೧] ಪ್ರಾಮಾಣ್ಯವು ಸ್ವತಃ ಅಪ್ರಾಮಾಣ್ಯವು ಪರತಃ ಎಂಬುದು ದ್ವೈತವೇದಾಂತದ ವಿಶಿಷ್ಟ ನಿರೂಪಣೆಗಳಲ್ಲೊಂದು.

ವೇದನಿತ್ಯತ್ವಕ್ಕೆ ಅತ್ಯಗತ್ಯವಾದ ವರ್ಣನಿತ್ಯತ್ವದ ಪ್ರತಿಪಾದನೆಯು ಇದರಲ್ಲಿದೆ.[೨]

ವೇದಗಳ ನಿತ್ಯತ್ವ, ಅವುಗಳ ಬಗೆಬಗೆಯ ನಾಮಾಂತರ, ಅಭಿವ್ಯಕ್ತಿಕ್ರಮ, ಮೊದಲಾದವುಗಳನ್ನು ಕುರಿತ ಬ್ರಹ್ಮಾಂಡಪುರಾಣದ ವಾಕ್ಯದ ಉದಾಹರಣೆ ಅನೇಕ ಮುಖ್ಯವಿವರಗಳ ಬಗ್ಗೆ ವಿಶೇಷ ಬೆಳಕನ್ನು[೩] ಚೆಲ್ಲುತ್ತದೆ.

---

೧. ಪ್ರಾಮಾಣ್ಯಂ ಚ ಸ್ವತ ಏವ। ಅನ್ಯಥಾऽನವಸ್ಥಾನಾತ್। ನ ಚೋಕ್ತಯುಕ್ತ್ಯಧೀನತ್ವಂ ಪ್ರಾಮಾಣ್ಯಸ್ಯ। ಬುದ್ಧಿದೋಷನಿರಾಸಮಾತ್ರಕಾರಣತ್ವಾದ್ಯುಕ್ತೀನಾಮ್। ಅದುಷ್ಟಬುದ್ಧೀನಾಂ ಸ್ವತ ಏವ ಸಿದ್ಧತ್ವಾಚ್ಚ ಪ್ರಾಮಾಣ್ಯಸ್ಯ। ನ ಚಾಕಾಂಕ್ಷಾಯಾಮೇವ ಪ್ರಮಾಣಾಂತರಾಪೇಕ್ಷತ್ವಾತ್ ಅನವಸ್ಥಾಭಾವ ಇತಿ ವಾಚ್ಯಮ್। ಆಕಾಂಕ್ಷಾಯಾ ಏವ ಬುದ್ಧಿದೋಷಾತ್ಮಕತ್ವಾತ್। ದುಷ್ಟಬುದ್ಧೀನಾಮೇವಾಪ್ರಾಮಾಣ್ಯ-ಶಂಕೇತಿ ಪರತೋऽಪ್ರಾಮಾಣ್ಯಮ್। ಪ್ರಾಮಾಣ್ಯಂ ಚ ಸ್ವತ ಏವ ಸಿದ್ಧಮ್।

೨. ನ ಚೋಚ್ಚಾರಣಕಾಲ ಏವ ವರ್ಣಾನಾಮುತ್ಪತ್ತಿರಿತಿ ವಾಚ್ಯಮ್। ತದೇವೇದಂ ವಚನಮಿತಿ ಪ್ರತ್ಯಭಿಜ್ಞಾವಿರೋಧಾತ್। ನ ಚ ಸಾದೃಶ್ಯಾತ್ ಪ್ರತ್ಯಭಿಜ್ಞಾ ಭ್ರಾಂತಿರಿತಿ ವಾಚ್ಯಮ್। ಸೋऽಯಂ ದೇವದತ್ತ ಇತ್ಯಾದೇರಪಿ ತಥಾತ್ವಪ್ರಾಪ್ತೇಃ। ಸರ್ವಕ್ಷಣಿಕತ್ವಂ ವದತಾऽಪಿ ಬೌದ್ಧೇನ ಸೇಯಂ ದಿಗಿತ್ಯಾದಿಪ್ರತ್ಯಭಿಜ್ಞಾಯಾಃ ನ ಭ್ರಾಂತಿಕಲ್ಪಿತತ್ವಂ ವಾಚ್ಯಮ್। ಪಂಚಸ್ಕಂಧೇಭ್ಯೋऽನ್ಯತ್ವಾತ್। ನ ಚ ದಿಶ ಏವ ಭ್ರಾಂತಿಕಲ್ಪಿತಾಃ। ವಿಜ್ಞಾನಶೂನ್ಯಯೋರಪಿ ಸಾಮ್ಯಾತ್। ನ ಚ ಆದಿತ್ಯೋದಯಾದಿನೈವ ದಿಕ್ಕಲ್ಪನಾ, ಅಂಧಕಾರೇऽಪಿ ದಿಙ್ಮಾತ್ರಪ್ರತೀತೇಃ। ಕಾದಾಚಿತ್ಕಭ್ರಾಂತಿರೇವಾದಿತ್ಯೋದಯಾದಿ-ದರ್ಶನಾನ್ನಿವಾರ್ಯತೇ। ಸಾ ಚ ವಿಜ್ಞಾನಶೂನ್ಯಯೋರಪಿ ಭವತೀತಿ ತೇಷಾಂ ಮತಮ್। ವಾದಿವಿಪ್ರತಿಪತ್ತೇಃ। ಅತೋ ದಿಶಃ ಸ್ಥಿರಾ ಏವೇತಿ ಸಿದ್ಧ್ಯತಿ ಶೂನ್ಯವದೇವ। ಅತಸ್ತದ್ವದ್ವೇದಸ್ಯಾಪಿ ಸ್ಥೈರ್ಯಂ ಸಿದ್ಧಮ್। ತದೇವೇದಂ ವಾಕ್ಯಮಿತಿ ಪ್ರತ್ಯಭಿಜ್ಞಾನಾತ್।

೩. ನಿತ್ಯಾ ವೇದಾಃ ಸಮಸ್ತಾಶ್ಚ ಶಾಶ್ವತಾ ವಿಷ್ಣುಬುದ್ಧಿಗಾಃ।
ಸರ್ಗೇ ಸರ್ಗೇऽಮುನೈವೈತ ಉದ್ಗೀರ್ಯಂತೇ ತಥೈವ ಚ।
ತತ್ಕ್ರಮೇಣೈವ ತೈರ್ವರ್ಣೈಸ್ಸ್ಯೈಃ ಸ್ವರೈರೇವ ನಾನ್ಯಥಾ।
ಅತಃ ಶ್ರುತಿತ್ವಮೇತಾಸಾಂ ಶ್ರುತಾ ಏವ ಯತೋऽಖಿಲೈಃ।
ಜನ್ಮಾಂತರೇ ಶ್ರುತಾಸ್ತಾಸ್ತು ವಾಸುದೇವಪ್ರಸಾದತಃ।
ಮುನೀನಾಂ ಪ್ರತಿಭಾಸ್ಯಂತಿ ಭಾಗೇನೈವ ನ ಸರ್ವಶಃ॥

ಯತಸ್ತಾ ಹರಿಣಾ ದೃಷ್ಟಾಃ ಶ್ರುತಾ ಏವಾಪರೈರ್ಜನೈಃ।
ಶ್ರುತಯೋ ದೃಷ್ಟಯಶ್ಚೇತಿ ತೇನೋಚ್ಯಂತೇ ಪುರಾತನೈಃ॥
ತದುತ್ಪತ್ತಿವಚಶ್ಚೈವ ಭವೇದ್ವ್ಯಕ್ತಿಮಪೇಕ್ಷ್ಯ ತು।
ಚೇತನಸ್ಯ ಜನಿರ್ಯದ್ವದುಚ್ಯತೇ ಸರ್ವಲೌಕಿಕೈಃ॥
ಪುರಾಣಾನಿ ತದರ್ಥಾನಿ ಸರ್ಗೇ ಸರ್ಗೇऽನ್ಯಥೈವ ತು।
ಕ್ರಿಯಂತೇऽತಸ್ತ್ವನಿತ್ಯಾನಿ ತದರ್ಥಾಃ ಪೂರ್ವಸರ್ಗವತ್॥

ಅದರಂತೆ ಮಹಾವರಾಹದ ವಚನವೂ ಸಹ ಅತ್ಯಂತ ಗಮನಾರ್ಹವೆನ್ನಿಸುತ್ತದೆ.[೧]

ಧರ್ಮಾಧರ್ಮಾದಿ ಅತೀಂದ್ರಿಯ ಪದಾರ್ಥಗಳನ್ನು ಒಪ್ಪದವನು ಸಿದ್ಧಾಂತಿ ಎನ್ನಿಸಲಾರನು. ಕೇವಲ ಪೌರುಷೇಯವಾಕ್ಯಗಳಿಂದ ಅತೀಂದ್ರಿಯಪದಾರ್ಥಗಳ ವಿವೇಚನೆ ಅಸಾಧ್ಯ. ಅವುಗಳನ್ನು ರಚಿಸಿದ ಪುರುಷನು ಸರ್ವಜ್ಞನೆಂದಾಗಲಿ ಕಪಟಿಯಲ್ಲದವ-ನೆಂದಾಗಲಿ ಹೇಗೆ ತಾನೇ ನಿರ್ಣಯಿಸಲು ಸಾಧ್ಯ? ವೇದಗಳು ಅಕರ್ತೃಕವೆಂಬುದಾಗಿಯೇ ಪ್ರಸಿದ್ಧವಾಗಿರುವುದರಿಂದ ಅವುಗಳ ಅಪೌರುಷೇಯತ್ವವು ಸ್ವತಃ ಸಿದ್ಧ - ಮೊದಲಾಗಿ ಆಗಮಪ್ರಾಮಾಣ್ಯವನ್ನು ಸಾಧಿಸಿ ಅಂತಹ ಆಗಮಗಳಿಂದ ಸದಾ ಭಗವಂತನೇ ಪ್ರತಿಪಾದಿತನಾಗಿರುವನು. ಅವುಗಳಿಂದಲೇ ಭಗವತ್ತತ್ತ್ವದ ಪರಿಜ್ಞಾನ ಸಾಧ್ಯ. ಧರ್ಮಾದಿಗಳು ಪರಮಪುರುಷಾರ್ಥವಲ್ಲ, ಮೋಕ್ಷವೇ ಪರಮಪುರುಷಾರ್ಥ; ಅದು ಲಭಿಸುವುದು ವಿಷ್ಣುವಿನ ಪರಮಪ್ರಸಾದದಿಂದಲೇ. ಪರಮಪ್ರಸಾದಕ್ಕೆ ಅವನ ಸರ್ವೋತ್ತಮತ್ವಜ್ಞಾನ, ಭೇದಜ್ಞಾನಗಳೇ ಸಾಧನ.

ವೇದಗಳು, ಇತಿಹಾಸಪುರಾಣಗಳು ಪರಬ್ರಹ್ಮನಾದ ನಾರಾಯಣನನ್ನು ಸರ್ವಜ್ಞ, ಸರ್ವಕರ್ತೃ, ನಿರ್ದೋಷ ಎಂಬುದಾಗಿ ನಿರೂಪಿಸಿರುವವು. ಹಾಗೆ ನಿರೂಪಿಸುವುದರಲ್ಲಿಯೇ ಅವುಗಳ ಮಹಾತಾತ್ಪರ್ಯ. ಎಲ್ಲ ಪ್ರಮಾಣಗಳ ಹೃದಯವೂ ಇದೇ ಆಗಿದೆ. ಇತರ ಸಕಲ ವಿಷಯಗಳೂ ಈ ಮುಖ್ಯವಿಚಾರಕ್ಕೆ ಪೂರಕವಾಗಿಯೇ ಬಂದಿವೆ:

'ಸರ್ವಜ್ಞಂ ಸರ್ವಕರ್ತಾರಂ ನಾರಾಯಣಮನಾಮಯಮ್ ।
ಸರ್ವೋತ್ತಮಂ ಜ್ಞಾಪಯಂತಿ ಮಹಾತಾತ್ಪರ್ಯಮತ್ರ ಹಿ ॥
ಸರ್ವೇಷಾಮಪಿ ವೇದಾನಾಮಿತಿಹಾಸಪುರಾಣಯೋಃ ।
ಪ್ರಮಾಣಾನಾಂ ಚ ಸರ್ವೇಷಾಂ ತದರ್ಥಂ ಚಾನ್ಯದುಚ್ಯತೇ' ಇತಿ ॥

ಜೀವೇಶ್ವರಾಭೇದವು ಯಾವುದೇ ರೀತಿಯಿಂದಲೂ ಸಿದ್ಧಿಸುವುದಿಲ್ಲ. ತತ್ತ್ವಮಸಿ, ಅಹಂ ಬ್ರಹ್ಮಾಸ್ಮಿ, ನೇಹ ನಾನಾಸ್ತಿ ಕಿಂಚನ ಮೊದಲಾದ ಶ್ರುತಿಗಳು ಸಹ ಬೋಧಿಸುವುದು ಭೇದವನ್ನೇ ಹೊರತು ಅಭೇದವನ್ನಲ್ಲ.

ವೇದಾನಾಂ ಸೃಷ್ಟಿವಾಕ್ಯಾನಿ ಭವೇಯುರ್ವ್ಯಕ್ತ್ಯಪೇಕ್ಷಯಾ ।
ಅವಾಂತರಾಭಿಮಾನಾನಾಂ ದೇವಾನಾಂ ವಾ ವ್ಯಪೇಕ್ಷಯಾ ।
ನಾನಿತ್ಯತ್ವಾತ್ ಕುತಸ್ತೇಷಾಮನಿತ್ಯತ್ವಂ ಸ್ಥಿರಾತ್ಮನಾಮ್ ॥ ಇತಿ ಬ್ರಹ್ಮಾಂಡೇ ।

೧. ನ ಚಾನಿತ್ಯತ್ವೇ ಶ್ರುತಿರ್ವೇದ ಇತ್ಯಾದಿವಿಶೇಷಶಬ್ದೋ ಯುಜ್ಯತೇ ।
ವೇದಾಸ್ತೇ ನಿತ್ಯವಿನ್ನತ್ವಾತ್ ಶ್ರುತಯಶ್ಚಾಖಿಲೈಃ ಶ್ರುತೇಃ ।
ಆಮ್ನಾಯೋಽನನ್ಯಥಾಪಾಠಾದೀಶಬುದ್ಧಿಸ್ಥಿತಾಃ ಸದಾ ॥ - ಇತಿ ಮಹಾವಾರಾಹೇ ।

ಜೀವೇಶ್ವರಭೇದವು ಪ್ರತ್ಯಕ್ಷ ಅನುಮಾನಗಳಿಂದ ಸಿದ್ಧವಾದ್ದರಿಂದ ಅದನ್ನು ನಿರೂಪಿಸುವ ವೇದವಾಕ್ಯಗಳು ಅನುವಾದಕ ಎಂಬುದು ಮಾಯಾವಾದಿಗಳ ನಿಲುವು. ಅದನ್ನು ಶ್ರೀಮದಾಚಾರ್ಯರು ತೀವ್ರವಾಗಿ ಖಂಡಿಸುತ್ತ ಹಾಗೆ ಪ್ರತ್ಯಕ್ಷ ಸಿದ್ಧವಾದ ಭೇದವನ್ನು ನಿರಾಕರಿಸುವ ಕಾರಣದಿಂದಲೇ ಅಭೇದವಾಕ್ಯಗಳಿಗೆ ಅಪ್ರಾಮಾಣ್ಯ ಒದಗುವುದು. ಅದರಿಂದಾಗಿಯೇ ಭೇದವಾಕ್ಯಗಳಿಗೆ ಅನುವಾದಕತ್ವವೂ ಸಿದ್ಧವಾಗದೇ ಹೋಗುವುದು. ಪ್ರಬಲವಾಕ್ಯಗಳು ಅನುವಾದಕವೆನ್ನಿಸದೆ ದಾರ್ಢ್ಯಕ್ಕೆ ಕಾರಣವಾಗುವವು :

ಪ್ರತ್ಯಕ್ಷಾನುಮಾನಸಿದ್ಧತ್ವೇ ಚ ಭೇದಸ್ಯ ತದ್ವಿರೋಧಾದೇವಾಪ್ರಾಮಾಣ್ಯಮಭೇದಾಗಮಸ್ಯ । ತೇನಾಭೇದವಾಕ್ಯಸ್ಯಾಪ್ರಾಮಾಣ್ಯಾಭಾವೇ ನಾನುವಾದಕತ್ವಂ ಭೇದವಾಕ್ಯಾನಾಮ್ । ನಹಿ ಬಲವತೋಽನುವಾದಕತ್ವಮ್, ದಾರ್ಢ್ಯಹೇತುತ್ವಾತ್ ।

ಪ್ರತ್ಯಕ್ಷಾದಿಗಳಿಗಿಂತ ಆಗಮವು ಪ್ರಬಲವೇ ಆದರೂ ಉಪಜೀವ್ಯಪ್ರಾಮಾಣ್ಯಕ್ಕೆ ವಿರೋಧವಾದಾಗ ಅದಕ್ಕೆ ಪ್ರಾಮಾಣ್ಯವು ಸಿದ್ಧಿಸುವುದಿಲ್ಲ. ಆಗಮಗಳಿಗೂ ವಿಷಯಸಿದ್ದಿಸುವುದು ಪ್ರತ್ಯಕ್ಷ ಅನುಮಾನಗಳಿಂದಲೆ ಅಲ್ಲವೇ. ವಿಷಯವೇ ಇಲ್ಲವಾದಾಗ ಅಂತಹ ಪ್ರಾಮಾಣ್ಯಕ್ಕೆ ಆಗಮವಾದರೂ ಹೇಗೆ ಸಿದ್ಧಿಸೀತು? :

ಪ್ರತ್ಯಕ್ಷಾದೇರಾಗಮಸ್ಯ ಪ್ರಾಬಲ್ಯೇಽಪಿ ನೋಪಜೀವ್ಯಪ್ರಮಾಣವಿರೋಧೇ ಪ್ರಾಮಾಣ್ಯಮ್ । ವಿಷಯಾಭಾವೇ ಸ್ವಸ್ಯೈವಾಪ್ರಾಮಾಣ್ಯಪ್ರಾಪ್ತೇಃ । ತೇನೈವ ಹ್ಯನುಮಾನಾದಿನಾ ಆಗಮಸ್ಯ ವಿಷಯಃ ಸಿದ್ಧ್ಯತಿ ತತ್ಪಕ್ಷೇಽಪಿ ।

ಜೀವನಿಗೆ ತಾನು ಸರ್ವಥಾ ಸರ್ವಕರ್ತೃವಲ್ಲ ಎಂಬುದು ಅನುಭವದಿಂದಲೆ ಸಿದ್ಧವಾಗಿರುವ ವಿಚಾರ. ಅಂತಹ ಅನುಭವವನ್ನು ಇತರ ಯಾವ ಪ್ರಮಾಣವೂ ಸಾಧಿಸಲಾರದು :

ಅನುಮಾನಸಿದ್ಧೇಶ್ವರಾಚ್ಚ ಭೇದೋಽನುಭವತ ಏವ ಸಿದ್ಧಃ । ಜೀವಸ್ಯಾಸರ್ವಕರ್ತೃತ್ವೇನಾನು-ಭವಾತ್ ।

ಪ್ರಪಂಚಮಿಥ್ಯಾತ್ವವನ್ನು ಸಾಧಿಸಲು ಅದ್ವೈತಿಗಳು ಹೇಳುವ ಹೇತುಗಳು ಸರಿಯಾದವುಗಳಲ್ಲ ಮೊದಲಾಗಿ ಅನೇಕ ವಿಷಯಗಳನ್ನು ನಿರೂಪಿಸುತ್ತ ವಿಷ್ಣುಪಾರಮ್ಯವು ಸಮರ್ಥಿಸಲ್ಪಟ್ಟಿದೆ.

ಅನುಭವ ಅತ್ಯಂತ ಮೂಲಭೂತವಾದ ಪ್ರಮಾಣ. ಅದಕ್ಕೆ ಅನುಗುಣವೆನ್ನಿಸದ ಪ್ರತ್ಯಕ್ಷ ಆಗಮಗಳು ಸಹ ಪ್ರಮಾಣವೆನ್ನಿಸಲಾರವು ಎಂಬುದು ಮಧ್ವಸಿದ್ಧಾಂತದ ಅತ್ಯಂತ

---

೨. ನ ಚ ಜೀವೇಶ್ವರಭೇದಃ ಸಿದ್ಧಃ, ಇತ್ಯನುವಾದಕತ್ವಂ ಭೇದವಾಕ್ಯಾನಾಮ್ । ಆಗಮಂ ವಿನಾ ಈಶ್ವರಸ್ಯೈವಾಸಿದ್ಧೇಃ । ನ ಚಾನುಮಾನಾತ್ ತತ್ಸಿದ್ಧಿಃ । ವಿಪರ್ಯಯೇಣಾಪಿ ಅನುಮಾತುಂ ಶಕ್ಯತ್ವಾತ್। ವಿಮತಂ ಸಕರ್ತೃಕಂ ಕಾರ್ಯತ್ವಾದ್ಘಟವತ್, ಇತ್ಯುಕ್ತೇ, ವಿಮತಂ ಏಕರ್ತೃಕಂ ಅಸ್ಮತ್ಸಂ-ಮತಕರ್ತೃರಹಿತತ್ವಾದಾತ್ಮವದಿತ್ಯನುಮಾನವಿರೋಧಾತ್ । ಅಕಾರ್ಯತ್ವಮುಪಾಧಿರಿತ್ಯುಕ್ತೇ ಶರೀರಿಜನ್ಯತ್ವಮಿತರತ್ರಾಪ್ಯುಪಾಧಿಃ, ಇತ್ಯುತ್ತರಮ್ ।

ಪ್ರಮುಖವಾದ ನಿಲುವು. ಅನುಭವಕ್ಕೆ ಈ ಪ್ರಮಾಣದ ಉನ್ನತಸ್ಥಾನವನ್ನು ನೀಡಿರುವುದರಲ್ಲಿ ಈ ಸಿದ್ಧಾಂತದ ವೈಶಿಷ್ಟ್ಯ ಎದ್ದು ಕಾಣುತ್ತದೆ. ಈ ಸಿದ್ಧಾಂತದ ಸಮಸ್ತ ಪ್ರಮೇಯಗಳು ಅನುಭವದ ನೆಲೆಯಲ್ಲಿ ಸುಗ್ರಾಹ್ಯವೆನ್ನಿಸುವುದರಿಂದ ಸಿದ್ಧಾಂತ ಎಂಬ ಹೆಸರು ಇದಕ್ಕೆ ಅತ್ಯಂತ ಸಾರ್ಥಕ ಅನ್ನಿಸುತ್ತದೆ :

ನ ಚಾನುಭವವಿರೋಧೇ ಆಗಮಸ್ಯ ಪ್ರಾಮಾಣ್ಯಮ್ । ಆಗಮಪ್ರಾಮಾಣ್ಯಾನುಭವಸ್ಯಾ-ಪ್ಯಪ್ರಾಮಾಣ್ಯಪ್ರಾಪ್ತೇಃ ।

ಅದರಂತೆ ಬಹುಪ್ರಮಾಣಗಳ ಸಂವಾದ ಅಪೂರ್ವತೆಗೆ ಧಕ್ಕೆ ಉಂಟುಮಾಡದೆ ವಿಷಯದ ಬಗ್ಗೆ ದಾರ್ಢ್ಯವನ್ನೇ ಹೆಚ್ಚಿಸುತ್ತದೆ ಎಂದು ನಿರೂಪಿಸುತ್ತ ಅದ್ವೈತಿಗಳ ಅಪೂರ್ವತಾವಾದವನ್ನು ನಿರಾಕರಿಸುವ ಇಲ್ಲಿಯ ರೀತಿಯು ಅತ್ಯಂತ ಗಮನಾರ್ಹವಾದುದು :

ಬಹುಪ್ರಮಾಣಸಂವಾದಶ್ಚ ದಾರ್ಢ್ಯಹೇತುರೇವ । ಬಹೂನಾಂ ವಚನೇ ತಸ್ಯೈವ ದರ್ಶನೇ ದಾರ್ಢ್ಯಸ್ಯೈವ ದೃಷ್ಟೇಃ ।[೧]

"ಯುಕ್ತಂ ಚ ವಿಷ್ಣೋಃ, ಸರ್ವೋತ್ತಮತ್ವೇ ಏವ ಮಹಾತಾತ್ಪರ್ಯಂ ಸರ್ವಾಗಮಾನಾಮ್" ಎಂಬ ಮಾತು ಇದರಲ್ಲಿ ಪಲ್ಲವಿಯಂತೆ ಬಂದಿದೆ.

ಹೀಗೆ ಪ್ರಥಮ ಪರಿಚ್ಛೇದದಲ್ಲಿ ವೇದಾಪೌರುಷೇಯತ್ವ, ವರ್ಣನಿತ್ಯತ್ವ, ಪ್ರಾಮಾಣ್ಯಸ್ವತಸ್ತ್ವ, ಆಗಮಗಳ ಸಿದ್ಧಾರ್ಥಬೋಧಕತ್ವ, ತತ್ತ್ವಮಸಿ ಮೊದಲಾದ ಅಭೇದಪರವೆಂದು ತೋರುವ ಅನೇಕ ವಿಷಯಗಳು ಅತ್ಯಂತ ಸ್ಪಷ್ಟವಾಗಿ ನಿರೂಪಿತವಾಗಿವೆ :

ಬಲವತ್ಪ್ರಮಾಣತಶ್ಚೈವ ಜ್ಞೇಯಾ ದೋಷಾ ನ ಚಾನ್ಯಥಾ ।
ದ್ವಿವಿಧಂ ಬಲವತ್ತ್ವಂ ಚ ಬಹುತ್ವಾಚ್ಚ ಸ್ವಭಾವತಃ ॥
ಜ್ಞಾನಂ ಚ ದ್ವಿವಿಧಂ ಬಾಹ್ಯಂ ತಥಾಽನುಭವರೂಪಕಮ್ ।
ಬಲ್ಯೇವಾನುಭವಸ್ತತ್ರ ನಿರ್ದೋಷಂ ತ್ವಕ್ಷಜಾದಿಕಮ್ ॥
ಪ್ರತ್ಯಕ್ಷಂ ತ್ರಿವಿಧಂ ಜ್ಞೇಯಮೈಶ್ವರಂ ಯೌಗಿಕಂ ತಥಾ ।
ಅಯೌಗಿಕಂ ಚೇತಿ ತಥಾ ಸರ್ವಮಕ್ಷಾತ್ಮಕಂ ಮತಮ್ ॥
ಅಕ್ಷಾಣಿ ಚ ಸ್ವರೂಪಾಣಿ ನಿತ್ಯಜ್ಞಾನಾತ್ಮಕಾನಿ ಚ ।
ವಿಷ್ಣೋಃ ಶ್ರಿಯಸ್ತಥೈವೋಕ್ತಾನ್ಯನ್ಯೇಷಾಂ ದ್ವಿವಿಧಾನಿ ತು ॥

---

೧. ನ ಚ ಪ್ರಮಾಣಬಹುತ್ವೇ ದೌರ್ಬಲ್ಯಮ್ । ದಾರ್ಢ್ಯಮೇವ ಹಿ ಬಹುವಾಕ್ಯಸಂವಾದೇ ದೃಷ್ಟಮ್ । ತಥಾ ಸತಿ ಅಭ್ಯಾಸಾದೇರಪ್ಯಪ್ರಾಮಾಣ್ಯಹೇತುತ್ವಂ ಸ್ಯಾತ್ । ಅಭ್ಯಾಸಸ್ಯ ಚ ತಾತ್ಪರ್ಯಲಿಂಗತ್ವಂ ಸರ್ವೇಷಾಂ ಸಿದ್ಧಮ್ । ತದನಂಗೀಕಾರೇ ತತ್ಪಕ್ಷೇಽಪಿ 'ತತ್ತ್ವಮಸಿ' ಇತಿ ನವಕೃತ್ವೋಽಭ್ಯಾಸಾದನು-ವಾದಕತ್ವೇನಾಪ್ರಾಮಾಣ್ಯಂ ಸ್ಯಾತ್ । ಪ್ರಥಮವಾಕ್ಯೇನೈವ ಯಸ್ಯಾಸಿದ್ಧಂ ತದರ್ಥಮಪರಮಿತ್ಯುಕ್ತೇ ಪ್ರತ್ಯಕ್ಷಾದಿನಾ ಭೇದೋ ಯೇನಾನಿಶ್ಚಿತಸ್ತದರ್ಥಮಪರಂ ವಾಕ್ಯಮಿತ್ಯುತ್ತರಮ್ । ತಸ್ಮಾತ್ ಬಹುಪ್ರಮಾಣಸಂವಾದಿತ್ವೇ ಪ್ರಾಬಲ್ಯಮೇವ ।

ಸ್ವರೂಪಾಣಿ ಚ ಭಿನ್ನಾನಿ ಭಿನ್ನಾನಿ ತ್ರಿವಿಧಾನಿ ಚ ।
ದೈವಾಸುರಾಣಿ ಮಧ್ಯಾನೀತ್ಯೇತತ್ ಪ್ರತ್ಯಕ್ಷಮೀರಿತಮ್ ॥
ವಿಷಯಾನ್ ಪ್ರತಿ ಸ್ಥಿತಂ ಹ್ಯಕ್ಷಂ ಪ್ರತ್ಯಕ್ಷಮಿತಿ ಕೀರ್ತಿತಮ್ ।
ಅಕ್ಷಯಂ ಪುರುಷಸ್ಯಾಕ್ಷಂ ಸ್ವರೂಪೇ ಮುಖ್ಯಮೇವ ತು ॥
ಉಪಚಾರಸ್ತದನ್ಯತ್ರ ಸೃಷ್ಟಾವುಪಚಯೋ ಯತಃ ।
ಉಪಪತ್ತಿಸ್ವರೂಪತ್ವಾದನುಮಾ ಸಂಭವಾದಿಕಮ್ ॥
ಪ್ರತ್ಯಕ್ಷಾಗಮಮಾಹಾತ್ಮ್ಯಾದನುಮಾನಂ ಪ್ರಮಾಣತಾಮ್ ।
ಯಾತಿ ನೈವಾನ್ಯಥಾ ತಸ್ಯ ನಿಯತತ್ವಂ ಕ್ವಚಿದ್ಭವೇತ್ ॥ ಇತಿ ಬ್ರಹ್ಮತರ್ಕೇ ।

ಮೋಕ್ಷವು ಸರ್ವಶ್ರೇಷ್ಠವಾದ ಪುರುಷಾರ್ಥ. ಅನಿತ್ಯ ಹಾಗೂ ಅಪೂರ್ಣ ಎಂಬ ಕಾರಣಗಳಿಂದಾಗಿ ಧರ್ಮ, ಅರ್ಥ ಹಾಗೂ ಕಾಮ ಎಂಬ ಮೂರು ಪುರುಷಾರ್ಥಗಳು ಗೌಣವೆನ್ನಿಸುವವು :

ಮೋಕ್ಷೋ ಹಿ ಸರ್ವಪುರುಷಾರ್ಥೋತ್ತಮಃ-

ಧರ್ಮಾರ್ಥಕಾಮಾಃ ಸರ್ವೇಽಪಿ ನ ನಿತ್ಯಾ ಮೋಕ್ಷ ಏವ ಹಿ ।
ನಿತ್ಯಸ್ತಸ್ಮಾತ್ ತದರ್ಥಾಯ ಯತೇತ ಮತಿಮಾನ್ ನರಃ ॥
- ಇತಿ ಭಾಲ್ಲವೇಯಶ್ರುತಿಃ ॥

ಅನಿತ್ಯತ್ವಾತ್ ಸದುಃಖತ್ವಾನ್ನ ಧರ್ಮಾದ್ಯಾಃ ಪರಂ ಸುಖಮ್ ।
ಮೋಕ್ಷ ಏವ ಪರಾನಂದಃ ಸಂಸಾರೇ ಪರಿವರ್ತತಾಮ್ ॥ ಇತಿ ಚ ಭಾರತೇ ।

ಮಹಾವಿಷ್ಣುವಿನ ಪರಮಪ್ರಸಾದವೇ ಮೋಕ್ಷಕ್ಕೆ ಪರಮಸಾಧನ. ಇತರ ಸಕಲಸಾಧನಗಳು ಪ್ರಸಾದಕ್ಕೆ ಸಾಧನವೆನ್ನಿಸುವವು. ಅವುಗಳಲ್ಲಿ ಭಕ್ತಿಗೆ ಅಗ್ರಸ್ಥಾನ. ಭಕ್ತಿಯಿಂದ ಮುಕ್ತಿ ಎಂಬುದು ಸಕಲಶಾಸ್ತ್ರಗಳ ನಿಲುವು. ಶ್ರೀಹರಿಪ್ರಸಾದವು ಜ್ಞಾನಪ್ರಾಪ್ತಿಯಂತೆ ಮೋಕ್ಷಪ್ರಾಪ್ತಿಗೂ, ಮೋಕ್ಷದಲ್ಲಿ ಆನಂದಪ್ರಾಪ್ತಿಗೂ ಅತ್ಯಂತ ಪ್ರಧಾನವಾದ ಸಾಧನ :

ಮೋಕ್ಷಶ್ಚ ವಿಷ್ಣುಪ್ರಸಾದೇನ ವಿನಾ ನ ಲಭ್ಯತೇ -

ಯಸ್ಯ ಪ್ರಸಾದಾತ್ ಪರಮಾರ್ತಿರೂಪಾದಸ್ಮಾತ್‌ಸಂಸಾರಾನ್ಮುಚ್ಯತೇ ನಾಪರೇಣ ।
ನಾರಾಯಣೋಽಸೌ ಪರಮೋ ವಿಚಿಂತ್ಯೋ ಮುಮುಕ್ಷುಭಿಃ ಕರ್ಮಪಾಶಾದಮುಷ್ಮಾತ್॥
ಇತಿ ಚ ನಾರಾಯಣಶ್ರುತಿಃ ।

ನಾಯಮಾತ್ಮಾ ಪ್ರವಚನೇನ ಲಭ್ಯೋ ನ ಮೇಧಯಾ ನ ಬಹುನಾ ಶ್ರುತೇನ ।
ಯಮೇವೈಷ ವೃಣುತೇ ತೇನ ಲಭ್ಯಸ್ತಸ್ಯೈಷ ಆತ್ಮಾ ವಿವೃಣುತೇ ತನೂಂ ಸ್ವಾಮ್ ॥
ಇತಿ ಕಠಶ್ರುತಿಃ ॥

ತೇಷಾಮಹಂ ಸಮುದ್ಧರ್ತಾ ಮೃತ್ಯುಸಂಸಾರಸಾಗರಾತ್ ।
ಭವಾಮಿ ನ ಚಿರಾತ್ ಪಾರ್ಥ ಮಯ್ಯಾವೇಶಿತಚೇತಸಾಮ್ ॥
ಇತಿ ಭಗವದ್ವಚನಮ್।

ಉತ್ಪತ್ತಿಸ್ಥಿತಿಸಂಹಾರಾ ನಿಯತಿರ್ಜ್ಞಾನಮಾವೃತಿಃ ।
ಬಂಧಮೋಕ್ಷೌ ಚ ಪುರುಷಾದ್ಯಸ್ಮಾತ್ ಸ ಹರಿರೇಕರಾಟ್ ॥ ಇತಿ ಸ್ಕಾಂದೇ ।

ಅಜ್ಞಾನಾಂ ಜ್ಞಾನದೋ ವಿಷ್ಣುರ್ಜ್ಞಾನಿನಾಂ ಮೋಕ್ಷದಶ್ಚ ಸಃ ।
ಆನಂದದಶ್ಚ ಮುಕ್ತಾನಾಂ ಸ ಏವೈಕೋ ಜನಾರ್ದನಃ ॥ ಇತಿ ಚ ।
ಬಂಧಕೋ ಭವಪಾಶೇನ ಭವಪಾಶಾಚ್ಚ ಮೋಚಕಃ ।
ಕೈವಲ್ಯದಃ ಪರಂ ಬ್ರಹ್ಮ ವಿಷ್ಣುರೇವ ನ ಸಂಶಯಃ ॥ ಇತಿ ಚ ।

ಶ್ರೀಹರಿಪ್ರಸಾದಪ್ರಾಪ್ತಿಗೆ ಗುಣೋತ್ಕರ್ಷಜ್ಞಾನವೇ ಪ್ರಮುಖ ಸಾಧನ. ಅದು ಸರ್ವಥಾ ಅಭೇದಜ್ಞಾನದಿಂದ ಲಭಿಸದು. ಭೇದಜ್ಞಾನ ಪ್ರಸಾದಸಾಧನವಾದರೆ ಅಭೇದಜ್ಞಾನ ಶಿಕ್ಷಾರ್ಹಅಪರಾಧವೆನ್ನಿಸುತ್ತದೆ. ಅದರಿಂದಾಗಿ ಜೀವೇಶ್ವರಭೇದಾದಿ ಪ್ರಮೇಯಗಳೇ ವೇದಾದಿ ಸಕಲಸಚ್ಛಾಸ್ತ್ರಗಳ ಮಹಾತಾತ್ಪರ್ಯ :

ಪ್ರೀತಿಶ್ಚ ಗುಣೋತ್ಕರ್ಷಜ್ಞಾನಾದೇವ ವಿಶೇಷತೋ ದೃಷ್ಟಾ । ನಾಭೇದಜ್ಞಾನಾತ್ । ಅಭೇದ-ಜ್ಞಾನಾದಪ್ರೀತಿರೇವೋತ್ತಮಾನಾಂ ಭವತಿ । ಘಾತಯಂತಿ ಹಿ ರಾಜಾನೋ ರಾಜಾಽಹಮಿತಿ ವದಂತಮ್ । ದದತಿ ಚ ಸರ್ವಮಭಿಪ್ರೇತಂ ಗುಣೋತ್ಕರ್ಷಂ ವದತಃ ।

ನ ತಾದೃಶೀ ಪ್ರೀತಿರೀಡ್ಯಸ್ಯ ವಿಷ್ಣೋರ್ಗುಣೋತ್ಕರ್ಷಜ್ಞಾತರಿ ಯಾದೃಶೀ ಸ್ಯಾತ್ ।
ತತ್ಪ್ರೀಣನಾನ್ಮೋಕ್ಷಮಾಪ್ನೋತಿ ಸರ್ವಸ್ತತೋ ವೇದಾಸ್ತತ್ಪರಾಃ ಸರ್ವ ಏವ ॥
- ಇತಿ ಸೌಪರ್ಣಶ್ರುತಿಃ ।

ಯೋ ಮಾಮೇವಮಸಂಮೂಢೋ ಜಾನಾತಿ ಪುರುಷೋತ್ತಮಮ್ ।
ಸ ಸರ್ವವಿದ್ಭಜತಿ ಮಾಂ ಸರ್ವಭಾವೇನ ಭಾರತ ॥

ಇತಿ ಗುಣೋತ್ಕರ್ಷಜ್ಞಾನಾದೇವ ಪರಮಾ ಪ್ರೀತಿರ್ಭಗವತಾ ಸ್ವಯಮೇವಾಭಿಹಿತಾ । ಅತೋ ವಿಷ್ಣೋರ್ಗುಣೋತ್ಕರ್ಷ ಏವ ಸರ್ವಶ್ರುತಿಸ್ಮೃತೀನಾಂ ಮಹಾತಾತ್ಪರ್ಯಮ್ ।

ಅವನು ಅನಂತಕಲ್ಯಾಣಗುಣನಿಧಿ ಎಂಬ ವಿಷಯ ಸಮರ್ಥಿತವಾಗಿದೆ.

ಜೀವಪರಮಾತ್ಮರ ಅಭೇದದಲ್ಲಿ ಶ್ರುತಿಗಳ ತಾತ್ಪರ್ಯ ಎಂಬ ವಾದ ಅನುಭವ ಮೊದಲಾದ ಸಕಲಪ್ರಮಾಣಗಳಿಗೂ ವಿರುದ್ಧವಾದುದು. ಆದ್ದರಿಂದ ಅಭೇದವಾದವನ್ನು ಎಂದೂ ಪ್ರಮಾಣಿಕ ಎಂದು ಅಂಗೀಕರಿಸುವಂತಿಲ್ಲ :

ಕಥಂಚ ಜೀವಪರಮಾತ್ಮೈಕ್ಯೇ ಸರ್ವಶ್ರುತೀನಾಂ ತಾತ್ಪರ್ಯಂ ಯುಜ್ಯತೇ । ಸರ್ವಪ್ರಮಾಣವಿರುದ್ಧತ್ವಾತ್ । ತಥಾ ಹ್ಯನುಭವವಿರೋಧಃ । ನ ಹಿ 'ಅಹಂ ಸರ್ವಜ್ಞಃ ಸರ್ವೇಶ್ವರಃ ನಿರ್ದುಃಖಃ ನಿರ್ದೋಷಃ' ಇತಿ ಕಸ್ಯಚಿದನುಭವಃ । ಅಸ್ತಿ ಚ ತದ್ವಿಪರ್ಯಯೇಣಾನುಭವಃ । ನ ಚ ಮಿಥ್ಯಾನುಭವೋಽಯಮ್ । ತದ್ವಿಪರೀತಪ್ರಮಾಣಾಭಾವಾತ್ ।

ಅಭೇದಪ್ರತಿಪಾದಕ ಎಂದು ತೋರುವ ತತ್ತ್ವಮಸಿ, ಅಹಂ ಬ್ರಹ್ಮಾಸ್ಮಿ, ಅದ್ವೈತಂ ಪರಮಾರ್ಥತಃ ಮೊದಲಾದ ಸಕಲ ವಾಕ್ಯಗಳಿಗೂ ಜೀವೇಶ್ವರಭೇದದಲ್ಲಿಯೇ

ಮಹಾತಾತ್ಪರ್ಯ ಎಂಬುದಾಗಿ ಸಮರ್ಥಿಸುವ ಇಲ್ಲಿಯ ರೀತಿ ಅತ್ಯಂತ ರೋಚಕವಾದುದು :

ನ ಚಾಭೇದೇ ಕಶ್ಚಿದಾಗಮಃ । ಸಂತಿ ಚ ಭೇದೇ ಸರ್ವಾಗಮಾಃ ।

ಒಂದರ್ಥದಲ್ಲಿ ಇದು ಬ್ರಹ್ಮಸೂತ್ರಗಳ ಸಮನ್ವಯಾಧ್ಯಾಯ ಮತ್ತು ಅವಿರೋಧಾ-ಧ್ಯಾಯಗಳಿಗೆ ಪೂರಕವಾಗಿದ್ದು ಆ ಭಾಗದ ಬ್ರಹ್ಮಸೂತ್ರಗಳಿಗೆ ಭಾಷ್ಯವೇ ಆಗಿದೆ.

ಸಕಲ ಲೌಕಿಕ, ಅಲೌಕಿಕ ಶಬ್ದಗಳು, ಸರ್ವನಾಮ ಶಬ್ದಗಳು, ಅಕಾರಾದಿ ವರ್ಣಗಳು, ಕ್ರಿಯಾಪದಗಳು, ಧ್ವನ್ಯಾತ್ಮಕ ಶಬ್ದಗಳು ಪರಮಮುಖ್ಯವೃತ್ತಿಯಿಂದ ಮಹಾವಿಷ್ಣುವಿನ ಪಾರಮ್ಯವನ್ನೇ ಸಮರ್ಥಿಸುತ್ತವೆ ಎಂಬ ಇಲ್ಲಿಯ ನಿರೂಪಣೆ ಬ್ರಹ್ಮಸೂತ್ರಭಾಷ್ಯದ ಸಮನ್ವಯಾಧ್ಯಾಯಕ್ಕೆ ಪೂರಕವಾಗಿದೆ :

'ಅಃ ಇತಿ ಬ್ರಹ್ಮ ತತ್ರಾಗತಮಹಮಿತಿ ತಸ್ಯೋಪನಿಷದಹಮಿತಿ'
ಅಹಂನಾಮಾ ಹರಿರ್ನಿತ್ಯಮಹೇಯತ್ವಾತ್ ಪ್ರಕೀರ್ತಿತಃ ।
ತ್ವಂ ಚಾಸೌ ಪ್ರತಿಯೋಗಿತ್ವಾತ್ ಪರೋಕ್ಷತ್ವಾತ್ ಸ ಇತ್ಯಪಿ ।
ಸರ್ವಾಂತರ್ಯಾಮಿಣಿ ಹರಾವಸ್ಮಚ್ಛಬ್ದವಿಭಕ್ತಯಃ ।
ಯುಷ್ಮಚ್ಛಬ್ದಗತಾಶ್ಚೈವ ಸರ್ವಾಸ್ತಚ್ಛಬ್ದಗಾ ಅಪಿ ।
ಸರ್ವಶ್ಚಗತಾಶ್ಚೈವ ವಚನಾನ್ಯಖಿಲಾನ್ಯಪಿ ।
ಸ್ವತಂತ್ರತ್ವಾತ್ ಪ್ರವರ್ತಂತೇ ವ್ಯಾವೃತ್ತೇಽಪ್ಯಖಿಲಾತ್ ಸದಾ ।
ತತ್ಸಂಬಂಧಾತ್ ತು ಜೀವೇಷು ತತ್ಸಂಬಂಧಾದಚಿತ್ಸ್ವಪಿ ।
ವರ್ತಂತ ಉಪಚಾರೇಣ ತಿಙ್‌ಪದಾನ್ಯಖಿಲಾನ್ಯಪಿ ।
ತಸ್ಮಾತ್ ಸರ್ವಗತೋ ವಿಷ್ಣುರೇಕೋ ಭಿಚ್ಚ ತತೋ ಬಹುಃ ।'
– ಇತಿ ನಾರಾಯಣಶ್ರುತಿಃ॥

ಬ್ರಹ್ಮ, ಪರಬ್ರಹ್ಮ, ಪರಮಬ್ರಹ್ಮ, ಪರಮಮಹಾಬ್ರಹ್ಮ ಎಂಬ ಶಬ್ದಗಳು ಕ್ರಮವಾಗಿ ಸಂಸಾರಿಜೀವರು, ಮುಕ್ತಜೀವರು, ಮಹಾಲಕ್ಷ್ಮಿ ಹಾಗು ಮಹಾವಿಷ್ಣುವನ್ನು ಪ್ರತಿಪಾದಿಸುತ್ತವೆ ಎಂದು ಪರಮಶ್ರುತಿಯ ಆಧಾರದಿಂದ ತಿಳಿಸುತ್ತ ಶ್ರುತಿಗಳಲ್ಲಿ ಬೇರೆ ಬೇರೆ ಸಂದರ್ಭಗಳಲ್ಲಿ ಬರುವ ಆ ಶಬ್ದಗಳನ್ನು ಮಹಾವಿಷ್ಣುವಿನ ಸರ್ವೋತ್ತಮತ್ವಕಕೆ ಅನುಕೂಲಿಸುವಂತೆಯೇ ಅರ್ಥೈಸಬೇಕು ಎಂಬ ಇಲ್ಲಿಯ ನಿರೂಪಣೆ ವೇದಾರ್ಥನಿರೂಪಣೆಗೆ ಸಂದಿರುವ ಶ್ರೇಷ್ಠ ಕೊಡುಗೆಯಾಗಿದೆ :

'ಬ್ರಹ್ಮಾಣಿ ಜೀವಾಃ ಸರ್ವೇಽಪಿ ಪರಬ್ರಹ್ಮಾಣಿ ಮುಕ್ತಿಗಾಃ ।
ಪ್ರಕೃತಿಃ ಪರಮಂ ಬ್ರಹ್ಮ ಪರಮಂ ಮಹದಚ್ಯುತಃ ।
ತಸ್ಮಾನ್ನ ಮುಕ್ತಾ ನ ಚ ಸಾ ನ ಕ್ವಚಿದ್ವಿಷ್ಣುವೈಭವಮ್ ।
ಆಪ್ನುವಂತಿ ಸ ಏವೈಕಃ ಸ್ವತಂತ್ರಃ ಪೂರ್ಣಸದ್ಗುಣಃ' ಇತಿ ಪರಮಶ್ರುತಿಃ ।

ಜೀವರ ಆನಂತ್ಯವನ್ನು ಪ್ರತಿಪಾದಿಸುವ ವತ್ಸಶ್ರುತಿ ಹಾಗೂ ಇತರ ಪ್ರಮಾಣಗಳ ವಚನಗಳು ಜೀವಾನಂತ್ಯವನ್ನು ಸ್ಫುಟವಾಗಿ ಅರ್ಥಮಾಡಿಕೊಳ್ಳಲು ನೀಡುವ ನೆರವು ಅಪಾರ :

ಅನಾಗತಾ ಅತೀತಾಶ್ಚ ಯಾವಂತಃ ಸಹಿತಾಃ ಕ್ಷಣಾಃ ।
ಅತೀತಾನಾಗತಾಶ್ಚೈವ ಯಾವಂತಃ ಪರಮಾಣವಃ ।
ತತೋಽಪ್ಯನಂತಗುಣಿತಾ ಜೀವಾನಾಂ ರಾಶಯಃ ಪೃಥಕ್ ।
– ಇತಿ ವತ್ಸಶ್ರುತೇಃ, ನ ಸಂಸಾರಿಣಾಂ ಪರಿಸಮಾಪ್ತಿರಸ್ಮತ್ಪಕ್ಷೇ ।

ಪರಮಾಣುಪ್ರದೇಶೇಽಪಿ ಹ್ಯನಂತಾಃ ಪ್ರಾಣಿರಾಶಯಃ ।
ಸೂಕ್ಷ್ಮತ್ವಾದೀಶಶಕ್ತ್ಯೈವ ಸ್ಥೂಲಾ ಅಪಿ ಹಿ ಸಂಸ್ಥಿತಾಃ ॥ ಇತಿ ಚ ।
ಸಹಸ್ರಯೋಜನಸಭಾಂ ಪ್ರಭಾವಾದ್ವಿಶ್ವಕರ್ಮಣಃ ।
ಅನಂತಾ ರಾಶಯೋಽನಂತಾಃ ಪ್ರಜಾನಾಮಧಿಸಂಸ್ಥಿತಾಃ ॥ ಇತಿ ಸ್ಕಾಂದೇ ।

ಮೊದಲ ಪರಿಚ್ಛೇದದ ಸಾರಾಂಶವನ್ನು ಅವರೇ ಹೀಗೆ ನಿರೂಪಿಸಿರುವರು :

ಅತಃ ಸರ್ವಾಗಮೈರೇವ ಸರ್ವಸ್ಮಾದ್ಭಿನ್ನತ್ವೇನ ಸರ್ವಸ್ಮಾದ್ವಿಶಿಷ್ಟತ್ವೇನ ಚ ವಿಜ್ಞೇಯೋ ಭಗವಾನ್ ನಾರಾಯಣ ಇತಿ ಸಿದ್ಧಮ್ ।

ಅತೋ ನಿಃಶೇಷದೋಷವರ್ಜಿತಃ ಪೂರ್ಣಾಽನಂತಗುಣೋ ನಾರಾಯಣ ಇತಿ ಸಿದ್ಧಮ್।

ದ್ವಿತೀಯ ಪರಿಚ್ಛೇದವು ಲಕ್ಷ್ಮೀದೇವಿಯು ಅಕ್ಷರಪುರುಷಳು; ಬ್ರಹ್ಮರುದ್ರಾದಿ ಸಮಸ್ತ ಇತರ ಚೇತನರು ಕ್ಷರಪುರುಷರು. ಶ್ರೀಹರಿಯು ಈ ಉಭಯವಿಧ ಪುರುಷರಿಗಿಂತಲೂ ವಿಲಕ್ಷಣನೂ, ಉತ್ತಮನೂ ಆಗಿರುವನು.

ಆದ್ದರಿಂದ ಅವನು ಪುರುಷೋತ್ತಮನು ಎಂಬ ಭಗವದ್ಗೀತೆಯ ಹದಿನೈದನೇ ಅಧ್ಯಾಯದ ಕೊನೆಯ ಭಾಗದ ವಿವರಣೆಯಾಗಿದೆ. ಆ ಅರ್ಥದಲ್ಲಿ ಇದು ಗೀತೆಯ ಆ ಭಾಗಕ್ಕೆ ಭಾಷ್ಯತಾತ್ಪರ್ಯವೂ ಆಗಿದೆ.

ತೃತೀಯಪರಿಚ್ಛೇದವು ಶ್ರೀಹರಿಯ ದೋಷದೂರತ್ವ ಮತ್ತು ಗುಣಪೂರ್ಣತ್ವಗಳನ್ನು ಸಮರ್ಥಿಸಲು ಮೀಸಲು. ಭಗವಂತನಿಗೆ ಹುಟ್ಟು, ಸಾವು, ರೋಗ, ರುಜಿನ, ವಿಯೋಗ ಮೊದಲಾಗಿ ಯಾವ ದೋಷಗಳೂ ಇಲ್ಲ.

ಉತ್ತರಗೋಗ್ರಹಣದಲ್ಲಿ ಅರ್ಜುನನು ಒಂಟಿಯಾಗಿ ಸಕಲಶತ್ರುಗಳನ್ನು ಮೆಟ್ಟಿದಂತೆ ತತ್ತ್ವನಿರ್ಣಯವೆಂಬ ಈ ಪ್ರಕರಣ ಸಕಲ ದುರ್ವಾದಿಗಳನ್ನು ಮೆಟ್ಟಲು ನೆರವಾಗುತ್ತದೆ ಎಂಬುದಾಗಿ 'ಸುಮಧ್ವವಿಜಯ' ಇದನ್ನು ಕೊಂಡಾಡಿದೆ.

ಶ್ರೀಪದ್ಮನಾಭತೀರ್ಥರು ಮತ್ತು ಶ್ರೀನಾರಾಯಣಪಂಡಿತಾಚಾರ್ಯರು ಟೀಕೆ ರಚಿಸಿದ್ದು ಅವು ಪ್ರಾಚೀನಟೀಕೆ ಎಂದ ಪ್ರಸಿದ್ಧ. ಇದಕ್ಕೆ ಶ್ರೀಜಯತೀರ್ಥರು ಟೀಕೆ ರಚಿಸಿದ್ದು ಆ ಟೀಕೆಗೆ ಶ್ರೀರಘೂತ್ತಮತೀರ್ಥರು, ಶ್ರೀವಿಜಯೀಂದ್ರತೀರ್ಥರು,

ಶ್ರೀರಾಘವೇಂದ್ರತೀರ್ಥರು, ಶ್ರೀವೇದೇಶತೀರ್ಥರು, ಶ್ರೀಬಿದರಹಳ್ಳಿ ಶ್ರೀನಿವಾಸತೀರ್ಥರು, ಪಾಂಡುರಂಗಿ ಕೇಶವಾಚಾರ್ಯರು, ಶ್ರೀವ್ಯಾಸತತ್ತ್ವಜ್ಞತೀರ್ಥರು ಮೊದಲಾದ ಅನೇಕ ಮಹನೀಯರು ರಚಿಸಿರುವ ಟಿಪ್ಪಣಿಗಳುಂಟು. ಶ್ರೀಪದ್ಮನಾಭತೀರ್ಥರ ಟೀಕೆ, ಶ್ರೀವೇದೇಶತೀರ್ಥರಟಿಪ್ಪಣಿ ಮತ್ತು ಶ್ರೀವಿಜಯೀಂದ್ರತೀರ್ಥರ ಟಿಪ್ಪಣಿಗಳು ಇನ್ನೂ ಪ್ರಕಾಶಿತವಾಗಿಲ್ಲ. ಉಳಿದವು ಪ್ರಕಾಶಿತವಾಗಿವೆ.

೧೦. ಕರ್ಮನಿರ್ಣಯ

ಕರ್ಮನಿರ್ಣಯವು ದಶಪ್ರಕರಣಗಳಲ್ಲಿ ವೇದಾರ್ಥನಿರ್ಣಯಕ್ಕೆ ಸಂಬಂಧಿಸಿದ ಪ್ರಕರಣಗ್ರಂಥವಾಗಿದೆ. ಋಗ್ಭಾಷ್ಯದಲ್ಲಿ ಋಗ್ವೇದದ ಮೊದಲ ನಲವತ್ತು ಋಕ್ಕುಗಳುಗೆ ಕ್ರಮವಾಗಿ ಭಾಷ್ಯವನ್ನು ರಚಿಸಿರುವ ಶ್ರೀಮದಾಚಾರ್ಯರು ಈ ಕರ್ಮನಿರ್ಣಯದಲ್ಲಿ ವೇದಾರ್ಥನಿರ್ಣಯಕ್ಕೆ ಅತ್ಯಗತ್ಯವಾದ ವಿವರಗಳನ್ನು ನೀಡಿರುವರು. ಖಂಡನತ್ರಯ ಮೊದಲಾದ ಪ್ರಕರಣಗಳಿಂದ ಅದ್ವೈತ ವಿಮರ್ಶೆಗೆ ಭದ್ರತಳಹದಿಯನ್ನು ನೀಡಿದಂತೆ, ಪ್ರಮಾಣಲಕ್ಷಣ, ಕಥಾಲಕ್ಷಣಗಳ ಮೂಲಕ ಪ್ರಮಾಣ ಹಾಗೂ ಶಾಸ್ತ್ರಚರ್ಚೆಯ ಬಗ್ಗೆ ಬೆಳಕು ಚೆಲ್ಲಿದಂತೆ ತತ್ತ್ವಸಂಖ್ಯಾನ, ತತ್ತ್ವವಿವೇಕ, ತತ್ತ್ವೋದ್ಯೋತ ಹಾಗೂ ತತ್ತ್ವನಿರ್ಣಯಗಳ ಮೂಲಕ ತಾತ್ತ್ವಿಕ ವಿವರಗಳ ಪರಿಸ್ಫುಟವಾದ ಚಿತ್ರ ನೀಡಿದಂತೆ ಈ ಕರ್ಮನಿರ್ಣಯದಲ್ಲಿ ವೇದಾರ್ಥನಿರ್ಣಯಕ್ಕೆ ಅನುಕೂಲವೆನ್ನಿಸುವ ವ್ಯಾಖ್ಯಾನಸ್ವರೂಪದ ಬಗ್ಗೆ ಪ್ರಕಾಶ ಬೀರಿರುವರು. ಇದರ ಅಧ್ಯಯನ ವೈದಿಕಪ್ರಪಂಚದ ದರ್ಶನಕ್ಕೆ ಅಗತ್ಯವಾದ ದಿವ್ಯನೋಟವನ್ನು ಒದಗಿಸಿಕೊಡುತ್ತದೆ. ಖಂಡಾರ್ಥನಿರ್ಣಯವೆಂಬುದಾಗಿಯೂ ಇದು ಪ್ರಸಿದ್ಧವಿದೆ. ಸುಮಧ್ವವಿಜಯದಲ್ಲಿ ಬಂದಿರುವಂತೆ ಶ್ರೀಮದಾಚಾರ್ಯರು ಇದನ್ನು ರಚಿಸಿದ್ದು ಉಜಿರೆಯಲ್ಲಿ:

ಸ ಗ್ರಾಮಂ ಪರಮಭಿಯಾತ ಉಚ್ಚಭೂತಿಂ
ವಿದ್ವಾಂಸಃ ಕ್ವ ಕುಹರಕೂಪದದುರ್ರಾಭಾಃ ।
ಇತ್ಯೂಚೇ ಮಂದಮತಿಮಾನಿನೋಽಖಿಲಜ್ಞಂ-
ಮನ್ಯಸ್ಯ ಕ್ಷಪಯಿತುಮೇವ ತಜ್ಜನಸ್ಯ ॥

ಸರ್ವಜ್ಞೋಽಪ್ಯಯಮಧಿಕಂ ನ ಯಜ್ಞಭಂಗೀಂ
ಸಂವಿತ್ತೇ ಯತಿರಿತಿ ಬದ್ಧನಿಶ್ಚಯೋಽಸೌ ।
ಆಭ್ರಾಂತಂ ಪರಿಷದಿ ಮತ್ಸರಾದಪೃಚ್ಛತ್
ಕರ್ಮಾರ್ಥಶ್ರುತಿಗಹನಾರ್ಥಖಂಡಭಾವಮ್ ॥

ಛಂದೋಭ್ಯಶ್ಚ್ಯುತರಸಸಂಗ್ರಹಪ್ರವೀಣಾನ್
ಷಷ್ಠೇಽಹ್ನಿ ಪ್ರತಿವಿಹಿತಾನ್ ಪ್ರಜಾಧಿಪೇನ ।
ನಾರಾಶಂಸ್ಯಚರಮಚಾರುಮಂತ್ರಭೇದಾ-
ನೂಚೇಽಸೌ ತಮಭಿದಧದ್ವಿಸಂಶಯಾಂಶಃ ॥

ಪಾಂಡಿತ್ಯಂ ಪರಮಮವೇಕ್ಷ್ಯ ತಸ್ಯ ತಾದೃಕ್
ಸಂಘರ್ಷಕ್ಷುಭಿತಮನಾ ವಿಪಕ್ಷಸಂಘಃ ।
ನಾರ್ಥಃ ಸ್ಯಾದಯಮಿತಿ ವರ್ಣಯನ್ನಥ ತ್ವಂ
ತಂ ಬ್ರೂಹೀತ್ಯುರುಮತಿನೇರಿತೋಽದ್ರವದ್ದ್ರಾಕ್ ॥

ಸೋಽಪೃಚ್ಛತ್ ತಮಥ ಮಹಾಹ್ವಯೋಪಸರ್ಗಾ
ಯತ್ರೋಕ್ತಾ ಮನುಚರಣೋಪಸೃಜ್ಯರೂಪಾಃ ।
ತಸ್ಯಾರ್ಥಂ ವಚನಚಯಸ್ಯ ತಂ ಬ್ರುವಾಣಃ
ಸ್ಥೈರ್ಯಾರ್ಥಂ ಸಪದಿ ಸ ಲೇಖಯಾಂಬಭೂವ ॥

– ಮಧ್ವವಿಜಯ (೧೬/೪೧-೪೫)

ತಮ್ಮನ್ನು ಸೋಲಿಸಲು ಹಾತೊರೆಯುತ್ತಿದ್ದ ವಿದ್ವಾಂಸರನ್ನು ಸೋಲಿಸಲೆಂದು ಶ್ರೀಮದಾಚಾರ್ಯರು ಉಜಿರೆಗೆ ಬಂದು ವಾದಕ್ಕೆ ಆಹ್ವಾನವಿತ್ತರು. ಅಲ್ಲಿಯ ವಿದ್ವಾಂಸರು ಆಚಾರ್ಯರು ಎಷ್ಟೇ ಸರ್ವಜ್ಞರಾಗಿದ್ದರೂ ಸನ್ಯಾಸಿಗಳಾಗಿರುವುದರಿಂದ ಯಜ್ಞದ ರೀತಿ ನೀತಿಗಳನ್ನು ತಿಳಿದಿರಲಾರರು ಎಂಬ ಭಾವನೆಯಿಂದ ಕರ್ಮಾರ್ಥಪ್ರತಿಪಾದಕವಾದ ಬ್ರಾಹ್ಮಣಖಂಡದ ಅರ್ಥವನ್ನು ಕೇಳಿದರು. ಆಚಾರ್ಯರು ತತ್ಕ್ಷಣವೇ ಅದಕ್ಕೆ ಸಮರ್ಪಕವಾದ ಉತ್ತರವನ್ನು ನೀಡಲು ಆ ವಿದ್ವಾಂಸರು ನಿರುತ್ತರರಾಗಿ ಪಲಾಯನ ಮಾಡಿದರು. ಮತ್ತೆ ಬೇರೊಂದು ಯೋಜನೆಯನ್ನು ಹಮ್ಮಿಕೊಂಡು ಅವರೆಲ್ಲ ಐತರೇಯಬ್ರಾಹ್ಮಣ ಮತ್ತು ಆರಣ್ಯಕಗಳಲ್ಲಿ ಬರುವ ಮಹಾವ್ರತಕ್ಕೆ ಸಂಬಂಧಿಸಿದ ಮಹಾನಾಮ್ನೀಮಂತ್ರದ ಅರ್ಥ ಮತ್ತು ಅದರ ವಿನಿಯೋಗದ ಬಗ್ಗೆ ಪ್ರಶ್ನಿಸಿದರು. ಶ್ರೀಮದಾಚಾರ್ಯರು ಅದಕ್ಕೆಲ್ಲ ಸಮಗ್ರ ಉತ್ತರವನ್ನು ನೀಡಿ ಅವರನ್ನೆಲ್ಲ ಮತ್ತೊಮ್ಮೆ ಪರಾಭವಗೊಳಿಸಿದರು. ಮತ್ತು ತಾವು ಆಗ ಹೇಳಿದ ಅರ್ಥಗಳನ್ನೆಲ್ಲ ನಿರಂತರ ಪ್ರಸಾರಕ್ಕೆಂದು ತತ್ಕ್ಷಣವೇ ಲೇಖನ ಮಾಡಿಸಿದರು. ಆ ಗ್ರಂಥವೇ 'ಕರ್ಮನಿರ್ಣಯ'. ಇದರಲ್ಲಿ ಆ ಮಂತ್ರಗಳ ಆಧ್ಯಾತ್ಮಿಕ ಅರ್ಥ ನಿರೂಪಣೆ ಮೊಟ್ಟಮೊದಲಬಾರಿಗೆ ಆವಿಷ್ಕೃತವಾಗಿ ವೇದಾರ್ಥಮೀಮಾಂಸೆಗೆ ಹೊಸ ತಿರುವನ್ನು ತಂದುಕೊಟ್ಟಿತು. ವೈದಿಕಸಾಹಿತ್ಯವನ್ನು ಕರ್ಮಕಾಂಡ ಮತ್ತು ಜ್ಞಾನಕಾಂಡವೆಂದು ಪ್ರತ್ಯೇಕಿಸಿ ನೋಡುವ ಪ್ರವೃತ್ತಿಯನ್ನೇ ಪ್ರಶ್ನಿಸಿದ ಈ ಕೃತಿ ಒಂದು ವಿಶಿಷ್ಟಪ್ರಕರಣಗ್ರಂಥ. ಒಟ್ಟಾಗಿ ವೇದಾರ್ಥಮೀಮಾಂಸೆಗೆ ದಿಕ್ಸೂಚಿಯಾಗಿ ರಚಿತವಾದ ಈ ಕೃತಿಯ ವಿಸ್ತೃತಭಾಗವೆಂಬುದಾಗಿ ಅವರ ಋಗ್ಭಾಷ್ಯವನ್ನು ನೋಡಬಹುದು; ಎಂದರೆ ಇದರ ಅಧ್ಯಯನ ಋಗ್ಭಾಷ್ಯದ ಅಧ್ಯಯನಕ್ಕೂ ಆ ಮೂಲಕ ಸಮಗ್ರವೈದಿಕಸಾಹಿತ್ಯದ ಪರಿಜ್ಞಾನಕ್ಕೂ ದಾರಿದೀಪವಾಗಿದೆ.

ಇದರಲ್ಲಿ ಬ್ರಹ್ಮನಿರ್ಗುಣ, ನಿರ್ವಿಶೇಷ ಎಂಬ ವಾದಿಗಳ ಅಸ್ವಾರಸ್ಯವನ್ನು ನಿರೂಪಿ-ಸಿರುವರು. ಕರ್ಮಾಚರಣೆಯ ಸ್ವರೂಪವನ್ನು ಸಹ ಕೊನೆಯಲ್ಲಿ ತಿಳಿಸಿಕೊಟ್ಟಿರುವರು:

ಭಗವದ್ಭಕ್ತಿ ಜ್ಞಾನವೈರಾಗ್ಯಪೂರ್ವಕಂ ಚ ಕರ್ಮ ಕರ್ತವ್ಯಮ್ ।

ಮೊಸರು ಕಡೆಯುವುದು, ಆನೆ ಘೀಳಿಡುವುದು, ಕಾಲ್ಗೆಜ್ಜೆಗಳ ಧ್ವನಿ, ಹಲ್ಲಿಯ ಲೊಚಗೊಟ್ಟುವಿಕೆ ಮೊದಲಾದ ಬಗೆಬಗೆಯ ಧ್ವನಿಗಳು ಸಹ ಶ್ರೀಹರಿಯ ಪಾರಮ್ಯವನ್ನೇ ಸಾರುವವು ಎಂಬ ಇಲ್ಲಿಯ ನಿರೂಪಣೆ ಅತ್ಯಂತ ರೋಚಕವಾದುದು :

'ದಧ್ನೋ ಮಥನಶಬ್ದಶ್ಚಾಪ್ಯಂತರ್ನಾದಸ್ವರೂಪತಃ ।
ಭೀಷಕತ್ವಂ ಹರೇರ್ಬ್ರೂಯಾದಂತರ್ನಾದೋ ಹಿ ಭೀಷಣೇ ।
ಗಜಬೃಂಹಿತಮಪ್ಯೇವಂ ಧಿಕ್ಕಾರಸಹಿತಂ ವದೇತ್ ।
ಸ್ವರಿತೇನ ಸಮಾಯೋಗಾದ್ಧಿಕ್ಕೃತೌ ಸ್ವರಿತೋ ಯತಃ ।
ಮಹಾಮಂತ್ರಂ ಜಲಾದ್ಯೈಶ್ಚ ಯುಕ್ತಮೇತಾದೃಶಂ ವದೇತ್ ।
ಪಾದಭೂಷಾ ಚ ಧಿಕ್ಕಾರಂ ತತ್ಕೃತಂ ಸ್ವರಿತಂ ವದೇತ್ ।
ಅದ್ಭುತತ್ವಂ ಹರೇರ್ವಕ್ತಿ ಪಿಂಗಾಕಂಠಗಶಬ್ದವತ್ ।
ತಾಮೇವಾದ್ಭುತತಾಂ ವಕ್ತಿ ಗೃಹಗೋಧಾ ಪರಾऽಪಿ ಚ' ಇತಿ ಶಬ್ದತತ್ತ್ವೇ॥ ೨॥

ಪ್ರಾಸಂಗಿಕವಾಗಿ ಇದರಲ್ಲಿ ಶ್ರೀಹರಿಯ ವಡವಾಗ್ನಿರೂಪದ ವಿವರವನ್ನೂ ಸಹ ನೀಡಿರುವರು :

'ಭೂತಾದಿಭೂತೋಂಬುನಿಧಾನಮಧ್ಯೇ ಭೂತ್ವಾ ಹರಿಃ ಸರ್ವಹರೋऽತಿಧಾಮ್ನಾ ।
ಅಗಾಧಮಂಭೋ ವಿದಧಾತಿ ಭಸ್ಮ ಯೋ ವಾಡವಾಗ್ನಿರ್ನಹರಿರ್ವಿಚಿಂತ್ಯಃ'

ಇತಿ ವೈಹಾಯಸಸಂಹಿತಾಯಾಮ್ ।

★★★★

---

೧. ತತ್ರೈಕ ಆಹುರಗುಣಂ ಬ್ರಹ್ಮೇತಿ । ನ ತದ್ಯುಕ್ತಮ್ । ಶ್ರುತಿಯುಕ್ತಿವಿರೋಧಾತ್। ಸತ್ತ್ವಾದಿಗುಣಾಭಾವೋಕ್ತೇಸ್ತತ್ರ । ಅನ್ಯಥಾ 'ಏಕೋ ದೇವಃ ಸರ್ವಭೂತೇಷು ಗೂಢಃ' ಇತ್ಯಾದೀನಾಮಪಿ ಗುಣತ್ವಾತ್ ಸ್ವೋಕ್ತಿವಿರೋಧಃ ।

ನ ಚ ನಿರ್ವಿಶೇಷತ್ವೇ ಕಿಂಚಿನ್ಮಾನಮ್ । ಅಶೇಷವಿಶೇಷವಚನಾನುಭವಯುಕ್ತಿವಿರೋಧಶ್ಚ । ನ ಚ ಮಿಥ್ಯಾವಿಶೇಷವತ್ । ವ್ಯಾಹತೇಃ । ಮಿಥ್ಯಾವಿಶೇಷ ಇತ್ಯುಕ್ತೇಃ ಹ್ಯಸದ್ವಿಶೇಷ ಇತ್ಯೇವ ಭವತಿ । ತಥಾ ಚ ವಿಶೇಷವಿಶಿಷ್ಟಪಕ್ಷೋಕ್ತದೋಷ ಏವ। ನ ಚಾನಿರ್ವಚನೀಯವಿಶೇಷ ಇತಿ ಭವತಿ । ಅನಿರ್ವಚನೀಯಾಸಿದ್ಧೇಃ । ನ ಹಿ ತತ್ರ ಪ್ರತ್ಯಕ್ಷಮಸ್ತಿ । ಮಿಥ್ಯಾಶಬ್ದಸ್ತ್ವಭಾವವಾಚ್ಯೇವ । ತದನ್ಯತ್ರ ಪ್ರಮಾಣಾಭಾವಾತ್ । ನ ಚಾನ್ಯತ್ ಪ್ರಮಾಣಮ್ । ಪ್ರತಿಜ್ಞಾವ್ಯಾಹತೇಃ । ನ ಹಿ ಸದಂತರಾದಸತಶ್ಚಾನ್ಯತ್ ಸದಸದ್ವಿಲಕ್ಷಣಂ ಪ್ರಸಿದ್ಧಮ್ । ಅಸನ್ನ ಭವತೀತ್ಯುಕ್ತೇ 'ದ್ವೌ ನಞೌ ಪ್ರಕೃತಮರ್ಥಂ ಸಾತಿಶಯಂ ಗಮಯತಃ' ಇತಿ ಸದೇವ ಭವತಿ । ಅಸದಂತರಂ ವಾ ವಿಶೇಷವಿವಕ್ಷಾಯಾಮ್ ।

'ವಿನಿಶ್ಚಿತೇ ತು ಸಂವಾದೇ ವಿಭಾಗೋ ರಂಗ ಏವ ಚ' ಇತಿ ಶಬ್ದನಿರ್ಣಯೇ ।

ಆಚಾರ ಗ್ರಂಥಗಳು

ಸದ್ವಿಚಾರದಂತೆ ಸದಾಚಾರವೂ ಸಾಧನೆಯ ಅವಶ್ಯ ಅಂಗ. ಸದ್ವಿಚಾರ ಭಗವತ್ಪ್ರೀತಿಗೂ, ಆ ಮೂಲಕ ಮುಕ್ತಿಗೂ ಸಾಧನವಾದರೆ, ಸದಾಚಾರ ಅಂತಹ ಸದ್ವಿಚಾರವನ್ನು ಸಂಪಾದಿಸಲು ವಿಹಿತವಾದ ಅತಿಮುಖ್ಯ ಸಾಧನವಾಗಿದೆ. 'ಆಚಾರಹೀನಂ ನ ಪುನಂತಿ ವೇದಾಃ', 'ಆಚಾರಪ್ರಭವೋ ಧರ್ಮಃ' ಮೊದಲಾದ ವಚನಗಳಲ್ಲಿ ಆಚಾರದ ಹಿರಿಮೆ ನಿರೂಪಿತವಾಗಿದೆ. ಶಂಕರಾಚಾರ್ಯರ ಕೃತಿಗಳಲ್ಲಿ ಸದಾಚಾರದ ಬಗ್ಗೆ ಬೆಳಕು ಚೆಲ್ಲುವ ಕೃತಿಗಳು ಇಲ್ಲ. ರಾಮಾನುಜಾಚಾರ್ಯರ 'ನಿತ್ಯಗ್ರಂಥ' ಭಗವತ್ಪೂಜಾವಿಧಾನಕ್ಕಷ್ಟೇ ಒತ್ತು ಕೊಟ್ಟು ಉಳಿದ ಆಚಾರಗಳ ಬಗ್ಗೆ ಮಾಹಿತಿ ನೀಡುವುದಿಲ್ಲ. ಆದರೆ ಆಚಾರ್ಯ ಶ್ರೀಮಧ್ವರು ಆಚಾರದ ಬಗ್ಗೆ ಬೆಳಕು ಚೆಲ್ಲುವ ಒಟ್ಟು ಐದು ಕೃತಿಗಳನ್ನು ನೀಡಿರುವರು. ಅವು ಸದಾಚಾರಸ್ಮೃತಿ, ಕೃಷ್ಣಾಮೃತಮಹಾರ್ಣವ, ಜಯಂತೀನಿರ್ಣಯ, ತಂತ್ರಸಾರಸಂಗ್ರಹ ಮತ್ತು ಯತಿಪ್ರಣವಕಲ್ಪ.

ಬ್ರಹ್ಮಚರ್ಯ, ಗೃಹಸ್ಥ, ವಾನಪ್ರಸ್ಥ ಮತ್ತು ಸನ್ಯಾಸ ಎಂಬ ನಾಲ್ಕು ಆಶ್ರಮದವರೂ, ಬ್ರಾಹ್ಮಣಾದಿ ವರ್ಣದವರೂ ಪ್ರತಿನಿತ್ಯ ಅಳವಡಿಸಿಕೊಳ್ಳಲೇಬೇಕಾದ ಸದಾಚಾರದ ಸ್ವರೂಪ ಮತ್ತು ಅದರ ವಿವರಗಳು 'ಸದಾಚಾರಸ್ಮೃತಿ'ಯಲ್ಲಿ ನಿರೂಪಿತವಾಗಿವೆ. ಆರಂಭದ ಶ್ಲೋಕದಲ್ಲಿ ಕರ್ಮಾಚರಣೆಯ ಸ್ವರೂಪ, ಅವುಗಳ ಸಾರ್ಥಕ್ಯ, ನಿಷ್ಕಾಮತೆಯ ಅವಶ್ಯಕತೆ ಮತ್ತು ಕೃಷ್ಣಾರ್ಪಣಬುದ್ಧಿಯ ಅವಶ್ಯಕತೆಗಳನ್ನು ಗೀತಾಶ್ಲೋಕವನ್ನು ಆಧರಿಸಿದ ಮಂಗಲ ಶ್ಲೋಕದಲ್ಲಿ ನಿರೂಪಿಸಿರುವರು:

> **ಯಸ್ಮಿನ್ ಸರ್ವಾಣಿ ಕರ್ಮಾಣಿ ಸಂನ್ಯಸ್ಯಾಧ್ಯಾತ್ಮಚೇತಸಾ ।**
> **ನಿರಾಶೀರ್ನಿರ್ಮಮೋ ಯಾತಿ ಪರಂ ಜಯತಿ ಸೋಽಚ್ಯುತಃ॥**

ಪ್ರತಿದಿನ ಹರಿಸ್ಮೃತಿಪೂರ್ವಕವಾಗಿ ಎಚ್ಚರಗೊಳ್ಳುವುದು, ಶೌಚ, ದಂತಧಾವನ, ಆಚಮನ, ಸ್ನಾನ, ಸೂರ್ಯಾರ್ಘ್ಯ, ಗಾಯತ್ರೀಜಪ, ಅಷ್ಟಾಕ್ಷರಮಂತ್ರಜಪ, ಉಪಸ್ಥಾನ, ಬ್ರಹ್ಮಯಜ್ಞ, ದೇವಪೂಜೆ, ಪಾಠಪ್ರವಚನ, ನೈವೇದ್ಯ, ವೈಶ್ವದೇವ, ಬಲಿಹರಣ, ಪುನಃಪಾಠಪ್ರವಚನ, ಸಾಯಂಸಂಧ್ಯಾವಂದನ ಮತ್ತು ನಿದ್ರಾವಿಧಿ ಇವು ಪ್ರಧಾನವಾಗಿ ಉಲ್ಲೇಖಿಸಲ್ಪಟ್ಟಿರುವ ನಿತ್ಯಕರ್ಮಗಳು. ಸ್ನಾನವಿಧಿಯು ವಿಸ್ತಾರವಾಗಿಯೇ ನಿರೂಪಿತ-ವಾಗಿದೆ. ಗಾಯತ್ರೀಜಪದ ಸಂಖ್ಯೆ, ಜಪಕ್ಕೆ ಸೂಕ್ತಕಾಲ, ಜಪವಿಧಿಗಳು ಉಲ್ಲೇಖಿಸಲ್ಪಟ್ಟಿವೆ. ಪ್ರಧಾನಜ್ಞಾನಸಾಧನವಾದ ಪಾಠಪ್ರವಚನಗಳಿಗೆ ದಿನದ ಸಿಂಹಪಾಲು ವಿನಿಯೋಗ-ವಾಗಬೇಕು ಎಂಬುದು ಇದರಲ್ಲಿ ನಿರೂಪಿತವಾದ ಅತಿಮುಖ್ಯವಾದ ನಿತ್ಯವಿಧಿ.

ನಿತ್ಯವಿಧಿಗಳ ಪಟ್ಟಿಯನ್ನು ಯಾವುದೇ ಆಚಾರಗ್ರಂಥ ನೀಡಬಲ್ಲುದು. ಆದರೆ ಆಚಾರ್ಯರ ಸದಾಚಾರಸ್ಮೃತಿ ಹಾಗಲ್ಲ. 'ಸ್ಮೃತ್ವಾ ವಿಷ್ಣುಂ', 'ಸ್ವದೇಹಸ್ಥಂ ಹರಿಂ ಸ್ಮರನ್', 'ಧ್ಯಾತ್ವಾ ಸೂರ್ಯಗತಂ ಹರಿಂ', 'ಅರ್ಕಮಂಡಲಗಂ ವಿಷ್ಣುಂ ಧ್ಯಾತ್ವೈವ',

'ಸ್ವಾಧ್ಯಾಯೇನಾರ್ಚಯೇದ್ಧರಿಂ', 'ಧ್ಯಾನಪ್ರವಚನಾಭ್ಯಾಂ ಚ ಯಥಾಯೋಗ್ಯಮುಪಾಸನಂ', 'ಸ್ನಾತ್ವಾ ಸಂಪೂಜಯೇದ್ವಿಷ್ಣುಂ', 'ವೈಶ್ವದೇವಂ ಬಲಿಂ ಚೈವ ಕಾರ್ಯಂ ನಿತ್ಯಂ ತದರ್ಪಣಂ', 'ಭುಂಜೀತ ಹೃದ್ಗತಂ ವಿಷ್ಣುಂ ಸ್ಮರಂಸ್ತದ್ಗತಮಾನಸಃ', 'ವೇದಶಾಸ್ತ್ರವಿನೋದೇನ ಪ್ರೀಣಯನ್ ಪುರುಷೋತ್ತಮಮ್', 'ಸ್ವಪೇದ್ ಧ್ಯಾಯನ್ ಜನಾರ್ದನಂ', 'ಅಂತರಾಲೇ ತಥೋದ್ಬುದ್ಧಃ ಸ್ಮರೇತ ಬಹುಶೋ ಹರಿಂ', ಎಂಬುದಾಗಿ ಪ್ರತಿಯೊಂದು ಕರ್ಮದ ಹಿನ್ನೆಲೆಯಾಗಿ 'ವಿಷ್ಣು-ಪ್ರೇರಣಯಾ ವಿಷ್ಣುಪ್ರೀತ್ಯರ್ಥಂ' ಅನುಸಂಧಾನಕ್ರಮವೇ ಕರ್ಮಾಚರಣೆಯ ಜೀವಾಳ ಎಂಬುದನ್ನು ಪ್ರತಿಪಾದಿಸುವುದು ಇದರ ಅಸಾಧಾರಣ ಮಹತ್ತ್ವ. ಕರ್ಮಕ್ಕೇ ಪ್ರಾಧಾನ್ಯ ಕೊಡುವ ಪೂರ್ವಮೀಮಾಂಸಕರು ಒಂದು ಬಾರಿಯೂ ಹೇಳದೆ ಹೋಗಿದ್ದ 'ಭಗವ-ತ್ಪ್ರೀತ್ಯರ್ಥಂ' ಎಂಬ ಅಂಶ ಇಲ್ಲಿ ಒಮ್ಮೆಯೂ ತಪ್ಪಿಲ್ಲ ಎಂಬುದನ್ನು ಗಮನಿಸಬಹುದು.

ಗಾಯತ್ರೀಮಂತ್ರದ ಧ್ಯೇಯದೇವತೆ 'ನಾರಾಯಣ', ನಾರಾಯಣಾಷ್ಟಾಕ್ಷರವು ಗಾಯತ್ರೀ ಮಂತ್ರದಂತೆಯೇ ಅತ್ಯಗತ್ಯ ಜಪಿಸಲೇ ಬೇಕಾದ ಮೂಲಮಂತ್ರ ಎಂಬುದು ಆಚಾರ್ಯರಿಂದಲೇ ಬೆಳಕಿಗೆ ಬಂದ ಮತ್ತೆರಡು ಮುಖ್ಯಾಂಶಗಳು.

ವಟುಗಳಿಗೆ ವೈಶ್ಯದೇವ ಬಲಿಹರಣಗಳು ವಿಹಿತವಲ್ಲ. ಆದರೆ ಅಗ್ನಿಕಾರ್ಯ ಅವರಿಗೆ ವಿಹಿತ. ಸರ್ವವರ್ಣಾಶ್ರಮದವರಿಗೂ ವಿಷ್ಣುವಿನ ಆರಾಧನೆಯೂ ತಾರತಮ್ಯಕ್ರಮದಲ್ಲಿ ರಮಾಬ್ರಹ್ಮಾದಿಗಳ ಆರಾಧನೆಯೂ ಅತ್ಯಂತ ವಿಹಿತ ಎಂಬ ಉಪದೇಶವೂ ಇದರಲ್ಲಿದೆ.

ಕೇವಲ ನಲ್ವತ್ತು ಶ್ಲೋಕಗಳ (ಇದರಲ್ಲಿ ಅನೇಕ ಶ್ಲೋಕಗಳು ಪ್ರಮಾಣವಚನಗಳ ಉದಾಹರಣೆಗಳು) ಚಿಕ್ಕ ಗಾತ್ರದ ಕೃತಿ ದೈನಂದಿನ ಸದಾಚಾರದ ಬಗ್ಗೆ ವಿಶೇಷ ಬೆಳಕು ಚೆಲ್ಲುವ ಮಹತ್ಕಾರ್ಯವನ್ನು ಸಾಧಿಸಿದೆ.

'ಕೃಷ್ಣಾಮೃತಮಹಾರ್ಣವ'ವು ವಿಭಿನ್ನ ರೀತಿಯ ರಚನೆ. ಆಚಾರ್ಯರು ಸಂಚಾರಕ್ರಮೇಣ ಕೊಕ್ಕಡ(ವೈದ್ಯನಾಥೇಶ್ವರಕ್ಷೇತ್ರ) ಎಂಬ ಕ್ಷೇತ್ರಕ್ಕೆ ಆಗಮಿಸಿದ್ದಾಗ ಅಲ್ಲಿ ಎಡಪಾಡಿತ್ತಾಯ ಎಂಬ ಭಕ್ತನ ಪ್ರಾರ್ಥನೆಯಂತೆ ನಿರೂಪಿಸಿದ ಆಚಾರಸಂಹಿತೆಯೇ ಈ 'ಕೃಷ್ಣಾಮೃತಮಹಾರ್ಣವ'.

ಅರ್ಚನೆ, ಸಂಸ್ಮರಣೆ, ಧ್ಯಾನ, ಕೀರ್ತನ, ಕಥನ ಮತ್ತು ಶ್ರವಣ ಎಂಬ ಆರು ವಿಧ ಉಪಾಸನೆಯಿಂದ ಭಗವಂತನು ಮುಕ್ತಿ ಕೊಡುವಂತಹ ವಿಶೇಷಾನುಗ್ರಹ ಮಾಡುವನು ಎಂಬ ಸಂದೇಶದೊಂದಿಗೆ ಕೃತಿ ಪ್ರಾರಂಭವಾಗುವುದು. ತಾಪತ್ರಯದಿಂದ ಬೆಂದ ಜನಕ್ಕೆ ಅಮೃತ ಸೇಚನ ಮಾಡಿಸಲೆಂದು ಕೃಷ್ಣಾಮೃತಮಹಾರ್ಣವದ ರಚನೆ ಎಂಬುದಾಗಿ ಗ್ರಂಥದ ಉದ್ದೇಶವನ್ನು ತಿಳಿಸಿರುವರು. ದೇವಪೂಜೆಯ ಮಹತ್ತ್ವ, ಪೂಜಿಸಲೇಬೇಕಾದ ಸಾಲಿಗ್ರಾಮ ಮತ್ತು ಚಕ್ರಾಂಕಿತಗಳ ಹಿರಿಮೆ, ನಮಸ್ಕಾರ, ಪ್ರದಕ್ಷಿಣೆ, ತೀರ್ಥಪ್ರಾಶನ, ಪ್ರಸಾದ ಸ್ವೀಕಾರಗಳ ಮಹತ್ತ್ವ, ಊರ್ಧ್ವಪುಂಡ್ರಧಾರಣೆ, ಗೋಪೀಚಂದನಧಾರಣೆ, ಅಂಗಾರಕಾದಿಗಳ ವಿಶೇಷ, ಹರಿಸರ್ವೋತ್ತಮತ್ವದ ಪ್ರತಿಪಾದನೆ, ಹರಿದಿನದ ಅಸಾಧಾರಣ

ಮಹತ್ತ್ವ, ಅದರ ವಿಧಿವಿಧಾನಗಳು, ಸರ್ವವರ್ಣಾಶ್ರಮದವರಿಗೂ ಅದು ಕಡ್ಡಾಯ, ಶ್ರವಣ ದ್ವಾದಶೀ, ಅತಿರಿಕ್ತ ದ್ವಾದಶಿಗಳಂದು ಸಹ ಉಪವಾಸವು ವಿಹಿತ, ಸಾಧನದ್ವಾದಶಿಯ ವಿಶೇಷ, ವಿಷ್ಣುಭಕ್ತಿಯ ಮಹಿಮೆ ಮೊದಲಾಗಿ ಅನೇಕ ಪ್ರಮುಖ ವೈಷ್ಣವದೀಕ್ಷೆಯ ವಿಚಾರಗಳು ಇದರಲ್ಲಿ ಸಂಕಲಿತವಾಗಿವೆ.

ಇದರಲ್ಲಿನ ನಾಲ್ಕಾರು ವಾಕ್ಯಗಳನ್ನು ಹೊರತುಪಡಿಸಿ ಇತರ ಎಲ್ಲ ಶ್ಲೋಕಗಳು ವಿಷ್ಣುಪುರಾಣ, ಪದ್ಮಪುರಾಣ ಮೊದಲಾದ ವ್ಯಾಸಕೃತ ಗ್ರಂಥಗಳಲ್ಲಿನ ಶಂಕರಾದಿ-ದೇವತೆಗಳ, ನಾರದಾದಿಮುನಿಗಳ ವಚನಗಳು ಎಂಬುದು ಇದರ ವಿಶೇಷ. ಈ ಬಗೆಯ ರಚನೆಯಿಂದ ಸಾಧಾರವಾಗಿಯೇ ವಿಷಯ ಪ್ರತಿಪಾದನೆಯಾಗುವುದರಿಂದ ತತ್ತ್ವ-ದಾರ್ಢ್ಯಕ್ಕೆ ಹೆಚ್ಚು ಅನುಕೂಲವಾಗುವುದು.

ಗ್ರಂಥದ ಉದ್ದೇಶ, ಸಾಧನೆ ಮತ್ತು ಇದರ ಶ್ರವಣದ ಫಲಗಳನ್ನು ಹೇಳುವ ಇದರಲ್ಲಿನ ಕೆಲವು ಅಪೂರ್ವ ಶ್ಲೋಕಗಳು ಹೀಗಿವೆ:

ತಾಪತ್ರಯೇಣ ಸಂತಪ್ತಂ ಯದೇತದಖಿಲಂ ಜಗತ್ ।
ವಕ್ಷ್ಯಾಮಿ ಶಾಂತಯೇ ತಸ್ಯ ಕೃಷ್ಣಾಮೃತಮಹಾರ್ಣವಮ್ ॥

ಸಂಸಾರವಿಷಪಾನೇನ ಯೇ ಮೃತಾಃ ಪ್ರಾಣಿನೋ ಭುವಿ ।
ಅಮೃತಾಯ ಸ್ಮೃತಸ್ತೇಷಾಂ ಕೃಷ್ಣಾಮೃತಮಹಾರ್ಣವಃ ॥

ಶ್ರುತ್ವಾ ಧರ್ಮಂ ವಿಜಾನಾತಿ ಶ್ರುತ್ವಾ ತ್ಯಜತಿ ದುರ್ಮತಿಮ್ ।
ಶ್ರುತ್ವಾ ಜ್ಞಾನಮವಾಪ್ನೋತಿ ಶ್ರುತ್ವಾ ಮೋಕ್ಷಂ ಚ ಗಚ್ಛತಿ ॥ — ಇತ್ಯಾದಿ

ಮಧ್ವವಿಜಯದಲ್ಲಿ ಇದರ ರಚನೆಗೆ ಸಂಬಂಧಿಸಿದಂತೆ ಬಂದಿರುವ ವಿವರ ಹೀಗಿದೆ:
ಕ್ಷೇತ್ರಾಗ್ರ್ಯಂ ತ್ರಿಭುವನವೈದ್ಯನಾಥನಾಥಂ ಪ್ರಸ್ಥಾಯ ಪ್ರಚುರತರಾಂತರಃ ಪ್ರಭಾವೀ ।
ಶ್ರೀಕೃಷ್ಣಾಮೃತಪರಮಾರ್ಣವಾಭಿಧಾನಾಂ ಚಕ್ರೇ ಸದ್ವಚನತತಿಂ ಸ್ವಭಕ್ತಭೂತ್ಯೈ ॥
(೧೬/೪೦)

ಇಂದ್ರಜಿತ್‌ನ ಉರಗಬಂಧಕ್ಕೆ ಸಿಲುಕಿ ಮೈಮರೆತ ಕಪಿವೃಂದವನ್ನು ಬದುಕಿಸಲೆಂದು ಹನುಮದ್ರೂಪದಿಂದ ಸಂಜೀವನ ತಂದ ಶ್ರೀವಾಯುದೇವರು, ಇಂದ್ರಿಯಗಳನ್ನು ಸೆಳೆಯುವ ಭೌತಿಕಸುಖಗಳ ಆಕರ್ಷಣೆಗೆ ಬಲಿಯಾಗಿ ಜೀವನ್ಮೃತರಾದ ಆಸ್ತಿಕಜನತೆಯನ್ನು ಅಮೃತಸೇಚನದಿಂದ ಬದುಕಿಸುವ ಅಮರಕೃತಿ 'ಕೃಷ್ಣಾಮೃತಮಹಾರ್ಣವ'ವನ್ನು ಶ್ರೀಮಧ್ವರೂಪದಿಂದ ನೀಡಿರುವರು.

ಜಯಂತೀನಿರ್ಣಯವು ಶ್ರೀಕೃಷ್ಣಜಯಂತೀವ್ರತದ ವಿಧಿವಿಧಾನಗಳ ನಿರೂಪಣೆಗೆ ಮೀಸಲಾದ ಪುಟ್ಟಕೃತಿ. ವೈಷ್ಣವರಿಗೆಲ್ಲ ಏಕಾದಶಿಯಂತೆ ಕಡ್ಡಾಯವಾಗಿರುವ ಮತ್ತೊಂದು ಮಹತ್ತ್ವದ ವ್ರತ 'ಶ್ರೀಕೃಷ್ಣಜಯಂತೀ'. ಕೃಷ್ಣಾಷ್ಟಮಿಯಂದು ಮಧ್ಯರಾತ್ರಿಯ ಸಮಯದಲ್ಲಿ ರೋಹಿಣೀನಕ್ಷತ್ರದ ಯೋಗವೂ ಇದ್ದಲ್ಲಿ ಅದು ಕೃಷ್ಣಜಯಂತೀ ಎನಿಸುವುದು. ಅದು

ಸರ್ವವರ್ಣಾಶ್ರಮಗಳಿಗೂ ಅತ್ಯಂತ ವಿಹಿತ. ಉಪವಾಸ ಅಂದಿನ ಪ್ರಮುಖ ಕರ್ತವ್ಯ. ಅಂದಿನ ನಿತ್ಯಾಹ್ನಿಕ ಎಂದಿನಂತೆ; ಅಂದು ತ್ರಿಕಾಲದಲ್ಲೂ ಸ್ನಾನವು ವಿಹಿತ. ರಾತ್ರಿ ಶ್ರೀಕೃಷ್ಣನನ್ನು ವಿಶೇಷವಾಗಿ ಆರಾಧಿಸಿ, ಚಂದ್ರೋದಯಕ್ಕೆ ಅರ್ಘ್ಯ ಸಮರ್ಪಿಸಿ ನಮಸ್ಕರಿಸಬೇಕು. ಅನಂತರ ಅವಶ್ಯವಿದ್ದಲ್ಲಿ ನಿದ್ರಿಸಬಹುದು. ಮಾರನೆಯ ದಿನ ವಿಹಿತಕಾಲದಲ್ಲಿ ಪಾರಣ ಮಾಡಿ ವ್ರತಸಮಾಪನ ಮಾಡಬೇಕು.

ಅಂದು ಸ್ನಾನಾದಿಗಳಿಗೆ ವಿಹಿತವಾದ ಮಂತ್ರವಿಶೇಷಗಳನ್ನು ಇಲ್ಲಿ ಉಲ್ಲೇಖಿಸಿರುವುದು ಈ ಕೃತಿಯ ಮತ್ತೊಂದು ವಿಶೇಷ. ಶ್ರೀಕೃಷ್ಣಾರ್ಘ್ಯಮಂತ್ರ, ಚಂದ್ರಾರ್ಘ್ಯಮಂತ್ರ ಮತ್ತು ಚಂದ್ರೋಪಸ್ಥಾನಮಂತ್ರಗಳನ್ನು ತಿಳಿಸಿರುವರು.

ಕೇವಲ ೧೬ ಶ್ಲೋಕಗಳ ಈ ಪುಟ್ಟ ಕೃತಿಯನ್ನು ತಮ್ಮ ಕೃಷ್ಣಾಮೃತಮಹಾರ್ಣವ ಮೊದಲಾದ ಇತರ ಗ್ರಂಥಗಳಲ್ಲಿ ಸೇರಿಸದೆ, ಹೀಗೆ ಪ್ರತ್ಯೇಕ ಕೃತಿಯನ್ನಾಗಿ ನೀಡುವ ಮೂಲಕ ಆಚಾರ್ಯರು ಕೃಷ್ಣಜಯಂತಿಯ ಬಗ್ಗೆ ಆಸ್ತಿಕರ ವಿಶೇಷ ಗಮನವನ್ನು ಸೆಳೆದಿರುವರು. ಹೀಗೆ ಪ್ರತಿಯೊಂದು ರೀತಿಯಲ್ಲೂ ಅವರ ಕಾರ್ಯವೈಖರಿ ಅಪೂರ್ವ.

ತಂತ್ರಸಾರಸಂಗ್ರಹವು ಮಂತ್ರಜಪ, ಧ್ಯಾನ, ಪೂಜೆ, ದೇವತಾಪ್ರತಿಷ್ಠೆ, ಜೀರ್ಣೋ-ದ್ಧಾರ, ತತ್ತ್ವನ್ಯಾಸ, ಮಾತೃಕಾನ್ಯಾಸ, ವಿವಿಧಮಂತ್ರಗಳು, ಧ್ಯಾನಶ್ಲೋಕಗಳು, ಅಂಗ-ನ್ಯಾಸ, ಕರನ್ಯಾಸ ಮೊದಲಾದವುಗಳನ್ನು ನಿರೂಪಿಸುವ ಅಮೋಘ ವೈಷ್ಣವತಾಂತ್ರಿಕಕೃತಿ.

ಯತಿಪ್ರಣವಕಲ್ಪವು ಸಂನ್ಯಾಸದೀಕ್ಷೆಯ ವಿಧಿವಿಧಾನಗಳನ್ನು ನಿರೂಪಿಸುವ ಕೃತಿ. ಸಂನ್ಯಾಸವು ಆಶ್ರಮಗಳಲ್ಲಿ ಶ್ರೇಷ್ಠವೆಂದು ಮಾನ್ಯವಾಗಿದೆ. ಅದರಲ್ಲಿ ಭಗವಂತನ ವಿಭೂತಿರೂಪವಿದೆಯೆಂಬ ಮಾತು ಭಾಗವತದಲ್ಲಿ ಬಂದಿದೆ. ಜ್ಞಾನಕಾರ್ಯದಲ್ಲಿ ಸಂಪೂರ್ಣವಾಗಿ ತೊಡಗಿಸಿಕೊಳ್ಳುವ ವಿಶೇಷ ಅವಕಾಶ ಈ ಆಶ್ರಮದ ವೈಶಿಷ್ಟ್ಯ. ಸಕಲ ಭೌತಿಕ ವಿಷಯಗಳ ಮೇಲಿನ ಆಸೆ ಆಕಾಂಕ್ಷೆಗಳನ್ನು ತೊರೆದು ಭಗವದಾರಾಧನೆಗೆಂದೇ ಮೀಸಲಾಗಿ ಆ ಮೂಲಕ ಇತರ ಜನಗಳಿಗೆ ಅತ್ಯಂತ ಅಮೂಲ್ಯವಾದ ತಾತ್ತ್ವಿಕ ಜಾಗೃತಿಯನ್ನು ನೀಡುವಲ್ಲಿ ಈ ಆಶ್ರಮದ ಪಾತ್ರ ತುಂಬಾ ಹಿರಿದು. ರಾಜಮಹಾರಾಜರುಗಳಿಂದಲೂ ವಂದ್ಯವಾದ ಇಂತಹ ಆಶ್ರಮ ತಾತ್ತ್ವಿಕವಾಗಿ ಮಾತ್ರವಲ್ಲದೆ ಸಾಮಾಜಿಕವಾಗಿಯೂ ರಾಜಕೀಯವಾಗಿಯೂ ಜಗತ್ತನ್ನು ಎಚ್ಚರಿಸುವ ಶಕ್ತಿಶಾಲಿ ಆಶ್ರಮ. ಆದರೆ ಅದು ದಾರಿತಪ್ಪಿದಲ್ಲಿ, ಇಡೀ ಸಮಾಜಕ್ಕೇ ಆಘಾತವಾಗಿ ಧಾರ್ಮಿಕಶ್ರದ್ಧೆ ತಾತ್ತ್ವಿಕಶ್ರದ್ಧೆಗಳು ನೆಲಕಚ್ಚುವ ಅಪಾಯವಿದೆ.

ಈ ಹಿನ್ನೆಲೆಯಲ್ಲಿ ಆ ಆಶ್ರಮದ ದೀಕ್ಷೆಯ ವಿಧಿವಿಧಾನಗಳ ಪರಿಜ್ಞಾನ ಅತ್ಯವಶ್ಯ.

ಸಂನ್ಯಾಸವೆಂದರೆ ಜೀವನದಲ್ಲಿ ಕೇವಲ ಜಿಗುಪ್ಸೆಯಲ್ಲ; ಹೆಂಡಿರು ಮಕ್ಕಳನ್ನು ಸಾಕಲಾಗದ ಪಲಾಯನವಾದವಲ್ಲ; ಜನಮನ್ನಣೆಯ ಐಹಿಕ ಆಕರ್ಷಣೆಗಾಗಿ ನಾಲ್ಕು

ದಿನದ ಮಟ್ಟಿಗಷ್ಟೇ ಸ್ವೀಕರಿಸಬಲ್ಲ ತಾತ್ಕಾಲಿಕ ವ್ಯವಸ್ಥೆಯೂ ಅಲ್ಲ. ಕೇವಲ ಪೂಜೆ, ತೀರ್ಥಪ್ರಸಾದ ಮಂತ್ರಾಕ್ಷತೆಗಳ ವಿನಿಯೋಗವಷ್ಟೇ ಇದರ ಮುಖ್ಯ ಕರ್ತವ್ಯವೂ ಅಲ್ಲ. ಇದು ಮೂಲತಃ ಭೌತಿಕಸುಖಗಳ ಇತಿಮಿತಿಯನ್ನು ಸರ್ವಾತ್ಮನಾ ಮನಗಂಡು ತಾತ್ತ್ವಿಕಸುಖಕ್ಕಾಗಿ ತನ್ನನ್ನು ಸಂಪೂರ್ಣವಾಗಿ ಶಾಶ್ವತವಾಗಿ ಭಗವಂತನಿಗೆ ಒಪ್ಪಿಸಿಕೊಳ್ಳುವ ತ್ಯಾಗದ ಪರಾಕಾಷ್ಠೆ. ವಿರಕ್ತಿಯೊಂದಿಗೆ ದೀಕ್ಷೆಯ ವಿಧಿವಿಧಾನಗಳೂ ಅಷ್ಟೇ ವಿಹಿತ. ಅದಕ್ಕಾಗಿ ಅದರಲ್ಲಿ ಸಿದ್ಧಿ ಪಡೆದ ಭಾಗವತಗುರು ಬೇಕೇ ಬೇಕು; ಇದೇ ಮೊದಲಾದ ಅನೇಕ ಸೂಕ್ಷ್ಮವಿಚಾರಗಳನ್ನು ಪ್ರಾರಂಭದಲ್ಲೇ ಸೂಚಿಸಿರುವರು:

> ಸಮಿಚ್ಚರ್ವಾದಿಕಾನ್ ಹುತ್ವಾ ಸಮ್ಯಕ್ ಪುರುಷಸೂಕ್ತತಃ ।
> ಸರ್ವೇಷಾಮಭಯಂ ದತ್ವಾ ವಿರಕ್ತಃ ಪ್ರವ್ರಜೇದ್ಧರಿಮ್ ॥

ಪ್ರಣವೋಪದೇಶವನ್ನು ಗುರುಗಳು ನೀಡಬೇಕು. ಅಂತಹ ಪ್ರಣವಮಂತ್ರವನ್ನು ಧ್ಯೇಯಮೂರ್ತಿಯಾದ ನಾರಾಯಣನನ್ನೂ, ಅವನ ಅಕ್ಷರನಿಯಾಮಕ ರೂಪ-ಗಳೊಂದಿಗೆ ಪ್ರತಿನಿತ್ಯವೂ ಜಪಿಸಬೇಕು ಎಂದು ತಿಳಿಸಿ ಧ್ಯೇಯರೂಪದ ವಿವರಗಳನ್ನು ಸಮಗ್ರ ನೀಡಿರುವರು.

ಪ್ರಣವ ಮಂತ್ರವನ್ನು ಪ್ರತಿನಿತ್ಯ ಕಡಿಮೆ ಎಂದರೂ ಎರಡುಸಾವಿರ ಬಾರಿ ಜಪಿಸಲೇಬೇಕು. ಮೂರುಸಾವಿರ ಜಪ ಮಧ್ಯಮ. ಅದಕ್ಕಿಂತ ಹೆಚ್ಚಿನದು ಉತ್ತಮ.

ದೀಕ್ಷೆಯ ನಂತರ ಗುರುವು ಶಪಥವನ್ನು ಬೋಧಿಸಬೇಕು:

''ಭಗವಂತನನ್ನು, ಅವನ ಭಕ್ತರನ್ನು ಎಂದೂ ತೊರೆಯೆನು, ಇತರ ದೇವತೆಗಳನ್ನು ಅವನಿಗೆ ಸಮರೆಂದಾಗಲೀ, ಅಭಿನ್ನರೆಂದಾಗಲೀ ತಿಳಿಯೆನು; ಹಾಗೆ ತಿಳಿಯುವ ಜನಗಳೊಂದಿಗೆ ಎಂದಿಗೂ ಬೆರೆಯೆನು. ದೈವನಿಂದಕರೊಂದಿಗೆ ಎಂದೂ ಸೇರೆನು''.

ಪ್ರತಿನಿತ್ಯ ಭಗವತ್ಪೂಜಾದಿಗಳಲ್ಲಿ ನಿರತನಾಗಿ, ವೇದಾದಿಸಚ್ಛಾಸ್ತ್ರಗಳ ಅವಲೋಕನ-ದಲ್ಲೇ ಮಗ್ನನಾಗಬೇಕು. ಅವುಗಳನ್ನು ತಾನು ಬಲ್ಲವರಿಂದ ಶ್ರವಣ ಮಾಡಬೇಕು. ಅರ್ಹರಿಗೆ ಉಪದೇಶಿಸಬೇಕು. ಎಲ್ಲರಿಗೂ ಸೂಕ್ತ ಆಧಾರಗಳೊಂದಿಗೆ ವಿಷ್ಣು-ಸರ್ವೋತ್ತಮತ್ವವನ್ನೇ ಸದಾ ಪ್ರತಿಪಾದಿಸಬೇಕು.

ಪ್ರಧಾನವಾಗಿ ಒಂಭತ್ತು ಜನರಿಗೆ ಮತ್ತು ಇತರ ಅಸಂಖ್ಯ ಜನರಿಗೆ ಪ್ರಣವ-ದೀಕ್ಷೆಯನ್ನು ನೀಡಿದವರ ಕೃತಿ ಎಂಬ ದೃಷ್ಟಿಯಿಂದ ಇದರ ಮಹತ್ತ್ವ ಅಪೂರ್ವ. ಈ ಪರಂಪರೆಯಲ್ಲಿ ನೂರಾರು ಯತಿಗಳು ಆಗಿದ್ದು, ಅವರಲ್ಲಿ ಶ್ರೀಜಯತೀರ್ಥರು, ಶ್ರೀವ್ಯಾಸತೀರ್ಥರು, ಶ್ರೀವಾದಿರಾಜರು, ಶ್ರೀರಘೂತ್ತಮರು, ಶ್ರೀರಾಘವೇಂದ್ರರಂತಹ ಮಹನೀಯರು ಸೇರಿರುವರು ಎಂಬುದನ್ನು ಗಮನಿಸಿದಾಗ ಈ ಯತಿಪ್ರಣವಕಲ್ಪದ ಮಹತ್ತ್ವ ಅರಿವಾಗುವುದು.

ಸದಾಚಾರಸ್ಮೃತಿ

ಸದಾಚಾರಸ್ಮೃತಿ ಎಂಬಲ್ಲಿನ ಸತ್ ಶಬ್ದಕ್ಕೆ ಶ್ರೀಹರಿ, ವಾಯು, ಉತ್ತಮ ಮೊದಲಾದ ಅನೇಕ ಅರ್ಥಗಳು ಪ್ರಸಿದ್ಧ. ಅದರಂತೆ ಶ್ರೀಹರಿಯು ವೇದವ್ಯಾಸರೂಪದಿಂದ ನಿರೂಪಿಸಿರುವ ಆಚಾರಗಳನ್ನು ಸಂಗ್ರಹಿಸಿ ಕೃತಿ ಎಂಬುದಾಗಿ 'ಸದಾಚಾರಸ್ಮೃತಿ' ಎಂಬುದಕ್ಕೆ ಅರ್ಥವಾಗುತ್ತದೆ. 'ವ್ಯಾಸವಾಕ್ಯಸಮುದ್ಧೃತಿಃ' ಎಂಬ ಕೊನೆಯಲ್ಲಿನ ಮಾತು ಈ ಅರ್ಥವನ್ನು ಸೂಚಿಸುತ್ತದೆ. ಅದರಂತೆ ಸತ್ ಎಂಬ ಮುಖ್ಯಪ್ರಾಣರ ಅವತಾರರಾದ ಶ್ರೀಮದಾಚಾರ್ಯರಿಂದ ರಚಿತವಾದ ಸ್ಮೃತಿ ಎಂಬುದು ಮತ್ತೊಂದು ಅರ್ಥ. 'ಆನಂದತೀರ್ಥಮುನಿನಾ' ಎಂಬ ಅಂತ್ಯಶ್ಲೋಕದಲ್ಲಿ ಈ ಅರ್ಥ ಬಂದಿದೆ. ಸತ್ ಎಂದರೆ ಸಜ್ಜನರ, ಉತ್ತಮರ ಆಚಾರ ಎಂಬ ಅರ್ಥ 'ಸದಾಚಾರಸ್ಯ ವಿಷಯೇ' ಎಂಬ ಮಾತಿನಲ್ಲಿ ಇದೆ. ಅದರಂತೆ ಸನ್ನಾಮಕ ವಿಷ್ಣುವಿನ ಪ್ರೀತಿಗೋಸ್ಕರವಾಗಿ ಸನ್ನಾಮಕ ಆನಂದತೀರ್ಥ-ರಿಂದ ನಿರೂಪಿತವಾದ ಸದಾಚಾರಸಂಹಿತೆ ಎಂಬುದು ಇದರ ಒಟ್ಟು ಭಾವ.

ಸದಾಚಾರಸ್ಮೃತಿಯು ಪ್ರಧಾನವಾಗಿ ನಿಷ್ಕಾಮತ್ವದ ಮಹತ್ತ್ವ ಮತ್ತು ದೈನಂದಿನ ಸದಾಚಾರದ ವಿಧಿಯನ್ನು ನಿರೂಪಿಸುವ ಅಪೂರ್ವಕೃತಿ.

ಪ್ರತಿನಿತ್ಯ ಹರಿಸ್ಮರಣ ಮೂಲಕ ಸಕಾಲಕ್ಕೆ ಎಚ್ಚರಗೊಳ್ಳಬೇಕು. ಅನಂತರ ಶೌಚಪೂರೈಸಿ ದಂತಧಾವನವನ್ನು ಮಾಡಿಕೊಳ್ಳಬೇಕು. ಆಚಮನ ಮಾಡಿ ವಿಧ್ಯುಕ್ತ ರೀತಿಯಲ್ಲಿ ಸ್ನಾನ ಮಾಡಬೇಕು. 'ಉದ್ಧೃತಾಽಸಿ ವರಾಹೇಣ' ಎಂಬ ಮಂತ್ರದಿಂದ ಮೈಗೆ ಮೃತ್ತಿಕೆಯನ್ನು ಲೇಪಿಸಿಕೊಂಡು ವಾಸುದೇವದ್ವಾದಶಾಕ್ಷರ, ನಾರಾಯಣಾಷ್ಟಾಕ್ಷರ ಮತ್ತು ಕೃಷ್ಣಷಡಕ್ಷರ ಮಂತ್ರಗಳಿಂದ ಮೂರುಬಾರಿ ಮುಳುಗಬೇಕು. ಅನಂತರ 'ಆಪೋ ಹಿ ಷ್ಠಾ' ಮೊದಲಾದ ಮಂತ್ರಗಳಿಂದ ಜಲವನ್ನು ಪ್ರೋಕ್ಷಿಸಿಕೊಂಡು ಮತ್ತೊಮ್ಮೆ ಮೃತ್ತಿಕೆಯನ್ನು ಲೇಪಿಸಿಕೊಂಡು ಪುನಃ ಮೂರುಬಾರಿ ಮುಳುಗಬೇಕು. ಅನಂತರ ನೀರಿನಲ್ಲಿ ಮುಳುಗಿಕೊಂಡಿದ್ದೇ ಜಗಜ್ಜನಕನಾದ ನಾರಾಯಣನನ್ನು ಸ್ಮರಿಸುತ್ತಾ ಅಘಮರ್ಷಣ ಸೂಕ್ತವನ್ನು ಮೂರು ಬಾರಿ ಜಪಿಸಬೇಕು. ಆಮೇಲೆ ಪ್ರಣವವನ್ನು ಜಪಿಸುತ್ತ ದೇಹದಲ್ಲಿ ನೆಲೆಸಿರುವ ಶ್ರೀಹರಿಯನ್ನು ಸ್ಮರಿಸುತ್ತಾ ಪುರುಷಸೂಕ್ತದಿಂದ ನೀರನ್ನು [1]ಪ್ರೋಕ್ಷಿಸಿಕೊಳ್ಳ-ಬೇಕು. ಅನಂತರ ಒಣ ಬಟ್ಟೆಯನ್ನುಟ್ಟು ಆಚಮನ ಮಾಡಿ ಸೂರ್ಯಾಂತರ್ಗತ

---

೧. ಸ್ಮೃತ್ವಾ ವಿಷ್ಣುಂ ಸಮುತ್ಥಾಯ ಕೃತಶೌಚೋ ಯಥಾವಿಧಿ ।
ಧೌತದಂತಃ ಸಮಾಚಮ್ಯ ಸ್ನಾನಂ ಕುರ್ಯಾದ್ವಿಧಾನತಃ ॥
ಉದ್ಧೃತೇತಿ ಮೃದಾಲಿಪ್ಯ ದ್ವಿಷಡಷ್ಟಷಡಕ್ಷರೈಃ ।
ತ್ರಿರ್ನಿಮಜ್ಜ್ಯಾಪ್ಯಸೂಕ್ತೇನ ಪ್ರೋಕ್ಷಯಿತ್ವಾ ಪುನಸ್ತತಃ ॥
ಮೃದಾಲಿಪ್ಯ ನಿಮಜ್ಜ್ಯ ತ್ರಿಸ್ತ್ರಿರ್ಜಪೇದಘಮರ್ಷಣಮ್ ।
ಸ್ರಷ್ಟಾರಂ ಸರ್ವಲೋಕಾನಾಂ ಸ್ಮೃತ್ವಾ ನಾರಾಯಣಂ ಪರಮ್ ॥
ಯತಶ್ವಾಸೋ ನಿಮಗ್ನೋಽಪ್ಸು ಪ್ರಣವೇನೋತ್ಥಿತಸ್ತತಃ ।
ಸಿಂಚಯೇತ್ ಪುರುಷಸೂಕ್ತೇನ ಸ್ವದೇಹಸ್ಥಂ ಹರಿಂ ಸ್ಮರನ್ ॥

ಭಗವಂತನನ್ನು ಚಿಂತಿಸುತ್ತಾ ಗಾಯತ್ರೀಮಂತ್ರದಿಂದ ಅಭಿಮಂತ್ರಿತವಾದ ಜಲದಿಂದ ಸೂರ್ಯನಿಗೆ ಅರ್ಘ್ಯ ಸಮರ್ಪಿಸಬೇಕು. ಆಮೇಲೆ ಆತ್ಮಪ್ರದಕ್ಷಿಣೆ ಮಾಡಿಕೊಂಡು ದೇವತೆಗಳು ಮೊದಲಾದವರಿಗೆ ತರ್ಪಣ ನೀಡಬೇಕು. ಆಮೇಲೆ ಸ್ನಾನಕಾಲಕ್ಕೆ ಉಟ್ಟಿದ್ದ ವಸ್ತ್ರವನ್ನು ಹಿಂಡಿ ಒಣಗಲು [೧]ಹಾಕಬೇಕು. ಸೂರ್ಯಮಂಡಲ ಮಧ್ಯವರ್ತಿಯಾದ ವಿಷ್ಣುವನ್ನು ಧ್ಯಾನಿಸುತ್ತಾ ಗಾಯತ್ರೀಮಂತ್ರವನ್ನು ಜಪಿಸಬೇಕು. ಸಾವಿರಜಪ ಉತ್ತಮ, ನೂರುಸಲ ಮಧ್ಯಮ, ಹತ್ತುಸಲ ಜಪಿಸುವುದು ಅಧಮ. ಜಪವನ್ನು ಸೂರ್ಯ ಉದಯಿಸುವವರೆಗೂ ನಿಂತೇ ಮಾಡಬೇಕು. ಅನಂತರ ಬೇಕಿದ್ದರೆ ಕುಳಿತೂ ಜಪಿಸಬಹುದು. ಸಾಯಂಕಾಲದ ಜಪವನ್ನು ಮಾತ್ರ ಕುಳಿತೇ ಮಾಡಬೇಕು. ಜಪಕಾಲದಲ್ಲಿ ಮೌನದಿಂದಿರಬೇಕು[೨]. ಗಾಯತ್ರೀಮಂತ್ರಕ್ಕೆ ಸೂರ್ಯಾಂತರ್ಗತ ಭಾರತೀರಮಣಮುಖ್ಯ ಪ್ರಾಣಾಂತರ್ಗತನಾದ ಶ್ರೀನಾರಾಯಣನೇ ಧ್ಯೇಯಮೂರ್ತಿ[೩].

ಗಾಯತ್ರೀ ಮಂತ್ರದ ಮೂರರಷ್ಟು ನಾರಾಯಣಾಷ್ಟಾಕ್ಷರ ಮಂತ್ರವನ್ನು ಜಪಿಸಬೇಕು. ದೇವತೆಗಳನ್ನು ವಿಪ್ರರನ್ನು ಗುರುಗಳನ್ನು ವಂದಿಸಿ ಬ್ರಹ್ಮಯಜ್ಞವನ್ನು ಪೂರೈಸಿ ಪಾಠಪ್ರವಚನಕ್ಕೆ ತೊಡಗಬೇಕು[೪]. ವರ್ಣಾಶ್ರಮಕ್ಕೆ ವಿಹಿತವಾದ ವೃತ್ತಿಯಿಂದ ಪೂಜಾಸಾಧನಸಾಮಗ್ರಿಗಳನ್ನು ಸಿದ್ಧಪಡಿಸಿಕೊಂಡು ಮತ್ತೊಮ್ಮೆ ಸ್ನಾನ ಮಾಡಿ ವೇದ ಮತ್ತು ತಂತ್ರಶಾಸ್ತ್ರಗಳಿಗೆ ಅನುಸಾರವಾಗಿ ದೇವದೇವನಾದ ವಿಷ್ಣುವನ್ನು ಪೂಜಿಸಬೇಕು. ವೈಶ್ವದೇವ ಮತ್ತು ಬಲಿಹರಣಗಳನ್ನು ತಪ್ಪದೇ ಮಾಡಬೇಕು[೫]. ಭಗವಂತನಿಗೆ

---

೧. ವಸಿತ್ವಾ ವಾಸ ಆಚಮ್ಯ ಪ್ರೋಕ್ಷ್ಯಾಚಮ್ಯ ಚ ಮಂತ್ರತಃ ।
ಗಾಯತ್ರ್ಯಾ ಚಾಂಜಲಿಂ ದತ್ವಾ ಧ್ಯಾತ್ವಾ ಸೂರ್ಯಗತಂ ಹರಿಮ್ ॥
ಮಂತ್ರತಃ ಪರಿವೃತ್ಯಾಥ ಸಮಾಚಮ್ಯ ಸುರಾದಿಕಾನ್ ।
ತರ್ಪಯಿತ್ವಾ ನಿಪೀಡ್ಯಾಥ ವಾಸೋ ವಿಸೃತ್ಯ ಚಾಂಜಸಾ ॥

೨. ಅರ್ಕಮಂಡಲಗಂ ವಿಷ್ಣುಂ ಧ್ಯಾತ್ವೈವ ತ್ರಿಪದೀಂ ಜಪೇತ್ ।
ಸಹಸ್ರಪರಮಾಂ ದೇವೀಂ ಶತಮಧ್ಯಾಂ ದಶಾವರಾಮ್ ॥
ಆಸೂರ್ಯದರ್ಶನಾತ್ ತಿಷ್ಠೇತ್ ತತಸ್ತೂಪವಿಶೇತ್ ತು ವಾ ।
ಪೂರ್ವಾಂ ಸಂಧ್ಯಾಂ ಸನಕ್ಷತ್ರಾಮುತ್ತರಾಂ ಸದಿವಾಕರಾಮ್ ।
ಉತ್ತರಾಮುಪವಿಶ್ಯೈವ ವಾಗ್ಯತಃ ಸರ್ವದಾ ಜಪೇತ್ ॥

೩. ಧ್ಯೇಯಃ ಸದಾ ಸವಿತೃಮಂಡಲಮಧ್ಯವರ್ತೀ ನಾರಾಯಣಃ ಸರಸಿಜಾಸನಸನ್ನಿವಿಷ್ಟಃ ।
ಕೇಯೂರವಾನ್ ಮಕರಕುಂಡಲವಾನ್ ಕಿರೀಟೀ ಹಾರೀ ಹಿರಣ್ಮಯವಪುರ್ಧೃತಶಂಖಚಕ್ರಃ ॥

೪. ಗಾಯತ್ರ್ಯಾಸ್ತ್ರಿಗುಣಂ ವಿಷ್ಣುಂ ಧ್ಯಾಯನ್ನಷ್ಟಾಕ್ಷರಂ ಜಪೇತ್ ।
ಪ್ರಣಮ್ಯ ದೇವಾನ್ ವಿಪ್ರಾಂಶ್ಚ ಗುರೂಂಶ್ಚ ಹರಿಪಾರ್ಷದಾನ್ ॥
ಏವಂ ಸರ್ವೋತ್ತಮಂ ವಿಷ್ಣುಂ ಧ್ಯಾಯನ್ನೇವಾರ್ಚಯೇದ್ಧರಿಮ್ ।
ಧ್ಯಾನಪ್ರವಚನಾಭ್ಯಾಂ ಚ ಯಥಾಯೋಗ್ಯಮುಪಾಸನಮ್ ॥

೫. ಧರ್ಮೇಣೇಜ್ಯಾಸಾಧನಾನಿ ಸಾಧಯಿತ್ವಾ ವಿಧಾನತಃ ।
ಸ್ನಾತ್ವಾ ಸಂಪೂಜಯೇದ್ವಿಷ್ಣುಂ ವೇದತಂತ್ರೋಕ್ತಮಾರ್ಗತಃ ।
ವೈಶ್ವದೇವಂ ಬಲಿಂ ಚೈವ ಕುರ್ಯಾನ್ನಿತ್ಯಂ ತು ತರ್ಪಣಮ್ ॥

ಸಮರ್ಪಿಸಿದ ನೈವೇದ್ಯವನ್ನು ಭೃತ್ಯರು ಮತ್ತು ಅತಿಥಿಗಳೊಂದಿಗೆ ಕೂಡಿಕೊಂಡು ಭಗವಂತನನ್ನು ಚಿಂತಿಸುತ್ತಾ ಭುಂಜಿಸಬೇಕು. ಭೋಜನ ಪೂರೈಸಿದ ಮೇಲೆ ಅಷ್ಟಾಕ್ಷರ ಮಂತ್ರದಿಂದ ಉದರವನ್ನು ಅಭಿಮಂತ್ರಿಸಿಕೊಳ್ಳಬೇಕು[೧]. ಹಗಲಿನ ಉಳಿದಭಾಗವನ್ನು ವೇದಶಾಸ್ತ್ರಗಳ ಚಿಂತನೆಯಲ್ಲಿ ಕಳೆಯಬೇಕು. ಅನಂತರ [೨]ಸಾಯಂಸಂಧ್ಯಾವಂದನೆಯನ್ನು ಪೂರೈಸಿ ರಾತ್ರಿ ಒಂದು ಯಾಮ ಕಳೆದ ಮೇಲೆಯೇ ಮಲಗಬೇಕು. ಮಧ್ಯೆ ಮಧ್ಯೆ ಎಚ್ಚರ ಮಾಡಿಕೊಂಡು ಅನೇಕ ತೆರನಾಗಿ ಶ್ರೀಹರಿಯನ್ನು ಸ್ಮರಿಸುತ್ತಿರಬೇಕು[೩].

ಇವುಗಳಲ್ಲಿ ವೈಶ್ವದೇವ, ಬಲಿಹರಣ ಇವುಗಳನ್ನು ಹೊರತು ಉಳಿದ ನಿತ್ಯಕರ್ಮಗಳು ಬ್ರಹ್ಮಚಾರಿಗಳಿಗೂ, ಸಂನ್ಯಾಸಿಗಳಿಗೂ ವಿಹಿತ. ಅಗ್ನಿಕಾರ್ಯ ವಟುಗಳ ಪಾಲಿನ ವಿಶಿಷ್ಟ ಕರ್ಮ[೪].

ಸಂನ್ಯಾಸಿಗಳಿಗೆ ಹೋಮಾದಿಗಳ ಪ್ರಸಕ್ತಿಯೇ ಇಲ್ಲ. ಅವರಿಗೆ ವಿಹಿತವಾದದ್ದು ಜಪ, ತರ್ಪಣ, ಪೂಜಾ, ಪಾಠಪ್ರವಚನಗಳು ಮಾತ್ರ[೫].

ಒಟ್ಟಾಗಿ ಸದಾಚಾರವು ಸಕಲವರ್ಣಾಶ್ರಮಗಳಿಗೂ ವಿಹಿತ. ರಮಾಬ್ರಹ್ಮಾದಿ ಸಕಲದೇವತೆಗಳನ್ನೂ ಶ್ರೀಹರಿಯ ಪರಿವಾರವೆಂಬ ಭಾವದಿಂದ ತಾರತಮ್ಯಕ್ರಮದಲ್ಲಿ ಸಕಲರೂ ಆರಾಧಿಸಲೇಬೇಕು[೬].

ಇದು ಸದಾಚಾರಸ್ಮೃತಿಯಲ್ಲಿನ ವಿಷಯಗಳ ಸಂಗ್ರಹ. ವಿಷ್ಣುಸರ್ವೋತ್ತಮತ್ವ, ದೇವತಾತಾರತಮ್ಯ, ಸದಾ ವಿಷ್ಣುಸ್ಮರಣೆಯ ಆವಶ್ಯಕತೆ, ಭಕ್ತಿಯ ಹಿರಿಮೆ ಮತ್ತು

---

೧. ಭುಕ್ತಶೇಷಂ ಭಗವತೋ ಭೃತ್ಯಾತಿಥಿಪುರಸ್ಸರಃ ।
ಭುಂಜೀತ ಹೃದ್ಗತಂ ವಿಷ್ಣುಂ ಸ್ಮರಂಸ್ತದ್ಗತಮಾನಸಃ ॥
ಆಚಮ್ಯ ಮೂಲಮಂತ್ರೇಣ ಕೋಷ್ಠಂ ಸ್ವಮಭಿಮಂತ್ರಯೇತ್ ।

೨. ವೇದಶಾಸ್ತ್ರವಿನೋದೇನ ಪ್ರೀಣಯನ್ ಪುರುಷೋತ್ತಮಮ್ ।
ಅಹಃಶೇಷಂ ನಯೇತ್ ಸಂಧ್ಯಾಮುಪಾಸೀತಾಥ ಪೂರ್ವವತ್ ॥

೩. ಯಾಮಾತ್ ಪರತ ಏವಾಥ ಸ್ವಪೇದ್ಧ್ಯಾಯನ್ ಜನಾರ್ದನಮ್ ।
ಅಂತರಾಲೇ ತತೋ ಬುದ್ಧ್ವಾ ಸ್ಮರೇತ ಬಹುಶೋ ಹರಿಮ್ ॥

೪. ಏಷ ನಿತ್ಯಃ ಸದಾಚಾರೋ ಗೃಹಿಣೋ ವನಿನಸ್ತಥಾ ।
ವೈಶ್ವದೇವಂ ಬಲಿಂ ದಂತಧಾವನಂ ಚಾಪ್ಯೃತೇ ವಟೋಃ ॥
ಏವಮೇವ ಯತೇಃ ಸ್ವೀಯವಿತ್ತೇನ ತು ವಿನಾ ಸದಾ ।
ಮೂಲಮಂತ್ರೈಃ ಸದಾ ಸ್ನಾನಂ ವಿಷ್ಣೋರೇವ ಚ ತರ್ಪಣಮ್ ॥
ವಿಶೇಷೋ ನಿಷ್ಕ್ರಿಯಯತೇರಜಲಾಂಜಲಿತಾ ತಥಾ ।

೫. ತರ್ಪಣಂ ತು ಹರೇರೇವ ಯತೇರನ್ಯತ್ರ ಚೋದಿತಮ್ ।
ಸಮಿದ್ಧೋಮೋ ವಟೋಶ್ಚೈವ ಸ್ಮೃತ್ವಾ ವಿಷ್ಣುಂ ಹುತಾಶನೇ ॥

೬. ಸರ್ವವರ್ಣಾಶ್ರಮೈರ್ವಿಷ್ಣುರೇಕ ಏವೇಜ್ಯತೇ ಸದಾ ।
ರಮಾಬ್ರಹ್ಮಾದಯಸ್ತಸ್ಯ ಪರಿವಾರತ ಏವ ತು ॥

ಕೃಷ್ಣಾರ್ಪಣಭಾವದ ಮಹತ್ತ್ವಗಳನ್ನು ಸಮರ್ಥಿಸಲು ಗೀತೆ, ಮಹಾಭಾರತ ಮೊದಲಾದವುಗಳಿಂದ ಪ್ರಮಾಣವಚನಗಳನ್ನು ನೀಡಿರುವರು[೧].

ಸದಾಚಾರಸ್ಮೃತಿಗೆ ವೈಶ್ವನಾಥಿನಾರಾಯಣಾಚಾರ್ಯರು, ತರಂಗಿಣೀ ರಾಮಾಚಾರ್ಯರು, ಸ್ಮೃತಿಮುಕ್ತಾವಲೀ ಕೃಷ್ಣಾಚಾರ್ಯರು, ಬಿದರಹಳ್ಳಿ ಶ್ರೀನಿವಾಸತೀರ್ಥರು, ಆಯೀ ನರಹರಿ ಆಚಾರ್ಯರು ಮೊದಲಾದ ಅನೇಕರು ವ್ಯಾಖ್ಯಾನ ರಚಿಸಿರುವರು. ವಿಶ್ವನಾಥಸೂರಿಗಳು ಇದರ ಮೇಲೆ ರಚಿಸಿರುವ ಅಪೂರ್ವ ವ್ಯಾಖ್ಯಾನವೊಂದು ಉಪಲಬ್ಧವಿದೆ. ಅದು ಮೊದಲ ಹದಿನಾಲ್ಕು ಶ್ಲೋಕಗಳಿಗೆ ಮಾತ್ರ ದೊರಕಿದ್ದು, ಅಷ್ಟಕ್ಕೇ ಅದರ ವ್ಯಾಪ್ತಿ ೧೪೬ ಪತ್ರಗಳಷ್ಟು ವಿಸ್ತಾರವಾಗಿದೆ.

ಕೃಷ್ಣಾಮೃತಮಹಾರ್ಣವ

ಕೃಷ್ಣಾಮೃತಮಹಾರ್ಣವವು ಆಚಾರಕ್ಕೆ ಸಂಬಂಧಿಸಿದ ಮತ್ತೊಂದು ಕೃತಿ. ಇದನ್ನು ವೈದ್ಯನಾಥೇಶ್ವರವೆಂಬುದಾಗಿ ಪ್ರಸಿದ್ಧವಾಗಿರುವ ಕೊಕ್ಕಡ ಎಂಬ ಊರಿನಲ್ಲಿ ಯಡಪಾಡಿತ್ತಾಯ ಎಂಬ ಭಕ್ತನ ಪ್ರಾರ್ಥನೆಯಂತೆ ಶ್ರೀಮದಾಚಾರ್ಯರು ರಚಿಸಿದರೆಂಬ ಮಾತು ಸುಮಧ್ವವಿಜಯ ಮತ್ತು ಅದರ ವ್ಯಾಖ್ಯಾನಗಳಲ್ಲಿ ಬಂದಿದೆ:

ಕ್ಷೇತ್ರಾಗ್ರ್ಯಂ ತ್ರಿಭುವನವೈದ್ಯನಾಥನಾಥಂ ಪ್ರಸ್ಥಾಯ ಪ್ರಚುರತರಾಂತರಃ ಪ್ರಭಾವೀ ।
ಶ್ರೀಕೃಷ್ಣಾಮೃತಪರಮಾರ್ಣವಾಭಿಧಾನಂ ಚಕ್ರೇ ಸದ್ವಚನತತಿಂ ಸ್ವಭಕ್ತಭೂತ್ಯೈ ॥ (೧೬/೪೦)

ಅರ್ಜುನನೊಬ್ಬನಿಗೆ ಶ್ರೀಕೃಷ್ಣ ಉಪದೇಶಿಸಿದ ಗೀತಾಮೃತವು ಸಕಲಸುಜನರ ಉದ್ಧಾರದ ಮಂಗಲಗೀತೆಯಾದಂತೆ, ಶ್ರೀಕೃಷ್ಣಭಕ್ತರಾದ ಶ್ರೀಮದಾಚಾರ್ಯರು ಯಡಪಾಡಿತ್ತಾಯ ಎಂಬ ಭಕ್ತನಿಗೆ ಉಪದೇಶಿಸಿದ ಕೃಷ್ಣಾಮೃತಮಹಾರ್ಣವವು ಸಕಲ ಸದ್ಭಕ್ತರಿಗೆ ನೀಡಿದ ಆಧ್ಯಾತ್ಮಾಮೃತತರಂಗಿಣಿಯಾಗಿದೆ :

ತಾಪತ್ರಯೇಣ ಸಂತಪ್ತಂ ಯದೇತದಖಿಲಂ ಜಗತ್ ।
ವಕ್ಷ್ಯಾಮಿ ಶಾಂತಯೇ ತಸ್ಯ ಕೃಷ್ಣಾಮೃತಮಹಾರ್ಣವಮ್ ॥
ಸಂಸಾರವಿಷಪಾನೇನ ಯೇ ಮೃತಾಃ ಪ್ರಾಣಿನೋ ಭುವಿ ।
ಅಮೃತಾಯ ಸ್ಮೃತಸ್ತೇಷಾಂ ಕೃಷ್ಣಾಮೃತಮಹಾರ್ಣವಃ ॥

– ಎಂಬ ಇದರ ಮಾತುಗಳಲ್ಲಿ ಇದರ ಮಹತ್ತ್ವ ಪ್ರತಿಪಾದಿತವಾಗಿದೆ.

ಅರ್ಚನೆ, ಸ್ಮರಣೆ, ಧ್ಯಾನ, ಕೀರ್ತನ, ಕಥನ ಮತ್ತು ಶ್ರವಣಗಳಿಗೆ ಭಗವಂತ ಒಲಿದು ಮುಕ್ತಿ ನೀಡುವನು ಎಂಬ ಸಂದೇಶದೊಂದಿಗೆ ಪ್ರಾರಂಭವಾಗುವ ಈ ಕೃತಿಯಲ್ಲಿ ಮುಂದೆ

---

೧. ಆನಂದತೀರ್ಥಮುನಿನಾ ವ್ಯಾಸವಾಕ್ಯಸಮುದ್ಧೃತಿಃ ।
ಸದಾಚಾರಸ್ಯ ವಿಷಯೇ ಕೃತಾ ಸಂಕ್ಷೇಪತಃ ಶುಭಾ ॥
ಅಶೇಷಕಲ್ಯಾಣಗುಣನಿತ್ಯಾನುಭವಸತ್ತನುಃ ।
ಅಶೇಷದೋಷರಹಿತಃ ಪ್ರೀಯತಾಂ ಪುರುಷೋತ್ತಮಃ ॥

ಈ ಆರುಸಾಧನಗಳ ಮಹತ್ತ್ವ ಮತ್ತು ವಿಧಿವಿಧಾನಗಳು ಅತ್ಯಂತ ಪರಿಣಾಮಕಾರಿಯಾಗಿ ನಿರೂಪಿತವಾಗಿವೆ.

ಪ್ರಧಾನವಾಗಿ ಇಲ್ಲಿಯ ಶ್ಲೋಕಗಳು ವಿಷ್ಣುಪುರಾಣ ಮೊದಲಾದ ಆಕರ ಗ್ರಂಥಗಳ ಶ್ಲೋಕಗಳ ಸಂಕಲನ; ಸುಮಧ್ವವಿಜಯ ಹೇಳಿರುವಂತೆ 'ಸದ್ವಚನತತಿ'. ನಾಲ್ಕಾರು ಶ್ಲೋಕಗಳನ್ನು ಬಿಟ್ಟರೆ, ಇಲ್ಲಿಯ ಉಳಿದಶ್ಲೋಕಗಳೆಲ್ಲ ಪ್ರಧಾನವಾಗಿ ಪ್ರಮಾಣವಚನಗಳೇ ಆಗಿವೆ. ಪ್ರಮಾಣವಚನಗಳನ್ನು ಉದಾಹರಿಸುವಾಗ 'ಶಂಕರಃ', 'ಯಮಃ', 'ಪುಲಸ್ತ್ಯಃ', 'ಪುಲಹಃ' ಮೊದಲಾಗಿ ಆ ವಚನ ನುಡಿದ ಮಹನೀಯರ ಹೆಸರುಗಳನ್ನೂ ಉಲ್ಲೇಖಿಸಿರುವರು. ಇದರಿಂದಾಗಿ ವಿಭಿನ್ನ ಕೃತಿಗಳ ನಿರ್ಣಯ ಎಂಬುದರ ಜೊತೆಗೆ, ವಿಭಿನ್ನ ಜ್ಞಾನಿಗಳ ಒಟ್ಟು ಹೃದಯ ('ವ್ಯವಸಯಾತ್ಮಿಕಾ ಬುದ್ಧಿರೇಕೇಹ ಕುರುನಂದನ') ಎಂಬ ಮತ್ತೊಂದು ರೀತಿಯ ಆಧಾರದಿಂದಲೂ ಹರಿಸರ್ವೋತ್ತಮತ್ವಾದಿ ಪ್ರಮೇಯಗಳು ನಿರೂಪಿತವಾದಂತಾಗುತ್ತವೆ.

ದೇವಪೂಜೆ ಜೀವನದ ಪ್ರಧಾನ ಫಲಶ್ರುತಿ; ವಿಷ್ಣುವು ಸಕಲದೇವೋತ್ತಮನಾದ್ದರಿಂದ ಅವನ ಆರಾಧನೆ ಸಕಲದೇವತೆಗಳ ಒಲುಮೆಗೂ ಸಾಧನ. ಕಣ್ಣು ಕಿವಿ ಮೊದಲಾದ ಇಂದ್ರಿಯಗಳ ಸಾರ್ಥಕ್ಯ ದೇವಪೂಜೆ ನಡೆದಾಗಲೇ; ಹರಿಯ ಆರಾಧನೆಗೆ ವಿಶೇಷ ದ್ರವ್ಯಗಳೇನೂ ಬೇಕಿಲ್ಲ; ಬೇರೇನೂ ಇಲ್ಲವಾದಾಗ ಕೇವಲ ಜಲದಿಂದಲೂ ಭಗವಂತನು ಪ್ರೀತನಾಗುವನು; ಸಾಲಿಗ್ರಾಮ, ಚಕ್ರಾಂಕಿತಗಳನ್ನು ಅವಶ್ಯ ಪೂಜಿಸಲೇಬೇಕು. ಇವುಗಳು ಇರುವ ಸ್ಥಳವು ಮಾತ್ರವಲ್ಲದೆ ಸುತ್ತಲಿನ ಯೋಜನಗಟ್ಟಲೆ ಪ್ರದೇಶವೂ ಕ್ಷೇತ್ರವೆನ್ನಿಸುವುದು. ಪ್ರತಿಯೊಬ್ಬನೂ ತಾನೇ ದೇವಪೂಜೆ ಮಾಡಿ ಸಿದ್ಧಪಡಿಸುವ ತೀರ್ಥ, ಗಂಗಾದಿತೀರ್ಥ-ಗಳಿಗಿಂತ ಮಿಗಿಲು; ಪ್ರದಕ್ಷಿಣೆ, ನಮಸ್ಕಾರಗಳು ಪೂಜೆಯ ಅಂಗಗಳು. ಪ್ರದಕ್ಷಿಣೆಯ ಹೆಜ್ಜೆ ಹೆಜ್ಜೆಗೂ ಜನ್ಮಾಂತರದ ಪಾಪಗಳು ನಶಿಸುತ್ತವೆ. ಒಂದೊಂದು ನಮಸ್ಕಾರವೂ ಅತಿ ಕಡಿಮೆ ಎಂದರೂ ಹತ್ತು ಅಶ್ವಮೇಧಯಾಗಗಳ ಪುಣ್ಯ ನೀಡುತ್ತದೆ. ಪ್ರತಿದಿನ ಸಾಲಿಗ್ರಾಮ ಸ್ಪರ್ಶಿಸಿ ಪೂಜಿಸುವವನ ಕೈಹಿಡಿದು ಉದ್ಧರಿಸಲು ಇಂದ್ರಾದಿದೇವತೆಗಳು ಕಾಯುತ್ತಿರುತ್ತಾರೆ. ದೇವಪೂಜೆಯನ್ನು ವಿಧ್ಯುಕ್ತ ಕ್ರಮದಲ್ಲಿ ಶ್ರದ್ಧೆಯಿಂದ ಮಾಡಿದರೆ ಧರ್ಮ, ಅರ್ಥ, ಕಾಮ ಮತ್ತು ಮೋಕ್ಷ ಎಂಬ ನಾಲ್ಕು ಪುರುಷಾರ್ಥಗಳಲ್ಲಿ ಯಾವುದೂ ದುರ್ಲಭವಲ್ಲ.

ಭಗವಂತನ ಒಂದೊಂದು ನಾಮದ ಉಚ್ಚಾರಣೆಯೂ ಅತ್ಯಂತ ತಾರಕ; ಸಕಲ ಪಾಪನಾಶಕ. ಪೂಜೆಯ ಅನಂತರ ಭಗವಂತನಿಗೆ ಸಮರ್ಪಿಸಿದ ಧೂಪ, ದೀಪ, ಮಂಗಳಾರತಿ, ನೈವೇದ್ಯ ಮೊದಲಾಗಿ ಸಕಲವನ್ನೂ ಶ್ರದ್ಧೆಯಿಂದ ಸ್ವೀಕರಿಸಬೇಕು. ವಿಷ್ಣುನೈವೇದ್ಯಶೇಷದ ಕಣಕಣವೂ ಚಾಂದ್ರಾಯಣವ್ರತಕ್ಕಿಂತ ಹೆಚ್ಚಿನ ಪುಣ್ಯವನ್ನು ನೀಡುವುದು. ಇತರ ದೇವತೆಗಳ ನೈವೇದ್ಯ ಎಂದೂ ಹೀಗೆ ಗ್ರಾಹ್ಯವಲ್ಲ. ವಿಷ್ಣುಪೂಜೆ, ವಿಷ್ಣುಸ್ಮರಣೆಗಳಂತೆ, ವಿಷ್ಣುಧ್ಯಾನವೂ ಅತ್ಯಂತ ಪಾವನ. ವಿಷ್ಣುವನ್ನು ಬಿಟ್ಟು ಇತರ ದೇವತೆಗಳನ್ನು ಸರ್ವೋತ್ತಮರೆಂದು ಆರಾಧಿಸುವವನು ಗಂಗೆಯ ತೀರದಲ್ಲಿ ಜಲಕ್ಕಾಗಿ

ಬಾವಿ ತೋಡುವಂತಹ ಮೂರ್ಖನೇ ಸರಿ. ಗೋಪೀಚಂದನಧಾರಣೆ ಅತ್ಯಂತ ಪಾವನ; ಅದನ್ನು ಧರಿಸದೆ ಮಾಡುವ ಜಪ, ಧ್ಯಾನ, ತಪಸ್ಸು, ಪಾಠ, ಪ್ರವಚನ, ಬ್ರಹ್ಮಯಜ್ಞ, ಪಿತೃಕಾರ್ಯ ಮೊದಲಾದ ಎಲ್ಲಾ ಸತ್ಕಾರ್ಯಗಳೂ ನಿಷ್ಫಲ.

ಗೋಪೀಚಂದನ ಧರಿಸಿದವನು ನೋಡುವ ವಸ್ತುಗಳೂ ಪಾವನ. ಗೋಪೀಚಂದನಧಾರಣೆಯಂತೆ ಗೋಪೀಚಂದನದ ದಾನವೂ ಅತ್ಯಂತ ವಿಹಿತ. ಊರ್ಧ್ವಪುಂಡ್ರಧಾರಣೆ ವಿಹಿತ; ತಿರ್ಯಕ್ಪುಂಡ್ರ ಸರ್ವಥಾ ನಿಷಿದ್ಧ.

ಏಕಾದಶ್ಯುಪವಾಸವು ಪ್ರತಿಯೊಬ್ಬ ಸ್ತ್ರೀಪುರುಷರಿಗೂ, ಸಕಲ ವರ್ಣಾಶ್ರಮ-ದವರಿಗೂ, ಅಷ್ಟೇಕೆ ಒಟ್ಟಾಗಿ ಸಕಲ ಮಾನವರಿಗೂ ವಿಹಿತವಾಗಿರುವ ಕಡ್ಡಾಯ ವ್ರತ. ಇದರ ಆಚರಣೆಯಿಂದ ದೇಹದೊಳಗಿನ ಸಕಲ ದೋಷಗಳೂ ನಾಶವಾಗುವವು; ಏಕಾದಶೇಂದ್ರಿಯಗಳಿಂದ ಮಾಡಿದ ಸಕಲ ಪಾಪಗಳೂ ಏಕಾದಶ್ಯುಪವಾಸದಿಂದ ಪರಿಹಾರವಾಗುವುವು; ಇದಕ್ಕಿಂತ ಮಿಗಿಲಾದ ಮತ್ತೊಂದು ವ್ರತವೇ ಇಲ್ಲ; ಗಂಗಾದಿ ಸಕಲ ತೀರ್ಥಗಳೂ, ಕುರುಕ್ಷೇತ್ರಾದಿ ಸಕಲ ಕ್ಷೇತ್ರಗಳೂ, ಅಶ್ವಮೇಧಾದಿ ಸಕಲ ಯಾಗಗಳೂ ಏಕಾದಶ್ಯುಪವಾಸದ ಹದಿನಾರನೆಯ ಒಂದಂಶಕ್ಕೂ ಸಾಟಿ ಎನ್ನಿಸವು; ಇದನ್ನು ಆಚರಿಸುವವರಿಗೆ ಯಮಲೋಕದ ಭಯವಿಲ್ಲ; ಶನಿ ಮೊದಲಾದ ಗ್ರಹಗಳ ದೋಷವೂ ಬಾಧಿಸುವುದಿಲ್ಲ. ಏಕಾದಶಿಯಂದು ಆಹಾರ ಸ್ವೀಕರಿಸುವುದು ಸಕಲ ಮಹಾಪಾಪಗಳಿಗೂ ಸಮನಾಗುವ ಮಹಾಪಾತಕ; ಎಲ್ಲ ಪಾಪಗಳೂ ಅಂದು ತಿನ್ನುವ ಆಹಾರದಲ್ಲಿ ನೆಲೆಸಿರುವುವು. ಆದ್ದರಿಂದ ಅಂದು ಸಂಪೂರ್ಣ ಉಪವಾಸವನ್ನೇ ಆಚರಿಸಬೇಕು; ಏಕಾದಶಿಯನ್ನು ತಾನು ಆಚರಿಸುವಂತೆ, ಇತರರಿಗೂ ಆಚರಿಸುವಂತೆ ತಿಳಿಸಿಕೊಡಬೇಕು; ಅದರಿಂದ ಹನ್ನೆರಡು ಏಕಾದಶೀ ವ್ರತದ ಪುಣ್ಯವು ಹೆಚ್ಚಾಗಿ ಲಭಿಸುವುದು.

ಹರಿದಿನದ ಉಪವಾಸದಂತೆ ಸಕಾಲಕ್ಕೆ ದ್ವಾದಶೀ ಪಾರಣೆಯೂ ವಿಹಿತ, ಸಾಧನೆ ಇದ್ದಾಗ ಅಷ್ಟರಲ್ಲಿಯೇ ಪಾರಣೆ ವಿಹಿತ; ಹರಿವಾಸರವಿದ್ದಾಗ ಅದು ಕಳೆದ ಮೇಲೆಯೇ ಪಾರಣೆ. ಸಾಧನೀದ್ವಾದಶಿಯನ್ನು ಆಚರಿಸದಿದ್ದಲ್ಲಿ ಹನ್ನೆರಡು ಏಕಾದಶಿಗಳ ಪುಣ್ಯ ನಾಶವಾಗುವುದು. ಏಕಾದಶೀ ಉಪವಾಸದಂತೆ ಶ್ರವಣದ್ವಾದಶೀ, ಅತಿರಿಕ್ತದ್ವಾದಶಿಗಳಂದು ಸಹ ಉಪವಾಸವನ್ನು ಮಾಡಲೇಬೇಕು. ಶ್ರವಣದ್ವಾದಶಿ ಆಚರಿಸದಿದ್ದರೆ ಐದು ವರ್ಷಗಳ ಸಕಲಪುಣ್ಯಗಳು ನಿಷ್ಫಲ. ಅತಿರಿಕ್ತದ್ವಾದಶೀ ಆಚರಿಸದಿದ್ದಲ್ಲಿ ಹನ್ನೆರಡು ಏಕಾದುಶ್ಯುಪವಾಸಗಳ ಪುಣ್ಯನಾಶ. ಏಕಾದಶೀ ಉಪವಾಸ ಮಾಡದಿದ್ದ ತಂದೆ, ತಾಯಿ, ಅಣ್ಣತಮ್ಮಂದಿರು, ಅಕ್ಕತಂಗಿಯರು ಮಕ್ಕಳು ಮೊದಲಾಗಿ ಎಲ್ಲರೂ ನಿಂದ್ಯರೇ ಸರಿ.

ಏಕಾದಶಿಯು ದಶಮೀವಿದ್ಧವಾಗಿದ್ದಾಗ, ಎಂದರೆ ಏಕಾದಶಿಯಂದು ಅರುಣೋ-ದಯಕಾಲದಲ್ಲಿ ದಶಮೀತಿಥಿಯ ಸಂಪರ್ಕವಿದ್ದಾಗ, ಉಪವಾಸ ಮಾಡುವುದು ವಿಹಿತ-ವಲ್ಲ, ಆದರಿಂದ ಪುತ್ರರು, ಐಶ್ವರ್ಯಾದಿಗಳು ನಾಶವಾಗುವವು. ದಶಮೀ ವಿದ್ಧವಾದಾಗ

ಏಕಾದಶಿಯಂದು ಉಪವಾಸ ಆಚರಿಸದೆ ದ್ವಾದಶಿಯಂದು ಉಪವಾಸ ಆಚರಿಸಿ, ತ್ರಯೋದಶಿಯಂದು ಪಾರಣ ಮಾಡಬೇಕು. ವೇಧದ ವಿಚಾರದಲ್ಲಿ ಆಗಮಗಳಲ್ಲಿ, ವಿದ್ವಾಂಸರಲ್ಲಿ, ದೈವಜ್ಞರಲ್ಲಿ ಭಿನ್ನಾಭಿಪ್ರಾಯ ಉಂಟಾದಾಗ, ಆ ಬಾರಿ ಅಂತಹ ಏಕಾದಶಿ-ಯಂದು ಉಪವಾಸ ಮಾಡದೇ ದ್ವಾದಶಿಯಂದು ಉಪವಾಸ ಮಾಡುವುದೇ ವಿಹಿತ.

ಏಕಾದಶಿಯು ಮೂಲವ್ರತ; ಇದನ್ನು ಆಚರಿಸದೆ ಬೇರಾವ ವಿಹಿತವ್ರತ ಮಾಡಿದರೂ ನಿಷ್ಫಲ. ನಿಷಿದ್ಧ ವ್ರತಗಳನ್ನಂತೂ ಆಚರಿಸಲೇ ಕೂಡದು, ಅನಂತವ್ರತ, ವರಮಹಾಲಕ್ಷ್ಮೀ ವ್ರತ ಮೊದಲಾದ ವಿಹಿತ ವ್ರತಗಳೂ ಫಲಕಾರಿಯಾಗುವುದು ಸಹ ಏಕಾದಶಿಯನ್ನು ತಪ್ಪದೆ ಆಚರಿಸಿದಾಗ ಮಾತ್ರ. ಭಗವದಾರಾಧನೆಗೆ ಪುರುಷರಂತೆ ಸ್ತ್ರೀಯರೂ ಯಥೋಚಿತವಾಗಿ ಅರ್ಹರೇ ಆಗಿರುವರು.

ಇಂತಹ ಎಲ್ಲಾ ಆಚರಣೆಯ ಮುಖ್ಯಗುರಿ ಜ್ಞಾನಪ್ರಾಪ್ತಿ. ಜ್ಞಾನದಿಂದ ಮಾತ್ರವೇ ಕರ್ಮಬಂಧನರೂಪವಾದ ಸಂಸಾರಬಂಧನದಿಂದ ಮುಕ್ತಿಪಡೆಯಲು ಸಾಧ್ಯ. ಕೇವಲ ಕರ್ಮಾಚರಣೆ ಎಂದೂ ತಾರಕಾವಾಗದು. ಪ್ರತಿಯೊಬ್ಬ ಜೀವಿ ತನ್ನ ಹದಿನಾಲ್ಕನೇ ವರ್ಷದಿಂದ ಪ್ರಾರಂಭಿಸಿ ಪ್ರತಿದಿನವೂ ಅತಿ ಕಡಿಮೆಯೆಂದರೂ ಹತ್ತು ಜನ್ಮ ಬರುವಷ್ಟು ಕರ್ಮಗಳನ್ನು ಆಚರಿಸುತ್ತಾನೆ[೧]. ಪ್ರತಿಯೊಂದು ಕರ್ಮದ ಅನುಭವದ ಕಾಲದಲ್ಲೂ ಮತ್ತೊಂದು ಕರ್ಮದ ನಂಟು ತಪ್ಪಿದ್ದಲ್ಲ. ಹೀಗಾಗಿ ಕೇವಲ ಕರ್ಮಾಚರಣೆಯಿಂದ ಕರ್ಮಬಂಧನ ಪರಿಹಾರವೆಂಬುದು ಕೆಸರಿಂದ ಕೆಸರ ತೊಳೆದಂತೆ ಇನ್ನೂ ಹೆಚ್ಚು ಬಂಧಕ. ಆದ್ದರಿಂದ ಮೋಕ್ಷಬಯಸುವವನು ಜ್ಞಾನಸಂಪಾದಿಸುವುದು ಅನಿವಾರ್ಯ.

ವಿಹಿತ ಕರ್ಮಾಚರಣೆ ಜಿಜ್ಞಾಸುವಿಗೆ ಜ್ಞಾನಪ್ರಾಪ್ತಿಗೆ ಸಾಧನವಾದರೆ, ಜ್ಞಾನಿಗೆ ಮೋಕ್ಷದಲ್ಲಿ ಆನಂದಾತಿಶಯಕ್ಕೆ ಸಾಧನ. ಆದ್ದರಿಂದ ಎಂತಹ ದಿವ್ಯಜ್ಞಾನಿಯೂ ಸಹ ವಿಹಿತ ಕರ್ಮಾನುಷ್ಠಾನವನ್ನು ಫಲಾಸೆಯನ್ನು ತೊರೆದು ಕೇವಲ ವಿಷ್ಣುಪ್ರೀತ್ಯರ್ಥವೆಂದು ಆಚರಿಸಲೇಬೇಕು[೨].

ಇಂತಹ ಕರ್ಮಯೋಗದೊಂದಿಗೆ ತನಗಿಂತ ಉತ್ತಮರಾದವರನ್ನು ಯಥೋಚಿತವಾಗಿ ಗೌರವಿಸಲೇಬೇಕು ಎಂಬುದು ಮತ್ತೊಂದು ವಿಧಿ. ಸಂಪತ್ತು, ಬಾಂಧವ್ಯ, ವಯಸ್ಸು, ಸಾಧನೆ ಮತ್ತು ಜ್ಞಾನ ಇವು ಕ್ರಮವಾಗಿ ಒಂದಕ್ಕಿಂತ ಮತ್ತೊಂದು

---

೧ ಚತುರ್ದಶೋರ್ಧ್ವಜೀವೀನಿ ಸಂಸಾರಶ್ಚಾದಿವರ್ಜಿತಃ।
ಅವಿದಿತ್ವಾ ಪರಂ ದೇವಂ ಮೋಕ್ಷಾಶಾ ಕಾ ಮಹಾಮುನೇ ॥ ೨೧೩ ॥
ಆಚತುರ್ದಶಮಾದ್ವರ್ಷಾತ್ ಕರ್ಮಾಣಿ ನಿಯಮೇನ ತು।
ದಶಾವರಾಣಾಂ ದೇಹಾನಾಂ ಕಾರಣಾನಿ ಕರೋತ್ಯಯಮ್।
ಅತಃ ಕರ್ಮಕ್ಷಯಾನ್ಮುಕ್ತಿಃ ಕುತ ಏವ ಭವಿಷ್ಯತಿ ॥ ೨೧೪ ॥

೨. ಅತೀತಾನಾಗತಜ್ಞಾನೀತ್ರೈಲೋಕ್ಯೋದ್ಧರಣಕ್ಷಮಃ।
ಏತಾದೃಶೋऽಪಿ ನಾಚಾರಂ ಶ್ರೌತಂ ಸ್ಮಾರ್ತಂ ಪರಿತ್ಯಜೇತ್ ॥ ೨೩೧ ॥

ಮಿಗಿಲು ಎಂಬ ಕ್ರಮದಲ್ಲಿ ಹಿರಿದು ಎಂದು ನಿರ್ಧರಿಸುವ ಸಾಧನವಾಗಿವೆ. ಸ್ತೋತ್ತಮರು ಪೂಜಾಧಿಷ್ಠಾನವೆನ್ನಿಸುವುದರಿಂದ ಅವರನ್ನು ಈ ಕ್ರಮದಲ್ಲಿ ಗೌರವಿಸುವುದು ಮುಖ್ಯ ಸಾಧನಗಳಲ್ಲೊಂದು[೧].

ಹೀಗೆ ಕೃಷ್ಣಾಮೃತಮಹಾರ್ಣವವು ಸದಾಚಾರದ ಸಮಗ್ರ ಸ್ವರೂಪವನ್ನೇ ತೆರೆದಿಡುವ ಅಪೂರ್ವಕೃತಿ. ಏಕಾದಶ್ಯುಪವಾಸದ ವಿಧಿವಿಧಾನಗಳ ನಿರೂಪಣೆಗೆ ಐವತ್ತಕ್ಕಿಂತ ಹೆಚ್ಚು ಶ್ಲೋಕಗಳು ಮೀಸಲಾಗಿವೆ. ಶ್ರೀಮದಾಚಾರ್ಯರೇ ತಿಳಿಸಿರುವಂತೆ ಇದು ಅಮೃತ-ಮಹಾರ್ಣವ; ಇಂದ್ರಜಿತ್‌ನ ಬಾಣಗಳಿಂದ ಮೃತರಾಗಿದ್ದ ಕಪಿಗಳನ್ನು ಮರಳಿ ಬದುಕಿಸಲು ಹನುಮದ್ರೂಪದಿಂದ ಸಂಜೀವನ ತಂದಿತ್ತ ಶ್ರೀವಾಯುದೇವರು, ಇಂದ್ರಿಯಗಳ ಸೆಳೆತಕ್ಕೆ ಸಿಲುಕಿ ಮೃತಪ್ರಾಯರಾದ ಜನರನ್ನು ಮರಳಿ ಬದುಕಿಸಲು ಶ್ರೀಮಧ್ವರೂಪದಿಂದ ಹೀಗೆ ಕೃಷ್ಣಾಮೃತಮಹಾರ್ಣವವನ್ನು ಒದಗಿಸಿರುವರು ಎಂದು ತಿಳಿಯಬೇಕು :

ಸಂಸಾರವಿಷಪಾನೇನ ಯೇ ಮೃತಾಃ ಪ್ರಾಣಿನೋ ಭುವಿ ।
ಅಮೃತಾಯ ಸ್ಮೃತಸ್ತೇಷಾಂ ಕೃಷ್ಣಾಮೃತಮಹಾರ್ಣವಃ ॥

ಪ್ರಧಾನವಾಗಿ ಅನುಷ್ಟುಪ್ ಶ್ಲೋಕಗಳನ್ನು ಹೊಂದಿರುವ ಈ ಕೃತಿ, ಭಾಷೆಯಲ್ಲಿ ಅತ್ಯಂತ ಸುಲಭ. ಶೈಲಿಯಲ್ಲೂ ಅತ್ಯಂತ ಸರಳ. ನಿರೂಪಣೆ ಮಾತ್ರ ಅತ್ಯಂತ ಪರಿಣಾಮಕಾರಿ. ಶ್ರವಣದ ಮಹತ್ತ್ವವನ್ನು ಅತ್ಯಂತ ಪರಿಣಾಮಕಾರಿಯಾಗಿ ನಿರೂಪಿಸುವ ಈ ಶ್ಲೋಕದ ಸೊಬಗನ್ನು ನೋಡಿ:

ಶ್ರುತ್ವಾ ಧರ್ಮಂ ವಿಜಾನಾತಿ ಶ್ರುತ್ವಾ ತ್ಯಜತಿ ದುರ್ಮತಿಮ್ ।
ಶ್ರುತ್ವಾ ಜ್ಞಾನಮವಾಪ್ನೋತಿ ಶ್ರುತ್ವಾ ಮೋಕ್ಷಂ ಚ ಗಚ್ಛತಿ ॥

ಶ್ರವಣದ ಮಹತ್ತ್ವವನ್ನು ಸೊಗಸಾಗಿ ನಿರೂಪಿಸುವ ಈ ಶ್ಲೋಕ 'ಓಂ ಆವೃತ್ತಿರಸಕೃದುಪದೇಶಾತ್ ಓಂ' ಎಂಬ ಸೂತ್ರಕ್ಕೆ ಭಾಷ್ಯವೇ ಆಗಿದ್ದು, ಬ್ರಹ್ಮಸೂತ್ರ-ಭಾಷ್ಯಕ್ಕೆ ಪೂರಕವೇ ಆಗಿದೆ.

[೨]ಕೃಷ್ಣಾಮೃತಮಹಾರ್ಣವಕ್ಕೆ ಸ್ಮೃತಿಮುಕ್ತಾವಲೀ ಕೃಷ್ಣಾಚಾರ್ಯರು, ತಾಮ್ರಪರ್ಣೀ ಶ್ರೀನಿವಾಸಾಚಾರ್ಯರು, ಉಮರ್ಜೀಪ್ರಹ್ಲಾದಕೃಷ್ಣಾಚಾರ್ಯರು ಮೊದಲಾದ ಅನೇಕ ಮಹನೀಯರು ವ್ಯಾಖ್ಯಾನ ರಚಿಸಿರುವರು.

---

೧. ಸಮಾನಾಂ ವಿಷಮಾ ಪೂಜಾ ವಿಷಮಾನಾಂ ಸಮಾ ತಥಾ ।
ಕ್ರಿಯತೇ ಯೇನ ದೇವೋಽಪಿ ಸ್ವಪದಾದ್ ಭ್ರಶ್ಯತೇ ಹಿ ಸಃ (ಇತಿ ಪಾದ್ಮೇ)॥೨೧೫॥
ವಿತ್ತಂ ಬಂಧುರ್ವಯಃ ಕರ್ಮ ವಿದ್ಯಾ ಚೈವ ತು ಪಂಚಮೀ ।
ಏತಾನಿ ಮಾನ್ಯಸ್ಥಾನಾನಿ ಗರೀಯೋ ಹ್ಯುತ್ತರೋತ್ತರಮ್ ॥ ೨೧೬ ॥

೨. ಶ್ರೀಕೃಷ್ಣಾಮೃತಮಹಾರ್ಣವವು ಕನ್ನಡ ಅನುವಾದ ಹಾಗೂ ವಿವರಣೆಗಳ ಸಮೇತ ನಮ್ಮ 'ಐತರೇಯಪ್ರಕಾಶನ'ದಿಂದ ಪ್ರಕಾಶಿತವಾಗಿದೆ (೨೦೦೫, ೨೦೦೯).

ತಂತ್ರಸಾರಸಂಗ್ರಹ

ಕಸ್ತಂತ್ರಸಾರಂ ಸಂಪ್ರಾಪ್ಯ ನ ಸ್ಯಾತ್ ಪರ್ಯಾಪ್ತವಾಂಛಿತಃ ।
ಅಮರ್ತ್ಯೈರಾಶ್ರಿತಚ್ಛಾಯಂ ಕಲ್ಪದ್ರುಮಮಿವೋತ್ತಮಮ್ ॥

– ಸುಮಧ್ವವಿಜಯ (೧೫/೭೮)

ತಂತ್ರಸಾರಸಂಗ್ರಹವು 'ತಂತ್ರಸಾರ'ವೆಂಬ ಮಹಾವಿಷ್ಣುಕೃತ ಮೂಲಗ್ರಂಥದ ಸಂಗ್ರಹ. ಮೂಲ ತಂತ್ರಸಾರವು ತಂತ್ರಗ್ರಂಥಗಳಲ್ಲೆಲ್ಲಾ ಅತ್ಯಂತ ಪ್ರಧಾನ. ಅದರಿಂದ ಅನೇಕ ಶ್ಲೋಕಗಳನ್ನು ಶ್ರೀಮದಾಚಾರ್ಯರು ತಮ್ಮ ಭಾಗವತತಾತ್ಪರ್ಯ ಮೊದಲಾದ ಗ್ರಂಥಗಳಲ್ಲಿ ಉದಾಹರಿಸಿರುವರು. ತಂತ್ರಸಾರಸಂಗ್ರಹದಲ್ಲಿ ಅದರ ಸಾರಸರ್ವಸ್ವವನ್ನು ಒದಗಿಸಿರುವರು. ಯಾವುದನ್ನು ಆಚರಿಸದಿದ್ದಲ್ಲಿ ಕರ್ಮಲೋಪವೆಂಬ ಪ್ರತ್ಯವಾಯ ಒದಗುವುದೋ ಅಂತಹ ಮೂಲತಂತ್ರದ ಸರ್ವಸ್ವವನ್ನೂ ಅದರಲ್ಲಿ ಒದಗಿಸಿರುವುದಾಗಿಯೂ, ಇದರ ಪಠನಪಾಠನಾದಿ ಸಕಲವೂ ಸಕಲಾಭೀಷ್ಟದಾಯಕ ಎಬುದಾಗಿಯೂ ತಿಳಿಸಿರುವರು :

ಗ್ರಂಥೋಽಯಂ ಪಾಠಮಾತ್ರೇಣ ಸಕಲಾಭೀಷ್ಟಸಿದ್ಧಿದಃ ।
ಕಿಮು ಜ್ಞಾನಾದನುಷ್ಠಾನಾದುಭಯಸ್ಮಾತ್ ಪುನಃ ಕಿಮು ॥
ತಂತ್ರಮಾರ್ಗಾಸ್ತು ಹರಿಣಾ ಹ್ಯಸಂಖ್ಯಾಃ ಕೀರ್ತಿತಾ ಅಪಿ ।
ತೇಷ್ವಯಂ ಸುಗಮೋ ಮಾರ್ಗಃ ಸುಫಲಶ್ಚಾನುತಿಷ್ಠತಾಮ್ ॥
ಯಾವತೋ ಹ್ಯನನುಷ್ಠಾನೇ ಕರ್ಮಪೂರ್ತಿರ್ನ ವಿದ್ಯತೇ ।
ತಾವತ್ ಸಮಸ್ತಂ ಕಥಿತಂ ಹ್ಯಸ್ಮಿಂಸ್ತಂತ್ರೇ ಯಥಾವಿಧಿ ॥
ಪ್ರೀಯತೇಽನೇನ ಮಾರ್ಗೇಣ ಪೂಜಿತೋ ಮುಕ್ತಿದೋ ಭವೇತ್ ।
ಕಾಮದಶ್ಚ ಸ್ವಭಕ್ತಾನಾಂ ಭಗವಾನ್ ಪುರುಷೋತ್ತಮಃ ॥

ಸೃಷ್ಟಿಯ ಪ್ರಾರಂಭದಲ್ಲಿ ಮಹಾವಿಷ್ಣುವು, ಬ್ರಹ್ಮದೇವರಿಗೆ ನೀಡಿದ ಉಪದೇಶದ ಸಾರ 'ತಂತ್ರಸಾರ'. ಅದರ ಸಂಗ್ರಹ ತಮ್ಮ 'ತಂತ್ರಸಾರಸಂಗ್ರಹ' ಎಂಬ ಮಾತನ್ನು ಅವರೇ ಸ್ಪಷ್ಟಪಡಿಸಿರುವರು.

ತಂತ್ರಸಾರಸಂಗ್ರಹದಲ್ಲಿ ನಾಲ್ಕು ಅಧ್ಯಾಯಗಳಿದ್ದು ಅದರ ಮೊದಲ ಅಧ್ಯಾಯದಲ್ಲಿ ಪ್ರಣವಲಕ್ಷಣ, ಅದರ ಅಷ್ಟಾಕ್ಷರಗಳಿಂದ ಪ್ರತಿಪಾದ್ಯವಾದ ಭಗವನ್ಮೂರ್ತಿಗಳ ವಿವರ, ಮಾತೃಕಾಮೂರ್ತಿಗಳು, ಅಷ್ಟಮಹಾಮಂತ್ರಗಳು, ಅವುಗಳ ಮಹತ್ತ್ವ, ದೇವಪೂಜಾವಿಧಾನ, ವಿಶೇಷವಾಗಿ ಪೀಠಪೂಜೆ ಮತ್ತು ಆವರಣ ಪೂಜೆಯ ವಿಧಾನಗಳು, ದೇವಪೂಜೆಯ ಮಹತ್ತ್ವ ಇವು ನಿರೂಪಿತವಾಗಿವೆ.

ಮಾತೃಕಾನ್ಯಾಸದ ಕ್ರಮ, ಪ್ರಾಣಾಯಾಮ, ಪಾಪಪುರುಷವಿಸರ್ಜನಕ್ರಮ, ಕಲಶದೇವತೆಗಳು, ಕಲಶಪೂಜಾವಿಧಾನ, ಹೋಮದ ವಿಧಿವಿಧಾನಗಳು, ಹೋಮದ್ರವ್ಯಗಳು ಮೊದಲಾದವುಗಳು ಎರಡನೆಯ ಅಧ್ಯಾಯದಲ್ಲಿ ಬಂದಿವೆ.

ತೃತೀಯಾಧ್ಯಾಯವು ಪ್ರಧಾನವಾಗಿ ದೇವತಾಪ್ರತಿಷ್ಠೆಯ ವಿಧಿವಿಧಾನಗಳಿಗೆ ಮೀಸಲಾಗಿದ್ದು ಪ್ರತಿಮಾಲಕ್ಷಣ, ಪ್ರತಿಮಾನಿರ್ಮಾಣವಿಧಿ, ಶಿಲಾಪರೀಕ್ಷಾವಿಧಿ, ಶಿಲಾ-ಪ್ರಭೇದಗಳು, ಭೂಶೋಧನವಿಧಿ, ದೇವಾಲಯನಿರ್ಮಾಣಯೋಗ್ಯಸ್ಥಳವಿಚಾರ, ಗರ್ಭಗೃಹಾದಿಗಳ ಪ್ರಮಾಣ, ವಾಸ್ತುಪೂಜಾವಿಧಿ, ಮಂಟಪರಚನೆಯ ವಿಧಾನ, ಅಂಕುರಾರ್ಪಣವಿಧಿ, ಬಲಿದಾನವಿಧಿ, ಅಧಿವಾಸನನಿಧಿ, ಚಕ್ರಾಬ್ಜ ಭದ್ರಕ ಮಂಡಲಗಳ ಲಕ್ಷಣ, ಕಲಶಾಭಿಷೇಕಕ್ರಮ, ಅಭಿಷೇಕಮಂತ್ರಗಳು, ಅಭಿಷೇಕವಿಧಿ, ಅನ್ನಸಂತರ್ಪಣೆ ಹಾಗೂ ಅತಿಥಿಪೂಜೆಯ ವಿಧಾನ, ಜೀರ್ಣೋದ್ಧಾರವಿಧಿ, ಸಂಪ್ರೋಕ್ಷಣವಿಧಿ, ದುರ್ಗಾದಿ ಇತರ ದೇವತಾಪ್ರತಿಷ್ಠಾವಿಧಿ, ತತ್ತ್ವಾಭಿಮಾನಿ ದೇವತಾವಿಚಾರ, ತತ್ತ್ವನ್ಯಾಸದ ಕ್ರಮ ಮೊದಲಾದ ವಿಷಯಗಳ ಬಗ್ಗೆ ಸಮಗ್ರವಿವರಗಳನ್ನು ನೀಡುತ್ತದೆ.

ನಾಲ್ಕನೆಯ ಅಧ್ಯಾಯವು ವಿವಿಧ ಮಂತ್ರಗಳ ನಿರೂಪಣೆಗೆ ಮೀಸಲು. ಮಂತ್ರಾಧ್ಯಾಯವೆಂದೇ ಇದು ಪ್ರಸಿದ್ಧ. ಅನೇಕ ಬಗೆಯ ವರಾಹಮಂತ್ರಗಳು, ಶ್ರೀಕರಾ-ಷ್ಟಾಕ್ಷರಮಂತ್ರ, ನರಸಿಂಹಮಂತ್ರಗಳು, ಹಂಸಮಂತ್ರಗಳು, ದಧಿವಾಮನಮಂತ್ರ, ವಾಮನ ಮಂತ್ರ, ತ್ರಿವಿಕ್ರಮಗಾಯತ್ರೀಮಂತ್ರ, ರಾಮಮಂತ್ರ, ಪರಶುರಾಮಮಂತ್ರ, ಕೃಷ್ಣಮಂತ್ರ-ಗಳು, ವೇದವ್ಯಾಸಮಂತ್ರ, ಹಯಗ್ರೀವಮಂತ್ರ, ಕಪಿಲಮಂತ್ರ, ದತ್ತಾತ್ರೇಯಮಂತ್ರ, ವೈದಿಕವಿಷ್ಣುಮಂತ್ರಗಳು, ಲಕ್ಷ್ಮೀಮಂತ್ರಗಳು, ಬ್ರಹ್ಮವಾಯುಗಳ, ಸರಸ್ವತೀಭಾರತಿಯರ ಮಂತ್ರಗಳು, ಶಿವಪಾರ್ವತಿಯರ ಮಂತ್ರಗಳು, ಶೇಷಮಂತ್ರ, ಗರುಡಮಂತ್ರಗಳು, ದಿಕ್ಪಾಲಕರ ಮಂತ್ರಗಳು, ಸೂರ್ಯಮಂತ್ರ, ಗಣೇಶಮಂತ್ರ ಮತ್ತು ಧನ್ವಂತರಿಮಂತ್ರ – ಇಷ್ಟು ಮಂತ್ರಗಳು ಇದರಲ್ಲಿ ನಿರೂಪಿತವಾಗಿವೆ. ಪ್ರತಿ ಮಂತ್ರಕ್ಕೂ ಧ್ಯೇಯಮೂರ್ತಿಯ ವಿವರ, ಅಂಗನ್ಯಾಸ ಕರನ್ಯಾಸಗಳ ವಿಧಿವಿಧಾನಗಳು, ಧ್ಯಾನಮಂತ್ರಗಳು ನಿಖರವಾಗಿ ತಿಳಿಸಲ್ಪಟ್ಟಿವೆ. ಮಂತ್ರಜಪದೊಂದಿಗೆ ತರ್ಪಣ ಹಾಗೂ ಹೋಮಗಳ ವಿಧಿ, ಹೋಮದ್ರವ್ಯಗಳು, ಧ್ಯೇಯಮೂರ್ತಿಯ ಬಾಹುಸಂಖ್ಯಾ, ಆಯುಧಾದಿವಿವರ, ಧ್ಯಾನ-ವಿಶೇಷ, ಮಂತ್ರಗಳ ಫಲಶ್ರುತಿ, ಯಂತ್ರೋದ್ಧಾರಕ್ರಮ, ಗುರುಲಕ್ಷಣ, ಪ್ರಾಣಾಯಾಮಾದಿ ಯೋಗಾಂಗಗಳು, ಸುಷುಮ್ನಾದಿನಾಡೀವಿಚಾರ ಇದರಲ್ಲಿ ಬಂದಿವೆ.

ಹೀಗೆ ತಂತ್ರಸಾರಸಂಗ್ರಹವು ತಂತ್ರಶಾಸ್ತ್ರದ ಒಂದು ವಿಶ್ವಕೋಶವೇ ಆಗಿದೆ.

ಇದಕ್ಕೆ ಶ್ರೀವ್ಯಾಸತೀರ್ಥರು, ಶ್ರೀವಾದಿರಾಜರು, ಶ್ರೀವೇದವೇದ್ಯರು, ಛಲಾರಿ-ಶೇಷಾಚಾರ್ಯರು, ಶ್ರೀಶೇಷಚಂದ್ರಿಕಾಚಾರ್ಯರು ಮೊದಲಾದ ಅನೇಕ ಮಹನೀಯರು ಟೀಕೆಗಳನ್ನು ರಚಿಸಿರುವರು. ಇಂತಹ ಒಟ್ಟು ಟೀಕೆಗಳ ಸಂಖ್ಯೆ ೨೪ನ್ನು ಮೀರುತ್ತದೆ[೧].

---

೧. ಇವುಗಳ ಬಗ್ಗೆ ವಿವರಗಳನ್ನು ಶ್ರೀಮನ್ಮಾಧ್ವಸಿದ್ಧಾಂತ ಸಂವರ್ಧಕಸಭಾ ಉಡುಪಿಯಿಂದ ಪ್ರಕಾಶಿತವಾಗಿರುವ ಛಲಾರೀಯ ಟೀಕಾಸಮೇತ ತಂತ್ರಸಾರಸಂಗ್ರಹದ ನನ್ನ ಪೀಠಿಕೆಯಲ್ಲಿ ನೋಡಬಹುದು.

ಪ್ರಾಚೀನ ವೈದಿಕ ತಂತ್ರಶಾಸ್ತ್ರ ಗ್ರಂಥಗಳು ಅನೇಕವಿದ್ದರೂ ಅವುಗಳಲೆಲ್ಲ ಪ್ರಧಾನವಾದುದು ಮಹಾವಿಷ್ಣುಕೃತವಾದ ತಂತ್ರಸಾರ.[೧] ಅದನ್ನು ಮಹಾವಿಷ್ಣುವು ಚತುರ್ಮುಖಬ್ರಹ್ಮದೇವರಿಗೆ ಸೃಷ್ಟಿಯ ಪ್ರಾರಂಭದಲ್ಲಿಯೇ ಉಪದೇಶಿಸಿದನು. ಅದರ ಸಂಗ್ರಹರೂಪ ಕೃತಿಯೇ ಶ್ರೀಮದಾಚಾರ್ಯರ ಈ ತಂತ್ರಸಾರಸಂಗ್ರಹ.[೨] ವಿಷ್ಣುಕೃತವಾದ ಮೂಲ ತಂತ್ರಸಾರ ಇಂದು ಉಪಲಬ್ಧವಿಲ್ಲ.[೩] ಆದರೆ ಶ್ರೀಮದಾಚಾರ್ಯರ ಕಾಲದಲ್ಲಿ ಅದು ಉಪಲಬ್ಧವಿದ್ದಿತು ಎಂಬುದು ಶ್ರೀಮದಾಚಾರ್ಯರ ಭಾಗವತತಾತ್ಪರ್ಯನಿರ್ಣಯದಲ್ಲಿನ ಅದರ ಕೆಲವು ವಾಕ್ಯಗಳ ಉಲ್ಲೇಖಗಳಿಂದ ದೃಢಪಡುತ್ತದೆ.[೪]

ವೈಷ್ಣವಸಿದ್ಧಾಂತದ ತಂತ್ರಗ್ರಂಥಗಳಲ್ಲಿ ಶ್ರೀಮದಾಚಾರ್ಯರ ತಂತ್ರಸಾರಸಂಗ್ರಹ ಅಗ್ರಮಾನ್ಯ ಕೃತಿ. ನಾಲ್ಕು ಅಧ್ಯಾಯಗಳಲ್ಲಿ ಸುಮಾರು ನಾನೂರ ಇಪ್ಪತ್ತು ಶ್ಲೋಕಗಳಲ್ಲಿ ಅಷ್ಟಮಹಾಮಂತ್ರಗಳು, ಇತರ ವಿಷ್ಣುಮಂತ್ರಗಳು, ಅನೇಕ ವೈಷ್ಣವದೇವತಾಮಂತ್ರಗಳು, ದೇವಪೂಜಾಪದ್ಧತಿ, ತತ್ತ್ವನ್ಯಾಸಮಾತೃಕಾನ್ಯಾಸ, ಪೀಠಪೂಜೆ ಆವರಣಪೂಜೆಗಳು,

---

೧. ವಿಧಿಂ ವಿಧಾಯ ಸರ್ಗಾದೌ ತೇನ ಪೃಷ್ಟೋಽಬ್ಜಲೋಚನಃ।
ಪ್ರಾಹ ದೇವೋ ರಮೋತ್ಸಂಗವಿಲಸತ್ಪಾದಪಲ್ಲವಃ ॥ (ಅ. ೧, ಶ್ಲೋ. ೨)

೨. ನಿರ್ದೋಷಾಖಿಲಸಂಪೂರ್ಣಗುಣೇನ ಹರಿಣಾ ಸ್ವಯಮ್ ।
ಬ್ರಹ್ಮಣೇ ಕಥಿತಾತ್ ತಂತ್ರಸಾರಾದುದ್ಧೃತ್ಯ ಸಾದರಮ್ ॥
ಆನಂದತೀರ್ಥಮುನಿನಾ ಕೃತೋ ಗ್ರಂಥೋಽಯಮಂಜಸಾ ॥ (ಅ. ೪, ಶ್ಲೋ. ೧೬೨)

೩. ಶ್ರೀಮಧ್ವಾಚಾರ್ಯರು ಶ್ರೀರಂಗದಿಂದ ಕೇರಳಕ್ಕೆ ತೆರಳುತ್ತಿದ್ದಾಗ ಮಾರ್ಗಮಧ್ಯದಲ್ಲಿ ಮೂವತ್ತು ವಿಧ ವರಾಹಮಂತ್ರಗಳನ್ನು ಬಲ್ಲ ಯೋಗಿಯೊಬ್ಬ ಕಣ್ಣಿಗೆ ಬಿದ್ದನಂತೆ. ಅವರು ಅವನು ತಿಳಿದಿದ್ದ ಮಂತ್ರಗಳನ್ನಲ್ಲದೆ ಅದಕ್ಕಿಂತ ಹೆಚ್ಚಿನ ವರಾಹಮಂತ್ರಗಳನ್ನು ಹೇಳಿದಾಗ ಅವನಿಗಾದ ಅಚ್ಚರಿಗೆ ಮಿತಿಯಿರಲಿಲ್ಲ - ಎಂಬ ಪ್ರಸಂಗ ಸುಮಧ್ವವಿಜಯಭಾವಪ್ರಕಾಶಿಕೆ(೫/೪೮)ಯಲ್ಲಿ ನಿರೂಪಿತ-ವಾಗಿದೆ :

ತ್ರಿಂಶದ್ವಾರಾಹಮನುವಿತ್ ಕಶ್ಚಿದ್ಯೋಗ್ಯಾಸ ವಿಸ್ಮಿತಃ।
ಸೂಚಿತೇಷ್ವೇವ ಸರ್ವೇಷು ಮಧ್ವೇನಾಭ್ಯಧಿಕೇಷ್ವಪಿ ॥

- ಇದು ಆ ಕಾಲದಲ್ಲಿ ಪ್ರಬಲತಾಮಸತಂತ್ರಗಳ ಹಾವಳಿಯ ಮಧ್ಯದಲ್ಲೂ ಪರಿಶುದ್ಧವಾದ ತಂತ್ರಶಾಸ್ತ್ರದ ಎಳೆಯೊಂದು ಉಳಿದುಕೊಂಡಿದ್ದಕ್ಕೆ ಪುರಾವೆಯಾಗಿದೆ

೪. ವಿದ್ಯಾಃ ಕರ್ಮಾಣಿ ಚ ಸದಾ ಗುರೋಃ ಪ್ರಾಪ್ತಾ ಫಲಪ್ರದಾಃ।
ಅನ್ಯಥಾ ನೈವ ಫಲದಾಃ ಪ್ರಸನ್ನೋಕ್ತಾಃ ಫಲಪ್ರದಾಃ ॥

- ಇತಿ ತಂತ್ರಸಾರೇ (ಭಾಗವತತಾತ್ಪರ್ಯ ೬/೮/೩೭) ಮತ್ತು ೩/೧೦/೭, ೪/೭/೩೧, ೪/೭/೪೧, ೪/೭/೫೯, ೪/೧೯/೮, ೪/೨೧/೯, ೪/೨೧/೩೮, ೪/೨೨/೬೧, ೫/೮/೩೭, ೫/೧೮/೫, ೬/೪/೬೫, ೭/೧/೩೮, ೭/೧೦/೪೬.

೫. ಶ್ರೀಮದಾಚಾರ್ಯರು ತಮ್ಮ ಭಾಗವತತಾತ್ಪರ್ಯನಿರ್ಣಯದಲ್ಲಿ ಉದಾಹರಿಸಿರುವ ತಂತ್ರಮಾಲಾ, ತಂತ್ರನಿರ್ಣಯ, ತಂತ್ರನಿರುಕ್ತ ಮತ್ತು ತಂತ್ರಪ್ರಕಾಶಿಕಾ (ಮೊದಲಾದ) ಗ್ರಂಥಗಳು ಸಹ ಈ ತಂತ್ರಶಾಸ್ತ್ರಕ್ಕೆ ಸಂಬಂಧಿಸಿದ ಕೃತಿಗಳು ಎಂಬುದಾಗಿ ಅವುಗಳ ಹೆಸರಿನಿಂದ ಸೂಚಿತವಾಗುತ್ತದೆ.

ಕಲಶಪೂಜೆಯ ವಿಧಿ, ಹೋಮದ ವಿಧಿವಿಧಾನಗಳು, ವಿವಿಧಹೋಮದ್ರವ್ಯಗಳು, ಪ್ರತಿಮಾನಿರ್ಮಾಣ, ಪ್ರತಿಮಾಲಕ್ಷಣ, ದೇವಾಲಯನಿರ್ಮಾಣವಿಧಿ, ಶಿಲಾಪರೀಕ್ಷಾವಿಧಿ, ದೇವಪ್ರತಿಷ್ಠಾಪನಾವಿಧಿ, ಅಧಿವಾಸನವಿಧಿ, ಅಂಕುರಾರ್ಪಣವಿಧಿ, ಸಂಪ್ರೋಕ್ಷಣವಿಧಿ, ಜೀರ್ಣೋದ್ಧಾರವಿಧಿ, ವಾಸ್ತುಪೂಜಾಪದ್ಧತಿ, ಯಂತ್ರೋದ್ಧಾರಕ್ರಮ, ಆಸನಪ್ರಾಣಾಯಾಮಾದಿ ಯೋಗಾಂಗಗಳು, ಸುಷುಮ್ನಾದಿ ನಾಡಿಗಳ ವಿವರ ಮೊದಲಾದ ತಂತ್ರಶಾಸ್ತ್ರಕ್ಕೆ ಸಂಬಂಧಿಸಿದ ಸಕಲ ವಿಷಯಗಳ ಬಗ್ಗೆ ಸಮಗ್ರಮಾಹಿತಿಯನ್ನು ಅಧಿಕೃತವಾಗಿ ನೀಡುವ ಈ ಕೃತಿ ತಂತ್ರವಾಙ್ಮಯಪ್ರಪಂಚದಲ್ಲೆ ಅನುಪಮ. ತಂತ್ರಪ್ರಪಂಚದ ವಿಶ್ವರೂಪದರ್ಶನ ಮಾಡಿಸುವ ಅನ್ಯಾದೃಶ ಹಿರಿಮೆ ಇದರದು. ಶ್ರೀನಾರಾಯಣ ಪಂಡಿತಾಚಾರ್ಯರು ಯೋಗದೀಪಿಕೆಯಲ್ಲಿ ಹೇಳಿರುವಂತೆ ತಂತ್ರಸಾರಸಂಗ್ರಹದ ಅಧ್ಯಯನ ಅನುಷ್ಠಾನಗಳು ಯೋಗಸಿದ್ಧಿಗೆ ಖಚಿತವಾದ ಸಾಧನ.[೧]

ತಂತ್ರಶಾಸ್ತ್ರದ ಮಹತ್ತ್ವ

ತಂತ್ರಶಾಸ್ತ್ರವು ಮೂಲತಃ ಸಾಧನಮಾರ್ಗ.[೨] ತತ್ತ್ವಜ್ಞಾನವು ಚಿಂತನೆಯ ಮೇರುವಾದರೆ ತಂತ್ರಶಾಸ್ತ್ರ ಅದರ ಪ್ರಾಯೋಗಿಕ ಭಾಗ. ತತ್ತ್ವಜ್ಞಾನದ ಸಿದ್ಧಿಗಳನ್ನೆಲ್ಲ ಕರಗತ ಮಾಡಿಕೊಳ್ಳುವ ಕಲೆ ತಂತ್ರಶಾಸ್ತ್ರದ ತಿರುಳು. ಒಂದರ್ಥದಲ್ಲಿ ಇದು ವಿಜ್ಞಾನಕ್ಕೆ Technology ಇದ್ದಂತೆ; ಎಂದರೆ ತಂತ್ರಶಾಸ್ತ್ರವು Applied Philosophy ಆಗಿದೆ. ತಂತ್ರಸಾರವು ಬ್ರಹ್ಮಸೂತ್ರಗಳ ಸಾಧನಾಧ್ಯಾಯನಕ್ಕೆ ಒಂದು ರೀತಿಯಲ್ಲಿ ವಿವರಣೆಯೂ ಆಗಿದೆ.

ತಂತ್ರಶಾಸ್ತ್ರದ ಲಕ್ಷಣಗಳನ್ನು ಪ್ರಾಚೀನರು ಹೀಗೆ ವಿವರಿಸಿದ್ದಾರೆ.:

> ತನೋತಿ ವಿಪುಲಾನರ್ಥಾನ್ ತತ್ತ್ವಮಂತ್ರಸಮನ್ವಿತಾನ್ ।
> ತ್ರಾಣಂ ಚ ಕುರುತೇ ಯಸ್ಮಾತ್ ತಂತ್ರಮಿತ್ಯಭಿಧೀಯತೇ ॥
> ಸರ್ವೇಽರ್ಥಾ ಯೇನ ತನ್ಯಂತೇ ತ್ರಾಯಂತೇ ಚ ಭಯಾಜ್ಜನಾಃ ।
> ಇತಿ ತಂತ್ರಸ್ಯ ತಂತ್ರತ್ವಂ ತತ್ತ್ವಜ್ಞಾಃ ಪರಿಚಕ್ಷತೇ ॥ (ವಿಷ್ಣುಸಂಹಿತಾ ೨/೧೦)

ಸ್ವತಃ ಶ್ರೀಮದಾಚಾರ್ಯರು ತಂತ್ರ ಶಬ್ದದ ಅರ್ಥವನ್ನು ಹೀಗೆ ವಿವೇಚಿಸಿದ್ದಾರೆ :

---

೧. ಶನಕೈಃ ಶೃಣುಯಾತ್ ತಂತ್ರಸಾರಸಂಗ್ರಹಮಾದರಾತ್ ।
ಅನುತಿಷ್ಠೇಚ್ಚ ತತ್ಪ್ರೋಕ್ತಂ ಶಾಸ್ತ್ರಂ ವಿಜ್ಞಾನದೀಪನಮ್ ॥
ತತ್ಪ್ರೋದಿತಾನ್ ಜಪೇನ್ಮಂತ್ರಾನ್ ತದ್ದೇವಧ್ಯಾನಮಾಚರೇತ್ ।
ಮಂತ್ರಸಿದ್ಧಸ್ಯ ತಸ್ಯಾಶು ಪರಮಾತ್ಮಾ ಪ್ರಸೀದತಿ ।
ಈದೃಶೋ ಪುರುಷೋ ಯೋಗಮರ್ಹತ್ಯೇವ ವಿಶೇಷತಃ ।
ತತ್ತ್ವದೈವಾನನುಗ್ರಾಹ್ಯ ಸ ಸುಖೀ ಯೋಗಮಾಚರೇತ್ ॥- ಯೋಗದೀಪಿಕಾ (೧/೭೧-೭೩)

೨. ಅನ್ಯಾನ್ಯಶಾಸ್ತ್ರೇಷು ವಿನೋದಮಾತ್ರಂ ನ ತೇಷು ಕಿಂಚಿದ್ಭುವಿ ದೃಷ್ಟಮಸ್ತಿ ।
ಚಿಕಿತ್ಸಿತಜ್ಯೌತಿಷತಂತ್ರವಾದಾಃ ಪದೇ ಪದೇ ಪ್ರತ್ಯಯಮಾವಹಂತಿ ॥

ತನುತೇ ಯೇನ ಕಾರ್ಯಂ ತತ್ ತಂತ್ರಂ ಸಾಧನಮುಚ್ಯತೇ ।
ಕಾರಣಾನಾಂ ಸ್ವಶಕ್ತಿರ್ವಾ ಪ್ರಧಾನಂ ಸಾಧನಂ ಯತಃ ॥
- ಇತಿ ಬ್ರಹ್ಮತರ್ಕೇ (ಭಾಗವತತಾತ್ಪರ್ಯ ೩/೭/೩)
ತತಿಃ ಪ್ರಕಾಶೋ ವಿಸ್ತಾರಸ್ತಂತ್ರಂ ಚೇತ್ಯಭಿಧೀಯತೇ ॥
-ಇತಿ ತಂತ್ರಮಾಲಾಯಾಮ್ (ಭಾಗವತತಾತ್ಪರ್ಯ, ೩/೩೪/೫)

ಋಷಿಮುನಿಗಳ ಯೋಗಸಿದ್ಧಿಗಳೆಲ್ಲ ತಂತ್ರಶಾಸ್ತ್ರದ ಅನುಷ್ಠಾನದ ಫಲ, ತಂತ್ರಶಾಸ್ತ್ರವು ಮೂಲತಃ ತತ್ತ್ವಜ್ಞಾನವೇ ಆಗಿದೆ. ತತ್ತ್ವಜ್ಞಾನವನ್ನು ಸಾಧಿಸುವ ಬಗೆ, ಸಾಧಿಸಿದ ಅನಂತರ ಅದರ ಸಿದ್ಧಿಯನ್ನು ಪ್ರತ್ಯಕ್ಷವಾಗಿ ಕಂಡುಕೊಳ್ಳುವ ಬಗೆ ತಂತ್ರಶಾಸ್ತ್ರದ ಮುಖ್ಯ ಗುರಿ; ಎಂದರೆ ಸಾಧಕರಿಗೆ ಹೇಗೋ ಸಿದ್ಧಿಗಳಿಸಿದವರಿಗೂ ತಂತ್ರಶಾಸ್ತ್ರ ಅತ್ಯಗತ್ಯ. ಮಂತ್ರ, ಪೂಜೆ, ಹೋಮ, ಯಜ್ಞ, ಯಂತ್ರ, ವ್ರತ, ಉಪವಾಸ ಇವೆಲ್ಲಾ ತಂತ್ರಶಾಸ್ತ್ರದ ವ್ಯಾಪ್ತಿಯಲ್ಲೇ ಬರುತ್ತದೆ. ಮಂತ್ರಜಪಹೋಮಾದಿಗಳು ಸಾಧಕರಿಗೆ ತತ್ತ್ವಜ್ಞಾನಪ್ರಾಪ್ತಿಯ ಸಾಧನಗಳಾದರೆ, ಅಪರೋಕ್ಷಜ್ಞಾನಿಗಳಿಗೆ ಅದರ ಫಲವನ್ನು ಅಣಿಮಾದಿಗಳ ಸಿದ್ಧಿಗಳನ್ನು ಪಡೆಯುವ ಮೂಲಕ ಅನುಭವಿಸಲು ಹಾಗೂ ಜಿಜ್ಞಾಸುಗಳಿಗೆ ತತ್ತ್ವಜ್ಞಾನದ ಮಹತ್ತ್ವವನ್ನು ಅವರು ಬಯಸುವ ಫಲಗಳನ್ನು ಕರುಣಿಸುವ ಮೂಲಕ ಸಾಧಿಸಿತೋರಿಸಲು ನೆರವಾಗುತ್ತದೆ; ಎಂದರೆ ಸಾಧಕರಿಗೆ ಹೇಗೋ ಸಿದ್ಧರಿಗೂ ತಂತ್ರಶಾಸ್ತ್ರ ತುಂಬಾ ಉಪಕಾರಕವಾಗಿದೆ. ತಂತ್ರಶಾಸ್ತ್ರದಲ್ಲಿ ಒಲವು ಹೊಂದದ ಯಾವನೂ ನಿಜವಾದ ಅರ್ಥದಲ್ಲಿ ತತ್ತ್ವಜ್ಞಾನಿಯೆನ್ನಿಸಲಾರ; ಅಂತಹವರ ಜ್ಞಾನ ಪುಸ್ತಕಜ್ಞಾನವಾದೀತೇ ಹೊರತು ಮಸ್ತಕದಲ್ಲಿ ನೆಲೆಸುವ ಅನುಭವದ ಪರಿಪಾಕ ಎಂದೂ ಆಗಲಾರದು.

ಮೂಲತಃ ತಂತ್ರಶಾಸ್ತ್ರವು ವೇದದಲ್ಲೇ ಬಂದಿದೆ. ಅದರ ವಿವರಗಳು ಇತಿಹಾಸ ಪುರಾಣಗಳಲ್ಲಿ ದೊರೆಯುತ್ತದೆ. ಮಹಾಭಾರತ ಭಾಗವತಗಳಲ್ಲಿ ತಂತ್ರಶಾಸ್ತ್ರದ ಅನೇಕ ಮುಖ್ಯವಿವರಗಳ ಬಗ್ಗೆ ಮೂಲಭೂತವಿಚಾರಗಳು ಬಂದಿವೆ. ನಾರಾಯಣರೂಪದಿಂದ ಮಹಾವಿಷ್ಣುರಚಿಸಿದ ಶತಕೋಟಿಗ್ರಂಥಗಳ ಪಂಚರಾತ್ರ ತಂತ್ರಶಾಸ್ತ್ರದ ಪ್ರಧಾನ ಆಕರಗಳಲ್ಲೊಂದು. ಹಿಂದೆ ಹೇಳಿದಂತೆ ಮಹಾವಿಷ್ಣುಕೃತವಾದ ತಂತ್ರಸಾರವಂತೂ ತಂತ್ರಶಾಸ್ತ್ರದ ನಿರೂಪಣೆಗೆಂದೇ ಮೈತಳೆದ ಕೃತಿ. ಶ್ರೀಮದಾಚಾರ್ಯರ ತಂತ್ರಸಾರಸಂಗ್ರಹ ಅದರ ಸಾರಸರ್ವಸ್ವ. ಅದರೊಂದಿಗೆ ಅವರ ಸದಾಚಾರಸ್ಮೃತಿ, ಕೃಷ್ಣಾಮೃತಮಹಾರ್ಣವ, ಜಯಂತೀನಿರ್ಣಯ, ಯತಿಪ್ರಣವಕಲ್ಪ ಮತ್ತು ಸಂನ್ಯಾಸಪದ್ಧತಿ ಗ್ರಂಥಗಳು ಅವರ ತಂತ್ರಸಾರಸಂಗ್ರಹಕ್ಕೆ ಪೂರಕಕೃತಿಗಳೇ ಆಗಿವೆ. ಅವುಗಳ ವಿಚಾರಗಳು ಅನುಷ್ಠಾನಕ್ಕೆ ಇಳಿದಲ್ಲಿ ಸಾಧಕರು ಅದ್ಭುತಗಳನ್ನು ಸಾಧಿಸಲು ಸಾಧ್ಯ. ಶ್ರೀಮದಾಚಾರ್ಯರ ಅನುಜರಾದ ಶ್ರೀವಿಷ್ಣುತೀರ್ಥರ ಸಂನ್ಯಾಸಪದ್ಧತಿ (ವಿಷ್ಣುತೀರ್ಥೀಯ ಎಂದೇ ಪ್ರಸಿದ್ಧವಾಗಿರುವ ಈ ಕೃತಿಯಲ್ಲಿ ಒಟ್ಟು ನಾಲ್ಕು ಅಧ್ಯಾಯಗಳಿದ್ದು ಅದರಲ್ಲಿನ ಒಟ್ಟು ಶ್ಲೋಕಗಳ ಸಂಖ್ಯೆ ೬೯೮) ಮತ್ತು ನಾರಾಯಣಪಂಡಿತಾಚಾರ್ಯರ ಯೋಗದೀಪಿಕೆ (ಇದರಲ್ಲಿ ಹತ್ತು ಪಟಲಗಳು, ಒಟ್ಟು ೭೧೩ ಶ್ಲೋಕಗಳು ಉಂಟು), ಶ್ರೀಜಯತೀರ್ಥರ ಪದ್ಯಮಾಲಾ (ಜಯತೀರ್ಥೀಯ

- ಇದು ಸುಮಾರು ನೂರಮೂವತ್ತು ಶ್ಲೋಕಗಳಲ್ಲಿ ತಂತ್ರಸಾರೋಕ್ತ ದೇವಪೂಜಾಪದ್ಧತಿಯನ್ನು ನಿರೂಪಿಸುವ ಅಪೂರ್ವಕೃತಿ) ಇವು ಆಚಾರ್ಯರ ತಂತ್ರಸಾರಸಂಗ್ರಹದ ಕೆಲವು ವಿಚಾರಗಳಿಗೆ ಅಪೂರ್ವವಿವರಗಳನ್ನು ನೀಡುತ್ತವೆ. ಅನಂತರವೂ ಆ ಪರಂಪರೆಯಲ್ಲಿ ತಂತ್ರಸಾರಸಂಗ್ರಹಕ್ಕೆ ಟೀಕೆಗಳಲ್ಲದೆ ತಂತ್ರಸಾರಕ್ಕೆ ಸಂಬಂಧಿಸಿದ ಪೂಜೆ, ಹೋಮ, ಮಂತ್ರೋದ್ಧಾರ ಮೊದಲಾದವುಗಳ ಬಗ್ಗೆ ಕಾಲಕಾಲಕ್ಕೆ ಅನೇಕ ಗ್ರಂಥಗಳು ರಚಿತವಾಗಿವೆ ವಿಷ್ಣುಧರ್ಮೋತ್ತರಪುರಾಣವಂತೂ ತಂತ್ರಶಾಸ್ತ್ರಕ್ಕೆ ಸಂಬಂಧಿಸಿದ ಸಕಲ ವಿಷಯಗಳ ವಿಶ್ವಕೋಶವೇ ಆಗಿವೆ.

ಹೀಗೆ ಮೂಲತಃ ವೈದಿಕವೂ, ವೈಷ್ಣವವೂ, ಸಾತ್ವಿಕವೂ ಆಗಿದ್ದ ತಂತ್ರಶಾಸ್ತ್ರವು ಕಾಲಕ್ರಮದಲ್ಲಿ ಜ್ಞಾನಪ್ರಪಂಚದ ಇತರ ವಿಭಾಗಗಳಂತೆ ಮಲಿನವಾಗತೊಡಗಿತು. ಅದಕ್ಕೆಲ್ಲಾ ಸ್ವಾರ್ಥಸಾಧಕರಾದ ಜನಗಳ ಕೌಟಿಲ್ಯ ಮೂಲಕಾರಣವಾಯಿತು. ಜನಗಳಲ್ಲಿ ಸಾತ್ವಿಕರು ಮಾತ್ರವಲ್ಲದೆ ರಾಜಸ-ತಾಮಸರೂ ಇರುವಂತೆ ಅವರ ಅಭಿರುಚಿಗೆ ಅನುಗುಣವಾಗಿ ಇತರ ಜ್ಞಾನವಿಭಾಗಗಳಂತೆ ತಂತ್ರಶಾಸ್ತ್ರವೂ ವಿಕೃತಗೊಂಡಿತು. ಸಾತ್ವಿಕ, ರಾಜಸ, ತಾಮಸ ಎಂಬ ಪ್ರಭೇದ ಇಂತಹ ವಿಕೃತಿಯ ಮೊದಲ ಮಜಲು. ಮುಂದೆ ಶೈವ, ಶಾಕ್ತ ಮೊದಲಾಗಿ ಅನೇಕರೀತಿಯಲ್ಲಿ ವಿರೂಪಗೊಂಡಿತು. ಪಂಚರಾತ್ರದಲ್ಲಿ ಅನೇಕ ಸಂಹಿತೆಗಳಿದ್ದು ಅದು ಮೂಲತಃ ಪರಮಸಾತ್ವಿಕಕೃತಿ. ಅದರಲ್ಲೇ ರಾಜಸ,[೧] ತಾಮಸ ತಂತ್ರಗಳ ಬಗ್ಗೆ ಎಚ್ಚರಿಕೆಯೂ ಕೊಡಲ್ಪಟ್ಟಿದೆ.

ತತ್ವಜ್ಞಾನಪ್ರಪಂಚದಲ್ಲಿ ದುರ್ಮತಗಳು ಪ್ರವೇಶಿಸಿದಂತೆ ತಂತ್ರಪ್ರಪಂಚದಲ್ಲಿ ವಾಮಾಚಾರವು ತಲೆ ಎತ್ತಿತ್ತೊಡಗಿತು. ತತ್ತ್ವಜ್ಞಾನಪ್ರಪಂಚದಲ್ಲಿನ ಮಲಿನತೆಗಿಂತ ಒಂದು ತೂಕ ಹೆಚ್ಚಿನ ಪ್ರಮಾಣದಲ್ಲಿಯೇ ತಂತ್ರಪ್ರಪಂಚ ಮಲಿನಗೊಂಡಿತು. ತತ್ತ್ವಜ್ಞಾನದಲ್ಲಿ ಒಂದು ಹಂತದಲ್ಲಾದರೂ ಬೌದ್ಧಿಕತೆಗೆ ವೈಚಾರಿಕತೆಗೆ ಸ್ಥಾನ ದೊರಕಿದರೆ, ತಂತ್ರಶಾಸ್ತ್ರದಲ್ಲಿ ಮೂಢನಂಬಿಕೆ ವಿಕೃತ ಆಚಾರಗಳೇ ವಿಜೃಂಭಿಸತೊಡಗಿದವು. ಅದೇಕೆ, ಕೊನೆಗೆ ತಂತ್ರವೆಂದರೆ ವಾಮಾಚಾರ ಎಂಬ ಮಟ್ಟಕ್ಕೆ ಅದು ತಲುಪಿತು. ಶೈವತಂತ್ರ, ಶಾಕ್ತತಂತ್ರಗಳು ಹುಟ್ಟಿಕೊಂಡದ್ದು ಇದರ ಅವನತಿಯ ಅನಂತರದ ಮಜಲು. ಮುಂದೆ ಕಾಲ ಕಳೆದಂತೆ ದೇವತೆಗಳ ಬದಲು ಅವರ ಹೆಸರುಗಳು ಮಾತ್ರ ಉಳಿದುಕೊಂಡು ಕ್ಷುದ್ರದೇವತೆಗಳ ಆರಾಧನೆಗೆ ಮೊದಲಾಯಿತು. ಮುಂದೆ ಒಂದು ಕಾಲದಲ್ಲಂತೂ ಕೇವಲ ಆಸುರೀಶಕ್ತಿಗಳೇ ಪೂಜೆಗೊಳ್ಳತೊಡಗಿದವು. ಭೂತದಯೆ ಲೋಕೋಪಕಾರಗಳ ಬದಲು ಪ್ರಾಣಿಹಿಂಸೆ, ನರಬಲಿಗಳು ತುಂಬಿಕೊಂಡವು.[೨] ಅವೈದಿಕ ಆಚಾರವಿಚಾರಗಳ ಕಾಪಾಲಿಕರೇ

---

೧. ತಂತ್ರಶಾಸ್ತ್ರವು ಆಗಮಗಳು, ಯಾಮಲಗಳು ಮತ್ತು ಡಾಮರಗಳು ಎಂಬುದಾಗಿ ಅನೇಕ ತೆರನಾಯಿತು. ಉಪಸ್ಮೃತಿ, ಉಪಪುರಾಣಗಳಂತೆ ಉಪತಂತ್ರಗಳೂ ರಚಿತವಾದವು.

೨. ಭಾಗವತಪುರಾಣದ ಪಂಚಮಸ್ಕಂಧದಲ್ಲಿ ಬರುವ (ಜಡ)ಭರತನನ್ನು ಭದ್ರಕಾಳಿಗೆ ಬಲಿಕೊಡಬಯಸಿದ ಒಬ್ಬ ವೃಷಲರಾಜನ ಪ್ರಸಂಗ ಇದಕ್ಕೆ ಉತ್ತಮ ನಿದರ್ಶನ.

ತಾಂತ್ರಿಕರೆನಿಸಿಕೊಳ್ಳತೊಡಗಿದರು. ದುರ್ಗೆ, ಚಾಮುಂಡಿ, ಮೊದಲಾದ ಸಾತ್ವಿಕ ದೇವತೆಗಳೆಲ್ಲ ಇಂಥ ತಾಮಸ ತಂತ್ರಗಳಲ್ಲಿ ವಿಕೃತ ರೀತಿಯಲ್ಲಿ ಪೂಜೆಗೊಳ್ಳತೊಡಗಿದರು. ಸದಾಚಾರದ ಸ್ಥಾನವನ್ನು ವಾಮಾಚಾರ ಪೂರ್ಣವಾಗಿ ಆಕ್ರಮಿಸಿಕೊಂಡಿತು. ಉಷಃಕಾಲದ ಬದಲು ಮಧ್ಯರಾತ್ರಿ ಪೂಜಾಕಾಲವಾದರೆ, ದೇವಸ್ಥಾನದ ಬದಲು ಶ್ಮಶಾನ ಪೂಜಾಕ್ಷೇತ್ರವಾಯಿತು. ಹಾಲು ತುಪ್ಪಗಳ ಸ್ಥಳದಲ್ಲಿ ರಕ್ತಮಾಂಸಗಳು, ಸೋಮಪಾನದ ಸ್ಥಳದಲ್ಲಿ ಮದ್ಯಪಾನವು ಕಾಣಿಸಿಕೊಂಡಿತು. (ಕ್ಷುದ್ರ) ಹೆಣ್ಣುದೇವತೆಗಳೆಲ್ಲ ನಗ್ನರಾಗಿಯೂ, ವಿಧವೆಯರಾಗಿಯೂ, ಅಶ್ಲೀಲಭಂಗಿಗಳಲ್ಲಿ ಪೂಜೆಗೊಳ್ಳತೊಡಗಿದರು. ಅಂತೂ ವಾಮಾಚಾರ ನೂರಕ್ಕೆ ನೂರರಷ್ಟು ತಂತ್ರಶಾಸ್ತ್ರವನ್ನು ಆಕ್ರಮಿಸಿ ನಿಜವಾದ ತಂತ್ರಶಾಸ್ತ್ರವು ಸಾತ್ವಿಕರ ಪಾಲಿಗೆ ಸಂಪೂರ್ಣ ದೂರಾಯಿತು. ತಂತ್ರಶಾಸ್ತ್ರವೆಂದರೆ ವಾಮಾಚಾರ, ಅಭಿಚಾರ ವಶೀಕರಣಗಳು ಎಂಬ ಮಟ್ಟ ತಲುಪಿ ಮದ್ಯ ಮೈಥುನಗಳು ಅದರ ಅವಿಭಾಜ್ಯ ಅಂಗಗಳಾಗಿಬಿಟ್ಟವು.

ತತ್ತ್ವಜ್ಞಾನ ಮಲಿನವಾಗಲು ದುರ್ಮತಗಳು ಕಾರಣವಾದರೆ, ತಂತ್ರಶಾಸ್ತ್ರವು ಮಲಿನವಾಗಲು ತಾಮಸ ತಂತ್ರಗಳು ಕಾರಣವಾದವು. ಭಗವಂತನನ್ನು ಮರೆತ ಅಹಂ ಪ್ರಜ್ಞೆ ದುರ್ಮತಗಳ ದುರಂತವಾದರೆ, ಪ್ರತಿಫಲಕ್ಕೆ ಹಲುಬುವ ಸ್ವಾರ್ಥಸಾಧಕ ಪ್ರವೃತ್ತಿ ತಾಮಸ ತಂತ್ರಗಳ ದುರಂತವಾಯಿತು. ಭಗವಂತನನ್ನು ಮರೆತಾಗ ತತ್ತ್ವಜ್ಞಾನವೆಲ್ಲಿ ? ಫಲಕಾಮನೆಯು ಆವರಿಸಿದಾಗ ತಂತ್ರಶಾಸ್ತ್ರವೆಲ್ಲಿ?

ಸಾತ್ವಿಕತಂತ್ರಗಳಿಗೆ ತತ್ತ್ವಜ್ಞಾನ ಜೀವಾಳವಾಗಿದ್ದರೆ ತಾಮಸತಂತ್ರಗಳಿಗೆ ಅಜ್ಞಾನಮಿಥ್ಯಾಜ್ಞಾನಗಳೇ ಜೀವಾಳವಾದವು. ತತ್ತ್ವವನ್ನು ಅರಿಯದ ಹಾಗೂ ತಪ್ಪಾಗಿ ಅರಿತ ಜನ ಸ್ವಾರ್ಥಸಾಧನೆಗಾಗಿ ವಿಕೃತತಂತ್ರಕ್ಕೆ ಮೊರೆಹೊಕ್ಕರು. ಅರಿಯದ ಜನಗಳ ಅಜ್ಞಾನದ ದುರ್ಲಾಭವನ್ನು ಪಡೆದು ಪಶುಹತ್ಯೆ. ನರಹತ್ಯೆಗಳಂತಹ ಹೇಯಕೃತ್ಯಗಳನ್ನು ಮಾಡುತ್ತಾ ಅವರ ಕೋರಿಕೆಯನ್ನು ಈಡೇರಿಸುವ ಭ್ರಮೆ ಹುಟ್ಟಿಸಿದರು. ಅಂತಹವರ ಬಳಿಗೆ ಬಂದ ಜನರಾದರೂ ಎಂತಹವರು! ಅಲ್ಪಶ್ರಮದಲ್ಲೆ ಅಥವಾ ಅನ್ಯರ ಶ್ರಮದಲ್ಲಿ ಕೆಲವೊಮ್ಮೆ ಸ್ವಲ್ಪವೂ ಶ್ರಮಪಡದೆ ತಮ್ಮ ಕ್ಷುದ್ರಕಾಮನೆಗಳನ್ನು ಹೇಗಾದರೂ ಈಡೇರಿಸಿಕೊಳ್ಳುವ ಪರಮಸ್ವಾರ್ಥಿಗಳು. ತಮ್ಮ ಸ್ವಹಿತಾಸಕ್ತಿಯಿಂದಾಗಿ ಸಾತ್ವಿಕಜನಗಳನ್ನು ಬಲಿಕೊಡಲು ಸಿದ್ಧರಾಗಿದ್ದವರು. ಅಧಿಕಾರಲಾಲಸೆ, ದ್ರವ್ಯಲಾಲಸೆ, ಭೋಗಲಾಲಸೆಗಳ ವಿಕೃತಚಿಂತನೆಯ ಅಂತಹ ಜನರಿಗೆ ತಾಮಸತಂತ್ರಗಳು ಬಹುಪ್ರಿಯವಾದವು. ಅನೇಕ ರಾಜಮಹಾರಾಜರುಗಳೂ ಇಂಥ ಆಮಿಷಕ್ಕೆ ಬಲಿಯಾದರು.

ಈ ಸ್ಥಿತಿಯಲ್ಲಿ ಅದರ ಪುನರುತ್ಥಾನಕ್ಕೆ ಕೆಲವರಿಂದ ಪ್ರಯತ್ನ ನಡೆಯಿತಾದರೂ ಅದು ತೃಪ್ತಿಕರವಾದ ಮಟ್ಟವನ್ನು ತಲುಪಲಿಲ್ಲ. ಶಾರದಾತಿಲಕ, ತಂತ್ರತಿಲಕ, ಪ್ರಾಯಃ ಅದಕ್ಕೆ ಸ್ವಲ್ಪಮುಂಚೆ ಶಂಕರಾಚಾರ್ಯರಿಂದ ರಚಿತವೆನ್ನಲಾದ ಪ್ರಪಂಚಸಾರ ಮೊದಲಾದ ಗ್ರಂಥಗಳು ಕಾಣಿಸಿಕೊಂಡರೂ ಶುದ್ಧ ವೈದಿಕತಂತ್ರವನ್ನು ಕೊಡುವಲ್ಲಿ ಅವುಗಳು ಪೂರ್ಣ

ಸಫಲವಾಗಲಿಲ್ಲ. ಶಂಕರಾಚಾರ್ಯರ ಪ್ರಪಂಚಸಾರವು ಇತರ ಕೆಲವು ತಂತ್ರಗ್ರಂಥಗಳಿಗಿಂತ ಪರಿಷ್ಕೃತರೀತಿಯ ಕೃತಿಯಾದರೂ ಪೂರ್ಣವೈದಿಕವಾಗದೆ ವೈಷ್ಣವವೂ ಆಗದೆ ಇನ್ನೂ ಶಾಕ್ತತಂತ್ರಗಳ ಪ್ರಭಾವದಿಂದ ಮುಕ್ತವಾಗದೆ ಹಾಗೆಯೇ ಉಳಿದುಕೊಂಡಿತು. ಅಲ್ಲದೆ ಅದರಲ್ಲಿ ಅಭಿಚಾರ-ವಶೀಕರಣಗಳಂಥಹ ಕಾಪಾಲಿಕಾಚಾರಗಳ ನಿರೂಪಣೆಯೊಂದಿಗೆ, ನಗ್ನ ಹಾಗೂ ರಜಸ್ವಲಾದೇವತೆಗಳ ಸ್ತೋತ್ರಗಳಿಗೆ ಅವಕಾಶ ಉಳಿದುಕೊಂಡದ್ದು ಇದನ್ನು ಪುಷ್ಟೀಕರಿಸುತ್ತದೆ. ಪಾರಮಾರ್ಥಿಕಸತ್ಯಬ್ರಹ್ಮವೊಂದೇ, ಬ್ರಹ್ಮಜ್ಞಾನಸಂಪಾದನೆಯಲ್ಲಿ ಕರ್ಮ ತೊರೆಯುವುದೇ ಮುಖ್ಯಸಾಧನ (ಮುಮುಕ್ಷೋಃ ಕರ್ಮಸನ್ಯಾಸವಿಧಾನಾತ್ - ಶಂಕರಾಚಾರ್ಯರ ಗೀತಾಭಾಷ್ಯ), ಬ್ರಹ್ಮ ನಿರ್ಗುಣ ನಿರಾಕಾರ, ಜಗತ್ತು ಮಿಥ್ಯೆ ಮೊದಲಾದ ಅವರು ಪ್ರವರ್ತಿಸಿದ ಅದ್ವೈತಸಿದ್ಧಾಂತದ ಮೂಲಪ್ರಕ್ರಿಯೆಗಳಲ್ಲಿ ತಂತ್ರಶಾಸ್ತ್ರದ ಹೃದಯವಾದ ಧ್ಯಾನ, ಜಪ, ಮೊದಲಾದವುಗಳಿಗೆ ವಿಶೇಷಸ್ಥಾನ ಎಂದಿಗೂ ಸಿಕ್ಕುವಂತಿರಲಿಲ್ಲ ಎಂಬುದೂ ಗಮನಾರ್ಹ. ಅನಂತರದ ರಾಮಾನುಜಾಚಾರ್ಯರು ಭಗವತ್ಪೂಜಾದಿಗಳಿಗೆ ವಿಶೇಷಮಹತ್ವಕೊಟ್ಟರೂ, ತಂತ್ರಶಾಸ್ತ್ರದ ಬಗ್ಗೆ ವಿಶೇಷವಾಗಿ ಯಾವ ಕೃತಿಯನ್ನೂ ರಚಿಸಲಿಲ್ಲ. ಅವರ ನಿತ್ಯಗ್ರಂಥ ಮೂಲತಃ ಪೂಜಾವಿಧಾನಕ್ಕೆ ಸಂಬಂಧಿಸಿದ ಕೃತಿಯಾಗಿದ್ದು ಅದು ತಂತ್ರಶಾಸ್ತ್ರದ ಸಮಗ್ರತೆಯನ್ನು ನಿರೂಪಿಸುವಲ್ಲಿ ಸಫಲವಾಗಲಿಲ್ಲ. ಇವೆಲ್ಲವುಗಳಲ್ಲಿ ಶಾರದಾತಿಲಕದ ಸಾಧನೆಯೇ ಹೆಚ್ಚು ಗಮನಾರ್ಹ. ಆದರೆ ಜಿಜ್ಞಾಸುಗಳು ಬಯಸಿದ್ದ ಪರಿಶುದ್ಧ ತಂತ್ರಶಾಸ್ತ್ರದ ಪುನರುತ್ಥಾನದ ಕಾರ್ಯವು ಮಾತ್ರ ಇನ್ನೂ ಸಹ ನೆರವೇರದೆ ಹಾಗೆಯೇ ಉಳಿದುಕೊಂಡಿತ್ತು.

ಈ ವೇಳೆಗೆ ಕೊನೆಯದಾಗಿ ಕಾಣಿಸಿಕೊಂಡ ಕೃತಿ ಮಧ್ವಾಚಾರ್ಯರ ತಂತ್ರಸಾರಸಂಗ್ರಹ. ಹಿಂದೆ ಹೇಳಿದಂತೆ ತಂತ್ರಶಾಸ್ತ್ರದ ಮಂತ್ರಜಪದಿಂದ ಪ್ರಾರಂಭಿಸಿ ಧ್ಯಾನದ ವರೆಗಿನ ಎಲ್ಲಾ ಪ್ರಾಕಾರಗಳಿಗೂ ಪೂರ್ಣನ್ಯಾಯವನ್ನು ಸಲ್ಲಿಸಿ ಮೂಲ ತಂತ್ರಶಾಸ್ತ್ರವು ಮತ್ತೊಮ್ಮೆ ಪೂರ್ಣ ಪ್ರಮಾಣದಲ್ಲಿ ವಿಜೃಂಭಿಸಲು ಈ ಕೃತಿಯ ಪಾತ್ರ ತುಂಬ ಗಮನಾರ್ಹವಾಯಿತು. ಕೇವಲ ನಾನ್ನೂರ ಇಪ್ಪತ್ತು ಶ್ಲೋಕಗಳ ವ್ಯಾಪ್ತಿಯಲ್ಲಿ ಸೂತ್ರಪ್ರಾಯವಾಗಿ ಪ್ರತಿಮಾನಿರ್ಮಾಣ, ಶಿಲಾಪರೀಕ್ಷೆ, ವಾಸ್ತುಶಾಸ್ತ್ರ, ಪ್ರತಿಷ್ಠಾವಿಧಿ, ಮಂತ್ರಜಪ, ಧ್ಯಾನಪ್ರಕ್ರಿಯೆ, ತತ್ತ್ವನ್ಯಾಸ, ಮಾತೃಕಾನ್ಯಾಸ, ವೈಷ್ಣವದೀಕ್ಷಾವಿಧಿ, ನಾಡೀವಿವರ, ಆಸನ ಪ್ರಾಣಾಯಾಮಾದಿಯೋಗಾಂಗಗಳ ವಿವರ, ಹರಿಗುರುಭಕ್ತಿ ಮೊದಲಾದ ಸಕಲ ಮುಖ್ಯವಿಷಯಗಳನ್ನು ನಿರೂಪಿಸಿದ್ದು ಇದರ ಸಾಧನೆ. ಧ್ಯಾನಶ್ಲೋಕಗಳಲ್ಲಿ ಕೊಡುವ ಆಯಾ ಧ್ಯೇಯ ಮೂರ್ತಿಗಳ ಚಿತ್ರವಂತೂ ಉಪಾಸಕನಿಗೆ ಜಪದಲ್ಲಿ ಪೂರ್ಣವಾಗಿ ತಲ್ಲೀನನಾಗುವ ಎಲ್ಲ ಸಾಧ್ಯತೆಗಳನ್ನೂ ಒದಗಿಸುತ್ತದೆ. ಪ್ರತಿಮಾಲಕ್ಷಣಗಳಿಗೆ ಸಂಬಂಧಿಸಿದಂತೆ ಬೆರಳುಗಳು, ಉಗುರುಗಳು, ಎರಡು ಬೆರಳುಗಳ ಮಧ್ಯೆ ಇರಬೇಕಾದ ಅಂತರ, ತುಟಿಗಳ ಮಧ್ಯದ ಅಂತರ, ಮೊದಲಾದ ಅತಿಸೂಕ್ಷ್ಮವಿಚಾರಗಳ ಬಗ್ಗೆಯೂ ಅವರು ಕೊಡುವ ನಿಖರಮಾಹಿತಿ ಎಂತಹ ಶಿಲ್ಪಶಾಸ್ತ್ರಜ್ಞರನ್ನೂ ಬೆರಗುಗೊಳಿಸುತ್ತವೆ. ಇದು ನಿಜವಾದ ಅರ್ಥದಲ್ಲಿ ತಂತ್ರಶಾಸ್ತ್ರದ ವಿಶ್ವಕೋಶವಾಗಿ ಪರಿಪೂರ್ಣವಾಗಿದ್ದ ವೈದಿಕತಂತ್ರಶಾಸ್ತ್ರ ಮತ್ತೊಮ್ಮೆ ಆಸ್ತಿಕಜನತೆಗೆ ದೊರೆಯುವಂತಾಯಿತು.

ಶ್ರೀಮದಾಚಾರ್ಯರು ತಂತ್ರಸಾರಸಂಗ್ರಹವನ್ನು ಶುದ್ಧರೂಪದಲ್ಲಿ ಸಮಗ್ರವಾಗಿ ನಿರೂಪಿಸಿದ್ದು ಮಾತ್ರವಲ್ಲದೆ ಉಡುಪಿ ಮೊದಲಾದ ಸ್ಥಳಗಳಲ್ಲಿ ಅದನ್ನು ಪ್ರಾಯೋಗಿಕವಾಗಿ ಸಾಧಿಸಿಯೂ ತೋರಿಸಿದರು. ಇಂದಿಗೂ ವಿಶೇಷವಾಗಿ ದಕ್ಷಿಣ ಕನ್ನಡದಲ್ಲಿ ಅನೇಕ ಸ್ಥಳಗಳಲ್ಲಿ ಕಾಣುವ ವೈಷ್ಣವದೇವಾಲಯಗಳ ಮತ್ತು ಮಠಗಳ ವಾಸ್ತುಶಿಲ್ಪ ಅವರ ತಂತ್ರಸಾರಕ್ಕೆ ಅನುಗುಣವಾಗಿಯೇ ಉಂಟು. ಇದನ್ನು ಆಧರಿಸಿಯೇ ಅವರ ಸಾಕ್ಷಾಚ್ಛಿಷ್ಯರಾದ ಶ್ರೀನರಹರಿತೀರ್ಥರು ಅವರ ಗ್ರಂಥಗಳ ಟೀಕಾಕಾರರಾದ ಶ್ರೀಜಯ-ತೀರ್ಥರು, ಕೃಷ್ಣದೇವರಾಯನಂತಹ ಚಕ್ರವರ್ತಿಗೆ ಮಾರ್ಗದರ್ಶಕರಾದ ಶ್ರೀವ್ಯಾಸತೀರ್ಥರು, ತಪೋನಿಧಿಗಳೆನ್ನಿಸಿದ ಶ್ರೀವಾದಿರಾಜತೀರ್ಥರು, ಪವಾಡಪುರುಷ-ರೆನಿಸಿದ ಶ್ರೀರಾಘವೇಂದ್ರತೀರ್ಥರು ಅನೇಕ ಸ್ಥಳಗಳಲ್ಲಿ ದೇವಾಲಯಗಳನ್ನು, ಮೂರ್ತಿ-ಗಳನ್ನು ಸ್ಥಾಪಿಸಿದರು; ಕೃತಿಗಳನ್ನು ರಚಿಸಿದರು. ಹೀಗೆ ತಂತ್ರಸಾರ ಪ್ರಯೋಗದಲ್ಲಿಯೂ ಸಹ ವ್ಯಾಪಕವಾಗಿ ಬಳಕೆಯಲ್ಲಿ ಬಂದಿತು. ನಮ್ಮ ದೇಶದ ಅತ್ಯಂತ ಪ್ರಮುಖವಾದ ಪ್ರಾಚೀನ ತೀರ್ಥಕ್ಷೇತ್ರಗಳಲ್ಲಿ ಕಂಡು ಬರುವ ಪ್ರಧಾನದೇವಸ್ಥಾನಗಳಲ್ಲಿನ ವಾಸ್ತುಶಿಲ್ಪವು ಮಧ್ವಾಚಾರ್ಯರ ತಂತ್ರಸಾರಸಂಗ್ರಹದ ಅನುಗುಣವಾಗಿಯೇ ಕಂಡುಬರುವುದು ಅದರಲ್ಲಿನ ವಿವರಗಳ ಪರಿಪೂರ್ಣತೆ ಮತ್ತು ಪ್ರಾಚೀನತೆಗೆ ಸ್ಪಷ್ಟ ಪುರಾವೆಯಾಗಿದೆ.

ಅವರ ಪರಂಪರೆಯ ಶ್ರೀವಾದಿರಾಜತೀರ್ಥರು ಮತ್ತು ಶ್ರೀರಾಘವೇಂದ್ರ-ತೀರ್ಥರಂತೂ ತಂತ್ರಶಾಸ್ತ್ರದ ಸಿದ್ಧಿಯನ್ನು ಇಡೀ ಜಗತ್ತಿಗೇ ಅನೇಕ ತೆರನಾಗಿ ನಿರೂಪಿಸಿದ ಮಹಾಮಹಿಮರು. ಅವರು ಬೃಂದಾವನಪ್ರವೇಶಮಾಡಿ ಶತಕಗಳೇ ಉರುಳಿದ್ದರೂ ಅವರನ್ನು ಆರಾಧಿಸಿ ಅನುಗ್ರಹೀತರಾಗಿ ತಮ್ಮ ವಿಭಿನ್ನ ಸಮಸ್ಯೆಗಳಿಗೆಲ್ಲಾ ಸಮರ್ಪಕಪರಿಹಾರವನ್ನು ಕಂಡಿರುವ ಜನಗಳು ಸಾವಿರ ಸಾವಿರ ಸಂಖ್ಯೆಯಲ್ಲಿ ಎಲ್ಲ ವರ್ಗದಲ್ಲೂ ಇಂದೂ ಕಾಣುತ್ತಿರುವರು. ಅಂತೂ ತತ್ತ್ವಜ್ಞಾನ ಕೇವಲ ವಿದ್ವಾಂಸರ ವಾಕ್ಯಾರ್ಥಗೋಷ್ಠಿಯಲ್ಲಿ ಮಾತ್ರ ಉಳಿಯದೆ ಜನಸಾಮಾನ್ಯರ ದೈನಂದಿನ ಜೀವನದ ನೆಮ್ಮದಿಗೂ ವಿದ್ವಾಂಸರ ಅಸಂಪ್ರಜ್ಞಾತ ಸಮಾಧಿಸ್ಥಿತಿಯ ಸಂಪ್ರಾಪ್ತಿಗೂ ಸಾಧನವಾಗುವ ಸಾರ್ವಭೌಮ ವಿದ್ಯೆ ಎಂಬುದು ತಂತ್ರಸಾರದ ನಿಜವಾದ ಫಲಶ್ರುತಿ.

ಅಂದು ವಾಮಾಚಾರದಿಂದಾಗಿ ನಿಜವಾದ ತಂತ್ರಶಾಸ್ತ್ರ ಜನತೆಗೆ ದೂರವಾಗಿದ್ದರೆ ಇಂದು ವಿಜ್ಞಾನದ ಬಗೆಗಿನ ಮೋಹದಿಂದಾಗಿ ಪುನಃ ಜನತೆಗೆ ದೂರವಾಗಿದೆ. ತಾಮಸ ತಂತ್ರದಲ್ಲಿ ವಾಮಾಚಾರ ತುಂಬಿದ್ದರೆ ಭೌತಿಕಶಕ್ತಿಯಲ್ಲೇ ಪಾರಮ್ಯ ಕಾಣುವ ವಿಜ್ಞಾನದಲ್ಲಿ ಯಂತ್ರಜ್ಞಾನ ತಲೆ ಎತ್ತಿ ನಿಂತಿದೆ. ಯಂತ್ರದ ಸಾಧನೆ ಮಂತ್ರಕ್ಕಿಲ್ಲ ಎಂಬ ಭ್ರಮೆ ಜನರನ್ನು ತಂತ್ರಶಾಸ್ತ್ರದಿಂದ ವಿಮುಖರನ್ನಾಗಿಸಿದೆ. ವಿಜ್ಞಾನದ ಹಿರಿಮೆ ತಂತ್ರಜ್ಞಾನದ ಮೂಲಕ ಜನತೆಗೆ ತಲುಪಿ ನಿತ್ಯಜೀವನದಲ್ಲಿ ಕ್ರಾಂತಿಮಾಡಿತು. ಅಂತಹುದೇ ಕ್ರಾಂತಿಯನ್ನು ತತ್ತ್ವಜ್ಞಾನದ ಹಿರಿಮೆ ತಂತ್ರಶಾಸ್ತ್ರದ ಮೂಲಕ ಇನ್ನೂ ಮಿಗಿಲಾಗಿ ಮಾಡುವುದು ಎಂಬ ತಥ್ಯದ ಬಗ್ಗೆ ಜನ ಚಿಂತಿಸಬೇಕಿದೆ.

ವಿದ್ಯುಚ್ಛಕ್ತಿಯು ಬೆಳಕು, ಶಾಖ, ಗಾಳಿ, ಹವಾನಿಯಂತ್ರಣ, ವೈದ್ಯಕೀಯ ಉಪಕರಣಗಳ ತಯಾರಿಕೆ, ಯಂತ್ರಗಳ ತಯಾರಿಕೆ, ದೂರದರ್ಶನ, ಮೊದಲಾದವುಗಳಿಗೆ ಉಪಯೋಗವಾದಾಗ, ಎಲ್ಲಾ ರೀತಿಯಲ್ಲು ಜನ ಆದರಿಂದ ಪ್ರಭಾವಿತರಾಗಿ ಆಕರ್ಷಿತರಾದರು. ಆದರೆ ತತ್ತ್ವಜ್ಞಾನವು ವಿಜ್ಞಾನಕ್ಕಿಂತ ಮಿಗಿಲಾಗಿ ದೈನಂದಿನ ಜೀವನದಲ್ಲಿ ವ್ಯಷ್ಟಿ ಹಾಗೂ ಸಮಷ್ಟಿರೂಪದಲ್ಲಿ ಸಮಸ್ತಸಮಸ್ಯೆಗಳಿಗೆ ಸಮಗ್ರ ಪರಿಹಾರವನ್ನು ಒದಗಿಸಬಲ್ಲದು ಎಂಬ ಅಂಶ 'ಜನತೆಗೆ ಗೋಚರಿಸಬೇಕಿದೆ. ಆದರೆ ವಿಜ್ಞಾನದ ಸಾಧನೆಗಳ ಪ್ರಯೋಜನ ಪಡೆಯಲು ಧನಬಲ ಬೇಕಿದ್ದರೆ, ಅಧ್ಯಾತ್ಮದ ಪ್ರಯೋಜನ ಪಡೆಯಲು ತಪೋಬಲ ಬೇಕು ಎಂಬ ಅಂಶವನ್ನು ಮರೆಯಕೂಡದು.

ವಿಜ್ಞಾನ ನೀಡುವ ಯಂತ್ರಗಳ ಸಿದ್ಧಿ ಸೀಮಿತ, ತಾತ್ಕಾಲಿಕ, ಅಪರಿಪೂರ್ಣ ಮತ್ತು ಎಷ್ಟೋ ಸಲ ಮಾರಕವೂ ಕೂಡ. ಅಣ್ವಸ್ತ್ರದಿಂದ ಹಿಡಿದು ದಿನನಿತ್ಯದ ಸಾಮಾನ್ಯ ಬಳಕೆಯ ಯಂತ್ರೋಪಕರಣಗಳಿಂದಲೂ ಅಪಾಯದ ಭಯ ಇದ್ದೇ ಇದೆ. ಆದರೆ ತತ್ತ್ವಜ್ಞಾನವು ನೀಡುವ ಮಂತ್ರಸಿದ್ಧಿ ಹಾಗಲ್ಲ. ಅದು ಅಪರಿಮಿತ, ಪರಿಪೂರ್ಣ, ಶಾಶ್ವತ ಮತ್ತು ಎಲ್ಲಕ್ಕಿಂತ ಮಿಗಿಲಾಗಿ ತಾರಕ. ಆಧುನಿಕ ತಂತ್ರಜ್ಞಾನಕ್ಕೆ ವಿಜ್ಞಾನವು ಬೆನ್ನೆಲುಬಾಗಿರುವಂತೆ ತಂತ್ರಶಾಸ್ತ್ರಕ್ಕೆ ತತ್ತ್ವಜ್ಞಾನವು ತಳಹದಿಯಾಗಿದೆ. ತತ್ತ್ವಜ್ಞಾನವಿಲ್ಲದ ತಂತ್ರಶಾಸ್ತ್ರ , ತಂತ್ರಜ್ಞಾನವಿಲ್ಲದ ವಿಜ್ಞಾನ ಎಂದೂ ಪೂರ್ಣವೆನ್ನಿಸಲಾರವು. ಮೂಲತಃ ಅವೆರಡೂ ಒಂದೇ ನಾಣ್ಯದ ಎರಡು ಮುಖಗಳಿದ್ದಂತೆ. ಎಂದರೆ ತತ್ತ್ವಜ್ಞಾನವು ಅದರ ತಾತ್ವಿಕ ಭಾಗವಾದರೆ, ತಂತ್ರಶಾಸ್ತ್ರ ಅದರ ಪ್ರಾತ್ಯಕ್ಷಿಕ ಭಾಗ.

ತತ್ತ್ವಜ್ಞಾನವು ಗ್ರಾಹ್ಯವಾಗಲು ಅತ್ಯವಶ್ಯವಾದ ಲಕ್ಷಣಗಳಲ್ಲಿ ಪ್ರಸ್ತುತತೆ ಅತ್ಯಂತ ಪ್ರಮುಖವಾದ ಅಂಶ. ಅಪ್ರಸ್ತುತವಾಗುವ ವಸ್ತು ಎಷ್ಟೇ ಮಹತ್ತ್ವಪೂರ್ಣವಿದ್ದರೂ ಉಪಾದೇಯವೆನ್ನಿಸಲಾರದು. ತತ್ತ್ವಜ್ಞಾನದ ಪ್ರಸ್ತುತತೆಯನ್ನು ಸಾದರಪಡಿಸುವ ಹಿರಿಮೆ ತಂತ್ರಶಾಸ್ತ್ರದ್ದು. ಶ್ರೀಮಧ್ವಾಚಾರ್ಯರ ಗ್ರಂಥಗಳು ಅವರ ಪರಿಪೂರ್ಣ ತತ್ತ್ವಜ್ಞಾನಕ್ಕೆ ನಿದರ್ಶನವಾಗಿದ್ದರೆ ಅವರ ಭವ್ಯವಾದ ಜೀವನ ಅವರ ಅಪಾರ ಯೋಗಸಿದ್ಧಿಗೆ ನಿದರ್ಶನವಾಗಿದೆ. ಒಟ್ಟಾಗಿ ಅವರ ಎಲ್ಲ ಕೃತಿಗಳಲ್ಲೂ ತತ್ತ್ವಜ್ಞಾನದ ಸಿದ್ಧಿ ಹೇಗೋ ತಂತ್ರಶಾಸ್ತ್ರದ ನೈಪುಣ್ಯವೂ ಪೂರ್ಣಪ್ರಮಾಣದಲ್ಲಿ ಗೋಚರಿಸುತ್ತದೆ. ಅದನ್ನು ಕಾಲಕಾಲಕ್ಕೆ ತಮ್ಮ ಜೀವನದಲ್ಲಿ ಯಥೋಚಿತವಾಗಿ ಸಾಧಿಸಿದ ಶ್ರೀಜಯತೀರ್ಥರು ಶ್ರೀವ್ಯಾಸತೀರ್ಥರು ಶ್ರೀವಾದಿರಾಜತೀರ್ಥರು ಶ್ರೀರಘೂತ್ತಮತೀರ್ಥರು ಮತ್ತು ಶ್ರೀರಾಘವೇಂದ್ರತೀರ್ಥರು ಜನತೆಗೆ ಭಗವಂತನಲ್ಲಿ ತತ್ತ್ವಜ್ಞಾನದಲ್ಲಿ ಪರಿಶುದ್ಧ ಆಚಾರವಿಚಾರಗಳಲ್ಲಿ ಹುಟ್ಟಿಸಿದ ಶ್ರದ್ಧೆ ಅಪಾರವಾದದ್ದು, ಅಪೂರ್ವವಾದದ್ದು.

ವಿಜ್ಞಾನದ ಸಿದ್ಧಿ ಅನೇಕ ಸಲ ಅನರ್ಹರ ಕೈಗೆ ಸಿಕ್ಕಿ ಲೋಕನಾಶದಲ್ಲಿ ಪರ್ಯವಸಾನವಾಗುವ ಅಪಾಯ ಎಂದೂ ತಪ್ಪಿದ್ದಲ್ಲ. ಆದರೆ ತಂತ್ರಶಾಸ್ತ್ರದ ಸಿದ್ಧಿ ಹಾಗಲ್ಲ. ಅನರ್ಹರಿಗೆ ಎಂದೂ ಅದು ಸಿದ್ಧಿಸುವುದೇ ಇಲ್ಲ. ಅಂತೆಯೇ ಅದನ್ನು ಸಾಧಿಸಿದವನು ಅದನ್ನು ದುರುಪಯೋಗ ಪಡಿಸಿಕೊಳ್ಳುವ ಸಾಧ್ಯತೆ ಇರುವುದೇ ಇಲ್ಲ.

ವಿಜ್ಞಾನದ ದೂರದರ್ಶನ (Television) ದೂರಶ್ರವಣ (Telephone)ಗಳ ಪರಿಕಲ್ಪನೆಯಲ್ಲಿ ತಂತ್ರಶಾಸ್ತ್ರದ ದೂರದರ್ಶನ ದೂರಶ್ರವಣ ಸಿದ್ಧಿಗಳಿಗೆ ದೃಷ್ಟಾಂತ ಕಾಣುತ್ತದೆ. ಒಟ್ಟಿನಲ್ಲಿ ಅಣಿಮಾ, ಮಹಿಮಾ, ಲಘಿಮಾ, ಗರಿಮಾ ಮೊದಲಾದ ಯೋಗದ ಸಕಲಸಿದ್ಧಿಗಳಿಗೂ ತಂತ್ರಶಾಸ್ತ್ರವೇ ಮುಖ್ಯಸಾಧನ.

ಜನತೆಗೆ ವಿಜ್ಞಾನದ ಸಿದ್ಧಿಯಿಂದ ದೊರೆಯುವ ಪ್ರಯೋಜನಗಳ ಅರಿವು ಇರುವಂತೆ ತತ್ತ್ವಜ್ಞಾನದ ಸಿದ್ಧಿಯ ಎಂದರೆ ತಂತ್ರಶಾಸ್ತ್ರದ ಬಳಕೆಯ ಪ್ರಯೋಜನ ತಿಳಿದಿಲ್ಲ. ಶ್ರೀಮಧ್ವಾಚಾರ್ಯರು ತಂತ್ರಸಾರೋಕ್ತಮಂತ್ರಗಳ ಸಿದ್ಧಿಯ ಬಗ್ಗೆ ಆಡಿರುವ ಕೆಲವು ಮಾತುಗಳು ಹೀಗಿವೆ :

'ನಿಖಿಲೇಷ್ಟಪ್ರದಾಯಕಃ' (೪/೧೨), 'ಪುರುಷಾರ್ಥಚತುಷ್ಟಯೇ ಕಲ್ಪವೃಕ್ಷಃ' (೪/೨೧), 'ವಿಶೇಷಜ್ಞಾನದಾಯಕಾಃ' (೪/೨೧), 'ಅಶೇಷದೋಷದಹನಃ' (೪/೨೪) 'ತತ್ತ್ವಜ್ಞಾನಪ್ರದಾಯಕಃ' (೪/೨೪), 'ನಿಃಶೇಷಪುರುಷಾರ್ಥದಃ' (೪/೨೭), 'ಏತೇ ವಿಜಯದಾ ಮಂತ್ರಾ ಜ್ಞಾನಮೋಕ್ಷಪ್ರದಾಯಕಾಃ' (೪/೩೮), 'ಹಿರಣ್ಯರಾಜ್ಯರತ್ನಾದಿ-ಸಮಭೀಷ್ಟಸುರದ್ರುಮಾಃ' (೪/೩೮), 'ಸರ್ವೇಷ್ಟಚಿಂತಾಮಣಿಃ' (೪/೪೧), 'ವ್ಯಾಖ್ಯಾ ಶ್ರೀಸರ್ವವಿಜ್ಞಾನಕವಿತಾದಿಗುಣಪ್ರದಃ' (೪/೪೪), 'ವಾದೇ ವಿಜಯದಃ' (೪/೪೧), 'ಸರ್ವಪಾಪಕ್ಷಯಕರಂ' (೪/೪೭), 'ಸರ್ವವ್ಯಾಧಿವಿನಾಶನಂ' (೪/೪೭), 'ಸರ್ವವಿದ್ಯಾಪ್ರದಃ (೪/೪೯), 'ಪ್ರತಿವಾದಿಜಯಪ್ರದಃ' (೪/೪೯), 'ಹರಿತುಷ್ಟಿದಂ' (೪/೫೬), 'ಕಾಮದೋ ಭಯನಾಶನಃ' (೪/೯೨), 'ಸರ್ವೇ ರೋಗಾ ವಿನಶ್ಯಂತಿ' (೪/೯೯), 'ಯದ್ಯನ್ಮನೋಗತಂ ತಸ್ಯ ತತ್ತದಾಪ್ನೋತ್ಯಸಂಶಯಮ್' (೪/೧೧೭).

-ಎಂದರೆ ಇಲ್ಲಿಯ ಮಂತ್ರಜಪಗಳು ಸಕಲೇಷ್ಟದಾಯಕ, ಸಕಲಪುರುಷಾರ್ಥಪ್ರದ, ತತ್ತ್ವಜ್ಞಾನಪ್ರದಾಯಕ, ಸಕಲಪಾಪನಾಶಕ, ಸರ್ವವಿದ್ಯಾಪ್ರದ, ಸರ್ವಜ್ಞ್ಯತ್ವಪ್ರದಾಯಕ, ವಾದದಲ್ಲಿ ವಿಜಯಪ್ರದ, ಯುದ್ಧದಲ್ಲಿ ಜಯಪ್ರದ, ಹಿರಣ್ಯರಾಜ್ಯರತ್ನಾದಿಸಕಲಾಭೀಷ್ಟ-ಪ್ರದ, ಸರ್ವೇಷ್ಟಸಿದ್ಧಿಚಿಂತಾಮಣಿ, ಸರ್ವವ್ಯಾಧಿನಿವಾರಕ, ಕೀರ್ತಿಪ್ರದ, ಬುದ್ಧಿಪ್ರದ, ಸ್ಥೈರ್ಯಪ್ರದ, ಸಂಸಾರಮೋಚಕ ಹಾಗೂ ಮೋಕ್ಷದಾಯಕ; ಎಲ್ಲಕ್ಕೂ ಮಿಗಿಲಾಗಿ ಹರಿಪ್ರೀತಿದಾಯಕ.

ಇಂತಹ ಫಲಶ್ರುತಿ ಎಂದಿಗೂ ವೈಜ್ಞಾನಿಕ ಸಾಧನೆಗೆ ಇಲ್ಲ, ಜ್ಞಾನ, ಜಯಾದಿಗಳನ್ನು ಕೊಡುವ ನಿಟ್ಟಿನಲ್ಲಿ ಇಂದು ವಿಜ್ಞಾನ ಯೋಚಿಸುವ ಸ್ಥಿತಿಯಲ್ಲೂ ಇಲ್ಲ. ಆದ್ದರಿಂದಲೇ ತತ್ತ್ವಜ್ಞಾನದ ಸಿದ್ಧಿ ವಿಜ್ಞಾನದ ಸಿದ್ಧಿಯನ್ನು ಮೆಟ್ಟಿನಿಲ್ಲುವಂತಹುದು. ಅಧ್ಯಾತ್ಮವಿದ್ಯೆಯನ್ನು metaphysics ಎಂದೂ, Philosophy starts where science ends ಎಂದೂ ಪ್ರಾಜ್ಞರು ಶ್ಲಾಘಿಸಿರುವುದು ಈ ದೃಷ್ಟಿಯಲ್ಲೇ.

ಮಂತ್ರ, ಜಪ, ಹೋಮಾದಿಗಳನ್ನು ಮಾಡುವುದಿರಲಿ, ಅವುಗಳ ಬಗ್ಗೆ ನಿಖರವಾಗಿ ಬೆಳಕು ಚೆಲ್ಲುವ ಈ ತಂತ್ರಸಾರಗ್ರಂಥವನ್ನು ಪಠಿಸುವುದು ಸಹ ಸರ್ವಾಭೀಷ್ಟಸಾಧಕ.

ಎಂದಮೇಲೆ ಇದನ್ನು ಅರಿತರೆ, ಅರಿತು ಆಚರಿಸಿದರೆ, ಹೇಳುವುದೇನು? ಎಂದಿದ್ದಾರೆ ಶ್ರೀಮದಾಚಾರ್ಯರು :

ಗ್ರಂಥೋಽಯಂ ಪಾಠಮಾತ್ರೇಣ ಸಕಲಾಭಿಷ್ಟಸಿದ್ಧಿದಃ ।
ಕಿಮು ಜ್ಞಾನಾದನುಷ್ಠಾನಾದುಭಯಸ್ಮಾತ್ ಪುನಃ ಕಿಮು ॥ (ಅ.೪ ಶ್ಲೋ.೧೬೩)

ಸುಮಧ್ವವಿಜಯವು ಸಾರಿದೆ :

ಕಸ್ತಂತ್ರಸಾರಂ ಸಂಪ್ರಾಪ್ಯ ನ ಸ್ಯಾತ್ ಪರ್ಯಾಪ್ತವಾಂಛಿತಃ ।
ಅಮರ್ತ್ಯೈರಾಶ್ರಿತಚ್ಛಾಯಂ ಕಲ್ಪದ್ರುಮಮಿವೋತ್ತಮಮ್ ॥ (೧೫/೭೮)

(ತಂತ್ರಸಾರವನ್ನು ಹಿಡಿದ ಯಾವನ ಬಯಕೆಯು ತಾನೇ ಸಿದ್ಧಿಸದೇ ಉಳಿದೀತು.)

ಇಂತಹ ಗ್ರಂಥದ ಪಠನೆ ಮಂತ್ರಜಪ, ಅನುಷ್ಠಾನಗಳು ಸಾಧ್ಯವಾಗಲು ಅಧಿಕಾರ ಸಂಪತ್ತಿ ಬೇಕೇಬೇಕು. ತತ್ತ್ವಜ್ಞಾನದ ಪರಿಜ್ಞಾನಕ್ಕೆ ಬೇಕಾದ ಅರ್ಹತೆಯೇ ತಂತ್ರಶಾಸ್ತ್ರದ ಪರಿಜ್ಞಾನಕ್ಕೂ ವಿಹಿತವಾಗಿದೆ. ಅಂತಹ ಅರ್ಹತೆಯು ದೈನಂದಿನ ಸದಾಚಾರ, ಇಂದ್ರಿಯ-ಜಯ, ಮನೋನಿಗ್ರಹ, ಶುದ್ಧಚಾರಿತ್ರ್ಯ, ಏಕಾದಶೀ, ಕೃಷ್ಣಾಷ್ಟಮೀ ಮೊದಲಾದ ವಿಹಿತ ವೈಷ್ಣವ ವ್ರತ-ಉಪವಾಸಗಳ ಕಟ್ಟುನಿಟ್ಟಾದ ಆಚರಣೆ, ಊರ್ಧ್ವಪುಂಡ್ರ ಮೊದಲಾದ ಲಾಂಛನಗಳ ಧಾರಣೆ, ಎಲ್ಲಕ್ಕೂ ಮೂಲಭೂತವಾಗಿ ಶ್ರೀಹರಿಗುರುಗಳಲ್ಲಿ ತಾರತಮ್ಯ-ಕ್ರಮದಲ್ಲಿ ಭಕ್ತಿ ಮೊದಲಾಗಿ ಅನೇಕ ವಿಧ. ಅವುಗಳ ಬಗ್ಗೆ ಖಚಿತ ಮಾಹಿತಿಯನ್ನು ಶ್ರೀಮದಾಚಾರ್ಯರು ತಮ್ಮ ಸದಾಚಾರಸ್ಮೃತಿ, ಕೃಷ್ಣಾಮೃತಮಹಾರ್ಣವ, ಜಯಂತೀ-ನಿರ್ಣಯ, ಯತಿಪ್ರಣವಕಲ್ಪ ಮೊದಲಾದ ಗ್ರಂಥಗಳಲ್ಲಿ ಒದಗಿಸಿರುವರು. ಇಂತಹ ತಂತ್ರಸಾರಸಂಗ್ರಹದಂತಹ ಕಲ್ಪವೃಕ್ಷದ ನೆರಳನ್ನು ಸದಾ ಆಶ್ರಯಿಸಿದ ಫಲವಾಗಿಯೇ ಶ್ರೀಜಯತೀರ್ಥರು ಶ್ರೀವ್ಯಾಸತೀರ್ಥರು, ಶ್ರೀವಾದಿರಾಜತೀರ್ಥರು, ಶ್ರೀರಘೂತ್ತಮ ತೀರ್ಥರು ಮತ್ತು ಶ್ರೀರಾಘವೇಂದ್ರತೀರ್ಥರು ಮೊದಲಾದ ವೈಷ್ಣವಯತಿಶೇಖರರು ಕಲಿಯುಗದ ಕಲ್ಪವೃಕ್ಷ, ಕಾಮಧೇನುಗಳೆಂಬುದಾಗಿ ವಿಶ್ವಮಾನ್ಯರಾಗಿರುವರು.

ತಂತ್ರಸಾರಸಂಗ್ರಹದಲ್ಲಿ ಮಂತ್ರಗಳ ಛಂದಸ್ಸು[1] [2]ಪ್ರತಿಪಾದ್ಯದೇವತೆ, ನ್ಯಾಸಗಳು, ಮಂತ್ರಪ್ರತಿಪಾದ್ಯದೇವತೆಯ ಧ್ಯಾನ, ವರ್ಣವಿಶೇಷ, ಆಯುಧವಿಶೇಷಗಳು, ಬಾಹುಗಳ

---

೧. ವೈಷ್ಣವಾನಾಂ ಮುನಿರ್ಬ್ರಹ್ಮಮಂತ್ರಾಣಾಂ ವರ್ಣಭೇದತಃ ।
ಜ್ಞೇಯಂ ಛಂದೋ ದೈವತ್ಯೈಕಸ್ತತ್ತದ್ರೂಪೋ ಹರಿಃ ಪರಃ ॥ (೪/೬)
ಪಂಕ್ತಿಶಬ್ದಾರ್ಥವಿಜ್ಞಾನೇ ನ ಹಿ ಛಂದಸಿ ಸಂಶಯಃ ॥ (೪/೭೫)
ಪ್ರತಿಮಾಯಾಮಾತ್ಮನಿ ಚ ನ್ಯಾಸೋಽಯಂ ಸನ್ನಿಧಾನಕೃತ್ ॥ (೪/೧೨೮)

೨. ಮಂತ್ರೇಷ್ವೇತೇಷು ಸರ್ವೇಷು ವಾಚ್ಯಸ್ತಾರೇಣ ಕೇಶವಃ ।
ಅಂತರ್ಯಾಮಿತಯಾ ಧ್ಯೇಯಃ ಸರ್ವದೇವೇಷು ಸರ್ವದಾ ॥ (೪/೭೭)
ತತ್ರ ತತ್ರ ಸ್ಥಿತೋ ವಿಷ್ಣುಸ್ತತ್ತಚ್ಛಕ್ತೀಃ ಪ್ರಬೋಧಯನ್ ।
ಏಕ ಏವ ಮಹಾಶಕ್ತಿಃ ಕುರುತೇ ಸರ್ವಮಂಜಸಾ ॥ (೪/೯೨)

ಸಂಖ್ಯೆ[೧], ಬಾಹುಗಳಲ್ಲಿನ [೨]ಆಯುಧಾದಿಗಳ ಚಿಂತನೆಯ ವಿಶೇಷಫಲ[೩], ಹೋಮದ್ರವ್ಯಗಳ ವಿಶೇಷದಿಂದಾಗಿ ದೊರಕುವ ಫಲವಿಶೇಷ[೪], ಯಂತ್ರೋದ್ಧಾರಕ್ರಮ[೫] ಇವೆಲ್ಲವುಗಳ ಬಗ್ಗೆ ಶ್ರೀಮದಾಚಾರ್ಯರು ನೀಡಿರುವ ವಿವರಗಳು ಎಷ್ಟು ಸಮಗ್ರ, ಎಷ್ಟು ಪರಿಪೂರ್ಣ ಎಂಬುದನ್ನು ಗಮನಿಸಬೇಕು. ತಂತ್ರದ ಎಲ್ಲ ವಿಧಿವಿಧಾನಗಳನ್ನು ಅನಿವಾರ್ಯವಾಗಿ ಆಚರಿಸದಿದ್ದರೂ ಅವುಗಳ ಪರಿಜ್ಞಾನವೂ ಸಹ ತಾರಕ ಎಂದಿದ್ದಾರೆ.

---

೧. ಅನಂತರೂಪೋ ಧ್ಯೇಯೋऽತ್ರ ಸ್ವಗುರೂಕ್ತಾನುಸಾರತಃ।
ಯಥಾಯೋಗ್ಯಂ ಯಥಾಶಕ್ತಿ ತತ್ತದಾಯುಧಭೂಷಣಃ ॥ (೪/೧೭)
ಸರ್ವೇಷ್ವಪಿ ಹಿ ಮಂತ್ರೇಷು ದ್ವ್ಯಾದ್ಯನಂತಾನಂತಬಾಹುಕಃ।
ಚೇತನಾಂತಸ್ಥಮಾರಭ್ಯ ಸರ್ವಗಾಂತಸ್ಥರೂಪವಾನ್ ॥ (೪/೧೬)

೨. ಶಂಖಚಕ್ರಗದಾಪದ್ಮಖಡ್ಗಖೇಟಾಃ ಸಶಾರ್ಙ್ಗಕಾಃ।
ಶರೋ ಮುಸಲವಜ್ರೌ ಚ ಹಲಃ ಪಾಶಾಂಕುಶೌ ತಥಾ ॥ (೪/೧೮)
ಶೂಲಂ ಚ ಭಿಂಡಿಪಾಲಶ್ಚ ಪಟ್ಟಿಶೋऽಗ್ನಿರ್ವರಾಭಯೇ।
ತರ್ಕಮುದ್ರಾऽಕ್ಷಮಾಲಾ ಚ ಪುಸ್ತಕಂ ಚ ವಿದಾರಣಮ್।
ಇತ್ಯಾದೀನ್ಯಖಿಲಾನ್ಯೇವ ವಿಷ್ಣೋಶ್ಚಿಂತ್ಯಾನಿ ಬಾಹುಷು ॥ (೪/೧೯)

೩. ಬಹುಬಾಹುಂ ಮಹಾಕಾಯಮುದ್ಯುಕ್ತಂ ಚೋದ್ಯತಾಯುಧಮ್।
ಸ್ಮರನ್ ವಿಜಯಮಾಪ್ನೋತಿ ಸ್ತಂಭನಾದೀಂಶ್ಚ ಕಾರಯೇತ್ ॥

೪. ಶ್ರಿಯೇ ಪದ್ಮಾನಿ ಜುಹುಯಾತ್ ಸಂಪ್ರೀತ್ಯಾ ಉತ್ಪಲಾನಿ ಚ।
ಶರಾನ್ ಜಯಾಯ ಜುಹುಯಾದಭಿಮಂತ್ರ್ಯ ಪ್ರಯೋಜಯೇತ್ ॥ ೧೧೯ ॥
ವಿದ್ಯಾಯೈ ಮಂತ್ರಿತಂ ವಾರಿ ವಚಾಂ ವಾ ತುಲಸೀಮಪಿ।
ಬ್ರಾಹ್ಮೀಂ ಘೃತಂ ಸುವರ್ಣಂ ವಾ ಶತಾವೃತ್ತ್ಯಾತು ನಿತ್ಯಶಃ ॥ (೪/೧೧೮,೧೧೯)
ಅಕುರ್ವಂಶ್ಚ ಕ್ರಿಯಾ ಭಕ್ತ್ಯಾ ನಿರಪೇಕ್ಷೋ ಭಜನ್ ಹರಿಮ್।
ಸರ್ವಮೇತದವಾಪ್ನೋತಿ ವಿಶೇಷೇಣ ನ ಸಂಶಯಃ ॥ (೪/೧೨೦)
ವಸುಪೂರ್ಣಕರಂ ರತ್ನಪರ್ವತಸ್ಥಂ ವಿಭಾವಯನ್।
ವಸುಸಿದ್ಧಿಮವಾಪ್ನೋತಿ ಸೇವ್ಯಮಾನಮಜಾದಿಭಿಃ।
ಶ್ರಿಯಾ ವಿಭೂತಿಭಿರ್ಯುಕ್ತಂ ಭಾವಯನ್ ಭೂತಿಮಾಪ್ನುಯಾತ್ ॥ ೧೧೭ ॥
ಯದ್ಯನ್ಮನೋಗತಂ ತಸ್ಯ ತತ್ತದಾಪ್ನೋತ್ಯಸಂಶಯಮ್।
ತಥಾ ತಥಾ ಹರಿಂ ಧ್ಯಾಯನ್ ಕ್ರಿಯಾಸ್ತಾಸ್ತಾಶ್ಚ ಸಾಧಯನ್ ॥ (೪/೧೧೬)
ಸಕಾಮೇಭ್ಯೋऽಮಿತಗುಣಾ ಯಾऽಕಾಮೈಸ್ತು ಕೃತಾ ಕ್ರಿಯಾ।
ತಸ್ಮಾದಕಾಮ ಏವಾಲಂ ಭಜೇದ್ವಿಷ್ಣುಂ ಸನಾತನಮ್ ॥ (೪/೧೧೨)

೫. ಬೀಜಾಂತಃ ಸಾಧ್ಯಮಧ್ಯಂ ಚ ವಿಭಕ್ತದಲಮಂತ್ರಯುಕ್ ।
ವರ್ಣಾನುಪ್ರಾತಿಲೋಮ್ಯೇನ ವೃತ್ತಂ ಭೂಪುರಸಂಯುತಮ್।
ಬೀಜಸಂದೃಬ್ಧಕೋಣಂ ಚ ಯಂತ್ರಂ ರಕ್ಷಾದಿಸಾಧಕಮ್ ।
ಸಮಂ ತತ್ ಸರ್ವಮಂತ್ರೇಷು ಜಪ್ತಂ ಧಾರ್ಯಂ ತು ವಾ ಭುವಿ।
ವಿಲಿಖ್ಯ ಮಂಡಲೇ ವಾ ತತ್ ಪೂಜಯೇದ್ಧರಿಮಂಜಸಾ ॥ (೪/೧೨೭,೧೨೮)

ಕಲಿಯುಗದಲ್ಲಿ ಮಂತ್ರಶಕ್ತಿ ಕೆಲಸಮಾಡುವುದಿಲ್ಲ; ಅಲ್ಲಿ ಏನಿದ್ದರೂ ಕುತಂತ್ರದ ಶಕ್ತಿಮಾತ್ರ ಎಂಬ ಪ್ರಶ್ನೆಗೂ ಶ್ರೀಮದಾಚಾರ್ಯರು ಉತ್ತರ ನೀಡಿದ್ದಾರೆ; ''ನಿಜ, ಕಲಿಯುಗದಲ್ಲಿ ಹೆಚ್ಚಿನ ಮಂತ್ರಗಳ ಶಕ್ತಿ ಕುಂಠಿತವಾಗಿರುತ್ತದೆ. ಆದರೆ ಕೆಲವು ಮಂತ್ರಗಳ ಶಕ್ತಿ ಕಲಿಯುಗದಲ್ಲೂ ಎಂದಿನಂತೆಯೇ ಉಜ್ಜ್ವಲವಾಗಿಯೇ ಇರುತ್ತದೆ. ನಾವು ಇಲ್ಲಿ ನಿರೂಪಿಸಿರುವ ಮಂತ್ರಗಳೆಲ್ಲ ಆ ಬಗೆಯವು. ಅವುಗಳಲ್ಲೂ ವ್ಯಾಸಮಂತ್ರ, ಕೃಷ್ಣಮಂತ್ರಗಳು ಇನ್ನೂ ಪ್ರಬಲ.'':

ದೃಷ್ಟಾರ್ಥ ಏವ ಮಂತ್ರಾಣಾಂ ಕಲೌ ವೀರ್ಯಂ ತಿರಸ್ಕೃತಮ್ ।
ತತ್ರಾಪ್ಯುದ್ದೀಪ್ತವೀರ್ಯಾ ಹಿ ಮಂತ್ರಾ ಹ್ಯತ್ರ ಪ್ರಕೀರ್ತಿತಾಃ ॥
ವಾಸಿಷ್ಠವೃಷ್ಣಿಪ್ರವರಮಂತ್ರಾಸ್ತತ್ರಾಪಿ ವೀರ್ಯದಾಃ ॥ (೪/೪೨)

ತಂತ್ರಸಾರೋಕ್ತಮಂತ್ರಗಳು

೧. ಪ್ರಣವಮಂತ್ರ (೧/೩)
೨. ಅಷ್ಟಾಕ್ಷರಮಂತ್ರ (೧/೧೧)
೩. ದ್ವಾದಶಾಕ್ಷರ(ವಾಸುದೇವ)ಮಂತ್ರ (೧/೧೨)
೪. ವ್ಯಾಹೃತಿಮಂತ್ರ (೧/೧೪)
೫. ಪುರುಷಸೂಕ್ತಮಂತ್ರ (೧/೪೪)
೬. ಬ್ರಹ್ಮಗಾಯತ್ರೀಮಂತ್ರ (೧/೩೬)
೭. ವಿಷ್ಣುಷಡಕ್ಷರಮಂತ್ರ (೧/೪೪)
೮. ಮಾತೃಕಾಮಂತ್ರ (೧/೭೧)
೯. ವಿಷ್ಣುಗಾಯತ್ರೀಮಂತ್ರ (೩/೫೬)
೧೦. ತ್ರಯಸ್ತ್ರಿಂಶದಕ್ಷರವರಾಹಮಂತ್ರ(೪/೧೨)
೧೧. ಸಪ್ತಾಕ್ಷರಭೂವರಾಹಮಂತ್ರ (೪/೩)
೧೨. ಚತುರ್ದಶಾಕ್ಷರಭೂವರಾಹಮಂತ್ರ (೪/೪)
೧೩. ಶ್ರೀಕರಾಷ್ಟಾಕ್ಷರಮಂತ್ರ (೪/೯)
೧೪. ದ್ವಾತ್ರಿಂಶದಕ್ಷರನೃಸಿಂಹಮಂತ್ರ (೪/೧೧)
೧೫. ಚತುರ್ವಿಂಶತ್ಯಕ್ಷರನೃಸಿಂಹಮಂತ್ರ (೪/೧೨)
೧೬. ನೃಸಿಂಹಗಾಯತ್ರೀಮಂತ್ರ (೪/೧೩)
೧೭. ಷಡಕ್ಷರಹಂಸಮಂತ್ರ (೪/೨೦)
೧೮. ಸಪ್ತಾಕ್ಷರಹಂಸಮಂತ್ರ (೪/೨೦)
೧೯. ಅಷ್ಟಾಕ್ಷರಹಂಸಮಂತ್ರ (೪/೨೦)
೨೦. ದಧಿವಾಮನ(ಮಂತ್ರಚಿಂತಾಮಣಿ) ಮಂತ್ರ. (೪/೨೮)
೨೧. ಅಷ್ಟಾಕ್ಷರವಾಮನಮಂತ್ರ (೪/೩೨)
೨೨. ತ್ರಿವಿಕ್ರಮಗಾಯತ್ರೀಮಂತ್ರ (೪/೩೩)
೨೩. ಪರಶುರಾಮಮಂತ್ರ (೪/೩೪)

೬೦. ಶೇಷಮಂತ್ರ (೪/೭೯)
೬೧. ಗರುಡಮಂತ್ರ (೪/೮೧)
೬೨. ಇಂದ್ರಮಂತ್ರ (೪/೮೪)
೬೩. ಅಗ್ನಿಮಂತ್ರ (೪/೮೪)
೬೪. ಯಮಮಂತ್ರ (೪/೮೪)
೬೫. ನಿರ್ಋತಿಮಂತ್ರ (೪/೮೪)
೬೬. ವರುಣಮಂತ್ರ (೪/೮೪)
೬೭. ವಾಯುಮಂತ್ರ (೪/೮೪)
೬೮. ಕುಬೇರಮಂತ್ರ (೪/೮೪)
೬೯. ಈಶಾನಮಂತ್ರ (೪/೮೪)
೭೦. ಸ್ಕಂದಮಂತ್ರ (೪/೮೬)
೭೧. ಸೂರ್ಯಮಂತ್ರ (೪/೮೭)
೭೨.ಗಣೇಶಮಂತ್ರ(೪/೮೯)
೭೩. ಧನ್ವಂತರಿಮಂತ್ರ (೪/೯೨)
೭೪. ವೈದಿಕಧನ್ವಂತರಿಮಂತ್ರ (೪/೧೧೩)

★★★★★

ಯತಿಪ್ರಣವಕಲ್ಪ

ಸದಾಚಾರಸ್ಮೃತಿಯಲ್ಲಿ ಗೃಹಸ್ಥ ಮೊದಲಾದವರ ನಿತ್ಯಕರ್ಮಗಳ ಸ್ವರೂಪದ ಬಗ್ಗೆ ಬೆಳಕು ಚೆಲ್ಲಿದ ಶ್ರೀಮದಾಚಾರ್ಯರು, 'ಯತಿಪ್ರಣವಕಲ್ಪ' ದಲ್ಲಿ ಪ್ರಧಾನವಾಗಿ ಸಂನ್ಯಾಸ ಸ್ವೀಕಾರದ ವಿಧಿವಿಧಾನಗಳು, ಭಗವದ್ಧ್ಯಾನಪದ್ಧತಿ ಹಾಗೂ ಅವರಿಗೆ ವಿಹಿತವಾದ ಮೂಲಭೂತದೀಕ್ಷೆಯ ಸ್ವರೂಪವನ್ನು ವಿವೇಚಿಸಿರುವರು.

ಸಂಸಾರದಲ್ಲಿ ವಿರಕ್ತಿ ಹೊಂದಿದ ಸಾಧಕನು, ಪುರುಷಸೂಕ್ತದಿಂದ ವಿಧ್ಯುಕ್ತರೀತಿಯಲ್ಲಿ ಹೋಮಿಸಿ, ತನ್ನನ್ನು ಅವಲಂಬಿಸಿದ ಸಕಲರಿಗೂ ಉಚಿತ ಆಶ್ರಯವನ್ನು ಕಲ್ಪಿಸುವ ಮೂಲಕ ಅಭಯವನ್ನಿತ್ತು, ಹರಿಯನ್ನು ಸ್ಮರಿಸುತ್ತಾ ಸಂನ್ಯಾಸವನ್ನು ಸ್ವೀಕರಿಸಬೇಕು :

ಸಮಿಚ್ಚರ್ವಾದಿಕಾನ್ ಹುತ್ವಾ ಸಮ್ಯಕ್ ಪುರುಷಸೂಕ್ತತಃ ।
ಸರ್ವೇಷಾಮಭಯಂ ದತ್ವಾ ವಿರಕ್ತಃ ಪ್ರವ್ರಜೇದ್ಧರಿಮ್ ॥

ಸಂನ್ಯಾಸದೀಕ್ಷೆಯನ್ನು ವಿಹಿತಗುರುಗಳಿಂದಲೇ ಪಡೆಯಬೇಕು. ಅಂತಹ ಗುರುವು ಮೂಲತಃ ಭಗವದ್ಭಕ್ತನೂ, ಸದಾಚಾರಿಯೂ ಆಗಿರಲೇಬೇಕು. ಅಂತಹವನ ಬಳಿಗೆ ತೆರಳಿ; ''ನನಗೆ ಬ್ರಹ್ಮತತ್ತ್ವವನ್ನು ಉಪದೇಶಿಸಬೇಕು'' ಎಂದು ಪ್ರಾರ್ಥಿಸಿಕೊಳ್ಳಬೇಕು :

ಶ್ರುತ್ವಾ ಭಾಗವತಂ ಶುದ್ಧಮಾಚಾರ್ಯಂ ಶರಣಂ ವ್ರಜೇತ್ ।
ಅಧೀಹಿ ಭಗವೋ ಬ್ರಹ್ಮೇತ್ಯಸ್ಮೈ ಬ್ರೂಯಾದ್ಗುರುಃ ಪರಮ್ ॥

ಗುರುವು ಅವನ ಪ್ರಾರ್ಥನೆಯನ್ನು ಮನ್ನಿಸಿ, ಅವನ ಬಲಗಿವಿಯಲ್ಲಿ ಪ್ರಣವಮಂತ್ರವನ್ನು ಮೂರುಬಾರಿ ಉಪದೇಶಿಸಬೇಕು. ಪ್ರಣವಕ್ಕೆ ಅಂತರ್ಯಾಮಿಯು ಋಷಿ, ಗಾಯತ್ರೀ ಛಂದಸ್ಸು ಮತ್ತು ಪರಮಾತ್ಮನೇ ದೇವತೆ :

ಉಚ್ಚಾರಯಂಸ್ತ್ರಿಸ್ತಾರಂ ದಕ್ಷಿಣೇ ಶ್ರವಣೇ ತಥಾ ।
ಋಷಿಚ್ಛಂದೋ ದೈವತಾನಿ ಬ್ರೂಯಾತ್ ತಸ್ಯ ಕ್ರಮಾತ್ ಸುಧೀಃ ॥
ಅಂತರ್ಯಾಮೀತಿ ಗಾಯತ್ರೀ ಪರಮಾತ್ಮೇತ್ಯನುಕ್ರಮಾತ್ ।

ವಿಶ್ವ, ತೈಜಸ, ಪ್ರಾಜ್ಞ ಮತ್ತು ತುರೀಯ ಎಂಬ ಭಗವದ್ರೂಪಗಳು ಪ್ರಣವದ ಅ, ಉ, ಮ ಮತ್ತು ನಾದ ಎಂಬ ನಾಲ್ಕು ಅಕ್ಷರಗಳಿಗೆ ದೇವತೆಗಳು. ಕೃಷ್ಣ, ರಾಮ, ನೃಸಿಂಹ, ವರಾಹ, ವಿಷ್ಣು, ಪರಂಜ್ಯೋತಿ, ಪರಬ್ರಹ್ಮ ಮತ್ತು ವಾಸುದೇವ ಎಂಬ ಎಂಟು ರೂಪಗಳು ಪ್ರಣವದ ಅಕಾರಾದಿ ಅತಿಶಾಂತದವರೆಗಿನ ಎಂಟು ಅಕ್ಷರಗಳಿಗೆ ಕ್ರಮವಾಗಿ ಪ್ರತಿಪಾದ್ಯದೇವತೆಗಳು :

ವಿಶ್ವಶ್ಚ ತೈಜಸಃ ಪ್ರಾಜ್ಞಸ್ತುರ್ಯಶ್ಚಾಕ್ಷರದೇವತಾಃ ।
ಕೃಷ್ಣೋ ರಾಮೋ ನೃಸಿಂಹಶ್ಚ ವರಾಹೋ ವಿಷ್ಣುರೇವ ಚ ॥
ಪರಂಜ್ಯೋತಿಃ ಪರಂಬ್ರಹ್ಮ ವಾಸುದೇವ ಇತಿ ಕ್ರಮಾತ್ ।
ಅಕಾರಾದೇಸ್ತಥಾ ಶಾಂತಾತಿಶಾಂತಾಂತಸ್ಯ ದೇವತಾಃ ॥
ಏವಮುಕ್ತ್ವಾ ತು ತದ್ಧ್ಯಾನಂ ಬ್ರೂಯಾಚ್ಛಿಷ್ಯಾಯ ಸದ್ಗುರುಃ ।

ಹೃದಯದಲ್ಲಿ ಅಷ್ಟದಳ ಕಮಲ, ಅದರ ಮಧ್ಯದಲ್ಲಿ ಸೂರ್ಯ, ಚಂದ್ರ ಮತ್ತು ಅಗ್ನಿಮಂಡಲಗಳು; ಅವುಗಳ ಮಧ್ಯದಲ್ಲಿ ಮತ್ತೊಂದು ಅಷ್ಟದಳ ಕಮಲ; ಅದರ ಮಧ್ಯದಲ್ಲಿ ನಾರಾಯಣನನ್ನು ಚಿಂತಿಸಬೇಕು :

ಅಷ್ಟಪತ್ರೇ ತು ಹೃತ್ಪದ್ಮಮಧ್ಯೇ ಸೂರ್ಯೇಂದುವಹ್ನಿಗಮ್ ।
ಪೀಠಂ ತನ್ಮಧ್ಯಪದ್ಮಸ್ಥಂ ನಾರಾಯಣಮನಾಮಯಮ್ ॥

ಉದಿಸುವ ಸೂರ್ಯನ ಕಾಂತಿ, ಜ್ಞಾನಾನಂದಮಯದೇಹ, ಕೆಂಪಾದ ಅಂಗೈ, ಅಂಗಾಲುಗಳು, ಹೊಳೆಯುವ ಉಗುರುಗಳು, ದುಂಡಾದತೊಡೆಗಳು, ಮೊಣಕಾಲುಗಳು, ಆನೆಗಳ ಸೊಂಡಿಲಿನಂತಹ ತೋಳುಗಳು, ಸೊಂಟದಲ್ಲಿ ಚಿನ್ನದ ಒಡ್ಯಾಣದಿಂದ ಬಿಗಿದ ಪೀತಾಂಬರ, ಆಳವಾದ ನಾಭಿ, ಕಂಗೊಳಿಸುವ ಮೂರುನಿರಿಗಳಿಂದ ಕೂಡಿದ ಉದರ, ವಿಶಾಲ ವಕ್ಷಸ್ಥಳ, ಕೌಸ್ತುಭದಿಂದ ಕೂಡಿದ ಕಂಠ, ಶಂಖ ಚಕ್ರ ಗದೆ ಪದ್ಮಗಳನ್ನು ಧರಿಸಿದ ನೀಳವೂ ಪುಷ್ಟವೂ ಆದ ತೋಳುಗಳು, ಅರಳಿದ ತಾವರೆಯಂತಹ ಕಣ್ಣುಗಳು, ಹೊಳೆಯುವ ಮಕರಕುಂಡಲಗಳು, ಸಹಸ್ರಾರು ಚಂದ್ರರಿಗೂ ಮಿಗಿಲಾದ ಕಮಲದಂತಹ ಮುಖ, ಮಂದಹಾಸ – ಇವು ಧ್ಯೇಯಮೂರ್ತಿಯ ಲಕ್ಷಣಗಳು :

ಉದ್ಯದಾದಿತ್ಯಸಂಕಾಶಂ ತೇಜಸಾಽನುಪಮಂ ಸದಾ ।
ಸಹಸ್ರೇಣಾಪಿ ಸೂರ್ಯಾಣಾಂ ಸಜ್ಜ್ಞಾನಾನಂದರೂಪಿಣಮ್ ॥
ಅತಿರಕ್ತತಲಂ ಭಾಸ್ವನ್ನಖರಾಜಿವಿರಾಜಿತಮ್ ।

ವೃತ್ತಜಂಘಂ ವೃತ್ತಜಾನುಂ ಹಸ್ತಿಹಸ್ತೋರುಮೀಶ್ವರಮ್ ॥
ಮಹಾಕಟಿತಟಾಬದ್ಧಕಾಂಚೀಪೀತಾಂಬರೋಜ್ಜ್ವಲಮ್ ।
ನಿಮ್ನನಾಭಿಂ ಸುತ್ರಿವಲಿಂ ಸುವೃತ್ತೋದರಬಂಧನಮ್ ॥
ವಿಶಾಲವಕ್ಷಸಂ ಭ್ರಾಜತ್ಕೌಸ್ತುಭಾಮುಕ್ತಕಂಧರಮ್ ।
ವನಮಾಲಾಧರಂ ಹಾರವೈಜಯಂತ್ಯಾದಿಭಿರ್ಯುತಮ್ ॥
ಪೃಥುದೀರ್ಘಚತುರ್ಬಾಹುಂ ಶಂಖಚಕ್ರಗದಾಂಬುಜೈಃ ।
ಯುಕ್ತಮುನ್ನಿದ್ರಪದ್ಮಾಕ್ಷಂ ಸ್ಫುರನ್ಮಕರಕುಂಡಲಮ್ ॥
ಪೂರ್ಣಚಂದ್ರಾಯುತೋದ್ರಿಕ್ತಕಾಂತಿಮನ್ಮುಖಪಂಕಜಮ್ ।
ಸುಭ್ರುವಂ ಸುಲಲಾಟಾಂತಂ ಕಿರೀಟಾಬದ್ಧಮೂರ್ಧಜಮ್ ॥
ನಿಃಶೇಷದುಃಖಶಮನಂ ನಿತ್ಯಾನಂದಶುಚಿಸ್ಮಿತಮ್ ॥
ವಿಶ್ವಾದೀಂಶ್ಚೈವ ಕೃಷ್ಣಾದೀನೇವಂಭೂತಾನ್ ಸನಾತನಾನ್ ।
ಅಭಿನ್ನಾನೇವ ಸತತಂ ತಸ್ಮಾದ್ವಿಷ್ಣೋಃ ಪರಾತ್ಮನಃ ॥
ವರಾಭಯೋದ್ಯತಕರಾನ್ ನಿತ್ಯಾನಂದೈಕರೂಪಿಣಃ ।

ವಿಶ್ವಾದಿ ನಾಲ್ಕು ರೂಪಗಳನ್ನೂ, ಕೃಷ್ಣಾದಿ ಎಂಟುರೂಪಗಳನ್ನೂ ಸಹ ಇದೇ ತೆರನಾಗಿ ಚಿಂತಿಸಬೇಕು. ಅವುಗಳದು ವರದ ಹಾಗು ಅಭಯಹಸ್ತಗಳು.

ಹೀಗೆ ದೀಕ್ಷೆಯಿತ್ತನಂತರ ಗುರುವು ಶಿಷ್ಯನಿಗೆ ಪ್ರಮಾಣವಚನ ಬೋಧಿಸಿ ಮೂರು ಬಾರಿ ಪ್ರತಿಜ್ಞೆ ಮಾಡಿಸಬೇಕು:

ಏವಮುಕ್ತ್ವಾ ಗುರುರ್ಧ್ಯಾನಂ ಶಪಥಂ ಕಾರಯೇತ್ ತತಃ ॥

''ವಿಷ್ಣು ವೈಷ್ಣವರನ್ನು ಎಂದೂ ತೊರೆಯುವುದಿಲ್ಲ; ವಿಷ್ಣುವಿಗೆ ಇತರ ದೇವತೆ-ಗಳೊಂದಿಗೆ ಸಾಮ್ಯವನ್ನಾಗಲಿ, ಐಕ್ಯವನ್ನಾಗಲಿ ಎಂದೂ ಚಿಂತಿಸುವುದಿಲ್ಲ, ಸತ್ತರೂ ಸರಿ, ಐಕ್ಯವಾದಿಗಳೊಂದಿಗಾಗಲಿ, ಸಾಮ್ಯವಾದಿಗಳೊಂದಿಗಾಗಲಿ ಬೆರೆಯುವುದಿಲ್ಲ, ವಿಷ್ಣು ವೈಷ್ಣವ ನಿಂದಕರನ್ನು ಸೇರುವುದಿಲ್ಲ'' :

ನ ವಿಷ್ಣುಂ ವೈಷ್ಣವಾಂಶ್ಚೈವಾಪ್ಯುತ್ಸೃಜೇಯಮಿತಿ ತ್ರಿಶಃ ।
ನ ಚಾನ್ಯದೇವತಾಸಾಮ್ಯಂ ತದೈಕ್ಯಮಥವಾ ಹರೇಃ ॥
ಚಿಂತಯೇಯಂ ಮೃತೋ ವಾಪಿ ನ ಚಾಪ್ಯೇಕತ್ವವಾದಿಭಿಃ ।
ಸಮತ್ವವಾದಿಭಿರ್ವಾಽಹಂ ಸಂಗಚ್ಛೇಯಂ ಕಥಂಚನ ॥
ತನ್ನಿಂದಕೈಶ್ಚ ತದ್ಭಕ್ತನಿಂದಕೈರ್ವಾ ಮಹಾಮುನೇ ।

ಈ ತೆರನಾಗಿ ಶಪಥ ಮಾಡಿಸಿದ ಮೇಲೆ, ಅವನ ತಲೆಯ ಮೇಲೆ ಹಸ್ತವನ್ನಿರಿಸಿ ಗುರುವು 'ಸುಖಿಯಾಗು' ಎಂದು ಹರಸಬೇಕು. 'ಸಂಸಾರದಿಂದ ಪಾರಾಗು, ಮೋಕ್ಷವನ್ನು ಪಡೆ, ಅಲ್ಲಿಯೂ ಹರಿಭಕ್ತರಾದ ದೇವತೆಗಳಲ್ಲಿ ತಾರತಮ್ಯಕ್ರಮದಿಂದ ಭಕ್ತಿ ಮಾಡು; ವಿಷ್ಣುಸರ್ವೋತ್ತಮತ್ವವನ್ನು ಚಿಂತಿಸು; ಮುಕ್ತಿಯಲ್ಲೂ ವಿಷ್ಣುವಿನೊಂದಿಗೆ ಸಾಮ್ಯ, ಐಕ್ಯಗಳನ್ನು ಚಿಂತಿಸದಿರು'' ಎಂಬುದಾಗಿ ಆಶೀರ್ವದಿಸಿ ಅವನಿಗೆ ಶಾಸ್ತ್ರಪಾಠ ಹೇಳಬೇಕು :

ಏವಂ ಕೃತೇ ತು ಶಪಥೇ ಮಸ್ತಕೇ ಹಸ್ತಪಂಕಜಮ್ ।
ನಿಧಾಯೋತ್ತೀರ್ಯಸಂಸಾರಾತ್ ಸುಖೀ ಭವ ಹರೇಃ ಪ್ರಿಯಃ ॥
ಸರ್ವದುಃಖಾದಿಭಿರ್ಮುಕ್ತೋ ನಿತ್ಯಾನಂದೈಕರೂಪಿಣಃ ।
ಸಂಪ್ರಾಪ್ಯ ವಿಷ್ಣುಸಾಮೀಪ್ಯಂ ತತ್ರಾಪಿ ಹರಿಭಕ್ತಿಮಾನ್ ॥
ಭಕ್ತಿಮಾಂಶ್ಚಾನ್ಯದೇವೇಷು ತಾರತಮ್ಯಂ ಚ ಸರ್ವದಾ ।
ಸರ್ವೋತ್ಕರ್ಷಂ ಸ್ಮರನ್ ವಿಷ್ಣೋರ್ಭೂಯಾಶ್ಚೈವ ಸದಾ ಸುಖೀ ॥
ನ ಮುಕ್ತೌ ವಿಷ್ಣುನೈಕ್ಯಂ ವಾ ಮುಕ್ತಾನಾಂ ಸಾಮ್ಯಮೇವ ವಾ ।
ಸ್ಮರೇಥಾ ಇತಿ ಚೋಕ್ತ್ವಾ ತು ಸಮಯಾನನುಶಿಕ್ಷಯೇತ್ ॥

ಪ್ರತಿನಿತ್ಯ ದೇವಪೂಜೆ, ಜಪ, ಧ್ಯಾನಗಳನ್ನು ಆಚರಿಸಲೇಬೇಕು. ಮೂರು ಸಾವಿರಕ್ಕಿಂತ ಹೆಚ್ಚಿನ ಜಪ ಉತ್ತಮ; ಮೂರುಸಾವಿರ ಮಧ್ಯಮ; ಸಾವಿರ ಅಧಮ :

ನಿತ್ಯಶಶ್ಚ ಹರೇಃ ಪೂಜಾ ಜಪಧ್ಯಾನ ಸಮರ್ಪಣಂ ।
ಕರ್ತವ್ಯಂ ತು ತ್ವಯಾ ವತ್ಸ ಜಪಶ್ಚ ತ್ರಿಸಹಸ್ರಕಃ ॥
ಮಧ್ಯಮಃ ಪ್ರಣವಸ್ಯೋಕ್ತೌ ಯೋಽವರಃ ಸ ಸಹಸ್ರಕಃ ।
ತ್ರಿಸಹಸ್ರಾತ್ಪರೋ ಯಸ್ತು ಸ ಉತ್ತಮಜಪಃ ಸ್ಮೃತಃ ॥

ಪರಮಾತ್ಮನು ಬಿಂಬ, ತಾನು ಅವನ ಪ್ರತಿಬಿಂಬ ಎಂಬುದನ್ನು ಚಿಂತಿಸುತ್ತ ಮಾನಸ ಪುಷ್ಪಗಳಿಂದಲೂ, ಪ್ರಣವದಿಂದಲೂ, ಜಿತೇಂದ್ರಿಯನಾಗಿ ಶ್ರೀಹರಿಯನ್ನು ಆರಾಧಿಸಬೇಕು. ಇದರೊಂದಿಗೆ ಇತರ ವೈಷ್ಣವ ಮಂತ್ರಗಳ ಜಪವೂ ವಿಹಿತ. ಸದಾ ವೇದಾರ್ಥಚಿಂತನೆ, ವೈಷ್ಣವಶಾಸ್ತ್ರಗಳ ಶ್ರವಣ ಮುಖ್ಯ ಕರ್ತವ್ಯ. ವೇದಗಳನ್ನು ಉಪನಿಷತ್ಸಮೇತವಾಗಿ ಶ್ರವಣ ಮಾಡಿ ಅವುಗಳ ಅರ್ಥವನ್ನು ಬ್ರಹ್ಮಸೂತ್ರಗಳಿಂದ ನಿರ್ಣಯಿಸಿಕೊಳ್ಳಬೇಕು. ವಿಷ್ಣು ಸರ್ವೋತ್ತಮತ್ವವನ್ನೇ ಸದಾ ಪ್ರತಿಪಾದಿಸುತ್ತಿರಬೇಕು :

ಆತ್ಮಾನಂ ಪ್ರತಿಬಿಂಬತ್ವೇ ಧ್ಯಾಯನ್ ಬಿಂಬಂ ಜನಾರ್ದನಮ್ ।
ಧ್ಯಾಯಂಶ್ಚ ಸತತಂ ವತ್ಸ ಸಪರ್ಯಾಂ ನಿತ್ಯಶಃ ಕುರು ॥
ಮಾನಸೈರ್ವಾಥಪುಷ್ಪೈರ್ವಾ ಪ್ರಣವೇನ ಸಮಾಹಿತಃ ।
ಅನ್ಯಾಂಶ್ಚ ವೈಷ್ಣವಾನ್ ಮಂತ್ರಾನ್ ಜಪೇಥಾ ಭಕ್ತಿಪೂರ್ವಕಮ್ ॥
ಶೃಣುಷ್ವ ವೈಷ್ಣವಂ ಶಾಸ್ತ್ರಂ ಸದಾ ವೇದಾರ್ಥತತ್ಪರಃ ॥
ವೇದಾನ್ ಮಂತ್ರಾನುಪನಿಷತ್ಸಹಿತಾನ್ ಸರ್ವದಾ ಶೃಣು ।
ಇತಿಹಾಸಪುರಾಣೇ ಚ ಪಂಚರಾತ್ರಂ ತಥೈವ ಚ ।
ತದರ್ಥಾನ್ ಬ್ರಹ್ಮಸೂತ್ರೈಶ್ಚ ಸಮ್ಯಙ್ನಿರ್ಣೀಯ ತತ್ವತಃ ।
ವಿಷ್ಣೋಃ ಸರ್ವೋತ್ತಮತ್ವಂ ತು ಸರ್ವದಾ ಪ್ರತಿಪಾದಯ ॥

ಹೀಗೆ ಪ್ರಧಾನವಾಗಿ ಸಂನ್ಯಾಸದೀಕ್ಷೆಯ ಸ್ವರೂಪವನ್ನು ವಿವೇಚಿಸುವ ಈ ಕೃತಿಯು ಪ್ರಣವ ಸ್ವರೂಪ, ಭಗವದ್ಧ್ಯಾನಪದ್ಧತಿ, ಮೊದಲಾದ ಆದರ್ಶ ಜೀವನಕ್ರಮಗಳನ್ನು ವಿವರವಾಗಿ ನಿರೂಪಿಸುವ ಮೂಲಕ ಸಕಲ ಸಾಧಕರಿಗೂ ಉಪಯುಕ್ತವಾಗಿದೆ.

ಇದಕ್ಕೆ ತರಂಗಿಣೀ ರಾಮಾಚಾರ್ಯರು ರಚಿಸಿರುವ ವಿಸ್ತೃತವಾದ ವ್ಯಾಖ್ಯಾನವೊಂದು ನನ್ನ ಸಂಗ್ರಹ(ಶ್ರೀಜಯತೀರ್ಥ ಸಂಸ್ಕೃತ ಹಸ್ತಲಿಖಿತಗ್ರಂಥಾಲಯ ವ್ಯಾಸನಕೆರೆ)ದಲ್ಲಿ ಉಪಲಬ್ಧವಿದೆ[೧].

ಜಯಂತೀನಿರ್ಣಯ

ಜಯಂತೀನಿರ್ಣಯವು ಶ್ರೀಕೃಷ್ಣಜಯಂತೀ ವ್ರತದ ವಿಧಿವಿಧಾನಗಳನ್ನು ನಿರೂಪಿಸುವ ಕೃತಿ. ಏಕಾದಶೀ ಮತ್ತು ಶ್ರೀಕೃಷ್ಣಜಯಂತೀ - ಈ ಎರಡೂ ವ್ರತಗಳು ಆಚಾರ್ಯರು ತಿಳಿಸಿದಂತೆ ಸಕಲ ವರ್ಣ, ಸಕಲ ಆಶ್ರಮದವರಿಗೂ ಕಡ್ಡಾಯವಾಗಿರುವ ವ್ರತಗಳು. ಇವುಗಳನ್ನು ಆಚರಿಸುವುದು ತುಂಬಾ ಪುಣ್ಯಕರವಾಗಿರುವಂತೆ, ಆಚರಿಸದಿರುವುದು ಅತ್ಯಂತ ಪಾಪಕರವೂ ಆಗಿದೆ. ಕೃಷ್ಣಾಮೃತಮಹಾರ್ಣವದಲ್ಲಿ ಏಕಾದಶಿಯ ಮಹತ್ತ್ವವನ್ನು ವಿವರಿಸಿದ ಶ್ರೀಮದಾಚಾರ್ಯರು ಈ ಕೃತಿಯಲ್ಲಿ ಶ್ರೀಕೃಷ್ಣಜಯಂತೀವ್ರತದ ವಿವರಗಳನ್ನು ಒದಗಿಸಿರುವರು.

(ಸಿಂಹಮಾಸದ)ಕೃಷ್ಣಪಕ್ಷದ ಅಷ್ಟಮೀ ಮಧ್ಯರಾತ್ರಿಯಂದು ರೋಹಿಣೀ ನಕ್ಷತ್ರದ ಯೋಗವಿದ್ದಲ್ಲಿ ಅದು ಶ್ರೀಕೃಷ್ಣಜಯಂತೀ ಎನ್ನಿಸುವುದು(ಸಾಮಾನ್ಯವಾಗಿ ಇದು ಶ್ರಾವಣಮಾಸದಲ್ಲಿ ಬರುವುದು). ಇದು ಶ್ರೀಕೃಷ್ಣ ಅವತರಿಸಿದ ಪವಿತ್ರ ದಿವಸ. ಇದು ಸಕಲ ಪಾಪನಾಶಕವಾದ ವ್ರತ. ಇದಕ್ಕಿಂತ ಮಿಗಿಲಾದ ಬೇರೊಂದು ವ್ರತವೇ ಇಲ್ಲ. ಅಂದು ಸಕಲರೂ ಉಪವಾಸ ಆಚರಿಸಲೇಬೇಕು. ದ್ವಿಜಾತಿಯವರಿಗೆ ಇದು ಇನ್ನೂ ವಿಶೇಷ. ಅಂದು ಆಹಾರ ಸ್ವೀಕರಿಸುವವನು ಕೀವು ರಕ್ತಗಳನ್ನು ತಿಂದಂತೆಯೇ. ಅವನಿಗೆ ಪೂಯೋದ ಎಂಬ ನರಕವು ತಪ್ಪಿದ್ದಲ್ಲ. ಅಂದು ಪ್ರಾತಃ, ಮಧ್ಯಾಹ್ನ ಮತ್ತು ಸಾಯಂಕಾಲ ಮೂರು ಕಾಲಗಳಲ್ಲೂ:

> ಯೋಗಾಯ ಯೋಗಪತಯೇ ಯೋಗೇಶ್ವರಾಯ
> ಯೋಗಸಂಭವಾಯ ಶ್ರೀಗೋವಿಂದಾಯ ನಮೋ ನಮಃ ॥

ಎಂಬ ಮಂತ್ರದಿಂದ ಸ್ನಾನ ಮಾಡಬೇಕು. ಎಂದಿನಂತೆ ನಿತ್ಯಾಹ್ನಿಕವನ್ನು ಪೂರೈಸಬೇಕು. ಅಂದು ರಾತ್ರಿ:

> ಯಜ್ಞಾಯ ಯಜ್ಞಪತಯೇ ಯಜ್ಞೇಶ್ವರಾಯ
> ಯಜ್ಞಸಂಭವಾಯ ಶ್ರೀಗೋವಿಂದಾಯ ನಮೋ ನಮಃ ॥

ಎಂಬ ಮಂತ್ರದಿಂದ ಶ್ರೀಕೃಷ್ಣನನ್ನು ವಿಶೇಷ ರೀತಿಯಲ್ಲಿ ಪೂಜಿಸಬೇಕು. ಜೊತೆಗೆ ತಾರತಮ್ಯದ ಅನುಸಂಧಾನದಿಂದ ಬಲರಾಮ, ವಸುದೇವ, ದೇವಕೀ, ನಂದಗೋಪ, ಯಶೋದೆ ಮತ್ತು ಸುಭದ್ರೆ ಇವರನ್ನು ಪೂಜಿಸಬೇಕು. ಅಂದು ಮಧ್ಯರಾತ್ರಿ

---

೧. ಇದು ನಮ್ಮ ಶ್ರೀವ್ಯಾಸಮಧ್ವಸಂಶೋಧನ ಪ್ರತಿಷ್ಠಾನದಿಂದ ಪ್ರಕಾಶಿತವಾಗಿದೆ (೨೦೧೦).

ಚಂದ್ರೋದಯದ ಅನಂತರ ಶ್ರೀಕೃಷ್ಣನಿಗೆ ಅರ್ಘ್ಯವನ್ನು ಸಮರ್ಪಿಸಬೇಕು. ಚಂದ್ರನಿಗೂ ಅರ್ಘ್ಯವನ್ನಿತ್ತು ನಮಸ್ಕರಿಸಬೇಕು. ಅನಂತರ ಬ್ರಹ್ಮಚರ್ಯದಿಂದಿದ್ದು :

ವಿಶ್ವಾಯ ವಿಶ್ವಪತಯೇ ವಿಶ್ವೇಶ್ವರಾಯ
ವಿಶ್ವಸಂಭವಾಯ ಶ್ರೀಗೋವಿಂದಾಯ ನಮೋ ನಮಃ ॥

ಎಂಬ ಮಂತ್ರವನ್ನು ಪಠಿಸುತ್ತ ಮಲಗಬೇಕು. ಮಾರನೆಯ ದಿನ ನಿತ್ಯಾಹ್ನಿಕವನ್ನು ಪೂರೈಸಿ ಯಥಾಶಕ್ತಿ ಧನವನ್ನು ದಾನಮಾಡಿ :

ಸರ್ವಾಯ ಸರ್ವಪತಯೇ ಸರ್ವೇಶ್ವರಾಯ
ಸರ್ವಸಂಭವಾಯ ಶ್ರೀಗೋವಿಂದಾಯ ನಮೋ ನಮಃ ॥

ಎಂಬ ಮಂತ್ರವನ್ನು ಪಠಿಸಿ ಪಾರಣ ಮಾಡಬೇಕು.

ಅನಂತರ :

ಧರ್ಮಾಯ ಧರ್ಮಪತಯೇ ಧರ್ಮೇಶ್ವರಾಯ
ಧರ್ಮಸಂಭವಾಯ ಶ್ರೀಗೋವಿಂದಾಯ ನಮೋ ನಮಃ ॥

ಎಂಬ ಮಂತ್ರದಿಂದ ವ್ರತಸಮಾಪ್ತಿ ಮಾಡಬೇಕು.

ಇಂತಹ ಅಪೂರ್ವ ವ್ರತದ ವಿಧಿವಿಧಾನಗಳನ್ನು ಹೀಗೆ ನಿರೂಪಿಸಿದ ಆಚಾರ್ಯರು ಶ್ರೀಮಧ್ವಾಚಾರ್ಯರೊಬ್ಬರೇ. ಪ್ರತ್ಯೇಕ ಗ್ರಂಥವನ್ನು ಇದರ ನಿರೂಪಣೆಗಾಗಿ ಮೀಸಲಿಡುವ ಮೂಲಕ ಆಚಾರ್ಯರು ಇದರ ವಿಶೇಷ ಮಹತ್ತ್ವವನ್ನು ಸೂಚಿಸಿರುವರು. ಇಂತಹ ವೈಶಿಷ್ಟ್ಯಗಳು ಅವರನ್ನು ಲೋಕಮಾನ್ಯರನ್ನಾಗಿಸಿವೆ.

ಶ್ರೀಕೃಷ್ಣಾರ್ಘ್ಯ ಮಂತ್ರಃ

ಜಾತಃ ಕಂಸವಧಾರ್ಥಾಯ ಭೂಭಾರೋತ್ತಾರಣಾಯ ಚ ।
ಕೌರವಾಣಾಂ ವಿನಾಶಾಯ ದೈತ್ಯಾನಾಂ ನಿಧನಾಯ ಚ ॥

ಪಾಂಡವಾನಾಂ ಹಿತಾರ್ಥಾಯ ಧರ್ಮಸಂಸ್ಥಾಪನಾಯ ಚ ।
ಗೃಹಾಣಾರ್ಘ್ಯಂ ಮಯಾ ದತ್ತಂ ದೇವಕ್ಯಾ ಸಹಿತೋ ಹರೇ ॥

ಚಂದ್ರಾರ್ಘ್ಯ ಮಂತ್ರಃ :

ಕ್ಷೀರೋದಾರ್ಣವಸಂಭೂತ! ಅತ್ರಿನೇತ್ರಸಮುದ್ಭವ ।
ಗೃಹಾಣಾರ್ಘ್ಯಂ ಮಯಾ ದತ್ತಂ ರೋಹಿಣ್ಯಾ ಸಹಿತಃ ಶಶಿನ್ ॥

ಚಂದ್ರೋಪಸ್ಥಾನಮಂತ್ರಃ :

ಶಶಿನೇ ಚಂದ್ರದೇವಾಯ ಸೋಮದೇವಾಯ ಚೇಂದವೇ ।
ಮೃಗಿಣೇ ಸಿತಬಿಂಬಾಯ ಲೋಕದೀಪಾಯ ದೀಪಿನೇ ॥
ಶೀತದೀಧಿತಿಬಿಂಬಾಯ ತಾರಕಾಪತಯೇ ನಮಃ ।

ಜಯಂತೀನಿರ್ಣಯ ಮತ್ತು ಅದರ ವ್ಯಾಖ್ಯಾನಗಳಿಂದ ತಿಳಿದುಬರುವಂತೆ ಶ್ರೀಕೃಷ್ಣಜಯಂತೀ ವ್ರತದ ಒಟ್ಟು ವಿವರಗಳು ಹೀಗಿವೆ :

ಶ್ರೀಕೃಷ್ಣಜಯಂತಿ(ಶ್ರೀಕೃಷ್ಣಾಷ್ಟಮಿ)ಯು ಏಕಾದಶಿಯಂತೆ ಪರಮ ಪಾವನವಾದ ಮತ್ತೊಂದು ವ್ರತ. ಶ್ರೀಮದಾಚಾರ್ಯರು ಇದರ ಆಚರಣೆಯ ಮಹತ್ತ್ವ ಹಾಗೂ ವಿಧಿವಿಧಾನಗಳ ಬಗ್ಗೆ ಕೃಷ್ಣಾಮೃತಮಹಾರ್ಣವ ಎಂಬ ತಮ್ಮ ಕೃತಿಯಲ್ಲಿ ವಿವರಗಳನ್ನು ನೀಡಿರುವರು. ಶ್ರಾವಣಮಾಸದ ಕೃಷ್ಣಪಕ್ಷದ ಅಷ್ಟಮಿಯು ಭಗವಂತನಾದ ಶ್ರೀಕೃಷ್ಣನು ಅವತಾರ ಮಾಡಿದ ಪರಮ ಮಂಗಲಕರ ದಿನವಾಗಿದ್ದು 'ಶ್ರೀಕೃಷ್ಣಾಷ್ಟಮೀ' ಎಂದೇ ಪ್ರಸಿದ್ಧವಾಗಿದೆ. ಅಂದು ಚಂದ್ರೋದಯ (ಮಧ್ಯರಾತ್ರಿ) ಸಮಯದಲ್ಲಿ ರೋಹಿಣೀ-ನಕ್ಷತ್ರವೂ ಇದ್ದಲ್ಲಿ ಅದಕ್ಕೆ 'ಶ್ರೀಕೃಷ್ಣಜಯಂತಿ' ಎನ್ನುವರು. ಅವುಗಳ ಆಚರಣೆಯಲ್ಲಿ ಮಾತ್ರ ವಿಶೇಷ ವ್ಯತ್ಯಾಸ ಇಲ್ಲ.

ಅತ್ಯಂತ ಪುಣ್ಯಕರವೂ, ವಿಶೇಷಪಾಪಹರವೂ ಆದ ಈ ವ್ರತವು ಸಹ ಏಕಾದಶೀವ್ರತದಂತೆ ಉಪವಾಸವ್ರತವಾಗಿದೆ. ಅಂದು ಸಹ ನೀರು, ಆಹಾರ ಮೊದಲಾಗಿ ಏನನ್ನೂ ಎಷ್ಟು ಮಾತ್ರವೂ ಸ್ವೀಕರಿಸಕೂಡದು. ಬ್ರಾಹ್ಮಣಾದಿ ಸಕಲ ವರ್ಣದವರೂ, ಬ್ರಹ್ಮಚರ್ಯಾದಿಸಕಲಆಶ್ರಮದವರೂ(ಆಶೌಚ ಒದಗಿದಾಗಲೂ ಸಹ), ಸ್ತ್ರೀಯರೂ (ರಜಸ್ವಲೆಯರಾದಾಗಲೂ ಸಹ) ಮೊದಲಾಗಿ, ಸಕಲಮಾನವರೂ ಸಹ ಇದನ್ನು ತಪ್ಪದೆ ಪ್ರತಿವರ್ಷವೂ ಆಚರಿಸಲೇ ಬೇಕು; ಯಾವುದೇ ಕಾರಣಕ್ಕೂ ಯಾರಿಗೂ ಇದರಿಂದ ವಿನಾಯತಿ ಇಲ್ಲ(ಅಶಕ್ತರು ಮೊದಲಾದವರಿಗೆ ಮಾತ್ರ ಏಕಾದಶಿಗೆ ಹೇಳಿದ ನಿಯಮಗಳೇ ಅನ್ವಯಿಸುತ್ತವೆ).

ವಿಹಿತ ರೀತಿಯಲ್ಲಿ ನಿಷ್ಕಾಮನೆಯಿಂದ ಶ್ರೀಕೃಷ್ಣಪ್ರೀತ್ಯರ್ಥವಾಗಿ ಆಚರಿಸಿದಲ್ಲಿ ಇದು ಇಪ್ಪತ್ತುಕೋಟಿ ಏಕಾದಶಿಗಳಿಗೆ ಸಮನಾದ ಪುಣ್ಯವನ್ನೂ, ಆಚರಿಸದಿದ್ದಲ್ಲಿ ಇಪ್ಪತ್ತು-ಕೋಟಿ ಏಕಾದಶಿಗಳನ್ನು ತೊರೆದ ಮಹಾಪಾಪವನ್ನೂ ತಂದುಕೊಡುತ್ತದೆ. ಏಕಾದಶೀ ಅನುಷ್ಠಾನವನ್ನು ತಪ್ಪದೇ ಮಾಡುವವರಿಗೆ ಮಾತ್ರವೇ ಮೇಲೆ ಹೇಳಿದ ಪೂರ್ಣಫಲವು ಲಭಿಸುತ್ತದೆ ಎಂಬ ವಿಶೇಷಾಂಶವನ್ನು ಇಲ್ಲಿ ಗಮನಿಸಬೇಕು(ಉಳಿದವರಿಗೆ ಬರುವ ಪುಣ್ಯ ಸಾಮಾನ್ಯವಾದುದು ಎಂದು ಭಾವ).

ವ್ರತದ ದಿನದಂದು ಸಂಧ್ಯಾವಂದನಾದಿ ಇತರ ನಿತ್ಯಾಹ್ನಿಕವನ್ನು ಎಂದಿನಂತೆ ಸಕಾಲದಲ್ಲಿ ಪೂರೈಸಬೇಕು. ಅಂದು ಬ್ರಹ್ಮಯಜ್ಞ, ಔಪಾಸನ ಮತ್ತು ವೈಶ್ವದೇವಗಳನ್ನು ಆಚರಿಸಕೂಡದು; ಅಂದು ಬರುವ ಮಾತಾಪಿತೃಶ್ರಾದ್ಧಾದಿಗಳನ್ನು ಸಹ ಪಾರಣದಿನವೇ ಆಚರಿಸಬೇಕು.

ಶ್ರೀಕೃಷ್ಣಜಯಂತೀ ವ್ರತಕ್ಕೆ ಸ್ನಾನ, ಪೂಜೆ,ಶಯನ, ಪಾರಣ ಮತ್ತು ಸಮಾಪನಗಳಿಗೆ ಕ್ರಮವಾಗಿ 'ಯೋಗಾಯ', 'ಯಜ್ಞಾಯ', 'ವಿಶ್ವಾಯ', 'ಸರ್ವಾಯ', ಮತ್ತು

'ಧರ್ಮಾಯ' ಎಂಬ ವಿಶೇಷಮಂತ್ರಗಳು ವಿಹಿತವಾಗಿದ್ದು ಅವುಗಳಿಂದಲೇ ಆ ಕಾರ್ಯಗಳನ್ನು ಆಚರಿಸಬೇಕು. ಅಂದು ಸಂಜೆ ವಸುದೇವ, ದೇವಕಿ, ನಂದಗೋಪ, ಯಶೋದೆ, ಬಲರಾಮ, ಸುಭದ್ರೆಯರ ಸಮೇತವಾಗಿ (ಬಾಲ)ಕೃಷ್ಣನನ್ನು ವಿಹಿತವಾದ ವಿಶೇಷ ಮಂತ್ರಗಳಿಂದ ಪೂಜಿಸಬೇಕು. ಗೀತಾ, ವಿಷ್ಣುಸಹಸ್ರನಾಮ, ಭಾಗವತ, ಮಹಾಭಾರತ- ತಾತ್ಪರ್ಯನಿರ್ಣಯ ಮತ್ತು ಜಯಂತೀನಿರ್ಣಯ ಮೊದಲಾದ ಕೃತಿಗಳ ಪ್ರವಚನ ಪಾರಾಯಣಗಳನ್ನು ನಡೆಸಬೇಕು.

(ಮಧ್ಯರಾತ್ರಿಯಲ್ಲಿ) ಚಂದ್ರೋದಯವಾಗುತ್ತಿರುವಂತೆಯೇ ಪರಮಭಕ್ತಿಯಿಂದ ಶ್ರೀಕೃಷ್ಣನಿಗೆ ಅರ್ಘ್ಯವನ್ನೀಯಬೇಕು. ಅನಂತರ ಚಂದ್ರಾರ್ಘ್ಯವನ್ನಿತ್ತು ನಮಸ್ಕರಿಸಬೇಕು. ಅನಂತರ ತೀರ್ಥಪ್ರಾಶನ ಮಾಡಿ ಮಲಗಬೇಕು; ಶಕ್ತಿಯಿದ್ದವರು ಶ್ರೀಮದ್ಭಾಗವತಾದಿ ಗ್ರಂಥಗಳ ಶ್ರವಣ ಪಾರಾಯಣಾದಿಗಳನ್ನು ಮಾಡುತ್ತ ಜಾಗರಣ ಸಹ ಮಾಡಬಹುದು.

ಮಾರನೆಯ ದಿನ ಶ್ರೀಕೃಷ್ಣನನ್ನು ಮತ್ತೊಮ್ಮೆ ಪೂಜಿಸಿ, ಸಕಾಲದಲ್ಲಿ ಪಾರಣ ಮಾಡಿ ದಾನಾದಿಗಳನ್ನು ಕೊಟ್ಟು 'ಶ್ರೀಕೃಷ್ಣಾರ್ಪಣ'ವೆನ್ನಬೇಕು.

ಶ್ರೀಕೃಷ್ಣಾಷ್ಟಮಿ(ಜಯಂತಿ)ಯಂದು ಪೂರ್ಣವಾಗಿ ನಿರಾಹಾರವೇ ಶಾಸ್ತ್ರದಲ್ಲಿ ವಿಹಿತವಾಗಿದೆ. ಅಂದು ಮಧ್ಯರಾತ್ರಿಯಲ್ಲಿ ಅರ್ಘ್ಯಪ್ರದಾನದ ಅನಂತರ ಪಾರಣ ಮಾಡುವ ಸಂಪ್ರದಾಯ ಕೆಲವರಲ್ಲಿದೆಯಾದರೂ, ಅದು ಶ್ರೀಮದಾಚಾರ್ಯರ ಮಾತಿಗೂ, ಸಂಕಲ್ಪಮಂತ್ರಕ್ಕೂ ಸಕಲಮಾಧ್ವಪೀಠಗಳ ಆಚರಣೆಗೂ ವಿರುದ್ಧವಾದ್ದರಿಂದ ಮಾನ್ಯವೆನಿಸುವುದಿಲ್ಲ(ಹಾಗೆ ಮಧ್ಯರಾತ್ರಿ ಪಾರಣ ಮಾಡಲು, ಮಾಡದಿದ್ದಲ್ಲಿ ಪ್ರತ್ಯವಾಯ ಎನ್ನಲು ಯಾವ ಪ್ರಮಾಣವೂ ಇಲ್ಲ. ಅಂದು ಸಂಜೆ ಸೂರ್ಯಾಸ್ತದ ಅನಂತರ ಅಥವಾ ರಾತ್ರಿ ಒಂಭತ್ತು ಘಂಟೆಯ ವೇಳೆಗೇ ಅರ್ಘ್ಯವನ್ನೀಯುವ, ಫಲಾಹಾರ ಮಾಡುವ ಮತ್ತೆ ಕೆಲವರ ಸಂಪ್ರದಾಯಗಳು ಸಹ ಹೀಗೆಯೇ ಅಮಾನ್ಯವಾಗಿವೆ). ರಮಾಬ್ರಹ್ಮಾದಿನೈವೇದ್ಯ, ವೈಶ್ವದೇವಾದಿಗಳನ್ನು ಮಾಡದೆ ಹಾಗೇ ಮಧ್ಯರಾತ್ರಿ ಪಾರಣೆ ಮಾಡುವುದು ಅತ್ಯಂತ ನಿಷಿದ್ಧ ಎಂಬುದನ್ನು ಗಮನಿಸಬೇಕು.

ಶ್ರೀರಾಮನವಮೀ, ಶ್ರೀನರಸಿಂಹಜಯಂತೀ, ಮೊದಲಾದ ಇತರ ಭಗವದ-ವತಾರಗಳ ಜಯಂತಿಗಳನ್ನು ಸಹ ಅವಶ್ಯ ಆಚರಿಸಬೇಕು. ಆದರೆ ಕೃಷ್ಣಾಷ್ಟಮಿಯ ಹೊರತು ಇತರ ಯಾವ ಜಯಂತಿಗಳಂದೂ ಸಹ ಉಪವಾಸ ಕಡ್ಡಾಯವಲ್ಲ. ಆ ದಿನಗಳಲ್ಲಿ ಸೂಕ್ತಕಾಲದಲ್ಲಿ ಆಯಾ ಭಗವದ್ರೂಪಗಳಿಗೆ ಅರ್ಘ್ಯವನ್ನಿತ್ತು ಭೋಜನ ಮಾಡಬಹುದು.

ಹೀಗೆ ಶ್ರೀಕೃಷ್ಣಜಯಂತಿಯು ವಿಧ್ಯುಕ್ತವಾಗಿ ಆಚರಿಸಿದಲ್ಲಿ ಮಹಾ ಪುಣ್ಯಕರ-ವಾಗಿರುವಂತೆ, ಆಚರಿಸದಿದ್ದಲ್ಲಿ ಹುಲಿ, ಹಾವು, ಮೊದಲಾದ ಹೀನಯೋನಿಗಳಿಗೂ, ನರಕಾದ್ಯನರ್ಥಗಳಿಗೂ ಸಹ ಕಾರಣವಾಗಿ ಮಹಾಪಾಪಕರವೂ ಆಗುತ್ತದೆ.

ಜಯಂತೀ ಎಂದರೇನು ?

ರೋಹಿಣ್ಯಾಮರ್ಧರಾತ್ರೇ ತು ಯದಾ ಕಾಲಾಷ್ಟಮೀ ಭವೇತ್ ।
ಜಯಂತೀ ನಾಮ ಸಾ ಪ್ರೋಕ್ತಾ ಸರ್ವಪಾಪಪ್ರಣಾಶಿನೀ ॥

ಯಸ್ಯಾಂ ಜಾತೋ ಹರಿಃ ಸಾಕ್ಷಾನ್ನಿಶೀಥೇ ಭಗವಾನಜಃ ।
ತಸ್ಮಾತ್ ತದ್ದಿನಮತ್ಯಂತಂ ಪುಣ್ಯಂ ಪಾಪಹರಂ ಶುಭಮ್ ॥

- ಶ್ರೀಮದಾನಂದತೀರ್ಥಭಗವತ್ಪಾದಕೃತ 'ಜಯಂತೀನಿರ್ಣಯ' ಶ್ಲೋ ೧, ೨

ಶ್ರಾವಣಮಾಸದ ಕೃಷ್ಣಪಕ್ಷದ ಅಷ್ಟಮೀ – ಕೃಷ್ಣಾಷ್ಟಮೀ; ಅಂದು ಅರ್ಧರಾತ್ರಿಯ ಸಮಯದಲ್ಲಿ ರೋಹಿಣೀನಕ್ಷತ್ರವಿದ್ದಲ್ಲಿ ಅದು ಶ್ರೀಕೃಷ್ಣಜಯಂತಿ ಎನ್ನಿಸುವುದು. ಅದು ಸರ್ವಪಾಪಗಳನ್ನು ಸಂಪೂರ್ಣ ಪರಿಹರಿಸುವಂಥ ಪವಿತ್ರವಾದ ವ್ರತ; ಅಂದಿನ ಮಧ್ಯರಾತ್ರಿಯ ಸಮಯದಲ್ಲಿ ಪ್ರಾಕೃತದೇಹರಹಿತನಾದ ಷಡ್ಗುಣೈಶ್ವರ್ಯ-ಸಂಪನ್ನನಾದ ಶ್ರೀಹರಿಯು ಶ್ರೀಕೃಷ್ಣರೂಪದಿಂದ ಪ್ರಾದುರ್ಭವಿಸಿದನು; ಆದ್ದರಿಂದಲೇ ಆ ದಿನ ಅತ್ಯಂತ ಪುಣ್ಯಕರ, ಪಾಪಹರ ಮತ್ತು ಮಂಗಲಕರ.

ಮಹಾಭಾರತ ತಾತ್ಪರ್ಯನಿರ್ಣಯದಲ್ಲಿ ಶ್ರೀಕೃಷ್ಣಜಯಂತಿಯ ಉಲ್ಲೇಖ[೧]

'ಯಸ್ಮಿನಬ್ದೇ ಭಾದ್ರಪದೇ ಸ ಮಾಸೇ ಸಿಂಹಸ್ಥಯೋರ್ಗುರುರವ್ಯೋಃ ಪರೇಶಃ, ಉದೈತ್'

ಶ್ರೀಕೃಷ್ಣಜಯಂತಿಯಂದು ಉಪವಾಸ ಅವಶ್ಯ ಕರ್ತವ್ಯ

ತಸ್ಮಾತ್ ಸರ್ವೈರುಪೋಷ್ಯಾ ಸಾ ಜಯಂತೀ ನಾಮ ಸಾ ಸದಾ ।
ದ್ವಿಜಾತಿಭಿರ್ವಿಶೇಷೇಣ ತದ್ಭಕ್ತೈಶ್ಚ ವಿಶೇಷತಃ ॥[೨]

ಶ್ರೀಕೃಷ್ಣಜಯಂತಿಯಂದು ಎಲ್ಲರೂ ಉಪವಾಸವನ್ನು ಆಚರಿಸಲೇಬೇಕು. ದ್ವಿಜರೂ ಮತ್ತು ಭಕ್ತರೂ ಇನ್ನೂ ವಿಶೇಷರೀತಿಯಲ್ಲಿ ಉಪವಾಸಾದಿಗಳನ್ನು ಆಚರಿಸಬೇಕು[೩].

ವಿಹಿತಃ ಸರ್ವಜಾತೀನಾಮುಪೋಷಣವಿಧಿಃ ಪರಃ । – ಶಿವಪುರಾಣ

ಶ್ರೀಕೃಷ್ಣಜಯಂತಿ ಉಪವಾಸವೂ ಎಲ್ಲಾ ಜಾತಿಯವರಿಗೂ (ವೃದ್ಧಿಸೂತಕಾದಿ ಆಶೌಚ ಪ್ರಸಂಗ ಒದಗಿದಾಗಲೂ ಸಹ) ಕಡ್ಡಾಯವಾದುದು.

---

೧. ಇದರ ಬಗ್ಗೆ ವಿಶೇಷವಿವರಗಳನ್ನು ಶ್ರೀವಾದಿರಾಜಶ್ರೀಚರಣರ ಮಹಾಭಾರತತಾತ್ಪರ್ಯ-ನಿರ್ಣಯ ಭಾವಪ್ರಕಾಶಿಕೆಯಲ್ಲಿ ಕಾಣಬಹುದು.

೨. ಶ್ರೀಕೃಷ್ಣಜಯಂತೀ, ಕೃಷ್ಣಾಷ್ಟಮಿಗಳ ನಿರ್ಣಯವನ್ನು ಆರ್ಯಮಾನ ಪದ್ಧತಿಯಿಂದಲೇ ಮಾಡಬೇಕು ಎಂಬುದನ್ನು ಶ್ರೀಭಲಾರಿನರಸಿಂಹಾಚಾರ್ಯರು ತಿಳಿಸಿರುವರು :

ಅತ್ರ ಆರ್ಯಭಟ್ಟಶಾಸ್ತ್ರೇಣೈವ ಜ್ಯೋತಿರ್ವಿದ್ಭಿಃ ಅರ್ಧರಾತ್ರಾದಿವೇಧೋ ಜ್ಞೇಯಃ । 'ವಿಷ್ಣು-ಧರ್ಮೇಷು ಯೋಽಧಿಕಃ' ಇತ್ಯುಕ್ತೇಃ । – ಸ್ಮೃತ್ಯರ್ಥಸಾಗರ

೩. ಇಲ್ಲಿಯ 'ಉಪವಾಸ'ದ ವಿಧಿವಿಧಾನಗಳು ಏಕಾದಶೀವ್ರತಕ್ಕೆ ವಿಹಿತವಾಗಿರುವಂತೆ 'ನಿರಾಹಾರ' ಮೊದಲಾದವುಗಳು ಎಂದೇ ಭಾವ.

ಪಾರಣಕಾಲದ ಬಗ್ಗೆ ಸಂಪ್ರದಾಯಭೇದವಿದೆ. ಕೆಲವರು ತಿಥಿನಕ್ಷತ್ರಗಳೆರಡೂ ಕಳೆದ ಮೇಲೆ, ಮತ್ತೆ ಕೆಲವರು ಮಾರನೇದಿನ ಪ್ರಾತಃಕಾಲದಲ್ಲಿ ಉತ್ಸವ ಪೂರೈಸಿದ ಮೇಲೆ ಪಾರಣ ಮಾಡುವರು; ಬಾಲರೂ, ವೃದ್ಧರೂ, ರೋಗಿಗಳೂ ಮೊದಲಾದ ಅಶಕ್ತರು ಮಾತ್ರ [1]ಪ್ರಾತಃಕಾಲದಲ್ಲೇ ಪಾರಣ ಮಾಡಬಹುದು ಎಂಬ ವಾಕ್ಯಗಳೂ ಉಂಟು.

ಕೃಷ್ಣಾಷ್ಟಮಿಯಂದು ಅರ್ಘ್ಯಪ್ರದಾನದ ಅನಂತರ ಕೆಲವರು ತಮ್ಮ ಸಂಪ್ರದಾಯ ಎಂಬುದಾಗಿ ಫಲಾಹಾರ ಮಾಡುವುದುಂಟು; ಅಂತಹ ಸಂಪ್ರದಾಯವನ್ನು ಶ್ರೀಸತ್ಯಪರಾಯಣತೀರ್ಥರು ಉಗ್ರವಾಗಿ ಖಂಡಿಸಿರುವರು:

.... ಅಹಮಪಿ ಸಂಪ್ರದಾಯಪ್ರವರ್ತಕ ಇತಿ ಲೋಕಾನ್ ವಂಚಿತುಮಿತಿ ಯಾವತ್ । ಅಪ್ರಾಮಾಣಿಕಂ ಪ್ರಮಾಣವಿರುದ್ಧಮಪಿ ತದ್ದಿನೇ ಕೃಷ್ಣಪ್ರಾದುರ್ಭಾವದಿನೇ ಕೃಷ್ಣಪೂಜಾನಂತರಂ ಉಪಹಾರಾದಿಕಂ ಸ್ವಯಂ ಭುಂಕ್ತೇ । ಸ್ವಯಂ ಕೃತ್ವಾ ಚ ಭೋಜನಂ ಸ್ವಾನುಸಾರಿಣಃ ಭೋಜಯತಿ ಯಃ ಸಃ ಪೂಯಶೋಣಿತಮತ್ತಿ । ತದನುಸಾರ್ಯಪಿ ಪೂಯಶೋಣಿತಮತ್ತಿ । ಪೂಯಶೋಣಿತವಿಶಿಷ್ಟಂ ತದ್ರೂಪಂ ವಾ ನರಕಾದ್ಯನರ್ಥಂ ಪ್ರಾಪ್ನೋತೀತ್ಯರ್ಥಃ॥

– ಜಯಂತೀಕಲ್ಪಟೀಕಾ

''(ಕೆಲವರು) ನಾನೂ ಸಹ ಸಂಪ್ರದಾಯಪ್ರವರ್ತಕ ಎಂದು ಜನರನ್ನು ವಂಚಿಸುವರು; ಶ್ರೀಕೃಷ್ಣಜಯಂತಿಯಂದು ಯಾವುದೇ ಪ್ರಮಾಣವಿಲ್ಲದಿದ್ದರೂ, ಪ್ರಮಾಣಗಳಿಗೆ ವಿರುದ್ಧವಾಗಿದ್ದರೂ ಶ್ರೀಕೃಷ್ಣಪೂಜೆಯ ಅನಂತರ ಉಪಹಾರಾದಿಗಳನ್ನು ಸ್ವತಃ ತಿನ್ನುವರು; ಹಾಗೆ ತಾವು ತಿನ್ನುವುದಲ್ಲದೆ, ತಮ್ಮ ಅನುಯಾಯಿಗಳಿಗೂ ತಿನ್ನಿಸಿಬಿಡುವರು; ಅಂತಹವರು ಕೀವುರಕ್ತಗಳನ್ನು ತಿನ್ನುವವರಾಗುವರು; ಅವರನ್ನು ಅನುಸರಿಸುವವರೂ ಸಹ ರಕ್ತಕೀವುಗಳನ್ನು ತಿನ್ನುವರು; ರಕ್ತಕೀವುಗಳಿಂದ ಕೂಡಿದ ಅಥವಾ ಅದೇ ಹೆಸರಿನ ನರಕಾದ್ಯನರ್ಥಗಳನ್ನು ಹೊಂದುವರು'' ಎಂದು ಭಾವ.

ಜಯಂತೀನಿರ್ಣಯಕ್ಕೆ ಶ್ರೀವಾಗೀಶತೀರ್ಥರ ಶಿಷ್ಯರಾದ ಶ್ರೀರಾಮಚಂದ್ರತೀರ್ಥರು ಹಾಗೂ ಶ್ರೀಸತ್ಯಸಂತುಷ್ಟತೀರ್ಥರ ಶಿಷ್ಯರಾದ ಶ್ರೀಸತ್ಯಪರಾಯಣತೀರ್ಥರು ವ್ಯಾಖ್ಯಾನಗಳನ್ನು ರಚಿಸಿದ್ದು, ಅವುಗಳು ನನ್ನ ಸಂಗ್ರಹದಲ್ಲಿ ಉಪಲಬ್ಧವಾಗಿವೆ[2].

★★★★

---

೧. ಉತ್ಸವಾಂತೇ ಪಾರಣಂ ತ್ವಶಕ್ಯವಿಷಯಂ । ತಥಾ 'ಯಾಮತ್ರಯಾದುಪರಿ ಚೇತ್ ಪ್ರಾತರೇವ ಹಿ ಪಾರಣಮ್' ಇತ್ಯಪಿ। – ಶ್ರೀಛಲಾರಿನರಸಿಂಹಾಚಾರ್ಯರು (ಸ್ಮೃತ್ಯರ್ಥಸಾಗರ)

ಬಾಲವೃದ್ಧಾತುರಶ್ರಾಂತಾದ್ಯಶಕ್ತವಿಷಯೇ ತು 'ಯಾಮತ್ರಯಾದುಪರಿ ಚೇತ್ ಪ್ರಾತರೇವ ಹಿ ಪಾರಣಮ್' ಇತಿ, ತಥಾ 'ಉಪವಾಸೇಷು ಸರ್ವೇಷು ಪೂರ್ವಾಹ್ಣೇ ಪಾರಣಂ ಸ್ಮೃತಮ್' ಇತಿ ವಾ, ತಿಥಿನಕ್ಷತ್ರಯೋರುಭಯೋರನುವರ್ತಮಾನಯೋಃ ಪರೇದ್ಯುರ್ದೇವಂ ಸಂಪೂಜ್ಯ ಪ್ರಾತಃ ಕ್ರಿಯಮಾಣಂ ಪಾರಣಂ ನ ದುಷ್ಯತಿ। – ಶ್ರೀ ಕೃಷ್ಣಾಚಾರ್ಯರು (ಶ್ರೀಸ್ಮೃತಿಮುಕ್ತಾವಲೀ)

೨. ಇವುಗಳನ್ನು ಒಟ್ಟಾಗಿ ನಮ್ಮ ಶ್ರೀವ್ಯಾಸಮಧ್ವಸಂಶೋಧನಪ್ರತಿಷ್ಠಾನವು ಪ್ರಕಾಶನಪಡಿಸಿದೆ (೨೦೧೦).

ಸ್ತೋತ್ರಗ್ರಂಥಗಳು

೧. ನಖಸ್ತುತಿ

ಶ್ರೀಮದಾಚಾರ್ಯರ ಕೃತಿಗಳಲ್ಲಿ ಸ್ತೋತ್ರಕೃತಿಗಳು ಎರಡು: ದ್ವಾದಶಸ್ತೋತ್ರ ಮತ್ತು ನಖಸ್ತುತಿ.

ನಖಸ್ತುತಿಯು ಎರಡೇ ಶ್ಲೋಕಗಳ ಪುಟ್ಟಕೃತಿ. ನರಸಿಂಹನಖಸ್ತುತಿ ಅಥವಾ ನಖಸ್ತುತಿ ಎಂಬುದಾಗಿ ಇದು ಪ್ರಸಿದ್ಧ. ನೈವೇದ್ಯ ಸಮರ್ಪಣೆಯ ಸಮಯದಲ್ಲಿ ಒಮ್ಮೆ ಆಚಾರ್ಯರ ರೂಪತ್ರಯಗಳನ್ನು ದರ್ಶನ ಮಾಡುವ ಭಾಗ್ಯ ತ್ರಿವಿಕ್ರಮಪಂಡಿತರದಾಯಿತು. ಆಗ ಅವರ ಮುಖದಿಂದ ಹೊರಹೊಮ್ಮಿದ ರಚನೆ ಮಾಧ್ವರ ನಿತ್ಯಪಠ್ಯ ಅಮರಕೃತಿ 'ವಾಯುಸ್ತುತಿ'. ಅದನ್ನು ಅವಲೋಕಿಸಿದ ಆಚಾರ್ಯರು ಅದಕ್ಕೆ ಮಂಗಲರೂಪವಾಗಿ ಈ ನಖಸ್ತುತಿಯನ್ನು ಅನುಗ್ರಹಸಿದರಂತೆ; ವಾಯುಸ್ತುತಿಯ ಆದ್ಯಂತದಲ್ಲಿ ಇದನ್ನು ಪಠಿಸುವ ಸಂಪ್ರದಾಯ ಇಂದಿಗೂ ಉಂಟು :

ಛಲಾರಿಶೇಷಾಚಾರ್ಯರು ತಿಳಿಸಿರುವಂತೆ ಹರಿವಾಯುಸ್ತುತಿಯ ರಚನೆಯ ಹಿನ್ನೆಲೆ ಹೀಗಿದೆ : ಒಮ್ಮೆ ತ್ರಿವಿಕ್ರಮಪಂಡಿತಾಚಾರ್ಯರು ಶ್ರೀಮಧ್ವಾಚಾರ್ಯರೊಡನೆ ಬದರಿಕಾಶ್ರಮಕ್ಕೆ ತೆರಳಿದ್ದಾಗ ಅಲ್ಲಿಯ ದೇವಾಲಯದಲ್ಲಿ ಶ್ರೀಮಧ್ವಾಚಾರ್ಯರು ಶ್ರೀನಾರಾಯಣದೇವರನ್ನು ಪೂಜಿಸುತ್ತಿದ್ದಾಗ ಕುತೂಹಲದಿಂದ ತ್ರಿವಿಕ್ರಮ ಪಂಡಿತಾಚಾರ್ಯರು ಕವಾಟದ ಸಂದಿನಿಂದ ಇಣುಕಿದರು. ಆಗ ಶ್ರೀಮಧ್ವರೂಪದಲ್ಲಿ ಶ್ರೀವಾಯುದೇವರ ಮೂಲರೂಪವನ್ನೂ ಕಾಣುವ ಸುಯೋಗ ಅವರಿಗೆ ದೊರಕಿತು. ಆ ಕ್ಷಣದಲ್ಲಿ ರಚಿತವಾದ ಸ್ತುತಿಯೇ ಈ ವಾಯುಸ್ತುತಿ. ಬಳಿಕ ಅವರ ಪ್ರಾರ್ಥನೆಯಂತೆ ಶ್ರೀಮಧ್ವಾಚಾರ್ಯರು ಶ್ರೀವಾಯುಸ್ತುತಿಗೆ ಸಕಲಾಭೀಷ್ಟದಾತೃತ್ವರೂಪವರವನ್ನು ಕರುಣಿಸಿದರು. ಅದೇ ಇಂದು ನಿತ್ಯ ಪಠ್ಯವಾಗುತ್ತಿರುವ ಈ ಅಪೂರ್ವ ಶ್ರೀಹರಿವಾಯುಸ್ತುತಿ:

> ಅತ್ರ ಕಿಲ ಕಥಾಂ ಕಥಯಂತಿ - ಕದಾಚಿತ್ ತ್ರಿವಿಕ್ರಮಪಂಡಿತಾಚಾರ್ಯಃ ಶ್ರೀಮಧ್ವಾಚಾರ್ಯೈಃ ಸಹ ಬದರಿಕಾಶ್ರಮಂ ಪ್ರತಿ ಜಗಾಮ । ತತ್ರ ದೇವಾಲಯಕಪಾಟಂ ಪಿಧಾಯ ನರನಾರಾಯಣಂ ಶ್ರೀಮಧ್ವಾಚಾರ್ಯೇ ಪೂಜಯತಿ ಸತಿ ಇದಾನೀಂ ಕಿಂ ಕುರ್ವಂತಿ ಶ್ರೀಮಧ್ವಾಚಾರ್ಯಾಃ? ಇತಿ ಜಿಜ್ಞಾಸಯಾ ಕಪಾಟವಿವರೇಣ ನಿರೀಕ್ಷಮಾಣಃ ಸನ್ ಜಾಂಬವಾನ್ ಶ್ರೀಕೃಷ್ಣರೂಪೇ ರಾಮಾವತಾರಮಿವ ಶ್ರೀಮಧ್ವರೂಪೇ ಹನುಮದಾಕಾರಂ ದೃಷ್ಟ್ವಾ ತದಾ ತೇಷಾಂ ವಾಯುತ್ವಂ ವಿಶ್ವಸ್ಯ ಮೂಲರೂಪಸ್ಯ ವಾಯೋಸ್ತದವತಾರಾಣಾಂ ಚ ಸ್ತುತಿಂ ಪ್ರಣೀನಾಯ ತಸ್ಯಾ ಲೋಕೇ ಖ್ಯಾತ್ಯರ್ಥಂ ಶ್ರೀಮಧ್ವಾಚಾರ್ಯಾಣಾಂ ಪ್ರದರ್ಶಯಿತ್ವಾ ವಾಯುಸ್ತುತಿ ಪುರಶ್ಚರಣಕಾರಿಣಾಂ ತತ್ತತ್ಕಾಮ್ಯಫಲಪ್ರದತ್ವರೂಪಂ ವರಂ ಪ್ರಾರ್ಥಯಾಮಾಸ । ತತಃ

ಶ್ರೀಮಧ್ವಾಚಾರ್ಯಾಃ ಸರ್ವಪಂಡಿತಪ್ರವರೇಣ ತ್ರಿವಿಕ್ರಮಪಂಡಿತಾಚಾರ್ಯೇಣ ಶಿಷ್ಯಭಾವೇನ ಪ್ರದರ್ಶಿತಂ ವಾಯುಸ್ತುತಿರೂಪಂ ಗ್ರಂಥಂ ದೃಷ್ಟ್ವಾ ಪ್ರಸನ್ನಾಃ ಏಕೈಕ ಶ್ಲೋಕಸ್ಯೈಕೈಕಾಭೀಷ್ಟಪ್ರದತ್ವರೂಪಂ ವರಂ ದತ್ವಾ ವಿಷ್ಣುಸ್ತುತಿಂ ವಿನಾ ಕೇವಲಮಾತ್ಮಸ್ತುತಿಮಸಹಮಾನಾಃ ಸರ್ವಾನಿಷ್ಟನಿವರ್ತಕಶ್ರೀನೃಸಿಂಹಸ್ತುತಿಪ್ರತಿ-ಪಾದಕಂ ಶ್ಲೋಕದ್ವಯಂ ವಿರಚ್ಯ ..

ಇದರ ಮೊದಲ ಶ್ಲೋಕದಲ್ಲಿ ನರಸಿಂಹದೇವರ ನಖಗಳ ಸ್ತುತಿ ಇರುವುದರಿಂದ ನಖಸ್ತುತಿ ಎಂಬ ಹೆಸರು ಇದಕ್ಕೆ ಅನ್ವರ್ಥಕವಾಗಿದೆ. ನರಸಿಂಹದೇವರ ನಖಗಳ ಸ್ತೋತ್ರದ ಈ ಶ್ಲೋಕದಲ್ಲಿ ಪೂರ್ವಾರ್ಧ ಶಾರ್ದೂಲವಿಕ್ರೀಡಿತ ವೃತ್ತದಲ್ಲಿದ್ದು, ಉತ್ತರಾರ್ಧ ಸ್ರಗ್ಧರಾವೃತ್ತದಲ್ಲಿದೆ. ಹೀಗೆ ಒಂದೇ ಶ್ಲೋಕದಲ್ಲಿ ಎರಡು ಬೇರೆ ಬೇರೆ ವೃತ್ತಗಳ ಮಿಶ್ರಣ ಸಂಸ್ಕೃತದಲ್ಲಿ ಅಪೂರ್ವ. ಮೇಲೆ ಸಿಂಹದ ಮುಖ, ಕೆಳಗೆ ಹಿರಣ್ಯಕಶಿಪುವಿನ ಕರುಳಮಾಲೆ ಧರಿಸಿದ ಮಾನವಾಕಾರ - ಇದು ನರಸಿಂಹನ ಚಿತ್ರ. ಅದಕ್ಕೆ ಸರಿಹೊಂದುವಂತೆ ಪೂರ್ವಾರ್ಧದಲ್ಲಿ ಶಾರ್ದೂಲವಿಕ್ರೀಡಿತ, ಉತ್ತರಾರ್ಧದಲ್ಲಿ ಸ್ರಗ್ಧರಾ; ಅರ್ಥದಲ್ಲಿ ಇರಲಿ ಛಂದೋಗತಿಯಲ್ಲೂ ನರಸಿಂಹನ ಚಿತ್ರಮೂಡಿಸುವ ಅದ್ಭುತ ರಚನೆ ಇದು.

ಆಚಾರ್ಯರ ಪ್ರತಿಯೊಂದು ರಚನೆಯೂ ಹೀಗೆ ಅದ್ಭುತ, ಅಪೂರ್ವ, ಸಾರ್ಥಕ, ಉದ್ಬೋಧಕ.

ಉತ್ತರಾರ್ಧದಲ್ಲಿ ನಖಗಳ ಪ್ರಸ್ತಾಪವಿಲ್ಲ, ಆದ್ದರಿಂದ ಅದು ನಖಸ್ತುತಿಯ ಭಾಗವಲ್ಲ ಎಂಬ ವಾದ ಕೆಲವರದು. ಆದರೆ ಪ್ರಾಚೀನ ತಾಡವಾಲೆ ಪ್ರತಿಗಳಲ್ಲೂ ಎರಡು ಶ್ಲೋಕಗಳೂ ಒಟ್ಟಾಗಿಯೇ ಇವೆ. ಅನೇಕ ಪ್ರಾಚೀನರು ಇವೆರಡನ್ನೂ ಒಟ್ಟಾಗಿಯೇ ವ್ಯಾಖ್ಯಾನಿಸಿರುವರು; ಒಟ್ಟಾಗಿಯೇ ಪಠಿಸುವ ಸಂಪ್ರದಾಯವೂ ಉಂಟು; ಎಂದ ಮೇಲೆ ಇಂತಹ ಗೊಂದಲಕ್ಕೆ ಅವಕಾಶವಿಲ್ಲ. ಭಗವಂತನಂತೆ ಅವನಿಗೆ ರೂಪ ಅವಯವ ಮೊದಲಾದ ಎಲ್ಲವೂ ಅಷ್ಟೇ ಪರಿಪೂರ್ಣ; ಅವನು ಸ್ವಗತಭೇದವಿವರ್ಜಿತ ಎಂಬ ಮಧ್ವಸಿದ್ಧಾಂತದ ಪ್ರಮೇಯರಹಸ್ಯ ಬಲ್ಲವರಿಗೆ ಇದೇನೂ ಸಮಸ್ಯೆಯಲ್ಲ. ಲಕ್ಷ್ಮೀಕಾಂತ ಎಂಬುದೆ ನಖಗಳಿಗೆ ಸಂಬೋಧನೆ. ಅವೂ ಲಕ್ಷ್ಮೀಕಾಂತ; ನಖಗಳೂ ಪರಿಪೂರ್ಣವೇ ಆಗಿರುವುದರಿಂದ.

ಲಕ್ಷ್ಮೀಕಾಂತ ಎಂಬ ಶ್ಲೋಕದಲ್ಲಿ ಭಗವಂತನಿಗೆ ಸಾಟಿಯಾದ ವಸ್ತುವೇ ಇಲ್ಲದಿರುವಾಗ ಮಿಗಿಲಾದ ವಸ್ತು ಇರುವುದು ಎಂತು? ಸಪ್ತಮರಸವೇ ಇಲ್ಲದಿರುವಾಗ ಅಷ್ಟಮರಸವಿರಲು ಎಂತು ಸಾಧ್ಯ? ಎಂಬ ಅರ್ಥದೊಂದಿಗೆ ಭಗವಂತನಿಗೆ ಸಮವೂ ಇಲ್ಲ, ಮಿಗಿಲೂ ಇಲ್ಲ; ಅವನೇ ಅಷ್ಟಮರಸ ಎಂಬುದಾಗಿ ಛಾಂದೋಗ್ಯೋಪನಿಷತ್ತಿನಲ್ಲಿ ಪ್ರತಿಪಾದಿತನಾಗಿರು- ವುದರಿಂದ ಎಂಬ ಮತ್ತೊಂದು ಅರ್ಥವೂ ಇರುವುದು. ಲಕ್ಷ್ಮೀಕಾಂತ ಎಂಬಲ್ಲಿ ಲಕ್ಷ್ಮಿಯು ಅಕ್ಷರ ಪುರುಷಳಾಗಿರುವುದರಿಂದ ಅಕ್ಷರ ಪುರುಷೋತ್ತಮತ್ವವೂ; 'ಬ್ರಹ್ಮೇಶಶಕ್ರೋತ್ಕರಾಃ'. ಎಂಬಲ್ಲಿನ ಬ್ರಹ್ಮರುದ್ರ ಮೊದಲಾದವರು

ಕ್ಷರ ಪುರುಷರಾಗಿರುವುದರಿಂದ ಕ್ಷರಪುರುಷೋತ್ತಮತ್ವವೂ ನಿರೂಪಿತವಾಗಿದ್ದು ಒಟ್ಟಾಗಿ ಕ್ಷರಾಕ್ಷರಪುರುಷೋತ್ತಮತ್ವ ನಿರೂಪಿತವಾಗಿದೆ. ನರಸಿಂಹ ಎಂದರೆ ಪುರುಷೋತ್ತಮ ಎಂದೇ ಅರ್ಥ. (ನರ-ಪುರುಷ; ಸಿಂಹ - ಉತ್ತಮ) ಎಂದರೆ ಇದೂ ನರಸಿಂಹಸ್ತೋತ್ರ; ಅವನಿಂದ ಅಭಿನ್ನವಾದ ನಖದ ಸ್ತೋತ್ರ ಎರಡೂ ಆಗಿ ನರಸಿಂಹನಖಸ್ತುತಿಯೇ ಆಗಿದೆ.

ನಖಸ್ತುತಿಗೆ ಅನೇಕ ವ್ಯಾಖ್ಯಾನಗಳು ರಚಿತವಾಗಿದ್ದು ಅದರಲ್ಲಿ ಕೆಲವು ಹೀಗಿವೆ[೧] :

೧. ಶ್ರೀವಿಶ್ವಪತಿತೀರ್ಥರ ವ್ಯಾಖ್ಯಾನ
೨. ಶ್ರೀಬಿದರಳ್ಳಿ ಶ್ರೀನಿವಾಸತೀರ್ಥರ ಟೀಕಾ
೩. ಶ್ರೀಬಿದರಳ್ಳಿ ಶ್ರೀನಿವಾಸತೀರ್ಥರ ಪುತ್ರರಾದ ಶ್ರೀಬಿದರಳ್ಳಿ ವೆಂಕಟಪತ್ಯಾಚಾರ್ಯರ ಟೀಕೆ.
೪. ಭಲಾರಿಶೇಷಾಚಾರ್ಯರ ಮಂದಬೋಧಿನೀ ವ್ಯಾಖ್ಯಾನ.
೫. ಶ್ರೀಏರಿ ಅನಂತಾಚಾರ್ಯಸೂನು ಬಾಳಾಚಾರ್ಯರ ನಿಗೂಢಾರ್ಥಪ್ರಕಾಶಿನೀ ವ್ಯಾಖ್ಯಾನ
೬. ಶ್ರೀಸತ್ಯಪ್ರಿಯತೀರ್ಥರ ಶಿಷ್ಯ ಯಾಡ್ಕಿ ನರಸಿಂಹಾಚಾರ್ಯರ ವ್ಯಾಖ್ಯಾನ.

೨. ದ್ವಾದಶಸ್ತೋತ್ರ

ದ್ವಾದಶಸ್ತೋತ್ರವು ಹನ್ನೆರಡು ಸ್ತೋತ್ರ ಅಥವಾ ಅಧ್ಯಾಯಗಳ ಸ್ತೋತ್ರ ಕೃತಿ. ಮೊದಲ ಅಧ್ಯಾಯದಲ್ಲಿ ಶ್ರೀಹರಿಯ ಪಾದಾದಿಶಿರಃಪರ್ಯಂತ ವರ್ಣನೆಯೂ, ಎರಡನೆಯ ಅಧ್ಯಾಯದಲ್ಲಿ ಭಗವತ್ಸ್ವರೂಪದ ವಿವೇಚನೆಯೂ ಇವೆ. ಮೂರನೆಯ ಅಧ್ಯಾಯ ಒಂದು ಅಷ್ಟಕ. ಇದರಲ್ಲಿ ಸಾಧಕನಿಗೆ ಹರಿಯ ಪಾರಮ್ಯ, ಸ್ವಾತಂತ್ರ್ಯ, ಸರ್ವೋತ್ತಮತ್ವಗಳನ್ನು ಸಕಲ ಪರಮತಗಳ ನಿರಾಸಪೂರ್ವಕ ತಿಳಿಸಿ ಕರ್ತವ್ಯಕರ್ಮಾ-ಚರಣೆಯ ಉಪದೇಶವಿದೆ. ನಾಲ್ಕನೆಯ ಅಧ್ಯಾಯ ಮೂರನೆಯ ಅಧ್ಯಾಯದ ಮುಂದುವರೆದ ಭಾಗದಂತಿರುವ ಮತ್ತೊಂದು ಅಷ್ಟಕ. ಐದನೆಯ ಅಧ್ಯಾಯ ಕೇಶವಾದಿ ದ್ವಾದಶಮೂರ್ತಿಗಳ ಸ್ತುತಿ. ಆರನೆಯ ಅಧ್ಯಾಯವು ದಶಾವತಾರಸ್ತುತಿ. ಏಳನೆಯ ಅಧ್ಯಾಯವು ಶ್ರೀಲಕ್ಷ್ಮೀಪತಿತ್ವೇನ ಭಗವತ್ಸ್ತುತಿ; ಇದು ಶ್ರೀಸ್ತುತಿ ಎಂದೇ ಕೆಲವು ಪಾಠಗಳಲ್ಲಿ ಪ್ರಸಿದ್ಧ. ಎಂಟನೆಯ ಅಧ್ಯಾಯ ಭಗವಂತನ ಅಗಾಧ ಮಹಿಮೆಯನ್ನು ಬಣ್ಣಿಸುತ್ತ ಅವನನ್ನು ಒಲಿಸುವ ದೃಢ ಸಂಕಲ್ಪದ ಬಗೆಯನ್ನು ಸೂಚಿಸುವುದು. ಒಂಭತ್ತನೆಯ ಅಧ್ಯಾಯವು ಮತ್ತೊಂದು ರೀತಿಯ ದಶಾವತಾರ ಸ್ತೋತ್ರ. ಹತ್ತನೆಯ ಅಧ್ಯಾಯವು ಪುನಃ ಆಪಾದಮೌಳಿ ಪರ್ಯಂತ ಭಗವತ್ಸ್ತುತಿ. ಹನ್ನೊಂದನೆಯ

---

೧. ಇವುಗಳನ್ನು ಆಧರಿಸಿದ ನಖಸ್ತುತಿಯ ಅನುವಾದ ವಿವರಣೆಗಳನ್ನು ನಮ್ಮ ಪ್ರಕಾಶನದ 'ಶ್ರೀಹರಿವಾಯುಸ್ತುತಿ' ಅನುವಾದದಲ್ಲಿ ಕೊಡಲಾಗಿದೆ (೨೦೦೮).

ಅಧ್ಯಾಯ ಒಂದು ರೀತಿಯಲ್ಲಿ ಭಗವಂತನ ಪಾದರೂಪ ಏಕಾವಯವಸ್ತುತಿ; ಮತ್ತೊಂದು ರೀತಿಯಲ್ಲಿ ಭಗವತ್ಸ್ವರೂಪ ವರ್ಣನೆಯಾಗಿರುವ ಅಷ್ಟಕ. ಕೊನೆಯ ಅಧ್ಯಾಯ ಪುನಃ ಒಟ್ಟಾಗಿ ಭಗವತ್ಸ್ತುತಿ.

ದ್ವಾದಶಸ್ತೋತ್ರ ಸಂಸ್ಕೃತಸಾಹಿತ್ಯದಲ್ಲೇ ಒಂದು ಅಪೂರ್ವ ಸ್ತೋತ್ರ ಕೃತಿ. ಮೇಲ್ನೋಟಕ್ಕೇ ಇದರ ವೈವಿಧ್ಯ ಗಮನಸೆಳೆಯುತ್ತದೆ. ಅಧ್ಯಾಯರೂಪದಲ್ಲಿ ಹೀಗೆ ಪ್ರಸಿದ್ಧವಿರುವ ಮತ್ತೊಂದು ಸ್ತೋತ್ರಕೃತಿ ಪಂಚರಾತ್ರಾಂತರ್ಗತವಾದ ಜಿತಂತೇಸ್ತೋತ್ರ ಮಾತ್ರ; ಅದು ಬ್ರಹ್ಮಕೃತ; ಇದು ಭಾವೀಬ್ರಹ್ಮಕೃತ.

ಮೊದಲ ಹಾಗು ಹತ್ತನೆಯ ಅಧ್ಯಾಯಗಳಲ್ಲಿ ಬರುವ ಭಗವಂತನ ಆಪಾದಮೌಲಿಪರ್ಯಂತವರ್ಣನ ಭಾಗವತದಲ್ಲಿ ಬರುವ ಕಪಿಲಗೀತೆಯಲ್ಲಿನ ಭಗವದ್ಧ್ಯಾನ ಹಾಗೂ ದ್ವಿತೀಯಸ್ಕಂದದಲ್ಲಿನ ವಿರಾಡ್ರೂಪ ಚಿಂತನೆಗಳ ವಿವರಣೆ-ಯಂತಿದೆ. ಆ ಅರ್ಥದಲ್ಲಿ ಇವೂ ಭಾಗವತತಾತ್ಪರ್ಯವೇ ಆಗಿವೆ. ಪರಮಾತ್ಮನ ಪಾದಾದಿ ಅವಯವಗಳೂ ಪರಿಪೂರ್ಣ, ಹಾಗೂ ವಂದ್ಯ ಎಂಬ ಭವ್ಯ ಚಿತ್ರ ಇವುಗಳಲ್ಲಿದೆ.

ದ್ವಾದಶಸ್ತೋತ್ರವು ತನ್ನ ಹೆಸರಿನಿಂದಲೇ ದ್ವಾದಶಸ್ಕಂಧಗಳ ಭಾಗವತವನ್ನು ಉಲ್ಲೇಖಿಸುತ್ತದೆ. ಹನ್ನೆರಡು ಅಧ್ಯಾಯಗಳು ಹನ್ನೆರಡು ಸ್ಕಂದಗಳ ಭಾಗವತದ ಅನೇಕ ಭಾಗಗಳಿಗೆ ವಿವರಣೆಯಂತಿದ್ದು, ಸ್ತೋತ್ರರೂಪ ಭಾಗವತತಾತ್ಪರ್ಯನಿರ್ಣಯವಾಗಿದೆ. ಮೊದಲ ಅಧ್ಯಾಯದ ಕೊನೆಯ ಶ್ಲೋಕ :

> ಸಂತತಂ ಚಿಂತಯೇಽನಂತಮಂತಕಾಲೇ ವಿಶೇಷತಃ ।
> ನೈವೋದಾಪುರ್ಗೃಣಂತೋಽತಂ ಯದ್ಗುಣಾನಾಮಜಾದಯಃ ॥

- ಇದನ್ನು ಒಂದೇ ಶ್ಲೋಕದ ಭಾಗವತಸಾರವೆನ್ನಬಹುದು.

'ಕುರು ಭುಂಕ್ಷ್ವ ಚ' ಎಂಬ ಮೂರನೆಯ ಅಧ್ಯಾಯ ಭಗವದ್ಗೀತೆಯ ಭಾಷ್ಯರೂಪ-ವಾಗಿದ್ದು ಕರ್ಮಯೋಗದ ಸಾರವಾದರೆ, 'ಪುರುಷೋತ್ತಮ' ಎಂಬುದಾಗಿ ನಿರೂಪಿಸುತ್ತಾ, ಹದಿನೈದನೆಯ ಅಧ್ಯಾಯದ 'ಪುರುಷೋತ್ತಮಯೋಗ'ದ ಸಾರವಾಗಿದೆ. ಕೇಶವಾದಿ ರೂಪಗಳ ಸ್ತೋತ್ರ ಮಾಸಮೂರ್ತಿಯ ಸ್ತುತಿಯಾಗಿದ್ದರೆ, ಆರು ಮತ್ತು ಒಂಭತ್ತನೆಯ ಅಧ್ಯಾಯಗಳು ದಶಾವತಾರಸ್ತುತಿಯಾಗಿದ್ದು ಭಗವಂತನ ಸಕಲ ಅವತಾರ-ಗಳ ಚಿಂತನೆಗೆ ದಾರಿದೀಪದಂತಿವೆ. ಏಳನೆಯ ಅಧ್ಯಾಯ ಬ್ರಹ್ಮಾದಿಗಳ ಹಿರಿಮೆ, ಅವರ ಹಿರಿಮೆಯಲ್ಲಿ ಲಕ್ಷ್ಮೀ ಅನುಗ್ರಹದ ಪಾತ್ರ, ಮಹಾಲಕ್ಷ್ಮಿಗೂ ಶ್ರೀಹರಿಯ ಅನುಗ್ರಹದ ಅವಶ್ಯಕತೆ ಮೊದಲಾದ ಪ್ರಮೇಯಗಳನ್ನು ಹೃದಯಂಗಮವಾಗಿ ನಿರೂಪಿಸುತ್ತದೆ.

ಭಗವಂತನನ್ನು ಒಲಿಸುವ ಭಕ್ತನ ಕಾತರ, ಅವನ ಹೃದಯದಲ್ಲಿ ತುಂಬಿನಿಂತಿರುವ ಭಗವಂತನ ಭವ್ಯ ಚಿತ್ರದ ಅನುಸಂಧಾನ, ಅಂತಹ ಚಿಂತನೆಗೆ ಅರ್ಹವಾದ ಭಗವಂತನ ಅಪಾರ ಮಹತ್ತ್ವಗಳ ವಿವರ ಎಂಟನೆಯ ಅಧ್ಯಾಯದಲ್ಲಿ ಬಂದಿವೆ.

ಪ್ರತಿಯೊಂದು ಸ್ತೋತ್ರವೂ ವಿವಿಧ ರಾಗತಾಳಗಳಿಗೆ ಹೊಂದಬಲ್ಲ ಅಪೂರ್ವ ಗೇಯತೆಯನ್ನು ಹೊಂದಿರುವುದು ಇದರ ಮತ್ತೊಂದು ವಿಶೇಷ. ಸಂಸ್ಕೃತದಲ್ಲಿ 'ಗೀತಗೋವಿಂದ' ವನ್ನು ಬಿಟ್ಟರೆ ಬೇರಾವ ಕೃತಿಗೂ ಇಂತಹ ರಾಗತಾಳಗಳ ವೈವಿಧ್ಯ ಗೇಯತೆಗಳು ಇಲ್ಲ. ಗೀತಗೋವಿಂದವು ಕೃಷ್ಣಸ್ತೋತ್ರರೂಪ ಕೃತಿಯೇ ಆದರೂ ಅದರಲ್ಲಿನ ಆರಾಧನೆ ಮಧುರಭಕ್ತಿಗಷ್ಟೇ ಸೀಮಿತವಾಗಿದೆ; ಕೆಲವೊಮ್ಮೆ ಭಕ್ತಿಭಾವಕ್ಕಿಂತ ಶೃಂಗಾರಭಾವವೇ ಪ್ರಧಾನವಾಗಿ, ಶ್ರೋತೃಗಳಲ್ಲಿ ಭಕ್ತಿಭಾವಕ್ಕೆ ಬದಲಾಗಿ ಶೃಂಗಾರಪ್ರಜ್ಞೆಯೇ ಜಾಗೃತವಾಗುವ ಅಪಾಯವೂ ಇದೆ. ಆದರೆ ದ್ವಾದಶಸ್ತೋತ್ರವು ಪರಿಶುದ್ಧವಾದ ಭಕ್ತಿಕಾವ್ಯ. ಸರಳತೆಯೂ ಗೀತಗೋವಿಂದಕ್ಕಿಂತ ಮಿಗಿಲು. ಗೇಯತೆಯ ವೈವಿಧ್ಯವೂ ಅದಕ್ಕಿಂತ ಅಪಾರ. ಗೀತಗೋವಿಂದದಲ್ಲಿ ಭಗವಂತನ ಪ್ರಸ್ತಾಪವಿದ್ದರೂ ಅದು ದಾರ್ಶನಿಕ ಕೃತಿ ಅಲ್ಲ; ಕಾವ್ಯಮಾತ್ರ. ದ್ವಾದಶಸ್ತೋತ್ರ ಸ್ತೋತ್ರರೂಪದ ಕಾವ್ಯವಾಗಿದ್ದೂ ಮೂಲತಃ ಅಪೂರ್ವವಾದ ಶಾಸ್ತ್ರ. ಆದ್ದರಿಂದ ಇದು ತಾತ್ತ್ವಿಕವಾಗಿ ಹೃದಯವನ್ನು ತಟ್ಟುವಂತೆ ಅದು ತಟ್ಟಲಾರದು. ಅರ್ಥವೈಪುಲ್ಯಕ್ಕಂತೂ ದ್ವಾದಶಸ್ತೋತ್ರಕ್ಕೆ ಸಾಟಿಯಾದ ಮತ್ತೊಂದು ಸ್ತೋತ್ರಕೃತಿಯೇ ಇಲ್ಲ. ಅದಕ್ಕೆ ಅದೇ ಸಾಟಿ. ವೇದೋಪನಿಷತ್ತುಗಳ ದರ್ಶನದ ಸಾರಸರ್ವಸ್ವ ಇಲ್ಲಿ ಮಡುಗಟ್ಟಿ ನಿಂತಿದೆ.

ಹರಿದಾಸಸಾಹಿತ್ಯ ಯಾವುದೇ ಭಾಷೆಯಲ್ಲಿಯೂ ಇರದ ಕನ್ನಡದ ಅಪೂರ್ವ ದಾರ್ಶನಿಕ ಭಕ್ತಿಸಾಹಿತ್ಯ. ಆದರೆ ಅದರ ಹಿರಿಮೆ ಗರಿಮೆಗಳ ಮೂಲ ಸೆಲೆ ದ್ವಾದಶಸ್ತೋತ್ರ. ಹರಿದಾಸಸಾಹಿತ್ಯದಲ್ಲಿ ತುಂಬಿರುವ ರಾಗತಾಳಗಳ ವೈವಿಧ್ಯ ದ್ವಾದಶಸ್ತೋತ್ರದ ನೇರ ಸ್ಫೂರ್ತಿ. ದರ್ಶನವಂತೂ ಅದರದ್ದೇ. ಹರಿದಾಸಸಾಹಿತ್ಯದಲ್ಲಿ ಭಗವಂತನ ಅವಯವಗಳ ವರ್ಣನೆ, ಉಪದೇಶ, ಕೇಶವನಾಮ, ದಶಾವತಾರಸ್ತೋತ್ರ, ಲಕ್ಷ್ಮೀಬ್ರಹ್ಮಾದಿ ಇತರ ದೇವತೆಗಳ ಸ್ತುತಿ ಎಲ್ಲವೂ ದ್ವಾದಶಸ್ತೋತ್ರದ ಪ್ರೇರಣೆಯ ಫಲಶ್ರುತಿ; ಎಂದರೆ ಈ ಕೃತಿ ಅಂತಹ ಒಂದು ಅತ್ಯಂತ ಪ್ರಭಾವಿಯಾದ ಸಾಹಿತ್ಯಪ್ರಕಾರಕ್ಕೆ ಜನ್ಮನೀಡಿತು. 'ಪ್ರೀಣಯಾಮೋ ವಾಸುದೇವಂ'. 'ಶ್ರೀರ್ಯತ್ಕಟಾಕ್ಷಬಲವತ್ಯಜಿತಂ ನಮಾಮಿ', 'ಕರುಣಾಪೂರ್ಣ ವರಪ್ರದ ಚರಿತಂ ಜ್ಞಾಪಯ ಮೇ'. 'ಶುಭತಮಕಥಾಶಯ ಪರಮ ಸದೋದಿತ ಜಗದೇಕಕಾರಣ ರಾಮ ರಮಾರಮಣ', 'ಆನಂದಸ್ಯ ಪದಂ ವಂದೇ ಬ್ರಹ್ಮೇಂದ್ರಾದ್ಯಭಿವಂದಿತಂ' ಇವು ದಾಸಸಾಹಿತ್ಯದಲ್ಲಿ ಪಲ್ಲವಿಗಳಿಗೆ ಸ್ಫೂರ್ತಿಯಾದರೆ 'ಆನಂದತೀರ್ಥಪರಾನಂದವರದ' ಎಂಬುದು ಅಂಕಿತದ ಪರಿಕಲ್ಪನೆಗೆ ನಾಂದಿಯಾಗಿದೆ.

ಇಂತಹ ಸ್ತೋತ್ರರಚನೆಯನ್ನು ಆಚಾರ್ಯರು ಪ್ರಾರಂಭಿಸಿದ್ದು ಉಡುಪಿಯಲ್ಲಿ; ಅದನ್ನು ರಚಿಸಿ ಹಾಡುತ್ತಲೇ ಸಮುದ್ರತೀರದ ಬಳಿಗೆ ಶಿಷ್ಯರೊಂದಿಗೆ ಸಾಗಿದರು. ಆಗಲೇ ಹಡಗೊಂದು ಮುಳುಗುವಂತಾಗುವ ಘಟನೆ ನಡೆದದ್ದು. ಆಚಾರ್ಯರು ಹಡಗನ್ನು ಮುಳುಗದಂತೆ ಪಾಲಿಸಿದರು. ಹಡಗಿನ ಯಜಮಾನ ಆಚಾರ್ಯರಿಗೆ ಗೋಪೀಚಂದನಗಡ್ಡೆಯನ್ನು ಸಮರ್ಪಿಸಿದ. ಅದರಿಂದ ಶ್ರೀಕೃಷ್ಣ ಪ್ರಾದುರ್ಭವಿಸಿದ. ಆ ವೇಳೆಗೆ ದ್ವಾದಶಸ್ತೋತ್ರದ ಐದು ಅಧ್ಯಾಯಗಳು ಪೂರೈಸಿದ್ದವು. ಎಂದರೆ ದ್ವಾದಶಸ್ತೋತ್ರ

ಹಾಡಿದ ಮೇಲೆ ಅಲ್ಲ; ಹಾಡುವಾಗಲೇ ಶ್ರೀಕೃಷ್ಣ ಕಣ್ಣಿಗೆ ಕಾಣಿಸಿದ. ದ್ವಾದಶಸ್ತೋತ್ರದ ಮಹಿಮೆ ಇಂತಹದು. ಅದನ್ನು ಶ್ರದ್ಧೆಯಿಂದ ಹಾಡುವವನಿಗೆ ಭಗವದ್ದರ್ಶನ ಖಚಿತ ಎಂಬ ಸೂಚನೆ ಇಲ್ಲಿದೆ. ಆಚಾರ್ಯರು ಕೃಷ್ಣನನ್ನು ಕಂಡ ಸಂಭ್ರಮದಲ್ಲಿ ಆ ರೂಪವನ್ನೇ ವಿಶೇಷವಾಗಿ ಸ್ತುತಿಸಿ ದಶಾವತಾರಸ್ತುತಿ ರಚಿಸಿದರು. ಹೀಗೆಂದು ಅದರ ಪ್ರಸಿದ್ಧ ವ್ಯಾಖ್ಯಾತೃಗಳಾದ ಶ್ರೀವಿಶ್ವಪತಿತೀರ್ಥರು ಬರೆದಿರುವರು :

> "ತತ್ರ ಚೇತ್ಥಂ ಆಭಾಣಕಂ ವರ್ಣಯಂತಿ। ರೂಪ್ಯಪೀಠಪುರಾತ್ ಶ್ರೀಕೃಷ್ಣಾನಯನಾರ್ಥಂ ಪಶ್ಚಿಮಸಮುದ್ರಗಮನಸಮಯೇ 'ವಂದೇ ವಂದ್ಯಮ್' ಇತ್ಯಾದಿನಾ ಭಗವಂತಂ ಸ್ತುವನ್ನೇವ ಗತಃ ಶ್ರೀಮದಾನಂದತೀರ್ಥಮುನಿಃ ಸಮುದ್ರತೀರಂ ಗತಃ ಸನ್ ದ್ವಾರಕಾತಃ ಸಮಾಗತಂ ಶ್ರೀಕೃಷ್ಣಂ ದೃಷ್ಟ್ವಾ ಸಮನಂತರಮೇವ ದೇವಕೀನಂದನೇತ್ಯಾದಿನಾ ಆನಂದ-ಪೂರ್ಣೇತ್ಯಂತೇನ ಶ್ರೀಕೃಷ್ಣಂ ಸ್ತುತ್ವಾ ಅನಂತರಂ ಚ ಮತ್ಸ್ಯಕರೂಪೇತ್ಯಾದಿನಾ ದಶಾವತಾರಾತ್ಮಕತಯಾ ಚ ತಮೇವ ಸ್ತುತವಾನಿತಿ'।

ಇಂದ್ರದೇವರು ಶ್ರೀಮದಾಚಾರ್ಯರ ಬಳಿ ವೃಷಭರೂಪದಿಂದ ಸೇವಕರಾಗಿದ್ದು ಆಚಾರ್ಯರ ಗ್ರಂಥಭಂಡಾರವನ್ನು ಹೊರುತ್ತಿದ್ದರು. ಪಾಠಕಾಲದಲ್ಲಿ ಅವರ ಬಳಿಯೇ ಕುಳಿತು ಶ್ರವಣ ಮಾಡುತ್ತಿದ್ದರು; ತಮ್ಮ ಅಪೂರ್ವ ಗ್ರಂಥಗಳಿಗೆ ಈ ಎತ್ತು ವ್ಯಾಖ್ಯಾನ ರಚಿಸುವುದು ಎಂದು ಒಮ್ಮೆ ಶ್ರೀಮದಾಚಾರ್ಯರು ನುಡಿದಾಗ ಕೆಲವು ಮತ್ಸರಿಗಳು ಅದನ್ನು ಹಾವು ಕಡಿದು ಸಾಯುವಂತೆ ಶಪಿಸಿದರಂತೆ. ಹಾಗೆ ಹಾವು ಕಚ್ಚಿದಾಗ ಅದೂ ಸತ್ತು ಹೋಯಿತಂತೆ. ಆಗ ಶ್ರೀಮದಾಚಾರ್ಯರು ದ್ವಾದಶಸ್ತೋತ್ರವನ್ನು ಪಠಿಸಿ ಅದರಿಂದ ಅಭಿಮಂತ್ರಿತವಾದ ಜಲವನ್ನು ಆ ಎತ್ತಿಗೆ ಪ್ರೋಕ್ಷಿಸಿ ಅದನ್ನು ಪುನಃ ಬದುಕಿಸಿದರು. ಆ ಎತ್ತೇ ಮುಂದಿನ ಜನ್ಮದಲ್ಲಿ ಟೀಕಾಕೃತ್ಪಾದರೆನ್ನಿಸಿದ ಶ್ರೀಜಯ-ತೀರ್ಥರು ಎಂಬುದಾಗಿ ಜಯತೀರ್ಥವಿಜಯಗಳಲ್ಲಿ ಉಕ್ತವಾಗಿದೆ[೧].

ಈ ಮೂಲಕ ದ್ವಾದಶಸ್ತೋತ್ರದ ವಿಷಹರಸಾಮರ್ಥ್ಯವನ್ನು ಶ್ರೀಮದಾಚಾರ್ಯರು ಭಕ್ತವರ್ಗಕ್ಕೆ ತೋರಿಸಿರುವರು. ಅದರ ಸಂಕೇತವಾಗಿ ನೈವೇದ್ಯ ಸಮಯದಲ್ಲಿ ದ್ವಾದಶಸ್ತೋತ್ರವನ್ನು ಪಠಿಸುವ ಸಂಪ್ರದಾಯ ಇಂದೂ ಆಸ್ತಿಕರಲ್ಲಿದೆ.

---

೧. ಶೇಷಾದೀನಾಮಗಮ್ಯಂ ತವ ಮುಖಜನಿತಂ ಶಾಸ್ತ್ರಮಾಲೋಡ್ಯ ಕೇ ವಾ
ವ್ಯಾಖ್ಯಾಸ್ಯಂತೀತಿ ಪೃಷ್ಟಃ ಸುಖಮುನಿರವದತ್ ಸುಸ್ಮಿತಾಸ್ಯೋಽಥ ಶಿಷ್ಯೈಃ।
ವ್ಯಾಖ್ಯಾಸ್ಯತ್ಯೇಷ ಗೋರಾಡಿತಿ ಕುಪಿತತರಾ ಶಿಷ್ಯಕಾಃ ಶೇಪುರೇನಂ
ಗೋರಾಜೋಽಸಾವಯೋಗ್ಯಃ ಪ್ರವಚನಸಮಯೇ ಸರ್ಪದಷ್ಟೋ ಮ್ರಿಯೇತ ॥ ೩ ॥
ಇತ್ಥಂ ಶಪ್ತಂ ಸ್ವಶಿಷ್ಯೈರ್ವೃಷಭತನುಮಸೌ ಶ್ರೀಪತಿಃ ಕ್ಷೇಮದೋಽಯಂ
ದತ್ವಾ ಶಾಪಸ್ಯ ಮೋಕ್ಷಂ ಪ್ರವಚನಸಮಯೇ ದ್ವಾದಶಸ್ತೋತ್ರಪಾಠಮ್।
ದೃಷ್ಟ್ವಾ ತಂ ತಸ್ಯ ವಕ್ತ್ರೇ ಪ್ರಕಟಯದನಿಲಾಂಶೋ ಯತೀಂದ್ರೋಽತಿವಾಗ್ಮೀ
ಮಧ್ವೋ ಮಾನ್ಯಾರ್ಥವಾಕ್ಯೋ ಮಧುಮಥನಪದಂ ಮಾನಸೇ ಮಾನಯಾನಃ ॥ ೪ ॥
ಶ್ರುತ್ವಾ ತದೀಯಶಾಪಂ ದೃಷ್ಟ್ವಾ ಸರ್ಪೇಣ ದಷ್ಟಮಪಿ ವೃಷಭಮ್।
ಕೃತ್ವಾ ದ್ವಾದಶಪೂರ್ವಂ ಸ್ತೋತ್ರಂ ತಂ ತತ್ರ ಪಾಠಯಾಮಾಸ ॥ ೧೦ ॥

ಇದರ ಮೊದಲ ಅಕ್ಷರ ವ(ವಂದೇ); ಕೊನೆಯ ಅಕ್ಷರ ದ(ಆನಂದತೀರ್ಥ-ಪರಾನಂದವರದ). ವ ಎಂಬುದು ಅಮೃತಬೀಜ. ದ ಎಂದರೆ ಅದನ್ನು ಕೊಡುವವನು ಎಂದರ್ಥ. ಹೀಗೆ (ವಿಷವನ್ನು ಪರಿಹರಿಸಿ) ಅಮೃತವನ್ನು ನೀಡುವ ಅಪೂರ್ವ-ಕೃತಿಯೆಂಬ ಸೂಚನೆ ಈ ಆದ್ಯಂತ ಅಕ್ಷರಗಳ ಜೋಡಣೆಯಲ್ಲೇ ಅಡಗಿದೆ.

ದ್ವಾದಶಸ್ತೋತ್ರದ ಹಿರಿಮೆ

ದ್ವಾದಶಸ್ತೋತ್ರವು ಸ್ತೋತ್ರರಾಜ; ಸ್ತೋತ್ರಸಾಹಿತ್ಯದ ಮಕುಟಮಣಿ; ಇದರ ಹನ್ನೆರಡು ಸ್ತೋತ್ರ (ಅಥವಾ ಅಧ್ಯಾಯ)ಗಳ ಸಾರವನ್ನು ಕ್ರಮವಾಗಿ ಹೀಗೆ ಸಂಗ್ರಹಿಸಬಹುದು :

೧) ಭಗವಂತನ ಆಪಾದಮೌಲಿಪರ್ಯಂತ ವರ್ಣನೆ (ಹನ್ನೆರಡು ಶ್ಲೋಕಗಳು)

೨) ಭಗವತ್ತತ್ತ್ವದ ವೈಭವದ ಚಿತ್ರಣ (ಒಂಭತ್ತು ಶ್ಲೋಕಗಳು)

೩) ಹರ್ಯಷ್ಟಕ – ಉಪದೇಶ, ಸಿದ್ಧಾಂತಸಂಗ್ರಹ ಹಾಗೂ ವಿವಿಧದರ್ಶನಗಳ ಸಂಗ್ರಹವಿಮರ್ಶೆ (ಎಂಟು ಶ್ಲೋಕಗಳು).

೪) ಹರಿಸ್ತವನ – ಮೂರನೆಯ ಸ್ತೋತ್ರದ ಮುಂದುವರೆದ ಭಾಗ. ಭಗವಂತನು ಅನಂತಕಲ್ಯಾಣಗುಣಪರಿಪೂರ್ಣ, ಸಕಲದೋಷದೂರ, ಭಕ್ತಾರ್ತಿಹರ, ಪರಶಕ್ತಿ ಪರಮ ಮೊದಲಾದ ಅಪೂರ್ವ ವಿಷಯಗಳು ವಿಶಿಷ್ಟರೀತಿಯಲ್ಲಿ ಇದರಲ್ಲಿ ನಿರೂಪಿತವಾಗಿವೆ (ಎಂಟು ಶ್ಲೋಕಗಳು).

೫) ಹರಿಗೀತಿ – ಭಗವಂತನಾದ ವಾಸುದೇವನ ಕೇಶವಾದಿದ್ವಾದಶಮೂರ್ತಿಗಳ ಸ್ತೋತ್ರ. ಇದು ಮತ್ತೊಂದು ರೀತಿಯಲ್ಲಿ ದ್ವಾದಶಮಾಸಗಳ ನಿಯಾಮಕರೂಪಗಳ ಸ್ತುತಿಯೂ ಆಗಿದೆ (ಎಂಟು ಶ್ಲೋಕಗಳು; ಪ್ರಕಾರಾಂತರದಿಂದ ಹದಿನಾಲ್ಕು ಶ್ಲೋಕಗಳು).

೬) ಹರಿಗಾಥಾ – ಮತ್ಸ್ಯಾದಿದಶಾವತಾರಸ್ತೋತ್ರ (ಒಂಭತ್ತು ಶ್ಲೋಕಗಳು; ಪ್ರಕಾರಾಂತರದಿಂದ ಹನ್ನೆರಡು ಶ್ಲೋಕಗಳು).

೭) ಶ್ರೀಸ್ತುತಿ – ಮಹಾಲಕ್ಷ್ಮಿಯ ವಿಶ್ವಸೃಷ್ಟ್ಯಾದಿಕರ್ತೃತ್ವದ ವರ್ಣನೆ. ಬ್ರಹ್ಮ ರುದ್ರ, ಶೇಷ ಹಾಗೂ ಗರುಡರ ವಿಶೇಷ ಮಾಹಾತ್ಮ್ಯದ ನಿರೂಪಣೆ. ದೇವತೆಗಳು ಹಾಗೂ ಋಷಿಗಳ ಹಿರಿಮೆಯ ವರ್ಣನೆ. ಬ್ರಹ್ಮಾದಿಸಮಸ್ತದೇವತೆಗಳ ಸಮಸ್ತ ಸಾಮರ್ಥ್ಯವೂ ಲಕ್ಷ್ಮೀಕಟಾಕ್ಷದ ಫಲ. ಲಕ್ಷ್ಮಿಯ ಹಿರಿಮೆಗೆ ಭಗವತ್ಕಟಾಕ್ಷವೇ ಮೂಲ ಎಂಬ ಮಹಾಪ್ರಮೇಯವನ್ನು ಅತ್ಯಂತ ಅಪೂರ್ವಸಂವಿಧಾನದ ಮೂಲಕ ವರ್ಣಿಸುವ ಈ ಕೃತಿ

ಶ್ರೀಸ್ತುತಿ ಎಂದೇ ಪ್ರಸಿದ್ಧ. ಶ್ರೀರ್ಯತ್ಕಟಾಕ್ಷಬಲವತ್ಯಜಿತಂ ನಮಾಮಿ ಎಂಬುದು ಪ್ರತಿಶ್ಲೋಕದ ಚತುರ್ಥಚರಣವಾಗಿ ಬಂದಿದೆ. ಸ್ತೋತ್ರಪ್ರಪಂಚದಲ್ಲಿಯೇ ಅನುಪಮವೂ, ಅದ್ಭುತವೂ ಆದ ರಚನಾಸಂವಿಧಾನ ಇದರ ವೈಶಿಷ್ಟ್ಯ(ಒಂಭತ್ತು ಶ್ಲೋಕಗಳು).

೮) **ಪ್ರೀಣಯಾಮೋ ವಾಸುದೇವಂ ದೇವತಾಮಂಡಲಾಖಂಡಮಂಡನಮ್** – ಎಂಬ ಪಲ್ಲವಿಯ ದ್ವಾದಶಶ್ಲೋಕಗಳು ಇದರಲ್ಲಿವೆ. ಭಗವಂತನ ಸೃಷ್ಟಿಸ್ಥಿತ್ಯಾದಿಕರ್ತೃತ್ವ ಮೊದಲಾದ ವಿಶಿಷ್ಟವೈಭವವನ್ನು ಅತ್ಯಂತಪರಿಣಾಮಕಾರಿಯಾಗಿ ನಿರೂಪಿಸುವ ಇದರ ಗೇಯತೆ ಅಸ್ವಾದ್ಯಶವಾದುದು. ಪ್ರತಿಶ್ಲೋಕಗಳೂ ಆದ್ಯಂತ ಅನುಪ್ರಾಸಭರಿತವಾಗಿದ್ದು, ಇಲ್ಲಿಯ ಆದಿಪ್ರಾಸವಂತೂ ಹರಿದಾಸಸಾಹಿತ್ಯದ ವಿಶಿಷ್ಟಲಕ್ಷಣಗಳಲ್ಲೊಂದಾದ ಆದಿಪ್ರಾಸದ ಪರಿಕಲ್ಪನೆಗೆ ಮುಖ್ಯಸ್ಫೂರ್ತಿ ಎನ್ನಬಹುದು.

೯) **ಶುಭತಮಕಥಾಶಯ ಪರಮ ಸದೋದಿತ ಜಗದೇಕಕಾರಣ ರಾಮ ರಮಾರಮಣ** – ಎಂಬುದಾಗಿ ಪ್ರತಿಶ್ಲೋಕದ ಉತ್ತರಾರ್ಧವು ಪಲ್ಲವಿಯಂತಿರುವುದು ಈ ಸ್ತೋತ್ರದ ವಿಶೇಷ. ಇದರಲ್ಲಿ ಭಗವತ್ಸ್ವರೂಪದ ಚಿತ್ರಣದೊಂದಿಗೆ ದಶಾವತಾರಗಳ ಸ್ತುತಿ ಬೇರೊಂದು ಬಗೆಯಲ್ಲಿ ಮೂಡಿಬಂದಿದೆ. ಒಂದರ್ಥದಲ್ಲಿ ಇದು ಅವರ ಆರನೆಯ ಅಧ್ಯಾಯಕ್ಕೆ ವಿವರಣರೂಪವೂ ಆಗಿದೆ (ಹದಿನಾರು ಶ್ಲೋಕಗಳು).

೧೦)**ಹರಿಗಾಥಾ** – ಆರನೆಯ ಸ್ತೋತ್ರದಂತೆ ಇದೂ ಸಹ ಹರಿಗಾಥಾಸ್ತೋತ್ರವೇ ಆಗಿದೆ. **ಕರುಣಾಪೂರ್ಣ ವರಪ್ರದಚರಿತಂ ಜ್ಞಾಪಯ ಮೇ ತೇ** – ಎಂಬ ಉತ್ತರಾರ್ಧವನ್ನು ಪ್ರತಿಶ್ಲೋಕಕ್ಕೂ ಪಲ್ಲವಿಯಂತೆ ಹೊಂದಿರುವ ಈ ಕೃತಿ ಮತ್ತೊಂದು ಬಗೆಯಲ್ಲಿ ಭಗವಂತನ ಆಪಾದಮೌಲಿಪರ್ಯಂತ ವರ್ಣನೆಯಾಗಿದ್ದು, ಪ್ರಥಮಸ್ತೋತ್ರಕ್ಕೆ ವಿವರಣರೂಪವಾಗಿದೆ (ಹತ್ತೊಂಭತ್ತು ಶ್ಲೋಕಗಳು).

೧೧) **ಆನಂದಸ್ಯ ಪದಂ ವಂದೇ ಬ್ರಹ್ಮೇಂದ್ರಾದ್ಯಭಿವಂದಿತಮ್** – ಒಂಭತ್ತು ಹಾಗೂ ಹತ್ತನೆಯ ಸ್ತೋತ್ರಗಳಲ್ಲಿರುವಂತೆ, ಪ್ರತಿಶ್ಲೋಕಕ್ಕೂ ಇಲ್ಲಿ ಉತ್ತರಾರ್ಧಪಲ್ಲವಿಯಂತೆ ಪುನರಾವರ್ತಿತವಾಗಿದೆ. ಅವರ ನಖಸ್ತುತಿ ಶ್ರೀನರಸಿಂಹನ ನಖಗಳ ಸ್ತುತಿಯಾಗಿರುವಂತೆ ಈ ಸ್ತುತಿ ಭಗವಂತನ ಪಾದದ ಸ್ತೋತ್ರವಾಗಿದೆ. ಮತ್ತೊಂದು ರೀತಿಯಲ್ಲಿ ಇದು ಎರಡನೆಯ ಅಧ್ಯಾಯದಂತೆ ಭಗವತ್ಸ್ವರೂಪವರ್ಣನೆಯೂ ಆಗಿದ್ದು, ತತ್ತ್ವಚಿಂತನೆಗೆ ಅಪೂರ್ವ ನೆರವನ್ನು ನೀಡುತ್ತದೆ (ಒಂಭತ್ತು ಶ್ಲೋಕಗಳು).

೧೨) **ಆನಂದತೀರ್ಥಪರಾನಂದವರದ** – (ಏಳು ಶ್ಲೋಕಗಳು; ಪಾಠಾಂತರದಂತೆ ಒಂಭತ್ತು ಅಥವಾ ಹನ್ನೆರಡು ಶ್ಲೋಕಗಳು). ಹಿಂದಿನ ಮೂರು ಸ್ತೋತ್ರಗಳಂತೆ ಇದೂ ಸಹ ಉತ್ತರಾರ್ಧವನ್ನು ಪಲ್ಲವಿಯನ್ನಾಗಿ ಹೊಂದಿದೆ. ಭಕ್ತನು ಭಗವತ್ಸಾಕ್ಷಾತ್ಕಾರದ ಹಂತದಲ್ಲಿ ತನ್ಮಯನಾಗಿ ಸ್ತುತಿಸುವ ವಿಶಿಷ್ಟಪರಿಯನ್ನು ತೆರೆದಿಡುವ ಅದ್ವಿತೀಯಸ್ತೋತ್ರ.

'ಆನಂದತೀರ್ಥ' ಎಂಬ ಪದ ಅಂಕಿತದಂತೆ ಬಳಕೆಯಾಗಿದ್ದು, ಇದು ಹರಿದಾಸರ ಕೃತಿಗಳ ಅಂಕಿತದ ಪರಿಕಲ್ಪನೆಗೆ ಮುಖ್ಯ ಪ್ರೇರಣೆ ಎಂಬುದು ನಿಃಸಂಶಯ.

ಇದು ಈ ಕೃತಿಯ ರಚನೆಯ ಹಿನ್ನೆಲೆಯ ವೈಭವವಾದರೆ, ಅದರ ಸಿದ್ಧಿಯ ದರ್ಶನಕ್ಕೆಂದು ಮತ್ತೊಂದು ನಿದರ್ಶನ ನಡೆಯಿತು.

ಹೀಗೆ ಶ್ರೀದ್ವಾದಶಸ್ತೋತ್ರವು ವಿವಿಧ ಆಯಾಮಗಳಲ್ಲಿ ಹೊಸಹೊಸ ಅರ್ಥಗಳ ಪ್ರವಾಹವನ್ನೇ ಹೊರಹೊಮ್ಮಿಸುವ ಅತ್ಯಂತ ಅಪೂರ್ವವಾದ ಸ್ತೋತ್ರಕೃತಿ. ಇಂತಹ ಅಪೂರ್ವ ಅರ್ಥವೈಭವದ ಮತ್ತೊಂದು ಸ್ತೋತ್ರಕೃತಿ ಸಂಸ್ಕೃತ ಸಾಹಿತ್ಯದಲ್ಲೇ ದುರ್ಲಭ. ಅತ್ಯಂತ ಸರಳಪದಗಳಿಂದ ಅತ್ಯಂತ ವಿಶಿಷ್ಟವಾದಂತಹ ಅರ್ಥಗಳನ್ನು ಅನಾಯಾಸವಾಗಿ ಗ್ರಹಿಸಲು ಸಾಧ್ಯವನ್ನಾಗಿಸುವ ಇಲ್ಲಿಯ ರಚನಾಸಂವಿಧಾನವನ್ನು ಎಷ್ಟು ಕೊಂಡಾಡಿದರೂ ಕಡಿಮೆಯೇ. ಪ್ರತಿ ಬಾರಿ ನೋಡಿದಾಗಲೂ ಹೊಸಹೊಸತಾಗಿಯೇ ಕಾಣುವ ವಿಲಕ್ಷಣ ಹಿರಿಮೆ ಈ ಕೃತಿಯ ಅಸಾಧಾರಣ ಮಹಿಮೆ. ವಿಷ್ಣುಸಹಸ್ರನಾಮದಲ್ಲಿನ ನೂರಾರು ನಾಮಗಳು ಇದರಲ್ಲಿ ಓತಪ್ರೋತವಾದ್ದು, ಅದರ ಅರ್ಥವೈಭವವೂ ಇದರಲ್ಲಿ ಮೈದಾಳಿದೆ. ಸಮಗ್ರ ಸರ್ವಮೂಲಗ್ರಂಥಗಳನ್ನು ಓದಿದವರಿಗೆ ಅವುಗಳೆಲ್ಲವನ್ನು ಮನನ ಮಾಡುತ್ತಲೇ ಭಗವತ್ತತ್ತ್ವವನ್ನು ಚಿಂತಿಸಲು ಈ ಕೃತಿ ನೀಡುವ ಸಹಾಯ ಅತ್ಯಂತ ವಿಶಿಷ್ಟವಾದುದು; ಹಾಗೆ ಓದದವರಿಗೆ ಗ್ರಂಥಗಳನ್ನು ಓದುವ ಪ್ರೇರಣೆಯೊಂದಿಗೆ ಸಿದ್ಧಾಂತದ ವಿಷಯಪ್ರವೇಶಿಕೆಯಾಗಿಯೂ ಇದು ಉಪಯುಕ್ತವೆನ್ನಿಸುತ್ತದೆ. ಕೇಳುವವರ ಮನಸ್ಸನ್ನು ಸೂಜಿಗಲ್ಲಿಗಿಂತಲೂ ಮಿಗಿಲಾಗಿ ಸೆಳೆದು ಸಂಸ್ಕೃತ, ಸಂಸ್ಕೃತಿ, ಸಂಗೀತ ಹಾಗೂ ತತ್ತ್ವಚಿಂತನೆಗಳ ರಸಸ್ಪರ್ಶವನ್ನು ಮಾಡಿಸುವ ಮಾಂತ್ರಿಕಶಕ್ತಿ ಇದರದು. ವಿಷ್ಣುಸಹಸ್ರನಾಮದಿಂದ ಅರ್ಚನೆ ವಿಹಿತವಾಗಿರುವಂತೆ, ಶ್ರೀದ್ವಾದಶಸ್ತೋತ್ರದಿಂದ ನೈವೇದ್ಯ ವಿಹಿತವಾಗಿದೆ ಎಂಬುದನ್ನು ಗಮನಿಸಬೇಕು. ದ್ವಾದಶಸ್ತೋತ್ರದ ಪಠನೆಯಿಂದ ನೈವೇದ್ಯಪದಾರ್ಥಗಳಲ್ಲಿನ ವಿಷ ಮಾತ್ರವಲ್ಲದೆ, ಮನಸ್ಸಿನ ಕಾಮಕ್ರೋಧಾದಿಗಳ ವಿಷವೂ ಇನ್ನಿಲ್ಲದಂತೆ ಮಾಯವಾಗುತ್ತದೆ. ಶ್ರೀಮದಾಚಾರ್ಯರೇ ಹೇಳಿರುವಂತೆ ಇದು ಜ್ಞಾನದಾಯಕ, ಭಕ್ತಿಕಾರಕ, ಸಿದ್ಧಿದಾಯಕ ಹಾಗೂ ಮೋಕ್ಷಪ್ರಾಪಕವಾದ ಅತ್ಯಮೋಘಕೃತಿ. ಸಕಲಾನಿಷ್ಟನಿವೃತ್ತಿಯೊಂದಿಗೆ ಸರ್ವೇಷ್ಟಪ್ರಾಪ್ತಿಯನ್ನೂ ಈ ಕೃತಿಯ ಮೂಲಕ ಪಡೆಯಬಹುದು ಎಂದು ಸ್ವತಃ ಶ್ರೀಮದಾಚಾರ್ಯರೇ ಸಾರಿರುವರು.

★★★★

ಉಪಸಂಹಾರ

ಇದಿಷ್ಟೂ ಶ್ರೀಮದಾಚಾರ್ಯರ ಸರ್ವಮೂಲಗ್ರಂಥಗಳ ಬಗ್ಗೆ ಒಂದು ಸ್ಥೂಲಪರಿಚಯ. ಶ್ರೀಮದಾಚಾರ್ಯರ ಅವತಾರದ ಮುಂಚಿನ ದಿನಗಳಲ್ಲೂ ವೇದಗಳು, ಉಪನಿಷತ್ತುಗಳು, ರಾಮಾಯಣ, ಮಹಾಭಾರತ, ಭಗವದ್ಗೀತೆ, ಬ್ರಹ್ಮಸೂತ್ರಗಳು, ಭಾಗವತಾದಿ ಪುರಾಣಗಳು ಮೊದಲಾದ ಸರ್ವ ಮೂಲಗ್ರಂಥಗಳು ಉಪಲಬ್ಧವಿದ್ದರೂ ಅವುಗಳ ಸ್ವರೂಪ ವಿಕೃತವಾಗಿತ್ತು. ಅರ್ಥವಂತೂ ಅವುಗಳ ಮೂಲ ಆಶಯಕ್ಕೆ ಅತ್ಯಂತ ಅಸಂಗತವಾಗಿತ್ತು. ಅದರಿಂದಾಗಿ ಜಿಜ್ಞಾಸುವರ್ಗ ''ವೇದಾಂತಸಂತತಕೃತಾಂತರಸಂ ನ ವಿದ್ಮಃ ಶ್ರೇಯೋ ಲಭೇಮಹಿ ಕಥಂ ನು ವಯಂ ಬತೇತಿ'' ಎಂದು ಪರಿತಪಿಸುವಂತಾಗಿತ್ತು. ಅಂತಹ ಸಂದರ್ಭದಲ್ಲಿ ಭಗವದಾದೇಶದಿಂದ ಅವತರಿಸಿದ ಶ್ರೀಮನ್ಮಧ್ವಾಚಾರ್ಯರು ಸರ್ವ ಮೂಲಗ್ರಂಥಗಳ ಭಾವವನ್ನು ಯಥಾರ್ಥವಾಗಿ ಆವಿಷ್ಕರಿಸಿದರು. ದೇಶದ ಉದ್ದಗಲಕ್ಕೂ ಸಂಚರಿಸಿ ಪ್ರಾಚೀನ ಗ್ರಂಥಗಳ ಶುದ್ಧಪಾಠವನ್ನು ಜನತೆಗೆ ಒದಗಿಸಿದರು. ತಮ್ಮ ಪರಿಪೂರ್ಣವಾದ ನಡೆನುಡಿಗಳಿಂದ ತಾತ್ವಿಕ ಪ್ರಪಂಚವನ್ನು ಸೂರ್ಯನಂತೆ ಬೆಳಗಿದರು. ಮನಸ್ಸಿಗೆ ಮುದ ನೀಡುವ ತತ್ತ್ವಜ್ಞಾನವನ್ನು ಉಪದೇಶಿಸಿ ಚಂದ್ರನಂತೆ ಮನಃಶಾಂತಿಯನ್ನು ಜಿಜ್ಞಾಸುಗಳಿಗೆ ಕರುಣಿಸಿದರು. ಇಂದು ಅವರು ನೆಲೆಸಿರುವುದು ಉತ್ತರಬದರಿಯಲ್ಲಾದರೂ ಅವರ ಸರ್ವಮೂಲಗ್ರಂಥಗಳು ನಮ್ಮೊಂದಿಗಿವೆ. ಅವುಗಳ ಅವಲೋಕನ ಅವರ ದರ್ಶನದಂತೆ ಆನಂದದಾಯಕವಾಗಿದೆ. ಗುರುಮುಖೇನ ಅವುಗಳನ್ನು ಅಧ್ಯಯನ ಮಾಡುವುದು ಇಹಪರಗಳ ಜೀವನದ ಶಾಂತಿಗೆ ಖಚಿತ ಉಪಾಯ. ಈ ಹಿನ್ನೆಲೆಯಲ್ಲಿ ಸರ್ವಮೂಲಗ್ರಂಥಗಳ ಮಹತ್ವ ಊಹಾತೀತವಾದುದು. ಅವುಗಳ ಶ್ರವಣಮನನಾದಿಗಳು ಜನ್ಮಜನ್ಮದ ಭಾಗ್ಯ. ಅವುಗಳನ್ನು ನೀಡಿದ ಆಚಾರ್ಯ ಶ್ರೀಮಧ್ವರಂತೂ ಭುವನದ ಭಾಗ್ಯ. ಪ್ರಾಣವಿಲ್ಲದ ದೇಹದಂತೆ ಮುಖ್ಯಪ್ರಾಣರಾದ ಅವರ ಶಾಸ್ತ್ರವಿಲ್ಲದ ಜ್ಞಾನಪ್ರಪಂಚ ಜಡದೇಹದಂತೆ ನಿರರ್ಥಕ. ದೇಹಕ್ಕೆ ಉಸಿರಿನಂತೆ ಜೀವಕ್ಕೆ ಉಸಿರನ ನಿಯಾಮಕರಾದ ಇವರ ಶಾಸ್ತ್ರ ಎಂದು ತಿಳಿದಾಗ ಜೀವನ ಪಾವನ.

ಶ್ರೀಜಯತೀರ್ಥರು ಮೊದಲಾದ ಟೀಕಾಕಾರರು, ಶ್ರೀಪಾದರಾಜರು, ಶ್ರೀವ್ಯಾಸರಾಜರು, ಶ್ರೀವಾದಿರಾಜರು, ಶ್ರೀರಘೂತ್ತಮರು, ಶ್ರೀರಾಘವೇಂದ್ರರು ಮೊದಲಾದ ಟಿಪ್ಪಣಿಕಾರರು, ಶ್ರೀಪುರಂದರದಾಸರು, ಶ್ರೀವಿಜಯದಾಸರು, ಶ್ರೀಗೋಪಾಲದಾಸರು, ಶ್ರೀಜಗನ್ನಾಥದಾರು ಮೊದಲಾದ ಹರಿದಾಸರು ಬೆಳಕು ಪಡೆದ ಸಿದ್ಧಾಂತ ಶ್ರೀಮಧ್ವಸಿದ್ಧಾಂತ. ನಿಜವಾದ ಅರ್ಥದಲ್ಲಿ ಇದು ವ್ಯಾಸಸಿದ್ಧಾಂತ, ವೇದಸಿದ್ಧಾಂತ, ಸಕಲಶಾಸ್ತ್ರಗಳ ಮೂಲಸಿದ್ಧಾಂತ.

॥ ಶ್ರೀಕೃಷ್ಣಾರ್ಪಣಮಸ್ತು ॥

ಸಮರ್ಪಿತಂ ಮಯಾ ಭವೇತ್ ಸುಮಧ್ವನುತ್ತವಾಣಿನಾ ।
ರಮಾರಮೇಶಪಾದಯೋಃ ಪ್ರಭಂಜನಾಭಿಧಾಯುಜಾ ॥

★★★★★

ಪರಿಶಿಷ್ಟ-೧

‘ಸರ್ವಮೂಲ’ - ಹೆಸರಿನ ಔಚಿತ್ಯ

ವಾಙ್ಮಯಪ್ರಪಂಚದಲ್ಲಿ ಬೇರೆ ಯಾವುದೇ ಮತಾಚಾರ್ಯರ ಕೃತಿಗಳು ಸಹ ‘ಸರ್ವಮೂಲ’ ಎಂಬ ಹೆಸರಿನಲ್ಲಿ ಪ್ರಸಿದ್ಧಿ ಪಡೆದಿಲ್ಲ. ಶ್ರೀಮನ್ಮಧ್ವಾಚಾರ್ಯರ ಕೃತಿಗಳಿಗಷ್ಟೇ ಸಂದಿರುವ ವಿಶಿಷ್ಟವಾದ ಪ್ರಸಿದ್ಧಿ ಇದು. ಸರ್ವಮೂಲದ ಲಿಖಿತಪ್ರತಿಗಳು ಮಾತ್ರವಲ್ಲದೆ ಮುದ್ರಿತಪ್ರತಿಗಳು ಸಹ ‘ಸರ್ವಮೂಲ’ ಎಂದೇ ಪ್ರಕಾಶನಗೊಂಡಿವೆ.

‘ಸರ್ವಮೂಲ’ ಎಂಬ ಹೆಸರು ಸಹ ಪ್ರಾಚೀನವೇ ಆಗಿದೆ. ನೂರಾರು ವರ್ಷಗಳ ಹಿಂದಿನ ಅನೇಕ ಸಂಗ್ರಹಗಳಲ್ಲಿ ‘ಸರ್ವಮೂಲಾದ್ಯಂತಶ್ಲೋಕಸಂಗ್ರಹ’ ಎಂಬ ಹೆಸರಿನ ಹತ್ತಾರು ಹಸ್ತಪ್ರತಿಗಳು ದೊರೆಯುತ್ತವೆ. ನನ್ನ ಸಂಗ್ರಹದಲ್ಲೂ (ಶ್ರೀಜಯತೀರ್ಥಸಂಸ್ಕೃತ ಹಸ್ತಲಿಖಿತಗ್ರಂಥಾಲಯ, ವ್ಯಾಸನಕೆರೆ) ಅಂತಹ ಅನೇಕ ಕೃತಿಗಳು ಉಪಲಬ್ಧವಿವೆ. ಮುಖ್ಯವಾಗಿ ಶ್ರೀಬಿದರಹಳ್ಳಿ ಶ್ರೀನಿವಾಸತೀರ್ಥರು ‘ಸರ್ವಮೂಲಾದ್ಯಂತಶ್ಲೋಕಸಂಗ್ರಹ’ ಎಂಬ ಕೃತಿಯನ್ನೇ ರಚಿಸಿದ್ದು ಅದರ ಅನೇಕ ಪ್ರತಿಗಳು ಹಸ್ತಪ್ರತಿಸಂಗ್ರಹಗಳಲ್ಲಿ ಉಪಲಬ್ಧವಿದೆ. ನಮ್ಮ ಶ್ರೀಜಯತೀರ್ಥ ಹಸ್ತಲಿಖಿತ ಗ್ರಂಥಾಲಯದಲ್ಲಿ ಅದರ ಹತ್ತಕ್ಕೂ ಹೆಚ್ಚಿನ ಪ್ರತಿಗಳು ಉಪಲಬ್ಧವಿವೆ. ಅಡವಿಸ್ವಾಮಿಗಳೆಂದೇ ಖ್ಯಾತರಾದ ಶ್ರೀಮೂದನೂರುವಿಷ್ಣುತೀರ್ಥರ ಪೂರ್ವಾಶ್ರಮದ ಪುತ್ರರಾದ ಶ್ರೀಕೃಷ್ಣಾಚಾರ್ಯರು ರಚಿಸಿರುವ ನ್ಯಾಯಸುಧಾಟಿಪ್ಪಣಿಯಲ್ಲಿ ‘ಮೂಲಗ್ರಂಥ’ (‘ಸಪ್ತತ್ರಿಂಶತಿಮೂಲಗ್ರಂಥ-ವಿವೃತಿಂ’) ಎಂಬ ಉಲ್ಲೇಖ ಉಂಟು. ಹೀಗೆ ‘ಸರ್ವಮೂಲ’ ಎಂಬುದು ಆಚಾರ್ಯಶ್ರೀಮಧ್ವರ ಕೃತಿಶ್ರೇಣಿಗೆ ಸಂದಿರುವ ವಿಶಿಷ್ಟವಾದ ಪ್ರಶಸ್ತಿರೂಪದ ಉಲ್ಲೇಖ ಎಂಬುದು ಗಮನಾರ್ಹ.

‘ಸರ್ವಮೂಲ’ಪದದ ವಿಶ್ಲೇಷಣೆಯೂ ಸಹ ಅನೇಕಬಗೆಯಲ್ಲಿ ವಿದ್ವಾಂಸರಿಂದ ನಡೆದಿದೆ. ಒಟ್ಟಾಗಿ ಅದರ ಅರ್ಥವನ್ನು ಸ್ಥೂಲವಾಗಿ ಹೀಗೆ ವಿವೇಚಿಸಬಹುದು :

೧. ‘ಸರ್ವ’ ಎಂಬುದು ವಿಷ್ಣುಸಹಸ್ರನಾಮದಲ್ಲಿ ಬಂದಿರುವ ಭಗವಂತನ ಹೆಸರುಗಳಲ್ಲಿ ಒಂದು. ಶ್ರೀಮದಾಚಾರ್ಯರ ಸಕಲಗ್ರಂಥಗಳಲ್ಲೂ ವಿಷ್ಣುಪಾರಮ್ಯ ಅತ್ಯಂತಪ್ರಧಾನವಿಷಯವಾಗಿ ನಿರೂಪಿತವಾಗಿದೆ. ಇದರಿಂದ ‘ಸರ್ವ’ನಾಮಕನಾದ ಭಗವಂತನೇ ಜಗತ್ತಿನ **ಸರ್ವಕ್ಕೂ ಮೂಲ** ಎಂಬ ಅವರ ಸಿದ್ಧಾಂತದ ಪ್ರಧಾನ ಆಶಯವನ್ನು ಇದು ಬಿಂಬಿಸುವುದು.

೨. ಅದರಂತೆ **ಸರ್ವ** **ಮೂಲ**ಶಾಸ್ತ್ರಗಳಲ್ಲೂ ಭಗವಂತನಾದ ವಿಷ್ಣುವೇ ಪ್ರತಿಪಾದಿತನಾಗಿರುವನು. ಎಂದರೆ ಭಗವಂತನ ಪ್ರತಿಪಾದನೆಯೇ ಶಾಸ್ತ್ರಗಳ **ಮೂಲ**ಹೃದಯ ಎಂಬ ಅರ್ಥದಲ್ಲೂ ‘ಸರ್ವಮೂಲ’ ಎಂಬ ಹೆಸರು ಸಾರ್ಥಕ;

ಆಲೋಡ್ಯ ಸರ್ವಶಾಸ್ತ್ರಾಣಿ ವಿಚಾರ್ಯ ಚ ಪುನಃ ಪುನಃ ।
ಇದಮೇಕಂ ಸುನಿಷ್ಪನ್ನಂ ಧ್ಯೇಯೋ ನಾರಾಯಣಃ ಸದಾ ॥

೩. ಭಗವದ್ಗೀತೆಯ 'ಊರ್ಧ್ವಮೂಲಂ' (೧೫/೧) ಎಂಬಲ್ಲಿನ 'ಊರ್ಧ್ವ' ಶಬ್ದಕ್ಕೆ 'ಸರ್ವ'ನಾಮಕ ವಿಷ್ಣು ಎಂದರ್ಥ. ಇದರಿಂದ ಊರ್ಧ್ವಮೂಲ ಎಂದರೆ ಸರ್ವಮೂಲ ಎಂದಾಗುವುದು. ಆ ಅಧ್ಯಾಯದಲ್ಲಿ ಪ್ರತಿಪಾದಿತವಾಗಿರುವಂತೆ ಭಗವಂತನೇ ಸರ್ವಕ್ಕೂ ಮೂಲ. ಎಂದರೆ ಸ್ವತಂತ್ರನಿಮಿತ್ತಕಾರಣ; ಅದ್ವೈತಿಗಳು ಹೇಳುವಂತೆ ವಿವರ್ತೋಪಾದನಕಾರಣನಲ್ಲ; ವಿಶಿಷ್ಟಾದ್ವೈತಿಗಳು ಹೇಳುವಂತೆ ಉಪಾದಾನಕಾರಣನೂ ಅಲ್ಲ. ಈ ಪ್ರಮೇಯವನ್ನು ತಿಳಿಸುವುದರಿಂದಲೂ 'ಸರ್ವಮೂಲ' ಎಂಬ ಹೆಸರು ಸಾರ್ಥಕ;

'ಪೃಥಙ್ಮೂಲಂ ಹರಿಸ್ತಸ್ಯ ಜಗದ್ವೃಕ್ಷಸ್ಯ ಭೂಮಿವತ್ ।
ಸತ್ತ್ವಾದಿಯುಕ್ತೇ ಚಿದಚಿತ್ಪ್ರಕೃತೀ ಮೂಲಭಾಗವತ್ ॥
ಅತ್ರಾಪಿ ಚಿದಚಿದ್ಯೋಗೋ ವೃಕ್ಷವತ್ ಸಂಪ್ರಕೀರ್ತಿತಃ ।
ಪೃಥಿವೀದೇವತಾವತ್ ತದ್ಧರಿರ್ಮೃದ್ವದಚೇತನಾ ॥
ಉತ್ತಮತ್ವಾತ್ ತು ಮೂಲಾನಾಮೂರ್ಧ್ವಮೂಲಸ್ತ್ವಯಂ ಸ್ಮೃತಃ ।
ನೀಚಾಸ್ತತೋ ಮಹದಹಂಬುದ್ಧಯೋ ಭೂತಸಂಯುತಾಃ ॥
ಶಾಖಾಶ್ಛಂದಾಂಸಿ ಪರ್ಣಾನಿ ಕಾಮಮೋಕ್ಷಫಲೇ ಹ್ಯತಃ॥- ಗೀ.ತಾ. (೧೫/೧)

೪. ಶ್ರೀಮದಾಚಾರ್ಯರೇ ತಮ್ಮ ಕೃತಿಗಳಲ್ಲಿ ಅನೇಕಬಾರಿ ಸ್ಫುಟಪಡಿಸಿರುವಂತೆ ಋಗ್ವೇದ ಯಜುರ್ವೇದ ಸಾಮವೇದ ಹಾಗೂ ಅಥರ್ವಣವೇದ ಎಂಬ ನಾಲ್ಕು ವೇದಗಳೂ, ಮಹಾಭಾರತ ರಾಮಾಯಣ ಹಾಗೂ ಪಂಚರಾತ್ರ ಎಂಬ ಮೂರು ಇತಿಹಾಸಗಳೂ ಮೂಲಸಚ್ಛಾಸ್ತ್ರಗಳು. ಈ ಸರ್ವ ಮೂಲಸಚ್ಛಾಸ್ತ್ರಗಳಿಗೂ ಅಭಿಪ್ರೇತವಾದ ಮಹಾಪ್ರಮೇಯಗಳನ್ನು ಪ್ರಾಮಾಣಿಕವಾಗಿ ನಿರ್ಣಯಿಸಿ ತಿಳಿಸುವ ಕೃತಿಗಳು ಎಂಬ ಅರ್ಥದಲ್ಲೂ 'ಸರ್ವಮೂಲ' ಎಂಬುದು ಸಾರ್ಥಕ;

ಅರ್ಥೋಽಯಮೇವ ನಿಖಿಲೈರಪಿ ವೇದವಾಕ್ಯೈ
ರಾಮಾಯಣೈಃ ಸಹಿತಭಾರತಪಂಚರಾತ್ರೈಃ ।
ಅನ್ಯೈಶ್ಚ ಶಾಸ್ತ್ರವಚನೈಃ ಸಹತತ್ತ್ವಸೂತ್ರೈ-
ರ್ನಿರ್ಣೀಯತೇ ಸಹೃದಯಂ ಹರಿಣಾ ಸದೈವ॥

೫. ಮುಮುಕ್ಷುವಿನ ಸಾಧನಕ್ಕೆ ಅತ್ಯಗತ್ಯವಾದ ಸರ್ವ ಮೂಲಭೂತವಿವರಗಳನ್ನೂ ಸಮಗ್ರವಾಗಿ ನೀಡುವ ಕಾರಣದಿಂದಲೂ ಇವು 'ಸರ್ವಮೂಲ'.

೬. ಮೋಕ್ಷದಲ್ಲಿ ಮನುಷ್ಯನ ಪೂರ್ಣಸುಖಕ್ಕೆ ಅಗತ್ಯವಾದ ಸರ್ವ ಮೂಲಸೌಲಭ್ಯಗಳೂ ಲಭ್ಯ ಎಂದು ನಿರೂಪಿಸುವ ಕಾರಣದಿಂದಲೂ ಇವು 'ಸರ್ವಮೂಲ; ಅಣುಭಾಷ್ಯದ ಶ್ಲೋಕಗಳು -

೭. ಸರ್ವ ದುರ್ಮತಗಳನ್ನೂ, ಅವುಗಳ ಮೂಲಭೂತವಿಚಾರಗಳ ಹಿನ್ನೆಲೆಯಲ್ಲಿಯೇ (ರಾವಣನಿತ್ತ ಬೆಂಕಿಯಿಂದಲೇ ಅವನ ಲಂಕೆಯನ್ನು ಭಸ್ಮಮಾಡಿದಂತೆ) ಸಮಗ್ರವಾಗಿ ನಿರ್ಮೂಲನಗೊಳಿಸುವ ಕಾರಣದಿಂದಲೂ 'ಸರ್ವಮೂಲ'.

೮. 'ಸರ್ವ' ಎಂದರೆ ವಿಷ್ಣು - ಎಂದರೆ ವ್ಯಾಸ - ಎಂದರೆ ಶ್ರೀವೇದವ್ಯಾಸರು ('ಮುನೀನಾಮಪ್ಯಹಂ ವ್ಯಾಸಃ'). ಅವರ ಸರ್ವಶಾಸ್ತ್ರಗಳ ನಿರ್ಣಯಕ್ಕೂ ಮೂಲವಾದ ('ತಸ್ಮಾತ್ ಸೂತ್ರಾರ್ಥಮಾಗೃಹ್ಯ ಕರ್ತವ್ಯಃ ಸರ್ವನಿರ್ಣಯಃ') ಬ್ರಹ್ಮಸೂತ್ರಗಳ ಭಾಷ್ಯಸ್ವರೂಪವಾಗಿ ಶ್ರೀಮದಾಚಾರ್ಯರ ಸಕಲ ಗ್ರಂಥಗಳು ರೂಪುಗೊಂಡಿರುವುದರಿಂದಲೂ ಅವು 'ಸರ್ವಮೂಲ'.

೯. 'ಈಶಾವಾಸ್ಯಮಿದಂ ಸರ್ವಂ' ಎಂದು ಪ್ರಾರಂಭವಾಗುವ ಈಶಾವಾಸ್ಯೋಪನಿಷತ್ತನ್ನು ಒಳಗೊಂಡಂತೆ ಸರ್ವ (ಪೂರ್ಣ - ದಶ) ಉಪನಿಷತ್ತುಗಳಿಗೂ ಶ್ರೀವ್ಯಾಸಕೃತವಾದ ಮೂಲವ್ಯಾಖ್ಯಾನಗಳಾದ ಋಕ್ಸಂಹಿತಾ, ಯಜುಃಸಂಹಿತಾ, ಸಾಮಸಂಹಿತಾ, ಬ್ರಹ್ಮಸಾರ ಮೊದಲಾದ ಕೃತಿಗಳಿಂದ ಭಾಷ್ಯವನ್ನು ನೀಡುವ ಕೃತಿಗಳು - 'ಸರ್ವಮೂಲ'.

೧೦. ನಿರ್ಣಯಶಾಸ್ತ್ರಗಳಲ್ಲಿ ಸರ್ವೋತ್ಕೃಷ್ಟವಾದ ಮಹಾಭಾರತ ಕೃತಿಗೆ ಮೂಲಭೂತನಿರ್ಣಯವಾದ ಮಹಾಭಾರತತಾತ್ಪರ್ಯನಿರ್ಣಯವನ್ನು ಒಳಗೊಂಡಂತೆ ಅವರ ಸಕಲಕೃತಿಗಳೂ ರೂಪುಗೊಂಡಿರುವ ಕಾರಣದಿಂದಲೂ 'ಸರ್ವಮೂಲ'.

೧೧. ಸರ್ವಪುರಾಣಗಳಲ್ಲೂ ಅಗ್ರಮಾನ್ಯವಾದ ಶ್ರೀಮದ್ಭಾಗವತತಾತ್ಪರ್ಯನಿರ್ಣಯಕ್ಕೆ ಮೂಲಕಾರರಿಗೆ ಸಮ್ಮತವಾದ ಅರ್ಥವನ್ನು ತಿಳಿಸುವ ಕಾರಣದಿಂದಲೂ 'ಸರ್ವಮೂಲ'.

೧೨. ವೇದೋಪನಿಷತ್ತುಗಳು, ಇತಿಹಾಸಪುರಾಣಗಳು, ಸೂತ್ರಗಳು, ಪುರಾಣಗಳು ಮೊದಲಾಗಿ ಸರ್ವ ಮೂಲ ಆಕರಗಳ ಮೂಲ ಆಶಯವನ್ನು ಸಮಗ್ರವಾಗಿ ಸುನಿರ್ಣೀತವಾಗಿ ಅನಾವರಣಗೊಳಿಸುವ ಕಾರಣದಿಂದಲೂ 'ಸರ್ವಮೂಲ' ('ವಿಷ್ಣುಭಕ್ತಿವಿಧಾನಾರ್ಥಂ ಸರ್ವಂ ಶಾಸ್ತ್ರಂ ಪ್ರವರ್ತತೇ'):

> ತಾತ್ಪರ್ಯ ಶಾಸ್ತ್ರಾಣಾಂ ಸರ್ವೇಷಾಮುತ್ತಮಂ ಮಯಾ ಪ್ರೋಕ್ತಮ್।
> ಪ್ರಾಪ್ಯಾನುಜ್ಞಾಂ ವಿಷ್ಣೋರೇತಜ್ಜ್ಞಾತ್ವೈವ ವಿಷ್ಣುರಾಪ್ಯೋಽಸೌ॥
>
> -ಮಹಾಭಾರತತಾತ್ಪರ್ಯನಿರ್ಣಯ (೧.೧೩೭)

> ಇತ್ಯಶೇಷಪುರಾಣೇಭ್ಯಃ ಪಂಚರಾತ್ರೇಭ್ಯ ಏವ ಚ।
> ಭಾರತಾಚ್ಚೈವ ವೇದೇಭ್ಯೋ ಮಹಾರಾಮಾಯಣಾದಪಿ॥
> ಪರಸ್ಪರವಿರೋಧಸ್ಯ ಹಾನಾನ್ನಿರ್ಣೀಯ ತತ್ತ್ವತಃ।
> ಯುಕ್ತ್ಯಾ ಬುದ್ಧಿಬಲಾಚ್ಚೈವ ವಿಷ್ಣೋರೇವ ಪ್ರಸಾದತಃ॥
> ಬಹುಕಲ್ಪಾನುಸಾರೇಣ ಮಯೇಯಂ ಸತ್ಕಥೋದಿತಾ।

ನೈಕಗ್ರಂಥಾಶ್ರಯಾ ತಸ್ಮಾನ್ನಾಶಂಕ್ಯಾತ್ರ ವಿರುದ್ಧತಾ॥

-ಮಹಾಭಾರತತಾತ್ಪರ್ಯನಿರ್ಣಯ (೯.೧೨೫-೧೨೭)

ಪೂರ್ಣಪ್ರಜ್ಞೇನ ಮುನಿನಾ ಸರ್ವಶಾಸ್ತ್ರಾರ್ಥಸಂಗ್ರಹಃ ।
ಕೃತೋಽಯಂ ಪ್ರೀಯತಾಂ ತೇನ ಪರಮಾತ್ಮಾ ರಮಾಪತಿಃ॥

- ಬ್ರಹ್ಮಸೂತ್ರಭಾಷ್ಯ(೪.೮)

೧೩. ಸುರರಿಂದ ಪ್ರಾರಂಭಿಸಿ ನರರವರೆಗೆ ಸರ್ವಸಾಧಕರಿಗೂ ಸಾಧನೆಗೆ ಅಗತ್ಯವಾದ ಮೂಲಪ್ರಮೇಯಗಳನ್ನು ತಿಳಿಸುವ ಕಾರಣದಿಂದಲೂ 'ಸರ್ವಮೂಲ' ('ಸುರಾದ್ಯಾ ನರಾಂತಾ ಮುಕುಂದಪ್ರಸಾದಾದಿಮಂ ಮೋಕ್ಷಮೇತೇ ಭಜಂತೇ ಸದೇತಿ' - ಮ.ವಿ. ೧೧/೭೯).

೧೪. ಭಗವಂತನಾದ ಶ್ರೀಹರಿಯು ಸರ್ವಗುಣಪೂರ್ಣ ಹಾಗೂ ಸರ್ವದೋಷದೂರ ಎಂದು ನಿರೂಪಿಸುವ ಕಾರಣದಿಂದಲೂ 'ಸರ್ವಮೂಲ';

ಯಃ ಸರ್ವಗುಣಸಂಪೂರ್ಣಃ ಸರ್ವದೋಷವಿವರ್ಜಿತಃ ।
ಪ್ರೀಯತಾಂ ಪ್ರೀತ ಏವಾಲಂ ವಿಷ್ಣುರ್ಮೇ ಪರಮಃ ಸುಹೃತ್ ॥

೧೫. ಸರ್ವಕಾಲದಲ್ಲೂ ಮಾನ್ಯವಾದ ಮೂಲಭೂತಪ್ರಮಾಣಪ್ರಮೇಯಗಳಿಂದ ಯುಕ್ತವಾಗಿದ್ದು ಭೂತಭವಿಷ್ಯದ್ವರ್ತಮಾನವೆಂಬ ಸರ್ವಕಾಲದಲ್ಲೂ ಅಖಂಡ್ಯವಾದ ಅದ್ಭುತಕೃತಿಗಳು ('ಅಪ್ಯದೂಷ್ಯಮತನೋದನಂತಧೀಭಿರ್ಭೂತಭಾವಿಭವದಾತ್ಮಭಿಃ ಕ್ವಚಿತ್' - ಮ.ವಿ. ೯/೧೨) ಎಂಬ ಕಾರಣದಿಂದಲೂ 'ಸರ್ವಮೂಲ'.

೧೬. ಸ್ವರ್ಗ ಮರ್ತ್ಯ ಪಾತಾಳಾದಿಸರ್ವಪ್ರದೇಶಗಳಲ್ಲೂ ಮಾನ್ಯವಾದ ಸರ್ವಮೂಲವಿಚಾರಗಳ ಆವಿಷ್ಕರಣರೂಪಕೃತಿಗಳು ಎಂಬ ಮಾತು ಆನಂದಮಾಲಾದಲ್ಲಿ ಬಂದಿವೆ:

ಆಮೇರೋರಾಂಡಭಾಂಡಾತ್ ಸುರವರನಿಕರಾಸ್ಥಾನಸಂಸ್ಥಾನಮಾನ್ಯಾತ್
ಅನ್ಯಾನ್ಯಾನೇಕವಿದ್ವತ್ಪ್ರವರಶತಶತೀಕೀರ್ತಿಕರ್ಪೂರಪೂರಾತ್।
ಆಗ್ರಂಥಾದಾರ್ಥವರ್ಣಾತ್ ರಥಚರಣಧರಾರ್ಥಾದ್ ವಿಶೇಷೈಃ ಸಮರ್ಥಾತ್
ಕ್ವಾಸೌ ವಾದೀಂದ್ರಸಿಂಹಃ ಪಟುತಮ ಉತ ಯಃ ಖಂಡಯೇನ್ಮಧ್ವಶಾಸ್ತ್ರಮ್॥

ಆಚೋತ್ಥಾದಾ ಪ್ರಧಾನಾತ್ ಸಕಲಚಿದಚಿತೋ ಭಾವಿತಾಃ ಸತ್ಪದಾರ್ಥಾಃ
ಕ್ಷುದ್ರಾರ್ಥಂ ವೈ ದಿಶೇಯುಃ ಪರಪುರುಷವಶಾ ಹ್ಯಾತೃಣಾದಾಕರೀಷಾತ್ ।
ಸರ್ವೇಷಾಂ ಯೋಗ್ಯಸೃಷ್ಟಿಸ್ಥಿತಿಲಯನಿಯಮಾಜ್ಞಾನದೃಗ್ಬಂಧಮೋಕ್ಷಂ
ಕುರ್ಯಾದೇಕಃ ಸ್ವತಂತ್ರೋ ಹರಿರಿತಿ ಸುಮತೇ ತಚ್ಚ ಶಾಸ್ತ್ರಂ ಪ್ರಮಾಣಮ್॥

೧೭. ಮಹಾವಿಷ್ಣುವು ಸರ್ವಶಬ್ದವಾಚ್ಯ ಎಂಬ ಮಹಾಪ್ರಮೇಯ ಮೂಲಗ್ರಂಥಗಳ ಆಶಯ ಎಂಬುದಾಗಿ ಸ್ಫುಟಪಡಿಸುವುದರಿಂದಲೂ 'ಸರ್ವಮೂಲ':

ಸರ್ವೈಶ್ಚ ವೈದಿಕಪದೈರಪಿ ಲೋಕಶಬ್ದೈ-
ರ್ಮೇಘಾಗ್ನಿವಾರಿಧಿತಲಾದಿರವೈಶ್ಚ ಸರ್ವೈಃ।
ಮುಖ್ಯಾಭಿಧೇಯಪರಿಪೂರ್ಣಗುಣಃ ಪ್ರಿಯೋऽಲಂ
ನಾರಾಯಣೋ ಮಮ ಸದೈವ ಸುತುಷ್ಟಿಮೇತು॥

೧೮. ಜಡ, ಚೇತನ ಮೊದಲಾದ ಸರ್ವಪ್ರಪಂಚಕ್ಕೂ, ಸರ್ವಕಾಲದಲ್ಲೂ, ಸರ್ವತ್ರ ಸರ್ವಶಬ್ದವಾಚ್ಯನಾದ, ಸರ್ವನಾಮಕ ಶ್ರೀಹರಿಯೇ ('ಸರ್ವಃ ಶರ್ವಃ ಶಿವಃ ಸ್ಥಾಣುಃ') ಸರ್ವಕಾರಣ ಎಂಬ ಮೂಲಪ್ರಮೇಯವನ್ನು ತಿಳಿಸುವ ಕಾರಣದಿಂದಲೂ 'ಸರ್ವಮೂಲ' ('ಸರ್ವದೇಶೇಷು ಕಾಲೇಷು ಸ ಏಕಃ ಪರಮೇಶ್ವರಃ' - ಅಣುಭಾಷ್ಯ).

೧೯. ಜಾಗ್ರತ್, ಸ್ವಪ್ನ, ಸುಷುಪ್ತಿ ಎಂಬ ಸರ್ವಾವಸ್ಥೆಗಳಿಗೂ ಮೂಲಕಾರಣ ಎಂಬ ಸರ್ವನಾಮಕ ಶ್ರೀಹರಿಯೇ ಸರ್ವಕಾರಣ ('ಸರ್ವಾವಸ್ಥಾಪ್ರೇರಕಶ್ಚ...' - ಅಣುಭಾಷ್ಯ).

೨೦. ಮತ್ಸ್ಯ ಕೂರ್ಮಾದಿ ಸರ್ವರೂಪಗಳಿಗೂ, ಮೂಲರೂಪಕ್ಕೂ ಸರ್ವಾತ್ಮನಾ ಅಭೇದ ಎಂಬ ಪ್ರಮೇಯವನ್ನು ತಿಳಿಸುವ ಕಾರಣದಿಂದಲೂ 'ಸರ್ವಮೂಲ' ('ಸರ್ವರೂಪೇಷ್ವಭೇದವಾನ್' - ಅಣುಭಾಷ್ಯ).

೨೧. ಸರ್ವತ್ರಸರ್ವದಾಸರ್ವಾಕಾರಸರ್ವಾಧಾರಸರ್ವಾಶ್ರಯಸರ್ವೋತ್ಪಾದಕ- ಸರ್ವಪಾಲಕಸರ್ವಸಂಹಾರಕಸರ್ವನಿಯಾಮಕಸರ್ವಪ್ರೇರಕಸರ್ವಪ್ರವರ್ತಕಸರ್ವನಿವರ್ತಕಯಥಾಯೋಗ್ಯಂಸರ್ವಜ್ಞಾನಾಜ್ಞಾನಬಂಧಮೋಕ್ಷಪ್ರದಸರ್ವಸತ್ತಾಪ್ರದಸರ್ವಶಬ್ದವಾಚ್ಯಸರ್ವಶಬ್ದ - ಪ್ರವೃತ್ತಿನಿಮಿತ್ತಸರ್ವಗುಣಾತಿಪರಿಪೂರ್ಣತಮಸರ್ವದೋಷಾತಿದೂರಸರ್ವಾಚಿಂತ್ಯಸರ್ವೋತ್ತಮಸರ್ವೇಶ್ವರಸರ್ವಾತ್ಯಂತವಿಲಕ್ಷಣಸ್ವಗತಭೇದವಿವರ್ಜಿತತ್ವಾ-ದಿನಾಭಗವದ್ದ್ರಷ್ಟೄಣಾಂ,

-ಎಂಬುದಾಗಿ ಶ್ರೀರಾಘವೇಂದ್ರಸ್ವಾಮಿಗಳು ಪ್ರಾತಃಸಂಕಲ್ಪಗದ್ಯದಲ್ಲಿ ತಿಳಿಸಿರುವಂತೆ ಶ್ರೀಹರಿಯನ್ನು ಸರ್ವಪ್ರಕಾರೇಣ ಆರಾಧಿಸುವ ಶ್ರೀವಾಯುದೇವರ ತೃತೀಯಾವತರರಾದ ಶ್ರೀಮನ್ಮಧ್ವಾಚಾರ್ಯರಿಂದ ಮೂಲಗ್ರಂಥಗಳಿಗೆ ಅನುಗುಣವಾಗಿ ರಚಿತವಾದ ಕೃತಿಶ್ರೇಣಿ ಎಂಬ ಅರ್ಥದಲ್ಲೂ ಸರ್ವಮೂಲ.

೨೨. ಶ್ರೀರಾಘವೇಂದ್ರಸ್ವಾಮಿಗಳು ಪ್ರಾತಃಸಂಕಲ್ಪಗದ್ಯದಲ್ಲಿ ತಿಳಿಸಿರುವಂತೆ ಶ್ರೀಹರಿಯು -

.... ಸರ್ವತ್ರ ಸರ್ವದಾ ಸರ್ವಾಕಾರಸರ್ವಾಧಾರಸರ್ವಾಶ್ರಯಸರ್ವೋತ್ಪಾದಕಸರ್ವಪಾಲಕ-ಸರ್ವಸಂಹಾರಕಸರ್ವನಿಯಾಮಕಸರ್ವಪ್ರೇರಕಸರ್ವಪ್ರವರ್ತಕಸರ್ವನಿವರ್ತಕ ಯಥಾಯೋಗ್ಯಂ ಸರ್ವಜ್ಞಾನಾಜ್ಞಾನಬಂಧಮೋಕ್ಷಪ್ರದಸರ್ವಸತ್ತಾಪ್ರದಸರ್ವಶಬ್ದವಾಚ್ಯಸರ್ವಶಬ್ದಪ್ರವೃತ್ತಿನಿಮಿತ್ತ ಸರ್ವಗುಣಾತಿಪರಿಪೂರ್ಣತಮಸರ್ವದೋಷಾತಿದೂರಸರ್ವಾಚಿಂತ್ಯ ಸರ್ವೋತ್ತಮಸರ್ವೇಶ್ವರ ಸರ್ವಾತ್ಯಂತವಿಲಕ್ಷಣಸ್ವಗತಭೇದವಿವರ್ಜಿತತ್ವಾದಿನಾ ಭಗವದ್ದ್ರಷ್ಟೄಣಾಂ,... ಭಕ್ತಾಪರಾಧ ಸಹಿ-ಷ್ಣುನಾ ಸರ್ವಸ್ವಾಮಿನಾ ಸರ್ವಪ್ರೇರಕೇಣ ಸರ್ವತಾತ್ತ್ವಿಕದೇವತಾಪ್ರೇರಕೇಣ ಸರ್ವತಾತ್ತ್ವಿಕಾಸುರ ಭಂಜಕೇನ ತಥಾ ತತ್ಪ್ರೇರಣಾಪ್ರಯುಕ್ತಾಶೇಷದುರ್ಮತಭಂಜಕೇನ ಅತ ಏವ ಪ್ರಭಂಜನ

ಶಬ್ದವಾಚ್ಯೇನ ಪ್ರತಿದಿನಂ ಪ್ರತಿಕ್ಷಣಂ ಬುದ್ಧಿಶೋಧಕೇನ ಸರ್ವಕರ್ಮಕರ್ತ್ರಾ ಸರ್ವಕರ್ಮಕಾರಯಿತ್ರಾ ಸರ್ವಕರ್ಮಸ್ವಾಮಿನಾ ಸರ್ವಕರ್ಮಸಮರ್ಪಕೇಣ ಸರ್ವಕರ್ಮಫಲ-ಭೋಕ್ತ್ರಾ ಸರ್ವಕರ್ಮಫಲಭೋಜಯಿತ್ರಾ ಸರ್ವಕರ್ಮಪ್ರೇರಕೇಣ ಸರ್ವಕರ್ಮೋದ್ಬೋಧಕೇನ ಸರ್ವಕರ್ಮಶುದ್ಧಿಪ್ರದೇನ ಸರ್ವಕರ್ಮಸಿದ್ಧಿಪ್ರದೇನ ಸರ್ವಕರ್ಮನಿಷ್ಠೇನ ಸರ್ವಕರ್ಮಸಾಕ್ಷಿಣಾ ಸರ್ವಕರ್ಮನಿಷ್ಠಭಗವದ್ರೂಪೋಪಾಸಕೇನಾಶೇಷಜೀವಸ್ಥಿತನಿಃಸಂಖ್ಯಾನಾದಿಕಾಲೀನಧರ್ಮಾಧ-ರ್ಮದ್ರಷ್ಟ್ರಸ್ವೇಚ್ಛಯೋದ್ಬೋಧಕೇನ।

- ಎಂದು ಸರ್ವ ಮೂಲಪ್ರಮಾಣಗಳಿಂದಲೂ ನಿರೂಪಿಸಿದ ಕಾರಣದಿಂದಲೂ 'ಸರ್ವಮೂಲ'.

೨೩. ಪ್ರತ್ಯಕ್ಷ, ಅನುಮಾನ, ಆಗಮ ಎಂಬ ಸರ್ವಪ್ರಮಾಣಗಳಿಂದಲೂ ಜಗಜ್ಜನ್ಮಾದಿಗಳಿಗೆ ಮೂಲಕಾರಣ ಶ್ರೀಹರಿ ಎಂದು ನಿರೂಪಿಸುವುದರಿಂದಲೂ 'ಸರ್ವಮೂಲ'(ಮ.ಭಾ.ತಾ.ನಿ.ಅಧ್ಯಾಯ ೨೨.೮೦-೮೨):

ಪ್ರತ್ಯಕ್ಷೈಷಾ ಕರ್ತೃತಾ ಜೀವಸಂಸ್ಥಾ ತಥಾಽಽಗಮಾದನುಮಾನಾಚ್ಚ ಸರ್ವಮ್।
ವಿಷ್ಣೋರ್ವಶೇ ತನ್ನ ಹೇಯಂ ದ್ವಯಂ ಚ ಜಾನನ್ವಿದ್ವಾನ್ಕುರುತೇ ಕಾರ್ಯಕರ್ಮ।
ತತ್ರೇರಕಂ ವಿಷ್ಣುಮೇವಾಭಿಜಾನನ್ ಭವೇತ್ಪ್ರಮಾಣತ್ರಿತಯಾನುಗಾಮೀ॥
ಪೂರ್ಣಂ ಪ್ರಮಾಣಂ ತತ್ತ್ರಯಂ ಚಾವಿರೋಧೇನೈಕತ್ರಸ್ಥಂ ತತ್ತ್ರಯಂ ಚಾವಿರೋಧಿ।
ಪೃಥಙ್ಮಧ್ಯಂ ಚಾಪ್ರಮಾಣಂ ವಿರೋಧಿ ಸ್ಯಾತ್ ತಸ್ಮಾತ್ತ್ರಯಮೇಕತ್ರ ಕಾರ್ಯಮ್॥

೨೪. ಸರ್ವವರ್ಣ, ಸರ್ವಆಶ್ರಮಗಳನ್ನೊಳಗೊಂಡಂತೆ ಸರ್ವಸುಜೀವಿಗಳಿಂದಲೂ ಶ್ರೀಹರಿಯೇ ಮೂಲತಃ ಉಪಾಸ್ಯ ಎಂದು ('ಸರ್ವವರ್ಣಾಶ್ರಮೈರ್ವಿಷ್ಣುರೇಕ ಏವೇಜ್ಯತೇ ಸದಾ' - ಸದಾಚಾರಸ್ಮೃತಿ) ತಿಳಿಸುವ ಕಾರಣದಿಂದಲೂ 'ಸರ್ವಮೂಲ'.

೨೫. ಶ್ರೀಹರಿಯು ಸರ್ವಕಾಲದಲ್ಲೂ, ಸರ್ವವಸ್ತುಗಳಲ್ಲೂ, ಸರ್ವಪ್ರಕಾರದಿಂದಲೂ ಅಂತರ್ಯಾಮಿಯಾಗಿ ನೆಲೆಸಿದ್ದು ಮೂಲರೂಪದಂತೆ ಪರಿಪೂರ್ಣನಾಗಿರುವವನು ಎಂದು ನಿರೂಪಿಸುವುದರಿಂದಲೂ 'ಸರ್ವಮೂಲ'.

೨೬. 'ಸರ್ವಂ ಖಲ್ವಿದಂ ಬ್ರಹ್ಮ' ಮೊದಲಾದ ಐಕ್ಯಬೋಧಕವೆಂಬುದಾಗಿ ಕೆಲವರು ಭ್ರಮಿಸಿರುವ ಸರ್ವ ಶ್ರುತಿವಾಕ್ಯಗಳಿಗೆ ಮೂಲಗ್ರಂಥಗಳಿಂದಲೇ ಭೇದಬೋಧಕತ್ವವನ್ನು ಸಮರ್ಥಿಸುವ ಕಾರಣದಿಂದಲೂ 'ಸರ್ವಮೂಲ'.

೨೭. 'ವಾಸುದೇವಃ ಸರ್ವಮಿತಿ ಸ ಮಹಾತ್ಮಾ ಸುದುರ್ಲಭಃ' ಎಂಬ ಗೀತಾ (೭ /೧೯) ವಾಕ್ಯದಲ್ಲಿ ಬಂದಿರುವ ಸರ್ವ ಶಬ್ದಕ್ಕೆ ವಾಸುದೇವನೇ ಪೂರ್ಣ ಎಂಬ ಮುಖ್ಯಾರ್ಥವನ್ನು, 'ಸರ್ವಂ ಸಮಾಪ್ನೋಷಿ ತತೋಽಸಿ ಸರ್ವಃ' ಎಂಬುದಾಗಿ ಮೂಲ ಗೀತಾವಾಕ್ಯದಿಂದಲೇ ಅರ್ಥನಿರೂಪಿಸುವ ಕಾರಣದಿಂದಲೂ 'ಸರ್ವಮೂಲ'.

೨೮. ಅತ್ಯಗತ್ಯವಾಗಿ ತಿಳಿಯಲೇಬೇಕಾದ ಸರ್ವ ವಿಷಯಗಳು ವೇದಾದಿ ಮೂಲಗ್ರಂಥಗಳಲ್ಲಿ ಉಕ್ತವಾಗಿವೆ; ಅವುಗಳಲ್ಲಿ ಅನುಕ್ತವಾದ ಪ್ರಮೇಯ ಇಲ್ಲವೇ ಇಲ್ಲ ಎಂದು ತಿಳಿಸುವ ಕಾರಣದಿಂದಲೂ ಇವು ಸರ್ವಮೂಲ:

ಅನುಕ್ತಂ ಪಂಚಭಿರ್ವೈದೈರ್ನ ವಸ್ತ್ವಸ್ತಿ ಕೃತಶ್ಚನ ।
ಅತೋ ವೇದತ್ವಮೇತೇಷಾಂ ಯತಸ್ತೇ ಸರ್ವವೇದಕಾಃ॥

-ಇತಿ ಸ್ಕಾಂದೇ(ಬ್ರಹ್ಮಸೂತ್ರಭಾಷ್ಯ ೨.೧.೧೬)

೨೯. ತಾವು ತಿಳಿಸುವ ಸರ್ವ ಪ್ರಮೇಯಗಳು ಮೂಲಗ್ರಂಥಗಳಲ್ಲೇ ಉಕ್ತವಾದ ಅಧಿಕೃತ ವಿಚಾರಗಳು ಎಂದು ತಿಳಿಸುವ ಕಾರಣದಿಂದಲೂ ಇವು ಸರ್ವಮೂಲ:

ವೇದೇಷು ಸಪುರಾಣೇಷು ಭಾರತೇ ಚಾವಗಮ್ಯತೇ ।
ಉಕ್ತೋSರ್ಥಃ ಸರ್ವ ಏವಾಯಂ ತಥಾ ಪೂರ್ವೋದಿತಾಶ್ಚ ಯೇ॥

-ಮಹಾಭಾರತತಾತ್ಪರ್ಯನಿರ್ಣಯ (೧೮.೧೫೨)

ಇತ್ಯಾದಿವಾಕ್ಯೋಕ್ತಮಿದಂ ಸಮಸ್ತಂ ತಥಾ ಪುರಾಣೇಷು ಚ ಪಂಚರಾತ್ರೇ।
ಅತೋSದಿತಾ ಯಾಶ್ಚ ಕಥಾಃ ಸಮಸ್ತಾ ವೇದೇತಿಹಾಸಾದಿವಿನಿರ್ಣಯೋಕ್ತಾಃ॥

-ಮಹಾಭಾರತತಾತ್ಪರ್ಯನಿರ್ಣಯ (೩೨.೧೭೫)

೩೦. ಸರ್ವಸಾಧನಗಳಲ್ಲೂ ಮೂಲಭೂತವಾದ ಶ್ರೇಷ್ಠಸಾಧನ ಭಗವದ್ಭಕ್ತಿ ಎಂದು ನಿಖರವಾಗಿ ಸಾರುವ ಕೃತಿಶ್ರೇಣಿ ಎಂಬ ಕಾರಣದಿಂದಲೂ ಸರ್ವಮೂಲ:

ದಾನತೀರ್ಥತಪೋಯಜ್ಞಪೂರ್ವಾಃ ಸರ್ವೇSಪಿ ಸರ್ವದಾ।
ಅಂಗಾನಿ ಹರಿಸೇವಾಯಾಂ ಭಕ್ತಿಸ್ತ್ವೇಕಾ ವಿಮುಕ್ತಯೇ॥

- ಮಹಾಭಾರತತಾತ್ಪರ್ಯನಿರ್ಣಯ(೧.೯೮)

೩೧. ಸರ್ವನಿರ್ಣಯಶಾಸ್ತ್ರಗಳಲ್ಲೂ ಅತ್ಯಂತ ಮಿಗಿಲೆನ್ನಿಸಿದ ಮಹಾಭಾರತ-ತಾತ್ಪರ್ಯನಿರ್ಣಯವನ್ನು ಸರ್ವಮೂಲಶಾಸ್ತ್ರಗಳ ನಿರ್ಣಯ ಎಂಬುದಾಗಿ ಸಾರಿದ ಕೃತಿಶ್ರೇಣಿ ಎಂಬ ಅರ್ಥದಲ್ಲೂ ಸರ್ವಮೂಲ:

ಸಮಸ್ತಶಾಸ್ತ್ರಾರ್ಥವಿನಿರ್ಣಯೋSಯಂ ವಿಶೇಷತೋ ಭಾರತವರ್ತ್ಮಚಾರೀ।
ಗ್ರಂಥಃ ಕೃತೋSಯಂ ಜಗತಾಂ ಜನಿತ್ರಂ ಹರಿಂ ಗುರುಂ ಪ್ರೀಣಯತಾSಮುನೈವ।
ವಿನಿರ್ಣಯೋ ನಾಸ್ಯ ಮುನಾ ವಿನಾ ಯದ್ವಿಪ್ರಸ್ಥಿತಾನಾಮಿಹ ಸರ್ವವಾಚಾಮ್॥

-ಮಹಾಭಾರತತಾತ್ಪರ್ಯನಿರ್ಣಯ(೩೨.೧೬೯,೧೭೦)

೩೨. ವೇದಾದಿ ಸಕಲ ಮೂಲಗ್ರಂಥಗಳಿಗೆ ಸಂಬಂಧಿಸಿದಂತೆ ಸರ್ವಸಂಶಯಗಳನ್ನೂ ಪರಿಹರಿಸುವ ಮಹಾಭಾರತತಾತ್ಪರ್ಯನಿರ್ಣಯವನ್ನು ಒಳಗೊಂಡ ಕೃತಿಶ್ರೇಣಿ ಎಂಬ ಕಾರಣದಿಂದಲೂ ಸರ್ವಮೂಲ:

ಮಹಾಭಾರತತಾತ್ಪರ್ಯನಿರ್ಣಯಂ ಸಂಶಯಚ್ಛಿದಮ್।

-ಗ್ರಂಥಮಾಲಿಕಾಸ್ತೋತ್ರ

೩೩. ಮಹಾಭಾರತವು ಸರ್ವಶಾಸ್ತ್ರಗಳ ಸಾರ. ವಿಷ್ಣುಸಹಸ್ರನಾಮ ಹಾಗೂ ಭಗವದ್ಗೀತೆಗಳು ಮಹಾಭಾರತದ ಸಾರ ಎಂದು ನಿರೂಪಿಸುವ ಗೀತಾಭಾಷ್ಯಾದಿ ಕೃತಿಗಳನ್ನು ಒಳಗೊಂಡ ಕೃತಿಶ್ರೇಣಿ ಎಂಬ ಕಾರಣದಿಂದಲೂ ಸರ್ವಮೂಲ:

ಭಾರತಂ ಸರ್ವಶಾಸ್ತ್ರೇಷು ಭಾರತೇ ಗೀತಿಕಾ ವರಾ।
ವಿಷ್ಣೋಃ ಸಹಸ್ರನಾಮಾಪಿ ಜ್ಞೇಯಂ ಪಾಠ್ಯಂ ಚ ತದ್ವಯಮ್॥

- ಇತಿ ಮಹಾಕೌರ್ಮೇ(ಗೀತಾಭಾಷ್ಯ)

ಶಾಸ್ತ್ರೇಷು ಭಾರತಂ ಸಾರಸ್ತತ್ರ ನಾಮಸಹಸ್ರಕಮ್।
ವೈಷ್ಣವಂ ಕೃಷ್ಣಗೀತಾ ಚ ತಜ್ಜ್ಞಾನಾನ್ಮುಚ್ಯತೇಽಂಜಸಾ॥
ನ ಭಾರತಸಮಂ ಶಾಸ್ತ್ರಂ ಕುತ ಏವಾನಯೋಃ ಸಮಮ್।

- ಗೀತಾತಾತ್ಪರ್ಯನಿರ್ಣಯ

೩೪. ಅನಂತರದ ಶ್ರೀಪದ್ಮನಾಭತೀರ್ಥರು, ಶ್ರೀಜಯತೀರ್ಥರು, ಶ್ರೀವ್ಯಾಸತೀರ್ಥರು, ಶ್ರೀವಾದಿರಾಜತೀರ್ಥರು, ಶ್ರೀರಘೂತ್ತಮತೀರ್ಥರು, ಶ್ರೀರಾಘವೇಂದ್ರತೀರ್ಥರು ಮೊದಲಾದ ಸರ್ವಜ್ಞಾನಿವರೇಣ್ಯರುಗಳ ಕೃತಿಗಳಿಗೆಲ್ಲ ಮೂಲಭೂತಗ್ರಂಥಗಳು ಎಂಬ ಕಾರಣಕ್ಕೂ ಸರ್ವಮೂಲ ಎಂಬ ಹೆಸರು ಇವಕ್ಕೆ ಉಚಿತ.

೩೫. ಇದೇ ರೀತಿಯಾಗಿ 'ಸರ್ವ' ಹಾಗೂ 'ಮೂಲ' ಶಬ್ದಗಳಿಗೆ ಸರ್ವಮೂಲಗ್ರಂಥಗಳಲ್ಲೇ ಬಂದಿರುವ ಬಗೆಬಗೆಯ ಅರ್ಥಗಳು ಹೀಗಿವೆ:

ಓಮಿತ್ಯೇದಕ್ಷರಮಿದಂ ಸರ್ವಮ್। - ಮಾಂ. ಉ. ೧.೧.೧
ತದಿದಂ ಗುಣಪೂರ್ತ್ಯೈವ ಸರ್ವಮಿತ್ಯೇವ ಶಬ್ದಿತಮ್

- ಬೃಹತ್ಸಂಹಿತಾ (ಮಾಂ.ಭಾ.)

'ಸ ಸರ್ವವಿದ್ಭುದ್ಯನುಭೂಶ್ಚ ಸರ್ವಃ.......' - ಭಾಗ ೨.೨.೭
'.......... ಸರ್ವಃ ಪೂರ್ಣಗುಣೋ ಯತಃ' - ಬೃಹತ್ಸಂಹಿತಾ (ಭಾ. ತಾ.ನಿ.)
'............ಪ್ರಾಣಃ ಸರ್ವಾಣಿ ಭೂತಾನಿ.......' - ಐತ. ಉ. ೨.೧.೨.೧೫
'..........................ಪೂರ್ಣತ್ವಾತ್ ಸರ್ವನಾಮಕಃ।
ಸರ್ವಾಣಿ ಬಹುರೂಪತ್ವಾತ್ ಸರ್ವರೂಪೇಷು ಪೂರ್ತಿತಃ।

- ಬ್ರಹ್ಮಾಂಡ (ಐತ. ಉ. ಭಾ.)

'ತದಾತ್ಮಾನಮೇವಾವೇದಹಂ ಬ್ರಹ್ಮಾಸ್ಮೀತಿ ತಸ್ಮಾತ್ತತ್ ಸರ್ವಮಭವತ್.......'

- ಬೃ. ಉ. ೩.೫.೪

ಬ್ರಹ್ಮಾಪಿ ಸರ್ವದಾऽऽತ್ಮಾನಮಹೇಯಂ ಗುಣಬೃಂಹಿತಮ್।
ಸರ್ವದಾಽಸ್ತೀತಿ ಮೇಯಂ ಚ ಬಿಜಾನಾತಿ ತಥೈವ ತು।
ಆತ ಏವ ಸಮಗ್ರತ್ವಂ ಸ್ವತ ಏವಾಸ್ಯ ಸರ್ವದಾ। -ಭವಿಷ್ಯತ್ಪರ್ವ (ಬೃ. ಉ. ಭಾ.)

ಸ್ರಷ್ಟಾ ಪಾತಾ ಚ ಸಂಹರ್ತಾ ನಿಯಂತಾ ಚ ಪ್ರಕಾಶಿತಾ।
ಯತಃ ಸರ್ವಸ್ಯ ತೇನಾಹಂ ಸರ್ವೋಽಸ್ಮೀತ್ಯೃಷಿಭಿಃ ಸ್ತುತಃ।

-ನಾರದೀಯ (ಗೀ. ಭಾ. ೭.೬)

ಸ್ರಷ್ಟೃತ್ವಾಚ್ಚೈವ ಪಾತೃತ್ವಾನ್ನಿಯಮಾಚ್ಚ ಪ್ರಕಾಶನಾತ್।
ಸರ್ವತ್ವಮುಕ್ತಂ ವಿಷ್ಣೋಸ್ತು ನತು ಸರ್ವಸ್ವರೂಪತಃ। - ಐ.ಭಾ. ೨.೧.೨.೧೫

..........ತೇ ಸರ್ವಸ್ಯ ಸರ್ವಾತ್ಮನ ಆತ್ಮವಸ್ತುನಃ । - ಭಾಗ ೧೦.೪.೧೮
'ಸರ್ವಃ ಸಂಪೂರ್ಣಸಾಮರ್ಥ್ಯಾತ್....' - ಭಾ. ತಾ.

ಸರ್ವಸ್ಯ ಸರ್ವದಾ ಜ್ಞಾನಾತ್ ಸರ್ವಮೇನಂ ಪ್ರಚಕ್ಷತೇ ।
- ಮಹಾಭಾರತ (೫.೬೯.೧೧)

ತ್ವದಧೀನಂ ಯತಃ ಸರ್ವಂ ಅತಃ ಸರ್ವೋ ಭವಾನಿತಿ ।
ವದಂತಿ ಮುನಯಃ ಸರ್ವೇ ನತು ಸರ್ವಸ್ವರೂಪತಃ ।
- ಪಾದ್ಮ (ಗೀ. ಭಾ. ೪.೨೪)

'........................... ಸರ್ವಸ್ಮಾ ಆತ್ಮನೇ ನಮಃ' - ಭಾಗ ೪-೨೪.೩೩
ಸರ್ವಾಂತರ್ಯಾಮಕತ್ವಾತ್ತು ಸರ್ವನಾಮಾ ಜನಾರ್ದನಃ ।
ನ ತು ಸರ್ವಸ್ವರೂಪತ್ವಾತ್ ಸರ್ವೇಶೋಽಸೌ ಹರಿರ್ಯತಃ ।
- ಬ್ರಹ್ಮತರ್ಕ (ಭಾ. ತಾ.)

ಸರ್ವಂ ಸಮಾಪ್ನೋಷಿ ತತೋಽಸಿ ಸರ್ವಃ । - ಗೀ. ೧೧.೪೦

'ಸರ್ವಮಿತ್ಯಾಕಾಶೇ' - ತೈ. ೩.೧೩

'ಸರ್ವಃ ಸರ್ವಪ್ರದತ್ವಾತ್ತು ಪ್ರಕೃತೌ ಪುರುಷೋತ್ತಮಃ' - ಯಜುಃಸಂಹಿತಾ(ತೈ.ಭಾ.)

ವಾಚ್ಯತಯಾ ವೇದಾಖ್ಯೈರವಸಹಿತತ್ವಾತ್ ಸರವಃ । ಸರವ ಏವ ಸರ್ವಃ ।
ನಿರ್ವಚನತ್ಯಾದೇಘೋತ್ತರಾಕಾರಲೋಪಃ - ಸ.ಸಂ.

ಬಹೂನಾಂ ಜನ್ಮನಾಮಂತೇ ಜ್ಞಾನವಾನ್ಮಾಂ ಪ್ರಪದ್ಯತೇ ।
ವಾಸುದೇವಃ ಸರ್ವಮಿತಿ ಸ ಮಹಾತ್ಮಾ ಸುದುರ್ಲಭಃ ॥ - ಗೀ. ೭.೧೯

ಸರ್ವತ್ರ ಸರ್ವತಿ ಗಚ್ಛತೀತಿ ಸರ್ವಃ । 'ಷರ್ವಗತೌ'
ಪ್ರಲಯೇ ಸರ್ವಾನ್ ಸರ್ವತಿ ಹಿನಸ್ತೀತಿ ಸರ್ವಃ । ' ಶರ್ವ ಹಿಂಸಾಯಾಮ್'

*****

ಕೋಶಗಳಲ್ಲಿ ಬಂದಿರುವಂತೆ 'ಸರ್ವ' ಶಬ್ದದ ಕೆಲವು ಅರ್ಥಗಳು ಹೀಗಿವೆ:

'ಸರ್ವರತ್ನಮಯೋ ಮೇರುಃ ಸರ್ವಾಶ್ರಯಮಯಂ ನಭಃ । ಸರ್ವತೀರ್ಥಮಯೀ ಗಂಗಾ ಸರ್ವವೇದಮಯೋ ಹರಿಃ ॥'
-ಇತಿ ವಹ್ನಿಪುರಾಣೇ

'ಅಸತಶ್ಚ ಸತಶ್ಚೈವ ಸರ್ವಸ್ಯ ಪ್ರಭವಾಪ್ಯಯಃ ।
ಸರ್ವಸ್ಯ ಸರ್ವದಾ ಜ್ಞಾನಾತ್ ಸರ್ವಮೇತಂ ಪ್ರಚಕ್ಷತೇ ॥'
- ಇತಿ ವಿಷ್ಣುಪುರಾಣಮ್

.... ಸರ್ವಮ್
ವಿಶ್ವಮಶೇಷಂ ಕೃತ್ಸ್ನಂ ಸಮಸ್ತನಿಖಿಲಾಖಿಲಾನಿ ನಿಃಶೇಷಮ್ ।
ಸಮಗ್ರಂ ಸಕಲಂ ಪೂರ್ಣಮಖಂಡಂ ಸ್ಯಾದನೂನಕೇ ॥ - ಅಮರಕೋಶ

ಸರ್ವಃ ಸಂಪೂರ್ಣಃ; ಸಮಗ್ರಂ; ಸಕಲಂ; ಸಮಸ್ತಂ; ಕೃತ್ಸ್ನಂ; ವಿಶ್ವಂ; ನಿಖಿಲಮ್;
ಅಖಿಲಮ್; - ಹಲಾಯುಧಕೋಶ

೩೬. ಕೋಶಗಳಲ್ಲಿ ಬಂದಿರುವಂತೆ 'ಮೂಲ' ಶಬ್ದದ ಅರ್ಥಗಳು ಹೀಗಿವೆ:

ಮೂಲಂ ಬುಧ್ನೋಽಂಘ್ರಿನಾಮಕಃ। - ಅಮರಕೋಶ
ಅಂಘ್ರಿರ್ನಾ ಪಾದಮೂಲಯೋಃ। - ಅಮರಕೋಶಟೀಕಾ
ಮೂಲಮಾದ್ಯೇ ಶಿಫಾಭಯೋಃ। - ಅಮರಕೋಶ
ಮವತೇ ಬಧ್ನಾತಿ ವೃಕ್ಷಾದಿಕಮಿತಿ ಮೂಲಮ್। - ಹಲಾಯುಧಕೋಶ

೩೭. 'ಸರ್ವ'ಶಬ್ದಕ್ಕೆ 'ನಾಮೈಕದೇಶೇ ನಾಮಗ್ರಹಣ'ನ್ಯಾಯದಿಂದ ವಿಷ್ಣುಸಹಸ್ರನಾಮದ ಸರ್ವಕಾಮದ, ಸರ್ವಗ, ಸರ್ವಜ್ಞ, ಸರ್ವತಶ್ಚಕ್ಷು, ಸರ್ವತೋಮುಖ, ಸರ್ವದರ್ಶನ, ಸರ್ವದರ್ಶೀ, ಸರ್ವದೃಕ್, ಸರ್ವದೃಗ್ವ್ಯಾಸ, ಸರ್ವಪ್ರಹರಣಾಯುಧ, ಸರ್ವಯೋಗವಿನಿಃಸೃತಃ, ಸರ್ವವಾಗೀಶ್ವರೇಶ್ವರಃ, ಸರ್ವಲಕ್ಷಣಲಕ್ಷಣ್ಯ, ಸರ್ವವಿತ್, ಸರ್ವಶಸ್ತ್ರಭೃತಾಂವರ, ಸರ್ವಸಹ, ಸರ್ವಾದಿ, ಸರ್ವಾಸುನಿಲಯ, ಸರ್ವೇಶ್ವರ - ಎಂಬ ಅರ್ಥಗಳನ್ನೂ ಗ್ರಹಿಸಿದಲ್ಲಿ ಇಂತಹ ನಾಮ, ರೂಪ, ಗುಣವಿಶಿಷ್ಟನಾದಂತಹ ಶ್ರೀಹರಿಯೇ ವಿಶ್ವದ ಮೂಲಕಾರಣ ಎಂಬ ಅನೇಕ ಅರ್ಥವಿಶೇಷಗಳನ್ನು ತಿಳಿಸುವ ಅನರ್ಘ್ಯಗ್ರಂಥರಾಶಿ ಎಂಬ ಅರ್ಥ 'ಸರ್ವಮೂಲ'ಶಬ್ದಕ್ಕೆ ಸ್ಫುರಿಸುತ್ತದೆ.

ಇದರಂತೆ ತತ್ವಮಸಿ ಪ್ರಸಂಗದಲ್ಲಿ ಹೇಗೋ ಹಾಗೆ ಸರ್ವಮೂಲ ಎಂಬುದನ್ನು ಸರ್ವಂ ಮೂಲಂ, ಸರ್ವೇಣ ಮೂಲಂ, ಸರ್ವಾಯ (ಸರ್ವಸ್ಮೈ) ಮೂಲಂ, ಸರ್ವಸ್ಮಾತ್ ಮೂಲಂ, ಸರ್ವೇಷಾಂ(ಸರ್ವಸ್ಯ) ಮೂಲಂ, ಸರ್ವಸ್ಮಿನ್ ಮೂಲಂ ಎಂಬುದಾಗಿ ಇನ್ನೂ ಅನೇಕ ರೀತಿಗಳಲ್ಲಿ ವಿಶ್ಲೇಷಿಸಲು ಸಾಧ್ಯವಿದೆ.

ಹೀಗೆ ಸರ್ವಮೂಲ ಎಂಬ ಹೆಸರೇ ಅದರ ಅರ್ಥವ್ಯಾಪ್ತಿಯನ್ನು ಸರ್ವಗ್ರಾಹಕ ಎಂಬುದಾಗಿ ತಿಳಿಸುವ ಮೂಲಕ ಅತ್ಯಂತ ಅದ್ಭುತವೆನ್ನಿಸುವ ಪದವಾಗಿದ್ದು ಶ್ರೀಮಧ್ವಾಚಾರ್ಯರ ಕೃತಿಶ್ರೇಣಿಗೆ ಸಾರ್ಥಕವಾಗಿ ಅನ್ವಯಿಸುವ ವಿಶಿಷ್ಟ ಹೆಸರಾಗಿದೆ.

★★★★★

ಪರಿಶಿಷ್ಟ-೨

ಸರ್ವಮೂಲಗ್ರಂಥಗಳ ಸಂಖ್ಯೆ

ಶ್ರೀಮದಾಚಾರ್ಯಕೃತವಾದ 'ಸರ್ವಮೂಲ' ಗ್ರಂಥಗಳ ಸಂಖ್ಯೆ ೩೭ ಎಂಬುದು ಅರ್ವಾಚೀನರ ಕಲ್ಪನೆ ಎಂಬುದು ಇತ್ತೀಚಿನ ಕೆಲವರ ವಾದ. ಆದರೆ ಸರ್ವಮೂಲಗ್ರಂಥಗಳನ್ನು ಖಚಿತವಾಗಿ ೩೭ ಎಂದು ಸೂಚಿಸುವ ಅನೇಕ ಪ್ರಾಚೀನ ಉಲ್ಲೇಖಗಳು ಉಪಲಬ್ಧವಿದ್ದು, ಅವುಗಳಲ್ಲಿ ಕೆಲವು ಹೀಗಿವೆ:

ಕೃಷ್ಣಂ ವಿದ್ಯಾಪತಿಂ ನತ್ವಾ ಪೂರ್ಣಬೋಧಾದಿಸದ್ಗುರೂನ್ ।
ಜಯತೀರ್ಥಮುನೀನ್ ನತ್ವಾ ವಕ್ಷ್ಯೇಽಹಂ ಗ್ರಂಥಮಾಲಿಕಾಮ್ ॥
ನಾರಾಯಣೇನ ವ್ಯಾಸೇನ ಪ್ರೇರಿತಸ್ತತ್ತ್ವಸಂವಿದೇ ।
ಗ್ರಂಥಾನ್ ಮಧ್ವಶ್ಚಕಾರಾಸೌ ಸಪ್ತತ್ರಿಂಶದಮಂದಧೀಃ ॥ ....

ತ್ರಿಂಶತ್ಸಹಸ್ರಸಂಖ್ಯಾಕಂ ದ್ವ್ಯಧಿಕಂ ತುಷ್ಟಿದಂ ಹರೇಃ ।
ಏತೇಷಾಂ ಪಾಠಮಾತ್ರೇಣ ಮಧ್ವೇಶಃ ಪ್ರೀಯತೇ ಹರಿಃ ॥

- ಶ್ರೀವ್ಯಾಸರಾಜರ ಗ್ರಂಥಮಾಲಿಕಾಸ್ತೋತ್ರ

ದಶ ಪಂಚ ಚ ಭಾಷ್ಯಾಣಿ ದಶಪ್ರಕರಣಾನಿ ಚ ।
ತಾತ್ಪರ್ಯಾಣಿ ಸ್ತುತೀ ಕಲ್ಪೌ ಸ್ಮೃತಿರ್ಯಮಕಮರ್ಣವಃ ॥
ತಂತ್ರಸಾರೋ ವಿವರಣಂ ಗ್ರಂಥಾ ಮಧ್ವಮುಖೋದ್ಗತಾಃ ।
ಏತೇಷಾಂ ಪಾಠಮಾತ್ರೇಣ ಪ್ರೀಯತಾಂ ಮೇ ಹಯಾನನಃ ॥

- ಶ್ರೀವಾದಿರಾಜರ ಶ್ರೀಪೂರ್ಣಪ್ರಜ್ಞಗ್ರಂಥಮಾಲಿಕಾಸ್ತುತಿ

ಭಾಷ್ಯಾಣಾಂ ದಶಕಂ ಚ ಪಂಚಕಯುತಂ ತಿಸ್ರಶ್ಚ ನಿರ್ಣೀತಯೋ
ವಿಷ್ಣೋಃ ಸ್ತೋತ್ರಯುಗಂ ದಶಪ್ರಕರಣಂ ಕಲ್ಪದ್ವಯಂ ಚ ಸ್ಮೃತಿಃ ।
ಶ್ರೀಕೃಷ್ಣಾಮೃತತಂತ್ರಸಾರಯಮಕನ್ಯಾಯಾವಲೀದೀಪನಂ
ಯೇನಾಕಾರಿ ಸದೈವ ಮಧ್ವಮುನಿರಾಡ್ದದ್ಯಾತ್ ಸುವಿದ್ಯಾಂ ಮಮ ॥

- ಶ್ರೀಯದುಪತ್ಯಾಚಾರ್ಯರ ಶ್ರೀಪೂರ್ಣಪ್ರಜ್ಞಗ್ರಂಥಮಾಲಿಕಾಸ್ತುತಿ

ಯೇನಾಕಾರಿ ಸುಲಕ್ಷಣದ್ವಯಮಥೋ ತತ್ತ್ವತ್ರಿಕಂ ಖಂಡನ-
ತ್ರಿಕಂ ನಿರ್ಣಯಸತ್ತ್ರಿಕಂ ಸುಗಹನಂ ಭಾಷ್ಯಾಖ್ಯಸಪ್ತದ್ವಯಮ್ ।
ಸತ್ತಾತ್ಪರ್ಯಯುಗಂ ಸ್ತುತಿತ್ರಿಕಮನುವ್ಯಾಖ್ಯಾನಸಾರೌ ಸ್ಮೃತಿಃ
ಕಲ್ಪಾವರ್ಣವಭಾರತೇ ವಿವರಣಂ ಪಾಯಾತ್ ಸ ಮಾಂ ಶಂಮುನಿಃ ॥

- ಶ್ರೀಬಿದರಹಳ್ಳಿ ಶ್ರೀನಿವಾಸತೀರ್ಥಕೃತ ಶ್ರೀಪೂರ್ಣಪ್ರಜ್ಞಗ್ರಂಥಮಾಲಿಕಾಸ್ತುತಿ

ಆಜ್ಞಾಂ ಶ್ರೀಧವಭಾರತೀಧವಕೃತಾಂ ಕುರ್ವನ್ ಸ್ವಮಾಲಾಮಣಿಮ್।
ಭೂತ್ವಾ ಭೂಮಿತಲೇ ಚ ಯಶ್ಚ ಜಯತೀರ್ಥಾಖ್ಯಾಯುತೋ ಯೋಗಿರಾಟ್॥

ಸಪ್ತತ್ರಿಂಶತಿಮೂಲಸಂಘವಿವೃತಿಂ ಚಕ್ರೇ ಚ ಯಂತಂ ಗುರುಮ್।
ಶ್ರೀಮನ್ನ್ಯಾಯಸುಧಾಬ್ಧಿತಬ್ದನಿಚಯೈರ್ವಾಚಾ ಭಜೇ ಭಕ್ತಿತಃ ॥ ೪ ॥

–ಶ್ರೀ ಅಡವಿ ಕೃಷ್ಣಾಚಾರ್ಯರು (ಆರಣ್ಯಕಾಚಾರ್ಯರ ಪುತ್ರ)
ಶ್ರೀ ನ್ಯಾಯಸುಧಾ ಟಿಪ್ಪಣೀ (ಲಘುಸುಧಾರಸರಂಜನೀ)

ಹರಿದಾಸಸಾಹಿತ್ಯದಲ್ಲಿ ಸಹ ಶ್ರೀಮದಾಚಾರ್ಯಕೃತಗ್ರಂಥಗಳ ಸಂಖ್ಯೆ ೩೭ ಎಂದು ನಿಖರವಾಗಿ ಉಲ್ಲೇಖಿಸಲ್ಪಟ್ಟಿದೆ :

೧. ಆರಾರುಮೇಲೊಂದು ಅಧಿಕಲೆಕ್ಕದ ಗ್ರಂಥಸಾರವನು ರಚಿಸಿ ಸಜ್ಜನರಿಗಿತ್ತು
....– ಶ್ರೀವ್ಯಾಸರಾಜರು

೨. ಮೂವತ್ತೇಳು ಗ್ರಂಥಗಳ ಸ್ಥಾಪಿಸಿದ ನಮ್ಮ ಅವಲಬೋಧರ ಭಜಿಸಿರಯ್ಯ
– ಶ್ರೀಪುರಂದರದಾಸರು

೩. ನಿಶಿಕರನಂತೆ ಶೋಭಿಸುವ ಮೂವತ್ತೇಳು ರಸಪೂರಿತವಾದ ದರುಶನ ಗ್ರಂಥಗಳ
ವಿರಚಿಸಿ –ಶ್ರೀವಿಜಯದಾಸರು

೪. ಧೀರ ನೀನೇಳಧಿಕ ತ್ರಿದಶಸಾರಗ್ರಂಥಗಳ ವಿರಚಿಸುತ ಮಹ
ಶೂರ ಶ್ರೀಗೋಪಾಲವಿಠ್ಠಲನ ಚಾರುಚರಣಕೆ ಅರ್ಪಿಸಿದ ಗುರು
- ಶ್ರೀಗೋಪಾಲದಾಸರು

೫. ಶ್ರುತ್ಯರ್ಥಗ್ರಂಥ ಮೂವತ್ತೇಳು ರಚಿಸಿ ದಯದಿಂದ ನಿನ್ನವರಿಗಿತ್ತು ಪಾಲಿಸಿದೆ
ಕರುಣಾಳು.... – ಶ್ರೀಜಗನ್ನಾಥದಾಸರು

೬. ಆರ್ಮೂರು ಏಳ್ನಾಲ್ಕು ಎಂಟುಗ್ರಂಥಗಳ ಸಾರಾರ್ಥ......
- ಶ್ರೀಜಗನ್ನಾಥದಾಸರು

೭. ನಡುಗೇಹಸುತ ವಿರಚಿಸಿದ ಮೂವತ್ತೇಳು ಗ್ರಂಥವಿದು...
–ಶ್ರೀಪ್ರಾಣೇಶದಾಸರು

ಈ ರೀತಿಯಾದ 'ಮೂವತ್ತೇಳು' ಎಂಬುದಕ್ಕೆ ಶ್ರೀಮದ್ಭಾಗವತದ ಆಧಾರದಲ್ಲಿ ಅಪೂರ್ವ ಅರ್ಥ ತೆರೆದುಕೊಳ್ಳುತ್ತದೆ:

ಸ್ಪರ್ಶೇಷು ಯತ್ ಷೋಡಶಮೇಕವಿಂಶಂ
ನಿಷ್ಕಿಂಚನಾನಾಂ ನೃಪ ಯದ್ಧನಂ ವಿದುಃ। (೨/೯/೬)

-ವ್ಯಾಖ್ಯಾನಗಳಿಂದ ಸ್ಫುಟಪಡುವಂತೆ ಇದರ ಅರ್ಥ - 'ಕ' ದಿಂದ 'ಮ' ವರೆಗಿನ ಅಕ್ಷರಗಳು ಸ್ಪರ್ಶಾಕ್ಷರಗಳು (ಸ್ಪರ್ಶಾಃ - ಕಾದಯೋ ಮಾಂತಾಃ - ವಿಜಯಧ್ವಜೀಯ). ಅದರಲ್ಲಿ ೧೬ನೆಯದು 'ತ'; ೨೧ನೆಯದು 'ಪ'. ಎಂದರೆ ಒಟ್ಟಾಗಿ 'ತಪ' ಎಂದರ್ಥ.

೧೬ + ೨೧ ಎಂಬುದು ೩೭ ಎಂದಾಗುತ್ತದೆ. ಎಂದರೆ ೩೭ ಎಂಬುದು ಪರಮಮುಖ್ಯವಾದ ಅರ್ಥದಲ್ಲಿ 'ತಪಸ್' ('ತಪ ಆಲೋಚನೇ') ಎಂಬ ಅರ್ಥವನ್ನು ಧ್ವನಿಸುತ್ತದೆ. ಇದರಿಂದ ಅಪರೋಕ್ಷಜ್ಞಾನದ ಸಾಧನೆಗೆ ಸರ್ವಮೂಲಗ್ರಂಥಗಳು ಮುಖ್ಯಆಕರವಾದ ಗ್ರಂಥರಾಶಿ ಎಂಬ ಮಹತ್ತರವಾದ ಅರ್ಥ ತೆರೆದುಕೊಳ್ಳುತ್ತದೆ. ಇವುಗಳ ಅಧ್ಯಯನಕ್ಕಿಂತ ಮಿಗಿಲಾದ ಬೇರೆ ತಪಸ್ಸು ಯಾವುದು ತಾನೆ ಇದೆ, ಅಲ್ಲವೆ!

ಸಂಖ್ಯಾಶಾಸ್ತ್ರದ ರೀತಿಯಲ್ಲಿ ೩೭ ಎಂಬುದು ಸ್ಫುರಿಸುವ ಅರ್ಥಗಳು ಸಹ ಅತ್ಯಂತ ಗಮನಾರ್ಹವಾಗಿವೆ :

೩+೭=೧೦; ಹತ್ತು ಎಂಬುದು ಪೂರ್ಣತೆಯ ಸಂಕೇತ ('ದಶೇತಿ ಸರ್ವಮುದ್ದಿಷ್ಟಮ್'; 'ಸರ್ವಂ ಪೂರ್ಣಮಿಹೋಚ್ಯತೇ'). ಇದರಿಂದ ಈ ಗ್ರಂಥಗಳು ಜ್ಞಾನಸಾಧನೆಗೆ ಪರಿಪೂರ್ಣ ಆಕರ ಎಂದಾಗುವುದು. ಸರ್ವಮೂಲಗಳಲ್ಲಿ ಪ್ರತಿಪಾದಿತವಾಗಿರುವುದು ಆತ್ಯಂತಿಕ ಅರ್ಥದಲ್ಲಿ ಪರಿಪೂರ್ಣನಾದ ಶ್ರೀಹರಿ ಎಂದರ್ಥ ('ಪೂರ್ಣಮದಃ ಪೂರ್ಣಮಿದಂ ...').

ಅದರಂತೆ ಹತ್ತು ಎಂಬುದು 'ದಶಪ್ರಮತಿ' ಎಂಬ ಶ್ರೀಮದಾಚಾರ್ಯರ ವೈದಿಕನಾಮಕ್ಕೂ ಸೂಚಕ. ಅದರ ಅರ್ಥ 'ಪೂರ್ಣಪ್ರಜ್ಞ' ಎಂದು. ಇದು ಈ ಸರ್ವಮೂಲಗ್ರಂಥದ ಕರ್ತೃಗಳು ಶ್ರೀಮನ್ಮಧ್ವಾಚಾರ್ಯರು ಎಂಬ ಅರ್ಥವನ್ನು ಸೂಚಿಸುವುದು. ಅದರಂತೆ ಇವುಗಳು ಜೀವಕೋಟಿಯಲ್ಲಿ ಪೂರ್ಣರಾದ ವಾಯುದೇವರ ಜೀವೋತ್ತಮತ್ವವನ್ನು ಸ್ಥಾಪಿಸುವ ಗ್ರಂಥಗಳು ಎಂಬ ಅರ್ಥವೂ ಸೂಚಿತ.

೩×೭=೨೧; ಇಪ್ಪತ್ತೊಂದು ಕುಭಾಷ್ಯಗಳು ಮಧ್ವಪೂರ್ವಕಾಲೀನ ಬ್ರಹ್ಮಸೂತ್ರಭಾಷ್ಯಗಳು. ಈ ಇಪ್ಪತ್ತೊಂದು ಕುಭಾಷ್ಯಗಳನ್ನೂ ಖಂಡಿಸುವ ಕೃತಿಗಳು ಎಂಬ ದೃಷ್ಟಿಯಲ್ಲೂ ಈ ಸಂಖ್ಯೆ ಸಾರ್ಥಕ ಎಂದಾಗುವುದು. ಅದರಂತೆ ೨೧ ಬಾರಿ ಭೂಪ್ರದಕ್ಷಿಣೆ ಮಾಡಿ ದುಷ್ಟಕ್ಷತ್ರಿಯರನ್ನು ಸಂಹರಿಸಿದ ಪರಶುರಾಮರೂಪದ ಶ್ರೀಹರಿಯಿಂದ ನಿರ್ಮಿತವಾದ ಪರಶುರಾಮಕ್ಷೇತ್ರವು ಸರ್ವಮೂಲಗ್ರಂಥಗಳನ್ನು ರಚಿಸಿದ ಶ್ರೀಮದಾಚಾರ್ಯರ ಜನ್ಮಭೂಮಿ ಎಂಬ ಅರ್ಥವನ್ನೂ ಗ್ರಹಿಸಬಹುದು.

೭-೩=೪; ಸರ್ವಮೂಲಗ್ರಂಥಗಳು ನಾಲ್ಕು ವೇದಗಳ ಸಾರ; ಇವುಗಳಿಂದ ಧರ್ಮಾದಿ ನಾಲ್ಕು ಪುರುಷಾರ್ಥಗಳೂ ಲಭ್ಯ. ಇವುಗಳನ್ನು ಬರೆದವರು ಭಾವಿಚತುರ್ಮುಖರು ಪರಶು ಧನುಸ್ ಗದಾ ಮತ್ತು ಬಾಣ ಎಂಬ ನಾಲ್ಕು ತೀರ್ಥಗಳಿಂದ ಸುತ್ತುವರೆದ ಪಾಜಕಕ್ಷೇತ್ರ ಇವರ ಅವತಾರಭೂಮಿ('ಪರಶ್ವಧಧನುರ್ಬಾಣಗದಾತೀರ್ಥೋಪಶೋಭಿತೇ') ಎಂಬ ಅರ್ಥಗಳು ಪ್ರಕಟವಾಗುವವು. ಬ್ರಹ್ಮಸೂತ್ರಗಳ ಮೇಲೆ ಬ್ರಹ್ಮಸೂತ್ರಭಾಷ್ಯ, ಅಣುಭಾಷ್ಯ, ಅನುವ್ಯಾಖ್ಯಾನ ಹಾಗೂ ನ್ಯಾಯವಿವರಣ ಎಂಬ ನಾಲ್ಕು ಗ್ರಂಥಗಳನ್ನು ರಚಿಸಿದವರು ಶ್ರೀಮದಾಚಾರ್ಯರು ಎಂಬ ಅರ್ಥವೂ ಸೂಚಿತ ಎನ್ನಬಹುದು.

೩೭ ಎಂಬಲ್ಲಿನ ೭ ಎಂಬುದು ಋಗಾದಿಸಪ್ತಮೂಲಸಚ್ಛಾಸ್ತ್ರಗಳಿಗೆ ಸಂಕೇತ; ೩ ಎಂಬುದು ಅವುಗಳ ಶ್ರವಣ ಮನನ ಧ್ಯಾನವೆಂಬ ಅಧ್ಯಯನಕ್ಕೆ ಸಂಕೇತ. ಪುನಃ ೩ ಎಂಬುದು ಜ್ಞಾನ ವೈರಾಗ್ಯ ಭಕ್ತಿ ಎಂಬ ಮೂರು ಫಲಶ್ರುತಿ ಎಂಬುದಕ್ಕೆ ಸಂಕೇತ.

೩+೭=೧೦; ೧+೦=೧ ಎಂಬುದು ಶ್ರೀಹರಿಯೊಬ್ಬನೇ ಸ್ವತಂತ್ರ ಎಂಬ ಪರಮತತ್ತ್ವಕ್ಕೆ ಸೂಚಕ ('ಸ್ವತಂತ್ರೋ ಭಗವಾನ್ ವಿಷ್ಣುಃ ...'). ಸ್ವತಂತ್ರನಾದ ಅವನ ಹೊರತು ಇತರ ಜಗತ್ತು ಶೂನ್ಯಪ್ರಾಯ ಎಂಬುದು ಸಹ ('ಯದನುಗ್ರಹತಃ ಸಂತಿ ನ ಸಂತಿ ಯದುಪೇಕ್ಷಯಾ') ಸೂಚಿತ.

೩×೭=೨೧; ೨+೧=೩; ಇದೂ ಸಹ ಶ್ರವಣ ಮನನಾದಿ ಮೂರು ಸಾಧನಗಳಿಂದ ಜ್ಞಾನಭಕ್ತ್ಯಾದಿ ಮೂರು ಸಿದ್ಧಿಸಿ ಬಂಧಕವಾದ ಲಿಂಗದೇಹ, ಅನಿರುದ್ಧದೇಹ ಹಾಗೂ ಸ್ಥೂಲದೇಹ ಎಂಬ ಮೂರುದೇಹಗಳಿಂದ ಬಿಡುಗಡೆರೂಪವಾದ ಪರಮಪುರುಷಾರ್ಥ-ವಾದ ಮೋಕ್ಷಕ್ಕೆ ಸಾಧಕ.

ಹೀಗೆ ಬಗೆಬಗೆಯ ಅರ್ಥಗಳನ್ನು ಈ ೩೭ ಎಂಬ ಸಂಖ್ಯೆಯಿಂದಲೇ ಪಡೆಯಲು ಸಾಧ್ಯ.

ಮೂವತ್ತೇಳು ಎಂಬಲ್ಲಿ ಮೂರು ಎಂಬುದು 'ತ'ವರ್ಗದ ಅಕ್ಷರಗಳಲ್ಲಿ 'ದ' ಎಂದು, ಏಳು ಎಂಬುದು 'ಯ'ವರ್ಗದಲ್ಲಿ 'ಸ' ಎಂದು ಆಗಿವೆ. ಎಂದರೆ ಮೂವತ್ತೇಳು ಎಂಬುದಕ್ಕೆ 'ದಾಸ' ಎಂಬ ಅರ್ಥ ಸಂಖ್ಯಾಶಾಸ್ತ್ರದಂತೆ ಸ್ಪಷ್ಟಪಡುತ್ತದೆ. ಅದರಂತೆ ಅದನ್ನು ವ್ಯುತ್ಕ್ರಮವಾಗಿ ಓದಿದಾಗ ೭೩ (ಸದಾ) ಎಂದಾಗುತ್ತದೆ. ಇವೆರಡನ್ನೂ ಜೊತೆಯಾ ಓದಿದಾಗ ಸದಾದಾಸ ಎಂಬ ಅರ್ಥ ನಿಷ್ಪನ್ನವಾಗುತ್ತದೆ. ಮಹಾಲಕ್ಷ್ಮೀ ಹಾಗೂ ಸಕಲಜೀವರು ಸದಾ ಶ್ರೀಹರಿಯ ದಾಸರು ಎಂಬುದೇ ಈ ಮೂವತ್ತೇಳು ಸಂಖ್ಯೆಯ ಸರ್ವಮೂಲಗ್ರಂಥಗಳ ಮುಖ್ಯಭಾವ ಎಂದಾಗುವುದು. ಇದು ಐಕ್ಯವನ್ನು ಹೇಳುವ ಅದ್ವೈತವನ್ನೂ ಮುಕ್ತಿಯಲ್ಲಿ ಸಾಮ್ಯಹೇಳುವ ವಿಶಿಷ್ಟಾದ್ವೈತವನ್ನೂ ನಿರಾಕರಿಸುವ ಅಪೂರ್ವ ಸಿದ್ಧಾಂತ ಎಂಬುದು ಇದರಿಂದ ತಿಳಿಯುವುದು.

ಸರ್ವಮೂಲ ಎಂಬ ಪದದ ಮೊದಲ ಅಕ್ಷರ 'ಸ' (೭), ಕೊನೆಯ ಅಕ್ಷರ 'ಲ' (೩) ಎಂದರೆ ಸರ್ವಮೂಲಗ್ರಂಥಗಳ ಸಂಖ್ಯೆ ಮೂವತ್ತೇಳು ಎಂಬುದಕ್ಕೆ ಸರ್ವಮೂಲ ಎಂಬ ಪದವೇ ಗಮಕ ಎಂದಾಗುವುದು.

ಸರ್ವ (ಸರವ)ಮೂಲ ಎಂಬುದು ಸಂಖ್ಯಾಶಾಸ್ತ್ರದಂತೆ ೭, ೨, ೪, ೫, ೩ ಎಂದಾಗಿ, ಇವುಗಳ ಒಟ್ಟು ಮೊತ್ತ ೨೧ ಎಂದಾಗುವುದು. ಇದು ಈ ಮೊದಲೇ ತಿಳಿಸಿರುವಂತೆ ೨೧ ದುರ್ಭಾಷ್ಯಗಳ ಖಂಡನೆ ಮಾಡುವ ಕೃತಿಗಳು ಸರ್ವಮೂಲ ಮೊದಲಾದ ಹಿಂದೆ ತಿಳಿಸಿದ ಎಲ್ಲಾ ಅರ್ಥಗಳನ್ನು ನೀಡುತ್ತದೆ.

★★★★★

ಪರಿಶಿಷ್ಟ-೩

ಶ್ರೀಮನ್ಮಧ್ವಾಚಾರ್ಯರ ಇತರ ಕೃತಿಗಳು

ಈವರೆಗೆ ತಿಳಿಸಿದಂತೆ ಶ್ರೀಮದಾಚಾರ್ಯರ ಸರ್ವಮೂಲ ಗ್ರಂಥಗಳ ಸಂಖ್ಯೆ ಮೂವತ್ತೇಳು ಎಂಬುದು ಅತ್ಯಂತ ಸ್ಫುಟವಾಗಿ ಸಂಪ್ರದಾಯ ಅಂಗೀಕರಿಸಿರುವ ವಿಚಾರ. ಇದರೊಂದಿಗೆ ಶ್ರೀಮದಾಚಾರ್ಯರ ಒಟ್ಟು ಕೃತಿಗಳ ಸಂಖ್ಯೆ ಅಪಾರ ಎಂಬ ನಿಖರ ಮಾಹಿತಿಯು ಸಹ ಗಮನಾರ್ಹವೇ ಆಗಿದೆ.

ಸುಮಧ್ವವಿಜಯದಲ್ಲಿಯೇ ಬಂದಿರುವ ಈ ಕೆಳಗಿನ ಮಾತು ಶ್ರೀಮದಾಚಾರ್ಯರ ಒಟ್ಟು ಕೃತಿಗಳ ಸಂಖ್ಯೆ ಎಣಿಕೆಗೆ ಮೀರಿದ್ದು ಎಂದು ತಿಳಿಸುತ್ತದೆ :

> ನಾನಾಸುಭಾಷಿತಸ್ತೋತ್ರಗಾಥಾದಿಕೃತಿಸತ್ಕೃತೀಃ।
> ತ್ವಯಿ ರತ್ನಾಕರೇ ರತ್ನಶ್ರೇಣೀರ್ವಾ ಗಣಯಂತಿ ಕೇ॥ (೧೫.೮೪)

ಇದಕ್ಕೆ ವೇದಾಂಗತೀರ್ಥರು, ಶ್ರೀವಿಶ್ವಪತಿತೀರ್ಥರು ಹಾಗೂ ಶ್ರೀಛಲಾರಿ ಶೇಷಾಚಾರ್ಯರು ತಮ್ಮ ವ್ಯಾಖ್ಯಾನಗಳಲ್ಲಿ ಶ್ರೀಮದಾಚಾರ್ಯರ ಕೃತಿಗಳ ಸಂಖ್ಯೆ ಅಪಾರ ಎಂಬ ಅರ್ಥವನ್ನೇ ಬರೆದಿರುವರು.

ನಾನಾವಿಧಸುಭಾಷಿತ (ಸ್ತೋತ್ರ) ಗಾಥಾದೀನಾಂ ಕೃತಿಃ ನಿರ್ಮಾಣಂ, ತದಾತ್ಮಿಕಾಃ ಶೋಭನಾನಿ ಕರಣಾನಿ ಕೇ ಗಣಯಂತಿ। ರತ್ನಾಕರೇ ಸಮುದ್ರೇ ರತ್ನಶ್ರೇಣೀರ್ವಾ ರತ್ನಸಮೂಹಾನಿವ (ವೇದಾಂಗತೀರ್ಥರು)

ತ್ವದೀಯಕೃತೀನಾಂ ಸಾಕಲ್ಯೇನ ಗಣನೇಽಪಿ ನ ಕೋಽಪಿ ಸಮರ್ಥಃ , ಕಿಮು ವರ್ಣನೇ ಇತಿ ಭಾವಃ। (ವಿಶ್ವ); ಯಥಾ ಸಮುದ್ರೇ ಬಹು ರತ್ನಾನಿ ಸಂತಿ ತಥಾ ತ್ವಯ್ಯಪಿ ಬಹುಗ್ರಂಥಾಃ ಸಂತೀತಿ ಭಾವಃ। (ಛ).

ಶ್ರೀನಾರಾಯಣಪಂಡಿತರು ಪ್ರಮೇಯನವಮಾಲಿಕೆಯಲ್ಲಿ 'ಶತಗ್ರಂಥಕರ್ತಾ' (ಶ್ಲೋ.೨೯) ಎಂದು ಸ್ಪಷ್ಟವಾಗಿ ತಿಳಿಸಿದ್ದು ಅದರ ವ್ಯಾಖ್ಯಾನಗಳು ಹೀಗಿವೆ:

(೧) ಶತಗ್ರಂಥಕರ್ತಾ - ಶತಶಬ್ದೋ ಬಹುತ್ವಾರ್ಥಃ। ಶ್ರೀಮತ್ಸೂತ್ರ -ಭಾಷ್ಯೋಪನಿಷದ್ಭಾಷ್ಯ ಗೀತಾಭಾಷ್ಯಾದಿ ಬಹುಗ್ರಂಥಕರ್ತೇತ್ಯರ್ಥಃ ।

- ಶ್ರೀರಘುವರ್ಯತೀರ್ಥರು

(೨) ಶತಗ್ರಂಥಕರ್ತಾ - ಶತಶಬ್ದೋ ಬಹುತ್ವಮಾಹ। ತಥಾಚ ಅನೇಕಪ್ರಕರಣ ದಶೋಪನಿಷದ್ಭಾಷ್ಯ - ಸೂತ್ರಭಾಷ್ಯ - ಅಣುಭಾಷ್ಯ - ನ್ಯಾಯವಿವರಣ- ಗೀತಾಭಾಷ್ಯ- ಗೀತಾತಾತ್ಪರ್ಯ-ಭಾಗವತತಾತ್ಪರ್ಯ-ಮಹಾಭಾರತತಾತ್ಪರ್ಯನಿರ್ಣಯ-ತಂತ್ರಸಾರ-

ದ್ವಾದಶಸ್ತೋತ್ರ-ಯಮಕಭಾರತಾದಿ ಬಹುಗ್ರಂಥನಿರ್ಮಾತೇತ್ಯರ್ಥಃ।

- ಶ್ರೀಗೂಢಭಾವ ಪ್ರಕಾಶಿಕಾ - ಶ್ರೀರಾಘವೇಂದ್ರಸ್ವಾಮಿಗಳು.

ಇವುಗಳಿಂದ ಸ್ಫುಟಪಡುವಂತೆ ಶ್ರೀಮದಾಚಾರ್ಯರ ಒಟ್ಟು ಕೃತಿಗಳ ಸಂಖ್ಯೆ ಎಣಿಕೆಗೆ ಮೀರಿದ್ದು ಎಂದಾಗುವುದು.

ಶ್ರೀಮದಾಚಾರ್ಯರ ಪ್ರತಿಮಾತೂ ಸಹ ಅನರ್ಘ್ಯಶಾಸ್ತ್ರಕೃತಿ. ನ ಭಾರತೀ ಮೇಽಂಗ ಮೃಷೋಪಲಕ್ಷತೇ(೨.೬.೩೩) ಎಂಬ ಭಾಗವತದ ಮಾತಿನಲ್ಲಿ ಬ್ರಹ್ಮವಾಯುಗಳ ಮಾತಿನ ಹಿರಿಮೆ ಸ್ಪಷ್ಟವಾಗಿ ನಿರೂಪಿತವಾಗಿದೆ. ಸತ್ಯಲೋಕಾದಿಪತಿಗಳಾದ ಅವರ ಪ್ರತಿಯೊಂದು ಮಾತೂ ಸತ್ಯಶಬ್ದವಾಚ್ಯವಾದ ಬ್ರಹ್ಮಸೂತ್ರದ ಭಾಷ್ಯರೂಪವಾದ ಶಾಸ್ತ್ರವಚನ. ಪಾಠಪ್ರವಚನ ಕಾಲಕ್ಕೆ ಸ್ವತಃ ಅವರ ಮುಖದಿಂದ ಹೊರಹೊಮ್ಮುತ್ತಿದ್ದ ವಿವರಣೆ ಶಾಸ್ತ್ರಸಂದರ್ಭವೇ ಆಗುತ್ತಿತ್ತು. ಅದನ್ನು ಜ್ಞಾನಲೋಭದ ಶಿಷ್ಯರುಗಳು ಕೂಡಲೇ ದಾಖಲುಗೊಳಿಸುತ್ತಿದ್ದರು ಎಂಬುದು ತೀರಾ ಸಾಮಾನ್ಯ ವಿಚಾರಕ್ಕೂ ನಿಲುಕುವ ಅಂಶ. ಇಂದೂ ಸಹ ಅನೇಕರ ಪಾಠಪ್ರವಚನಗಳು ಆ ರೀತಿ ಗ್ರಂಥಗಳ ರೂಪದಲ್ಲಿ ಪ್ರಕಾಶನಗೊಳ್ಳುವುದು ಹೊಸ ವಿಷಯವೇನಲ್ಲ. ಇದರಿಂದ ಶ್ರೀಮದಾಚಾರ್ಯರ ಕೃತಿಗಳ ಸಂಖ್ಯೆ ಗಣನೆಗೆ ಮೀರಿದ್ದು ಎಂಬ ಮಾತು ಸರ್ವಥಾ ಅತಿಶಯೋಕ್ತಿಯಲ್ಲ. ಅಧ್ಯಯನಸೌಕರ್ಯ ಮೊದಲಾದ ಕಾರಣದಿಂದ ಸರ್ವಮೂಲ ಎಂಬುದಾಗಿ ಅವರ ಮೂವತ್ತೇಳು ಗ್ರಂಥಗಳು ಸಂಪ್ರದಾಯದಿಂದ ವಿಶೇಷವಾಗಿ ಸಂರಕ್ಷಿತವಾಗಿ ಉಳಿದುಕೊಂಡುಬಂದಿವೆ ಎನ್ನಬಹುದು.

ಸರ್ವಮೂಲ ಆದ್ಯಂತಶ್ಲೋಕಗಳ ಸಂಗ್ರಹಗಳಲ್ಲಿ ಶ್ರೀಕೃಷ್ಣಪದ್ಯ ಮೊದಲಾದ ಕೆಲವು ಕೃತಿಗಳು ಲಿಖಿತವಾಗಿರುವುದು ಗಮನಾರ್ಹ. ಈ ಹಿನ್ನಲೆಯಲ್ಲಿ ಅನೇಕ ಮೂಲಗಳಿಂದ ಬೆಳಕಿಗೆ ಬಂದಿರುವ ಅಂತಹ ಕೃತಿಗಳ ವಿವರ ಹೀಗಿದೆ :

'ಸರ್ವಮೂಲ'ವೆಂಬುದಾಗಿ ಪ್ರಸಿದ್ಧವಾಗಿರುವ ಈ ಮೂವತ್ತೇಳು ಗ್ರಂಥಗಳೊಂದಿಗೆ (೧) ಕಂದುಕಸ್ತುತಿ ಎಂಬ ಒಂದು ಸ್ತೋತ್ರ ಮತ್ತು (೨) ಬಿಲ್ವಮಂಗಲಃ ಸಾಧುಃ ಎಂಬ ಒಂದು ವಾಕ್ಯಗಳನ್ನು ಆಚಾರ್ಯ ರಚನೆಯೆಂಬುದಾಗಿ ಒಮ್ಮತದಿಂದಲೇ ಸಂಪ್ರದಾಯ ಅಂಗೀಕರಿಸಿದೆ. ಸರ್ವಮೂಲ ಗ್ರಂಥಗಳ ಆದ್ಯಂತ ಶ್ಲೋಕಗಳ ಸಂಗ್ರಹರೂಪ ಕೃತಿಗಳಲ್ಲೂ, ಸರ್ವಮೂಲ ಗ್ರಂಥಗಳ ಲಿಖಿತಕೋಶಗಳಲ್ಲೂ ಇವು ಆಚಾರ್ಯಕೃತ ಎಂಬುದಾಗಿಯೇ ದಾಖಲಿಸಲ್ಪಟ್ಟಿರುವುದರಿಂದ ಈ ಬಗ್ಗೆ ವಿವಾದಕ್ಕೆ ಅವಕಾಶವೇ ಇಲ್ಲ. 'ಬಿಲ್ವಮಂಗಲ ಸಾಧುಃ' ಎಂಬ ವಾಕ್ಯಕ್ಕೆ ಶ್ರೀಸುಬ್ರಹ್ಮಣ್ಯಮಠದ ಶ್ರೀವಿಜ್ಞಾನತೀರ್ಥರು ಹಾಗೂ ಶ್ರೀಉತ್ತರಾದಿಮಠದ ಶ್ರೀಸತ್ಯಪರಾಯಣತೀರ್ಥರು ವ್ಯಾಖ್ಯಾನಗಳನ್ನು ರಚಿಸಿರುವರು. ಇದರಿಂದ ಸಕಲಮಾಧ್ವರಿಗೂ ಇವು ಶ್ರೀಮದಾಚಾರ್ಯರ ಕೃತಿಗಳು ಎಂದು ಸಂಪ್ರತಿಪನ್ನ ಎಂದಾಗುವುದು. ಅದರಂತೆ ಸರ್ವಮೂಲವೆಂಬುದಾಗಿ

ಪ್ರಸಿದ್ಧವಿರುವ ಕೃತಿಗಳೊಂದಿಗೆ ಶ್ರೀಮದಾಚಾರ್ಯರು ಇತರ ಕೃತಿಗಳನ್ನೂ ರಚಿಸಿರುವರೆಂದು ಒಪ್ಪಬೇಕಾಗುವುದು.

೧. ಕಂದುಕಸ್ತುತಿ

ಅಂಬರಗಂಗಾಚುಂಬಿತಪಾದಃ ಪದತಲವಿದಲಿತಗುರುತರಶಕಟಃ ।
ಕಾಲಿಯನಾಗಕ್ಷ್ವೇಲನಿಹಂತಾ ಸರಸಿಜನವದಲವಿಕಸಿತನಯನಃ ॥
ಕಾಲಘನಾಲೀಕರ್ಬುರಕಾಯಃ ಶರಶತಶಕಲಿತರಿಪುಶತನಿವಹಃ ।
ಸಂತತಮಸ್ಮಾನ್ ಪಾತು ಮುರಾರಿಃ ಸತತಗಸಮಜವಖಗಪತಿನಿರತಃ ॥

-ಕಂದುಕಸ್ತುತಿ ಅಥವಾ ಶ್ರೀಕೃಷ್ಣಪದ್ಯ ಎಂಬುದಾಗಿ ಪ್ರಸಿದ್ಧವಾಗಿರುವ ಎರಡು ಶ್ಲೋಕಗಳ ಈ ಶ್ಲೋಕರೂಪಕೃತಿ ಶ್ರೀಮದಾಚಾರ್ಯರು ಬಾಲ್ಯದಲ್ಲಿ ಚೆಂಡಾಟವಾಡುವಾಗ ರಚಿಸಿದ್ದು ಎಂದು ಪ್ರತೀತಿ. ಇದರ ಲಯ ಚೆಂಡಿನಗತಿಗೆ ಅನುಗುಣವಾಗಿರುವುದು ಇದನ್ನು ದೃಢಪಡಿಸುತ್ತದೆ. ಚೆಂಡಾಟದ ಸಮಯದಲ್ಲೂ ಭಗವಂತನಿಗೆ ಈ ಜಗತ್ತಿನ ಸೃಷ್ಟಿ ಮೊದಲಾದ ಕಾರ್ಯಗಳು ಚೆಂಡಾಟದಂತೆ ಒಂದು ಲೀಲೆಮಾತ್ರ (ಲೋಕವತ್ತು ಲೀಲಾಕೈವಲ್ಯಂ - ಬ್ರಹ್ಮಸೂತ್ರ; ಸೃಷ್ಟಿಸಂಹಾರ ಲೀಲಾವಿಲಾಸಾತತಂ -ದ್ವಾದಶಸ್ತೋತ್ರ; ಬಾಲಃ ಕ್ರೀಡನಕೈರಿವ -ಮಹಾಭಾರತ)ಎಂಬ ಅನುಸಂಧಾನಕ್ರಮವನ್ನು ತಿಳಿಸಿಕೊಡುವ ಆಚಾರ್ಯರ ಅಮೋಘಕಾರ್ಯಕ್ಕೆ ಇದು ನಿದರ್ಶನದಂತಿದೆ. ಇಂತಹ ರಚನೆಗಳು ಸಂಸ್ಕೃತದಲ್ಲಿ ಅಪರೂಪ. ಶ್ರೀವಿಜಯಧ್ವಜತೀರ್ಥರ ಪಂಚಮಸ್ಕಂಧದ ಅಂತಿಮ ಮಂಗಳಶ್ಲೋಕಗಳು ಇದೇ ಛಂದಸ್ಸಿನಲ್ಲಿ ರಚಿತವಾಗಿವೆ. ಶ್ರೀನಾರಾಯಣಪಂಡಿತರ ಡಮರುಗ ದಾಟಿಯ ಶಿವಸ್ತುತಿ, ಶ್ರೀವಾದಿರಾಜಸ್ವಾಮಿಗಳ ಅಶ್ವದಾಟೀ ದಶಾವತಾರಸ್ತುತಿ ಮೊದಲಾದ ಕೃತಿಗಳು ಇದರ ಸ್ಫೂರ್ತಿಯಿಂದ ರಚಿತವಾದ ಕೃತಿಗಳು ಎನ್ನಬಹುದು.

೨. ಬಿಲ್ವಮಂಗಲಃ ಸಾಧುಃ

'ಬಿಲ್ವಮಂಗಲಃ ಸಾಧುಃ' ಎಂಬ ಏಳು ಅಕ್ಷರಗಳ ವಾಕ್ಯ ಅವರು ಸಂಕಲ್ಪಿಸಿದ್ದ ಒಟ್ಟು ಮೂವತ್ತೆರಡುಸಾವಿರ ಗ್ರಂಥಗಳ ಸಂಖ್ಯೆಗೆ ಪೂರಕವಾದ ರಚನೆ ಎಂದು ಪ್ರತೀತಿ. ಬಿಲ್ವಮಂಗಲ ಎಂಬ ಒಬ್ಬ ಭಕ್ತನ ಪ್ರಾರ್ಥನೆಯಂತೆ ರಚಿತವಾಗಿದ್ದು ಇದು ಎಂಬ ಕೆಲವರ ಹೇಳಿಕೆಗೆ ಯಾವುದೇ ಆಧಾರವೂ ಲಭ್ಯವಿಲ್ಲ.

ಶ್ರೀಸತ್ಯಪರಾಯಣತೀರ್ಥರು ಸ್ಪಷ್ಟವಾಗಿ 'ಬಿಲ್ವಮಂಗಲಃ ಸಾಧುಃ' ಎಂಬ ವಾಕ್ಯವನ್ನು ಸರ್ವಮೂಲಾಂತರ್ಭೂತ ಎಂದು ಸಂಪ್ರದಾಯವನ್ನು ಉಲ್ಲೇಖಿಸಿರುವರು : **'ಬಿಲ್ವಮಂಗಲ ಸಾಧುಃ' ಇತಿ ಸರ್ವಜ್ಞೋಕ್ತಂ ವಾಕ್ಯಂ ಸರ್ವಮೂಲಾಂತರ್ಭೂತಂ**

೧. ಗಮನಾಸನಸಂಕಥಾದಿಲೀಲಾಃ ಸ್ಮೃತಿಮಾತ್ರೇಣ ಭವಾಪವರ್ಗದಾತ್ರೀಃ।
ಕಥಮಪ್ಯಮರಾಃ ಪ್ರಪಂಚಯೇಯುರ್ನನು ಮಧ್ವಸ್ಯ ನ ಮಾದೃಶೋಽಲ್ಪಬೋಧಾಃ॥(೧೩.೪೨)

ಇತಿ ಸಂಪ್ರದಾಯವಿದಃ । ಇದನ್ನು ಶ್ರೀವಿಜ್ಞಾನತೀರ್ಥರು 'ಸಪ್ತಾಕ್ಷರೀ' ಎಂದು ವಿಶಿಷ್ಟರೀತಿಯಲ್ಲಿ ಉಲ್ಲೇಖಿಸಿ ವ್ಯಾಖ್ಯಾನಿಸಿದ್ದಾರೆ[೧].

ಈ ಎರಡು ಕೃತಿಗಳು ಸರ್ವಮೂಲಾದ್ಯಂತ ಶ್ಲೋಕಸಂಗ್ರಹರೂಪವಾದ ಅನೇಕ ಪ್ರಾಚೀನ ಹಸ್ತಪ್ರತಿಗಳಲ್ಲೂ ಉಲ್ಲೇಖಿಸಲ್ಪಟ್ಟಿದೆ[೨]. ಬಿದರಹಳ್ಳಿ ಶ್ರೀನಿವಾಸತೀರ್ಥರು ರಚಿಸಿರುವ ಸರ್ವಮೂಲಾದ್ಯಂತಶ್ಲೋಕಸಂಗ್ರಹದಲ್ಲೂ ಇವು ಉಲ್ಲೇಖಿಸಲ್ಪಟ್ಟಿವೆ.

ಈ ಎರಡೂ ವ್ಯಾಖ್ಯಾನದಿಂದ ಸ್ಫುಟಪಡುವಂತೆ ಇದು ಆಚಾರ್ಯರ ಸಂದೇಶಪರವಾದ ರಚನೆ.

೩. ಚಂಚಲೋಽಯಂ ಮನೋಮೀನಃ

ಅನೇಕ ಪ್ರಾಚೀನ ಕೃತಿಗಳಲ್ಲಿ ಈ ಕೆಳಗಿನ ಶ್ಲೋಕವು ಶ್ರೀಮದಾಚಾರ್ಯರ ಕೃತಿಯೆಂದೇ ಉಲ್ಲೇಖಿಸಲ್ಪಟ್ಟಿದೆ :

> **ಚಂಚಲೋಽಯಂ ಮನೋಮೀನಃ ಸಮಾನೇಯೋ ಹರಿಸ್ಥಲೇ ।**
> **ವಿಷಯೋದಕಸಂಚಾರೀ ಸುಯತ್ನಬಡಿಶಾಹೃತಃ ॥**

ಇದಕ್ಕೆ ಹತ್ತಾರು ಪತ್ರಗಳಷ್ಟು ವಿಸ್ತಾರವಾದ ವ್ಯಾಖ್ಯಾನವೊಂದು ನನ್ನ ಸಂಗ್ರಹ (ಶ್ರೀಜಯತೀರ್ಥ ಸಂಸ್ಥೆ ಹಸ್ತಲಿಖಿತ ಗ್ರಂಥಾಲಯ ವ್ಯಾಸನಕೆರೆ)ದಲ್ಲಿ ಉಪಲಬ್ಧವಿದೆ ಪ್ರಾಯಃ ಅದು ಶ್ರೀಸತ್ಯಪರಾಯಣತೀರ್ಥರ ರಚನೆ[೩]. ಶ್ರೀವಾದಿರಾಜಸ್ವಾಮಿಗಳು ಈ ಶ್ಲೋಕಕ್ಕೆ ವ್ಯಾಖ್ಯಾನ ರಚಿಸಿರುವ ವಿಷಯ ಶ್ರೀಕೂಡಲಿ ಆರ್ಯಅಕ್ಷೋಭ್ಯತೀರ್ಥಮಠದ ಶ್ರೀನಾರಾಯಣತೀರ್ಥರು ಬರೆದಿರುವ ಒಂದು ಕೈಬರಹದ ದಾಖಲೆ[೪]ಯಲ್ಲಿ ಕಂಡುಬರುತ್ತದೆ. ''**ಈ ಎರಡೂ ಶ್ರೀಮದಾನಂದತೀರ್ಥ ಮುನಿಗಳ ಮುಖದಿಂದ ಹೊರಟಿರುವ ವಾಕ್ಯಗಳಿಗೆ ಶ್ರೀವಾದಿರಾಜರು ವ್ಯಾಖ್ಯಾನ ಮಾಡಿರುತ್ತಾರೆ. ನಮ್ಮ ಶ್ರೀನ್ಯಾಯಸುಧಾ ಗಂಟಿನಲ್ಲಿ ಇಟ್ಟಿದ್ದೇವೆ -ಶ್ರೀವ್ಯಾಸರಾಜಗುರೂಣಾಂತೇವಾಸಿ ನಾರಾಯಣಯತಿಃ ಶಕೆ ೧೪೬೭.**''

''ವಿಷಯಗಳು ಎಂಬ ನೀರಿನಲ್ಲಿ ಸಂಚರಿಸುವ ಈ ಚಂಚಲವಾದ ಮನಸ್ಸು ಎಂಬ ಮೀನನ್ನು ಸೂಕ್ತಪ್ರಯತ್ನವೆಂಬ ಗಾಳದಿಂದ ಹಿಡಿದು ಶ್ರೀಹರಿ ಎಂಬ ಸ್ಥಳಕ್ಕೆ ಎಳೆತರಬೇಕು '' ಎಂಬುದು ಇದರ ಭಾವ. ಒಂದುರೀತಿಯಲ್ಲಿ ಇದು ಅವರ ದ್ವಾದಶಸ್ತೋತ್ರದ 'ತದಲಂ ಬಹುಲೋಕವಿಚಿಂತನಯಾ ಪ್ರವಣಂ ಕುರು ಮಾನಸಮೀಶಪದೇ' ಎಂಬ ಮಾತಿಗೆ

---

೧. ಇವೆರಡನ್ನೂ ನಮ್ಮ 'ವ್ಯಾಸಮಧ್ವಸಂಶೋಧನಪ್ರತಿಷ್ಠಾನ'ವು ಪ್ರಕಾಶನ ಪಡಿಸಿದೆ (೨೦೧೦).

೨. ಇದಕ್ಕೆ ಹಲವು ಪಾಠಾಂತರಗಳು ಇವೆ.

೩. ಇದನ್ನೂ ಸಹ ನಮ್ಮ ಪ್ರತಿಷ್ಠಾನವು ಪ್ರಕಾಶನ ಪಡಿಸಿದೆ(೨೦೧೦).

೪. ವಿವರಗಳಿಗೆ ತತ್ತ್ವವಾದ ಡಿಸೆಂಬರ್ ೧೯೮೧ 'ಒಂದು ಅಪೂರ್ವ ದಾಖಲೆ' ಎಂಬ ನನ್ನ ಲೇಖನವನ್ನು ನೋಡಿ.

ವಿವರಣೆಯಂತಿದೆ. ಇದರಲ್ಲಿನ ಮನಸ್ಸೇ ಮೀನು, ವಿಷಯಗಳೇ ನೀರು, ಪ್ರಯತ್ನವೇ ಗಾಳ, ಶ್ರೀಹರಿಯೇ ಸ್ಥಳ ಎಂಬಲ್ಲಿನ ಸಮಸ್ತವಸ್ತುವಿಷಯೀರೂಪಕ ಅಲಂಕಾರದ ಸೊಬಗು ಅತ್ಯದ್ಭುತವಾದದ್ದು.

೪. ಒಂದು ಅಪೂರ್ವಸ್ತೋತ್ರ

ಶ್ರೀಹೃಷೀಕೇಶತೀರ್ಥಲಿಖಿತ ಎಂಬ ಪ್ರಸಿದ್ಧಿಯ ಸರ್ವಮೂಲಪ್ರತಿಯಲ್ಲಿ ದ್ವಾದಶ-ಸ್ತೋತ್ರದ ಕ್ರಮ ತೀರಾ ವಿಭಿನ್ನವಾಗಿದ್ದು ಆ ಪಾಠದಂತೆ ಮೂರನೆಯ ಸ್ತೋತ್ರ ಹೀಗಿದೆ:

ಶಂಖಚಕ್ರಗದಾಪದ್ಮಶಾರ್ಙ್ಗಖಡ್ಗಧರಂ ಸದಾ ।
ನಮಾಮಿ ಪಿತರಂ ನಿತ್ಯಂ ವಾಸುದೇವಂ ಜಗತ್ಪತಿಮ್ ॥೧॥
ಸಚ್ಚಿದಾನಂದರೂಪಂ ತಮನಾಮಯಮನಂತರಮ್ ।
ಏಕಮೇಕಾಂತಮಭಯಂ ವಿಷ್ಣುಂ ವಿಶ್ವಹೃದಿ ಸ್ಥಿತಮ್ ॥೨॥
ನಾನಾಸ್ವಭಾವಮತ್ಯಂತಸ್ವಭಾವೇನ ವಿಚಾರಿತಮ್ ।
ಅವಿಶೇಷಮನಾದ್ಯಂತಂ ಪ್ರಣಮಾಮಿ ಸನಾತನಮ್ ॥೩॥
ಕುಂದೇಂದುಸನ್ನಿಭಂ ವಂದೇ ಸುಧಾರಸನಿಭಂ ವಿಭುಮ್ ।
ಜ್ಞಾನಮುದ್ರಾಪುಸ್ತಕಾರಿ(ದಿ)ಶಂಖಾಕ್ಷಾಯುಧಧಾರಿಣಮ್ ॥೪॥
ಆನಂದಮಜರಂ ನಿತ್ಯಮಾತ್ಮೇಶಮಮಿತದ್ಯುತಿಮ್ ।
ವಂದೇ ವಿಶ್ವಸ್ಯ ಪಿತರಂ ವಿಷ್ಣುಂ ವಿಶ್ವೇಶ್ವರಂ ಸದಾ ॥೫॥
ಅಮಂದಾನಂದಸಂದೋಹಸಂತೋಷಿತಜಗತ್ತ್ರಯಮ್ ।
ನಾರಾಯಣಮಣೀಯಾಂಸಂ ವಂದೇ ದೇವಂ ಸದಾತನಮ್ ॥೬॥
ಸೂರ್ಯಮಂಡಲಮಧ್ಯಸ್ಥಂ ವರಾಭಯಕರೋದ್ಯತಮ್ ।
ಸೂರ್ಯಾಮಿತದ್ಯುತಿಂ ವಂದೇ ನಾರಾಯಣಮನಾಮಯಮ್ ॥೭॥
ವಿಶ್ವಂ ವಿಶ್ವಾಕರಂ ವಂದೇ ವಿಶ್ವಸ್ಯ ಪ್ರಪಿತಾಮಹಮ್ ।
ನಾನಾರೂಪಮಜಂ ನಿತ್ಯಂ ವಿಶ್ವಾತ್ಮಾನಂ ಪ್ರಜಾಪತಿಮ್ ॥೮॥
ಕಾಲಾಕಾಲವಿಚಾರಾದಿಪ್ರಕಾಲಿತಸದಾತನಮ್ ।
ಪುರುಷಂ ಪ್ರಕೃತಿಸ್ಥಂ ಚ ವಂದೇ ವಿಷ್ಣುಮಜೋತ್ತಮಮ್ ॥೯॥
ಬ್ರಹ್ಮಣಃ ಪಿತರಂ ವಂದೇ ಶಂಕರಸ್ಯ ಪಿತಾಮಹಮ್ ।
ಶ್ರಿಯಃ ಪತಿಮಜಂ ನಿತ್ಯಮಿಂದ್ರಾದಿಪ್ರಪಿತಾಮಹಮ್ ॥೧೦॥
ಪ್ರತಿ ಪ್ರತಿ ಸ್ಥಿತಂ ವಿಷ್ಣುಂ ನಿತ್ಯಾಮೃತಮನಾಮಯಮ್ ।
ಶಂಖಚಕ್ರಧರಂ ವಂದೇ ವರಾಭಯಕರೋದ್ಯತಮ್ ॥೧೧॥
ಪ್ರತಾಪಪ್ರವಿಶೇಷೇಣ ದೂರೀಕೃತವಿದೂಷಣಮ್ ।
ವಿದಾರಿತಾರಿಮತ್ಯಂತಪ್ರಸನ್ನಂ ಪ್ರಣಮಾಮ್ಯಹಮ್ ॥೧೨॥
ಅಪ್ರಮೇಯಮಜಂ ನಿತ್ಯಂ ವಿಶಾಲಮಮೃತಂ ಪರಮ್ ।
ಕೃತನಿತ್ಯಾಲ(ಯಾ?)ಯಂ ಲೋಕೇ ನಮಸ್ಯಾಮಿ ಜಗತ್ಪತಿಮ್ ॥೧೩॥

ಸುನಿತ್ಯಸುಖಮಕ್ಷಯ್ಯಂ ಶುದ್ಧಂ ಶಾಂತಂ ನಿರಂಜನಮ್ ।
ಲೋಕಾಲೋಕವಿಚಾರಾಢ್ಯಂ ನಮಸ್ಯಾಮಿ ಶ್ರಿಯಃ ಪತಿಮ್ ॥೧೪॥
ಅಮಂದಾನಂದಸಂದೋಹಸಾಂದ್ರಮಿಂದ್ರಾನುಜಂ ಪರಮ್ ।
ನಿತ್ಯಾವದಾತಮೇಕಾಂತಂ ಪ್ರಮಾಣಾತೀತಮಕ್ಷಯಮ್ ।
ಲೋಕಾಲೋಕಪತಿಂ ದಿವ್ಯಂ ನಮಸ್ಯಾಮಿ ರಮಾಪತಿಮ್ ॥೧೫॥

'ದ್ವಾದಶಸ್ತೋತ್ರಾಣಿ' ಎಂಬುದಾಗಿ ಉಡುಪಿಯ ಶ್ರೀಮನ್ಮಧ್ವಸಿದ್ಧಾಂತ ಗ್ರಂಥಾಲಯದಿಂದ ಪ್ರಕಾಶಿತವಾಗಿರುವ ಕೃತಿಯಲ್ಲಿ ಇದು ಮೊದಲಬಾರಿಗೆ ಮುದ್ರಿತವಾಗಿದೆ. ಅನಂತರ ಹೃಷೀಕೇಶತೀರ್ಥೀಯಪಾಠ ಎಂಬುದಾಗಿ ಅಖಿಲಭಾರತ ಮಾಧ್ವ ಮಹಾಮಂಡಲದಿಂದ ಪ್ರಕಾಶಿತವಾದ ಸರ್ವಮೂಲಗ್ರಂಥದಲ್ಲೂ ಇದು ಕಂಡುಬರುತ್ತದೆ. ಇಂದು ಸುಪ್ರಸಿದ್ಧವಿರುವ ದ್ವಾದಶಸ್ತೋತ್ರಪಾಠದಲ್ಲಿ ಇದು ಕಂಡುಬರುವುದಿಲ್ಲ. ಇದು ಶ್ರೀಮದಾಚಾರ್ಯರ ಕೃತಿ ಎಂಬ ಬಗ್ಗೆ ಶಂಕೆಗೆ ಅವಕಾಶವಿಲ್ಲವಾದ್ದರಿಂದ ಇದನ್ನು ಪ್ರತ್ಯೇಕವಾದ ಒಂದು ಸ್ತೋತ್ರ ಎಂಬುದಾಗಿ ಪರಿಗಣಿಸುವುದು ಸಂಗತವೆನ್ನಿಸುತ್ತದೆ. ಶ್ರೀಮದಾಚಾರ್ಯರ ಗ್ರಂಥಗಳ ಸಂಖ್ಯೆಗಳ ಬಗ್ಗೆ ಬಗೆ ಬಗೆಯ ವಾದಗಳನ್ನು ಮುಂದಿಡುವವರು ಇದನ್ನು ಅಷ್ಟಾಗಿ ಗಮನಿಸಿದಂತಿಲ್ಲ. ಶ್ರೀಮದಾಚಾರ್ಯರ ಈ ಕೃತಿಯ ಅಧ್ಯಯನ ಪಾರಾಯಣಾದಿಗಳನ್ನು ಅಳವಡಿಸಿಕೊಳ್ಳುವುದು ಅತ್ಯಂತ ಸಮುಚಿತ.

೫. ನೇದೃಶಂ ಸ್ಥಲಮಲಂ ಶಮಲಘ್ನಮ್

ಶ್ರೀಮದಾಚಾರ್ಯರು ಶ್ರೀವೇದವ್ಯಾಸರ ಆದೇಶದಂತೆ ಮಹಾಬದರಿಗೆ ತೆರಳುವ ಮುನ್ನ ಸಂದೇಶರೂಪವಾಗಿ ಈ ಕೆಳಗಿನ ಶ್ಲೋಕವನ್ನು ಸ್ವತಃ ತಾವೇ ಬರೆದರು ಎಂಬುದಾಗಿ ಶ್ರೀಸುಮಧ್ವವಿಜಯದಲ್ಲಿ ಉಲ್ಲೇಖವಿದೆ(೬,೪೬);

ನಕ್ತಮೇವ ಭಗವತ್ಯುಪಯಾತೇ ಪ್ರೋದಿತೇ ಸತಿ ಸಹಸ್ರಮರೀಚೌ।
ಮೌನವಾನಲಿಖದುತ್ತಮಚಿತ್ತಃ ಶಿಷ್ಯಶಿಕ್ಷಣಪರಃ ಕರುಣಾವಾನ್॥

ಈ ಶ್ಲೋಕವನ್ನು ಸರ್ವಮೂಲದ ಆದ್ಯಂತಶ್ಲೋಕ ಸಂಗ್ರಹರೂಪವಾದ ಕೆಲವು ಪ್ರತಿಗಳಲ್ಲಿ ಕಂದುಕಸ್ತುತಿ ಮೊದಲಾದುವುಗಳೊಂದಿಗೆ ಬರೆದುಕೊಂಡಿರುವುದುಂಟು. ಮಧ್ವವಿಜಯದಲ್ಲಿನ 'ಅಲಿಖದುತ್ತಮಚಿತ್ತಃ' ಎಂಬ ಮಾತು ಇದಕ್ಕೆ ಪೋಷಕವಾಗಿದೆ. ಸಾಮಾನ್ಯವಾಗಿ ಇಂತಹ ಪ್ರಸಂಗಗಳಲ್ಲಿ ಅದಕ್ಕೆ ಮೂಲವಾದ ಶ್ಲೋಕಗಳನ್ನು ನಾರಾಯಣಪಂಡಿತರು ತಮ್ಮ ಸುಮಧ್ವವಿಜಯ ಭಾವಪ್ರಕಾಶಿಕೆಯಲ್ಲಿ ಉಲ್ಲೇಖಿಸುವುದುಂಟು. ತತ್ತ್ವೋದ್ಯೋತದಲ್ಲಿನ ಅಂತಿಮಶ್ಲೋಕಗಳನ್ನು ಅರ್ಥತಃ ಸಂಗ್ರಹಿಸುವ ೧೨ ಸರ್ಗದ ಕೆಲವು ಶ್ಲೋಕಗಳು, ತ್ರಿವಿಕ್ರಮಪಂಡಿತರು ಜಯಸಿಂಹರಾಜನಿಗೆ ನೀಡಿದ ಆಶೀರ್ವಚನರೂಪಶ್ಲೋಕದ ಮೂಲರೂಪ ಮೊದಲಾವುಗಳು ಇದಕ್ಕೆ ನಿದರ್ಶನ. ಆದರೆ ಈ ಪ್ರಸಂಗದಲ್ಲಿ ಅಂತಹ ಉಲ್ಲೇಖವನ್ನು ಅವರು ಮಾಡಿಲ್ಲವಾದ್ದರಿಂದ ಇದು ಮೂಲತಃ ಶ್ರೀಮದಾಚಾರ್ಯರ ಶ್ಲೋಕವೇ ಆಗಿರುವ ಸಾಧ್ಯತೆ ಹೆಚ್ಚು ಎನ್ನಿಸುವಂತಿದೆ. ಈ ಬಗ್ಗೆ ಹೆಚ್ಚಿನ ಸಂಶೋಧನೆ ಅಗತ್ಯ.

೬. ಕೆಲವು ಬಿಡಿಶ್ಲೋಕಗಳು

ಶ್ರೀಹೃಷೀಕೇಶತೀರ್ಥೀಯ ಪಾಠಾನುಸಾರಿ ಎಂಬುದಾಗಿ ಅಖಿಲಭಾರತಮಾಧ್ವ ಮಹಾಮಂಡಲವು ಪ್ರಕಟಿಸಿರುವ ಸರ್ವಮೂಲಗ್ರಂಥಗಳಲ್ಲಿ ಈ ಕೆಳಗಿನ ಶ್ಲೋಕಗಳು ಸಹ ಕಂಡುಬರುವವು :

ರಾಮೋಽಖಿಲಾನಂದತನುಃ ಸ ಏವ ಭೀಮೋಽತಿಪಾಪೇಷು ದುರಂತವೀರ್ಯಃ ।
ಕಾಮಃ ಸ ಏವಾಜಿತಕಾಮಿನೀಷು ಸೋಮಃ ಸ ಏವಾತ್ಮಪದಾಶ್ರಿತೇಷು ॥
(ಪ್ರಾದೇಶಮಾತ್ರಂ ತತ್ತ್ವಾರ್ಥೇ ಜಯಾರ್ಥೇಽರತ್ನಿಮಾತ್ರಕಮ್ ।
ಖ್ಯಾತಿಪೂಜಾರ್ಥಿನೋ ಹಸ್ತಮಾತ್ರಂ ಪತ್ರಮುದಾಹೃತಮ್ ॥
ಅಸಂಬದ್ಧಪ್ರವಚನಮಸಂಬದ್ಧಾಃ ಪ್ರವೃತ್ತಯಃ ।
ಪ್ರತಿಜ್ಞಾಯಾಶ್ಚ ಸಂತ್ಯಾಗಃ ಕಥಾಯಾಃ ಪೂರ್ವನಿಗ್ರಹಃ ॥
ಶ್ರುತಿರ್ನಾಮ ಸಮುದ್ದಿಷ್ಟಂ ಲಿಂಗಂ ತಲ್ಲಕ್ಷಣಂ ಸ್ಮೃತಮ್ ।
ಪದಾನಿ ನಿರಪೇಕ್ಷಾಣಿ ವಾಕ್ಯಂ ಪ್ರಕರಣಂ ತಥಾ ॥
ಏಕಸ್ಯ ಪ್ರತಿಪತ್ತ್ಯಂಗವಚನಂ ಸ್ಥಾನಮುಚ್ಯತೇ ।
ಅನ್ಯತ್ರ ತತಸ್ಮೋಕ್ತಿಸ್ತು ಸಮಾಖ್ಯಾಸ್ಥಾನಮೇವ ಚ ॥
ಅಧ್ಯಾಯಾದಿಪ್ರಬಂಧಸ್ತು ಪ್ರಭೇದಾ ಆಗಮಸ್ಯ ಚ ॥)

೭. ನ್ಯಾಸಪದ್ಧತಿ

'ನ್ಯಾಸಪದ್ಧತಿ' ಅಥವಾ 'ಸನ್ನ್ಯಾಸಪದ್ಧತಿ' ಎಂಬ ಕೃತಿ ಉತ್ತರಾದಿಮಠ ಹಾಗೂ ಅಖಿಲಭಾರತಮಾಧ್ವಮಹಾಮಂಡಲ ಹಾಗೂ ನಮ್ಮ ಪ್ರಕಾಶನದ ಸರ್ವಮೂಲ ಪಾಠಗಳಲ್ಲಿ ಉಂಟು. ಇದರ ಅನೇಕ ಹಸ್ತಪ್ರತಿಗಳು ನಮ್ಮ ಶ್ರೀಜಯತೀರ್ಥ ಹಸ್ತಲಿಖಿತ ಗ್ರಂಥಾಲಯದಲ್ಲಿ ಉಪಲಬ್ಧವಿವೆ.

ಈ ಸಂನ್ಯಾಸಪದ್ಧತಿಯ ಉಲ್ಲೇಖ ಶ್ರೀವಿಷ್ಣುತೀರ್ಥರ ಸಂನ್ಯಾಸಪದ್ಧತಿಗೆ ಸುರೋತ್ತಮತೀರ್ಥರು ರಚಿಸಿರುವ [೧]ವ್ಯಾಖ್ಯಾನದಲ್ಲಿ ಉಂಟು:

ಭಗವತ್ಪಾದಕೃತಪ್ರಣವಕಲ್ಪಸನ್ನ್ಯಾಸಪದ್ಧತ್ಯಾದೌ ಕಾರ್ತ್ಸ್ನ್ಯೇನ ಕರ್ಮಸಂಬಂಧಿ ಧರ್ಮಾಣಾಂ ಸ್ಫುಟಾಪ್ರತಿಭಾನಾತ್ ಭಗವತ್ಪಾದಾಜ್ಞಾಮುಕುಟಂ ಶಿರಸಿ ಪರಮಾದರೇಣ ಧೃತ್ವಾ ಪ್ರಣವಕಲ್ಪಾದಿವಿವೃತಿರೂಪಂ ಶ್ರೀವಿಷ್ಣುತೀರ್ಥೀಯಾಖ್ಯಮ- ಧ್ಯಾಯಚತುಷ್ಟಯಾತ್ಮಕಂ ಗ್ರಂಥಂ ನಿರ್ಮಮ ಇತ್ಯಾಮ್ನಾಯಃ[೨] ॥

ಇದರಿಂದ ಇದು ಶ್ರೀಮದಾಚಾರ್ಯಕೃತ ಎಂಬಲ್ಲಿ ಯಾವುದೇ ಸಂದೇಹಕ್ಕೆ ಅವಕಾಶವಿರದು. ಶ್ರೀ ಸುರೋತ್ತಮತೀರ್ಥರ ಉಲ್ಲೇಖದಿಂದ ತಿಳಿಯುವಂತೆ

೧. ಶ್ರೀಸುರೋತ್ತಮತೀರ್ಥರ ವ್ಯಾಖ್ಯಾನದ ಒಂದು ಅಸಮಗ್ರ ಪ್ರತಿ ಉಡುಪಿಯ ಶ್ರೀಕಾಣಿಯೂರುಮಠದ ಗ್ರಂಥಾಗಾರದಲ್ಲಿದೆ.

೨. ಅಖಿಲಭಾರತಮಾಧ್ವಮಹಾಮಂಡಲದ ಸರ್ವಮೂಲಗ್ರಂಥಗಳು, ಸಂಪುಟ ೫, ಪುಟ ೧೭೩.

ಶ್ರೀವಿಷ್ಣುತೀರ್ಥರ ಸಂನ್ಯಾಸಪದ್ಧತಿಯು ಈ ನ್ಯಾಸಪದ್ಧತಿಯ ವಿವರಣರೂಪ ಕೃತಿ ಎಂಬ ವಿಶೇಷಾಂಶ ತಿಳಿಯುತ್ತದೆ.

ಯತಿಪ್ರಣವಕಲ್ಪದಲ್ಲಿ ಮುಖ್ಯವಾಗಿ ಸನ್ಯಾಸದೀಕ್ಷೆಯ ವಿಧಿವಿಧಾನ ಹಾಗೂ ಪ್ರಣವಮಂತ್ರದ ಬಗ್ಗೆ ಮಾಹಿತಿ ಲಭಿಸಿದರೆ ಈ ನ್ಯಾಸಪದ್ಧತಿಯಲ್ಲಿ ಮುಖ್ಯವಾಗಿ ಯತಿಗಳ ದೈನಂದಿನ ಸದಾಚಾರ ಹಾಗೂ ಭಿಕ್ಷಾಸ್ವೀಕಾರ ವಿಧಿಗಳು ನಿರೂಪಿತವಾಗಿವೆ.

ಏವಮೇವ ಯತೇಃ ಸ್ವೀಯವಿತ್ತೇನ ತು ವಿನಾ ಸದಾ।
ಮೂಲಮಂತ್ರೈಃ ಸದಾ ಸ್ನಾನಂ ವಿಷ್ಣೋರ್ಣೇವ ಚ ತರ್ಪಣಮ್॥
ವಿಶೇಷೋ ನಿಷ್ಕ್ರಿಯಯತೇರಜಲಾಂಜಲಿತಾ ತಥಾ।
ತರ್ಪಣಂ ತು ಹರೇರೇವ ಯತೇರನ್ಯಸ್ಯ ಚೋದಿತಮ್॥(೩೨,೩೩)

ಎಂಬ ಸದಾಚಾರಸ್ಮೃತಿಯ ಮಾತುಗಳಿಗೆ ಈ ನ್ಯಾಸಪದ್ಧತಿಯು ವಿವರಣೆ ರೂಪದಂತೆ ಇದೆ ಎನ್ನಬಹುದು.

ಇದರ ಅಂತ್ಯಶ್ಲೋಕವೂ ಸಹ ಆದರ ಅಂತ್ಯಶ್ಲೋಕದಂತೆಯೇ ಇರುವುದೂ ಸಹ ಗಮನಾರ್ಹ;

ಪೂರ್ಣಪ್ರಜ್ಞೇನ ಮುನಿನಾ ವ್ಯಾಸವಾಕ್ಯಸಮುದ್ಧೃತಿಃ।
ನ್ಯಾಸಧರ್ಮಸ್ಯ ವಿಷಯೇ ಶುಭಾ ಸಂಕ್ಷೇಪತಃ ಕೃತಾ॥

೮. 'ಭಾ'ಧಾತು ವ್ಯಾಖ್ಯಾನ

ಭಾ ಭಾ ಭಾ ಭಾ ಭಾ ಭಾ ಭಾ ಭಾ ಭಾ ಭಾ ಭಾ ಭಾ ಭಾ ಭಾ (ಭಾ ಭಾ)।
ಭಾ ಭಾ ಭಾ ಭಾ ಭಾ ಭಾ ಭಾ ಭಾ ಭಾ ಭಾ ಭಾ ಭಾ ಭಾ ಭಾ (ಭಾ ಭಾ)॥

ಇದು ಶ್ರೀಮದಾಚಾರ್ಯರ ಯಮಕಭಾರತದ ಅಪೂರ್ವ ಏಕಾಕ್ಷರ ಯಮಕ ಶ್ಲೋಕ. ಇದಕ್ಕೆ ವಿವರಣರೂಪವಾಗಿ ಶ್ರೀಮದಾಚಾರ್ಯರು ನೀಡಿದ ಅರ್ಥವಿಶೇಷಗಳನ್ನು ಶ್ರೀನರಹರಿತೀರ್ಥರು ತಮ್ಮ ಯಮಕಭಾರತ ಟೀಕೆಯಲ್ಲಿ 'ಇತಿ ಸರ್ವವಿದೀರಿತಂ' ಎಂಬುದಾಗಿ ಉಲ್ಲೇಖಿಸಿರುವರು.

ದೀಪ್ತೌ ಜ್ಞಾನೇ ಭ ಆಧಾರೇ ಭ ಭ ಔದಾರ್ಯ ಏವ ಚ।
ಸಂಧಾನೇ ಭ ಉಪಾದಾನೇ ನಿಕಟತ್ವೇ ಚ ಕಥ್ಯತೇ ॥

ಭ ಸೇವ್ಯತ್ವೇ ಚ ವಿದ್ವದ್ಭಿರೂರೀಕರಣ ಏವ ಚ।
ಸಂಪೂರ್ಣನತಿಭಾವೇ ಭಾ ನಯನೇ ನಮನೇ ತಥಾ ॥

ವೈಲಕ್ಷಣ್ಯೇ ತಥಾಽಧಿಕ್ಯೇ ಸ್ವಾತಂತ್ರ್ಯೇ ಭ ಉದೀರ್ಯತೇ।
ಭ ಆನಂದೇ ಭ ಸಂಪೂರ್ತೌ(ರ್ಣ) ತತವಾದೇಽಪಿ ಕಥ್ಯತೇ ॥

ಪೂಜ್ಯಭಾವೇ ಭ ವಿಸ್ತಾರೇ ಭ ವಿನಾಶನ ಈರ್ಯತೇ।
ಸ್ವಾಮಿತ್ವೇ ನಿಶ್ಚಲೇ ಭಾವೇ ಭಾವೇ ಉ(ಷೂ)ದ್ಗಾನ ಏವ ಚ ॥

ಸಂಮೋಹನೇ ಚ(ಭ) ಸಂಚಾರೇ ಭಾ ವಿದಾರಣ ಈರ್ಯತೇ ।
ಆಲೋಚನೇ ಭ ಸೌಂದರ್ಯ ಇತಿ ಸರ್ವವಿದೀರಿತಮ್ ॥

- ಯಮಕಭಾರತ ಟೀಕಾ ೩೪೨ -೩೪೫

ಶ್ರೀಹೃಷೀಕೇಶತೀರ್ಥರ ಪಾಠದಲ್ಲೂ ಇವು ವಾಕ್ಯರೂಪದಲ್ಲಿ ಲಿಖಿತವಾಗಿವೆ. ಶ್ರೀಸತ್ಯಧರ್ಮತೀರ್ಥರು ಅವುಗಳನ್ನೆಲ್ಲ ತಮ್ಮ ಭಾಗವತ ಟಿಪ್ಪಣಿಯಲ್ಲಿ ಉಲ್ಲೇಖಿಸಿ ಶ್ರೀಮದಾಚಾರ್ಯರ ಮುಖಕಮಲದಿಂದ ಹೊರಹೊಮ್ಮಿದ ಇವು ಶ್ರೀಹೃಷೀಕೇಶ-ತೀರ್ಥರಿಂದ ಲಿಖಿತವಾಗಿರುವವು ಎಂಬುದಾಗಿ ಬರೆದಿರುವರು.

'ಭಾ' ದೀಪ್ತೌ	ಭ ನಾನಾಭಾವೇ	ಭ ವಿನಿಶ್ಚಲಭಾವೇ
ಭಾ ಜ್ಞಾನೇ	ಭ ವೈಲಕ್ಷಣ್ಯೇ	ಭ ಉಗ್ರಭಾವೇ
ಭ ಆಧಾರಭಾವೇ	ಭ ಆಧಿಕ್ಯೇ	ಭ ಉದ್ಗಾನೇ
ಭ ಔದಾರ್ಯೇ	ಭ ಸ್ವಾತಂತ್ರ್ಯೇ	ಭ ಸಂಮೋಹನೇ
ಭ ಸಂಧಾನೇ	ಭ ಆನಂದೇ	ಭ ಸಂಚಾರೇ
ಭ ಉಪಾದಾನೇ	ಭ ಸಂತತವಚನೇ	ಭ ವಿದಾರಣೇ
ಭ ನಿಕಟಭಾವೇ	ಭ ಪೂಜ್ಯಭಾವೇ	ಭ ಆಲೋಚನೇ
ಭ ಸೇವ್ಯತ್ವೇ	ಭ ವಿಸ್ತಾರೇ	ಭ ಸುಂದರಭಾವೇ
ಭ ಊರೀಕರಣೇ	ಭ ವಿನಾಶನೇ	
ಭ ಸಂತತಭಾವೇ	ಭ ಸ್ವಾಮಿಭಾವೇ	

- (ಇತಿ) ಶ್ರೀಮದುಡುಪೀ ಶ್ರೀಕೃಷ್ಣಪಾದಪದ್ಮಾರಾಧಕಹೃಷೀಕೇಶಶ್ರೀಮಚ್ಚರಣೈಃ ಶ್ರೀಮಧ್ವರಾಜ-ಮುಖಕಮಲಾಚ್ಛ್ರುತ್ವಾ ಲಿಖಿತಮೇತದ್ಧಾತುವ್ಯಾಖ್ಯಾನಮಿತಿ ತತ್ಸಂಪ್ರದಾಯಾಭಿಜ್ಞೋಕ್ತಮುಖಾ-ಚ್ಛ್ರುತ್ವಾ ಕೃತೇಯಂ ಲೇಖೇತಿ ಏತದನ್ಯತಮೋ ಯೋಗ್ಯೋ ಭೋಽಸ್ಯಾಸ್ತೀತಿ ಭವಾನಿತಿ ವಾ ತ್ವಂ ವಿದಿತೋಽಸೀತ್ಯನ್ವಯಃ ॥ -ಭಾಗವತ ಟಿಪ್ಪಣಿ (೧೦ನೇಸ್ಕಂಧ. ಅ. ೪, ಶ್ಲೋ. ೧೪ ಪತ್ರ ೨)

ಶ್ರೀವಿಜಯಧ್ವಜತೀರ್ಥರು ತಮ್ಮ ಭಾಗನತವ್ಯಾಖ್ಯಾನದಲ್ಲಿ 'ಭರತಂ ಭಜಧ್ವಮ್' (೫,೫,೨೦) ಎಂಬಲ್ಲಿ ವಿವರಣೆ ನೀಡುತ್ತಾ- '**ಅತ್ರೈವಂ ಶ್ರೀಮದ್ಧೃಷೀಕೇಶತೀರ್ಥೀಯ-ಧಾತುಪಾಠಸಂಗ್ರಹಃ**[1]' ಎಂಬುದಾಗಿ ಶ್ರೀಹೃಷೀಕೇಶತೀರ್ಥೀಯದಲ್ಲಿನ 'ಭಾ' ಧಾತುವಿನ ಅರ್ಥಗಳನ್ನು ಹೀಗೆ ಸಂಗ್ರಹಿಸಿರುವರು :

'ಭಾ' ದೀಪ್ತೌ	ಭ ನಾನಾಭಾವೇ	ಭ ನಿಶ್ಚಲಭಾವೇ
ಭಾ ಜ್ಞಾನೇ	ಭ ವೈಲಕ್ಷಣ್ಯೇ	ಭ ಉಗ್ರಭಾವೇ
ಭ ಆಧಾರಭಾವೇ	ಭ ಆಧಿಕ್ಯೇ	ಭ ಉದ್ಗಾನೇ
ಭ ಔದಾರ್ಯೇ	ಭ ಸ್ವಾತಂತ್ರ್ಯೇ	ಭ ಸಂಮೋಹನೇ
ಭ ಸಂಧಾನೇ	ಭ ಆನಂದೇ	ಭ ಸಂಚಾರೇ

---

೧. ಇಲ್ಲಿ 'ಭ ಸಂತತಿಭಾವೇ', 'ಭ ನಿಶ್ಚಲಭಾವೇ' ಎಂಬುದಕ್ಕೆ 'ಸಂತತಭಾವೇ', 'ಭ ವಿನಿಶ್ಚಲಭಾವೇ' ಎಂಬುದಾಗಿ ಕ್ರಮವಾಗಿ ಹೃಷೀಕೇಶತೀರ್ಥೀಯ ಮುದ್ರಿತ ಪಾಠದಲ್ಲಿ ಕಂಡುಬರುತ್ತವೆ;

ಭ ಉಪಾದಾನೇ
ಭ ನಿಕಟಭಾವೇ
ಭ ಸೇವ್ಯತ್ವೇ
ಭ ಊರೀಕರಣೇ
ಭ ಸಂತತಿಭಾವೇ
ಭ ಸಂತತವಚನೇ
ಭ ಪೂಜ್ಯಭಾವೇ
ಭ ವಿಸ್ತಾರೇ
ಭ ವಿನಾಶನೇ
ಭ ಸ್ವಾಮಿಭಾವೇ
ಭ ವಿದಾರಣೇ
ಭ ಆಲೋಚನೇ
ಭ ಸುಂದರಭಾವೇ

೯. ತಿಥಿನಿರ್ಣಯ

ತಿಥಿನಿರ್ಣಯವು ಶ್ರೀಮದಾಚಾರ್ಯಕೃತ ಎಂಬುದಾಗಿ ಇತ್ತೀಚೆಗೆ ಉಪಲಬ್ಧವಾಗಿರುವ ಮತ್ತೊಂದು ಕೃತಿ. ನನ್ನ ಸಂಗ್ರಹದಲ್ಲಿ ಇದರ ನಾಲ್ಕು ಹಸ್ತಪ್ರತಿಗಳು ಲಭಿಸಿದ್ದು, ಅದರಲ್ಲಿ ಒಂದು ಪ್ರತಿಯು ಶ್ರೀಮಧುಸೂದನಭಿಕ್ಷು ಎಂಬವರಿಂದ ವಿರಚಿತವಾದ ವ್ಯಾಖ್ಯಾನವನ್ನು ಒಳಗೊಂಡಿರುವುದು ವಿಶೇಷ. ಅಖಿಲಭಾರತಮಾಧ್ವಮಹಾಮಂಡಲ ಪ್ರಕಾಶನದ ಸರ್ವಮೂಲಗ್ರಂಥಗಳಲ್ಲೂ, ನಮ್ಮ ಪ್ರಕಾಶನದ ಸಂಸ್ಕೃತ ಕನ್ನಡ ತೆಲುಗು ಲಿಪಿಯ ಸರ್ವಮೂಲಗ್ರಂಥಗಳಲ್ಲೂ ಇದು ಪ್ರಕಾಶನಗೊಂಡಿದೆ. ಇದರಲ್ಲಿನ ಕೆಳಗಿನ ಎರಡು ಶ್ಲೋಕಗಳನ್ನು ಶ್ರೀವಾದಿರಾಜಸ್ವಾಮಿಗಳ ಏಕಾದಶೀನಿರ್ಣಯಕೃತಿಯಲ್ಲಿ[೧] ಶ್ರೀತ್ರಿವಿಕ್ರಮಪಂಡಿತಾಚಾರ್ಯರ ವಚನಗಳು ಎಂಬುದಾಗಿ ಉಲ್ಲೇಖಿಸಲಾಗಿದೆ : (ಶ್ಲೋ. ೪೦, ೪೧)[೨]

> ಏಕಾತಿದ್ವಾದಶೀವೃದ್ಧೌ ನೋ ಚೇದ್ವೃದ್ಧೌ ತು ಷೋಡಶ।
> ಹ್ಯೇಕಲಿಪ್ತೀ ಸಮೇ ಹ್ರಾಸೇ ಚತುಷ್ಕಾದುತ್ತರಂ ತ್ವಿದಮ್ ॥
> ಅತಿವೃದ್ಧಾವಷ್ಟಯುಗಂ ವೃದ್ಧಾವಷ್ಟ ಸಮೇ ಚತುಃ।
> ಹ್ಯೇಕಲಿಪ್ತೀ ಸಮೇ ಹ್ರಾಸೇ ಚತುಷ್ಕಾದುತ್ತರಂ ತ್ವಿದಮ್ ॥

ಶ್ರೀಮಧುಸೂದನಭಿಕ್ಷುಗಳು ಶ್ರೀಸತ್ಯವಿಜಯತೀರ್ಥ(೧೭೨೬-೧೭೩೭)ರ ಶಿಷ್ಯರಾದ ಬಿಡಿಸನ್ಯಾಸಿಗಳು. ಮಧುಸೂದನಭಿಕ್ಷುಗಳು ಎಂಬ ಶ್ರೀವಿದ್ಯಾಧೀಶತೀರ್ಥರ ಶಿಷ್ಯರೊಬ್ಬರು ಮಹಾಭಾರತತಾತ್ಪರ್ಯನಿರ್ಣಯಕ್ಕೆ ಪ್ರಮಾಣಸಂಗ್ರಹವ್ಯಾಖ್ಯಾನವನ್ನು ಬರೆದಿರುವರು. ಇಬ್ಬರಿಗೂ ಸುಮಾರು ಒಂದು ಶತಮಾನದ ಅಂತರವಿರುವುದರಿಂದ ಇವರು ಅವರಿಂದ ಭಿನ್ನರಾದವರು ಎಂಬುದು ಸ್ಪಷ್ಟ

ತಮಗೆ ದೊರೆತ ಪ್ರತಿಗಳು ವಿರಳ, ಅವುಗಳಲ್ಲಿ ಸ್ಖಾಲಿತ್ಯಾದಿದೋಷಗಳು ಬೇರೆ, ಮಧ್ಯೆ ಮಧ್ಯೆ ಗ್ರಂಥಪಾತವೂ ಆಗಿದೆ ಎಂಬ ಮಾಹಿತಿಯನ್ನು ಅವರು ನೀಡಿರುವರು. ಇದರಿಂದ ಈ ತಿಥಿನಿರ್ಣಯಕೃತಿಯ ಪ್ರಸಾರ ಆ ಕಾಲದಲ್ಲೂ ಅಷ್ಟಾಗಿ ಇರಲಿಲ್ಲ ಎಂಬ

---

೧. ಏವಂ ಚೇನ್ಮಧ್ವಶಿಷ್ಯೇಣ ಸಾಕ್ಷಾಟ್ಟೀಕಾಕೃತಾ ಕೃತಾ।
ತ್ರಿವಿಕ್ರಮಾರ್ಯವರ್ಯೇಣ ಮರ್ಯಾದೇಯಂ ಕಿಮುಚ್ಯತೇ ॥ (ಶ್ಲೋ. ೩೦)

೨. ನನ್ನ ಸಂಗ್ರಹದಲ್ಲಿನ ಒಟ್ಟು ನಾಲ್ಕು ಪ್ರತಿಗಳಲ್ಲಿ ಹಾಗೂ ವ್ಯಾಖ್ಯಾನದಲ್ಲಿ ಇದು ಮತ್ತು ಇದರ ಮುಂದಿನ ಎರಡು ಶ್ಲೋಕಗಳು ಕಂಡು ಬರುವುದಿಲ್ಲ ಎಂಬುದೂ ಸಹ ಗಮನಾರ್ಹವಾದ ಅಂಶ.

ವಿಶೇಷಾಂಶ ತಿಳಿಯುತ್ತದೆ. ನನ್ನ ಪ್ರತಿಯಿಂದ ಆಯ್ದಿರುವ ಈ ವ್ಯಾಖ್ಯಾನದ ಆದ್ಯಂತಶ್ಲೋಕಗಳು ಹೀಗಿವೆ:

ಆದಿ : ಶ್ರೀಬ್ರಹ್ಮೇಶೇಂದ್ರವಂದ್ಯಾಯ ಜ್ಯೋತಿಶ್ಚಕ್ರಪ್ರವರ್ತಿನೇ ।
ವೇದವ್ಯಾಸಸ್ವರೂಪಾಯ ಶ್ರೀನಿವಾಸಾಯ ತೇ ನಮಃ ॥ ೧ ॥

ಆನಂದತೀರ್ಥಗುರವೇ ಹನೂಮದ್ಭೀಮರೂಪಿಣೇ ।
ಸ್ವಭಕ್ತೇಭ್ಯೋ ಜ್ಞಾನದಾತ್ರೇ ಭವಿಷ್ಯದ್ಬ್ರಹ್ಮಣೇ ನಮಃ ॥ ೨ ॥

ದಾನಪೂಜಾರ್ಚನೇ ಸಕ್ತಾನ್ ಗುರುಪಾದಾರ್ಚನೇ ರತಾನ್ ।
ಗುರೂಂಶ್ಚ ಸತ್ಯಪೂರ್ಣಾಖ್ಯಾನ್ ವಂದೇ ಜ್ಞಾನಪ್ರದಾನ್ ಮಮ ॥ ೩ ॥

ರಾಮಪೂಜಾಕರಾನ್ ನಿತ್ಯಂ ಗುರುಪಾದಪ್ರಪೂಜಕಾನ್ ।
ಸತ್ಯವಿಜಯತೀರ್ಥಾಖ್ಯಾನ್ ಪ್ರಪದ್ಯೇ ಜ್ಞಾನಸಿದ್ಧಯೇ ॥ ೪ ॥

ಆನಂದತೀರ್ಥಮುಖಾನ್ನಿಃಸೃತಸ್ತಿಥಿನಿರ್ಣಯಃ ।
ತಸ್ಯ ವ್ಯಾಖ್ಯಾ ಯಥಾಬೋಧಂ ಕರಿಷ್ಯೇ ತತ್ಕೃಪಾಬಲಾತ್ ॥ ೫ ॥

ಸರ್ವತ್ರ ಪುಸ್ತಕಾಭಾವಾತ್ ಪಾರಂಪರ್ಯೇಣ ಲೇಖನಾತ್।
ಕ್ವಚಿತ್ ಪ್ರಮಾದಪಾತಸ್ಯ ಕ್ಷೇಪಣಂ ಕ್ರಿಯತೇ ಮಯಾ ॥ ೬ ॥

ಇಹ ದೋಷೋ ನಾಸ್ತಿ ಯತಸ್ತತಃ ಕ್ಷಾಮ್ಯಂತು ಸಜ್ಜನಾಃ ।
ಗುಣಾನ್ ಸಂತಃ ಪ್ರಗೃಹ್ಣಂತು ಹಂಸಃ ಕ್ಷೀರಮಿವಾಂಭಸಃ ॥ ೭ ॥

ಅನುಕ್ತಕಥನಾತ್ ಕ್ವಾಪಿ ಹ್ಯವಿರುದ್ಧಸ್ಯ ಕ್ಷೇಪಣಾತ್ ।
ವ್ಯಾಖ್ಯಾನಾದುಕ್ತಗ್ರಂಥಸ್ಯ ಪ್ರೀಯಂತಾಂ ಗುರವೋ ಮಮ ॥ ೮ ॥

ಅಂತ್ಯ : ಶ್ರೀಮದಾನಂದತೀರ್ಥಾರ್ಯಮುಖಪಂಕಜನಿಃಸೃತಃ ।
ತಿಥಿನಿರ್ಣಯನಾಮಾ ಯಸ್ತಸ್ಯ ವ್ಯಾಖ್ಯಾ ಕೃತಾ ಮಯಾ ॥ ೧ ॥

ಕೇವಲಂ ತತ್ಕೃಪಾಲೇಶಮಾಶ್ರಿತ್ಯೈವ ನ ಚಾನ್ಯಥಾ ।
ತೈರೇವ ಹೃದಯೇ ಸ್ಥಿತ್ವಾ ಬುದ್ಧ್ಯಾ ಸಂಯೋಜ್ಯ ಕಾರಿತಾ ॥ ೨ ॥

ಅತಃ ಸ್ವತಂತ್ರಾಭಾವಾದೇವಂಭೂತಸ್ತ್ವಹಂ ಪುನಃ । (?)
ಕೃತವಾನ್ ತೇನ ಪ್ರೀಯತಾಂ ಮಧ್ವೇಶೋ ಮಾಧವೋ ಮಧುಃ ॥ ೩ ॥

ಯತಿನಾ ವಟುನಾ ಚೈವ ಸ್ವಪ್ನೇಽಹಂ ಬೋಧಿತೋ ಯತಃ ।
ತತೋ ಮಯಾ ಕೃತಾ ಟೀಕಾ ಭೂಯಾತ್ ಪ್ರೀತ್ಯೈ ತಯೋರಲಮ್ ॥

ಕೊನೆಯಲ್ಲಿ ''ಇತಿ ಶ್ರೀಮದಾನಂದತೀರ್ಥಭಗವತ್ಪಾದವಿರಚಿತಸ್ಯ ತಿಥಿನಿರ್ಣಯಸ್ಯಟೀಕಾ ತತ್ಪ್ರೇರಿತಮಧುಸೂದನಭಿಕ್ಷುವಿರಚಿತಸ್ಯ ಸಮಾಪ್ತಾ ॥ ಎಂಬ ಸಮಾಪ್ತಿವಾಕ್ಯವಿದೆ.

ವಿಷಯ ಹೀಗಿದ್ದರೂ ಸಂಶೋಧನೆಗಳಿಂದ ತಿಳಿದುಬರುವಂತೆ ಈ ಕೆಳಗಿನ ಶ್ಲೋಕಗಳು ಕರಣರತ್ನ ಎಂಬ ಕೃತಿಯಲ್ಲಿ ಮೊದಲ ಎರಡು ಹಾಗೂ ಕೊನೆಯ ಪಂಕ್ತಿ ಅರ್ಥತಃ ದೊರೆತರೆ, ಉಳಿದ ಮೂರು ಪಂಕ್ತಿಗಳು ಶಬ್ದಶಃ ದೊರೆಯುತ್ತವೆ;


ಕಲ್ಯಬ್ಧೌಘೋ ಧೇನುಭವೋ ಯುಕ್ತಃ ಸೌರೈರ್ವ್ಯಥಾಫಲೈಃ ।
ಏತಸ್ಮಾನ್ಮಾಪತೇರ್ಲಬ್ಧಂ ರಾಶ್ಯಾದ್ಯಾಯನಮುಚ್ಯತೇ ।
ಪ್ರಭಾರತ್ನಂ ಧೀಸವನಂ ಗಾನಸ್ಥಾನಂ ಜನೇಧನಮ್ ।
ದೇಹಿನಿತ್ಯಂ ಸುಗಪ್ರಾಯಂ ಸಾವಲೋಕ್ಯಂ ತಟಿದ್ವಪುಃ ।
ನವಭಾರ್ಯೇತಿ ವಾಕ್ಯಾನಿ ಜ್ಞೋಽನಂತೋಽತ್ರ ತು ಹಾರಕಃ ।
ತದ್ದೋರ್ಜ್ಯಾಲಿಪ್ತಿಕಾ ಭಾನೌ ಯುಕ್ತ್ವಾ ತ್ಯಕ್ತ್ವಾಽಥ ಗೋಲಯೋಃ ॥

ಮೂಲಗ್ರಂಥಗಳಿಗನುಸಾರವಾಗಿ ತಿಥಿನಿರ್ಣಯ ಕೃತಿಯನ್ನು ರಚಿಸಿರುವುದಾಗಿ ತಿಳಿಸಿರುವ ಕೃತಿಕಾರರು ಮೂಲಗ್ರಂಥಗಳ ವ್ಯಾಪ್ತಿಗೆ ಒಳಪಡದ ಕೃತಿಯ ಶ್ಲೋಕಗಳನ್ನು ಶಬ್ದತಃ ಅರ್ಥತಃ ಆಧರಿಸುವುದು ಸಂಗತವೆನ್ನಿಸದು. ಕರಣರತ್ನದ ಶ್ಲೋಕಗಳೂ ಸಹ ಮೂಲಗ್ರಂಥದ ಉದ್ಧರಣೆಗಳೇ ಎಂದು ವಾದಿಸಲು ಅವಕಾಶವಿದೆ. ಆದರೆ ಇಲ್ಲಿಯ ವಿವರಗಳು ಅವೈಜ್ಞಾನಿಕವಾಗಿದ್ದು ಅಧಿಕೃತವೆಂದು ಪರಿಗಣಿಸುವಂತಿಲ್ಲ[೧].

ಈ ದೃಷ್ಟಿಯಲ್ಲಿ ಈ ತಿಥಿನಿರ್ಣಯ ಕೃತಿಯು ಶ್ರೀಮದಾಚಾರ್ಯರ ರಚನೆ ಎಂದು ಸಿದ್ಧವಾಗುವುದು ಕಷ್ಟ. ವ್ಯಾಖ್ಯಾನಕಾರರಾದ ಶ್ರೀಮಧುಸೂದನ ಭಿಕ್ಷುಗಳ ಮಾತಿನಂತೆ ಇದರ ಪ್ರತಿಗಳು ಆ ಕಾಲಕ್ಕೇ ದುರ್ಲಭವಾಗಿದ್ದವು ಎಂದು ತಿಳಿಯುತ್ತದೆ. ಪರಂಪರೆಯಲ್ಲೂ ಈ ಮುನ್ನ ಉಲ್ಲೇಖಿಸಿರುವಂತೆ ಇಲ್ಲಿಯ ವೇಧಕ್ಕೆ ಸಂಬಂಧಪಟ್ಟ ಶ್ಲೋಕಗಳು ತ್ರಿವಿಕ್ರಮಪಂಡಿತಾಚಾರ್ಯರ ರಚನೆಗಳು (ತತ್ರ ವಿಶೇಷಸ್ತ್ರಿವಿಕ್ರಮಪಂಡಿತಾಚಾರ್ಯೈರಭಿಹಿತಃ - ಸ್ಮೃತಿಮುಕ್ತಾವಲಿ I ಪು.೮೧). ಇತರ ಕೆಲವರು ಅವನ್ನು ಹಾಗೇ ಉಲ್ಲೇಖಿಸಿದ್ದಾರೆ. ಇದರ ರಚನೆಯ ಕಾಲ ಶ್ರೀಮನ್ಮಧ್ವಾಚಾರ್ಯರ ಕಾಲಕ್ಕೆ (೧೨೦೦-೧೨೮೦) ಹೊಂದಿಕೆಯಾಗುವುದಿಲ್ಲ ಎಂಬುದು ಮತ್ತೊಂದು ಗಮನಾರ್ಹ ಅಂಶ. ಅಲ್ಲದೆ ನಿರ್ಣಾಯಕವಾದ ಈ ಕೃತಿ ಅವರದಾಗಿದ್ದಲ್ಲಿ ಅವರು ಕೃಷ್ಣಾಮೃತಮಹಾರ್ಣವ ಕೃತಿಯಲ್ಲಿ

---

೧. ವಿವರಗಳಿಗೆ ಶ್ರೀವ್ಯಾಸಮಧ್ವ ಮಾಸಪತ್ರಿಕೆ (ಮೇ ೨೦೧೧)ಯಲ್ಲಿನ 'ಸಾಯನ-ನಿರಯಣ ಸಂಕ್ರಮಣ' (ಲೇ : ಜಯಂತ ವ್ಯಾಸನಕೆರೆ) ಲೇಖನವನ್ನು ನೋಡಬಹುದು :



'ಬಹ್ವಾಗಮವಿರೋಧೇಷು ಬ್ರಾಹ್ಮಣೇಷು ವಿವಾದಿಷು' ಎಂದು ಹೇಳುವ ಅಗತ್ಯ ಸರ್ವಥಾ ಇರುತ್ತಿರಲಿಲ್ಲ. ಒಟ್ಟಾರೆ ತಿಥಿನಿರ್ಣಯ ಎಂಬ ಕೃತಿಯನ್ನು ಶ್ರೀಮದಾಚಾರ್ಯರು ರಚಿಸಿದ್ದರು ಎಂದು ಅಂಗೀಕರಿಸಿದರೂ ಉಪಲಬ್ಧವಾದ ಈ ಕೃತಿ ಸಮಗ್ರವಾಗಿ ಅವರ ರಚನೆಯೆಂದು ಒಪ್ಪುವುದು ಕಷ್ಟ. ಈ ಬಗ್ಗೆ ಹೆಚ್ಚಿನ ಸಂಶೋಧನೆ ಅಗತ್ಯ[೧].

೧೦. ಸಾರಭೋಗಪ್ರಕಾರ

ತಂಜಾವೂರು ಅರಮನೆ ಗ್ರಂಥಾಗಾರದಲ್ಲಿ ಸಾರಭೋಗಪ್ರಕಾರ ಎಂಬ ನೈವೇದ್ಯ ಚಿಂತನೆಯ ಕ್ರಮಕ್ಕೆ ಸಂಬಂಧಿಸಿದ ಅಪೂರ್ವಕೃತಿಯೊಂದು ಶ್ರೀಮದಾನಂದ-ತೀರ್ಥಭಗವತ್ಪಾದಕೃತ ಎಂಬುದಾಗಿ ಸಂರಕ್ಷಿತವಾಗಿದೆ (No.D 8083). ಈ ಬಗ್ಗೆ ನಮ್ಮ ಪ್ರಕಾಶನದ ಪದ್ಯಮಾಲಾ, ಸರ್ವಮೂಲಸುಧಾ ಮೊದಲಾದ ಕೃತಿಗಳಲ್ಲಿ ಉಲ್ಲೇಖ ಮಾಡಲಾಗಿದೆ. ಈ ಎರಡು ಕೃತಿಗಳ ಬಗ್ಗೆಯೂ ಸಹ ಸಂಶೋಧನೆ ನಡೆಯಬೇಕಿದೆ.

ಶ್ರೀನಾರಾಯಣಪಂಡಿತಾಚಾರ್ಯಕೃತ 'ದಿನತ್ರಯಮೀಮಾಂಸಾ' ಎಂಬ ಕೃತಿಯಲ್ಲಿ 'ಪ್ರಕಾರೋಽಯಂ ಶ್ರೀಮದಾಚಾರ್ಯೈಃ ಸೂರ್ಯಸಿದ್ಧಾಂತವಚನಾದೌ ವ್ಯಾಖ್ಯಾತಃ' ಎಂಬುದಾಗಿ ಶ್ರೀಮದಾಚಾರ್ಯಕೃತ ವಾಕ್ಯಗಳ ಉಲ್ಲೇಖ ಉಂಟು. ಈ ಬಗ್ಗೆ ಹೆಚ್ಚಿನ ವಿವರಗಳಿಗೆ ನಮ್ಮ ಪ್ರಕಾಶನದ ಮಧ್ವನಾಮಾವಳಿ ಎಂಬ ಕೃತಿಯ(೧೯೭೧) ಪೀಠಿಕೆಯನ್ನು ನೋಡಬಹುದು. ಈ ಬಗ್ಗೆ ಸಹ ಹೆಚ್ಚಿನ ಸಂಶೋಧನೆ ಅಗತ್ಯ.

ಈ ಎಲ್ಲಾ ವಿವರಗಳನ್ನೂ ಪರಿಶೀಲಿಸಿದಾಗ ಶ್ರೀಮದಾಚಾರ್ಯರ ಗ್ರಂಥಗಳ ಸಂಖ್ಯೆ ಅಪಾರ ಎಂಬುದು ಖಚಿತಪಡುತ್ತದೆ. ಭಾರತೀರಮಣರಾದ ಅವರ ಪ್ರತಿಯೊಂದು ಮಾತು ಒಂದೊಂದು ಗ್ರಂಥವೇ ಎಂಬುದು ಉಚಿತವೂ ಆಗಿದೆ. ಅಂತಹ ಅವರ ಅನೇಕಮಾತುಗಳನ್ನು ಅವರ ಶಿಷ್ಯರುಗಳು ಬರೆದಿಟ್ಟುಕೊಂಡಿದ್ದು ತೀರ ಸಹಜವೂ ಹೌದು. ಎಲ್ಲ ಮಾತನ್ನೂ ಬರೆದಿಟ್ಟುಕೊಳ್ಳುವುದು ಅಸಾಧ್ಯ. ಅಂತಹವುಗಳಲ್ಲಿ ಎಲ್ಲೋ ಕೆಲವು ಹೀಗೆ ಉಳಿದು ಬಂದಿವೆ ಎಂಬುದಾಗಿ ಭಾವಿಸಬಹುದು.

★★★★★

---

೧. ಈ ಸಂನ್ಯಾಸಪದ್ಧತಿ ಹಾಗೂ ತಿಥಿನಿರ್ಣಯ ಕೃತಿಗಳ ಬಗ್ಗೆ ಮೊದಲಬಾರಿಗೆ ಬೆಳಕು ಚೆಲ್ಲಿದ ಶ್ರೇಯಸ್ಸು ಶ್ರೀಮದಾಚಾರ್ಯರ ಸರ್ವಮೂಲಗ್ರಂಥಗಳನ್ನು ಸಮಗ್ರವಾಗಿ ಕನ್ನಡಕ್ಕೆ ಅನುವಾದಿಸಿದ ವಿಶಿಷ್ಟ ಖ್ಯಾತಿಯ ವಿದ್ವಾಂಸರಾದ ದಿ.ಅಗ್ರಹಾರ ನಾರಾಯಣತಂತ್ರಿ ಅವರದ್ದು. ಅವರು ಯತಿಪ್ರಣವಕಲ್ಪ ಅನುವಾದದ ಮುನ್ನುಡಿ(೧೯೬೮- ಪುಟ ೧೪)ಯಲ್ಲಿ ಬರೆದಿರುವ ಮಾತುಗಳು ಹೀಗಿವೆ: ''.... ಶ್ರೀಸುರೋತ್ತಮ ತೀರ್ಥರು (ಭಂಡಾರಕೇರಿ ಮಠದ ಪರಂಪರೆಯವರು) ಶ್ರೀ ವಿಷ್ಣುತೀರ್ಥೀಯ ಸಂನ್ಯಾಸಪದ್ಧತಿಗೆ ವ್ಯಾಖ್ಯಾನ ಮಾಡುವಲ್ಲಿ ಶ್ರೀಮದಾನಂದತೀರ್ಥ ಭಗವತ್ಪಾದಕೃತ ಸಂನ್ಯಾಸ ಪದ್ಧತ್ಯಾದೌ ಎಂದು ಸ್ಪಷ್ಟ ಹೇಳಿದ್ದಾರೆ. ಇದನ್ನನುಲಕ್ಷಿಸಿ ಶೋಧಿಸುವಾಗ ಶ್ರೀ ಪೇಜಾವರ ಮಠ ಮತ್ತು ಶ್ರೀ ಸೋದೆ ಮಠಗಳಲ್ಲಿ ದೊರೆತ ಲಿಖಿತ ಸರ್ವಮೂಲ ಗ್ರಂಥಗಳಲ್ಲಿ ಸಂನ್ಯಾಸ ಪದ್ಧತಿ ಮತ್ತು ತಿಥಿ ನಿರ್ಣಯ ಎಂಬೀ ಎರಡು ಗ್ರಂಥಗಳು ಅಧಿಕವಾಗಿ ಉಪಲಬ್ಧವಾಗಿರುವವು. ತಿಥಿ ನಿರ್ಣಯದ ಕೆಲವು ಪದ್ಯಗಳಿಗೆ ವ್ಯಾಖ್ಯಾನವೂ ದೊರೆತಿದೆ. ಅನೇಕ ಮಠಗಳಲ್ಲಿಯ ಪ್ರಾಚೀನ ತುಳುಲಿಪಿಯ ಸರ್ವಮೂಲಗ್ರಂಥಗಳ ನಡುನಡುವೆ ಅನೇಕ ಸುಭಾಷಿತ ಶ್ಲೋಕಗಳೂ ಕಾಣಸಿಗುತ್ತವೆ. ಈ ಕುರಿತು ಇನ್ನೂ ಶೋಧನೆ ಅಗತ್ಯವಿದೆ''.

ಪರಿಶಿಷ್ಟ-೪

ಅಪ್ರಸಿದ್ಧಶ್ರುತ್ಯಾದಿಗಳ ಉದಾಹರಣ

ಶ್ರೀಮದಾಚಾರ್ಯರ ಬಗ್ಗೆ ಅನಂತರಕಾಲದ ಜನ ಎತ್ತಿದ ಪ್ರಮುಖ ಆಕ್ಷೇಪ ಅವರು ಉಲ್ಲೇಖಿಸುವ ಅನೇಕ ಶ್ರುತಿಸ್ಮೃತಿಗಳು ಸರ್ವಥಾ ಅನುಪಲಬ್ಧವಾದ್ದರಿಂದ ಕೇವಲ ಪರಿಕಲ್ಪಿತ ಎಂದು.

ಶ್ರೀಮದಾಚಾರ್ಯರ ಪರಿಪೂರ್ಣವಾದ ವಾದಸರಣಿ, ಪ್ರಖರವಾದ ಯುಕ್ತಿಗಳ ವೈಭವಗಳ ಮುಂದೆ ಪರಮತದ ವಾದಿಗಳೆಲ್ಲ ಸಂಪೂರ್ಣವಾಗಿ ನಿರುತ್ತರರಾದರು. ಅವರ ವಾದಸರಣಿಗೆ ಶರಣಾದ ಪ್ರಾಮಾಣಿಕ ಜಿಜ್ಞಾಸುಗಳಾದ ಶ್ರೀತ್ರಿವಿಕ್ರಮಪಂಡಿತಾಚಾರ್ಯರಂತಹ ಮಹನೀಯರು ಒಂದೆಡೆಯಾದರೆ ಅದನ್ನು ಅಸೂಯೆಯಿಂದ ಕಂಡು ಪಲಾಯನ ಮಾಡಿದ ವಾದಿಸಿಂಹ, ಬುದ್ಧಿಸಾಗರ, ಪದ್ಮತೀರ್ಥ ಮೊದಲಾದವರು ಮತ್ತೊಂದು ಗುಂಪಿನವರು. ಬೇರಾವ ರೀತಿಯಲ್ಲೂ ಅವರನ್ನು ಎದುರಿಸಲು ಶಕ್ತಿ ಸಾಲದ ಅವರು ತಮ್ಮ ಯೋಜನೆಗಳಲ್ಲಿ ಗ್ರಂಥಚೌರ್ಯದ ಯೋಜನೆಯನ್ನು ಪ್ರಧಾನವನ್ನಾಗಿಸಿಕೊಂಡರು. ಮೂಲಗ್ರಂಥಗಳ ನಾಶಕ್ಕೂ ಸಹ ವ್ಯಾಪಕ ರೀತಿಯಲ್ಲಿಯೇ ತೊಡಗಿದರು ಎಂಬ ಸೂಚನೆ ಸುಮಧ್ವವಿಜಯದಲ್ಲಿ ಬಂದಿದೆ. ಅದರ ಪರಿಣಾಮ ಕಂಡುಬಂದಿದ್ದು ಅನಂತರದ ದಿನಗಳಲ್ಲಿ. ಆಚಾರ್ಯರು ತಮ್ಮ ವಾದ ಸರಣಿಗೆ ಪೋಷಕವಾಗಿ ಬಗೆಬಗೆಯ ಗ್ರಂಥಗಳನ್ನು ಪುಂಖಾನುಪುಂಖವಾಗಿ ವಾಕ್ಯಾರ್ಥಗೋಷ್ಠಿಗಳಲ್ಲಿ ಉಲ್ಲೇಖಿಸುತ್ತಿದ್ದರು. ಅವರ ಗ್ರಂಥಗಳಂತೂ ಪ್ರಮಾಣಗಳ ಸುರಿಮಳೆ. ಅದರಿಂದಾಗಿಯೇ ಅವರ ಮುಂದೆ ಪ್ರತಿವಾದಿಗಳು ಯಾವುದೇ ರೀತಿಯಲ್ಲೂ ತಲೆಯೆತ್ತಲು ಸಾಧ್ಯವಾಗುತ್ತಿರಲಿಲ್ಲ. ಅದಕ್ಕಾಗಿ ಅವರು ಹೂಡಿದ್ದು ಮೇಲೆ ಉಲ್ಲೇಖಿಸಿದ ಕುತಂತ್ರ.' ಅದರ ಮುಖ್ಯ ಸಾರ ಶ್ರೀಮದಾಚಾರ್ಯರು ಉಲ್ಲೇಖಿಸುವ ಪ್ರಮಾಣಗ್ರಂಥಗಳಲ್ಲಿ ಹೆಚ್ಚಿನವು ದೊರೆಯದಂತಾಗಬೇಕು ಎಂಬುದು. ಅದಕ್ಕೆ ತಮ್ಮ ಕೊಡುಗೆಯೇ ಅಪಾರ ಎಂದು ಅವರಿಗೆ ತಿಳಿದಿದ್ದರೂ ಅಪ್ರಸಿದ್ಧಶ್ರುತ್ಯುದಾಹರಣವಸ್ತುಸ್ಥಿತಿಯಲ್ಲಿ ಗುಣವೇ ಆಗುತ್ತದೆ.[೧] ಎಂಬುದನ್ನು ಗಮನಿಸದೇ ಹೋದರು. ಆ ರೀತಿಯಾಗಿ ಅಪ್ರಸಿದ್ಧ ಗ್ರಂಥಗಳನ್ನು ಉಲ್ಲೇಖಿಸುವುದು ಶ್ರೇಷ್ಠ ವಿದ್ವತ್ತಿನ ಲಕ್ಷಣ ಎಂಬುದನ್ನು ಗುರುತಿಸಲಾಗದ ಅವರು ಅದನ್ನು ದೋಷ ಎಂಬಂತೆ ಬಿಂಬಿಸತೊಡಗಿದರು. ಅದಕ್ಕಾಗಿ ವಾದಿಗಳ ಪರಂಪರೆ ಶತಮಾನಗಳನ್ನೇ ಕಾಯಬೇಕಾಯಿತು. ಅದರ ಪರಿಣಾಮವಾಗಿ ಅಪ್ಪಯ್ಯ ದೀಕ್ಷಿತ ಮೊದಲಾದ ಪ್ರತಿವಾದಿಗಳು ಅದನ್ನು ಪ್ರಧಾನ ಅಸ್ತ್ರವೆಂಬಂತೆ ಬಳಸತೊಡಗಿದರು. ಅದನ್ನು ಕೂಡಲೇ ಶ್ರೀವಿಜಯೀಂದ್ರ ತೀರ್ಥರು, ಶ್ರೀಸತ್ಯನಾಥತೀರ್ಥರು, ಶ್ರೀರಾಘವೇಂದ್ರತೀರ್ಥರು, ಶ್ರೀವನಮಾಲೀಮಿಶ್ರರು,

---

೧. ತಸ್ಮಾದಾಪಸ್ತಂಬಾದ್ಯುದಾಹೃತಶ್ರುತಿವದಸ್ಮದಾಚಾರ್ಯೋದಾಹೃತಶ್ರುತಯೋಽಪಿ ಪ್ರೇಕ್ಷಾವದುಪಾದೇಯಾಃ ಶ್ರುತಿತ್ವೇನ ಸರ್ವಜ್ಞದೃಷ್ಟತ್ವಾತ್ । ತಥಾ ಚ ಸ್ಮೃತಿಃ ।

'ವಿಂಶಲ್ಲಕ್ಷಣತೋಽನೂನಸ್ತಪಸ್ವೀ ಬಹುವೇದವಿತ್ ।
ವೇದ ಇತ್ಯೇವ ಯಂ ಪಶ್ಯೇತ್ ಸ ವೇದೋ ಜ್ಞಾನದರ್ಶನಾತ್ ॥' ಇತಿ ಬ್ರಹ್ಮಾಂಡೇ ।(ವಿಜ)

ಅದ್ವೈತಕಾಲಾನಲದ ಶ್ರೀನಾರಾಯಣಪಂಡಿತಾಚಾರ್ಯರು ಮೊದಲಾದ ಜ್ಞಾನಿವರೇಣ್ಯರು ಅದರ ಬಗ್ಗೆ ಸಮರ್ಥ ಉತ್ತರಗಳನ್ನು ನೀಡಿ ಅವರನ್ನು ನಿರುತ್ತರರನ್ನಾಗಿಸಿದರು. ಇದು ವಸ್ತುಸ್ಥಿತಿ.

ಈ ವಾದ ವಿವಾದಗಳಲ್ಲಿ ಉತ್ತರದ ಭಾಗವನ್ನು ಗಮನಿಸದ ಅಥವಾ ಗಮನಿಸಬಯಸದ ವರ್ಗ ಇಂದಿಗೂ ಆ ಅಪ್ರಸಿದ್ಧಶ್ರುತ್ಯುದಾಹರಣವನ್ನು ಒಂದು ದೋಷವೆಂಬಂತೆ ಬಿಂಬಿಸುವ ಪ್ರಯತ್ನವನ್ನು ನಡೆಸಿರುವರು. ಈ ಹಿನ್ನೆಲೆಯಲ್ಲಿ ಅದಕ್ಕೆ ಆ ಮಹನೀಯರುಗಳು ನೀಡಿದ ಉತ್ತರವನ್ನು ಇಲ್ಲಿ ಸಂಗ್ರಹಿಸಿ ಕೊಡಲಾಗಿದೆ.

ಮೇಲ್ನೋಟಕ್ಕೆ ಇದೊಂದು ಪ್ರಬಲ ಆಕ್ಷೇಪವೆನ್ನಿಸುವುದು ನಿಜ. ಆದರೆ ಈ ಆಕ್ಷೇಪವನ್ನೆತ್ತಬೇಕಾದ ಜನ ಸಮಕಾಲಿಕರಾಗಿರಬೇಕೇ ಹೊರತು ಅನಂತರಕಾಲದವರಾಗಲು ಸಾಧ್ಯವಿಲ್ಲ. ಯಾವುದೇ ಪ್ರಮಾಣದ ಸತ್ಯಾಸತ್ಯತೆಯ ವಿವೇಚನೆ ಆಗಮದ ಮಟ್ಟಿಗೆ ಹೇಳುವುದಾದರೆ ಸಮಕಾಲೀನ ಪ್ರತಿವಾದಿಗಳು ಎತ್ತಬೇಕಾದ ಪ್ರಶ್ನೆ. ಆ ಕಾಲದ ಯಾವುದೇ ಕೃತಿಯಲ್ಲೂ ಸಹ ಶ್ರೀಮದಾಚಾರ್ಯರ ಬಗ್ಗೆ ಇಂತಹ ಆಕ್ಷೇಪ ಕಂಡುಬರುವುದಿಲ್ಲ. ಪೂರ್ಣಪ್ರಜ್ಞದರ್ಶನವನ್ನು ಸಂಗ್ರಹಿಸುವ ಸಾಯಣಮಾಧವರ ಸರ್ವದರ್ಶನಸಂಗ್ರಹ ಕೃತಿಯಲ್ಲೂ ಈ ಬಗ್ಗೆ ಯಾವುದೇ ಪ್ರಸ್ತಾಪವಿಲ್ಲ.

ಅವರೊಂದಿಗೆ ವಾದಕ್ಕೆ ನಿಂತವರು ಆ ಕಾಲದ ನಾನಾ ದರ್ಶನಗಳ ಅತ್ಯಂತ ಪ್ರಬಲ ವಿದ್ವಾಂಸರೇ ಹೊರತು ಸಾಮಾನ್ಯರಾದವರಲ್ಲ. ಅವರಾರೂ ಸಹ ಈ ಬಗ್ಗೆ ಚಕಾರವನ್ನು ಎತ್ತಿದ ಸಾಕ್ಷ್ಯವೂ ದೊರಕದು. ಆ ಕಾಲದ ಪ್ರತಿವಾದಿಗಳಲ್ಲಿ ಅತ್ಯಂತ ಪ್ರಮುಖರೆನ್ನಿಸಿದವರು ಶ್ರೀತ್ರಿವಿಕ್ರಮಪಂಡಿತಾಚಾರ್ಯರು. ಅವರಂತೂ ಅವರ ಪ್ರಧಾನಶಿಷ್ಯರಾಗಿ ಪರಿಗಣಿತರಾದ ಮಹನೀಯರು. ಅವರು ಉಲ್ಲೇಖಿಸಿದ ಗ್ರಂಥಗಳನ್ನು ಅತ್ಯಂತ ಭಕ್ತಿಭಾವದಿಂದ ಉದಾಹರಿಸುತ್ತಾ ಅವುಗಳಲ್ಲಿ ಸರ್ವಬಗೆಯ ಪ್ರಾಮಾಣ್ಯಬುದ್ಧಿಯನ್ನು ತೋರುವ ಅಚ್ಚಿನ್ನ ಶಿಷ್ಯರು.

ಇದಕ್ಕೆ ಪ್ರತಿಯಾಗಿ ವಿಚಾರ ಮಾಡುವುದಾದರೆ ಶ್ರೀಮದಾಚಾರ್ಯರ ಗ್ರಂಥಭಂಡಾರವನ್ನು ಅಪಹರಿಸಿ ಅವರನ್ನು ಸೋಲಿಸಬಹುದೆಂಬ ಭ್ರಾಂತಿಯ ಪದ್ಮತೀರ್ಥ, ಪುಂಡರೀಕಪುರಿ ಮೊದಲಾದವರ ಪ್ರಸಂಗ. ಈ ಪ್ರಸಂಗ ಶ್ರೀಮದಾಚಾರ್ಯರ ಬಳಿ ಅಪೂರ್ವಗ್ರಂಥಗಳ ಅಪಾರಸಂಗ್ರಹವಿದ್ದದ್ದಕ್ಕೆ ಉತ್ತಮ ಸಾಕ್ಷಿಯಾಗಿ ನಿಲ್ಲುತ್ತದೆ. ಅದರಿಂದಾಗಿಯೇ ಪ್ರತಿವಾದಿಗಳಿಗೆ ಈ ಬಗೆಯ ಆಕ್ಷೇಪಕ್ಕೆ ಯಾವ ರೀತಿಯಲ್ಲೂ ಆಸ್ಪದವಿರಲಿಲ್ಲ ಎಂಬುದು ಸ್ಫುಟ ಪಡುತ್ತದೆ. ಅಲ್ಲದೆ ಅವರ ಪ್ರಯತ್ನದಲ್ಲಿ ಹಾಗೆ ಮಾಡುವ ಮೂಲಕ ಗ್ರಂಥಗಳ ಅನುಪಲಬ್ಧಿಯನ್ನು ವಾದದ ಪ್ರಬಲ ಅಸ್ತ್ರವನ್ನಾಗಿ ಉಪಯೋಗಿಸುವ ಪ್ರಬಲಸಂಚನ್ನು ಗುರುತಿಸಲು ಸಾಧ್ಯವಿದೆ ಎಂದ ಮೇಲೆ ಇವಾವೂ ಸಹ ಶ್ರೀಮದಾಚಾರ್ಯರ ಮೇಲಿನ ಆಕ್ಷೇಪ ಯಾವ ರೀತಿಯ ಹುರುಳನ್ನೂ ಹೊಂದದ ಕ್ಷುಲ್ಲಕ ವಿಚಾರ ಎಂದಾಗುವುದು.

ಐತಿಹಾಸಿಕವಾಗಿ ಈ ಪ್ರಶ್ನೆ ಎತ್ತಿದವರಲ್ಲಿ ಅತ್ಯಂತ ಪ್ರಮುಖರು ೧೬ನೆಯ ಶತಮಾನದ ಅಪ್ಪಯ್ಯದೀಕ್ಷಿತರು ಮೊದಲಾದವರು. ಎಂದರೆ ಶ್ರೀಮದಾಚಾರ್ಯರ

ಕಾಲದ ಅನಂತರ ಸುಮಾರು ೪ ದಶಕಗಳ ಅಂತರದವರು. ಶ್ರೀಮದಾಚಾರ್ಯರ ವಾದಸರಣಿಗೆ ಉತ್ತರಿಸಲಾಗದ ಒಂದು ವರ್ಗ ಈ ಅಪ್ರಸಿದ್ಧಶ್ರುತ್ಯುದಾಹರಣದ ಆರೋಪ ಹೊರಿಸುವ ಅಮಾರ್ಗಕ್ಕೆಳೆಸಿದ್ದು ಸ್ಪಷ್ಟ. ಎಂದರೆ, ಶ್ರೀಮದಾಚಾರ್ಯರ ಕಾಲದಿಂದಲೂ ಮೂಲಗ್ರಂಥಗಳ ನಾಶಕ್ಕೆ ವ್ಯವಸ್ಥಿತವಾದಂತಹ ಪ್ರಯತ್ನವನ್ನು ನಡೆಸಿದ ಪ್ರತಿವಾದಿ ಪಂಗಡ ಅಷ್ಟು ದೀರ್ಘಕಾಲದ ಅನಂತರ ಈ ಆರೋಪವನ್ನು ಮುಂದಿಟ್ಟವು ಎಂದಾಗುವುದು.

ಅಪ್ಪಯ್ಯ ದೀಕ್ಷಿತರಂತಹವರ ವಾದಕ್ಕೆ ಅವರ ಸಮಕಾಲಿಕ ದ್ವೈತಮಹಾವಿಭೂತಿಗಳೆನ್ನಿಸಿದ ಶ್ರೀವಿಜಯೀಂದ್ರತೀರ್ಥರು ಅವರ ಸಮೀಪವರ್ತಿಗಳಾದ ಶ್ರೀಸತ್ಯನಾಥತೀರ್ಥರು, ನ್ಯಾಯಾಮೃತವ್ಯಾಖ್ಯಾನಕಾರರಾದ ವನಮಾಲೀಮಿಶ್ರ ಮೊದಲಾದವರು ಕ್ರಮವಾಗಿ ಮಧ್ವತಂತ್ರಮುಖಭೂಷಣ, ಅಭಿನವಗದಾ, ಮಧ್ವಾಧ್ವ ಕಂಟಕೋದ್ಧಾರ, (ಮಧ್ವಮುಖಾಲಂಕಾರ) ಮೊದಲಾದ ತಮ್ಮ ಮಂಡನ ಕೃತಿಗಳಲ್ಲಿ ಸಮರ್ಥ ಉತ್ತರಗಳನ್ನು ನೀಡಿರುವರು. ಅವರ ವಾದಸರಣಿಯನ್ನು ಅವಲೋಕಿಸಿದಾಗ ಸ್ಫುಟಪಡುವುದಿಷ್ಟು:

೧. ಶ್ರೀಮದಾಚಾರ್ಯರು ಉದಾಹರಿಸಿದ ಗ್ರಂಥಗಳೆಲ್ಲಾ ಆ ಕಾಲದಲ್ಲಿ ಉಪಲಬ್ಧವಾದವುಗಳೇ ಹೊರತು ಅಪ್ರಸಿದ್ಧವಾದವುಗಳಲ್ಲ.

೨. ಶ್ರೀಮದಾಚಾರ್ಯರನ್ನು ಅಂದಿನ ಜನ ಅವರ ಸ್ಫುಟವಾದ ಅತ್ಯಪೂರ್ವ ದೇಹಲಕ್ಷಣಗಳಿಂದ ದೇವತಾಂಶಸಂಭೂತರು ಎಂಬುದನ್ನು ಮನಗಂಡಿದ್ದರು. ಅಂತಹವರ ಬಗ್ಗೆ ಇಂತಹ ಕ್ಷುಲ್ಲಕ ಆರೋಪವನ್ನು ಮನಸ್ಸಿನಲ್ಲಿ ಯೋಚಿಸಲೂ ಸಹ ಅವರಿಗೆ ಸಾಧ್ಯವಿರಲಿಲ್ಲ[೧].

೩. ಇಂದು ಅನುಪಲಬ್ಧ ಎಂಬ ಕಾರಣದಿಂದ ಅಂತಹ ಆಕ್ಷೇಪವೆತ್ತುವುದಾದಲ್ಲಿ ಆ ಬಗೆಯ ಆರೋಪವನ್ನು ಶಂಕರಾಚಾರ್ಯರು ಹಾಗೂ ರಾಮಾನುಜಾಚಾರ್ಯರ ಬಗ್ಗೆ ಮಾಡಲು ಸಾಧ್ಯವಿರುವುದರಿಂದ ಅವರ ಪ್ರಾಮಾಣಿಕತೆಯೂ ಸಹ ಪ್ರಶ್ನಾರ್ಹವೆನ್ನಿಸುವುದು ಗಮನಾರ್ಹ[೨].

---

೧. ಶಂಕರಭಾಷ್ಯೇ ಸಂಭೃತ್ಯಧಿಕರಣೇಽಪಿ – 'ಬ್ರಹ್ಮಜ್ಯೇಷ್ಠಾ ವೀರ್ಯಾಸಂಭೃತಾನಿ ಬ್ರಹ್ಮಾಗ್ರೇ ಜ್ಯೇಷ್ಠಂದಿವಮಾತತಾನ' ಇತಿ ರಾಣಾಯನೀಯಖಿಲಶ್ರುತಿರೇವೋದಾಹೃತೇತ್ಯಪಿ ದ್ರಷ್ಟವ್ಯಮ್ । ಏವಂ ರಾಮಾನುಜಭಾಷ್ಯೇಽಪಿ 'ಓಂ ಜ್ಯೋತಿಶ್ಚರಣಾಭಿಧಾನಾತ್' ಇತ್ಯಧಿಕರಣೇ, 'ಇಂದ್ರಃ ಶಚೀಪತಿರ್ಬಲೇನ ಪೀಡಿತೋ ದುಶ್ಚ್ಯವನೋ ವೃಷಾ ಸಮುತ್ಸಾರ ಹಿ' ಇತಿ ಖಿಲೈವ ಚತುಷ್ಪಾದ್ಗಾಯತ್ರ್ಯುದಾಹೃತಾ । ತಥಾ ಶ್ರೀಕಂಠಭಾಷ್ಯೇಽಪಿ 'ಯಶ್ಚಂಡಾಲಃ ಶಿವ ಇತಿ ವಾಚಂ ವದೇತ್ ತೇನ ಸಹ ಸಂವಸೇತ್ । ತೇನ ಸಹ ಸಂವದೇತ್ ತೇನ ಸಹ ಭುಂಜೀತ' ಇತ್ಯಾದಿ ಖಿಲಶ್ರುತಿರೇವೋದಾಹೃತಾ । – ಶ್ರೀವಿಜಯೀಂದ್ರಸ್ವಾಮಿಗಳು

೨. ತತ್ರ ಪ್ರಷ್ಟವ್ಯಂ ತ್ವಯಾ ನ ಜ್ಞಾಯಂತ ಇತಿ, ತ್ವಾಂ ಪ್ರತ್ಯಪ್ರಸಿದ್ಧಾಃ ಸರ್ವಾನ್ ಪ್ರತಿ ವಾ । ಆದ್ಯೇ ತ್ವಮೇವ ಮೂರ್ಖಃ ಯತ್ ರೋದಿತವ್ಯೇಪಿ ಹರ್ಷಸೇ ಶ್ಲಾಘಸೇ ಚ । ಬುದ್ಧಿಮತೋ ಭಾಗ್ಯವತೋ ಬಹುಜ್ಞಾನವಲೋಕ್ಯ ಹಿ ಹತಭಾಗ್ಯೋಽಹಮೇತಾದೃಶಮೂರ್ಖ ಇತಿ

೪. ಶ್ರೀಮದಾಚಾರ್ಯರ ಪ್ರಮಾಣೋದಾಹರಣದ ಬಗ್ಗೆ ಇದರಿಂದ ಸ್ಫುಟ-ಪಡುವಂತೆ ಯಾವುದೇ ರೀತಿಯಲ್ಲೂ ಸಹ ಅವು ಪ್ರಶ್ನಾತೀತ ಎಂಬುದು.

೫. ಮತ್ತೊಂದು ದೃಷ್ಟಿಯಿಂದ ವಿಚಾರ ಮಾಡಿ ನೋಡಿದಾಗ ಈ ಆಕ್ಷೇಪವು ಕೇವಲ ಅಸಾಧುಪ್ರವೃತ್ತಿಯದು ಎಂಬುದು ಸ್ಪಷ್ಟವಾಗುತ್ತದೆ :

(ಅ) ಪರಮತಖಂಡನೆಯ ದೃಷ್ಟಿಯಿಂದ ವಿಚಾರ ಮಾಡಿದಾಗ ಶ್ರೀಮದಾಚಾರ್ಯರು ಎಲ್ಲೂ ತಮ್ಮ ವಾದ ಸರಣಿಯನ್ನು ಕೇವಲ ಅಂತಹ ಅಪ್ರಸಿದ್ಧ-ಶ್ರುತಿಸ್ಮೃತಿಗಳ ಮೇಲೆಯೇ ಅವಲಂಬಿಸಿದ್ದಲ್ಲ ಎಂಬುದು ಸ್ಪಷ್ಟ[1].

(ಆ) 'ಅಹಂ ಬ್ರಹ್ಮಾಸ್ಮಿ' 'ತತ್ತ್ವಮಸಿ'ಮೊದಲಾದ ಅತ್ಯಂತ ಪ್ರಧಾನವಾದ ಐಕ್ಯಬೋಧಕವೆಂದು ಪರಕೀಯರು ಉಲ್ಲೇಖಿಸುವ ಶ್ರುತ್ಯರ್ಥಗಳನ್ನು ಶ್ರೀಮದಾ-ಚಾರ್ಯರು ಉಪಲಬ್ಧ ಸರ್ವಸಂಪ್ರತಿಪನ್ನವಾದ ಗ್ರಂಥಗಳಿಂದಲೂ ಅತ್ಯಂತ ಪ್ರಬಲವಾದ ಮೀಮಾಂಸಾದಿ ಶಾಸ್ತ್ರಸಮ್ಮತವಾದ ವಾದಸರಣಿಯಿಂದಲೂ ವಿಮರ್ಶಿಸಿ ಅವು ಮೂಲತಃ ಭೇದಬೋಧಕ ಎಂದು ಸ್ಪಷ್ಟಪಡಿಸಿರುವರು[2]. ಇದಕ್ಕೆ ಮುಖ್ಯ ಆಧಾರವಾಗಿ ಅವರ

ಪಶ್ಚಾತ್ತಾಪವತ್ಯೈವ ಭವಿತವ್ಯಮ್ । ನಹಿ ಸ್ವಯಂ ದರಿದ್ರೋ ಮನಸಾಽಪಿ ಚಿಂತಯಿತುಮಶಕ್ಯಾಃ ಸಾರ್ವಭೌಮಸಂಪದಃ ಪಶ್ಯನ್ ಕಲ್ಪಿತಾ ಏವೈತಾ ಇತಿ ನಾಸಿಕಾಂ ಸಂಕೋಚಯನ್ ಫೂತ್ಕಾರೇಣ ನಿರಸ್ಯತಿ ತಾವತಾ ಮಹಾರಾಜಸ್ಯ ಕ್ಷತಿರಸ್ತಿ । ಏವಂ ಚ ಪರಮಾಸ್ತಿಕೇನ ಭಗವತಾ ಸ್ವೋಕ್ತೇಷು ಸರ್ವೇಷ್ವಪ್ಯರ್ಥೇಷು ಶ್ರುತೀನಾಮುಪನ್ಯಸನಾನ್ನ ಮಯಾ ಕಿಂಚಿತ್ ವೈದಿಕಮರ್ಯಾದಾಮುಲ್ಲಂಘ್ಯ ಹೈತುಕಾದಿಭಿರಿವೋಚ್ಯತೇ ಕಿಂತು ವೇದಪ್ರಮಾಣಕಮಿತಿ ಸೂಚಿತಂ ತದಿದಂ ವೈದಿಕಮರ್ಯಾದಾ ಸಂರಕ್ಷಣಮೇವ । -ಅದ್ವೈತಕಾಲಾನಲ

೧. ತ್ವಾಂ ಪ್ರತಿ ತು ಉಭಯವಾದಿಸಿದ್ಧಸಾರ್ವತ್ರಿಕ- ಪಾಠಾಃ ಶ್ರುತಯಃ ಸ್ಮೃತಯೋ ಯುಕ್ತಯ ಏವಾಲಮ್ । ತಥಾ ಹಿ – ಆವಯೋರ್ವಿಪ್ರತಿಪತ್ತಿವಿಷಯಃ ಪ್ರಧಾನಪ್ರಮೇಯಂ ಜೀವಬ್ರಹ್ಮಭೇದೋ, ವಿಶ್ವಸತ್ಯತ್ವಮಿತಿ । ತತ್ರ ಸ್ವಪಕ್ಷಸ್ಥಾಪನಪರಪಕ್ಷಪ್ರತಿಕ್ಷೇಪಾರ್ಥಂ "ದ್ವಾ ಸುಪರ್ಣಾ", "ವಿಶ್ವಂ ಸತ್ಯಮ್" ಇತ್ಯಾದೀನಾಮೇವೋಪನ್ಯಾಸಃ ಶಾಸ್ತ್ರೇ ಕ್ರಿಯತೇ । ತತ್ರ ಪುನರದ್ವೈತಪರಾಣಾಂ ತತ್ತ್ವಮಸ್ಯಾದಿಶ್ರುತೀನಾಂ "ಅನೃತೇನ ಹಿ ಪ್ರತ್ಯೂಢಾ" "ನೇಹ ನಾನಾ" ಇತ್ಯಾದಿ ಶ್ರುತೀನಾಂ ಚ ನಿರವಕಾಶತ್ವಸಾವಕಾಶತ್ವಾದಿನಾ ಬಲಾಬಲೇ ನಿರೂಪ್ಯ ಅದ್ವೈತಾದಿಶ್ರುತೀನಾಮರ್ಥಾಂತರೇ ಸಾವಕಾಶತ್ವಾದಿಕಂ ಶಾಸ್ತ್ರೇ ಪ್ರತಿಪಾದಿತಮ್ । (ಅ.ಕಾ)

೨. ನ ಹಿ ಏತತ್ಪ್ರಮೇಯಪ್ರತಿಪಾದನಾಯ ತಾಸಾಮುದಾಹರಣಮ್ । ಕಿಂತು ತದಿತರಸೂಕ್ಷ್ಮಶಾಸ ತ್ರತತ್ತ್ವಾವಧಾರಣಾರ್ಥಂ ಯಥಾ 'ವಾಙ್ಮನಸಿ ಸಂಪದ್ಯತೇ ಮನಃ ಪ್ರಾಣೇ ಪ್ರಾಣಸ್ತೇಜಸಿ ತೇಜಃ ಪರಸ್ಯಾಂ ದೇವತಾಯಾಮ್' ಇತ್ಯಾದಿ ಶ್ರುತ್ಯರ್ಥನಿರ್ಣಯಾರ್ಥಮುದಾಹೃತಾನಿ ।

"ಉಮಾ ವೈ ವಾಕ್ ಸಮುದ್ದಿಷ್ಟಾ ಮನೋ ರುದ್ರ ಉದಾಹೃತಃ ।
ತದೇತನ್ಮಿಥುನಂ ಜ್ಞಾತ್ವಾ ದಾಂಪತ್ಯಾನ್ನ ವಿಹೀಯತೇ "

ಇತ್ಯೇವಮಾದೀನ್ಯಪ್ರಸಿದ್ಧಾನಿ । ತೇಷು ತವ ವಿಮತಿಶ್ಚೇತ್ ವಕ್ಷ್ಯಮಾಣರೀತ್ಯಾ ಸಾಽಪಿ ವಿಮರ್ಶೇನ ಸುನಿರಸ್ತಾ ॥ - ಅದ್ವೈತಕಾಲಾನಲ

ಖಂಡನಗ್ರಂಥಗಳ ಟೀಕೆಗಳು ವಿಶೇಷವಾಗಿ ಶ್ರೀಜಯತೀರ್ಥರ ನ್ಯಾಯಸುಧೆ, ವಾದಾವಲೀ ಹಾಗೂ ಅನಂತರದ ಶ್ರೀವ್ಯಾಸರಾಜರ ನ್ಯಾಯಾಮೃತ, ಶ್ರೀವಾದಿರಾಜರ ಯುಕ್ತಿಮಲ್ಲಿಕಾ ಮೊದಲಾದವುಗಳನ್ನು ಗಮನಿಸಬಹುದು. ಅವರು ಎಲ್ಲೂ ಸಹ ಪ್ರತಿವಾದಿಗಳು ಸಂದೇಹಿಸುವಂತಹ ಯಾವುದೇ ಪ್ರಮಾಣವನ್ನು ಮುಂದಿಡದೆ ದ್ವೈತವೇದಾಂತದ ನಿಲುವನ್ನು ಸ್ಪಷ್ಟಪಡಿಸಿರುವರು.

(ಇ) ಶ್ರೀಪದ್ಮನಾಭತೀರ್ಥರು, ಶ್ರೀನರಹರಿತೀರ್ಥರು, ಶ್ರೀತ್ರಿವಿಕ್ರಮಪಂಡಿತಾಚಾರ್ಯರು, ಶ್ರೀನಾರಾಯಣಪಂಡಿತಾಚಾರ್ಯರು ಈ ಬಗೆಯ ಪ್ರಶ್ನೆಯನ್ನು ಊಹಿಸುವ ಸಾಧ್ಯತೆಯೂ ಇರಲಿಲ್ಲ ಎಂಬುದು ಅವರ ಗ್ರಂಥಗಳಿಂದ ತಿಳಿಯುವುದು. ಅಲ್ಲದೆ ಅನೇಕ ಕಡೆ ಶ್ರೀಮದಾಚಾರ್ಯರು ಆಕರವನ್ನು ಹೆಸರಿಸದ ಪ್ರಸಂಗಗಳಲ್ಲಿ ಇತಿ ಸದ್ಭಾವೇ, ಇತಿ ಭಾವವೃತ್ತೇ, ಇತಿ ಬ್ರಹ್ಮತರ್ಕೇ ಮೊದಲಾಗಿ ಅವುಗಳನ್ನು ಗುರುತಿಸುವ ಮಹತ್ತರವಾದ ಕಾರ್ಯವನ್ನು ಮಾಡುತ್ತಾ ಅವುಗಳು ಉಪಲಬ್ಧ ಎಂಬುದನ್ನು ಪರ್ಯಾಯವಾಗಿ ಸಮರ್ಥಿಸಿರುವರು ಎಂದು ತಿಳಿಯಬಹುದು.

(ಈ) ಇನ್ನು ವಾದದ ದೃಷ್ಟಿಯಿಂದ ಕೆಲವು ಗ್ರಂಥಗಳು ಇಂದು ಉಪಲಬ್ಧವಿಲ್ಲ ಎಂದು ಒಪ್ಪಿದರೂ ಸಹ ಅಂತಹ ಪ್ರಸಂಗಗಳಲ್ಲಿ ಅದಕ್ಕೆ ಸಂವಾದಿಯಾದ ಅನೇಕ ವಾಕ್ಯಗಳನ್ನು ಇಂದು ಉಪಲಬ್ಧವಾದ ಅದರಲ್ಲೂ ಸಹ ಮಾಧ್ವೇತರರಿಂದ ಪ್ರಕಟಿತವಾದ ಆಕರಗ್ರಂಥಗಳಿಂದಲೇ ನೀಡಲು ಸಾಧ್ಯವಿದೆ. ಉದಾಹರಣೆಗೆ ತಲವಕಾರೋಪನಿಷತ್ತಿನಲ್ಲಿ ಅದನ್ನು ಬ್ರಹ್ಮದೇವರು ರುದ್ರದೇವರಿಗೆ ಉಪದೇಶಿಸಿದರು ಎಂಬ ಉಲ್ಲೇಖ. ಇದಕ್ಕೆ ಶ್ರೀಮದಾಚಾರ್ಯರು ಉಲ್ಲೇಖಿಸಿರುವ ಬ್ರಹ್ಮಸಾರ ನಮಗಿಂದು ಕಂಡು ಬರುವುದಿಲ್ಲವಾದರೂ ಅಂತಹುದೇ ಪ್ರಸಂಗವನ್ನು ಸ್ಫುಟವಾಗಿ ವಿವರಿಸುವ ಶ್ರೀಮನ್ಮಹಾಭಾರತದ ಮೋಕ್ಷಧರ್ಮದ ವಾಕ್ಯಗಳು ಆಧಾರವಾಗಿವೆ.

(ಉ) ಆ ಕಾಲದಲ್ಲಿ ಆ ಗ್ರಂಥಗಳೆಲ್ಲ ಉಪಲಬ್ಧವಾಗಿದ್ದವು ಎನ್ನಲು ಮತ್ತೊಂದು ರೀತಿಯ ಕಾರಣವನ್ನು ತಿಳಿಯಬಹುದು. ಇತಿ ಮೋಕ್ಷಧರ್ಮೇಷು ಎಂದು ಶ್ರೀಮದಾಚಾರ್ಯರು ಉಲ್ಲೇಖಿಸುವ ಎಲ್ಲ ವಾಕ್ಯಗಳೂ ಇಂದು ಉಪಲಬ್ಧವಿರುವ ಮಹಾಭಾರತದ ಮುದ್ರಿತಪ್ರತಿಗಳಲ್ಲೇ ಗುರುತಿಸಲು ಸಾಧ್ಯ. ಇದನ್ನು ನಮ್ಮ ಪ್ರಕಾಶನದ ಸರ್ವಮೂಲಗ್ರಂಥಗಳ ಅಡಿಟಿಪ್ಪಣಿಗಳಲ್ಲಿ ಸ್ಪಷ್ಟವಾಗಿ ತೋರಿಸಲಾಗಿದೆ. 'ಸ್ಥಾಲೀಪುಲಾಕಾ' ನ್ಯಾಯದಿಂದ ಅವರು ಉಲ್ಲೇಖಿಸಿರುವ ಇತರ ಗ್ರಂಥಗಳು ಹಾಗೆಯೇ ಪ್ರಾಮಾಣಿಕ ಎಂದು ಸಿದ್ಧವಾಗುವುದು.

(ಊ) ಇನ್ನು ಈ ಬಗೆಯ ಅನುಪಲಬ್ಧಿಯೂ ಸಹ ಎರಡು ರೀತಿಯದು. 'ಬ್ರಹ್ಮಸಾರ' ಮೊದಲಾದ ಗ್ರಂಥಗಳು ಇಂದು ಕಂಡುಬರದೆ ಸಮಗ್ರ ಆಕರವೇ ದೊರೆಯದಿರುವುದು ಒಂದು ಬಗೆಯದಾದರೆ, ಸ್ಕಾಂದಾದಿ ಪುರಾಣಗಳು ಇಂದು ಉಪಲಬ್ಧವಿದ್ದರೂ ಅವರು ಉಲ್ಲೇಖಿಸುವ ವಾಕ್ಯಗಳಲ್ಲಿ ಕೆಲವು ಮಾತ್ರ ಅದರಲ್ಲಿ ಕಂಡು ಬರದೇ ಇರುವುದು.

ಇವುಗಳಲ್ಲಿ ಗ್ರಂಥಗಳ ಅನುಪಲಬ್ಧಿಯನ್ನು ಹೀಗೆ ವಿವೇಚಿಸಬಹುದು. ಅಪಾರವಾದ ಗ್ರಂಥರಾಶಿ ಕಾಲಕ್ರಮದಲ್ಲಿ ನಾಶವಾಗಿರುವ ಸಾಧ್ಯತೆ ಮೊದಲನೆಯದು. ಮುದ್ರಣ ವ್ಯವಸ್ಥೆ ಇಲ್ಲದ್ದರಿಂದ ಅಂದು ಉಪಲಬ್ಧವಿದ್ದ ಸೀಮಿತಪ್ರತಿಗಳು ಅನಂತರ ಕಾಲದಲ್ಲಿ ಮರೆಯಾಗಿ ಹೋಗುವುದು ಅಸಂಭಾವಿತವಾದ ವಿಚಾರವೇನಲ್ಲ. ಇದ್ದ ಪ್ರತಿಗಳು ಪ್ರವಾಹ, ಚೋರರ ಆಕ್ರಮಣ, ಪ್ರತಿವಾದಿಗಳ ಚೌರ್ಯಪ್ರವೃತ್ತಿ ಮೊದಲಾದಗಳಿಂದ ನಾಶವಾಗುವುದು ಒಂದು ಬಗೆಯದಾದರೆ, ಇದ್ದ ಪ್ರತಿಗಳು ಕಾಲಕ್ರಮದಲ್ಲಿ ಸಹಜವಾಗಿಯೇ ಕ್ರಿಮಿಗಳು, ಗೆದ್ದಲು ಮೊದಲಾದವುಗಳಿಂದ ನಾಶವಾಗುವುದು ಮತ್ತೊಂದು ಬಗೆ. ಇಂದು ಉಪಲಬ್ಧವಿರುವ ತಾಡವಾಲೆ ಮೊದಲಾದ ಹಸ್ತಪ್ರತಿಗಳನ್ನು ಸಂರಕ್ಷಿಸುವ ಸಮಸ್ಯೆ ಎಷ್ಟು ಅಗಾಧವಾದುದು ಎಂಬುದನ್ನು ಹಸ್ತಪ್ರತಿ ಸಂಗ್ರಹಕಾರರ ಅನುಭವದಿಂದ ತಿಳಿದುಕೊಳ್ಳಬಹುದು.

ಸ್ಫುಟವಾಗಿ ಉಪಲಬ್ಧವಿದ್ದ ಕೃತಿಗಳು ಇಂದು ಅನುಪಲಬ್ಧವೆನ್ನಿಸಿದ್ದ ಪ್ರಸಂಗಕ್ಕೆ ನಿದರ್ಶನವಾಗಿ ಶ್ರೀವ್ಯಾಸರಾಜರು ನ್ಯಾಯಾಮೃತದಲ್ಲಿ ಉಲ್ಲೇಖಿಸುವ ವಾದ ರತ್ನಾವಲೀ ಎಂಬ ಶ್ರೀವಿಷ್ಣುದಾಸಾಚಾರ್ಯರ ಕೃತಿ ಪ್ರಧಾನ. ಅದರ ವಾಕ್ಯಗಳನ್ನು ನ್ಯಾಯಾಮೃತ ಉಲ್ಲೇಖಿಸಿದ್ದರೆ, ಅದು ವಿಷ್ಣುದಾಸಾಚಾರ್ಯರ ಕೃತಿ ಎಂದು ಗುರುತಿಸಿದವರು ಬಿದರಳ್ಳಿ ಶ್ರೀನಿವಾಸತೀರ್ಥರಂತಹ ಶ್ರೇಷ್ಠ ಟಿಪ್ಪಣಿಕಾರರು. ಅದು ಇತ್ತೀಚೆಗೆ ಉಪಲಬ್ಧವಾಗಿ ಪ್ರಕಾಶಿತವಾಗಿದ್ದು ಅದರಲ್ಲಿ ಗ್ರಂಥಕಾರರೇ ಉಲ್ಲೇಖಿಸಿರುವ ವಿವರಣವಿಡಂಬನ ಮತ್ತು ಖಂಡನಖಂಡನ ಎಂಬ ಎರಡು ಕೃತಿಗಳು ಇನ್ನೂ ಅನುಪಲಬ್ಧ ಎಂಬುದು ಗಮನಾರ್ಹ. ಅದರಂತೆ ಶ್ರೀರಾಘವೇಂದ್ರಸ್ವಾಮಿಗಳು ರಚಿಸಿದ್ದೆಂದು ನಿಖರವಾಗಿ ತಿಳಿಯುವ ವೇದತ್ರಯವಿವೃತಿ. ಅಭೂತಪೂರ್ವವೆನ್ನಿಸಬಹುದಾಗಿದ್ದ ಅಂತಹ ಮೌಲಿಕ ಕೃತಿ ಇಂದು ಕೇವಲ ನಾಮಾವಶೇಷ. ಅದರಂತೆ ಶ್ರೀವ್ಯಾಸರಾಜರು ಉಲ್ಲೇಖಿಸುವ ಸತ್ತರ್ಕವಿಲಾಸ, ಭೇದಸಂಜೀವಿನಿ ಮೊದಲಾದವುಗಳು. ಇನ್ನು ಅನಂತರದವರ ಅಂತಹ ಕೃತಿಗಳಂತೂ ಅಸಂಖ್ಯ[೧].

ಹರಿದಾಸಸಾಹಿತ್ಯದಲ್ಲಿ ಶ್ರೀಪುರಂದರದಾಸರ ಒಟ್ಟು ರಚನೆಗಳೆನ್ನಲಾಗುವ ನಾಲ್ಕು ಲಕ್ಷದ ಎಪ್ಪತ್ತೈದು ಸಾವಿರ ಕೃತಿಗಳಲ್ಲಿ ಇಂದು ಉಪಲಬ್ಧವಿರುವುದು ಕೇವಲ ಒಂದುಸಾವಿರ ಮಾತ್ರ. ಅದರಂತೆ ಶ್ರೀವಿಜಯದಾಸರ ಇಪ್ಪತ್ತೈದು ಸಾವಿರ ಕೃತಿಗಳಲ್ಲಿ ಇಂದು ಲಭಿಸಿರುವುದು ಒಂದು ಸಾವಿರವನ್ನೂ ಮೀರುವುದಿಲ್ಲ.

ಕೆಲವೇ ಶತಮಾನಗಳ ಅಂತರದ ಮಹನೀಯರ ಕೃತಿಗಳೇ ಇಂದು ಹಾಗೆ ಕಾಣೆಯಾಗುತ್ತಿರುವಾಗ ಸಹಸ್ರಾರು ವರ್ಷಗಳ ಹಿಂದಿನ ಶ್ರೀಮದಾಚಾರ್ಯರ ಉಲ್ಲೇಖಿತವಾದ ಕೃತಿಗಳಲ್ಲಿ ಕೆಲವು ಕಾಣೆಯಾಗಿದ್ದರೆ ಅದು ಅಸಂಭಾವಿತವೆನ್ನಿಸಲಾರದು.

---

೧. ಈ ಬಗ್ಗೆ ಹೆಚ್ಚಿನ ಮಾಹಿತಿಗೆ ನಮ್ಮ ಶ್ರೀವ್ಯಾಸಮಧ್ವ - ಸೆಪ್ಟೆಂಬರ್ ೨೦೦೯ ಸಂಚಿಕೆಯಲ್ಲಿನ ''ಅನುಪಲಬ್ಧವಾಗಿರುವ ಕೆಲವು ಅಪೂರ್ವಮಾಧ್ವಗ್ರಂಥಗಳು'' ಎಂಬ ಲೇಖನವನ್ನು ನೋಡಬಹುದು.

ಇನ್ನು ಉಪಲಬ್ಧಕೃತಿಗಳಲ್ಲಿ ಅವರು ಉಲ್ಲೇಖಿಸಿರುವ ವಾಕ್ಯಗಳು ಕಾಣದಿರುವುದು. ಇದಕ್ಕೆ ಪರಿಹಾರವನ್ನು ಅವರು ಅಂದೇ ನೀಡಿರುವರು :

ಕ್ವಚಿದ್‌ಗ್ರಂಥಾನ್ ಪ್ರಕ್ಷಿಪಂತಿ ಕ್ವಚಿದಂತರಿತಾನಪಿ ।
ಕುರ್ಯುಃ ಕ್ವಚಿಚ್ಚ ವ್ಯತ್ಯಾಸಂ ಪ್ರಮಾದಾತ್ ಕ್ವಚಿದನ್ಯಥಾ ॥
ಅನುತ್ಸನ್ನಾ ಅಪಿ ಗ್ರಂಥಾ ವ್ಯಾಕುಲಾ ಇತಿ ಸರ್ವಶಃ ।
ಉತ್ಸನ್ನಾಃ ಪ್ರಾಯಶಃ ಸರ್ವೇ ಕೋಟ್ಯಂಶೋಽಪಿ ನ ವರ್ತತೇ ॥

-ಮಹಾಭಾರತತಾತ್ಪರ್ಯನಿರ್ಣಯ (೨.೩,೪)

ಇದರಲ್ಲಿ ಗ್ರಂಥಗಳು ಅನುಪಲಬ್ಧವಾಗುವ ಅಥವಾ ವಿಕೃತಗೊಳ್ಳುವ ಪ್ರಧಾನ ಕಾರಣಗಳನ್ನು ಸ್ಪಷ್ಟವಾಗಿ ಸೂಚಿಸಲಾಗಿದೆ.

ಪೂನಾ ಭಂಡಾರ್‌ಕರ್ ಸಂಸ್ಥೆಯ ಮಹಾಭಾರತದ ಸಂಶೋಧಿತ ಆವೃತ್ತಿಯನ್ನುತರುವ ಪ್ರಯತ್ನ ಇದಕ್ಕೆ ಉತ್ತಮ ನಿದರ್ಶನದಂತಿದೆ. ಅವರು ಸಂಗ್ರಹಿಸಿದ ಸಹಸ್ರಾರು ಮಹಾಭಾರತದ ಹಸ್ತಪ್ರತಿಗಳಲ್ಲಿ ಪರಸ್ಪರ ತಾಳೆ ಹೋಗುವ ಸಂಖ್ಯೆ ಅತ್ಯಂತ ವಿರಳ ಎಂಬುದನ್ನು ಅವರು ಸೋದಾಹರಣವಾಗಿ ನಿರೂಪಿಸಿರುವರು. ಗ್ರಂಥಸಂಪಾದನೆ ಕಾರ್ಯಕ್ಕೆ ತೊಡಗುವ ಪ್ರತಿಯೊಬ್ಬರಿಗೂ ಹಸ್ತಪ್ರತಿಗಳಲ್ಲಿನ ಈ ಗೊಂದಲ ಅನುಭವಕ್ಕೆ ಬರುವಂತಹ ವಿಚಾರ. ಹೀಗಾಗಿ ತಮಗೆ ಹಿತವೆನ್ನಿಸದ ವಾಕ್ಯಗಳನ್ನು ತೆಗೆದುಹಾಕುವುದು, ತಮ್ಮ ವಾದಕ್ಕೆ ಪುಷ್ಟಿಕರವಾದ ವಾಕ್ಯಗಳನ್ನು ಬರೆದು ಸೇರಿಸುವುದು, ಉದ್ದೇಶ-ಪೂರ್ವಕವಾಗಿಯೇ ನಡೆಯುವಂತಹ ಗ್ರಂಥವಿಕೃತಿಯ ಕಾರ್ಯ. ಇನ್ನು ಪ್ರಾಮಾದಿಕವಾಗಿ ನಡೆಯುವ ಅದಕ್ಕಂತೂ ಯಾವುದೇ ಮಿತಿಯೂ ಇರಲಾರದು.

ಶ್ರೀಮದಾಚಾರ್ಯರಿಂದ ಉದಾಹೃತಗ್ರಂಥಗಳ ಅನುಪಲಬ್ಧಿಯ ಬಗ್ಗೆ ಇರುವ ಮತ್ತೊಂದು ಮುಖವು ಗಮನಾರ್ಹ. ಅಂತಹ ಹೆಚ್ಚು ಪ್ರಸಂಗಗಳು ದ್ವೈತಾದ್ವೈತವಾದಕ್ಕೆ ಸಂಬಂಧಿಸದೇ ಉಪಾಸನೆಗೆ ಸಂಬಂಧಪಟ್ಟವುಗಳೇ ಹೆಚ್ಚು. ಐತರೇಯಾದಿ ಉಪನಿಷತ್ತುಗಳ ಬಹುಭಾಗ ಇದಕ್ಕೆ ನಿದರ್ಶನ. ಅವು ಶಿಷ್ಯರಿಗೆ ಉಪದೇಶರೂಪವಾಗಿ ತಿಳಿಸಲ್ಪಟ್ಟ ವಾಕ್ಯಗಳು. ಅವುಗಳ ಪ್ರಾಮಾಣ್ಯ ಶಿಷ್ಯರು ಗುರುಗಳಲ್ಲಿ ಹೊಂದುವ ಪ್ರಾಮಾಣ್ಯವೇ ಹೊರತು ಪ್ರತಿವಾದಿಗಳ ರೀತಿಯದಲ್ಲ. ಅಂತಹವುಗಳನ್ನು ಶಿಷ್ಯರುಗಳು ಕೇವಲ ಗುರುಗಳ ವಾಕ್ಯಗಳೇ ಆದರೂ ಸಹ ಸಂಪೂರ್ಣವಾಗಿ ಪ್ರಾಮಾಣಿಕವೆಂದು ಗೌರವಿಸುವುದು ತೀರ ಸಹಜ. ತ್ರಿವಿಕ್ರಮ ಪಂಡಿತಾಚಾರ್ಯರ ''ಯದ್ಯಪಿ ಆಚಾರ್ಯಃ ಸ್ವೋಕ್ತಾರ್ಥೇ ಸ್ವಯಮೇವ ಪ್ರಮಾಣಮ್'' ಎಂಬ ಮಾತು ಇದಕ್ಕೆ ಮುಖ್ಯಪ್ರಮಾಣ. ಎಂದರೆ ಇಂತಹ ವಾಕ್ಯಗಳಾಗಲೀ ಗ್ರಂಥಗಳಾಗಲೀ ಅನುಪಲಬ್ಧವಾದ ಮಾತ್ರಕ್ಕೆ ಅದರಿಂದ ಪ್ರತಿವಾದಿಗಳು ಯಾವರೀತಿಯಲ್ಲೂ ಆಕ್ಷೇಪಿಸುವ ಸಾಧ್ಯತೆಯೇ ಇರದು.

ಇದಕ್ಕೆ ಮತ್ತೊಂದು ನಿದರ್ಶನವಾಗಿ ಹರಿದಾಸರ ಕೃತಿಗಳನ್ನು ಉಲ್ಲೇಖಿಸಬಹುದು. ಶ್ರೀವಿಜಯದಾಸರಂತಹ ದಾಸವರೇಣ್ಯರು ತಮ್ಮ ಕೃತಿಗಳಲ್ಲಿ ವಿಶೇಷವಾಗಿ ಸುಳಾದಿಗಳಲ್ಲಿ ತಿಳಿಸುವ ಅನೇಕ ಪ್ರಮೇಯಗಳಿಗೆ ಮೂಲ ಆಕರಗಳನ್ನು ಗುರುತಿಸುವುದು ಅಸಾಧ್ಯವಾದ

ಕಾರ್ಯ. ಹಾಗಿದ್ದೂ ಅವುಗಳ ಪ್ರಾಮಾಣ್ಯವನ್ನು ದಾಸಕೂಟದವರಿರಲಿ, ವ್ಯಾಸಕೂಟದ ಮಹಾವಿದ್ವಾಂಸರೂ ಸಹ ಪ್ರಶ್ನಿಸಲಾರರು. ಶ್ರೀವಿಜಯದಾಸರ ಕಂಕಣಾಕಾರ ಸುಳಾದಿ ಇಂತಹ ಒಂದು ನಿದರ್ಶನ.

ಶ್ರೀಮದಾಚಾರ್ಯರ ಗ್ರಂಥೋದಾಹರಣದ ಬಗ್ಗೆ ಮತ್ತೊಂದು ರೀತಿಯ ಬೆಳಕನ್ನು ಶ್ರೀರಾಘವೇಂದ್ರಸ್ವಾಮಿಗಳು ತಮ್ಮ ತತ್ತ್ವಪ್ರಕಾಶಿಕಾ ಭಾವದೀಪದಲ್ಲಿ ಚೆಲ್ಲಿರುವರು. ಇತರ ಮತಾಚಾರ್ಯರಂತೆ ಶ್ರೀಮದಾಚಾರ್ಯರು ತಮ್ಮ ಮಾತುಗಳಲ್ಲಿ ವಿಷಯ ಮಂಡಿಸುವಂತಹವರಲ್ಲ. ಏನಿದ್ದರೂ ಸಾಧಾರವಾಗಿಯೇ ನಿರೂಪಿಸುವ ಶೈಲಿ ಅವರದು. ವಿಷಯಮಂಡನೆಯನ್ನು ಸ್ವವಾಕ್ಯಗಳಲ್ಲಿ ಮಾಡಿ ಅದಕ್ಕೆ ಪ್ರಮಾಣವಾಕ್ಯಗಳನ್ನು ನೀಡುವ ಬದಲು ಪ್ರಧಾನವಾಗಿ ವಿಷಯಮಂಡನ ರೂಪವಾದ ಪ್ರಮಾಣವಾಕ್ಯಗಳನ್ನೇ ಉಲ್ಲೇಖಿಸುವುದು ಅವರ ಪ್ರವೃತ್ತಿ. ಎಂದರೆ, ಪ್ರಮಾಣವಚನಗಳೇ ಸ್ಫುಟವಾಗಿ ವಿವರಣರೂಪವಾಗಿ ಇರುವಂತೆ ಎಚ್ಚರ ವಹಿಸುವುದು ಅವರ ಶೈಲಿಯ ಹಿರಿಮೆ. ಇದು ಗ್ರಂಥಸಂಕೋಚಕ್ಕೂ, ಶ್ರೋತೃಗಳ ಅಥವಾ ಜಿಜ್ಞಾಸುಗಳ ಸುಲಭಗ್ರಹಣಕ್ಕೂ ಅನುಕೂಲಕರವಾದ ಶೈಲಿ. ಅದಕ್ಕೆಂದೇ ಅವರು ಅಂತಹ ಶೈಲಿಯನ್ನು ಬೆಳಕಿಗೆ ತಂದಿರುವರು ಎಂಬುದು ಶ್ರೀರಾಘವೇಂದ್ರ ಸ್ವಾಮಿಗಳ ನಿರೂಪಣೆಯ ಭಾವ :

ಏತೇನ, ಸೂತ್ರಾರ್ಥೋ ವರ್ಣ್ಯತೇ ಯತ್ರ ಪದ್ಯೈಃ ಸೂತ್ರಾನುಕಾರಿಭಿಃ ।
ಸ್ವಪದಾನಿ ಚ ವರ್ಣ್ಯಂತೇ ಭಾಷ್ಯಂ ಭಾಷ್ಯವಿದೋ ವಿದುಃ ॥

– ಇತ್ಯುಕ್ತೇಃ ಸ್ವಪದವರ್ಣನಾಭಾವಾನ್ನೇದಂ ಭಾಷ್ಯಮಿತಿ ಕಸ್ಯಚಿದುಕ್ತಿರಪಾಸ್ತಾ । ಸ್ವಪದವಾಕ್ಯಾನಾಂ ವಿಶದೀಕರಣಾತ್ । ಏವಂ ಸರ್ವತ್ರ ಧ್ಯೇಯಮ್ ।

ತದುಕ್ತಮ್–

ಉಕ್ತಮುಕ್ತಮಭಿಧೇಯಮುತ್ತಮಂ ವೇದವಾಕ್ಯಮನುವಾದಯನ್ ಮುಹುಃ।
ವ್ಯಂಜಯತ್ಸ್ವತಿ ವಚೋಭಿರಂಜಸಾ ತಸ್ಯ ಚಾರ್ಥಮತಿ ಯುಕ್ತ ಯುಕ್ತಿಮತ್ ಇತಿ ।

ಶ್ರುತಿಪ್ರಾಮಾಣ್ಯಂ ತು ದ್ವಿತೀಯಪದ್ಯ ಏವ ಸಮರ್ಥಿತಮ್ ।

★★★★★

ಶ್ರೀಮದಾಚಾರ್ಯರ ಪ್ರಾಮಾಣಿಕತ್ವ ಪ್ರಶ್ನಾತೀತವಾದುದು ಎಂಬುದು ಅವರು ದ್ವಾತ್ರಿಂಶತ್ ಲಕ್ಷಣೋಪೇತರಾದ ಮಹಾಮಹಿಮರಾದ ಸಾಕ್ಷಾತ್ ವಾಯುದೇವರು ಎಂದು ಬಲ್ಲವರಿಗೆ ಅತ್ಯಂತ ಸ್ಫುಟವಾಗಿ ತಿಳಿಯುವ ವಿಷಯ. ಆದರೂ ಅವರು ಪ್ರಮಾಣವಚನಗಳನ್ನು ಉಲ್ಲೇಖಿಸುವುದು ಪ್ರೌಢವಾದ ಮಾತ್ರ ಎಂಬ ವಿಶೇಷಾಂಶವನ್ನು ಅವರ ಸಾಕ್ಷಾತ್ ಶಿಷ್ಯರಾದ ಶ್ರೀನರಹರಿತೀರ್ಥರು ಹಾಗೂ ಶ್ರೀತ್ರಿವಿಕ್ರಮಪಂಡಿತಾಚಾರ್ಯರು ನಿರೂಪಿಸಿರುವರು;

ಯದೇತತ್ ಭಾರತಸ್ಯ ಪ್ರಮಾಣತಮತ್ವಪ್ರತಿಪಾದಕಂ ನಷ್ಟಧರ್ಮೇತ್ಯಾದಿ ಶ್ರೀಮದಾಚಾರ್ಯ- ವಚನಂ ತತ್ಸ್ವತ ಏವ ಪ್ರಮಾಣಂ, ನ ತತ್ರ ಶಂಕಾ ಭವತಿ ತಲ್ಲಕ್ಷಣಾಭಿಜ್ಞಾನಾಂ ಮಹಾತ್ಮನಾಮ್ । ತಥಾಹಿ ಬ್ರಹ್ಮತರ್ಕಾದೌ 'ಯದುಕ್ತಿಮಾತ್ರೇ ಪ್ರಾಮಾಣ್ಯಂ

ಯದಿ ನಾಸ್ಯಾಗಮಾಂತರಮ್ । ಅಪೇಕ್ಷಿತಮ್' ಇತ್ಯಾರಭ್ಯ 'ನಾಶಂಕ್ಯಂ ತದ್ವಚಃ ಕ್ವಚಿತ್' 'ತದ್ವಾಕ್ಯಂ ದೇವಪೂಜಿತಮ್' ಇತ್ಯಾದಿ ತಲ್ಲಕ್ಷಣಾನಭಿಜ್ಞಾನಾಂ ಪ್ರಾಕೃತಾನಾಂ ತು ಭವತ್ಯಪಿ ಶಂಕಾ । ಸಾಽಪಿ ಮಾ ಭೂದಿತಿ ಭಾವೇನಾಹ - ತಚ್ಚೋಕ್ತಮಿತಿ ॥

- ಶ್ರೀನರಹರಿತೀರ್ಥರು (ಗೀತಾಭಾಷ್ಯಭಾವಪ್ರಕಾಶಿಕಾ)

ಯದ್ಯಪ್ಯಾಚಾರ್ಯಃ ಸ್ವೋಕ್ತಾರ್ಥೇ ಸ್ವಯಮೇವ ಪ್ರಮಾಣಂ ಸರ್ವಜ್ಞತ್ವಾತ್, ಅವಿಪ್ರಲಂಭಕತ್ವಾಚ್ಚ । ತಥಾಪಿ 'ಸ್ಕಾಂದೇ ಚೋಕ್ತಮ್' ಇತಿ ಪ್ರೌಢವಾದಂ ಕರೋತಿ । ಸರ್ವಜ್ಞತ್ವಂ ತಾವಚ್ಛ್ರುತಿಸಿದ್ಧಮ್ - 'ಬಳಿತ್ಥಾ ತದ್ವಪುಷೇ ಧಾಯಿ ದರ್ಶತಂ' ಇತಿ ....

ಅಶ್ರುತಪ್ರತಿಭಾ ಯಸ್ಯ ಶ್ರುತಿಸ್ಮೃತ್ಯವಿರೋಧಿನೀ ।
ವಿಶ್ರುತಾ ನೃಷು ಜಾತಂ ಚ ತಂ ವಿದ್ಯಾದ್ದೇವಸತ್ತಮಂ ॥ ಇತಿ ನಾರಾಯಣಶ್ರುತಿಃ ।

ಪ್ರತ್ಯಕ್ಷಮೇವ ಚೈತಲ್ಲಕ್ಷಣಂ ದೃಶ್ಯತೇ ಭಗವತಿ ಭಾಷ್ಯಕಾರೇ । .... ಅವಿಪ್ರಲಂಭಕತ್ವಂ ಚಾಸ್ಯಾವಗಮ್ಯತೇ । 'ಯದ್ವೈ ಕಿಂಚ ಮನುರವದತ್ ತದ್ಭೇಷಜಮ್' 'ತ್ವಾ ದೂತಾಸೋ ಮನುವದ್ವದೇಮ' ಇತ್ಯಾದಿ ಶ್ರುತೇಃ, 'ತೇ ವಾಯವೇ ಮನವೇ ಬಾಧಿತಾಯ' ಇತಿ ಚ । .... ತಸ್ಮಾದಯಮಾಚಾರ್ಯಃ ಆಪ್ತತಮ ಇತಿ ಸಿದ್ಧಮ್ । ಯದುಕ್ತಯಃ ಕ್ವಾಪಿ ನಾನ್ಯಥಾ ದೃಶ್ಯಂತೇ ತತ್ರಾಪ್ತಿಂ ಶಂಕಮಾನಾಃ ಕುತ್ರ ನಿಶ್ಚಿನ್ವೀರನ್ನಿತಿ ॥

– ಶ್ರೀತ್ರಿವಿಕ್ರಮಪಂಡಿತಾಚಾರ್ಯರು (ತತ್ತ್ವಪ್ರದೀಪ)

★★★★★

ವ್ಯಾಪ್ತಿರ್ಯಸ್ಯ ನಿಜೇ ನಿಜೇನ ಮಹಸಾ ಪಕ್ಷೇ ಸಪಕ್ಷೇ ಸ್ಥಿತಿ-
ರ್ವ್ಯಾವೃತ್ತಿಶ್ಚ ವಿಪಕ್ಷತೋಽಥ ವಿಷಯೇ ಸಕ್ತಿರ್ನ ವೈ ಬಾಧಿತೇ ।
ನೈವಾಸ್ತಿ ಪ್ರತಿಪಕ್ಷಯುಕ್ತಿರತುಲಂ ಶುದ್ಧಂ ಪ್ರಮಾಣಂ ಸ ಮೇ
ಭೂಯಾತ್ ತತ್ತ್ವವಿನಿರ್ಣಯಾಯ ಭಗವಾನಾನಂದತೀರ್ಥೋ ಮುನಿಃ ॥ ೩ ॥

-ಎಂಬ ಶ್ರೀಜಯತೀರ್ಥರ ನ್ಯಾಯಸುಧೆಯ ಈ ಶ್ಲೋಕದಲ್ಲಿ ಶ್ರೀಮದಾಚಾರ್ಯರನ್ನು ಶುದ್ಧಂ ಪ್ರಮಾಣಂ ಎಂದು ಕರೆಯುವಲ್ಲಿ ಮೇಲಿನ ವಾಕ್ಯಗಳ ಭಾವ ಸ್ಫುಟವಾಗಿ ವ್ಯಕ್ತವಾಗಿದೆ ಎಂಬುದನ್ನು ಗಮನಿಸಬೇಕು.

ಶ್ರೀಮದಾಚಾರ್ಯರ ಬೃಹದಾರಣ್ಯಕೋಪನಿಷತ್ತಿನ ಭಾಷ್ಯದಲ್ಲಿ ನೀಡಿರುವ ಈ ಕೆಳಗಿನ ಪ್ರಮಾಣವಚನಗಳು ಅವರ ಮೇಲಿನ ಈ ಬಗೆಯ ಆಕ್ಷೇಪಗಳಿಗೆ ಸೂಕ್ತ ಉತ್ತರವಾಗಿವೆ:

ನಿಃಶಂಕತ್ವೇನ ಯೋ ವಕ್ತಾ ಪ್ರಶ್ನಾನಾಮುತ್ತರಂ ಸದಾ ।
ಆನುಕೂಲ್ಯೇನಾಗಮಾನಾಂ ನಾಶಂಕ್ಯಂ ತದ್ವಚಃ ಕ್ವಚಿತ್ ।
ದಶತಾಲೋ ದಶಮುಖೋ ಲಲಾಟತ್ರಿಂಶಕಸ್ತಥಾ ।
ಸಾರ್ಧೋನ್ನತಶ್ಚೈವ ಪುನಃ ಪರ್ಯಗ್ದಶಶಿರಾಸ್ತಥಾ ।
ಪಂಚೋರಾಃ ಸಪ್ತಪಾದೋ ಯೋ ನಾಶಂಕ್ಯಂ ತದ್ವಚಃ ಕ್ವಚಿತ್ ।
ನವಾಂಗುಲಮುಖೋ ಯಸ್ತು ಗಲೇ ಚ ಚತುರಂಗುಲಃ ।

ಚತುರ್ವಿಂಶಾಂಗುಲತನುಸ್ತದ್ವಾಕ್ಯಂ ದೇವಪೂಜಿತಮ್।
ಪ್ರಾಧಾನ್ಯಾಲ್ಲಕ್ಷಣೋಪೇತೋ ದುರ್ಲಕ್ಷಣಯುತೋಽಪಿ ಸನ್।
ತಸ್ಯಾಪಿ ವಾಕ್ಯಂ ಮಾನಂ ಸ್ಯಾತ್ ಕಿಮು ಸರ್ವಯುತಸ್ಯ ತು।
ಪ್ರಾಯೋ ದೇವಾಶ್ಚ ಋಷಯೋ ನ ಸರ್ವಶುಭಲಕ್ಷಣಾಃ।
ಕೃತೇ ವಿಷ್ಣುಂ ಸುರಶ್ರೇಷ್ಠಂ ಬ್ರಹ್ಮಾಣಂ ವಾಽಪ್ಯನಂತರಮ್।
ಯಸ್ಮಾನ್ನ ವಿದುಷಾಂ ವಾಕ್ಯಮಾಶಂಕ್ಯಂ ಕೇನಚಿತ್ ಕ್ವಚಿತ್।
ತಸ್ಮಾದ್ವೇದೇಷು ಸರ್ವೇಷು ಕಥಾಃ ಪ್ರಶ್ನೋತ್ತರಾತ್ಮಿಕಾಃ।
ನ ಪ್ರಮಾಣಾಂತರಂ ತತ್ರ ಪೃಚ್ಛಂತಿ ಘಟನಾಂ ವಿನಾ।
ಏತಸ್ಮಾದಾಶ್ವಲಾದ್ಯಾಶ್ಚ ಪಪ್ರಚ್ಛುರ್ನೈವ ಕುತ್ರಚಿತ್।
ಆಗಮಂ ಯಾಜ್ಞವಲ್ಕ್ಯೋಕ್ತೇರನ್ಯಂ ತಂ ಮಿಥಿಲೋಽಪಿ ಚ' ಇತಿ ಬ್ರಹ್ಮತರ್ಕೇ।
'ಯಶ್ಛಿನ್ನವಿಚಿಕಿತ್ಸಸ್ತು ಚ್ಛಿನತ್ಯಾಪಿ ಚ ಸಂಶಯಾನ್।
'ಷಣ್ಣವತ್ಯಂಗುಲೋ ಯಸ್ತು ನ್ಯಗ್ರೋಧಪರಿಮಂಡಲಃ।
ದಶತಾಲಶ್ಚತುರ್ಹಸ್ತಃ ಸ ದೇವೈರಪಿ ಪೂಜ್ಯತೇ' ಇತಿ ವಾಯುಪ್ರೋಕ್ತೇ।

ಶ್ರೀಮದಾಚಾರ್ಯರ ಅಪ್ರಸಿದ್ಧ ಶ್ರುತ್ಯುದಾಹರಣದ ಬಗ್ಗೆ ಶ್ರೀವಿಜಯೀಂದ್ರಸ್ವಾಮಿಗಳು, ಶ್ರೀರಾಘವೇಂದ್ರಸ್ವಾಮಿಗಳು, ಶ್ರೀಸತ್ಯನಾಥತೀರ್ಥರು, ಶ್ರೀವೈಶ್ವನಾಥಿ ನಾರಾಯಣ ಪಂಡಿತಾಚಾರ್ಯರು, ಶ್ರೀವನಮಾಲಿಮಿಶ್ರರು ಮೊದಲಾದವರು ನೀಡಿರುವ ಸ್ಪಷ್ಟೀಕರಣ ವಾಕ್ಯಗಳು ಹೀಗಿವೆ;

ನ ತಾವದಪ್ರಸಿದ್ಧಶ್ರುತ್ಯುದಾಹರಣಂ ದೋಷಃ । ಶ್ರೌತಸ್ಮಾರ್ತಕರ್ಮವಿಧಾಯಕಾನಾಂ ತತ್ತನ್ಮಂತ್ರಾಣಾಂ ಚ ಖಿಲಾನಾಮೇವ ಪ್ರಾಯೇಣಾಪಸ್ತಂಬಾದಿಭಿಃ ಸ್ವಸ್ವಸೂತ್ರೇಷೂ-ದಾಹರಣಾತ್ । ಋಷಿತ್ವಾದೇವ ಖಿಲಶ್ರುತ್ಯುದಾಹರಣಂ ತದ್ದರ್ಶಿತ್ವೇನ ತೇಷಾಮುಪಪದ್ಯತ ಇತಿ ಚೇತ್ । ಕಾ ತತ್ರ ಶ್ರದ್ಧಾ? ನ ಹಿ ಋಷಿತ್ವಂ ನಾಮ ಜಾತಿರಸ್ತಿ । ತ್ರಿಕಾಲದರ್ಶಿತ್ವಸ್ಯೈವ ತತ್ತ್ವಾತ್ । ''ಕಲ್ಪಾಧ್ಯಾಯೀ ಋಷಿಃ'' ಇತಿ ತನ್ನಿರ್ವಚನಾಚ್ಚ । ತ್ರಿಕಾಲದರ್ಶಿತ್ವಂ ಕಲ್ಪಾಧ್ಯಯನಂ ಚಾರ್ವಾಚೀನೇಷು ನ ಸಂಭವತೀತಿ ಚೇತ್ । ಅಯಮಪಿ ಕಶ್ಚನ ತೇ ವ್ಯಾಮೋಹಃ । ಕಾಲತ್ರಯವೃತ್ತಾಂತದರ್ಶಿನಾಂ ಸಾಂಗಸಕಲವೇದಾಧ್ಯಾಯಿನಾಂ ಭಟ್ಟಪಾದಪ್ರಭೃತೀನಾಂ ಬಹುಲಮುಪಲಂಭಾತ್ । ಕಥಮನ್ಯಥಾ ಭವತ್ಕೂಟಸ್ಥಾನಾಂ ಶಂಕರಾದೀನಾಂ ಸರ್ವಜ್ಞತ್ವಾದಿಕಮಂಗೀಕುರುಷೇ । ಗ್ರಂಥಪ್ರಣಯನಾದಿಮಹಾಕಾರ್ಯದರ್ಶನಾತ್ ತೇಷಾಂ ಸರ್ವಜ್ಞತ್ವಮಂಗೀಕುರ್ಮ ಇತಿ ಚೇತ್ । ಕಿಂ ಪ್ರಕೃತೇಽಪಿ ದಂಡವಾರಿತಮ್ । ನನ್ವಸ್ಮದೀಯ ಗ್ರಂಥಪ್ರವೃತ್ತಾವಿವ ತ್ವದೀಯಪ್ರವೃತ್ತೇರ್ನ ತತ್ತ್ವಜ್ಞಾನಮೂಲತ್ವಂ ಕಿಂತು ಮೋಹಾದಿಮೂಲತ್ವಮಿತಿ ಚೇತ್ । ಕಥಮೇತದವಧಾರಿತಂ ದೇವಾನಾಂಪ್ರಿಯೇಣ ತ್ವಯಾ । ಪ್ರತ್ಯುತ –

'ಮಾಯಾವಾದಮಸಚ್ಛಾಸ್ತ್ರಂ ಪ್ರಚ್ಛನ್ನಂ ಬೌದ್ಧಮುಚ್ಯತೇ ।
ಮಯೈವ ಕಥಿತಂ ದೇವಿ ಕಲೌ ಬ್ರಾಹ್ಮಣರೂಪಿಣಾ'

ಇತಿ ಪಾದ್ಮವಚನೇನ ತ್ವನ್ಮತಸ್ಯೈವ ಪ್ರಚ್ಛನ್ನಬೌದ್ಧತ್ವಮುಚ್ಯತೇ । 'ಚತುರ್ಭಿಃ ಸಹಿತಃ ಶಿಷ್ಯೈಃ ಶಂಕರೋಽವತರಿಷ್ಯತಿ । ಸಹಸ್ರೇ ದ್ವಿಶತೋತ್ತರೇ'' ಇತಿ ತ್ವದುದಾಹೃತವಚನಂ ಚ ವಿಪ್ರಲಿಪ್ಸಾಮ

ಶೂಲತ್ವೇಽಪ್ಯುಪಪನ್ನಮಿತಿ ನ ತದ್ಬಲೇನ ತ್ವನ್ಮತಸ್ಯ ಪ್ರೇಕ್ಷಾವದುಪಾದೇಯತ್ವಮ್ । ಕಿಂಚಾಸ್ಮದ್ಗ್ರಂಥಪ್ರವೃತ್ತೇಃ ಶಿಷ್ಯಾನುಗ್ರಹೈಕಪ್ರಯೋಜನತ್ವಂ, ತ್ವನ್ಮತಸ್ಯ ಚ ಮೋಹಶಾಸ್ತ್ರತ್ವಂ ಪುರಾಣೇಷು ಸ್ಪಷ್ಟಮೇವೋಚ್ಯತೇ । ತಥಾ ಕೂರ್ಮಪುರಾಣೇ ಶ್ರೀಮುಷ್ಣಮಾಹಾತ್ಮ್ಯೇ ಪಂಚಮೇಽಧ್ಯಾಯೇ-

ಶ್ರೀಸೂತ ಉವಾಚ —
ಪುರಾ ಭಾಗೀರಥೀ ತೀರೇ ನಿಮಿನಾ ಪೃಷ್ಟವಾನ್ ಮುನಿಃ ।
ನಷ್ಟಾ ಭಾಗವತಾ ಧರ್ಮಾಃ ಸಚ್ಛಾಸ್ತ್ರಾಣಿ ಕಲೌ ಯುಗೇ ॥೧॥

ಇತಿ ಶ್ರುತಂ ಮಯಾ ಪೂರ್ವಂ ತೀರ್ಥಯಾತ್ರಾಪ್ರಸಂಗತಃ ।
ಕಥಂ ನಷ್ಟಾ ಭವಿಷ್ಯಂತಿ ಪುನಃ ಸ್ಥಾಸ್ಯಂತಿ ವೈ ಕಥಮ್ ॥೨॥

ವದ ವಿದ್ವನ್ ಮಹಾಬಾಹೋ ಕಶ್ಚೋದ್ಧಾರಂ ಕರಿಷ್ಯತಿ ॥

ಶ್ರೀವಾಮದೇವ ಉವಾಚ —
ಚತುಃಸಹಸ್ರೇ ದ್ವಿಶತೇ ಗತೇ ಸೌಗಂಧಿಕೇ ವನೇ ॥೩॥

ನಿಹತಾ ಭೀಮಸೇನೇನ ದ್ವಾಪರಾಂತೇ ನೃಪೋತ್ತಮ ।
ಸೌಗಂಧಿಕಾಖ್ಯೇ ನಿಹತಾ ಯೇ ಚ ಕ್ರೋಧವಶಾಃ ಖಲಾಃ ॥೪॥

ರುದ್ರೇಣ ನಿಹತಾ ಯೇ ಚ ತ್ರೈಪುರಾಶ್ಚ ಕಲೌ ಯುಗೇ ।
ಚತುಃಸಹಸ್ರೇಽಷ್ಟಶತೇ ಮಣಿಮಂತಾದಯೋಽಸುರಾಃ ॥೫॥

ಜನಿಷ್ಯಂತಿ ಬ್ರಹ್ಮಯೋನೌ ದೈತ್ಯಾಃ ಸದ್ಧರ್ಮದೂಷಕಾಃ ।
ಮಿಥ್ಯಾವಾದಮಸಚ್ಛಾಸ್ತ್ರಂ ಕರಿಷ್ಯಂತಿ ಕಲೌ ಯುಗೇ ।
ಗೋಪಯಿಷ್ಯಂತಿ ಸಚ್ಛಾಸ್ತ್ರಂ ಸಚ್ಛಾಸ್ತ್ರಪರಿಪಂಥಿನಃ ॥೬॥

ಏವಂ ಧರ್ಮೇಷು ನಷ್ಟೇಷು ಶಾಸ್ತ್ರೇಷು ಚ ಕಲೌ ಯುಗೇ ।
ದೇವೈರ್ವಿಜ್ಞಾಪಿತೋ ವಿಷ್ಣುರ್ವಾಯುಮಾಜ್ಞಾಪಯಿಷ್ಯತಿ ॥೭॥

ಉದ್ಧರಸ್ವ ಮಹಾಬಾಹೋ! ಮಮ ಧರ್ಮಾನ್ ಸನಾತನಾನ್ ।
ಇತ್ಯಾಜ್ಞಪ್ತೋ ಭಗವತಾ ಕಲೌ ವಾಯುರ್ಭವಿಷ್ಯತಿ ॥೮॥

ಮಧ್ವನಾಮಾ ಯತಿರಸೌ ಸಚ್ಛಾಸ್ತ್ರಾಣಿ ಕರಿಷ್ಯತಿ ।
ಗೀತಾಯಾಶ್ಚೋಪನಿಷದಾಂ ಭಾಷ್ಯಾಣಿ ಚ ಕರಿಷ್ಯತಿ ॥೯॥

ನಿರಸಿಷ್ಯತಿ ಪಾಷಂಡಾನ್ ಸಚ್ಛಾಸ್ತ್ರಾಣಿ ಮಹಾಮತಿಃ ।
ಸ್ಥಾಪಯಿಷ್ಯತಿ ಸದ್ಧರ್ಮಾನ್ ಸಚ್ಛಾಸ್ತ್ರಂ ವ್ಯಾಕರಿಷ್ಯತಿ ।
ಶ್ರೋಷ್ಯಂತಿ ಮುನಯಃ ಸರ್ವೇ ಶುಕಾದ್ಯಾ ದೇವರೂಪಿಣಃ ॥೧೦॥'' ಇತಿ ।

ತಥಾಽಲಕಾಪುರೀಮಾಹಾತ್ಮ್ಯೇ —

ಕಲೌ ತು ಪಾಪಭೂಯಿಷ್ಠೇ ಮಿಥ್ಯಾಜ್ಞಾನಪರಾಯಣಾಃ ।
ದೂಷಯಿಷ್ಯಂತಿ ಸದ್ಧರ್ಮಾನ್ ಸಚ್ಛಾಸ್ತ್ರಾಣಿ ಕಲೌ ಪುನಃ ॥

ಉದ್ಧರಿಷ್ಯತಿ ಸಚ್ಛಾಸ್ತ್ರಂ ಕಶ್ಚಿತ್ ಕಾಲಾಂತರೇ ಯತಿಃ ।

ರಾಜದ್ವಾರಂ ಸಮಾಶ್ರಿತ್ಯ ಪಾಷಂಡಾನ್ನಿರಸಿಷ್ಯತಿ ।
ವ್ಯಾಕರಿಷ್ಯತಿ ಸಚ್ಛಾಸ್ತ್ರಂ ದೇವಬ್ರಾಹ್ಮಣತರ್ಪಕಃ ॥ ಇತ್ಯಾದಿ ।

ತಥಾ ಸ್ಕಾಂದಪುರಾಣೇ ಶ್ರೀಮುಷ್ಣಮಾಹಾತ್ಮ್ಯೇ ನವಮೇಽಧ್ಯಾಯೇ —

ಕಲೌ ಪಾಷಂಡಭೂಯಿಷ್ಠೇ ಧರ್ಮಲೇಶವಿವರ್ಜಿತೇ ।
ವೈವಸ್ವತೇಽಂತರೇ ಪ್ರಾಪ್ತೇ ತ್ವಷ್ಟಾವಿಂಶೇ ಕಲೌ ಯುಗೇ ।
ತ್ರೈಪುರಾ ಭಾರತೇ ಯುದ್ಧೇ ನಿಹತಾ ರಾಕ್ಷಸಾ ಭುವಿ ॥

ಯದಾ ಪ್ರವರ್ತಯಿಷ್ಯಂತಿ ಮಾರ್ಗಂ ಪಾಷಂಡಗೋಚರಮ್ ।
ತದಾ ಸಂಪ್ರಾರ್ಥಿತೋ ದೇವೈರ್ಭಗವಾನ್ ಹರಿರೀಶ್ವರಃ ॥

ತತ್ಕರ್ಮದಕ್ಷಂ ವಿನತಂ ಮಾತರಿಶ್ವಾನಮಾದಿಶತ್ ।
ವಾಯುಸ್ತು ಯತಿರೂಪೇಣ ಜನಿಷ್ಯತಿ ಕಲೌ ಯುಗೇ ॥

ಸ ದಶಪ್ರಮತಿರ್ಭೂತ್ವಾ ಕಲೌ ಧರ್ಮಾನ್ ವದಿಷ್ಯತಿ ।
ಕೃತ್ವಾ ಸಚ್ಛಾಸ್ತ್ರಸಂದರ್ಭಂ ಸ್ಥಾಪಯಿಷ್ಯತಿ ಸತ್ಪಥಮ್ ॥
ಏವಮೇವ ಮಹಾದೇವೀ ನಾರಾಯಣಪರಾಯಣಾಃ ।
ಕಾಲೇ ಕಾಲೇ ಭವಿಷ್ಯಂತಿ ತತ್ರ ತತ್ರ ಮಹಾವ್ರತಾಃ ॥

ತಾಮ್ರಪರ್ಣೀ ನದೀ ಯತ್ರ ಕೃತಮಾಲಾ ಪಯಸ್ವಿನೀ ।
ಕಾವೇರೀ ಚ ಮಹಾಪುಣ್ಯಾ ತಥಾ ದುಗ್ಧಾಪಗಾ ನದೀ ॥

ಏತನ್ಮಧ್ಯಪ್ರದೇಶೇಷು ಧರ್ಮಃ ಪಾದೇನ ತಿಷ್ಠತಿ ।
ಮ್ಲೇಚ್ಛಾಕ್ರಾಂತಂ ಭವೇದನ್ಯದ್ಭೂತಲಂ ತು ಕಲೌ ಯುಗೇ ॥

ಕಲೌ ಪಾಷಂಡಭೂಯಿಷ್ಠಂ ಪುಣ್ಯಕ್ಷೇತ್ರಂ ಭವಿಷ್ಯತಿ ।
ನ ಚ ವಿಷ್ಣುಕಥಾ ಕ್ವಾಪಿ ನಾಪಿ ವೈಷ್ಣವಪದ್ಧತಿಃ ॥

ಆಕ್ರಾಂತೇಷು ಚ ದೇಶೇಷು ಮ್ಲೇಚ್ಛರೂಪೈಶ್ಚ ರಾಕ್ಷಸೈಃ ।
ದ್ರಾವಿಡೇಷು ಚ ದೇಶೇಷು ಧರ್ಮಃ ಸ್ಥಾಸ್ಯತಿ ಪಾದತಃ ॥

ಪಂಚದ್ರಾವಿಡಗೋ ಧರ್ಮೋ ಮೋಕ್ಷಹೇತುರ್ಭವಿಷ್ಯತಿ ।
ಯದಾ ಯದಾ ಹಿ ಧರ್ಮಸ್ಯ ಗ್ಲಾನಿರ್ಭವತಿ ಪಾರ್ವತಿ ॥

ಅವತೀರ್ಯ ತದಾ ವಿಷ್ಣುರ್ಧರ್ಮಗೋಪ್ತಾ ಸ್ವಯಂ ಹರಿಃ ।
ಸಂಪ್ರದಾಯೇಷು ನಷ್ಟೇಷು ಸರ್ವಧರ್ಮೇ ಲಯಂ ಗತೇ ॥

ವಿಷ್ಣೋರನುಜ್ಞಯಾ ಭಕ್ತಾಃ ಕಲೌ ಧರ್ಮಪ್ರವರ್ತಕಾಃ ।
ಏವಂ ಭಾಗವತಾ ಧರ್ಮಾ ಭವಿಷ್ಯಂತಿ ಯುಗೇ ಯುಗೇ ॥' ಇತ್ಯಾದಿ।

ತಥಾ ಬ್ರಹ್ಮಪುರಾಣೇ ಕ್ಷೇತ್ರಕಾಂಡೇ ವೇಂಕಟಗಿರಿಮಾಹಾತ್ಮ್ಯೇ ತೃತೀಯಾಽಧ್ಯಾಯೇ ಶಂಖಲಿಖಿತಸಂವಾದೇ –

ಯತ್ರ ಬ್ರಹ್ಮಶಿಲಾ ನಾಮ ಸರಿನ್ಮಧ್ಯೇ ಚ ವರ್ತತೇ ।
ಅಗಸ್ತ್ಯತಪಸಾ ಪಶ್ಚಾದ್ಗಯಾಸಾನ್ನಿಧ್ಯಮತ್ರ ವೈ ।
ಪಾದಾ ಈಶಾನವಿಷ್ಣ್ವಾದಿದೇವಾನಾಂ ತತ್ರ ಸಂತಿ ಹಿ ॥
ಯತಿರೂಪೋ ಮಾತರಿಶ್ವಾ ಹ್ಯಷ್ಟಾವಿಂಶತಿಮೇ ಕಲೌ ।
ಅವತೀರ್ಯ ವಸತ್ಯತ್ರ ಮಧ್ವನಾಮಾ ಪರಂ ವಿಭೋಃ ॥
ಅವಾಪ ತಪಸಾ ಪುಣ್ಯಃ ಪ್ರೀತ್ಯಾ ಚಾಗಸ್ತ್ಯಯೋಗಿನಃ ।
ತತ್ಸ್ಥಾಪಿತಾಲಯೇ ಪುಣ್ಯೇ ಚಾತುರ್ಮಾಸ್ಯಂ ಕರಿಷ್ಯತಿ ॥
ಶುಕಃ ಶ್ರೋಷ್ಯತಿ ಸಚ್ಛಾಸ್ತ್ರಂ ಪದ್ಮತೀರ್ಥಾದಿಹಾಗತಃ ॥' ಇತಿ ।

ತಸ್ಮಾದಾಪಸ್ತಂಬಾದ್ಯುದಾಹೃತಶ್ರುತಿವದಸ್ಮದಾಚಾರ್ಯೋದಾಹೃತಶ್ರುತಯೋಽಪಿ ಪ್ರೇಕ್ಷಾವದುಪಾದೇಯಾಃ ಶ್ರುತಿತ್ವೇನ ಸರ್ವಜ್ಞದೃಷ್ಟತ್ವಾತ್ । ತಥಾ ಚ ಸ್ಮೃತಿಃ ।

'ವಿಂಶಲ್ಲಕ್ಷಣತೋಽನೂನಸ್ತಪಸ್ವೀ ಬಹುವೇದವಿತ್ ।
ವೇದ ಇತ್ಯೇವ ಯಂ ಪಶ್ಯೇತ್ ಸ ವೇದೋ ಜ್ಞಾನದರ್ಶನಾತ್ ॥'

-ಇತಿ ಬ್ರಹ್ಮಾಂಡೇ

ಅನ್ಯೈರದೃಷ್ಟಾಃ ಶ್ರುತಯಃ ತ್ವದೀಯೈಃ ಕಥಂ ದೃಷ್ಟಾ ಇತ್ಯೇತದಪ್ಯಾಪಾತರಮಣೀಯಮ್ । ನ ಹಿ ಯೇನ ಯನ್ನ ದೃಶ್ಯತೇ ತದನ್ಯೇನಾಪಿ ನ ದ್ರಷ್ಟವ್ಯಮಿತ್ಯಸ್ತಿ । ಅನ್ಯೈರದೃಷ್ಟಾನಾಂ ಖಿಲವಾಕ್ಯಾನಾಮಾಪಸ್ತಂಬಾದಿಭಿರೇವ ದೃಷ್ಟತ್ವಾತ್ । ಕಿಂಚಾಸ್ಮದಾಚಾರ್ಯೋದಾಹೃತಸ್ಮೃತಯಃ ಸರ್ವಜ್ಞೈರನ್ಯೈರ್ದೃಷ್ಟಾಃ ಸಂತು ನಾಮ । ನ ಚ ತಾಸಾಮನ್ಯದೃಷ್ಟತ್ವೇ ಕ್ವಚಿದುದಾಹರಣಮಪಿ ಸ್ಯಾದಿತಿ ಯುಕ್ತಮ್ । ತತ್ರ ತೇಷಾಮೌದಾಸೀನ್ಯಸಂಭವಾತ್ । ನನ್ವೇವಂ ಕೇನಚಿತ್ಸ್ವಮನೀಷಯಾ ವೈದಿಕವಿರುದ್ಧಧರ್ಮಾಂತರಂ ಪರಿಕಲ್ಪ್ಯ ತತ್ರ ಪ್ರಮಾಣತ್ವೇನ ವೇದವಾಕ್ಯಕಲ್ಪನಮಪಿ ಕರ್ತುಂ ಶಕ್ಯಮಿತಿ ಧರ್ಮವ್ಯವಸ್ಥಿತಿರವ್ಯವಸ್ಥಿತೈವ ಸ್ಯಾದಿತಿ ಚೇನ್ನ । ಅಸ್ಮದಾಚಾರ್ಯೋದಾಹೃತಾನಾಂ ಪ್ರತ್ಯಕ್ಷಶ್ರುತಿಸಮಾನಶೀಲತ್ವೇನಾವಿರೋಧಿತಯಾ ಧರ್ಮವ್ಯವಸ್ಥಾಸಂಭವಾತ್ । ಉದಾಹೃತಪುರಾಣ-ವಚನಾನುಸಾರೇಣ ಧರ್ಮಸ್ಥಾಪಕತಯಾ ಪ್ರತಿಪನ್ನತ್ವೇನ ಪರಮಾಪ್ತಸ್ಯಾಸ್ಮದಾಚಾರ್ಯಸ್ಯ ಶ್ರುತಿವಾಕ್ಯಸಮಾನಾಕಾರವಾಕ್ಯಪರಿಕಲ್ಪನಾಯೋಗಾಚ್ಚ । ಅನಾಪ್ತಾನಾಂ ತತ್ಪರಿಕಲ್ಪನಸ್ಯ ಧರ್ಮವ್ಯವಸ್ಥಾಭಂಜಕತ್ವಾಚ್ಚ । ತಸ್ಮಾತ್ ಕಲ್ಪಸೂತ್ರೇಷ್ವಿವ ಭಾಷ್ಯೇಷ್ವಪಿ ಖಿಲಶ್ರುತ್ಯುದಾಹರಣಂ ನ ದೋಷಾಯ । ಕಿಂಚ ಪೂರ್ವಮೀಮಾಂಸಾಯಾಂ ತತ್ರ ತತ್ರ ''ಊರ್ಜಪಶೂನ್ಯಾಯೋತ್ಯೂ-ರ್ಜೋವರುದ್ಧ್ಯ'' ಇತ್ಯಾದಿ ಖಿಲಶ್ರುತಯ ಏವೋದಾಹೃತಾ ಇತಿ ನಾಸ್ಮಾಕಮೇವ ಖಿಲಶ್ರುತ್ಯುದಾಹರಣಂ ದೋಷಃ । ಕಿಂಚ ಶಂಕರಭಾಷ್ಯೇ – 'ಅತ ಏವ ಚೋಪಮಾ ಸೂರ್ಯಕಾದಿವತ್' ಇತಿ ಸೂತ್ರೇ, ''ಯಥಾ ಹ್ಯಯಂ ಜ್ಯೋತಿರಾತ್ಮಾ ವಿವಸ್ವಾನ್'' ಇತ್ಯಾದಿ ಖಿಲಶ್ರುತಿರೇವೋದಾಹೃತಾ । ಇದಮುಪಲಕ್ಷಣಮ್ । ಶಂಕರಭಾಷ್ಯೇ ಸಂಭೃತ್ಯಧಿಕರಣೇಽಪಿ – 'ಬ್ರಹ್ಮಜ್ಯೇಷ್ಠಾ ವೀರ್ಯಾಸಂಭೃತಾನಿ ಬ್ರಹ್ಮಾಗ್ರೇ ಜ್ಯೇಷ್ಠದಿವಮಾತತಾನ' ಇತಿ ರಾಣಾಯನೀಯಖಿಲಶ್ರುತಿರೇವೋದಾಹೃತೇತ್ಯಪಿ ದ್ರಷ್ಟವ್ಯಮ್ । ಏವಂ ರಾಮಾನುಜಭಾಷ್ಯೇಽಪಿ 'ಓಂ ಜ್ಯೋತಿಶ್ಚರಣಾಭಿಧಾನಾತ್' ಇತ್ಯಧಿಕರಣೇ, 'ಇಂದ್ರಃ ಶಚೀಪತಿರ್ಬಲೇನ ಪೀಡಿತೋ ದುಶ್ಚ್ಯವನೋ ವೃಷಾ ಸಮುತ್ಸಸಾರ ಹಿ' ಇತಿ ಖಿಲೈವ ಚತುಷ್ಪಾದ್ಗಾಯತ್ರ್ಯುದಾಹೃತಾ । ತಥಾ ಶ್ರೀಕಂಠಭಾಷ್ಯೇಽಪಿ 'ಯಶ್ಚಂಡಾಲಃ ಶಿವ ಇತಿ ವಾಚಂ ವದೇತ್ ತೇನ ಸಹ ಸಂವಸೇತ್ । ತೇನ ಸಹ ಸಂವದೇತ್ ತೇನ ಸಹ ಭುಂಜೀತ' ಇತ್ಯಾದಿ ಖಿಲಶ್ರುತಿರೇವೋದಾಹೃತಾ ।

ನನು ಭಾಷ್ಯಾಂತರೇ ಕ್ವಚಿದೇವ ಖಿಲಶ್ರುತ್ಯುದಾಹರಣಂ ತ್ವದ್ಭಾಷ್ಯೇ ತು ಸರ್ವತ್ರೇತಿ ಚೇತ್ । ಕೋ ವಿಶೇಷಃ? ಏಕಸ್ಯ ಖಿಲಶ್ರುತ್ಯುದಾಹರಣಸ್ಯಾದೋಷತ್ವೇ ಬಹೂನಾಮಪಿ ತದುದಾಹರಣಾನಾಮದೋಷತ್ವಾತ್ । ಕಿಂಚ ಪಠ್ಯಮಾನಶ್ರುತಿವ್ಯತಿರೇಕೇಣ ಖಿಲಶ್ರುತಯ ಏವ ನ ಸಂತೀತಿ ಕಿಂ ತ್ವದಭಿಪ್ರಾಯಃ । ಕಿಂ ವಾಽಸ್ಮದಾಚಾರ್ಯೋದಾಹೃತಾಸ್ತಾ ನ ಭವಂತೀತಿ । ನಾದ್ಯಃ । ಕಲ್ಪಸೂತ್ರಕಾರ್ಯೈರ್ಭಾಷ್ಯಾಂತರಕಾರೈಶ್ಚ ತಥಾವಿಧಶ್ರುತೀನಾಮುದಾಹೃತತ್ವಾತ್ । ಕಲ್ಪಸೂತ್ರವ್ಯಾಖ್ಯಾತೃಭಿಃ ಖಿಲಾಖಿಲಶ್ರುತಿವಿಭಾಗಸ್ಯ ತತ್ರ ತತ್ರ ದರ್ಶಿತತ್ವಾತ್ । ಏಕೈಕವೇದಸ್ಯಾನೇಕಶಾಖಾತ್ಮಕತ್ವಶ್ರವಣಾತ್ । ಕತಿಪಯಾನಾಮೇವ ಶಾಖಾನಾಮಿದಾನೀಮಧೀಯಮಾನತ್ವಾಚ್ಚ । ನ ದ್ವಿತೀಯಃ ಅನ್ಯೋದಾಹೃತಖಿಲಶ್ರುತಿಷ್ವಪಿ ತಥಾ ವಕ್ತುಂ ಶಕ್ಯತ್ವೇನ ಖಿಲಶ್ರುತಿತ್ವನಿರ್ಣಯಾಭಾವಪ್ರಸಂಗಾತ್ । ತಾಸಾಮಭಿಯುಕ್ತೋದಾಹೃತತ್ವೇನ ತಥಾತ್ವನಿರ್ಣಯಶ್ಚೇತ್ । ಅಸ್ಮದೀಯೋದಾಹೃತಾನಾಮಪಿ ತಥಾತ್ವನಿರ್ಣಯೋಪಪತ್ತೇಃ । ನ ಹಿ ತ್ವದಭಿಮತ ಏವಾಭಿಯುಕ್ತೋ ನಾಸ್ಮದೀಯ ಇತಿ ವಕ್ತುಂ ಶಕ್ಯಮ್ । ತಥೋಕ್ತೇರಾಗ್ರಹಮೂಲತ್ವಾತ್ । ವೈಪರೀತ್ಯಸ್ಯಾಪಿ ಸುವಚತ್ವಾತ್ । ಪುರಾಣವಚನಾನುಸಾರೇಣಾಸ್ಮದೀಯಾಚಾರ್ಯಸ್ಯೈವಾಭಿಯುಕ್ತತಮತ್ವಾಚ್ಚೇತಿ ಯತ್ಕಿಂಚಿದೇತತ್ । ಏತೇನ ಪಂಚರಾತ್ರಸಂಹಿತೋದಾಹರಣಮಪಿ ವ್ಯಾಖ್ಯಾತಮ್ । ಸಂಹಿತಾನುಕ್ರಮಣಿಕಾಯಾಮಸ್ಮದಾಚಾರ್ಯೋದಾಹೃತಸಂಹಿತಾನನುಕ್ರಾಂತಿತ್ವೇನ ತಥಾತ್ವೋಕ್ತೇರಜ್ಞಾನಮೂಲತ್ವಾತ್ ।

ಏತೇನಾಸಾಧುಭಿರೇವ ಶಬ್ದೈರ್ವ್ಯವಹಾರಃ ಶ್ಲೋಕರಚನಾಯಾಮನ್ವಯಾಸಂಭವೋ ವೃತ್ತಾನ್ಯಥಾಭಾವಶ್ಚಾಧಿಕ ಇತಿ ನಿರಸ್ತಮ್ । ವ್ಯಾಕರಣಾಂತರಪರಿಗೃಹೀತತ್ವೇನ ತೇಷಾಮಪಿ ಸಾಧುತ್ವೋಪಪತ್ತೇಃ । ಶ್ರುತಿಸ್ಮೃತಿಪುರಾಣಾಭ್ಯಾಸಪಾಟವೇನಾಚಾರ್ಯೈಸ್ತಥಾ ವ್ಯವಹೃತತಯಾ ತಥಾ ವ್ಯವಹಾರಸ್ಯ ಶ್ರುತಿಸ್ಮೃತಿಪುರಾಣಾದಿಗತಛಾಂದಸಶಬ್ದಾನುಕರಣತ್ವೇನಾದೋಷತ್ವಾತ್ । ಲೋಕದೃಷ್ಟ್ಯಾ ತಥಾವ್ಯವಹಾರಸ್ಯಾಚಾರ್ಯೈರಕೃತತ್ವಾತ್ । 'ತ್ರಿಯಂಬಕಂ ಸಂಯಮಿನಂ ದದರ್ಶ' ಇತ್ಯಾದಿಷು ಕಾಲಿದಾಸಾದೇರಪಿ ತಥಾವ್ಯವಹಾರದರ್ಶನಾಚ್ಚ । ಅತ ಏವ ವೃತ್ತಾನ್ಯಥಾಭಾವೋಽಪಿ ವ್ಯಾಖ್ಯಾತಃ । 'ನ ವೈಕೇನಾಕ್ಷರೇಣ ಛಂದಾಂಸಿ ವಿಯಂತಿ, ನ ದ್ವಾಭ್ಯಾಮ್' ಇತ್ಯಾದಿಶ್ರುತ್ಯಾ ತಸ್ಯಾದೋಷತ್ವಪ್ರತಿಪಾದನಾತ್ । ಅನ್ವಯಾಸಂಭವೋಕ್ತಿಶ್ಚಾಜ್ಞಾನಮೂಲೈವ । ಸೂತ್ರೇಷ್ವಿವ ಭಾಷ್ಯೇಽಪ್ಯಧ್ಯಾಹಾರಾನುಷಂಗಾದಿನಾ ವಿವಕ್ಷಿತಾನ್ವಯಸ್ಯ ವಕ್ತವ್ಯತ್ವಾದಿತಿ ಯತ್ಕಿಂಚಿದೇತತ್ । ತಸ್ಮಾದಾನಂದತೀರ್ಥೀಯ ಮತಮೇವ ಪ್ರೇಕ್ಷಾವದುಪೇಯಮಿತಿ ಸ್ಥಿತಮ್ ॥

–ಶ್ರೀವಿಜಯೀಂದ್ರಸ್ವಾಮಿಗಳು (ಮಧ್ವಾಧ್ವಕಂಟಕೋದ್ಧಾರ)

ನನು ಚ "ನಾಮಾನಿ ಸರ್ವಾಣಿ" ಇತಿ ಶ್ರುತಿರಪ್ರಸಿದ್ಧಾ- "ಯೋ ದೇವಾನಾಮ್" ಇತ್ಯಾದಿಕಾ ತು ವಿಶ್ವಕರ್ಮಸೂಕ್ತಸ್ಥಾ । ಕಥಂ ವಿಷ್ಣೋಃ ಸರ್ವದೇವನಾಮವಾಚ್ಯತಯಾ ನಾಮಧಾರಕತ್ವೋಕ್ತಿಪರಾ? ಸೂಕ್ತಾನಾಂ ವಿಷ್ಣ್ವರ್ಥತ್ವೇ ವಿವದಮಾನಂ ಪ್ರತಿ ತದ್ವಾಕ್ಯಸ್ಯ ವಿಷ್ಣುಪರತ್ವಾಸಿದ್ಧೇಃ । ಅನ್ಯಥಾಽನ್ಯೋನ್ಯಾಶ್ರಯಾತ್ । ಇತಿ ಚೇತ್, ಮೈವಂ ವೋಚಃ - ಅರ್ವಾಚೀನಾನಾಂ ಅಪ್ರಸಿದ್ಧತ್ವೇಽಪಿ ಅನೇಕಶಾಖಾಭಿಜ್ಞಭಾಷ್ಯಕಾರಾದ್ಯುಕ್ತವಾಕ್ಯೇ ಶ್ರುತಿತ್ವಾಸಂದೇಹಾತ್ । ಅನ್ಯಥಾ ಶಾಬರಭಾಷ್ಯಾದೌ ಔದುಂಬರಾದ್ಯಧಿಕರಣೇಷು, "ಊರ್ಜಪಶೂನಾಪ್ನೋತ್ಯೂರ್ಜೋಽವರುಧ್ಯ" ಇತ್ಯವರುದ್ಧ್ಯಾಂತವಾಕ್ಯಸ್ಯ ಅಪ್ರಸಿದ್ಧತ್ವೋಕ್ತಿರ್ನ ಸ್ಯಾತ್ । ಪರಭಾಷ್ಯೇ ಚ, 'ಓಂ ಅತ ಏವ ಚೋಪಮಾ ಸೂರ್ಯಕಾದಿವತ್ ಓಂ' ಇತ್ಯಾದೌ 'ಯಥಾ ಹ್ಯಯಂ ಜ್ಯೋತಿರಾತ್ಮಾ ವಿವಸ್ವಾನ್' ಇತ್ಯಾದ್ಯಪ್ರಸಿದ್ಧಶ್ರುತ್ಯುಕ್ತಿರ್ನ ಸ್ಯಾತ್ । ಶ್ರೀಭಾಷ್ಯೇ ಚ 'ಓಂ

ಜ್ಯೋತಿಶ್ಚರಣ...' ಇತ್ಯತ್ರ 'ಇಂದ್ರಃ ಶಚೀಪತಿರ್ಬಲೇನ ಪೀಡಿತಃ । ದುಃಶ್ಚ್ಯವನೋ ವೃಷಾ ಸಮುತ್ಸಸಾಸ ಹಿ' ಇತ್ಯಾದ್ಯಪ್ರಸಿದ್ಧವಾಕ್ಯೋಕ್ತಿರ್ನ ಸ್ಯಾತ್ । ಯದ್ಯಪಿ ನಾಮಧಾ ಇತಿ ವಾಕ್ಯಂ ವಿಶ್ವಕರ್ಮಸೂಕ್ತಸ್ಥಂ ಇತಿ, ತತ್ರೋಕ್ತಃ ಸಮಾಧಿಃ 'ನಾಪಾತಪ್ರತೀತಮೇವ ಶ್ರುತ್ಯರ್ಥಃ ಅಪಿ ತು ಮಿಮಾಂಸಿತ ಏವ' ಇತಿ । ತಥಾ ಚ ತತ್ರ ಸೂಕ್ತೇ ''ಅಜಸ್ಯ ನಾಭಾವಧ್ಯೇಕಮರ್ಪಿತಮ್' ಇತಿ ವಾಕ್ಯಶೇಷೋಕ್ತೇನ

ಅಜಸ್ಯ ನಾಭಾವಿತಿ ಯಸ್ಯ ನಾಭೇರಭೂಚ್ಚುತೇಃ ಪುಷ್ಕರಂ ಲೋಕಸಾರಮ್ ।
ತಸ್ಮೈ ನಮೋ ವ್ಯಸ್ತಸಮಸ್ತವಿಶ್ವವಿಭೂತಯೇ ವಿಷ್ಣವೇ ಲೋಕಕರ್ತ್ರೇ ॥

ಇತಿ ಸ್ಕಾಂದಸ್ಮೃತಿಸಿದ್ಧಪದ್ಮನಾಭತ್ವಲಿಂಗೇನ ನಿರವಕಾಶೇನ ವಿಶ್ವಕರ್ಮಶ್ರುತಿಸೂಕ್ತಯೋರ್ವಿಷ್ಣೌ ದತ್ತಪದತ್ವಾತ್'' - ಶ್ರೀ ರಾಘವೇಂದ್ರಸ್ವಾಮಿಗಳು (ಋಗರ್ಥಮಂಜರೀ)

ತತ್ರ ಪ್ರಷ್ಟವ್ಯಂ ತ್ವಯಾ ನ ಜ್ಞಾಯಂತ ಇತಿ, ತ್ವಾಂ ಪ್ರತ್ಯಪ್ರಸಿದ್ಧಾಃ ಸರ್ವಾನ್ ಪ್ರತಿ ವಾ । ಆದ್ಯೇ ತ್ವಮೇವ ಮೂರ್ಖಃ ಯತ್ ರೋದಿತವ್ಯೇಪಿ ಹರ್ಷಸೇ ಶ್ಲಾಘಸೇ ಚ । ಬುದ್ಧಿಮತೋ ಭಾಗ್ಯವತೋ ಬಹುಜ್ಞಾನವಲೋಕ್ಯ ಹಿ ಹತಭಾಗ್ಯೋಽಹಮೇತಾದೃಶಮೂರ್ಖ ಇತಿ ಪಶ್ಚಾತ್ತಾಪವತೈವ ಭವಿತವ್ಯಮ್ । ನಹಿ ಸ್ವಯಂ ದರಿದ್ರೋ ಮನಸಾಽಪಿ ಚಿಂತಯಿತುಮಶಕ್ಯಾಃ ಸಾರ್ವಭೌಮಸಂಪದಃ ಪಶ್ಯನ್ ಕಲ್ಪಿತಾ ಏವೈತಾ ಇತಿ ನಾಸಿಕಾಂ ಸಂಕೋಚಯನ್ ಫೂತ್ಕಾರೇಣ ನಿರಸ್ಯತಿ ತಾವತಾ ಮಹಾರಾಜಸ್ಯ ಕ್ಷತಿರಸ್ತಿ । ಏವಂ ಚ ಪರಮಾಸ್ತಿಕೇನ ಭಗವತಾ ಸ್ವೋಕ್ತೇಷು ಸರ್ವೇಷ್ವಪ್ಯರ್ಥೇಷು ಶ್ರುತೀನಾಮುಪನ್ಯಸನಾನ್ನಮಯಾ ಕಿಂಚಿತ್ ವೈದಿಕಮರ್ಯಾದಾಮುಲ್ಲಂಘ್ಯ ಹೈತುಕಾದಿಭಿರಿವೋಚ್ಯತೇ ಕಿಂತು ವೇದಪ್ರಮಾಣಕಮಿತಿ ಸೂಚಿತಂ ತದಿದಂ ವೈದಿಕಮರ್ಯಾದಾ ಸಂರಕ್ಷಣಮೇವ । ಅನ್ಯಥಾ ಭವದಪೇಕ್ಷಯಾ ಮೂರ್ಖೇಣ ಸ್ವಾವಿಜ್ಞಾತಶ್ರುತ್ಯಾದಿಕಮುದಾಹರನ್ ಭವಾನಪ್ಯೇವಂ ಪರ್ಯನುಯೋಜ್ಯಃ ಸ್ಯಾತ್ । ನ ದ್ವಿತೀಯಃ । ಪರಬುದ್ಧೇರಪ್ರತ್ಯಕ್ಷತ್ವೇನ ಸರ್ವಾನ್ ಪ್ರತ್ಯಪ್ರಸಿದ್ಧೇಃ ಕೂಪಮಂಡುಕಾಯಮಾನೇನ ತ್ವಯಾ ಜ್ಞಾತುಮಶಕ್ಯತ್ವಾತ್ । ತದೇತದಾಹ ಭಗವಾನ್ ಪತಂಜಲಿಃ : ''ಪಶ್ಯಶಾಯಾ ಊಷಚಕ್ರತೇರಪೇ ಚ ಇತ್ಯಾದ್ಯಾಃ ಶಬ್ದಾ ಲಿಣ್ಮಧ್ಯಮಪುರುಷಬಹುವಚನಾಂತಾ ವ್ಯುತ್ಪಾದ್ಯಂತೇ ತೇ ನ ವ್ಯುತ್ಪಾದನೀಯಾಃ । ತೇಷಾಂ ಕುತ್ರಾಪಿ ಪ್ರಯೋಗಾಭಾವಾದಿತ್ಯಾಶಂಕಾಯಾಂ ಸಮಾಧಾನಮ್ ।

'ಕಥಮವಗತಂ ಪ್ರಯೋಗಾಭಾವ ಇತಿ ಅನುಪಲಂಭಾದಿತಿ । ಯದಿ ತರ್ಹಿ ಉಪಲಬ್ಧೌ ಯತ್ನಃ ಕ್ರಿಯತಾಮ್ । ಮಹಾನ್ ಹಿ ಶಬ್ದಪ್ರಯೋಗಸ್ಯವಿಷಯಃ । ಸಪ್ತದ್ವೀಪಾ ವಸುಮತೀ, ತ್ರಯೋ ಲೋಕಾಃ, ಚತ್ವಾರೋ ವೇದಾಃ, ಸಾಂಗಾಃ ಸರಹಸ್ಯಾ, ಬಹುಧಾ ಭಿನ್ನಾಃ, ಏಕಶತ-ಮಧ್ವರ್ಯುಶಾಖಾಃ, ಸಹಸ್ರವರ್ತ್ಮಾ ಸಾಮವೇದಃ । ಏಕವಿಂಶತಿಧಾ ಬಾಹ್ವೃಚ್ಯಮ್ । ನವಧಾಽಥರ್ವಣೋ ವೇದಃ । ವಾಕ್ಯೇ ವಾಕ್ಯಮಿತಿಹಾಸಪುರಾಣಂ ವೈದ್ಯಕಮಿತ್ಯೇತಾವಾನ್ ಶಬ್ದಸ್ಯ ಪ್ರಯೋಗವಿಷಯಃ । ಏತಾವಂತಂ ಶಬ್ದಸ್ಯ ವಿಷಯಮನನುನಿಶಮ್ಯ ನ ಸಂತ್ಯಪ್ರಯುಕ್ತಾಃ ಶಬ್ದಾ ಇತಿ ವಚನಂ ಕೇವಲಂ ಸಾಹಸಮಾತ್ರಮೇವ । ಏತಸ್ಮಿಂಶ್ಚ ಮಹತಿ ಶಬ್ದಪ್ರಯೋಗವಿಷಯೇ ತೇ ತೇ ಶಬ್ದಾಃ ತತ್ರ ತತ್ರ ನಿಯತವಿಷಯಾಃ ದೃಶ್ಯಂತೇ । ಯಥಾ : 'ಶವತಿರ್ಗತಿಕರ್ಮಾ ಕಂಬೋಜೇಷ್ವೇವ ಭಾಷ್ಯತೇ । ವಿಕಾರಮಸ್ಯಾರ್ಯೇಷು ಭಾಷಂತೇ ಶವ ' ಇತಿ । ಹಂಮತಿಃ ಸುರಾಷ್ಟ್ರೇಷು । ರಂಹತಿಃ ಪ್ರಾಚ್ಯಮಧ್ಯಮೇಷು ಗಮಿಮೇವ ತ್ವಾರ್ಯಾಃ ಪ್ರಯುಂಜತೇ । ತಥಾ 'ದಾತಿರ್ಲವನಾರ್ಥೇ ಪ್ರಾಚ್ಯೇಷು' ಇತ್ಯಾದಿ ।

ತಥಾ ಸ್ಮೃತ್ಯಧಿಕರಣೇಽಪಿ 'ಸರ್ವಾ ವಾ ಔದುಂಬರೀ ವೇಷ್ಟಯಿತವ್ಯಾ' ಇತಿ ಸ್ಮೃತೇಃ ಲೋಭಾದಿಮೂಲತ್ವಮ್ । ತನ್ಮೂಲಭೂತಶ್ರುತೇರದರ್ಶನಾತ್ । ತಯೈವ ತದನುಮಾನೇ 'ಔದುಂಬರೀಂ ಸ್ಪೃಷ್ಟ್ವೋದ್ಗಾಯತೀ' ಇತಿ ಪ್ರತ್ಯಕ್ಷಶ್ರುತ್ಯಾ ಬಾಧಃ । ಅತಸ್ತಥಾವಿಧಸ್ಮೃತಿಮೂಲ-ಭೂತಾ ಶ್ರುತಯೋಽನುಪಲಂಭಾತ್ 'ನ ಸಂತಿ' ಇತಿ ಶಬರೇಣ ಭಾಷ್ಯಕಾರೇಣ ಪ್ರತಿಪಾದಿತೇ ತತ್ರ ಭಟ್ಟಚರಣೈಃ ಪ್ರತಿವಿಹಿತಮ್ ।

'ಬಾಧಿತಾ ಚ ಸ್ಮೃತಿರ್ಭೂತ್ವಾ ಕಾಚಿನ್ನ್ಯಾಯವಿದಾ ಯದಾ ।
ಶ್ರೂಯತೇ ನ ಚಿರಾದೇವ ಶಾಖಾಂತರಗತಾ ಶ್ರುತಿಃ ।
ತದಾ ಕಾ ತೇ ಮುಖಚ್ಛಾಯಾ ಸ್ಯಾನ್ನೈಯಾಯಿಕಮಾನಿನಃ'

ಇತ್ಯಾದಿನಾ ಮಹಾಭಾಷ್ಯೋಕ್ತನ್ಯಾಯಮಭಿಪ್ರೇತ್ಯ ಸ್ವಯಮಲ್ಪಜ್ಞೇನಾನುಪಲಂಭಾನ್ನ ನಾಸ್ತೀತ್ಯಧ್ಯವಸಾಯಃ ಕರ್ತುಂ ಶಕ್ಯತ ಇತಿ ।

ಸರ್ವವೇಷ್ಟನಶ್ರುತಿಮನುಪಲಭ್ಯಮಾನಾಮಪಿ ಸ್ಮೃತ್ಯನುಮಿತಿತಾಮಂಗೀಕೃತ್ಯ 'ವಿರೋಧೆ ತ್ವನಪೇಕ್ಷಂ' ಇತ್ಯಧಿಕರಣಸ್ಯ ತಸ್ಮಾತ್ ಶಾಕ್ಯಾದಿಸ್ಮೃತಯ ಏವೋದಾಹರಣಮಿತಿ ಸಮರ್ಥಿತಂ ಚ ॥

....

ನನ್ವೇವಮೇವಾನ್ಯೋಽಪಿ ಕಿಂಚಿದ್ವಾಕ್ಯಂ ಸ್ವಯಂ ಪ್ರಕಲ್ಪ್ಯ ಕಮಠಶ್ರುತಿರಿತ್ಯಾದಿಕಂ ಬ್ರೂಯಾತ್, ತದಾ ತದಪ್ಯಾದರ್ತವ್ಯಂ ಸ್ಯಾದಿತಿ ಚೇತ್ । ತತ್ ಕಿಂ ಶ್ರೂಯಮಾಣ-ವೇದವಿರುದ್ಧಾರ್ಥಪ್ರತಿಪಾದಕಂ ತದನುಕೂಲಂ ವಾ । ಆದ್ಯೇ ತತ ಏವಾಪ್ರಮಾಣಮ್ । ದ್ವಿತೀಯೇ ತತ್ಕುತೋ ನ ಪ್ರಮಾಣಮ್ । ತತ್ರೈತಾವದವಶಿಷ್ಯತೇ – ಅನೇನ ಪಠ್ಯಮಾನಾನುಪೂರ್ವಿ ವಿಶೇಷಃ ಸ ಏವ ಶ್ರುತಿರ್ವಾ ಏತದೀಯವಾಕ್ಯಂ ವಾ ಸ್ಮೃತ್ಯಾದಿ ವಾಕ್ಯವದಿತಿ । ನ ಚಾಯಂ ಸಂದೇಹಃ ಪ್ರತಿಬಂಧಕಃ ಶ್ರುತ್ಯನುಕೂಲಮೇತತ್ ಶ್ರುತಿಮೂಲಕಂ ಭವತ್ಯೇವೇತಿ ನಿರ್ಣಯೋಪಪತ್ತೇಃ ।

ತಥಾ ಪ್ರಕೃತೇಽಪಿ ತವ ಸಂದೇಹೋಽಸ್ತು ತದರ್ಥಸ್ತು ತಥ್ಯ ಏವೇತಿ ನಿರ್ಣಯೇ ಬಾಧಕಾಭಾವಾತ್ ತದುಕ್ತಮ್ –

'ಮದ್ವಿಪ್ರಲಬ್ಧಂ ಪುನರಾಹ ಯಸ್ತ್ವಾಂ ತರ್ಕಃ ಸ ಕಿಂ ತತ್ಫಲವಾಚಿ ಮೂಕಃ ।
ಅಶಕ್ಯಶಂಕಾವ್ಯಭಿಚಾರಹೇತುರ್ವಾಣೀ ನ ವೇದಾ ಯದಿ ಸಂತು ಕೇ ತು' ಇತಿ ।

ಕಿಂಚಾಸ್ತು ತ್ವದಪ್ರಸಿದ್ಧಾಸು ಶ್ರುತಿಷು ಅಸ್ಮದಾಚಾರ್ಯೈರುದಾ? ಹೃತಾಸು ತವ ಕಲ್ಪಿತತ್ವಸಂದೇಹಃ । ನ ಹಿ ತ್ವಾಂ ಪ್ರತ್ಯುಪನ್ಯಾಸಾರ್ಥಂ ತಾಃ ಪ್ರಣೀತಾಃ । ಕಿಂತು ಅವಗತ ಭಾಷ್ಯಕಾರಾಪ್ತಭಾವಾನ್ ಶಿಷ್ಯಾನ್ ಪ್ರತಿ । ತ್ವಾಂ ಪ್ರತಿ ತು ಉಭಯವಾದಿಸಿದ್ಧಸಾರ್ವತ್ರಿಕ-ಪಾಠಾಃ ಶ್ರುತಯಃ ಸ್ಮೃತಯೋ ಯುಕ್ತಯ ಏವಾಲಮ್ । ತಥಾ ಹಿ – ಆವಯೋರ್ವಿಪ್ರತಿಪತ್ತಿವಿಷಯಃ ಪ್ರಧಾನಪ್ರಮೇಯಂ ಜೀವಬ್ರಹ್ಮಭೇದೋ, ವಿಶ್ವಸತ್ಯತ್ವಮಿತಿ । ತತ್ರ ಸ್ವಪಕ್ಷಸ್ಥಾಪನಪರಪಕ್ಷಪ್ರತಿಕ್ಷೇಪಾರ್ಥಂ ''ದ್ವಾ ಸುಪರ್ಣಾ'', ''ವಿಶ್ವಂ ಸತ್ಯಮ್'' ಇತ್ಯಾದೀನಾಮೇವೋಪನ್ಯಾಸಃ ಶಾಸ್ತ್ರೇ ಕ್ರಿಯತೇ । ತತ್ರ ಪುನರದ್ವೈತಪರಾಣಾಂ ತತ್ತ್ವಮಸ್ಯಾದಿಶ್ರುತೀನಾಂ ''ಅನೃತೇನ ಹಿ ಪ್ರತ್ಯೂಢಾ'' ''ನೇಹ ನಾನಾ'' ಇತ್ಯಾದಿ ಶ್ರುತೀನಾಂ ಚ ನಿರವಕಾಶತ್ವಸಾವಕಾಶತ್ವಾದಿನಾ ಬಲಾಬಲೇ ನಿರೂಪ್ಯ ಅದ್ವೈತಾದಿಶ್ರುತೀನಾಮರ್ಥಾಂತರೇ

ಸಾವಕಾಶತ್ವಾದಿಕಂ ಶಾಸ್ತ್ರೇ ಪ್ರತಿಪಾದಿತಮ್ । ನ ಹಿ ಏತತ್ಪ್ರಮೇಯಪ್ರತಿಪಾದನಾಯ ತಾಸಾಮುದಾಹರಣಮ್ । ಕಿಂತು ತದಿತರಸೂಕ್ಷ್ಮಶಾಸ್ತ್ರತತ್ತ್ವಾವಧಾರಣಾರ್ಥಂ ಯಥಾ 'ವಾಙ್ಮನಸಿ ಸಂಪದ್ಯತೇ ಮನಃ ಪ್ರಾಣೇ ಪ್ರಾಣಸ್ತೇಜಸಿ ತೇಜಃ ಪರಸ್ಯಾಂ ದೇವತಾಯಾಮ್' ಇತ್ಯಾದಿ ಶ್ರುತ್ಯರ್ಥನಿರ್ಣಯಾರ್ಥಮುದಾಹೃತಾನಿ ।

''ಉಮಾ ವೈ ವಾಕ್ ಸಮುದ್ದಿಷ್ಟಾ ಮನೋ ರುದ್ರ ಉದಾಹೃತಃ ।
ತದೇತನ್ಮಿಥುನಂ ಜ್ಞಾತ್ವಾ ದಾಂಪತ್ಯಾನ್ನ ವಿಹೀಯತೇ ''

ಇತ್ಯೇವಮಾದೀನ್ಯಪ್ರಸಿದ್ಧಾನಿ । ತೇಷು ತವ ವಿಮತಿಶ್ಚೇತ್ ವಕ್ಷ್ಯಮಾಣರೀತ್ಯಾ ಸಾಽಪಿ ವಿಮರ್ಶೇನ ಸುನಿರಸ್ತಾ ॥

ಅಭಿಮಾನ್ಯಧಿಕರಣನ್ಯಾಯೇನ ವಾಗಾದಿಶಬ್ದಾನಾಂ ತದಭಿಮಾನಿದೇವತಾಪರತ್ವೇ ನ್ಯಾಯತಃ ಸಿದ್ಧೇ ವಿರುದ್ಧಪ್ರಮಾಣೇ ಚಾಸತಿ ಉದಾಹೃತವಾಕ್ಯೇಷ್ವನಾಶ್ವಾಸಬೀಜಾಭಾವಾತ್ । ಪ್ರಧಾನಪ್ರಮೇಯೋಪಪಾದನೇನ ತ್ವದಭಿಪ್ರೇತಾರ್ಥಖಂಡನೇನ ತ್ವದೀಯಮುಖಭಂಗಸ್ಯ ಪ್ರಸಿದ್ಧಶ್ರುತಿಭಿರೇವ ಸಂಭವಾತ್ । ಯಥಾ ಖಲು ಬೌದ್ಧೈಃ ಸಹ ವಿವಾದೇ ನ ತಾನ್ ಪ್ರತಿ ಶ್ರುತ್ಯಾದ್ಯುಪನ್ಯಾಸಃ ಕಿಂತು ತದಭಿಪ್ರೇತಪ್ರಮಾಣ್ಯಸ್ಯಾನುಮಾನಾದರೇವೋಪನ್ಯಾಸಃ ತ್ವಯಾಽಪಿ ಕ್ರಿಯತೇ । ತಾವತಾ ತಾನ್ ಪ್ರತ್ಯನುಪಯುಕ್ತಾಸ್ತೈಃ ಕಲ್ಪಿತತ್ವೇನ ವಾ ಅನೃತತ್ವಾದಿದೋಷೇಣ ವಾ ಅಪ್ರಮಾಣತಯೋಚ್ಯಮಾನಾಸ್ತಾವಕೀನಾನ್ ಪ್ರತ್ಯಪ್ರಮಾಣಂ ಭವಂತಿ । ಏವಂ ತ್ವತ್ಸಮ್ಮತ ಶ್ರುತಯ ಏವ ತ್ವಾಂ ಪ್ರತ್ಯುಪನ್ಯಸ್ಯಂತೇ ಅಪ್ರಸಿದ್ಧಶ್ರುತಿವಿಶೇಷೇಷು ತ್ವಂ ಬೌದ್ಧತುಲ್ಯ ಇತಿ ಮಾಽಸ್ತು, ತ್ವಾಂ ಪ್ರತಿ ತದುಪನ್ಯಾಸಃ ।

ಯದಾ ಪುನಃ ಪ್ರಸಿದ್ಧಶ್ರುತಿಸ್ಮೃತಿಯುಕ್ತ್ಯಾದಿಭಿರಸ್ಮದಾಚಾರ್ಯೇಣ ಭವದೀಯಾಚಾರ್ಯ-ಸಮ್ಮತಂ ಪ್ರಧಾನಪ್ರಮೇಯಂ ಖಂಡಯಿತ್ವಾ ತದೀಯಶಾಸ್ತ್ರಮಪ್ರಮಾಣೀಕೃತಂ ತದಾ ತ್ವದಾಚಾರ್ಯಾದಪ್ಯಸ್ಮದಾಚಾರ್ಯೋಽಧಿಕಜ್ಞಾನಾದಿಮಾನಿತಿ ಸರ್ವೈಃ ಪ್ರತ್ಯೇತುಂ ಶಕ್ಯಮ್ । ತ್ವಯಾಽಪಿ 'ತಾತಸ್ಯ ಕೂಪೋಽಯಮ್' ಇತಿ ಬ್ರುವಾಣಾಃ ಕ್ಷಾರಂ ಜಲಂ ಕಾಪುರುಷಾಃ ಪಿಬಂತಿ' ಇತಿ ನ್ಯಾಯಾತ್ ದುರಭಿಮಾನೇನ ಮುಖತೋ ವಕ್ತುಮಶಕ್ಯತ್ವೇಽಪ್ಯಂತರಾತ್ಮಪ್ರತಾರಣಂ ಕರ್ತುಮಶಕ್ಯಮ್ । ಯೇ ಪುನರ್ಗುಣಪಕ್ಷಪಾತಿನಃ ಸಾಕ್ಷಾದ್ಭವದೀಯಾಚಾರ್ಯಾತ್ ಸಮ್ಯಗದ್ವೈತ ಮವಧಾರ್ಯಾಸ್ಮದಾಚಾರ್ಯೇಣ ಸಹ ಸರ್ವಪ್ರಯತ್ನೇನ ಪ್ರತ್ಯವತಿಷ್ಠಮಾನಾಃ ಶ್ರುತಿಸ್ಮೃತ್ಯಾದಿಭಿಯ ರ್ಯುಕ್ತ್ಯಾದಿಮಾನ್ಯೈಶ್ಚಾಪ್ರತಿಭೂತಾಃ ಸ್ವಮತಸ್ಯಾತ್ಯಂತಹೇಯತಾಮವಗತ್ಯಾಸ್ಮದಾಚಾರ್ಯಚರ-ಣಪರಿಚ 'ರಣೇನ ತದೀಯಶಾಸ್ತ್ರತತ್ತ್ವಮವಧಾರ್ಯ ತತ್ತ್ವವಾದ ಏವ ಪ್ರವೃತ್ತಾಃ ತ್ರಿವಿಕ್ರಮಾಚಾರ್ಯ ಪ್ರಭೃತಯಃ ತೇ ತ್ವದೀಯಮತಹೇಯತಾವ್ಯುತ್ಪಾದಕಾನ್ಯನೇಕಪ್ರಕರಣಾನಿ ಕೃತವಂತೋ ದೃಶ್ಯಂತೇ ॥

ಏವಂ ಚ ತ್ವದೀಯಾಚಾರ್ಯಃ ಶಂಕರಃ ಸಾಕ್ಷಾತ್ ಶಂಕರ ಏವ । ''ಶಂಕರಃ ಶಂಕರಃ ಸ್ವಯಮ್'' ಇತಿ ತಾವಕೈರಭ್ಯುಪಗತತ್ವಾತ್ । 'ಚತುರ್ಭಿಃ ಸಹಿತಃ ಶಿಷ್ಯೈಃ ಶಂಕರೋಽವತರಿಷ್ಯತಿ' ಇತ್ಯಾಗಮವಾಕ್ಯಾದವಗಮ್ಯತೇ ಸಾಕ್ಷಾತ್ ಗೌರೀಪತಿಃ ಸ್ವಯಮೇವ ಶಂಕರಾಚಾರ್ಯ-ರೂಪೇಣಾವತೀರ್ಯಾದ್ವೈತಂ ವ್ಯವಸ್ಥಿತವಾನಿತಿ ತ್ವಯೈವ ಸ್ವಕೀಯೈಸ್ತದ್ಗ್ರಂಥಾವಸಾನೇ ಲಿಖಿತತ್ವಾಚ್ಚ ।

'ಮಾಯಾವಾದಮಸಚ್ಛಾಸ್ತ್ರಂ ಪ್ರಚ್ಛನ್ನಂ ಬೌದ್ಧಮುಚ್ಯತೇ ।
ಮಯ್ಯೈವ ಕಥಿತಂ ದೇವಿ ಕಲೌ ಬ್ರಾಹ್ಮಣರೂಪಿಣಾ ॥'

ಇತಿ ಪಾದ್ಮೇ ಶಿವವಚನಾಚ್ಚ । ಸೋಽಪಿ ಯದಾ ಆನಂದತೀರ್ಥೇನ ಪರಾಜಿತಃ ಆನಂದತೀರ್ಥಃ ಕಥಂ ತದುತ್ತಮೋ ನ ಸ್ಯಾತ್ । ''ಜೇತುಂ ಚತುರ್ಗುಣಬಲೋ ಹಿ ಪುಮಾನ್ ಪ್ರಭುಃ ಸ್ಯಾದ್ಧಂತುಂ ಶತಾಧಿಕಬಲೋಽಧಿಬಲಂ ಸಮರ್ಥಃ'' ಇತಿಹ್ಯುಕ್ತಮ್ । ತಚ್ಚ ಬಾಹು-ಯುದ್ಧೇ ಶರೀರಬಲಾಧಿಕ್ಯಮ್ । ವಾಗ್ಯುದ್ಧೇ ಚ ಜ್ಞಾನಬಲಸ್ಯಾಧಿಕ್ಯಂ ಪ್ರಯೋಜಕಮ್ । ಏವಂ ಚ ಶಂಕರಾದಪ್ಯುತ್ತಮೋ ದೇವಾಧಿದೇವೋಽಯಮಾನಂದತೀರ್ಥಃ ಕಥಂ ಸರ್ವಜ್ಞೋ ನ ಭವೇದಿತಿ ಭವಾದೃಶೈರ್ವಿವೇಕಿಭಿಃ ಪರಿಭಾವನೀಯಮ್ । ಮುಖ್ಯಪ್ರಾಣಃ ರುದ್ರೋತ್ತಮಃ; ಅತ ಏವಾಯಂ ರುದ್ರಾವತಾರಂ ಭವದೀಯಾಚಾರ್ಯಂ ಜಿತನಾನಸ್ಮದೀಯಾಚಾರ್ಯೋ ಮುಖ್ಯ-ಪ್ರಾಣಾವತಾರ ಇತ್ಯುಪಪನ್ನತ್ವಾತ್ ತಸ್ಯ 'ಬಳಿತ್ಥಾ' ಇತ್ಯಾದಿ ಪ್ರಾಣಾಗ್ನಿಸೂಕ್ತಪ್ರತಿಪಾದ್ಯತ್ವಂ ಚ ಉಚಿತಮೇವ । ತಥಾ ಚ ಋಷಿಮಾತ್ರೇಣೋಚ್ಯಮಾನಮಪ್ರಮಾಣಮಿತಿ ವಕ್ತುಮಶಕ್ಯಂ, ಕಿಂ ಪುನಾ ರುದ್ರೋತ್ತಮೇನಾನೇನೇತಿ ವಿಮರ್ಶೇನ ತದುದಾಹೃತಾ ಅಪ್ರಸಿದ್ಧಾಃ ಸರ್ವಾ ಅಪಿ ಶ್ರುತಯಃ ಶ್ರದ್ಧೇಯಂತ ಏವ । ಯಃ ಪುನರೇವಂ ವಿಮರ್ಶವಿಕಲಃ ಕೇವಲಮಶ್ಮಸಾರಮಯಹೃದಯಃ ಸ ಸ್ತಂಭವದುಪೇಕ್ಷಣೀಯ ಏವೇತಿ । ಕಥಮೇತದ್ವೈದಿಕಮರ್ಯಾದಾವ್ಯಾಕುಲೀಕರಣಂ ಭವೇತ್ । ಏತೇನ ತತ್ವನಿರ್ಣಯಾತ್ ಪ್ರಾಕ್ ಶಿಷ್ಯೋಽಪಿ ಪ್ರತಿವಾದಿತುಲ್ಯ ಇತಿ ಸೋಽಪಿ ಕಥ-ಮಪ್ರಸಿದ್ಧಶ್ರುತಿಭಿರ್ಬೋಧನೀಯ ಇತಿ ಪರಾಸ್ತಮ್ । ಪ್ರತಿವಾದಿನೋಽಪಿ ಪ್ರಾಮಾಣ್ಯನಿರ್ಣ-ಯೋಪಾಯಸ್ಯೋಪಪಾದಿತತ್ವಾತ್ ತನ್ನ್ಯಾಯೇನ ತಸ್ಯಾಪಿ ತದುಪಪತ್ತೇರಿತಿ ॥

ಏತೇನ ಯದಪ್ಯುಕ್ತಂ ಅಪ್ರಸಿದ್ಧಶ್ರುತ್ಯುಪನ್ಯಾಸಪ್ರಸಕ್ತಾನಾಪ್ತತಾಶಂಕಾಪರಿಹಾರಾಯ ಹನೂಮದ್ಭೀಮಸೇನಕ್ರಮೇಣ ವಾಯೋಃ ಸ್ವಯಂ ತೃತೀಯಾವತಾರ ಇತ್ಯುದ್ಘೋಷಸ್ತತ್ರ ಚ ಸಾಕ್ಷಿತಯಾ 'ಪ್ರಥಮೋ ಹನೂಮನ್ನಾಮ ದ್ವಿತೀಯೋ ಭೀಮಸೇನಕಃ । ಪೂರ್ಣಪ್ರಜ್ಞಸ್ತೃತೀಯಸ್ತು ಭಗವತ್ಕಾರ್ಯಸಾಧಕಃ' ಇತಿ ವಚನಮುಪನ್ಯಸ್ಯ ತದರ್ಥೇ ಬಳಿತ್ಥೇತ್ಯಾದಿ ಋಗ್ವೇದಮಂತ್ರಸ್ಯ ವಾಯ್ವವತಾರತ್ರಯಪರತಯಾ ಪ್ರದರ್ಶನಂ ಕೃತಮಿತ್ಯಾದಿಪ್ರಾಮಾಣಿಕಮರ್ಯಾದಾಲಂಘನಂ ಭೂಯಸಾ ದೃಶ್ಯತ ಇತಿ ತದಪಿ ವೈದಿಕಮರ್ಯಾದಾಸಂರಕ್ಷಣಮೇವ ನತು ವ್ಯಾಕುಲೀಕರಣಮ್ । ಮಯಾ ಸರ್ವಂ ವೇದಾನುಮತಮೇವೋಚ್ಯತೇ । ನತು ವೇದಮರ್ಯಾದೋಲ್ಲಂಘ್ಯತ ಇತ್ಯಾಶಯೇನ ತಥಾವಿಧೋಪನ್ಯಾಸಾತ್ । ಯಥಾ ಚಾತ್ರ ನಿಗಮನಿರುಕ್ತವ್ಯಾಕರಣಸರ್ವಾನುಕ್ರಮ ಣ್ಯಾದಿವಿರೋಧೋ ನಾಸ್ತಿ ಅತಿಪ್ರಸಂಗಶಂಕಾಽಪಿ ನ ಸಂಭವತಿ ತಥಾಽಸ್ಮಾಭಿಃ ಸಪರಿಕರಮುಪಪಾದಿತಂ ಮಧ್ವಮಂತ್ರಾರ್ಥಮಂಜರ್ಯಾಮ್ । ಅಥ ವಿದ್ಯಾರಣ್ಯೈನೈವಮ-ವ್ಯಾಖ್ಯಾತತ್ವಾತ್ ನಾಯಮರ್ಥ ಉಪಾದೀಯತ ಇತಿ ಚೇತ್ । ತದ್ವ್ಯಾಖ್ಯಾನಸ್ಯ ವ್ಯಾಖ್ಯಾನಾಂತರವಿರೋಧಿತ್ವಾತ್ । ಅನ್ಯಥಾ ಮಹಾಭಾಷ್ಯಕಾರಸ್ಯ ಚತ್ವಾರಿಶೃಂಗೇತಿ ಮಂತ್ರಸ್ಯ ''ನಾಮಾಖ್ಯಾತೇ ಚೋಪಸರ್ಗನಿಪಾತಾಃ'' ಇತಿ, ''ಚತ್ವಾರಿ ಯಸ್ಯ ಶೃಂಗಾಣಿ ಅವಯವಾಃ'' ಇತ್ಯಾದಿನಾಽಸ್ಯ ಸಂಪ್ರತಿಪನ್ನಾರ್ಥಪರತಯಾ ವ್ಯಾಖ್ಯಾನಂ ವಾ ತಥಾ ವಾಸುದೇವೋ ಅಸಿವರುಣ ಯಸ್ಯ ತೇ ಸಪ್ತ ಸಿಂಧವಃ । ಅನುಕ್ಷರಂತಿ ಕಾಕುದಂ ಸೂರ್ಮ್ಯಂ ಸುಷಿರಾಮಿವ'' ಇತಿ ಮಂತ್ರಸ್ಯಾಪಿ ಸಪ್ತ ಸಿಂಧವಃ ಸಪ್ತ ವಿಭಕ್ತಯ ಇತ್ಯಾದಿನಾ ವೈಯಾಕರಣಾಭಿಮತಪದಾರ್ಥಪರತಯಾ ನಯನಾತ್ । ತಥಾ, ''ಅಗ್ನಿರ್ಮೂರ್ದ್ಧಾ ದಿವಃ ಕಕುತ್'' ಇತ್ಯಾದೀನಾಮಯ್ಯಾಗ್ನಿದಿದೇವತಾಕತ್ವೇ ನ ಸರ್ವಾನುಕ್ರಮೇ ಉಕ್ತಾನಾಮಪಿ ಸ್ಮೃತಿಕಾರೈರ್ಮಂಗಲಾದಿಗ್ರಹಪರತಯಾ ವ್ಯಾಖ್ಯಾನಂ ಕ್ರಿಯತೇ ಅತಸ್ತದಪ್ಯನುಪಾದೇಯಂ ಸ್ಯಾತ್ । ಏತೇನ ಸ್ವಮಾತ್ರಾಪರಿಕಲ್ಪಿತಾನಿ ವಚಾನ್ಯೇವೋಪನ್ಯಸ್ತಾನಿ ನ ತು ನ್ಯಾಯಾ ಯೇಽಪಿ ತೆ ಪ್ರದರ್ಶಿತಾಶ್ಚಾತ್ಯಂತಶಿಥಿಲಾ ಇತ್ಯಾದಿ

ವೃಥಾರೋದನಮಪ್ಯಪಾಸ್ತಮ್ । ಯದಪಿ ಪೂರ್ವಮೀಮಾಂಸಾಮರ್ಯಾದಾಪ್ಯಸಾಮಂಜಸ್ಯೇ ನ ನೀತ್ಯೇತ್ಯುಕ್ತಂ ತದಪ್ಯಯುಕ್ತಂ, ನ ಹಿ ವಯಂ ಪೂರ್ವಮೀಮಾಂಸಕಾನಾಂ ಕಿಂಕರಾಃ । ಯತ್ತನ್ಮರ್ಯಾದಯೈವ ವರ್ತೇಮಹಿ । ಕಿಂತು 'ಯುಕ್ತಿಯುಕ್ತಮುಪಾದೇಯಂ ವಚನಂ ಬಾಲಕಾದಪಿ । ಅನ್ಯತ್ತೃಣಮಿವ ತ್ಯಾಜ್ಯಮಪ್ಯುಕ್ತಂ ಪದ್ಮಜನ್ಮನಾ' ಇತಿ ನ್ಯಾಯಾದ್ಯದುಪಪನ್ನಂ ತತ್ತೀಕ್ಷುರ್ಮಃ ಯದನುಪಪನ್ನಂ ಉಪಕ್ರಮಾದಿಲಿಂಗಾನಾಮುತ್ತರೋತ್ತರದೌರ್ಬಲ್ಯಾದಿಕಂ ತತ್ಪರಿತ್ಯಜಾಮಸ್ತದೇತದ್ದೂಷಣಮೇವ ನ ತು ದೂಷಣಂ ಸ್ವತಂತ್ರತಂತ್ರಪ್ರವರ್ತಕಾನಾಮ್ । ಅನ್ಯಥಾ ಸಮವಾಯಾನಂಗೀಕಾರಾತ್ ಕಾಣಾದಾದಿಮರ್ಯಾದೋಲ್ಲಂಘನಂ ಪ್ರಕೃತಿಪ್ರಾಧಾನ್ಯಾನಂಗೀಕಾರಾತ್ ಸಾಂಖ್ಯಮರ್ಯಾದೋಲ್ಲಂಘನಮಿತ್ಯಾದ್ಯಪಿ ದೂಷಣಂ ಕಿಮಿತಿ ನೋದ್ಭಾವಯೇಃ । ಪ್ರತ್ಯುತ ಸಕಲವಾದ್ಯನಭಿಮತಮಾತ್ಮೈಕತ್ವಮಖಂಡಂ ಬ್ರಹ್ಮ ವಿಶ್ವಮಿಥ್ಯಾತ್ವಂ ವೇಽಸ್ಯಾತತ್ತ್ವಾವೇದಕತ್ವಮಭ್ಯುಪಗತವತಸ್ತವೈವ ಶೂನ್ಯವಾದ್ಯತಿರಿಕ್ತಸರ್ವತಾಂತ್ರಿಕಮರ್ಯಾದೋಲ್ಲಂಘನಂ ಶೂನ್ಯವಾದಿಮತಪ್ರವೇಶಶ್ಚೇತಿ ಕಥಂ ನ ನಿಭಾಲಯಸೇ । ಯುಕ್ತಂ ಚೈತತ್ತವೈವ । ಯತಃ ''ಖಲಃ ಸರ್ಷಪಮಾತ್ರಾಣಿ ಪರಛಿದ್ರಾಣಿ ಪಶ್ಯತಿ । ಆತ್ಮನೋ ಗಗನಾಭಾನಿ ಪಶ್ಯನ್ನಪಿ ನ ಪಶ್ಯತಿ'' ಇತಿ ಖಲು ದುರ್ಜನಸ್ವಭಾವಃ ।

ಅಪಾಣಿನೀಯ ಪ್ರಯೋಗಗಳ ಬಗ್ಗೆ ವಿವರಣೆ

ಯದಪಿ ಪ್ರಾಯೇಣಾಸಾಧುಭಿರೇವ ಶಬ್ದೈರ್ವ್ಯವಹಾರ ಇತಿ ತದಪಿ ಅವ್ಯುತ್ಪತ್ತಿನಿಬಂಧನಮೇವ ಶಾಸ್ತ್ರೇ ತೇಷಾಂ ಸಾಧುತಾಯಾ ಉಪಪಾದಿತತ್ವಾತ್ । ಯತ್ರ ಪುನರ್ವೇದಮಾತ್ರಪ್ರಸಿದ್ಧೈಃ ಶಬ್ದೈಃ ಕ್ವಚಿದ್ವ್ಯವಹಾರಃ ಸೋಽಪಿ ವೈದಿಕಮರ್ಯಾದಾ ಸಂರಕ್ಷಣಾರ್ಥೋ ವೇದೇ ಬಹುಮಾನಪ್ರದರ್ಶನಾಯ, ನ ತು ಲೌಕಿಕಶಬ್ದಾಪರಿಜ್ಞಾನೇನ ವಾ ಭ್ರಾಂತ್ಯಾ ವಾ ತಥಾವಿಧಶಬ್ದದಾರಿದ್ರ್ಯೇಣ ವಾ । ಯಥಾ 'ಸರ್ವಶಬ್ದಾಶ್ಚ ವಿಷ್ಣವಿ', 'ಯಾಮಾಹುರನುಮಾಂ ಕೇಚಿತ್ತ್ರಯಾದ್ಯವಯವಾತ್ಮಿಕಾಮ್'', ''ರಾಮಃ ಸ ಕೃಷ್ಣತನುವಾ ಸ್ವಬಲಾಜ್ಜಗಾಯ' ಇತ್ಯಾದಯಃ । ನ ಹಿ ಸಂಭವತಿ ಶ್ಲೇಷ್ಮಾವಲೀಢನಾಸಿಕೈರರ್ಭಕೈರಪಿ ಜ್ಞಾಯಮಾನಂ ವಿಷ್ಣುಶಬ್ದಸ್ಯ ಸಪ್ತಮ್ಯೇಕವಚನಮ್ 'ಇಕೋ ಯಣಚಿ' ಇತ್ಯಾದಿಕಂ ಚಾಚಾರ್ಯೋ ನಾಜ್ಞಾಸೀದಿತಿ ತದಜ್ಞಾನೇ ವಾ ಕಥಮನ್ಯತ್ರ ವಿಷ್ಣಾವಿತ್ಯಾದಿ ಪ್ರಯುಂಜೀತ । ನಾಪ್ಯೇಕಮೇವೇದಂ ವ್ಯಾಕರಣಂ ಶಬ್ದಸಾಧುತ್ವನಿಶ್ಚಾಯಕಂ, ತಥಾತ್ವೇ ವಾ ಇಂದ್ರಾದೀನಾಂ ಮಹಾವೈಯಾಕರಣಾನಾಂ ಶಾಸ್ತ್ರಾರಂಭಪ್ರಯಾಸವೈಫಲ್ಯಾಪತ್ತೇಃ ।

ಯದಪಿ ಶ್ಲೋಕರಚನಾಯಾಮನ್ವಯಾಸಂಭವ ಇತ್ಯಾದಿ ತದಪಿ ವೈದಿಕಮರ್ಯಾದಾಸಂರಕ್ಷಣಮೇವ । ಪರಮವೈದಿಕಂಮನ್ಯೈಃ ಶಬ್ದಸಾಧುತ್ವಸಿದ್ಧಯೇ ಪ್ರಯತಮಾನೈಸ್ತಥಾವಿಧವ್ಯವಹಾರಸ್ಯ ಪ್ರಾಯೇಣ ಕ್ರಿಯಮಾಣತ್ವಾತ್ । ನ ಹಿ ಅಚೋಂತ್ಯಾದಿಟಿ । ಅತೋತ್ವಾಂತಸ್ಯ ಲಿಜಃ ಸ ಲೋಪೋಽನಂತ್ಯಸ್ಯೇತ್ಯಾದೌ ಯಥಾ ಶ್ರುತಪದಾನಾಮನ್ವಯೋ ದೃಶ್ಯತೇ, ತಥೈವ ಮಹಾಭಾಷ್ಯೇ ವಾರ್ತಿಕವ್ಯವಹಾರಾಃ । ಸೋಪಸ್ಕರಾಣಿ ಹಿ ವಾಕ್ಯಾನಿ ಭವಂತೀತಿ ಶೈಲೀ ಹ್ಯೇಷಾ ಋಷೀಣಾಮ್ । ಯಥಾ ''ಹ್ಯಾಮ್ನಾಯಸ್ಯ ಕ್ರಿಯಾರ್ಥತ್ವಾದಾನರ್ಥಕ್ಯಮತದರ್ಥಾನಾಂ ತಸ್ಮಾದನಿತ್ಯಮುಚ್ಯತ ಇತ್ಯಾದಿ ಜೈಮಿನಿಸೂತ್ರೇ ನ ಹ್ಯರ್ಥ ವಿವಕ್ಷಿತೋಽರ್ಥೋ ಯಥಾಶ್ರುತಸೂತ್ರಾಕ್ಷರಸ್ವಾರಸ್ಯೇನ ಶಕ್ಯೋಽಧಿಗಂತುಮ್ । ಏವಂ ಚ ಸ್ವಸ್ಯ ತತ್ಪಂಕ್ತಿಪ್ರವಿಷ್ಟತಯಾ ಪರಮವೈದಿಕತ್ವಸೂಚನಾಯ ಬುದ್ಧಿಪೂರ್ವಕಮೇವ ತಥಾಕೃತತ್ವಾತ್ । ನಾತ್ರ ಕಾಪ್ಯನುಪಪತ್ತಿಃ

ಛಂದೋಭಂಗದ ಬಗ್ಗೆ ವಿವರಣೆ

ಏತೇನ ಶ್ಲೋಕೇಷು ವೃತ್ತಾನ್ಯಥಾಭಾವೋಽಪಿ ದೂಷಣತಯೋಚ್ಯಮಾನಃ ಪ್ರತ್ಯಾಖ್ಯಾತಃ । ತಸ್ಯಾಪಿ ವೈದಿಕಮರ್ಯಾದಾಸಂರಕ್ಷಕತ್ವಾತ್ । ''ನ ವಾ ಏಕೇನಾಕ್ಷರೇಣ ಛಂದಾಂಸಿ ವಿಯಂತಿ ನ ದ್ವಾಭ್ಯಾಮ್'' ಇತಿ ಬ್ರಾಹ್ಮಣ ಏವ ತದದೋಷತಯಾ ಉಕ್ತತ್ವಾತ್ । ಮಹಾಭಾರತಾದೌ ಚ ಸಹಸ್ರಶಃ ಸ್ಥಲೇಷು ವೃತ್ತಾನ್ಯಥಾಭಾವಾನಾಂ ಛಾಂದಸಶಬ್ದಪ್ರಯೋಗಾಣಾಂ ಚ ದರ್ಶನಾತ್ । ''ವ್ಯಾಸೋಚ್ಛಿಷ್ಟಂ ಜಗತ್ಸರ್ವಂ'', ''ಕೋ ಹ್ಯನ್ಯಃ ಪುಂಡರೀಕಾಕ್ಷಾನ್ಮಹಾಭಾರತಕೃದ್ಭವೇತ್'' ಇತ್ಯಾದಿನಾ ಸರ್ವಜ್ಞತಯೋಚ್ಯಮಾನೋ ಭಗವಾನ್ ಬಾದರಾಯಣತೋಽಪ್ಯಜ್ಞಾನತೋಽಶಕ್ತ್ಯಾ ವಾ ತಥಾ ಪ್ರಾಯುಂಕ್ತೇತಿ ಕಥಂ ಶಕ್ಯಂ ಸಂಭಾವಯಿತುಮಪಿ ತಸ್ಮಾತ್ ತಥಾವಿಧಾನ್ಯಪಿ ವ್ಯಾಕರಣಾನಿ ಸಂತ್ಯೇವೇತ್ಯೇವಾವಸ್ಥೇಯಮ್ । ತದಭಾವೇ ಚ ಸಕಲಲಕ್ಷ್ಯಾನಭಿಜ್ಞಾನಾತ್ ತಥಾವಿಧಶಬ್ದಸಾಧುತ್ವಮನುಪಪಾದಯಂತೋ ವೈಯಾಕರಣಾ ಏವಾಲ್ಪದರ್ಶಿನ ಇತ್ಯೇವ ವಕ್ತವ್ಯಮ್ । ನ ಹಿ ವ್ಯಾಸಾದಯಃ ಪಾಣಿನ್ಯಾದಿಮುಖನಿರೀಕ್ಷಣೇನ ವ್ಯವಹರಂತಿ । ಪ್ರತ್ಯುತ ಪಾಣಿನ್ಯಾದಯ ಏವ ತನ್ಮುಖನಿರೀಕ್ಷಕಾಃ । ಯಚ್ಚ ಯಾವಚ್ಚ ತನ್ಮುಖಾನ್ನಿಃಸರತಿ ತಸ್ಯ ಸಾಧುತ್ವಾನ್ವಾಖ್ಯಾನಾಯ ತೈಃ ಸೂತ್ರಾಣಿ ನಿರ್ಮಾತವ್ಯಾನಿ । ತದೀಯವ್ಯವಹಾರ ಏವ ಸಾಧುತಾಪ್ರಯೋಜಕಃ । ಯುಕ್ತಂ ಚೈವ 'ಉದಯತಿ ದಿಶಿ ಯಸ್ಯಾಂ ಭಾನುಮಾನ್ ಸೈವ ಪೂರ್ವಾ ನ ಹಿ ತರಣಿರುದಿತೇ ದಿಕ್ ಪರಾಧೀನವೃತ್ತಿಃ' ಇತ್ಯಾದಿ ನ್ಯಾಯಾತ್ ।

ತಥಾ ಛಂದೋಲಕ್ಷಣಕಾರಾಣಾಂ ಲಕ್ಷಣಂ ತತ್ರ ನ ವರ್ತತೇ ಚೇತ್ ತದೇವಾವ್ಯಾಪಕತ್ವಾದ್ದುಷ್ಟಮ್ । ಲಕ್ಷ್ಯಸ್ವರೂಪಶುದ್ಧತಾಯಾಸ್ತತ್ಪ್ರಯೋಗೇಣೈವ ಸಿದ್ಧತ್ವಾತ್ । ಏವಂ ಚ ಭಗವಾನ್ ಭಾಷ್ಯಕಾರೋಽಪಿ ತದೀಯಶಾಲಾಯಾಮೇವವ್ಯುತ್ಪನ್ನೋ 'ಯೇನಾಸ್ಯ ಪಿತರೋ ಯಾತಾ ಯೇನ ಯಾತಾಃ ಪಿತಾಮಹಾಃ । ತೇನ ಯಾಯಾತ್ ಸತಾಂ ಮಾರ್ಗಃ' ಇತಿ ನ್ಯಾಯಾತ್ ತದೀಯಾಂ ಶೈಲೀಮನುಸೃತ್ಯ ವ್ಯವಹರತಿ । ಅನ್ಯಥಾ ಸ್ವಸ್ಯ ವೈದಿಕಮರ್ಯಾದಾವಿಪ್ಲಾವಕತ್ವ ಮಾಪದ್ಯೇತೇತಿ ಸರ್ವೋಽಪ್ಯಯಮುಪನ್ಯಾಸೋ ವ್ಯರ್ಥೋ ವಿರುದ್ಧಶ್ಚ । ವೈದಿಕಮರ್ಯಾದಾವಿಪ್ಲಾವಕತ್ವೋಪಪಾದನಾಯ ಕೃತಸ್ಯ ತನ್ಮರ್ಯಾದಾಸಂರಕ್ಷಕತ್ವೋಪಪಾದನ ಏವ ಪರ್ಯವಸಿತತ್ವಾತ್ ।

ನನ್ವೇವಮನ್ಯೋಽಪಿ ಕಶ್ಚಿದಾಧುನಿಕೋ ವ್ಯಾಕರಣಾನನುಗುಣಂ ಪ್ರಯುಂಜಾನೋ ನ ಪರ್ಯನುಯೋಜ್ಯಃ ಸ್ಯಾದಿತಿ ಚೇತ್ । ಸತ್ಯಮ್ । ಪ್ರಯೋಕ್ತೃಸ್ವರೂಪಪರ್ಯಾಲೋಚನಯಾ ನಿರ್ಣಯೋಪಪತ್ತೇಃ । ಯೋ ಹ್ಯೇತಾದೃಶಃ ಸಮವಗತಬಹುವಿಧಶ್ರುತಿಸ್ಮೃತೀತಿಹಾಸಪುರಾಣಾದಿಶಬ್ದಸಮೂಹಃ ತತ್ತದ್ವ್ಯಾಖ್ಯಾತಾ ತತ್ರತ್ಯಾನ್ ಪರಮದುರ್ಘಟಾನಪಿ ಶಬ್ದಸಮೂಹಾನನೇಕಧಾ ನಿರ್ವಚನೈರುಪಪಾದಯನ್ ದೃಶ್ಯತೇ । ತತ್ಪ್ರಯುಕ್ತಃ ಶಬ್ದಃ ಕಥಮಸಾಧುರಿತಿ ವಕ್ತುಂ ಶಕ್ಯೇತ । ಕ್ರಿಯತೇ ಚಾಭಿಯುಕ್ತೈಸ್ತಥೈವ ಸಾಧುತ್ವನಿರ್ಣಯಃ । ಯಥಾ 'ಜನಿಕರ್ತುಃ ಪ್ರಕೃತಿಃ' ಇತ್ಯಾದೌ ಷಷ್ಠೀಸಮಾಸನಿರ್ದೇಶಃ ಸೂತ್ರಕಾರಸ್ಯ । ಕರ್ತರಿ ತೃಜಕಾಭ್ಯಾಂ ಷಷ್ಠೀಸಮಾಸನಿಷೇಧಾಯ 'ಕರ್ತರಿ ಚ'ಇತಿ ಸೂತ್ರಂ ಪ್ರಯುಂಕ್ತೇ ತದ್ವಿರುದ್ಧಂ ಚ ವ್ಯವಹರತ್ಯತೋ ಭ್ರಾಂತೋಽಯಂ ತದುಕ್ತಿರಪ್ರಮಾಣಮಿತಿ ನ ಪರಿತ್ಯಜ್ಯತೇ । ಕಿಂತು ತನ್ನಿರ್ದೇಶಾದಯಮಪಿ ಸಾಧುರ್ನಿಷೇಧಸ್ತು ತದತಿರಿಕ್ತವಿಷಯೋ ವಾ ಅನಿತ್ಯೋ ವೇತ್ಯಾದಿ ಸಮಾದಧತೇ ಸಮಾಧಾತಾರಃ । ಅತ ಏವಾಹ ಭಗವಾನ್ ಪತಂಜಲಿಃ । ''ಆಚಾರ್ಯೋ ಹಿ ದರ್ಭಪವಿತ್ರಪಾಣಿಃ ಶುಚಿಃ

ಶುಚಾವವಕಾಶೇ ಪ್ರಾಙ್ಮುಖ ಆಸೀನೋ ಮಹತಾ ಪ್ರಣಿಧಾನೇನೇಮಾನಿ ಸೂತ್ರಾಣಿ ಪ್ರಣೀತವಾನ್ ತತ್ರೈಕೇನಾಪಿ ವರ್ಣೇನಾನರ್ಥಕೇನ ಭವಿತುಮಶಕ್ಯಮ್' ಇತ್ಯಾದಿ ।

ಯೇಽಪಿ ಶಾಸ್ತ್ರೀಯಪಾಂಡಿತ್ಯಗಂಧವಿಧುರಾಃ ಕಾವ್ಯಾಲಂಕಾರಸಾಹಿತ್ಯಮಾತ್ರಂ ಕಿಂಚಿತ್ ಪರಿಶೀಲ್ಯ ಶ್ಲೋಕಾನ್ ಗ್ರಥಯಂತಿ ತದುದೀರಿತಾಃ ಶಬ್ದಾ ಅಪಿ ಮಹಾಕವಿಪ್ರಯೋಗಾತ್ ಸಾಧವ ಇತ್ಯಂಗೀಕ್ರಿಯಂತೇ । ಧರ್ಮಶಾಸ್ತ್ರನಿಬಂಧೇಷ್ವಪಿ ಸ್ಮೃತ್ಯರ್ಥಸಾರಾದಿಷು ಗ್ರಂಥಾಂತರಾಸ್ಪೃಷ್ಟಾ ಅನುಪಲಭ್ಯಮಾನ ಮೂಲಪ್ರಮಾಣಾಃ ಶಾಸ್ತ್ರಾರ್ಥಾಃ ಕೇವಲಂ ಸ್ವಫಕ್ಕಿಕಾಮಾತ್ರೇಣ ನಿರ್ದಿಷ್ಟಾಸ್ತತ್ರ ಶ್ರದ್ಧಾಜಾಡ್ಯೇನ ಸ್ವೀಕ್ರಿಯಂತೇ । ಯಥಾ ಆಶೌಚಪ್ರಕರಣೇ ದೇಶಕಾಲವಿಶೇಷೇಣ ಮಾತಾಪಿತ್ರಾಶೌಚವತ್ ದಂಪತ್ಯೋಶ್ಚ ಪರಸ್ಪರಮೇವಮಿತಿ ಲಿಖಿತಮ್ । ನ ಹಿ ತದ್ಗ್ರಂಥಸ್ಯ ವಿಜ್ಞಾನೇಶ್ವರಾದಿಕೃತಮಹಾನಿಬಂಧಸಂವಾದೋಽಸ್ತಿ । ಏವಂ ತ್ರಿಕಾಂಡಮಂಡನೇನ ಸ್ವಕಾರಿಕಯಾ ಪರಃಶತಾನಿ ಪುನರಾಧಾನನಿಮಿತ್ತಾನ್ ಯುಕ್ತಾನಿ। ನ ಹಿ ತನ್ಮೂಲಭೂತಂ ಶ್ರುತಿಸೂತ್ರಾದಿಕಮುಪಲಭ್ಯತೇ । ಕಿಂತು ಯೋ ಹಿ ಯದ್ವಿಚಾರೇ ಅತ್ಯಂತಮಭಿನಿವಿಷ್ಟಃ ಸ ನಾನಾವಿಧಗ್ರಂಥಾನ್ ಪರ್ಯಾಲೋಚಿತವಾನ್ ಅನಂತಂ ಚ ವಾಙ್ಮಯಂ ಚ ತತ್ರ ಕ್ವಚಿತ್ ತೇನ ದೃಷ್ಟ್ವೈವ ತಥಾ ಶಾಸ್ತ್ರಾರ್ಥಃಕೃತ ಇತಿ ಬುದ್ಧಿಮಂತೋ ವಿವೇಚಯಂತಿ । ನ ತು ತತ್ಸ್ವಕಪೋಲಕಲ್ಪಿತಮಿತಿ ವದಂತಿ । ಯಥಾ ಶಾಬರಭಾಷ್ಯೇ 'ಆಹವನೀಯೇ ಜುಹೋತಿ' ಇತಿ ವಾಕ್ಯದ್ವಯಮಸ್ತಿ । ಏಕಮನಾರಭ್ಯಾಧೀತಮೇಕಂ ಚ ದರ್ಶಪೂರ್ಣಮಾಸಪ್ರಕರಣಾಧೀತಮಿತ್ಯುಕ್ತಂ ತತ್ತದೀಯವಾಕ್ಯೇ ಶ್ರದ್ಧಾಜಾಡ್ಯೇನ ಪ್ರಸಿದ್ಧಶಾಖಾಸ್ವನುಪಲಭ್ಯಮಾನಮಪಿ ಭಾಷ್ಯಕಾರವಚನಪ್ರಮಾಣಾತ್ ಶಾಖಾಂತರೇ ಭವಿಷ್ಯತೀತಿ ಕಲ್ಪ್ಯತೇ । ಯುಕ್ತಂ ಚೈತತ್ । ಪ್ರಾಜ್ಞೇನ ಹಿ ಸ್ವವಿರೋಧಿತ್ವೇನ ಭಾಸಮಾನಾನಾಂ ಪರೋದಾಹೃತಪ್ರಮಾಣಾನಾಮರ್ಥಾಂತರಮೇವ ಕರ್ತವ್ಯಮ್, ನ। ತ್ವೇಕಸ್ಯಾಪ್ರಾಮಾಣ್ಯಂ ವಾ ಕಲ್ಪಿತತ್ವಂ ವಕ್ತವ್ಯಮ್ । ಪರಂ ತು ಭವಾದೃಶೇನ ವಕ್ತವ್ಯಮೇವ ।

ಸ್ವೋಕ್ತಾರ್ಥೇ ಶತಶಃ ಶ್ರುತೀರಪಿ ವದನ್ ಪ್ರಾಣಾವತಾರಃ ಸ್ವಯಂ
ಮಂತ್ರಾರೂಢಮಿದಂ ತ್ವಿತಿ ಪ್ರಕಟಯನ್ ಯುಕ್ತ್ಯಾ ಪರಾನ್ ಖಂಡಯನ್ ।
ಶಾಸ್ತ್ರೇ ವೈದಿಕರೀತಿತೋ ವ್ಯವಹರನ್ ವೈಯಾಸಸಂ ಶೀಲನಾ-
ದ್ರಕ್ಷನ್ ವೈದಿಕಪದ್ಧತಿಂ ಸ ಭಗವಾನಾನಂದತೀರ್ಥೋಽವತು ॥

ವ್ಯಾಸಪ್ರೋಕ್ತೇಷು ಗ್ರಂಥೇಷು ಪರಿಶೀಲನಾದ್ವಾ ವ್ಯಾಸಸಂಬಂಧಿಪರಿಶೀಲನಾದ್ವಾ ವ್ಯಾಸಶಿಷ್ಯಸ್ಯಾಯಂ ತಥೈವ ತತ್ಸಂಪ್ರದಾಯೇನ ವ್ಯವಹಾರಃ ಉಚಿತಃ। ದೃಶ್ಯಂತೇ ಹಿ ವೃತ್ತವಿಷಯೇ ವ್ಯಾಸಾದೀನಾಂ ವ್ಯವಹಾರಾಃ ।

'ಅನೇಕಬಾಹೂದರವಕ್ತ್ರನೇತ್ರಂ ಪಶ್ಯಾಮಿ ತ್ವಾಂ ಸರ್ವತೋಽನಂತರೂಪಮ್ ।
ಪಶ್ಯಾಮಿ ತ್ವಾಂ ದೀಪ್ತಹುತಾಶವಕ್ತ್ರಂ ಸ್ವತೇಜಸಾ ವಿಶ್ವಮಿದಂ ತಪಂತಮ್॥'

-ಇತ್ಯತ್ರ ಪಾದದ್ವಯೇ ಗುರುಲಘೂನಾಂ ವ್ಯತ್ಯಾಸಃ ।

ಅಮೀ ಚ ತ್ವಾಂ ಧೃತರಾಷ್ಟ್ರಸ್ಯ ಪುತ್ರಾಃ ಸರ್ವೇ ಸಹೈವಾವನಿಪಾಲಸಂಘೈಃ ।
ಭೀಷ್ಮೋ ದ್ರೋಣಃ ಸೂತಪುತ್ರಸ್ತಥಾಽಸೌ ಸಹಾಸ್ಮದೀಯೈರಪಿ ಯೋಧಮುಖ್ಯೈಃ ॥'

ಇತ್ಯಾದೌ ಪ್ರಾಯೇಣ ಸರ್ವತ್ರ ಮಹಾಭಾರತಾದೌ ಛಂದೋವ್ಯತ್ಯಾಸಃ । ನ ಚೈತದಪ್ಯನುಪಪನ್ನಮ್ । ಛಂದಃಶಾಸ್ತ್ರೇ ತಲ್ಲಕ್ಷಣಾನಾಮಪ್ಯುಕ್ತತ್ವಾತ್ । ತಚ್ಚಾಸ್ತ್ರತತ್ವಾನಭಿಜ್ಞಸ್ತು

ಭವಾದೃಶೋಽನ್ಯಥಾಭಾವಂ ಮನ್ಯತೇ ಯಥಾ ಯಙ್‌ಲುಗಂತಪ್ರಕ್ರಿಯಾನಭಿಜ್ಞಶ್ಚರ್ಕರೀತಿ' ಇತ್ಯಾದೌ ವ್ಯಾಕರಣವಿರೋಧಂ ಶಂಕೇತ ತಾದೃಕ್ತ್ವಾತ್ । ತತ್ರ ಹಿ ಗಾಯತ್ರ್ಯಾದಿ ಛಂದಸಾಮೇಕೈಕಸ್ಯ ಸಹಸ್ರಾವಧಯೋ ಭೇದಾಃ ತಜ್ಜ್ಞಾನಪ್ರಕಾರಾಶ್ಚ ಛಂದಃಪ್ರಸ್ತಾರೋತ್ಪಾದನ 'ನಷ್ಟೋದ್ದಿಷ್ಟಾದಯೋಽಪಿ ಪ್ರದರ್ಶಿತಾಃ । ಯಥಾ 'ಲರ್ದ್ಧೇ ಸೈಕೇಗ್' ಇತ್ಯಾದಿ ಹಲಾಯುಧಸೂತ್ರೇ । ತಥಾ ವೃತ್ತರತ್ನಾಕರೇಽಪಿ -

'ಪಾದೇ ಸರ್ವಗುರಾವಾದ್ಯಾಲ್ಲಘುಂ ನ್ಯಸ್ಯ ಗುರೋರಧಃ ।
ಯಥೋಪರಿ ತಥಾ ಶೇಷಂ ಭೂಯಃ ಕುರ್ಯಾದಮುಂ ವಿಧಿಮ್ ॥
ಊನೇ ದದ್ಯಾದ್ಗುರೂನೇವ ಯಾವತ್ಸರ್ವಲಘುರ್ಭವೇತ್ ॥''

ಯಥಾ ದ್ವಾದಶಾಕ್ಷರಾ ಜಗತೀನಾಮ ವೃತ್ತಮ್; ತಸ್ಯಾಶ್ಚ ಗುರುಲಘುಪ್ರಕ್ರಿಯಾ-ವ್ಯುತ್ಪಾದನೇನ ಪರಸ್ಪರಾಸಂಸ್ಪೃಷ್ಟಾಶ್ಚತ್ವಾರಿ ಸಹಸ್ರಾಣಿ ಷಣ್ಣವತಿಶ್ಚ (೪೦೯೬)ಭೇದಾ ಭವಂತಿ । ತದಂತಃಪ್ರವಿಷ್ಟಾನಾಂ ಕತಿಪಯಾನಾಂ ವಂಶಸ್ಥದ್ರುತವಿಲಂಬಿತಾದಯಃ ಸಂಜ್ಞಾಃ ಕೃತಾಃ । ಏವಮೇಕಸ್ಯ ಛಂದಸ ಏತೇ ಯಥಾ ಯಥಾ ಛಂದೋಕ್ಷರಾಣಾಮಧಿಕತ್ವಂ ಭವತಿ ತಥಾ ತಥಾ ಲಕ್ಷಾಧಿಕಪ್ರಸ್ತಾರಮೇಕೈಕಂ ವೃತ್ತಂ ಭವತಿ । ಯಾನ್ಯಪಿ ಶಾರ್ದೂಲವಿಕ್ರೀಡಿತಸ್ರಗ್ಧರಾದೀನಿ ವೃತ್ತಾನಿ ತಾನಿ ಚ ಶ್ಲೋಕಪಾದಪರ್ಯಾಪ್ತಾನ್ಯೇವೇತಿ ನಿಯಮಃ । ನ ತು ತದೇವ ವೃತ್ತಂ ಶ್ಲೋಕಸ್ಯ ಪಾದ ಚತುಷ್ಟಯೇಽಪ್ಯಪೇಕ್ಷಣೀಯಮಿತ್ಯಸ್ತಿ । ತೇನ,

'ಸರ್ವೈರ್ದೇವೈಶ್ಚ ಭಕ್ತ್ಯಾ ಸ್ವನಿಮಿಷನಯನೈಃ ಕೌತುಕಾದ್ವೀಕ್ಷ್ಯಮಾಣಃ
ಪ್ರಾಯಾಚ್ಛೇಷಗರುತ್ಮದಾದಿದಿವಿಜೈಃ ಸಂಸೇವಿತಃ ಸ್ವಂ ಪದಮ್ ॥''

ಇತ್ಯತ್ರ ಆದ್ಯಪಾದೇ ಸ್ರಗ್ಧರಾದ್ವಿತೀಯಪಾದೇ ಚ ಶಾರ್ದೂಲವಿಕ್ರೀಡಿತಮ್ ।

ತಥಾ,

ಪಾಂತ್ವಸ್ಮಾನ್ ಪುರುಹೂತವೈರಿಬಲವನ್ಮಾತಂಗಮಾದ್ಯದ್ಘಟಾ-
ಕುಂಭೋಚ್ಚಾದ್ರಿವಿಪಾಟನಾಧಿಕಪಟುಪ್ರತ್ಯೇಕವಜ್ರಾಯಿತಾಃ ।
ಶ್ರೀಮತ್ಕಂಠೀರವಾಸ್ಯಪ್ರತತಸುನಖರಾ ದಾರಿತಾರಾತಿದೂರ-
ಪ್ರಧ್ವಸ್ತಧ್ವಾಂತಶಾಂತಪ್ರವಿತತಮನಸಾ ಭಾವಿತಾ ನಾಕಿವೃಂದೈಃ ॥'

ಇತ್ಯಾದೌ ಪ್ರಥಮೇಽರ್ದ್ಧೇ ಶಾರ್ದೂಲವಿಕ್ರೀಡಿತಮ್ । ದ್ವಿತೀಯಾರ್ದ್ಧೇ ಚ ಸ್ರಗ್ಧರಾ ಯುಕ್ತೈವ । ಅತ ಏವಾದಿಕವೇರ್ಭಗವತೋ ವಾಲ್ಮೀಕೇಃ ತಾದೃಶಃ ಶ್ಲೋಕಃ -

ರಾಮಂ ಲಕ್ಷ್ಮಣಪೂರ್ವಜಂ ರಘುವರಂ ಸೀತಾಪತಿಂ ಸುಂದರಂ
ಕಾಕುತ್ಸ್ಥಂ ಕರುಣಾರ್ಣವಂ ಗುಣನಿಧಿಂ ವಿಪ್ರಪ್ರಿಯಂ ಧಾರ್ಮಿಕಮ್ ।
ರಾಜೇಂದ್ರಂ ಸತ್ಯಸಂಧಂ ದಶರಥತನಯಂ ಶ್ಯಾಮಲಂ ಶಾಂತಮೂರ್ತಿಂ
ವಂದೇ ಲೋಕಾಭಿರಾಮಂ ರಘುಕುಲತಿಲಕಂ ರಾಘವಂ ರಾವಣಾರಿಮ್ ॥

ಇತ್ಯತ್ರ ಪೂರ್ವಾರ್ದ್ಧೇ ಶಾರ್ದೂಲವಿಕ್ರೀಡಿತಮ್, ಉತ್ತರಾರ್ದ್ಧೇ ಸ್ರಗ್ಧರೇತಿ । ....

ಭವದೀಯಾಂ ಸಂಪ್ರದಾಯಾನಾಮಭಿಜ್ಞತಾಂ ಚ ಚತುರಕಮತೇತ್ಯಾದಿತ್ವದೀಯಫಕ್ಕಿಕಾ ವ್ಯವಹೃತಿರೇವಾವೇದಯತಿ । ಅಂಧಸ್ಯ ಮಾರ್ಗಾನಭಿಜ್ಞತಾಂ ತದೀಯಪಾದವಿಕ್ಷೇಪಕ್ರಿಯೇವ । ನ ಹಿ ಚತುರಶ್ರುತಿರಸ್ಮದೀಯಗ್ರಂಥೇಷು ಕುತ್ರಾಪ್ಯುದಾಹೃತಾ । ''ತಸ್ಮಾತ್ ಇತಿ ಚ – ತುರಶ್ರುತಿಃ'' ಇತಿ ಭಾಷ್ಯಪುಸ್ತಕೇ ದೃಷ್ಟ್ವಾ ತತ್ರ 'ಚತುರಶ್ರುತಿಃ' ಇತಿ ಸ್ವಪಾಂಡಿತ್ಯಬಲಾತ್ ಪದಂ ಭಿನ್ನಮ್ । ನ

ತ್ವೇತತ್ಸಾಂಪ್ರದಾಯಿಕಂ ಚ ಇತ್ಯವ್ಯಯಂ ತತಸ್ತುರಶ್ರುತಿರಿತ್ಯೇವ ಪದಚ್ಛೇದಸ್ಯಾಭಿಪ್ರೇತತ್ವಾತ್ । ಅತ ಏವೋಕ್ತಮ್ ಅನುವ್ಯಾಖ್ಯಾನೇ – 'ಆಹ ಚೈವಂ ತುರಶ್ರುತಿಃ' ಇತಿ । ತಸ್ಮಾತ್ ಸಾಂಪ್ರದಾಯಿಕಗುರುಚರಣಾನುಚರಣವಿಕಲಸ್ಯ ಪದಚ್ಛೇದೋಽಪಿ ದುರ್ಬೋಧಃ। ತತಸ್ತರಾಂ ಪದಾರ್ಥಸ್ತತಸ್ತಮಾಂ ಚ ವಾಕ್ಯಾರ್ಥಃ ಕಿಂ ಪುನಸ್ತಾತ್ಪರ್ಯವಿಷಯೋಽರ್ಥ ಇತಿ । ಅತ ಏವಾಹುಃ –

''ಸಂಪ್ರದಾಯಮವಮತ್ಯ ಗರ್ವತಃ ಸರ್ವತಃ ಸ್ವರಸನಾಂ ನಿವೇಶಯನ್ ।
ಕಂಟಕಾರಿ ದಶರಾಮಶರಾದಿನ್ಯಾಯತಃ ಸ ಪರಿಹಾಸ್ಯತೇ ಬುಧೈಃ ॥'' ಇತಿ ।

ಕಶ್ಚಿತ್ಕಿಲ ಭವಾದೃಶಃ ತರ್ಕವೇದಾಂತಮೀಮಾಂಸಾವ್ಯಾಕರಣಾದಿಶಾಸ್ತ್ರಪಾಂಡಿತ್ಯ-ಗರ್ವಾದಗದಂಕಾರವಿದ್ಯಾಗುರೂಣಾಂ ಸಂಪ್ರದಾಯಮವಮತ್ಯ 'ಕಂಟಕಾರಿಃ ಕಫಾಪಹಃ' ಇತಿ ವಾಕ್ಯೇ ನಿದಗ್ಧಿಕಾಪರಪರ್ಯಾಯಂ ಕಂಟಕಾರಿಶಬ್ದಂ ಕಂಟಕಾನಾಮರಿರಿತಿ ವ್ಯುತ್ಪತ್ತ್ಯಾ ಉಪಾನತ್ಪರಂ ಜ್ಞಾತ್ವಾ ಕಫಾತುರಾಯ ಸ್ವಪಿತ್ರೇ ಉಪಾನಾತ್ಕ್ವಥಂ ದತ್ತವಾನ್ । ತಥಾ ರಾಮಾಯಣೀಯ ಯುದ್ಧಕಾಂಡೇಽಪಿ ಕ್ವಚಿತ್ 'ದಶರಾಮಶರಾಃ ಪೇತೂ ರಾಕ್ಷಸಾನಾಂ ಚಮೂಮುಖೇ' ಇತಿ ಶ್ಲೋಕೇ 'ಚತುರಶ್ರುತಿರಿತ್ಯತ್ರೇವ ಪದಚ್ಛೇದಂ ಕೃತ್ವಾ ರಾಕ್ಷಸಾನಾಂ ಚಮೂಮುಖೇ ವಿದ್ಯಮಾನಾಃ ದಶರಾಖ್ಯಾಃ ಕೇಚಿತ್ ರಾಕ್ಷಸಗಣಾಃ ಮಶರಾಖ್ಯಾಶ್ಚಾಪರೇ ನಿಪೇತುರಿತಿ ವ್ಯಾಖ್ಯಾತವಾನ್ । ತಸ್ಮಾತ್ ವೈದಿಕಮರ್ಯಾದಾಸಂರಕ್ಷಕೇ ಭಗವತಿ ವೈದಿಕಮರ್ಯಾದಾವ್ಯಾಕುಲೀಕರತ್ವಮಾಪಾದಯತಸ್ತವೈವ ಸ್ವಕೀಯಲೌಕಿಕವೈದಿಕತಾಂತ್ರಿಕಾಲಂಕಾರಿಕಸಕಲಮರ್ಯಾದಾನಭಿಜ್ಞತ್ವಮಾಪನ್ನಮ್ ॥ ಯುಕ್ತಂ ಚೈತತ್। ಮಿಥ್ಯಾಭಿಶಾಪಾತ್ ದ್ವಿಗುಣಪ್ರಾಯಶ್ಚಿತ್ತಾದಿಭಾಗ್ಭವೇತ್ ಇತಿಃ ನ್ಯಾಯಃ । ಆದಿ ಪದಾತ್ ರಾಜದಂಡಾದಿಶ್ಚ।

ಪರಃಶತಾನಿ ಪುನರಾಧಾನನಿಮಿತ್ತಾನ್ ಯುಕ್ತಾನಿ । ನ ಹಿ ತನ್ಮೂಲಭೂತಂ ಶ್ರುತಿಸೂತ್ರಾದಿಕಮುಪಲಭ್ಯತೇ । ಕಿಂತು ಯೋ ಹಿ ಯದ್ವಿಚಾರೇ ಅತ್ಯಂತಮಭಿನಿವಿಷ್ಟಃ ಸ ನಾನಾವಿಧಗ್ರಂಥಾನ್ ಪರ್ಯಾಲೋಚಿತವಾನ್ ಅನಂತಂ ಚ ವಾಙ್ಮಯಂ ಚ ತತ್ರ ಕ್ವಚಿತ್ ತೇನ ದೃಷ್ಟ್ವೈವ ತಥಾ ಶಾಸ್ತ್ರಾರ್ಥಕೃತ ಇತಿ ಬುದ್ಧಿಮಂತೋ ವಿವೇಚಯಂತಿ । ನ ತು ತತ್ಸ್ವಕಪೋಲಕಲ್ಪಿತಮಿತಿ ವದಂತಿ । ಯಥಾ ಶಾಬರಭಾಷ್ಯೇ 'ಆಹವನೀಯೇ ಜುಹೋತಿ' ಇತಿ ವಾಕ್ಯದ್ವಯಮಸ್ತಿ । ಏಕಮನಾ- ರಭ್ಯಾಧೀತಮೇಕಂ ಚ ದರ್ಶಪೂರ್ಣಮಾಸಪ್ರಕರಣಾಧೀತಮಿತ್ಯುಕ್ತಂ ತತ್ತದೀಯವಾಕ್ಯೇ ಶ್ರದ್ಧಾಜಾಡ್ಯೇನ ಪ್ರಸಿದ್ಧಶಾಖಾಸ್ವನುಪಲಭ್ಯಮಾನಮಪಿ ಭಾಷ್ಯಕಾರವಚನಪ್ರಮಾಣಾತ್ ಶಾಖಾಂತರೇ ಭವಿಷ್ಯತೀತಿ ಕಲ್ಪ್ಯತೇ । ಯುಕ್ತಂ ಚೈತತ್ । ಪ್ರಾಜ್ಞೇನ ಹಿ ಸ್ವವಿರೋಧತ್ವೇನ ಭಾಸಮಾನಾನಾಂ ಪರೋದಾಹೃತಪ್ರಮಾಣಾನಾಮರ್ಥಾಂತರಮೇವ ಕರ್ತವ್ಯಮ್, ನ। ತ್ವೇಕಸ್ಯಾಪ್ರಾಮಾಣ್ಯಂ ವಾ ಕಲ್ಪಿತತ್ವಂ ವಕ್ತವ್ಯಮ್ । ಪರಂ ತು ಭವಾದೃಶೇನ ವಕ್ತವ್ಯಮೇವ ।

ಸ್ವೋಕ್ತಾರ್ಥೇ ಶತಶಃ ಶ್ರುತೀರಪಿ ವದನ್ ಪ್ರಾಣಾವತಾರಃ ಸ್ವಯಂ
ಮಂತ್ರಾರೂಢಮಿದಂ ತ್ವಿತಿ ಪ್ರಕಟಯನ್ ಯುಕ್ತ್ಯಾ ಪರಾನ್ ಖಂಡಯನ್ ।
ಶಾಸ್ತ್ರೇ ವೈದಿಕರೀತಿತೋ ವ್ಯವಹರನ್ ವೈಯಾಸಸಂ ಶೀಲನಾ-
ದ್ರಕ್ಷನ್ ವೈದಿಕಪದ್ಧತಿಂ ಸ ಭಗವಾನಾನಂದತೀರ್ಥೋಽವತು ॥

ವ್ಯಾಸಪ್ರೋಕ್ತೇಷು ಗ್ರಂಥೇಷು ಪರಿಶೀಲನಾದ್ವಾ ವ್ಯಾಸಸಂಬಂಧಿಪರಿಶೀಲನಾದ್ವಾ ವ್ಯಾಸಶಿಷ್ಯಸ್ಯಾಯಂ ತಥೈವ ತತ್ಸಂಪ್ರದಾಯೇನ ವ್ಯವಹಾರಃ ಉಚಿತಃ । ದೃಶ್ಯಂತೇ ಹಿ ವೃತ್ತವಿಷಯೇ

ವ್ಯಾಸಾದೀನಾಂ ವ್ಯವಹಾರಾಃ ।

'ಅನೇಕಬಾಹೂದರವಕ್ತ್ರನೇತ್ರಂ ಪಶ್ಯಾಮಿ ತ್ವಾಂ ಸರ್ವತೋಽನಂತರೂಪಮ್।
ಪಶ್ಯಾಮಿ ತ್ವಾಂ ದೀಪ್ತಹುತಾಶವಕ್ತ್ರಂ ಸ್ವತೇಜಸಾ ವಿಶ್ವಮಿದಂ ತಪಂತಮ್॥'

-ಇತ್ಯತ್ರ ಪಾದದ್ವಯೇ ಗುರುಲಘೂನಾಂ ವ್ಯತ್ಯಾಸಃ ।

-ಶ್ರೀವೈಶ್ವನಾಥಿ ನಾರಾಯಣಪಂಡಿತಾಚಾರ್ಯರು (ಅದ್ವೈತಕಾಲಾನಲ)

ನ ತಾವದಪ್ರಸಿದ್ಧಶ್ರುತ್ಯುದಾಹರಣಂ ದೋಷಃ, ಶ್ರೌತಸ್ಮಾರ್ತಕರ್ಮವಿಧಾಯಕಾನಾಂ ತತ್ತನ್ಮಂತ್ರಾಣಾಂ ಚ ಖಿಲಾನಾಮೇವ ಪ್ರಾಯೇಣಾಪಸ್ತಂಬಾದಿಭಿಃ ಸ್ವಸ್ವಸೂತ್ರೇಷೂ- ದಾಹರಣಾತ್ । ಋಷೀಣಾಂ ಸರ್ವಜ್ಞತ್ವಾತ್ ತತ್ತಚ್ಛ್ರುತಿದರ್ಶಿತತ್ವಾತ್ ತದುಪಪದ್ಯತ ಇತಿ ಚೇನ್ನ, ಸರ್ವಜ್ಞತ್ವಸ್ಯಾಸ್ಮದಾಚಾರ್ಯೇಽಪಿ ದಂಡೇನಾನಿವಾರಣಾತ್ । ತ್ವದೀಯಶ್ರದ್ಧಾಜಾಡ್ಯಸ್ಯಾ- ನುಪಾದೇಯತ್ವಾತ್ । ಕಥಮನ್ಯಥಾ ಗೌಡಪಾದಶಂಕರಾದೇಃ ಸರ್ವಜ್ಞತ್ವಾದಿಕಮಂಗೀಕುರುಷೇ? ಪ್ರತ್ಯುತ —

'ಮಾಯಾವಾದಮಸಚ್ಛಾಸ್ತ್ರಂ ಪ್ರಚ್ಛನ್ನಂ ಬೌದ್ಧಮುಚ್ಯತೇ ।
ಮಯ್ಯೈವ ಕಥಿತಂ ದೇವಿ ಕಲೌ ಬ್ರಾಹ್ಮಣರೂಪಿಣಾ'

ಇತಿ ಪಾದ್ಮವಚನೇನ, ತ್ವನ್ಮತಸ್ಯೈವ ಬೌದ್ಧತ್ವಮುಚ್ಯತೇ । 'ಚತುರ್ಭಿಃ ಸಹಿತಃ ಶಿಷ್ಯೈಃ ಶಂಕರೋಽವತರಿಷ್ಯತಿ । ಸಹಸ್ರೇ ದ್ವಿಶತೋತ್ತರೇ'' ಇತಿ ತ್ವದುದಾಹೃತವಚನಂ ತು ವಿಪ್ರಲಿಪ್ಸಾ- ಮೂಲತ್ವೇನೋಪಪನ್ನಮಿತಿ ನ ತದ್ಬಲಾತ್ ತ್ವನ್ಮತಸ್ಯ ಪ್ರೇಕ್ಷಾವದುಪಾದೇಯತ್ವಮ್ । ತ್ವನ್ಮತಸ್ಯ ಚ ಮೋಹಶಾಸ್ತ್ರತ್ವಂ ಪುರಾಣೇಷು ಸ್ಪಷ್ಟಮಾವೇದ್ಯತೇ । ಯಥಾ ಕೌರ್ಮೇ ಶ್ರೀಮುಷ್ಣಮಾಹಾತ್ಮ್ಯೇ ಪಂಚಮೇಽಧ್ಯಾಯೇ —

ಪುರಾ ಭಾಗೀರಥೀತೀರೇ ನಿಯಂತಾ ಪೃಷ್ಟವಾನ್ ಮುನಿಮ್ ।
ನಷ್ಟಾ ಭಾಗವತಾ ಧರ್ಮಾಃ ಸಚ್ಛಾಸ್ತ್ರಾಣಿ ಕಲೌ ಯುಗೇ ॥೧॥
ಇತಿ ಶ್ರುತಂ ಮಯಾ ಪೂರ್ವಂ ತೀರ್ಥಯಾತ್ರಾಪ್ರಸಂಗತಃ ।
ಕಥಂ ನಷ್ಟಾ ಭವಿಷ್ಯಂತಿ ಪುನಃ ಸ್ಥಾಸ್ಯಂತಿ ವೈ ಕಥಮ್ ॥೨॥
ವದ ವಿದ್ವನ್ ಮಹಾಬಾಹೋ ಕೋ ವೋದ್ಧಾರಂ ಕರಿಷ್ಯತಿ ॥
ಶ್ರೀವಾಮದೇವ ಉವಾಚ —
ಚತುಃಸಹಸ್ರೇ ದ್ವಿಶತೇ ಗತೇ ಸೌಗಂಧಿಕೇ ವನೇ ॥೩॥
ನಿಹತಾ ಭೀಮಸೇನೇನ ದ್ವಾಪರಾಂತೇ ನೃಪೋತ್ತಮ ।
ಸೌಗಂಧಿಕಾಖ್ಯೇ ನಿಹತಾಸ್ತೇ ಖಲಾದೈತ್ಯ ಪುಂಗವಾಃ ॥೪॥
ರುದ್ರೇಣ ನಿಹತಾ ಯೇ ಚ ತ್ರೈಪುರಾಶ್ಚ ಕಲೌ ಯುಗೇ ।
ಚತುಃಸಹಸ್ರೇಽಬ್ದಶತೇ ಗತೇ ಮಣಿಮದಾದಯಃ ॥೫॥
ಜನಿಷ್ಯಂತಿ ಬ್ರಹ್ಮಯೋನೌ ದೈತ್ಯಾಃ ಸತ್ಕರ್ಮದೂಷಕಾಃ ।
ಮಿಥ್ಯಾವಾದಮಸಚ್ಛಾಸ್ತ್ರಂ ಕರಿಷ್ಯಂತಿ ಕಲೌ ಯುಗೇ ।
ಗೋಪಯಿಷ್ಯಂತಿ ಸದ್ಧರ್ಮಾನ್ ಸಚ್ಛಾಸ್ತ್ರಪರಿಪಂಥಿನಃ ॥೬॥

ಏವಂ ಧರ್ಮೇಷು ನಷ್ಟೇಷು ಶಾಸ್ತ್ರೇಷು ಚ ಕಲೌ ಯುಗೇ ।
ದೇವೈರ್ವಿಜ್ಞಾಪಿತೋ ವಿಷ್ಣುರ್ವಾಯುಮಾಜ್ಞಾಪಯಿಷ್ಯತಿ ॥೭॥

ಉದ್ಧರಸ್ವ ಮಹಾಬಾಹೋ! ಮಮ ಧರ್ಮಾನ್ ಸನಾತನಾನ್ ।
ಇತ್ಯಾಜ್ಞಪ್ತೋ ಭಗವತಾ ಕಲೌ ವಾಯುರ್ಭವಿಷ್ಯತಿ ॥೮॥

ಮಧ್ವನಾಮ್ನಾ ಯತಿರಸೌ ಸಚ್ಛಾಸ್ತ್ರಾಣಿ ಕರಿಷ್ಯತಿ ।
ಗೀತಾಯಾಶ್ಚೋಪನಿಷದಾಂ ಭಾಷ್ಯಾಣಿ ಚ ಕರಿಷ್ಯತಿ ॥೯॥

ನಿರಸಿಷ್ಯತಿ ಪಾಷಂಡಾನ್ ಸಚ್ಛಾಸ್ತ್ರಾಣಿ ಮಹಾಮತಿಃ ।
ಸ್ಥಾಪಯಿಷ್ಯತಿ ಸದ್ಧರ್ಮಾನ್ ಸಚ್ಛಾಸ್ತ್ರಂ ವ್ಯಾಕರಿಷ್ಯತಿ ॥೧೦॥

ಶ್ರೋಷ್ಯಂತಿ ಮುನಯಃ ಸರ್ವೇ ಶುಕಾದ್ಯಾ ದೇವರೂಪಿಣಃ ॥'' ಇತಿ ।

ತಥಾ ಸ್ಕಾಂದೇ ಶ್ರೀಮುಷ್ಣಮಾಹಾತ್ಮ್ಯೇ ನವಮೇಽಧ್ಯಾಯೇ —

ಕಲೌ ಪಾಷಂಡಭೂಯಿಷ್ಠೇ ಧರ್ಮಲೇಶವಿವರ್ಜಿತೇ ॥

ವೈವಸ್ವತೇಽಂತರೇ ಪ್ರಾಪ್ತೇ ಹ್ಯಷ್ಟಾವಿಂಶಯುಗೇ ಕಲೌ ।
ತ್ರೈಪುರಾ ಭಾರತೇ ಯುದ್ಧೇ ನಿಹತಾ ರಾಕ್ಷಸಾ ಭುವಿ ॥

ಯದಾ ಪ್ರವರ್ತಯಿಷ್ಯಂತಿ ಮಾರ್ಗಂ ಪಾಷಂಡಗೋಚರಮ್ ।
ತದಾ ಸಂಪ್ರಾರ್ಥಿತೋ ದೇವೈರ್ಭಗವಾನ್ ಹರಿರೀಶ್ವರಃ ॥

ತತ್ಕರ್ಮಕರಣೇ ದಕ್ಷಂ ಮಾತರಿಶ್ವಾನಮಾದಿಶತ್ ।
ವಾಯುಸ್ತು ಯತಿರೂಪೇಣ ಜನಿಷ್ಯತಿ ಕಲೌ ಯುಗೇ ॥

ಕೃತ್ವಾ ಸಚ್ಛಾಸ್ತ್ರಸಂದರ್ಭಂ ಸ್ಥಾಪಯಿಷ್ಯತಿ ಸತ್ಪಥಮ್ ॥
ಏವಮೇವ ಮಹಾದೇವಿ ನಾರಾಯಣಪರಾಯಣಾಃ ।' ಇತ್ಯಾದಿ ।

ನನ್ವೇವಂ ಕೇನಚಿತ್ಸ್ವಮನೀಷಯಾ ವೈದಿಕವಿರುದ್ಧಮಾರ್ಗಾಂತರಂ ಪರಿಕಲ್ಪ್ಯ ತತ್ರ ಪ್ರಮಾಣತ್ವೇನ ಸ್ವಕಲ್ಪಿತವೇದವಾಕ್ಯಮುದಾಹರ್ತುಂ ಶಕ್ಯಮ್ ಇತಿ ಸರ್ವಧರ್ಮಾದಿ ವ್ಯವಸ್ಥಾ ನಷ್ಟಾ ಸ್ಯಾದಿತಿ ಚೇನ್ನ; ಅಸ್ಮದಾಚಾರ್ಯೋದಾಹೃತಖಿಲಶ್ರುತೀನಾಂ ಪ್ರತ್ಯಕ್ಷಶ್ರುತಿಸಮಾನಾರ್ಥಕತ್ವೇನಾವಿರೋಧಿತಯಾ ವ್ಯವಸ್ಥಾನಾಶಾಸಂಭವಾತ್ । ಕಿಂಚ ಪೂರ್ವಮೀಮಾಂಸಾಯಾಂ ತತ್ರ ತತ್ರ ''ಊರ್ಜಂ ಪಶೂನಾಪ್ನೋತ್ಯೂರ್ಜೋಽವರುದ್ಧ್ಯ' ಇತ್ಯಾದ್ಯಾಃ ಖಿಲಶ್ರುತಯ ಏವೋದಾಹೃತಾಃ । ಶಂಕರಭಾಷ್ಯೇ 'ಅತ ಏವ ಚೋಪಮಾ ಸೂರ್ಯಕಾದಿವತ್' ಇತಿ ಸೂತ್ರೇ ಯಥಾ ಹ್ಯಯಂ ಜ್ಯೋತಿರಾತ್ಮಾ ವಿವಸ್ವಾನ್ ಇತ್ಯಾದಿ ಖಿಲಶೃತಿರುದಾಹೃತಾ ತಥಾ ರಾಮಾನುಜಭಾಷ್ಯೇಽಪಿ ''ಜ್ಯೋತಿಶ್ಚರಣಾಭಿಧಾನಾತ್'' ಇತಿ ಸೂತ್ರೇ 'ಇಂದ್ರಃ ಶಚೀಪತಿರ್ಬಲೇನ ಪೀಡಿತಃ । ದುಶ್ಚ್ಯವನೋ ವೃಷಾ ಸಮುತ್ಸಾಸಹಿ' ಇತಿ ಖಿಲೈವ ಚತುಷ್ಪಾತ್ ಗಾಯತ್ರ್ಯುದಾಹೃತಾ । ತಥಾ ಶ್ರೀಕಂಠಭಾಷ್ಯೇಽಪಿ 'ಯಶ್ಚ ಶಿವ ಇತಿ ವಾಚಂ ವದೇತ್ ತೇನ ಸಹ ಸಂವಸೇತ್ ತೇನ ಸಹ ಸಂವದೇತ್ ತೇನ ಸಹ ಭುಂಜೀತ' ಇತ್ಯಾದಿ ಖಿಲಶ್ರುತಿರುದಾಹೃತಾ । ಸ್ವಲ್ಪಖಿಲಶ್ರುತ್ಯುದಾಹರಣವದ್ಬಹುಖಿಲಶ್ರುತ್ಯುದಾಹರಣಸ್ಯಾಪ್ಯದೋಷತ್ವಾತ್। ನ ಹ್ಯಸ್ಮದಾಚಾರ್ಯೈಃ ಖಿಲಶ್ರುತಿಭಿರೇವ ಪ್ರಕ್ರಿಯಾ ಕಲ್ಪಿತಾ; ಕಿಂತು ಪ್ರಸಿದ್ಧಶ್ರುತ್ಯನುಸಾರಿ ಪ್ರಕ್ರಿಯಾಯಾಂ ಸ್ವಬಹುಜ್ಞತ್ವಜ್ಞಾಪನಾಯ ಪ್ರಸಿದ್ಧಶ್ರುತಿಸಮಾನಾರ್ಥಕಖಿಲಶ್ರುತ್ಯುದಾಹರಣಂ ಕೃತಮ್ । ಏತೇನ

ಸಂಹಿತೋದಾಹರಣಮಪಿ ವ್ಯಾಖ್ಯಾತಮ್ । ಏತೇನಾಪ್ರಸಿದ್ಧಶ್ರುತ್ಯುದಾಹರಣಪ್ರಸಕ್ತಾನಾಪ್ತತ್ವಶಂಕಾನಿರಾಸಾಯ ಸ್ವಯಂ ವಾಯೋಸ್ತೃತೀಯೋಽವತಾರ ಇತ್ಯುದ್ಘೋಷ ಇತ್ಯಾದಿಕಂ ನಿರಸ್ತಮ್ । ಪುರಾಣವಚನೈರೇವ ಪರಮಾಪ್ತತಾಯಾ ಅಸ್ಮದಾಚಾರ್ಯಸ್ಯೋಕ್ತತ್ವಾತ್ । ಶಿಷ್ಯಾನುಗ್ರಹೇಚ್ಛಯಾ ಸ್ವೇನ ಸ್ವಮಾಹಾತ್ಮ್ಯವರ್ಣನಸ್ಯ ನ್ಯಾಯ್ಯತ್ವಾತ್ । ಅನ್ಯಥಾ –

ಕೋ ಹ್ಯನ್ಯಃ ಪುಂಡರೀಕಾಕ್ಷಾನ್ಮಹಾಭಾರತಕೃದ್ಭವೇತ್ । ಇತ್ಯಾದೌ ಭಾರತಕರ್ತುರ್ವ್ಯಾಸಸ್ಯ ನಾರಾಯಣಾಂಶತ್ವಂ ನ ಸಿದ್ಧ್ಯೇತ್ ॥

ಶ್ರೀಮಧ್ವಾಚಾರ್ಯಾಣಾಂ ವಾಯ್ವವತಾರತ್ವಂ ತು ಬ್ರಾಹ್ಮೇ ಕ್ಷೇತ್ರಕಾಂಡೇ ವೇಂಕಟಮಾಹಾತ್ಮ್ಯೇ ತೃತೀಯೋಧ್ಯಾಯೇ –

ತ್ವಂ ಚಾಪಿ ಗಚ್ಛ...

....ಪದ್ಮತೀರ್ಥಾದಿಹಾಗತಃ ।

–ಇತಿ ಪ್ರಸಿದ್ಧಪುರಾಣವಚನಾನುಸಾರೇಣ ಋಗ್ವೇದಮಂತ್ರಸ್ಯ ತತ್ಪರತ್ವಂ ಯುಕ್ತಮ್।

ಇತಿಹಾಸಪುರಾಣಾಭ್ಯಾಂ ವೇದಂ ಸಮುಪಬೃಂಹರೇತ್। ಇತಿ ಸ್ಮೃತೇ: ।

ಏತೇನ ಪ್ರಾಯೇಣ ಹಿ ತನ್ಮತೇ ಸ್ವಮಾತ್ರಹೃದಯಾರೂಢಾನಿ ವಚನಾನ್ಯೇವೋಪಜೀವಿತಾನಿ ನ ತು ನ್ಯಾಯಾಃ ಪ್ರದರ್ಶಿತಾ ಇತ್ಯಾದಿಕಂ ನಿರಸ್ತಮ್ । ಪುರಾಣವಚನೋಪಬೃಂಹಣತಯಾ ತದನುಸಾರೇಣ ವೇದಸ್ಯ ವ್ಯಾಖ್ಯೇಯತ್ವಾತ್।

ಅತ ಏವ ಬ್ರಹ್ಮಮೀಮಾಂಸಾಯಾಂ ತತ್ರ ತತ್ರ ''ಸ್ಮೃತೇಶ್ಚ'', 'ಅಪಿ ಸ್ಮರ್ಯತೇ' ಇತ್ಯಾದಿವಚನಾನ್ಯುದಾಹ್ರಿಯಂತೇ ।

ಅಸ್ಮದಾಚಾರ್ಯೋದಾಹೃತವಚನಾನಿ ಸ್ವಮಾತ್ರಹೃದಯಾರೂಢಾನಿ ಇತಿ ವದನ್ ಕೂಪಮಂಡೂಕ ಏವ । ಅಸ್ಮದಾಚಾರ್ಯೋದಾಹೃತನ್ಯಾಯದಾರ್ಢ್ಯಂ ಪೂರ್ವಮೀಮಾಂಸಾಸ್ವಾರಸ್ಯಂ ಚ ತಾತ್ಪರ್ಯಚಂದ್ರಿಕಾವಲೋಕಿನಾಂ ಸ್ಪಷ್ಟಮ್ ॥ ಏತೇನಾಸಾಧುಭಿರೇವ ಶಬ್ದೈರ್ವ್ಯವಹಾರಃ, ಶ್ಲೋಕರಚನಾಯಾಮನ್ವಯಾಸಂಭವೋ ವೃತ್ತಾನ್ಯಥಾಭಾವಶ್ಚೇತಿ ನಿರಸ್ತಂ, ಶ್ರುತಿಸ್ಮೃತಿಪುರಾಣಾಭ್ಯಾಸಪಾಟವೇನಾಚಾರ್ಯೈಃ ಕ್ವಚಿದಾರ್ಷ ಪ್ರಯೋಗೈರ್ವ್ಯವಹೃತತ್ವಾತ್ । ಶ್ರುತಿಸ್ಮೃತಿಗತಚ್ಛಾಂದಸಶಬ್ದಾನುಕರಣೇನಾದೋಷತ್ವಾಚ್ಚ।''ತ್ರಿಯಂಬಕಂ ಸಂಯಮಿನಂ ದದರ್ಶ'' ಇತ್ಯಾದಿಷು ಕಾಲಿದಾಸಾದೇರಪಿ ತಥಾ ವ್ಯವಹಾರದರ್ಶನಾಚ್ಚ।''ನ ವಾ ಏಕೇನಾಕ್ಷರೇಣ ಛಂದಾಂಸಿ ವಿಯಂತಿ ನ ದ್ವಾಭ್ಯಾಂ'' ಇತ್ಯಾದಿ ಶ್ರುತ್ಯಾವೃತ್ತಾನ್ಯಥಾಭಾವಸ್ಯಾದೋಷತೋಕ್ತೇಃ । ಅನ್ವಯಾಸಂಭವೋಕ್ತಿಶ್ಚಾಜ್ಞಾನಾದೇವ । ಸೂತ್ರೇಷ್ವಿವ ಭಾಷ್ಯೇಽಪ್ಯನುಷಂಗಾಧ್ಯಾಹಾರಾದಿನಾ ವಿವಕ್ಷಿತಾನ್ವಯಸ್ಯ ವಕ್ತವ್ಯತ್ವಾದಿತಿ ।

–ಶ್ರೀವನಮಾಲೀಮಿಶ್ರರು (ಮಧ್ವಮುಖಾಲಂಕಾರ)

★★★★★

ಪರಿಶಿಷ್ಟ-೫

ಸರ್ವಮೂಲಗ್ರಂಥಗಳಲ್ಲಿ ಉದ್ಧೃತವಾಗಿರುವ ಪ್ರಮಾಣಗ್ರಂಥಗಳು

೧. ಅಂತರ್ಯಾಮಿಸಂಹಿತಾ
೨. ಅಂಶವಿವೇಕ
೩. ಅಥರ್ವಣಶ್ರುತಿ
೪. ಅಥರ್ವಾಂಗಿರಸಶ್ರುತಿ
೫. ಅಧ್ಯಾತ್ಮ
೬. ಅನಭಿಮ್ಲಾತಶ್ರುತಿ
೭. ಅನಿರ್ದಿಷ್ಟ ಆಕರಗಳು
೮. ಅಭಿಧಾನ
೯. ಅರ್ಧನಾರೀನಾರಾಯಣತಂತ್ರ
೧೦. ಆಕಲ್ಪ
೧೧. ಆಗಮತಾತ್ಪರ್ಯ
೧೨. ಆಗ್ನಿವೇಶ್ಯಶಾಖಾ(ಸಾಮವೇದ)
೧೩. ಆಗ್ನಿವೇಶ್ಯಶ್ರುತಿ
೧೪. ಆಗ್ನೇಯ
೧೫. ಆಚಾರ
೧೬. ಆಚಾರ್ಯಸಂಹಿತಾ
೧೭. ಆತ್ಮಸಂಹಿತಾ
೧೮. ಆಥರ್ವಣೋಪನಿಷತ್
೧೯. ಆದಿತ್ಯಪುರಾಣ
೨೦. ಆಧಾರ
೨೧. ಆಯಾಸ್ಯಶಾಖಾ(ಸಾಮವೇದ)
೨೨. ಆರುಣಿಶ್ರುತಿ
೨೩. ಆಶ್ರಮವಿವೇಕ
೨೪. ಇಂದ್ರದ್ಯುಮ್ನಶ್ರುತಿ
೨೫. ಇಂದ್ರದ್ಯುಮ್ನಶಾಖಾ
೨೬. ಈಶಾವಾಸ್ಯೋಪನಿಷತ್
೨೭. ಉತ್ತರಶ್ರುತಿ
೨೮. ಉದಾರಶಾಂಡಿಲ್ಯಶ್ರುತಿ
೨೯. ಉದ್ದಾಮಸಂಹಿತಾ
೩೦. ಉದ್ದಾಲಕಶ್ರುತಿ
೩೧. ಉದ್ದಾಲಕಾಯನಶ್ರುತಿ
೩೨. ಉದ್ಯೋಗ
೩೩. ಉಪಗೀತಾ
೩೪. ಉಪನಾರದೀಯ
೩೫. ಉಪಾಸನಾಲಕ್ಷಣ
೩೬. ಉಪಾಸಾನಿರ್ಣಯ
೩೭. ಉಭಯನಿರುಕ್ತ
೩೮. ಋಕ್ಸಂಹಿತಾ
೩೯. ಋಗ್ವೇದ
೪೦. ಋಗ್ವೇದಖಿಲ
೪೧. ಋಗ್ವೇದಸಂಹಿತಾ
೪೨. ಐತರೇಯಸಂಹಿತಾ
೪೩. ಐತರೇಯಾರಣ್ಯಕ
೪೪. ಐತರೇಯೋಪನಿಷತ್
೪೫. ಔದ್ದಾಲಕಾಯನಶ್ರುತಿಃ
೪೬. ಐಶ್ವರ್ಯ
೪೭. ಕಠಶ್ರುತಿ
೪೮. ಕಠೋಪನಿಷತ್
೪೯. ಕಪಿಲಸಂಹಿತಾ
೫೦. ಕಮಠಶ್ರುತಿಃ
೫೧. ಕರ್ಮತತ್ತ್ವ
೫೨. ಕರ್ಮವಿವೇಕ
೫೩. ಕರ್ಮಸಂಹಿತಾ
೫೪. ಕರ್ಮಾನುಪೂರ್ವೀ
೫೫. ಕಲಾಪಶ್ರುತಿ
೫೬. ಕಾತ್ಯಾಯನಶ್ರುತಿ
೫೭. ಕಾಪಿಲೇಯಯೋಗ
೫೮. ಕಾಪಿಲೇಯ
೫೯. ಕಾಪಿಲೇಯಸಂಹಿತಾ
೬೦. ಕಾರಣವಿವೇಕ
೬೧. ಕಾಲಕೀಯ
೬೨. ಕಾಲನಿರ್ಣಯ
೬೩. ಕಾಲಸಂಹಿತಾ
೬೪. ಕಾಷಾಯಣಶಾಖಾ
೬೫. ಕಾಷಾಯಣಶ್ರುತಿ
೬೬. ಕುಶಿಕಶ್ರುತಿಃ
೬೭. ಕೂರ್ಮಪುರಾಣ
೬೮. ಕೃಷ್ಣಸಂಹಿತಾ
೬೯. ಕೇನೋಪನಿಷತ್
೭೦. ಕೌಂಠರವ್ಯಶ್ರುತಿ

೭೧. ಕೌಂಡಿನ್ಯಶ್ರುತಿ
೭೨. ಕೌರ್ಮ
೭೩. ಕೌಶಿಕಶ್ರುತಿ
೭೪. ಕೌಶೀತಕ್ಯುಪನಿಷತ್
೭೫. ಕೌಷಾರವಶ್ರುತಿ
೭೬. ಕ್ರಿಯಾಯೋಗ
೭೭. ಕ್ರಿಯಾವಿಧಾನ
೭೮. ಗತಿಸಾರ
೭೯. ಗಾಂಧರ್ವ
೮೦. ಗಾಯತ್ರೀಸಂಹಿತಾ
೮೧. ಗಾರುಡ
೮೨. ಗೀತಾಕಲ್ಪ
೮೩. ಗುಣಪರಮ
೮೪. ಗುರುವಿವೇಕ
೮೫. ಗೌತಮಖಿಲ
೮೬. ಗೌಪವನಶಾಖಾ(ಸಾಮವೇದ)
೮೭. ಗೌಪವನಶ್ರುತಿ
೮೮. ಚತುರ್ವೇದಶಿಖಾ
೮೯. ಚಾಕ್ರಾಯಣಶ್ರುತಿ
೯೦. ಚಾತುರಾತ್ಮ್ಯ
೯೧. ಚೈತನ್ಯವಿವೇಕ
೯೨. ಛಂದೋವಿಧಾನ
೯೩. ಛಾಂದೋಗ್ಯೋಪನಿಷತ್
೯೪. ಜಾಬಾಲಖಿಲಶ್ರುತಿ
೯೫. ಜಾಬಾಲಶ್ರುತಿ
೯೬. ಜ್ಞಾನವಿವೇಕ
೯೭. ಜೀವತತ್ತ್ವ
೯೮. ಜೀವನಿರ್ಣಯ
೯೯. ಜ್ಯೋತಿಃಸಂಹಿತಾ
೧೦೦. ಜ್ಯೋತಿರ್ಬ್ರಾಹ್ಮಣ
೧೦೧. ತಂತ್ರನಿರುಕ್ತ
೧೦೨. ತಂತ್ರಪ್ರಕಾಶಿಕಾ
೧೦೩. ತಂತ್ರಭಾಗವತ
೧೦೪. ತಂತ್ರಮಾಲಾ
೧೦೫. ತಂತ್ರಸಾರ
೧೦೬. ತರ್ಕಶಾಸ್ತ್ರ
೧೦೭. ತತ್ತ್ವ
೧೦೮. ತತ್ತ್ವನಿರ್ಣಯಗೀತಾ
೧೦೯. ತತ್ತ್ವನಿರುಕ್ತ
೧೧೦. ತತ್ತ್ವಪ್ರತಿಪತ್ತಿ
೧೧೧. ತತ್ತ್ವಲಯ
೧೧೨. ತತ್ತ್ವವಿವೇಕ
೧೧೩. ತತ್ತ್ವಸಂಹಿತಾ
೧೧೪. ತತ್ತ್ವಸಾರ
೧೧೫. ತತ್ತ್ವನಿರ್ಣಯ
೧೧೬. ತತ್ತ್ವೋದಯ
೧೧೭. ತತ್ತ್ವೋದ್ಯೋಗ
೧೧೮. ತಲವಕಾರಬ್ರಾಹ್ಮಣ
೧೧೯. ತಾತ್ತ್ವಿಕ
೧೨೦. ತಾತ್ಪರ್ಯ
೧೨೧. ತಾಪನೀಯಶ್ರುತಿ
೧೨೨. ತಾರ್ತೀಯ
೧೨೩. ತುರಶ್ರುತಿ
೧೨೪. ತೈತ್ತಿರೀಯಬ್ರಾಹ್ಮಣ
೧೨೫. ತೈತ್ತಿರೀಯಶ್ರುತಿ
೧೨೬. ತೈತ್ತಿರೀಯಸಂಹಿತಾ
೧೨೭. ತೈತ್ತಿರೀಯಾರಣ್ಯಕ
೧೨೮. ತೈತ್ತಿರೀಯೋಪನಿಷತ್
೧೨೯. ತ್ರಿಯೋಗ
೧೩೦. ತ್ರೈಕಾಲ್ಯ
೧೩೧. ತ್ರೈವಿದ್ಯ
೧೩೨. ತ್ರೈವಿಧ್ಯ
೧೩೩. ದತ್ತಾತ್ರೇಯಯೋಗ
೧೩೪. ದತ್ತಾತ್ರೇಯವಚನ
೧೩೫. ದರ್ಶನ
೧೩೬. ದೇವ(ದೈವೀ)ಮೀಮಾಂಸಾ
೧೩೭. ದೇವಶಾಸ್ತ್ರ
೧೩೮. ದೇವಶ್ರುತಿ
೧೩೯. ದೇವಹಾರ್ದ
೧೪೦. ಧರ್ಮತತ್ತ್ವ
೧೪೧. ಧರ್ಮವಿವೇಕ
೧೪೨. ಧರ್ಮಶ್ರುತಿ
೧೪೩. ಧರ್ಮಸಂಹಿತಾ
೧೪೪. ಧ್ಯಾನಯೋಗ
೧೪೫. ನರಸಿಂಹಪುರಾಣ
೧೪೬. ನಾಮನಿರುಕ್ತ
೧೪೭. ನಾಮನಿರ್ಣಯ
೧೪೮. ನಾಮಮಹೋದಧಿ

೧೪೯. ನಾಮಸಂಹಿತಾ
೧೫೦. ನಾರದೀಯ
೧೫೧. ನಾರಾಯಣಕಲ್ಪ
೧೫೨. ನಾರಾಯಣಗೋಪಾಲಕಲ್ಪ
೧೫೩. ನಾರಾಯಣತಂತ್ರ
೧೫೪. ನಾರಾಯಣರಾಮಕಲ್ಪ
೧೫೫. ನಾರಾಯಣಶ್ರುತಿ
೧೫೬. ನಾರಾಯಣಸಂಹಿತಾ
೧೫೭. ನಾರಾಯಣಾಧ್ಯಾತ್ಮ
೧೫೮. ನಾರಾಯಣಾಷ್ಟಾಕ್ಷರಕಲ್ಪ
೧೫೯. ನಾರಾಯಣೀಯ
೧೬೦. ನಿತ್ಯಸಂಹಿತಾ
೧೬೧. ನಿಬಂಧ
೧೬೨. ನಿರ್ಣಯ
೧೬೩. ನಿವೃತ್ತ
೧೬೪. ನಿಸರ್ಗ
೧೬೫. ನೀಲಗ್ರೀವಶ್ರುತಿ
೧೬೬. ನೈರ್ಗುಣ್ಯ
೧೬೭. ಪಂಚರಾತ್ರ
೧೬೮. ಪದವಿವೇಕ
೧೬೯. ಪದ್ಮಪುರಾಣ
೧೭೦. ಪರಭೋಗ
೧೭೧. ಪರಮತತ್ತ್ವ
೧೭೨. ಪರಮಯೋಗ
೧೭೩. ಪರಮಶ್ರುತಿ
೧೭೪. ಪರಮಸಂಹಿತಾ
೧೭೫. ಪರಮಸಾರ
೧೭೬. ಪರಮೋಪನಿಷತ್
೧೭೭. ಪರಾಯಣ
೧೭೮. ಪರ್ಯಂಕೋಪಾಸನಾ
೧೭೯. ಪವನವಿಜಯ
೧೮೦. ಪವಮಾನ
೧೮೧. ಪಾದ್ಮ
೧೮೨. ಪಾರಶರ್ಯಾಯಣಶ್ರುತಿ
೧೮೩. ಪಿಪ್ಪಲಾದಶಾಖಾ
೧೮೪. ಪಿಪ್ಪಲಾದಶ್ರುತಿ
೧೮೫. ಪುರುಷೋತ್ತಮತಂತ್ರ
೧೮೬. ಪುರುಷೋತ್ತಮಸಂಹಿತಾ
೧೮೭. ಪೈಂಗಿಖಿಲ
೧೮೮. ಪೈಂಗಿಶ್ರುತಿ
೧೮೯. ಪ್ರಕಟಶ್ರುತಿ
೧೯೦. ಪ್ರಕಾಶಸಂಹಿತಾ
೧೯೧. ಪ್ರಕಾಶಿಕಾ
೧೯೨. ಪ್ರಕೃತ
೧೯೩. ಪ್ರಕೃತಿಸಂಹಿತಾ
೧೯೪. ಪ್ರಕೃಷ್ಟ
೧೯೫. ಪ್ರಕೃಷ್ಟಸಂಹಿತಾ
೧೯೬. ಪ್ರಕ್ಲೃಪ್ತ
೧೯೭. ಪ್ರಜಾಪತಿಸಂಹಿತಾ
೧೯೮. ಪ್ರಣವಮಾಹಾತ್ಮ್ಯ
೧೯೯. ಪ್ರತಿಸಂಖ್ಯಾನ
೨೦೦. ಪ್ರತ್ಯಯ
೨೦೧. ಪ್ರತ್ಯಾಹಾರ
೨೦೨. ಪ್ರದ್ಯೋತ
೨೦೩. ಪ್ರಧ್ಯಾನ
೨೦೪. ಪ್ರಭಂಜನ
೨೦೫. ಪ್ರಭವ
೨೦೬. ಪ್ರಭಾವ
೨೦೭. ಪ್ರಭಾವಳೀ
೨೦೮. ಪ್ರಭಾಸಕ
೨೦೯. ಪ್ರಭಾಸ
೨೧೦. ಪ್ರಮಾಣವಿವೇಕ
೨೧೧. ಪ್ರಮಾಣಸಂಹಿತಾ
೨೧೨. ಪ್ರಯೋಗ
೨೧೩. ಪ್ರವೃತ್ತ
೨೧೪. ಪ್ರವೃತ್ತಸಂಹಿತಾ
೨೧೫. ಪ್ರವೃತ್ತಿತಂತ್ರ
೨೧೬. ಪ್ರವೃತ್ತಿತತ್ತ್ವ
೨೧೭. ಪ್ರವೃತ್ತಿಸಂಹಿತಾ
೨೧೮. ಪ್ರಾಕಾಶ್ಯ
೨೧೯. ಪ್ರಾಚೀನಶಾಲಶ್ರುತಿ
೨೨೦. ಪ್ರಾಣಸಂಹಿತಾ
೨೨೧. ಪ್ರಾತಿಸ್ವಿಕ
೨೨೨. ಪ್ರಾಥಮ್ಯ
೨೨೩. ಪ್ರಾಧಾನ್ಯ
೨೨೪. ಪೌತ್ರಾಯಣಶ್ರುತಿ
೨೨೫. ಪೌಷ್ಯಾಯಣಶ್ರುತಿ
೨೨೬. ಪ್ರಿಯವಿವೇಕ

೨೨೭. ಬರ್ಕಶ್ರುತಿ
೨೨೮. ಬಳಿತ್ಥಾಸೂಕ್ತ
೨೨೯. ಬಾಭ್ರವ್ಯಶಾಖಾ(ಸಾಮವೇದ)
೨೩೦. ಬಾಷ್ಕಲಶಾಖಾ(ಸಾಮವೇದ)
೨೩೧. ಬೃಹತ್ತಂತ್ರ
೨೩೨. ಬೃಹತ್ಸಂಹಿತಾ
೨೩೩. ಬೃಹಚ್ಛ್ರುತಿ
೨೩೪. ಬೃಹದಾರಣ್ಯಕೋಪನಿಷತ್
೨೩೫. ಬೋದ್ಧವ್ಯ
೨೩೬. ಬ್ರಹ್ಮತತ್ತ್ವ
೨೩೭. ಬ್ರಹ್ಮತರ್ಕ
೨೩೮. ಬ್ರಹ್ಮದರ್ಶನ
೨೩೯. ಬ್ರಹ್ಮಪುರಾಣ
೨೪೦. ಬ್ರಹ್ಮಮಯ
೨೪೧. ಬ್ರಹ್ಮವೈವರ್ತ
೨೪೨. ಬ್ರಹ್ಮಸಂಹಿತಾ
೨೪೩. ಬ್ರಹ್ಮಸಾರ
೨೪೪. ಬ್ರಹ್ಮಸೂತ್ರ
೨೪೫. ಬ್ರಹ್ಮಾಂಡ
೨೪೬. ಬ್ರಾಹ್ಮ
೨೪೭. ಭಕ್ತಿವಿವೇಕ
೨೪೮. ಭಗವದ್ಗೀತಾ
೨೪೯. ಭದ್ರಮಾನ
೨೫೦. ಭದ್ರಿಕಾ
೨೫೧. ಭವಿಷ್ಯತ್ಪರ್ವ
೨೫೨. ಭವಿಷ್ಯತ್ಪುರಾಣ
೨೫೩. ಭಾಗವತ
೨೫೪. ಭಾಗವತತಂತ್ರ
೨೫೫. ಭಾಗವತಸಂಹಿತಾ
೨೫೬. ಭಾರತ
೨೫೭. ಭಾಲ್ಲವೇಯಶಾಖಾ
೨೫೮. ಭಾಲ್ಲವೇಯಶ್ರುತಿ
೨೫೯. ಭಾವತತ್ತ್ವ
೨೬೦. ಭಾವವಿವೇಕ
೨೬೧. ಭಾವವೃತ
೨೬೨. ಭಾಷಾವಿವೇಕ
೨೬೩. ಭೋಗನಿರ್ಣಯ
೨೬೪. ಮಂತ್ರಮಾಲಾ
೨೬೫. ಮತ್ಸ್ಯಪುರಾಣ
೨೬೬. ಮನುಸ್ಮೃತಿ
೨೬೭. ಮಹಾಕೌರ್ಮ
೨೬೮. ಮಹಾತತ್ತ್ವವಿವೇಕ
೨೬೯. ಮಹಾನಾರಾಯಣೋಪನಿಷತ್
೨೭೦. ಮಹಾಭಾರತ
೨೭೧. ಮಹಾಮೀಮಾಂಸಾ
೨೭೨. ಮಹಾಯೋಗ
೨೭೩. ಮಹಾರವಶ್ರುತಿ
೨೭೪. ಮಹಾರಾಮಾಯಣ
೨೭೫. ಮಹಾವರಾಹ
೨೭೬. ಮಹಾವಾರಾಹ
೨೭೭. ಮಹಾವಿಷ್ಣುಪುರಾಣ
೨೭೮. ಮಹಾವ್ಯಾಕರಣ
೨೭೯. ಮಹಾಶಾಲೀನಶ್ರುತಿ
೨೮೦. ಮಹಾಸಂಹಿತಾ
೨೮೧. ಮಹೋಪನಿಷತ್
೨೮೨. ಮಾತ್ಸ್ಯ
೨೮೩. ಮಾಠರಶ್ರುತಿ
೨೮೪. ಮಾಂಡವ್ಯಶ್ರುತಿ
೨೮೫. ಮಾಧುಚ್ಛಂದಸಶಾಖಾ
೨೮೬. ಮಾಧ್ಯಂದಿನಶ್ರುತಿ
೨೮೭. ಮಾಧ್ಯಂದಿನಾಯನಶ್ರುತಿ
೨೮೮. ಮಾನವ(ಮನುಸ್ಮೃತಿ)
೨೮೯. ಮಾನಸ
೨೯೦. ಮಾನಸಂಹಿತಾ
೨೯೧. ಮಾನಸಸಂಹಿತಾ
೨೯೨. ಮಾನ್ಯಸಂಹಿತಾ
೨೯೩. ಮಾಯಾವೈಭವ
೨೯೪. ಮಾರ್ಕಂಡೇಯಪುರಾಣ
೨೯೫. ಮಾಹಾತ್ಮ್ಯ
೨೯೬. ಮಾಂಡೂಕೋಪನಿಷತ್
೨೯೭. ಮುಕ್ತವಿವೇಕ
೨೯೮. ಮುಕ್ತಿತತ್ತ್ವ
೨೯೯. ಮುಕ್ತಿವಿವೇಕ
೩೦೦. ಮುಕ್ತಿಸಂಹಿತಾ
೩೦೧. ಮೂರ್ತಿಭೇದ
೩೦೨. ಮೂಲರಾಮಾಯಣ
೩೦೩. ಮೂಲಶ್ರುತಿ
೩೦೪. ಮೈತ್ರಾಯಣಶ್ರುತಿ

೩೦೫. ಮೌದ್ಗಲ್ಯಶ್ರುತಿ
೩೦೬. ಮೋಕ್ಷಧರ್ಮ
೩೦೭. ಯಜುರ್ವಿವೇಕ
೩೦೮. ಯಜುರ್ವೇದ
೩೦೯. ಯಜುಃಸಂಹಿತಾ
೩೧೦. ಯಾದವಾಧ್ಯಾತ್ಮ
೩೧೧. ಯಾಸ್ಕಶ್ರುತಿ
೩೧೨. ಯಾಜ್ಞವಲ್ಕ್ಯ
೩೧೩. ರಾಜನೀತಿ
೩೧೪. ರಾಮಸಂಹಿತಾ
೩೧೫. ಲಕ್ಷಣಶಾಸ್ತ್ರ
೩೧೬. ಲಕ್ಷಣ
೩೧೭. ಲಿಂಗನಿರ್ಣಯ
೩೧೮. ಲೋಕತತ್ತ್ವ
೩೧೯. ಲೋಕಸಂಹಿತಾ
೩೨೦. ವತ್ಸಶ್ರುತಿ
೩೨೧. ವರಾಹಪುರಾಣ
೩೨೨. ವರಾಹಸಂಹಿತಾ
೩೨೩. ವಸ್ತುತತ್ತ್ವ
೩೨೪. ವಹ್ನಿಪುರಾಣ
೩೨೫. ವಾಕ್ಯನಿರ್ಣಯ
೩೨೬. ವಾಧೂಲಶಾಖಾ
೩೨೭. ವಾಮನ
೩೨೮. ವಾಮನಶ್ರುತಿ
೩೨೯. ವಾಯುಪ್ರೋಕ್ತ
೩೩೦. ವಾರಾಹ
೩೩೧. ವಾರುಣಶಾಖಾ
೩೩೨. ವಾಲ್ಲಭ್ಯ
೩೩೩. ವಾಸಿಷ್ಠಶಾಖಾ
೩೩೪. ವಾಸುದೇವಶ್ರುತಿ
೩೩೫. ವಾಸುದೇವಾಧ್ಯಾತ್ಮ
೩೩೬. ವಿಕ್ಷೇಪ
೩೩೭. ವಿಚಾರ
೩೩೮. ವಿಜ್ಞಾನ
೩೩೯. ವಿದ್ಯಾನಿರ್ಣಯ
೩೪೦. ವಿನಿರ್ಣಯ
೩೪೧. ವಿಪರೀತಶ್ರುತಿ
೩೪೨. ವಿಪೀತಶ್ರುತಿ
೩೪೩. ವಿಭೂತಿತತ್ತ್ವ
೩೪೪. ವಿಭೂತಿ
೩೪೫. ವಿಮದಶ್ರುತಿ
೩೪೬. ವಿಮಲಸಂಹಿತಾ
೩೪೭. ವಿವೇಕ
೩೪೮. ವಿಶೇಷ
೩೪೯. ವಿಶ್ವಂಭರಶ್ರುತಿ
೩೫೦. ವಿಶ್ವತಂತ್ರ
೩೫೧. ವಿಶ್ವನಿರ್ಣಯ
೩೫೨. ವಿಶ್ವಸಂಹಿತಾ
೩೫೩. ವಿಷ್ಣುತತ್ತ್ವ
೩೫೪. ವಿಷ್ಣುಕೃತತತ್ತ್ವನಿರ್ಣಯ
೩೫೫. ವಿಷ್ಣುಕೃತತತ್ತ್ವವಿವೇಕ
೩೫೬. ವಿಷ್ಣುತಂತ್ರ
೩೫೭. ವಿಷ್ಣುಧರ್ಮೋತ್ತರ
೩೫೮. ವಿಷ್ಣುಪುರಾಣ
೩೫೯. ವಿಷ್ಣುಸಂಹಿತಾ
೩೬೦. ವಿಷ್ಣುಸಹಸ್ರನಾಮ
೩೬೧. ವೇದಾರ್ಥವಿವೇಕ
೩೬೨. ವೈಭವ
೩೬೩. ವೈಭಾವ್ಯ
೩೬೪. ವೈಶಾರದ್ಯ
೩೬೫. ವೈಶೇಷ್ಯ
೩೬೬. ವೈಶ್ವಾನರವಿದ್ಯಾ
೩೬೭. ವೈಹಾಯಸ
೩೬೮. ವೈಹಾಯಸಸಂಹಿತಾ
೩೬೯. ವ್ಯಕ್ತ
೩೭೦. ವ್ಯಾಸತಂತ್ರ
೩೭೧. ವ್ಯಾಸನಿರುಕ್ತ
೩೭೨. ವ್ಯಾಸಯೋಗ
೩೭೩. ವ್ಯಾಸಸ್ಮೃತಿ
೩೭೪. ವ್ಯಾಹೃತಿತತ್ತ್ವ
೩೭೫. ವ್ಯಾಹೃತಿಸಾರ
೩೭೬. ವ್ಯೋಮಸಂಹಿತಾ
೩೭೭. ಶಕ್ತಿತತ್ತ್ವ
೩೭೮. ಶಕ್ತಿವಿವೇಕ
೩೭೯. ಶತಪಥಬ್ರಾಹ್ಮಣ
೩೮೦. ಶಬ್ದತತ್ತ್ವ
೩೮೧. ಶಬ್ದನಿರ್ಣಯ
೩೮೨. ಶಬ್ದಸ್ಮೃತಿ

೩೮೩. ಶಾಂಡಿಲ್ಯಶಾಖಾ(ಸಾಮವೇದ)
೩೮೪. ಶಾಂಡಿಲ್ಯಶ್ರುತಿ
೩೮೫. ಶಾರ್ಕರಾಕ್ಷಶ್ರುತಿ
೩೮೬. ಶಾಬ್ದ
೩೮೭. ಶಾಶ್ವತ
೩೮೮. ಶಾಶ್ವತಸಂಹಿತಾ
೩೮೯. ಶೈವಪುರಾಣ
೩೯೦. ಶ್ರೀವಿಷ್ಣುಧರ್ಮ
೩೯೧. ಶ್ರುತಿ
೩೯೨. ಶ್ರುತಿನಿರ್ಣಯ
೩೯೩. ಶ್ವೇತಾಶ್ವತರಶ್ರುತಿ
೩೯೪. ಶ್ವೇತಾಶ್ವತರೋಪನಿಷತ್
೩೯೫. ಷಟ್ಪ್ರಶ್ನೋಪನಿಷತ್
೩೯೬. ಷಾಡ್ಗುಣ್ಯ
೩೯೭. ಸಂಕರ್ಷಣಸೂತ್ರ
೩೯೮. ಸಂಕಲ್ಪ
೩೯೯. ಸಂಕೃತಿಶ್ರುತಿ
೪೦೦. ಸಂಖ್ಯಾನ
೪೦೧. ಸಂದೃಶ್ಯ
೪೦೨. ಸಂಧಾನ
೪೦೩. ಸಂಧಾರಣ
೪೦೪. ಸಂಧ್ಯಾನ
೪೦೫. ಸಂಸ್ತತ್ತ್ವ
೪೦೬. ಸತ್ಕಾರ
೪೦೭. ಸತ್ತತ್ತ್ವ
೪೦೮. ಸತ್ಸಂಗ
೪೦೯. ಸತ್ಯಸಂಹಿತಾ
೪೧೦. ಸದ್ಗುಣ
೪೧೧. ಸದ್ಭಾವ
೪೧೨. ಸನತ್ಸುಜಾತೀಯ
೪೧೩. ಸಮನ್ವಯ
೪೧೪. ಸಮಯಾಚಾರ
೪೧೫. ಸಮಾಚಾರ
೪೧೬. ಸಮ್ಯಜ್ಜ್ಞಾನ
೪೧೭. ಸರ್ವಯಜ್ಞ
೪೧೮. ಸಹಸ್ರಾವರಣ
೪೧೯. ಸಾತ್ವತಸಂಹಿತಾ
೪೨೦. ಸಾಧನನಿರ್ಣಯ
೪೨೧. ಸಾಮಸಂಹಿತಾ
೪೨೨. ಸಾಮ್ಯ
೪೨೩. ಸಾಮ್ಯಶ್ರುತಿ
೪೨೪. ಸಾರನಿರ್ಣಯ
೪೨೫. ಸುಮತ
೪೨೬. ಸೂತ್ರಾಯಣಶ್ರುತಿ
೪೨೭. ಸೂದಶಾಸ್ತ್ರ
೪೨೮. ಸೃಷ್ಟಿವಿಕ್ಷೇಪ
೪೨೯. ಸೌಕರಾಯಣಶ್ರುತಿ
೪೩೦. ಸೌತ್ರಾಯಣಶ್ರುತಿ
೪೩೧. ಸೌಪರ್ಣ
೪೩೨. ಸೌಪರ್ಣಶಾಖಾ(ಋಗ್ವೇದ)
೪೩೩. ಸೌಪರ್ಣಶ್ರುತಿ
೪೩೪. ಸ್ಕಂದಪುರಾಣ
೪೩೫. ಸ್ವಾತಂತ್ರ್ಯವಿವೇಕ
೪೩೬. ಸ್ವಾತಂತ್ರ್ಯ
೪೩೭. ಸ್ವಾಧ್ಯಾಯತತ್ತ್ವ
೪೩೮. ಸ್ವಾಭಾವ್ಯ
೪೩೯. ಹಯಗ್ರೀವಸಂಹಿತಾ
೪೪೦. ಹರಿವಂಶ
೪೪೧. ಹರಿಸಂಹಿತಾ
೪೪೨. ಹಿರಣ್ಯನಾಭಶ್ರುತಿ

॥ಶ್ರೀಕೃಷ್ಣಾರ್ಪಣಮಸ್ತು॥

ಸಮರ್ಪಿತಂ ಮಯಾ ಭವೇತ್ ಸುಮಧ್ವನುತ್ತವಾಣಿನಾ ।
ರಮಾರಮೇಶಪಾದಯೋಃ ಪ್ರಭಂಜನಾಭಿಧಾಯುಜಾ ॥

★★★★★


ಪವಿತ್ರಂ ಪಾಜಕಕ್ಷೇತ್ರಂ ಕೋ ನ ಸೇವೇತ ಕೋವಿದಃ। ಸತ್ಯಲೋಕೇಶ್ವರಃ ಪ್ರಾಣಃ ಯತ್ರಾವತಾರದುತ್ಸುಕಃ ॥
ಶ್ರೀ ಅನಂತಪದ್ಮನಾಭದೇವರು
ಶ್ರೀ ಪರಶುರಾಮದೇವರು
ಶ್ರೀ ದುರ್ಗಾದೇವಿ
ಧನುಸ್ತೀರ್ಥ
ಶ್ರೀಮದಾನಂದತೀರ್ಥರು
ಬಾಣತೀರ್ಥ
ಪರಶುತೀರ್ಥ
ವಾಸುದೇವತೀರ್ಥ
ಜಗದ್ಗುರು ಶ್ರೀಮಧ್ವಾಚಾರ್ಯರ
ಅವತಾರ ಭೂಮಿಯಾದ
ಪವಿತ್ರವಾದ ಪಾಜಕಕ್ಷೇತ್ರವನ್ನು